ವಸಾಹತುಶಾಹಿ ಸಂಸ್ಕೃತಿಗೆ

# ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ

(ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಮುಖೇನ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಮಾರ್ಗದರ್ಶಕರು
ಪ್ರೊ. ಕಿ. ರಂ. ನಾಗರಾಜ

ಅಭ್ಯರ್ಥಿ
ಕೆ. ಪಿ. ಶಿವಾರೆಡ್ಡಿ



ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೧೯೯೯

101

# ಮೊಹತುಶಾಹಿ ಸಂಸ್ಕೃತಿಗೆ

# ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ

## (ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಮುಖೇನ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಮಾರ್ಗದರ್ಶಕರು

ಪ್ರೊ. ಕಿ. ರಂ. ನಾಗರಾಜ



ಅಭ್ಯರ್ಥಿ

ಕೆ. ಪಿ. ಶಿವಾರೆಡ್ಡಿ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೧೯೯೯

# ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಕೆ.ಸಿ.ಶಿವಾರೆಡ್ಡಿ ಇವರು **ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ** (ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಮುಖೇನ) ಎಂಬ ಶೀರ್ಷಿಕೆಯ ಈ ಪಿಎಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೪.೦೮.೧೯೯೯
ಸ್ಥಳ : ಬೆಂಗಳೂರು

ಕಿ.ರಂ. ನಾಗರಾಜ
ಪ್ರಾಧ್ಯಾಪಕ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು ೫೬

# <u>ಪ್ರಮಾಣ ಪತ್ರ</u>

**ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ** (ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಮುಖೇನ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಪ್ರೊ.ಕಿ.ರಂ.ನಾಗರಾಜ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೪.೦೮.೧೯೯೯
ಸ್ಥಳ : ವಿದ್ಯಾರಣ್ಯ

ಕೆ.ಸಿ.ಶಿವಾರೆಡ್ಡಿ
ಅಧ್ಯಾಪಕ, ಭಾಷಾಂತರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

# ಕೃತಜ್ಞತೆಗಳು

ನನ್ನ ಪ್ರೀತಿಯ ಮೇಷ್ಟ್ರು ಪ್ರೊ. ಕಿ.ರಂ. ನಾಗರಾಜ ಅವರ ಒತ್ತಾಸೆ ಇಲ್ಲದಿದ್ದರೆ ಈ ಪ್ರಬಂಧವನ್ನು ಸಿದ್ಧಪಡಿಸುವುದು ಕನಸಾಗಿಯೇ ಉಳಿಯುತ್ತಿತ್ತು. ಈ ಮಹಾಪ್ರಬಂಧವನ್ನು ಸಿದ್ಧಪಡಿಸಲು ತಡಮಾಡಿದ್ದರಿಂದ ಎಷ್ಟೋ ಸಾರಿ ನಾನು ಅವರ ಕಣ್ಣುತಪ್ಪಿಸಿ ಓಡಾಡಿದ್ದೇನೆ. ನನ್ನ ಮೇಲಿನ ಆತ್ಮೀಯತೆಯಿಂದಲೇ ಶ್ರೀ ಕಿ.ರಂ. ಅವರು ಸೂಕ್ತ ವಿಷಯವನ್ನು ಸೂಚಿಸಿ ಮಾರ್ಗದರ್ಶನ ನೀಡಿ, ಇಡೀ ಮಹಾಪ್ರಬಂಧವನ್ನು ಮತ್ತೆ ಮತ್ತೆ ಓದಿ ತಿದ್ದಿ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ವಿದ್ಯಾರ್ಥಿ ದಿನಗಳಿಂದಲೂ ನಿಸ್ವಾರ್ಥದಿಂದ ಅವರು ತೋರಿರುವ ನಿರಂತರ ಸ್ನೇಹ ಸಹಕಾರಗಳಿಗೆ ಎಣೆಯಿಲ್ಲ. ಅವರಂತೆಯೇ ಅವರ ಶ್ರೀಮತಿ ಕೆ.ಎನ್.ವಿಜಯಲಕ್ಷ್ಮಿಯವರ ಸಹಕಾರಕ್ಕೆ ನಾನು ಚಿರಋಣಿ. ಶ್ರೀ ಕಿ.ರಂ. ಮತ್ತು ಅವರ ಕುಟುಂಬದವರಿಗೆ ನಾನು ಮೊದಲು ನಮಸ್ಕಾರಗಳನ್ನು, ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯ.

ಮೂರು ವರ್ಷಗಳಲ್ಲಿಯೇ ಮಹಾಪ್ರಬಂಧವನ್ನು ಬರೆದು ವಿಶ್ವವಿದ್ಯಾಲಯಕ್ಕೆ ಒಪ್ಪಿಸುತ್ತೇನೆಂದು ನನ್ನ ಗುರುಗಳಾದ ಡಾ.ಕೆ.ವಿ.ನಾರಾಯಣ ಮತ್ತು ಡಾ.ಎಚ್.ಎಸ್. ಶ್ರೀಮತಿಯವರಿಗೆ ಮಾತುಕೊಟ್ಟಿದ್ದೆ. ಆ ಮಾತಿಗೆ ನನ್ನ ಆಲಸ್ಯದಿಂದ ಬದ್ಧನಾಗದೆ ಹೋದೆ. ಈ ತಪ್ಪಿಗೆ ಅವರನ್ನು ಕಂಡಾಗಲೆಲ್ಲ ಏನೋ ಒಂದು ರೀತಿಯ ಪಾಪಪ್ರಜ್ಞೆ ನನ್ನನ್ನು ಕಾಡುತ್ತಲೇ ಇತ್ತು. ನನ್ನ ಶ್ರೇಯಸ್ಸನ್ನು ಸದಾ ಬಯಸುವ ಇಂಥ ಮೇಷ್ಟ್ರುಗಳು ದೊರೆತದ್ದು ನನ್ನ ಪುಣ್ಯ. ಅವರ ಸಹಾಯ, ಸಹಕಾರಗಳಿಗೆ ನಾನು ನಮ್ರನಾಗಿದ್ದೇನೆ.

ನನ್ನ ಅಧ್ಯಯನದ ಬಗೆಗೆ ವಿಶ್ವಾಸ, ಪ್ರೋತ್ಸಾಹವನ್ನು ನೀಡುತ್ತ, ಹಾರೈಸುವ ಕನ್ನಡದ ಮಹತ್ವ ಕವಿಗಳು, ನಾಟಕಕಾರರು, ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳೂ ಆದ ಮಾನ್ಯ ಡಾ.ಚಂದ್ರಶೇಖರ ಕಂಬಾರ ಅವರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ಪಿಎಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸಲು ಅವಕಾಶವಾಗುವಂತೆ ನನ್ನ ಅಧ್ಯಯನಾವಧಿಯನ್ನು ವಿಸ್ತರಿಸಿ, ಅಧ್ಯಯನಕ್ಕೆ ಅನುವು ಮಾಡಿಕೊಟ್ಟ ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಎಂ. ಕಲಬುರ್ಗಿ ಅವರಿಗೆ, ಪ್ರಸ್ತುತ ಕುಲಸಚಿವರಾದ ಶ್ರೀ ಎಂ.ಜಿ. ವೆಂಕಟೇಶ್ ಅವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಶ್ರೀ ಬಾಲಸುಬ್ರಮಣ್ಯ ಅವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಂತೆಯೇ ಅಧ್ಯಯನಾಂಗದ ಹಿಂದಿನ ನಿರ್ದೇಶಕರಿಗೂ ನನ್ನ ನಮಸ್ಕಾರಗಳನ್ನು ಸಲ್ಲಿಸುವುದು ನನ್ನ ಕರ್ತವ್ಯವೇ ಆಗಿದೆ.

ಪಿಎಚ್.ಡಿ. ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ನಾನು ಕ್ರೈಸ್ಟ್ ಕಾಲೇಜು, ಬೆಂಗಳೂರು ಇಲ್ಲಿ ಅಧ್ಯಾಪಕನಾಗಿ ಸೇವೆಸಲ್ಲಿಸುತ್ತಿದ್ದೆ. ಅಧ್ಯಯನದ ಆರಂಭದ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಬಂದು ಅಧ್ಯಯನ ಕಮ್ಮಟಗಳಲ್ಲಿ ಭಾಗವಹಿಸಲು ರಜೆ ಮತ್ತು ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿದ ಕ್ರೈಸ್ಟ್ ಕಾಲೇಜಿನ ಪ್ರೀತಿಯ ಪ್ರಾಂಶುಪಾಲರುಗಳಾದ ರೆ.ಫಾ. ಆಂತೋಣಿಕರಿಯಲ್, ರೆ.ಫಾ. ಸೆಬಾಸ್ಟಿಯನ್ ತೆಕ್ಕೆಡತ್ತು ಮತ್ತು ವೈಸ್‌ಪ್ರಿನ್ಸಿಪಾಲ್‌ರಾದ ರೆ.ಫಾ.ಕೆ.ಥಾಮಸ್ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಹಿರಿಯರಾದ ಶ್ರೀ ಚಿ.ಶ್ರೀನಿವಾಸರಾಜು, ಶ್ರೀ ಬಸವರಾಜ ವಕ್ಕುಂದ ಅವರನ್ನು ಮತ್ತು ಇತರ ಭಾಷಾ ಅಧ್ಯಾಪಕರನ್ನು ನೆನೆಯುತ್ತೇನೆ. ಹಾಗೆಯೇ ನನ್ನ ವಿದ್ಯಾರ್ಥಿ ಸಮುದಾಯಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಆಗಾಗ್ಗೆ ಸಂಶೋಧನೆ ಮುಗಿಸಿ ಎಂದು ಒತ್ತಾಸೆ ತೋರುತ್ತಿದ್ದ ಪ್ರೊ.ಹಿ.ಚಿ.ಬೋರಲಿಂಗಯ್ಯ ಅವರಿಗೂ ಭಾಷಾಂತರ ವಿಭಾಗದ ಮುಖ್ಯಸ್ಥರೂ ಹಿರಿಯರೂ ಆದ ಡಾ.ಕರೀಗೌಡ ಬೀಚನಹಳ್ಳಿ ಅವರ ಪ್ರೀತಿ ನನ್ನನ್ನು ಕೃತಜ್ಞನನ್ನಾಗಿ ಮಾಡಿದೆ. ಅಂತೆಯೇ ಸ್ನೇಹಿತರಾದ ಶ್ರೀ ವಿ.ಬಿ.ತಾರಕೇಶ್ವರ ಹಾಗೂ ಶ್ರೀ ಶ್ರೀಧರರಾವ್ ಪಿಸ್ಸೆ ಅವರ ಸಹಾಯವನ್ನು ಮರೆಯುವಂತಿಲ್ಲ.

ಒಂದು ವರ್ಷದ ಕೆಳಗೆ ಅಕಾಲಿಕ ಮರಣಕ್ಕೆ ತುತ್ತಾದ ಕನ್ನಡದ ಯುವ ದೈತ್ಯ ಪ್ರತಿಭೆ ಹಾಗೂ ನನ್ನ ಗುರುಗಳಾಗಿದ್ದ ಡಾ.ಡಿ.ಆರ್.ನಾಗರಾಜ್ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇನೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಗುರುಗಳಾದ ಡಾ.ಬಸವರಾಜ ಕಲ್ಗುಡಿ, ಕವಿ ಡಾ.ಸಿದ್ಧಲಿಂಗಯ್ಯ, ಪ್ರೊ. ಹು.ಕಾ.ಜಯದೇವ್ ಮತ್ತು ಸ್ನೇಹಿತರಾದ ಡಾ.ನಟರಾಜ್ ಹುಳಿಯಾರ್ ಅವರನ್ನು ಪ್ರೀತಿಯಿಂದ ಸ್ಮರಿಸುತ್ತೇನೆ.

ಅಗಂತುಕನಾದ ನನ್ನ ಅನೇಕ ಕಷ್ಟಗಳಿಗೆ ಬೆಂಬಲವಾಗಿ ನಿಂತು ನೆರವು ನೀಡಿ ಪ್ರೋತ್ಸಾಹಿಸಿದ ಶ್ರೀಮತಿ ನಿರ್ಮಲ ಮತ್ತು ಶ್ರೀ ಎಂ.ಪಿಳ್ಳಪ್ಪ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕು. ನನ್ನ ಎಲ್ಲ ಟಿಪ್ಪಣಿ, ಪ್ರಬಂಧಗಳನ್ನು ಅಚ್ಚುಕಟ್ಟಾಗಿ ಪ್ರತಿ ಮಾಡಿಕೊಟ್ಟ ನನ್ನ ಅಣ್ಣನ ಮಗ ಜಿ.ಎಲ್.ವಿಜಯೇಂದ್ರಕುಮಾರ್ ಮತ್ತು ಆತ್ಮೀಯರಾದ ಹೆಚ್.ಪಿ.ಚಂದನ ಹಾಗೂ ಪಿ.ಸಂಗೀತಾಳ ಪ್ರೀತಿಗೆ ಋಣಿಯಾಗಿದ್ದೇನೆ.

ಬರವಣಿಗೆಯ ಹಾಗೂ ಅನಂತರದ ಹಂತದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಡಾ.ಸಿ.ಆರ್.ಗೋವಿಂದರಾಜು, ಡಾ.ಪಿ.ಮಹಾದೇವಯ್ಯ, ಡಾ.ಎಂ.ಉಷಾ, ಶ್ರೀ ಸಿ.ವೆಂಕಟೇಶ್, ಶ್ರೀ ಎಸ್.ಕೆ.ವಿಜಯೇಂದ್ರ, ಶ್ರೀ ಕಲವೀರ ಮನ್ವಾಚಾರ್ ಹಾಗೂ ಬೆಂಗಳೂರಿನ ಸ್ನೇಹಿತರಾದಶ್ರೀಉದ್ದಂಡಯ್ಯ,ಶ್ರೀಆರ್.ಆನಂದ,ಶ್ರೀಎ.ಶಂಕರರೆಡ್ಡಿ, ಶ್ರೀಸತೀಶ್ ಹಾಗೂ ನನ್ನ ಸಹೋದರ ಡಾ.ಕೆ.ಸಿ.ನಾರಾಯಣಸ್ವಾಮಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ವಿಶ್ವವಿದ್ಯಾಲಯದ ಶ್ರೀ ಬೋರಯ್ಯ ಹಾಗೂ ಶ್ರೀ ಜಾಫರ್ ಅವರಿಗೂ ನನ್ನ ಕೃತಜ್ಞತೆಗಳು.

೨೪.೮.೧೯೯೯

- ಕೆ.ಸಿ.ಶಿವಾರೆಡ್ಡಿ

ಬಾರೋ ಸಾಧನಕೇರಿಗೆ ।
ಮರಳಿ ನಿನ್ನೀ ಊರಿಗೆ ॥

## ಪರಿವಿಡಿ

# ಅಧ್ಯಾಯ : ಒಂದು

# ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ

ಒಂದು ಕಾಲಮಾನದ ವ್ಯವಸ್ಥೆ ಮತ್ತು ಸಂಸ್ಕೃತಿಯ ಸ್ವರೂಪವನ್ನು ಗ್ರಹಿಸಿ ಅದರ ವಿಭಿನ್ನ ಸಂಬಂಧಗಳನ್ನು ವಿಶ್ಲೇಷಿಸುವುದು ಈ ಮಹಾಪ್ರಬಂಧದ ವ್ಯಾಪ್ತಿಗೆ ಒಳಪಡುತ್ತದೆ. ಕನ್ನಡ ಸಂಸ್ಕೃತಿಯಲ್ಲಿ ಆಳುವ ವರ್ಗದ ವಿಚಾರಧಾರೆಯು ಎಲ್ಲ ಕಾಲಮಾನಗಳಲ್ಲಿಯೂ ಒಂದು ಮುಖ್ಯ ಪ್ರಭಾವವಾಗಿ ಹರಡಿಕೊಂಡಿದೆ. ಹತ್ತನೆಯ ಶತಮಾನದ ಕನ್ನಡ ಸಾಹಿತ್ಯ ಪ್ರಮುಖವಾಗಿ ಸಂಸ್ಕೃತಭಾಷೆಯ ಸಾಹಿತ್ಯಕ ಮತ್ತು ವೈಚಾರಿಕ ಪ್ರಭಾವಗಳಿಗೆ ಪ್ರತಿಕ್ರಿಯಿಸಿದ ಕಾಲ. ಆ ಕಾಲಕ್ಕೆ ಸಂಸ್ಕೃತ ನಮ್ಮ ಸಂಸ್ಕೃತಿಯ ಆಗುಹೋಗುಗಳ ಮೇಲೆ ಸಾಕಷ್ಟು ಬಿಗಿಯಾದ ಹಿಡಿತವನ್ನೆ ಹೊಂದಿತ್ತು. ಈ ಮಧ್ಯೆಯೂ ಕನ್ನಡ ಸಂಸ್ಕೃತಿಯ ಆಂತರಿಕ ಸತ್ವ ಚೈತನ್ಯಗಳನ್ನು ಅಭಿವ್ಯಕ್ತಿಸುವ ಹಾಗೂ ತನ್ನ ಮೂಲ ಬೇರುಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆಯಿತು.

ಸಂಸ್ಕೃತದ ವೈಚಾರಿಕ ಆಕೃತಿಗಳನ್ನು ವಿಮರ್ಶಿಸುತ್ತ, ಅದರ ಸತ್ವವನ್ನು ತನ್ನದಾಗಿಸಿಕೊಳ್ಳುತ್ತ ಕನ್ನಡಸಂಸ್ಕೃತಿಯು ತನ್ನ ಜೀವಂತಿಕೆಯನ್ನು ಪ್ರಕಟಿಸುತ್ತ ಬಂದಿದೆ. ಹೀಗೆ ಸಂಘರ್ಷಿಸುತ್ತಲೇ ನಮ್ಮ ಸಾಂಸ್ಕೃತಿಕ ಜೀವಂತಿಕೆಯನ್ನು ಕ್ರಿಯಾತ್ಮಕ ಅಭಿವ್ಯಕ್ತಿಗೆ ತರುವ ಪ್ರಯತ್ನ ಕನ್ನಡ ಸಾಹಿತ್ಯದ ಈ ಕಾಲಮಾನದ ಕೃತಿಗಳಿಂದ ತಿಳಿಯುತ್ತದೆ. ಈ ಸಂಘರ್ಷ ಮುಂದಿನ ಕಾಲಮಾನಗಳಲ್ಲಿ ಮತ್ತೂ ಬೇರೆಯದೇ ಆದ ವಿನ್ಯಾಸಗಳನ್ನು ಪಡೆದುಕೊಳ್ಳುತ್ತದೆ. ಕನ್ನಡ ಸಂಸ್ಕೃತಿಯ ಮುಖ್ಯಧಾರೆಗಳಲ್ಲಿ ಒಂದಾದ ವಚನಚಳವಳಿ ಮತ್ತು ಆನಂತರದಲ್ಲಿ ಸೃಷ್ಟಿಗೊಂಡ ವಿಪುಲ ಕನ್ನಡ ಸಾಹಿತ್ಯವೇ ಮುಖ್ಯ ಆಕರವಾಗಿದೆ. ಸಂಸ್ಕೃತದ ಪ್ರಭಾವ ವಲಯಗಳಿಂದ ರೂಪುಗೊಂಡ ಪ್ರಭುತ್ವದ ಚಿಂತನೆಗಳಿಗೂ ಕನ್ನಡ ಬದುಕಿಗೂ ಒಂದು ಕ್ರಿಯಾತ್ಮಕ ಸಂಘರ್ಷ ಆ ಕಾಲದ ಮುಖ್ಯ ಅಭಿವ್ಯಕ್ತಿಯಾಗಿದೆ. ಹೀಗಾಗಿ ಕನ್ನಡ ಸಂಸ್ಕೃತಿಯಲ್ಲಿ ಅಖಿಲಭಾರತ ವ್ಯಾಪ್ತಿಯನ್ನು ಪಡೆದ ವಸಾಹತುಶಾಹಿ ಪ್ರಭಾವಕ್ಕೆ ಕನ್ನಡ ಸಾಹಿತ್ಯ ತನ್ನ ಪ್ರತಿರೋಧವನ್ನು ತೋರುತ್ತ ಬಂದಿದೆ.

ಆಳುವ ಶಕ್ತಿಯ ಪ್ರಭಾವ ಬಹುಮುಖಿಯಾದದ್ದು. ಆಳುವ ವರ್ಗವು ರಾಜಕೀಯ, ಧಾರ್ಮಿಕ, ಆರ್ಥಿಕ, ನೈತಿಕ, ಭಾಷಿಕ ಪ್ರಭಾವಗಳ ಮೂಲಕ ಇವೆಲ್ಲವನ್ನು ನಿಯಂತ್ರಿಸುತ್ತದೆಂಬುದು ವಿದಿತವಾದ ಸಂಗತಿ. ಸಾಂಸ್ಕೃತಿಕವಾಗಿ

ರಾಜ್ಯಶಾಹಿಯು ಅಖಿಲಭಾರತೀಯ ಎನ್ನಬಹುದಾದ, ಭಾರತೀಯ ಸಂಸ್ಕೃತಿಯ ಒಂದು ನಿರ್ದಿಷ್ಟ ಮಾದರಿಯನ್ನು ಪ್ರಾದೇಶಿಕ ಸಂಸ್ಕೃತಿಯ ಮೇಲೆ ಹೇರಿತು. ಇದಕ್ಕೆ ಕನ್ನಡ ಕಾವ್ಯಪರಂಪರೆ ಎಂದಿನಿಂದಲೂ ಪ್ರತಿಭಟನೆಯನ್ನು ದಾಖಲಿಸುತ್ತ ಬಂದಿದೆ. ಪ್ರಾದೇಶಿಕ ಸಂಸ್ಕೃತಿಯನ್ನು ವಿನಾಶಗೊಳಿಸುವ 'ಅನ್ಯ'ಪ್ರಭಾವಗಳನ್ನು ವಿರೋಧಿಸುವುದು ಕೂಡ ಕನ್ನಡ ಕವಿತೆಯ ಎಲ್ಲ ಕಾಲದ ಮುಖ್ಯ ಆಶಯ ಎಂಬುದು ಈ ಅಧ್ಯಯನದ ಹಿನ್ನೆಲೆಗೆ ಇದೆ.

ಅಖಿಲ ಭಾರತೀಯ ಎನ್ನಲಾಗುವ ಭಾರತೀಯ ಪರಂಪರೆಯ ಅನೇಕ ಸ್ಥಗಿತನೆಲೆಗಳನ್ನು ಪ್ರತಿಭಟಿಸುತ್ತ ಬಂದ ಕನ್ನಡ ಸಂಸ್ಕೃತಿಯು ಹತ್ತೊಂಬತ್ತು- ಇಪ್ಪತ್ತನೆಯ ಶತಮಾನಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆಕ್ರಮಣಕ್ಕೆ ಸಿಲುಕಿದ್ದು ಮತ್ತೊಂದು ಕಾಲಘಟ್ಟ. ತನ್ನ ವ್ಯಾಪಕ ಹಿಡಿತದಿಂದ ನೆಲೆಗೊಂಡ ಬ್ರಿಟಿಷ್ ಸಾಮ್ರಾಜ್ಯಶಾಹಿ ಕನ್ನಡ ಸಂಸ್ಕೃತಿಯ ಸತ್ವಗಳನ್ನು ದುರ್ಬಲಗೊಳಿಸಿ ತನ್ನ ವಿಚಾರ ಸಂಸ್ಕೃತಿಗಳನ್ನು ಹರಡಿದಾಗ ಅದಕ್ಕೆ ಎದುರಾಗಿ ಕನ್ನಡ ಸಾಹಿತ್ಯದ ಅಭಿವ್ಯಕ್ತಿ ತೀವ್ರವಾದ ಪ್ರತಿಕ್ರಿಯೆಯನ್ನು ಅಂದಿನ ನವೋದಯ ಸಾಹಿತ್ಯ ಸೃಜನಶೀಲತೆಯ ಮೂಲಕ ಪ್ರತಿಕ್ರಿಯಿಸಿತು. ಇಂಥ ಪ್ರತಿಕ್ರಿಯೆ ಕನ್ನಡ ನವೋದಯದ ಮಹತ್ವದ ಕವಿಗಳಾದ ಬೇಂದ್ರೆ ಹಾಗೂ ಕುವೆಂಪು ಅವರ ಕಾವ್ಯಗಳ ಮುಖೇನ ಪ್ರಕಟಗೊಂಡಿತು. ಪರಕೀಯ ಸಂಸ್ಕೃತಿಯನ್ನು ವಿರೋಧ - ವಿಶ್ಲೇಷಣೆಯ ಜೊತೆಗೆ ಪ್ರಾದೇಶಿಕ ಸಂಸ್ಕೃತಿಯ ಮೂಲ ಸತ್ವಗಳನ್ನು ಹುಡುಕುವ ನಿರ್ಮಾಣ ಪ್ರತಿಭೆ ಈ ಕಾಲದ ಇಬ್ಬರು ಕವಿಗಳಲ್ಲಿ ಹೇಗೆ ವ್ಯಕ್ತಗೊಂಡಿದೆ ಎಂಬುದನ್ನು ಈ ಅಧ್ಯಯನ ಪರಿಶೀಲನೆಗೆ ಒಳಪಡಿಸಿದೆ.

ಕನ್ನಡ ನವೋದಯಕಾವ್ಯ ಪ್ರಾದೇಶಿಕ ಸಂಸ್ಕೃತಿಯ ಮುಖ್ಯ ವಾಹಿನಿಯಾದ ಜನಪದ ಸಾಹಿತ್ಯ ಹಾಗೂ ಸಂಸ್ಕೃತಿಗೆ ಮೈಕೊಟ್ಟ ಸ್ವರೂಪವನ್ನು ಕಾವ್ಯಾಧ್ಯಯನದಿಂದ ಚರ್ಚೆಗೆ ಒಳಪಡಿಸುವುದು ಅಧ್ಯಯನದ ವ್ಯಾಪ್ತಿಗೆ ಸೇರುತ್ತದೆ.

ಕನ್ನಡ ನವೋದಯ ಕಾವ್ಯ ಪ್ರಾದೇಶಿಕ ಸಂಸ್ಕೃತಿಯಲ್ಲಿ ಮನೆ ಮಾಡಿಕೊಂಡಿದ್ದ ಅನಿಷ್ಟಗಳನ್ನು ವಿರೋಧಿಸುತ್ತದೆ. ಅದರೊಂದಿಗೆ, ಪರಕೀಯ ದಬ್ಬಾಳಿಕೆಯಿಂದ ಹೇರಲ್ಪಟ್ಟ ಅಸಾಂಗತ್ಯಗಳನ್ನು ಪ್ರತಿರೋಧಿಸುತ್ತ, ಜೀವಂತ ಮಾನವೀಯ ನೆಲೆಗಳನ್ನು ಪ್ರಸ್ತುತಪಡಿಸಿದ ಸ್ವರೂಪವನ್ನು ಒಂದು ತಾತ್ವಿಕ ಹಿನ್ನೆಲೆಯಾಗಿ ಈ ಅಧ್ಯಯನ ಅಂಗೀಕರಿಸುತ್ತದೆ. ಹೀಗಾಗಿ ಪ್ರಾದೇಶಿಕ ಸಂಸ್ಕೃತಿಯ ವೈಚಾರಿಕ ಆಕೃತಿಗಳು, ವೈಚಾರಿಕವೆಂದು ಹೇಳಲಾದ ಪರಕೀಯ ಆಲೋಚನೆಗಳ ನಡುವಣ ಸಂಘರ್ಷದಿಂದ ಸೃಷ್ಟಿಯಾಗುವ ವಾಗ್ವಾದವನ್ನು ಕ್ರೋಢೀಕರಿಸಲು ಈ ಅಧ್ಯಯನ ಪ್ರಯತ್ನಿಸುತ್ತದೆ.

ವಸಾಹತುಶಾಹಿಯು ತನ್ನ ತಂತ್ರಜ್ಞಾನ, ಶಿಕ್ಷಣ, ರಾಜಕೀಯ ಆಡಳಿತ - ಇವುಗಳಿಂದ ನಮ್ಮ ಸಂಸ್ಕೃತಿಯನ್ನು ಬಲಹೀನಗೊಳಿಸಿ, ಭೌತಿಕವೂ ಮಾನಸಿಕವೂ ಆದ ದಾಸ್ಯಕ್ಕೆ ಗುರಿಪಡಿಸಿದ ಸ್ಥಿತಿ ಹತ್ತೊಂಬತ್ತನೆಯ ಶತಮಾನದಲ್ಲಿ ಆಗಿ ಹೋದ ಅನುಭಾವಿ ಕವಿಗಳ ಮೂಲಕ ತೀವ್ರವಾದ ವಿಮರ್ಶೆಗೆ ಗುರಿಯಾದದ್ದು ನಮ್ಮ ನವೋದಯ ಕಾವ್ಯಕ್ಕೆ ಒಂದು ಮುಖ್ಯ ಹಿನ್ನೆಲೆಯಾಗಿದೆ. ಈ ಹಿನ್ನೆಲೆ ನಮ್ಮ ಈ ಚರ್ಚೆಯ ವ್ಯಾಪ್ತಿಗೆ ಒಳಪಡುತ್ತದೆ.

ವಸಾಹತುಶಾಹಿ ಪ್ರಭಾವ ನಮ್ಮ ಭೌತಿಕ ಹಾಗೂ ಮಾನಸಿಕ ಜಗತ್ತಿನ ಮೇಲೆ ಉಂಟು ಮಾಡಿದ ಪರಿಣಾಮ ಸ್ವಾತಂತ್ರ್ಯಪೂರ್ವದಲ್ಲಿ ಚಿಂತಿತವಾದ ರೀತಿ, ಸ್ವಾತಂತ್ರ್ಯಾನಂತರದ ಕಾಲಮಾನದಲ್ಲಿಯೂ ಮುಂದುವರೆದಿದೆ. ಹಿಂದಿನ

ಕಾಲಮಾನದ ಅನೇಕ ಒತ್ತಡಗಳೊಂದಿಗೆ ಹೊಸ ಕಾಲಮಾನದ ಸಮಸ್ಯೆಯೂ ಸೇರಿಕೊಂಡಿತು. ಮತ್ತೂ ಇದರಿಂದ ಬೇರೆಯದೇ ಆದ ಸಂಕೀರ್ಣ ಸ್ಥಿತಿ ಸೃಷ್ಟಿಯಾಯಿತು. ಇದರಿಂದ ನಮ್ಮ ಸಾಂಸ್ಕೃತಿಕ ಪರಿಸರ ಐವತ್ತರ ದಶಕದ ಅನಂತರ ಸೃಷ್ಟಿಯಾದ ಮತ್ತು ಆಗುತ್ತಿರುವ ಕನ್ನಡ ಕಾವ್ಯದಲ್ಲಿ ಪ್ರಮುಖ ಧ್ವನಿಯಾಗಿ ಬೆಳೆಯಿತು. ಇದನ್ನು ಗೋಪಾಲಕೃಷ್ಣ ಅಡಿಗ ಹಾಗೂ ಚಂದ್ರಶೇಖರ ಕಂಬಾರ ಇವರ ಕಾವ್ಯದ ಮೂಲಕ ಈ ಅಧ್ಯಯನ ವಿಶ್ಲೇಷಿಸುತ್ತದೆ.

ಭಾರತೀಯ ಸಂಸ್ಕೃತಿಯ ಪರಂಪರೆ ಹಾಗೂ ಪಾಶ್ಚಿಮಾತ್ಯ ಮಾದರಿಗಳಿಗೆ ವರ್ತಮಾನದ ನೆಲೆಯಲ್ಲಿ ಚಿಂತನೆಗೆ ಗುರಿಪಡಿಸುವುದು ಅಡಿಗರ ಕಾವ್ಯದ ಪ್ರಮುಖ ಆಶಯವಾಗಿದೆ. ಅವರ 'ಗೊಂದಲಪುರ', 'ಸ್ವಾತಂತ್ರ್ಯ: ೧೯೫೫ರ ಪಾಠ', 'ಆಗಬೋಟಿ', 'ಶರದ್ಗೀತ' ಮುಂತಾದ ಕವಿತೆಗಳು ಸಂಸ್ಕೃತಿಯ ಸ್ಥಿತ್ಯಂತರಗಳ ಪ್ರಶ್ನೆಯನ್ನು ಮುಖ್ಯ ವಾಗ್ವಾದ ಭೂಮಿಕೆಯನ್ನಾಗಿ ಮಾಡಿಕೊಂಡಿವೆ. ಸಮಕಾಲೀನ ರಾಜಕೀಯ ಸಂದರ್ಭವನ್ನು ಸಂಸ್ಕೃತಿಯ ಪ್ರಶ್ನೆಗಳೊಂದಿಗೆ ವಿಶ್ಲೇಷಣೆಗೆ ಗುರಿಪಡಿಸುವುದು ಅಡಿಗರ ಕಾವ್ಯದಿಂದ ತಿಳಿದು ಬರುವ ಮುಖ್ಯ ನೆಲೆಯಾಗಿದೆ.

ಅಡಿಗರ ಕಾವ್ಯದ ಅನ್ವೇಷಣೆಯ ಮಾದರಿಗಿಂತ ಬೇರೆಯದೇ ಆದ ಚಂದ್ರಶೇಖರ ಕಂಬಾರರ ಕಾವ್ಯವು ಹೊಸ ಅನ್ವೇಷಣೆಗಳತ್ತ ಮುಖಮಾಡಿರುವುದಾಗಿದೆ. ಕಂಬಾರರ ಕಾವ್ಯ ಕನ್ನಡ ಸಂಸ್ಕೃತಿಯ ಜಾನಪದೀಯ ಅಭಿವ್ಯಕ್ತಿಗಳೊಂದಿಗೆ ಮುಖಾಮುಖಿಯಾಗಿ ಹೊಸ ಕಾಲದ ದೇಶೀಯ ಸತ್ವಗಳನ್ನು ಸಂಸ್ಕೃತಿಯ ಧ್ವನಿಗಳನ್ನು ಪ್ರಸ್ತುತಪಡಿಸುತ್ತದೆ.

> ಕಂಬಾರರ ಕಾವ್ಯದ ದೇಸೀತನ ನಮ್ಮ ಸಂಸ್ಕೃತಿಯ ಪ್ರಾಣ ಸತ್ವಗಳ ಮಂಡನೆಗೆ, ಸಂಸ್ಕೃತಿಯ ಮುಖಾಮುಖಿ ಹಾಗೂ ಸಂಘರ್ಷಗಳ ಕ್ರಿಯಾಶೀಲ ಅಭಿವ್ಯಕ್ತಿಯ ಭಾಗವಾಗಿ ಪ್ರಕಟಗೊಳ್ಳುವುದು ಅದರ ಗುರಿಯಾಗಿದೆ. ವೈಯಕ್ತಿಕ ಹಾಗೂ ಸಾಮುದಾಯಿಕ ಅನುಭವಗಳನ್ನು, ಕ್ರಿಯಾಚರಣೆಗಳನ್ನು ರೂಪಕಗೊಳಿಸಿ ಶೋಧಕ್ಕೆ ಒಡ್ಡುವ ಕಂಬಾರರು ಕ್ರಮ ಅವರ ಸೃಷ್ಟಿಶೀಲತೆಯ ವಿಕಾಸದ ಮುಖ್ಯ ಮಜಲುಗಳಲ್ಲಿ ಒಂದಾಗಿದೆ...[೧]

ಕಂಬಾರರು ತಮ್ಮ ಕಾವ್ಯದ ಮೂಲಕ ನಮ್ಮ ಸಮಕಾಲೀನ ಸಾಂಸ್ಕೃತಿಕ ಒತ್ತಡಗಳನ್ನು ಮತ್ತು ವೈಯಕ್ತಿಕ ಅಸ್ತಿತ್ವದ ಪ್ರಶ್ನೆಗಳನ್ನು ಸಾಕಾರಗೊಳಿಸುವ ಅವರ ಕಾವ್ಯ ವಸಾಹತುಶಾಹಿ ಸಂಸ್ಕೃತಿಗೆ ಎದುರಾಗುವ ಮುಖ್ಯ ಅಭಿವ್ಯಕ್ತಿಯಾಗಿದೆ. ಕಂಬಾರರ ಕಾವ್ಯ ವ್ಯಕ್ತಿ ಮತ್ತು ಸಂಸ್ಕೃತಿಯ ಐಡೆಂಟಿಟಿಯ ಪ್ರಶ್ನೆಗಳನ್ನು ಮುಖ್ಯ ಭಿತ್ತಿಯನ್ನಾಗಿ ಉಳ್ಳದ್ದು. ಗ್ರಾಮ ಜೀವನದ ವಿಘಟನೆಯನ್ನು, ವಿಘಟನೆಯಿಂದ ಉಂಟಾದ ದುರ್ದೆಶೆಗಳು ಕಾವ್ಯಗೊಳ್ಳುವ ಪ್ರಕ್ರಿಯೆಯನ್ನು ವಿಶ್ಲೇಷಿಸುವುದು ಈ ಅಧ್ಯಯನದ ಆಶಯವಾಗಿದೆ.

ಶಿವಾಪುರದ ವಿಘಟನೆ, ಆ ವಿಘಟನೆಯಿಂದ ಉಂಟಾದ ತಳಮಳ ಒಳನೆಲೆಗಳಿಂದ ಒಂದು ಐಡೆಂಟಿಟಿಯ ಅನ್ವೇಷಣೆ 'ಹೇಳತೇನ ಕೇಳ' ಎಂಬ ಅವರ ಲಾವಣಿಯ ಮೂಲಕ ಅಭಿವ್ಯಕ್ತಗೊಂಡು, ಆನಂತರದಲ್ಲಿ ಹೊಸ ವಿಸ್ತಾರವನ್ನು ಪಡೆದುಕೊಂಡಿರುವುದು ಅವರ ಕಾವ್ಯದ ಪ್ರಮುಖ ಬೆಳವಣಿಗೆಯಾಗಿದೆ. 'ಮಾವೊತ್ಸೆತುಂಗನಿಗೆ', 'ಗಂಗಾಮಾಯಿ', 'ಮರತೇನಂದರ ಮರೆಯಲಿ ಹೆಂಗಾ', ನೆರಳಿನ ಜೋಡಿ', 'ನಮಗೆ ಸ್ವಾತಂತ್ರ್ಯವೇ ಇಲ್ಲ', 'ಶಿವಾಪುರದ ಹಾಡು'

ಮುಂತಾದ ಕವಿತೆಗಳಲ್ಲಿ ಈ ನೆಲೆ ನವೋದಯದ ಕುವೆಂಪು ಬೇಂದ್ರೆಯವರಲ್ಲಿ ಕಾಣುವ ಕ್ರಮಕ್ಕಿಂತ ಭಿನ್ನ ಸಂವೇದನೆಯಲ್ಲಿ ಮೈಪಡೆದಿದೆ.

ಬೇಂದ್ರೆಯವರ ಕಾವ್ಯ ಒಂದು ಐಕ್ಯತೆಯ ಕಡೆಗೆ ಚಲಿಸಿದರೆ, ಕಂಬಾರರ ಕಾವ್ಯ ಭಗ್ನಗೊಂಡ ಸ್ಥಿತಿಯ ಬಹುಮುಖತೆಯನ್ನು ಕೇಂದ್ರವಾಗಿಸಿಕೊಂಡದ್ದಾಗಿದೆ. ಇಂಥ ಕೇಂದ್ರದಿಂದ ಸಂಸ್ಕೃತಿಯ ಪ್ರಾಣಸತ್ವಗಳನ್ನು ಅನ್ವೇಷಿಸುವ ಗುರಿ ಅವರ ಕಾವ್ಯಕ್ಕೆ ಇದೆ. ವಸಾಹತುಶಾಹಿ ಸಂಸ್ಕೃತಿ ಕನ್ನಡ ಜನಪದದ ಆಳದಲ್ಲಿ ಹೆಣೆದುಕೊಂಡಿರುವ ವಿಕೃತಾವಸ್ಥೆಗಳನ್ನು ಅಭಿವ್ಯಕ್ತಿಸುತ್ತ ಅದನ್ನು ಮೀರುವ ಸಂಸ್ಕೃತಿಯ ಇಚ್ಛಾಶಕ್ತಿಗಳನ್ನು ಕಂಬಾರರ ಕಾವ್ಯ ನಿರ್ಮಿಸುತ್ತದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಮಾರ್ಗ-ದೇಶಿಯ ಕಲ್ಪನೆ ಕೇವಲ ಶೈಲಿಕವಾದದ್ದಲ್ಲ. ಅದು ಸಾಂಸ್ಕೃತಿಕವಾದದ್ದು. ಈ ಕಲ್ಪನೆ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ನೆಲೆಗಳನ್ನು ಪ್ರತೀತಗೊಳಿಸುವಂತಾದ್ದು. ಪಾಶ್ಚಾತ್ಯ, ಭಾರತೀಯ ಹಾಗೂ ಕನ್ನಡ ಕಾವ್ಯತತ್ವಗಳ ಪರಿಶೀಲನೆಯೊಂದಿಗೆ ಆಧುನಿಕ ಕನ್ನಡ ಕಾವ್ಯವನ್ನು ವಿಶ್ಲೇಷಿಸುವ ವಿಧಿ ವಿಧಾನಗಳನ್ನು ಗುರುತಿಸಿಕೊಳ್ಳುವುದು ಹಾಗೂ ವಿಭಿನ್ನ ಕಾಲಮಾನಗಳಲ್ಲಿ ಉಂಟಾಗಿರುವ ಅವಸ್ಥಾಂತರಗಳನ್ನು ಸಂಸ್ಕೃತಿಯ ಪ್ರಕ್ರಿಯೆಯೊಂದಿಗೆ ಇಲ್ಲಿ ವಿಶ್ಲೇಷಣೆಗೆ ಗುರಿಪಡಿಸಲಾಗಿದೆ. ಪರಂಪರೆ, ನೆನಪು ಮತ್ತು ವರ್ತಮಾನ ಇವುಗಳ ಆಂತರಿಕ ಸಂಬಂಧಗಳನ್ನು ಪರಿಶೀಲಿಸುವುದು ಹಾಗೂ ಜಾತಿ, ಧರ್ಮ ಹಾಗೂ ಸಂಸ್ಕೃತಿ ಇವುಗಳ ಪರಸ್ಪರ ಸಂಬಂಧಗಳನ್ನು ಮತ್ತು ಅದರ ಘರ್ಷಣೆಯ ನೆಲೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಧರ್ಮದ ಕಲ್ಪನೆ, ಗಂಡು ಹೆಣ್ಣುಗಳ ಸಂಬಂಧಗಳ ಸಂಕೀರ್ಣತೆ, ಸಾಮಾಜಿಕ ನ್ಯಾಯದ ಕಲ್ಪನೆ, ಜಾತಿ ವ್ಯವಸ್ಥೆಯ ಕ್ರೌರ್ಯಗಳು, ರಾಷ್ಟ್ರೀಯತೆಯ ಸ್ವರೂಪದ ವಿಭಿನ್ನ ನೆಲೆಗಳು, ವ್ಯಕ್ತಿ ಮತ್ತು ಸಮಾಜ ಸಂಬಂಧದ ಸ್ವರೂಪಗಳು ಈ ಅಧ್ಯಯನದ ಕಕ್ಷೆಗೆ ಒಳಪಡುತ್ತವೆ. ಈ ಎಲ್ಲ ನೆಲೆಗಳು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕನ್ನಡ ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಸಮಗ್ರ ವಿಶ್ಲೇಷಣೆಯನ್ನು ಬೇಂದ್ರೆ, ಕುವೆಂಪು, ಅಡಿಗ ಮತ್ತು ಕಂಬಾರರ ಕೃತಿಗಳ ಅಧ್ಯಯನದ ಮೂಲಕ ಇಲ್ಲಿ ವಿವೇಚಿಸಲಾಗಿದೆ.

ವಸಾಹತುಶಾಹಿಯ ಪ್ರತಿಕೂಲ ಪರಿಣಾಮಗಳ ಫಲವಾಗಿ ವಿಶ್ವದಾದ್ಯಂತ ಅದರ ಧೋರಣೆಗಳನ್ನು ಕುರಿತು ತೀವ್ರವಾದ ಜಿಜ್ಞಾಸೆ ಈಗ ನಡೆಯುತ್ತಿದೆ. ಆ ಸಂಸ್ಕೃತಿಯು ತನ್ನ ಕಾಲೋನಿಗಳ ಮೇಲೆ ಮಾಡಿದ ಆಘಾತಗಳನ್ನು ಹಾಗೂ ಅದರ ಬಗೆಗೆ ಸ್ಥಳೀಯ ಸಂಸ್ಕೃತಿಗಳು ತೋರಿದ ಪ್ರತಿರೋಧಗಳನ್ನು ಕುರಿತ ಸಾಂಸ್ಕೃತಿಕ ದಾಖಲೆಗಳ ಅಧ್ಯಯನದ ವಿಶಿಷ್ಟ ಕಾಳಜಿಗಳು ಇಂಥ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ಸೇರಿಸುತ್ತಲಿವೆ. ವಸಾಹತುಶಾಹಿಯು ಜಗತ್ತಿನಾದ್ಯಂತ ಎಸಗಿರುವ ಆಕ್ರಮಣಶೀಲ ನೆಲೆಗಳು ಅತ್ಯಂತ ಸಂಕೀರ್ಣವಾದವುಗಳಾಗಿವೆ. ತನ್ನ ಸಾಮ್ರಾಜ್ಯಶಾಹಿ ಧೋರಣೆಗಳಿಂದ ದೇಶೀಯ ಅನನ್ಯತೆ, ಸೃಷ್ಟಿಶೀಲತೆಗಳಿಗೆ ಧಕ್ಕೆ ತರುವುದರೊಂದಿಗೆ, ಆ ಅನನ್ಯತೆಗಳು ಅವನತಿಯ ಕಡೆಗೆ ಮುಖಮಾಡುವಂತೆ ಮಾಡಿದೆ. ಹೀಗೆ ಅವನತಿಗೆ ಮುಖಮಾಡಿದ ಸಂಸ್ಕೃತಿಯ ಬಗೆಗೆ ದೇಶೀಯ ಸಂವೇದನೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಮುಖಾಮುಖಿಯಾಗುವುದರೊಂದಿಗೆ ತನ್ನ ಪ್ರತಿರೋಧವನ್ನೊಡ್ಡುತ್ತಲೆ ಬಂದಿದೆ.

ಇಂಥ ಪ್ರತಿರೋಧ ಮತ್ತು ಅನುಸಂಧಾನಗಳನ್ನು ಕುರಿತ ಜಿಜ್ಞಾಸೆ ಈ ಹೊತ್ತಿನ ಬಹುಮುಖ್ಯ ಸಾಂಸ್ಕೃತಿಕ ಚರ್ಚೆಯ ನೆಲೆಯಾಗಿದೆ.

ವ್ಯಕ್ತಿ, ಕುಟುಂಬ, ಸಮಾಜ, ರಾಜಕೀಯ, ವಿಜ್ಞಾನ ಹಾಗೂ ಸಾಂಸ್ಕೃತಿಕ ಸಂಬಂಧಗಳು ವಸಾಹತುಶಾಹಿಯ ಪ್ರಭಾವದಿಂದ ಭಾರತದಂಥ ರಾಷ್ಟ್ರಗಳಲ್ಲಿ ಸಂಕೀರ್ಣ ಪರಿಣಾಮಗಳನ್ನು ಸೃಷ್ಟಿಸಿವೆ. ಇದರಿಂದ ಅನೇಕ ಮಟ್ಟದ ಆತಂಕಗಳು ಎದುರಾಗಿವೆ. ಇದಕ್ಕೆ ಕಾರಣವಾದ ಸಾಮ್ರಾಜ್ಯಶಾಹಿ ಶಕ್ತಿಗಳ ಆಕ್ರಮಣಶಾಲಿ ನೆಲೆಗಳನ್ನು ಸಾಂಸ್ಕೃತಿಕ-ಬೌದ್ಧಿಕವಲಯ ಶೋಧಿಸಿಕೊಳ್ಳುತ್ತಿರುವುದು ಈ ಹೊತ್ತಿನ ಮುಖ್ಯ ತಾತ್ವಿಕ ನೆಲೆಯಾಗಿದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯವಾದ, ದೇಶೀವಾದ, ಪರಿಸರವಾದ, ಇಂಥ ಪರಿಕಲ್ಪನೆಗಳು ನಮ್ಮ ಸಂಸ್ಕೃತಿಯ ಪರಿಶೀಲನೆಗೆ ಮುಖ್ಯ ತಾತ್ತ್ವಿಕ ಭಿತ್ತಿಯನ್ನು ಒದಗಿಸಿವೆ. ಅಶಕ್ತ ರಾಷ್ಟ್ರಗಳನ್ನು ವಸಾಹತುಗಳನ್ನಾಗಿ ಪರಿವರ್ತಿಸಿಕೊಂಡು, ವಸಾಹತುಶಾಹಿ ತನ್ನ ಅಧಿಕಾರ-ಶಕ್ತಿಗಳಿಂದ ರಾಜಕೀಯ, ಆರ್ಥಿಕ ಹಿಡಿತವನ್ನು ಸಾಧಿಸುವ ಪ್ರಕ್ರಿಯೆಗೆ ವಸಾಹತುವಾದ ಅಥವಾ ವಸಾಹತು ಸಂಸ್ಕೃತಿಯೆಂದು ಸ್ಥೂಲವಾಗಿ ಗುರುತಿಸಿಕೊಳ್ಳಬಹುದು. ಇಂಥ ಸಂಸ್ಕೃತಿಯ ಆಕ್ರಮಣಶೀಲ ನೆಲೆಗಳಿಂದ ಪ್ರತಿರೋಧಗಳನ್ನು ಒಡ್ಡುವ ಆಶಯವು ರಾಷ್ಟ್ರೀಯವಾದ, ದೇಶೀವಾದ, ಪರಿಸರವಾದಗಳೆಂಬ ಅಧ್ಯಯನದ ಹಿನ್ನೆಲೆಗಿದೆ. ತನ್ನ ರಾಷ್ಟ್ರ, ತನ್ನ ಬದುಕು, ತನ್ನ ಸಾಂಸ್ಕೃತಿಕ ಅನನ್ಯತೆಗಳಿಗೆ ಧಕ್ಕೆ ಒದಗಬಾರದೆಂಬ ಸ್ವಾಭಿಮಾನ ಎಲ್ಲರಿಗೂ ಇರುವುದು ಸ್ವಾಭಾವಿಕ. ತನ್ನ ಸಂಸ್ಕೃತಿಯ ಅನನ್ಯತೆಗಳಿಗೆ ಮಾರಕವಾಗುವ ಯಾವುದೇ ಶಕ್ತಿಯ ವಿರುದ್ಧ ಅಂಥ ಸ್ವಾಭಿಮಾನ ಮುಖಾಮುಖಿಯಾಗುವುದೂ ಕೂಡ ಸಹಜವೆ. ಅವನತಿಯೆಂದರೆ ಸಂಸ್ಕೃತಿಗಳ ಅನನ್ಯತೆಗಳ ಪ್ರಾಣಧಾತುಗಳನ್ನು ಕಳೆದುಕೊಳ್ಳುವುದು ಎಂದರ್ಥ. ಇಂಥ ಅವನತಿಗೆ ಹೊರಗಿನ ಆಕ್ರಮಣಶಾಲಿ ಸಂಸ್ಕೃತಿಯು ಮಾತ್ರ ಕಾರಣವಾಗುತ್ತದೆಂಬುದು ಚಾರಿತ್ರಿಕ ಸತ್ಯ.

ವಸಾಹತುಶಾಹಿ ಪ್ರಭಾವದಿಂದಾಗಿ ನಮ್ಮ ಸಂದರ್ಭದಲ್ಲಿ ಅನೇಕ ಹೊಸ ಸಾಂಸ್ಕೃತಿಕ ಚಿಂತನೆಗಳು ಈ ಶತಮಾನದ ಆರಂಭದಿಂದಲೂ ವಿಕಾಸಗೊಂಡಿವೆ. ಅದರಲ್ಲಿ ರಾಷ್ಟ್ರೀಯತೆ, ಉಪರಾಷ್ಟ್ರೀಯತೆ, ಮಾರ್ಗ-ದೇಶಿ ಹಾಗೂ ದೇಶೀಯತೆಯ ಬಗೆಗೆ ನಡೆದಿರುವ ಚರ್ಚೆ ಬಹುಮುಖ್ಯವಾದದ್ದು. ಈ ಶತಮಾನದ ಎಪ್ಪತ್ತರ ದಶಕದ ತನಕ ಬೆಳೆದುಬಂದ ಚಿಂತನೆಗಳಿಗೂ ಅನಂತರದಲ್ಲಿ ಬೆಳೆದ ಚಿಂತನೆಗಳಿಗೂ ಸಾಕಷ್ಟು ಅಂತರವಿದೆ. ಎಪ್ಪತ್ತರ ದಶಕದ ನಂತರ ಈ ನಿಟ್ಟಿನಲ್ಲಿ ಡಾ|| ಶಂಕರಮೊಕಾಶಿ ಪುಣೇಕರ, ಡಾ|| ಕೆ.ವಿ.ನಾರಾಯಣ, ಪ್ರೊ|| ಕಿ.ರಂ.ನಾಗರಾಜ, ಡಾ|| ಬಸವರಾಜ ಕಲ್ಗುಡಿ, ಡಾ|| ಡಿ.ಆರ್.ನಾಗರಾಜ್, ಡಾ|| ರಾಜೇಂದ್ರ ಚೆನ್ನಿ, ಶ್ರೀ ಕೆ.ವಿ.ಸುಬ್ಬಣ್ಣ, ಪ್ರೊ|| ಓ.ಎಲ್.ನಾಗಭೂಷಣಸ್ವಾಮಿ ಮೊದಲಾದವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಈ ಸಂಸ್ಕೃತಿ ಚಿಂತಕರ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಉದ್ಧರಿಸುವುದರೊಂದಿಗೆ ವಸಾಹತುಶಾಹಿಗೆ ದೇಶೀಯ ಸಂವೇದನೆ ಪ್ರತಿಕ್ರಿಯಿಸಿದ ಮಾದರಿಗಳನ್ನು ಕಾಣಬಹುದು.

> ರಾಜಭಾಷೆಯ ಕೊಚ್ಚುವ ಪ್ರವಾಹದ ನೀರನ್ನು ನಾವು ಸ್ವೀಕರಿಸುವಾಗ, ಅದಕ್ಕೆ ತಕ್ಕ ಒಡ್ಡುಗಳನ್ನು ಕಟ್ಟಬೇಕಾಗುತ್ತದೆ. ದಾನಿಭಾಷೆಗೆ ಯಾವ ಭಯವೂ ಇರುವುದಿಲ್ಲ. ಪ್ರತಿ ಗ್ರಾಹಕ ಭಾಷೆಗೆ ಮಾತ್ರ ತನ್ನತನವನ್ನೇ ಕಳಕೊಳ್ಳುವ ಭಯವುಂಟು.....

ಬ್ರಿಟಿಶ ಕಾಲದಲ್ಲಿ 'ರಾಷ್ಟ್ರೀಯತ್ವ' ಭಾರತೀಯರ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಕಾಯ್ದಿತು. ಇಂಥ ಸಾಂಸ್ಕೃತಿಕ ರಾಷ್ಟ್ರೀಯತೆ ಅಭಿವ್ಯಕ್ತಿಗೊಳ್ಳುವುದು ಕೇವಲ ತನ್ನ ಊರಿನ ಚೆಲುವನ್ನು ವರ್ಣಿಸುವಲ್ಲಿ, ತನ್ನ ಸಮೀಪದವರ ಉದ್ಧಾರಕ್ಕಾಗಿ ಯತ್ನಿಸುವಲ್ಲಿ, ತನ್ನ ಭಾಷೆಯ ದೇಸಿಯ ಅಭ್ಯಾಸದಲ್ಲಿ, ಜನಪದ ಸಾಹಿತ್ಯದ ಅಭ್ಯಾಸದಲ್ಲಿ, ಇತಿಹಾಸದ ಅಭ್ಯಾಸದಲ್ಲಿ, ಸಾಮಾಜಿಕ ಸಮಸ್ಯೆಗಳಾದ ವಿಧವಾವಿವಾಹ, ಜಾತ್ಯಾತೀತ ಸಮಾಜ ರಚನೆ, ದೀನದಲಿತರ ಉದ್ಧಾರ ಮುಂತಾದ ರೂಪುಗಳಲ್ಲಿ ಪ್ರಕಟವಾಗಿರಬಹುದು.[೨]

ರಾಜಶಾಹಿಯ ಹಿಡತದಿಂದ ಕೂಡಿದ್ದ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಅದರ ಪ್ರಚಾರವೆ ಪೆಡಸು ರಚನೆಗಳ ಮುಖ್ಯ ಉದ್ದೇಶವಾಗಿತ್ತು. ರಾಜಶಾಹಿಯನ್ನು ಮೀರಿದ ಭಿನ್ನ ಆಶಯಗಳನ್ನು ಪ್ರಕಟಿಸುವುದರ ಮೂಲಕ ಒಂದು ನಿಟ್ಟಿನಲ್ಲಿ ರಾಜಶಾಹಿಯ ವಿರೋಧ ಪ್ರಕಟಗೊಂಡಿದೆ. ಮತ್ತೊಂದು ನಿಟ್ಟಿನಲ್ಲಿ ಪ್ರಾದೇಶಿಕ ಸಂಸ್ಕೃತಿಯನ್ನು ವಿನಾಶಗೊಳಿಸುತ್ತಿರುವ ಪ್ರಭಾವಗಳನ್ನು ವಿರೋಧಿಸುವುದು ಕನ್ನಡ ಕವಿತೆಯ ಮುಖ್ಯ ಆಶಯವಾಗಿದೆ.[೩]

(ಅನುವಾದದ) ಮಧ್ಯವರ್ತಿಯಾಗಿ ಬರುತ್ತ ಇರುವ ಇಂಗ್ಲಿಷ್ ಭಾಷೆ ತನ್ನ ಅಧಿಕಾರವನ್ನು ಸ್ಥಾಪಿಸುವ ಪ್ರಯತ್ನ ಪಡುತ್ತಾ ಇದೆ.ಮೂಲ ಇದು ಅಂಥ ಹೇಳಿಕೆ ಪ್ರಯತ್ನ ಪಡುತ್ತಾ ಇದೆ. ಇಂಗ್ಲಿಶ್‌ನಿಂದ ಅನುವಾದ ಮಾಡುವುದಕ್ಕೆ ಏನಿದೆ? ಒಂದು ವೇಳೆ ಅನುವಾದ ಮಾಡುವುದಾದರೆ ಜರ್ಮನ್, ರೋಮನ್ಸ್ , ಲ್ಯಾಟಿನ್ ಭಾಷೆಗಳಲ್ಲಿ ಸೃಷ್ಟಿಯಾದದ್ದನ್ನು ಇಂಗ್ಲಿಶ್‌ನಿಂದ ಅನುವಾದ ಮಾಡಬೇಕಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ ಇಂಗ್ಲಿಶ್ ತಾನು ಹೇಳಿ ಕೊಳ್ಳತಕ್ಕದ್ದು, ಬಹಳ ಅದ್ಭುತವಾದದ್ದನ್ನು ಏನು ಸೃಷ್ಟಿಮಾಡಿದೆ?. ನನಗೆ ಕುವೆಂಪು ಇದ್ದಾರೆ, ಮಾಸ್ತಿ ಇದ್ದಾರೆ, ಬೇಂದ್ರೆ ಇದ್ದಾರೆ. ಇವರಿಗಿಂತ ಶ್ರೇಷ್ಠವಾದದ್ದನ್ನು ಇಂಗ್ಲಿಶ್ ಸಾಹಿತ್ಯ ಅನುವಾದದಲ್ಲಿ ಈಗ ಕೊಡುವುದಿಲ್ಲ. ಕೊಟ್ಟಿದೆ. ಆದರೆ ತನ್ನದಾದ್ದಲ್ಲ. ಇನ್ನೊಂದು ಭಾಷೆಯಿಂದ. ಆದರೆ ಆ ಇನ್ನೊಂದು ಭಾಷೆಯಲ್ಲಿ ಮೂಲ ಯಾವುದಂಥ ನಾನು ಹೇಳುತ್ತೀನಿ ಅಂತ ಹೇಳುತ್ತಾ ಇದೆ. ಅದರಲ್ಲಿ ಈ ರೀತಿಯ ರಾಜಕಾರಣವನ್ನು ಗಮನಿಸ ಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಕನ್ನಡದಂಥ ಭಾಷೆ ತನ್ನ ಈ ಸಾಂಸ್ಕೃತಿಕ ಅಸ್ಮಿತೆಯನ್ನು ಹೇಗೆ ಉಳಿಸಿಕೊಂಡು ಬಂದಿದೆ, ಅದನ್ನು ಉಳಿಸಿಕೊಂಡು ಬರುತ್ತದೆ, ಬರುವುದಕ್ಕೆ ನಾವು ಯಾವ ಬಗೆಯ ನೆಲೆಗಳನ್ನು ಸಮರ್ಥಿಸ ಬೇಕಾಗಿ ಬರುತ್ತದೆ.......[೪]

ದೇಶೀಯವಾದ (ಸ್ವಕೀಯ) ಅಂಶಗಳನ್ನು 'ಅನ್ಯ' ಅಂಶಗಳು ಕಬಳಿಸುತ್ತಿವೆ ಎನ್ನುವ ಭಾವನೆ ಯುಂಟಾದಾಗ ದೇಶೀಯ ಪರಿಕರಗಳನ್ನು ಸಮರ್ಥಿಸುವ, ರಕ್ಷಿಸುವ ಪ್ರವೃತ್ತಿ ಹುಟ್ಟಿ ಕೊಳ್ಳುತ್ತದೆ. ಇದನ್ನೇ ಸಾಂಸ್ಕೃತಿಕ ದೇಶೀಯವಾದವೆಂದು ಕರೆಯಲಾಗುತ್ತದೆ.[೫]

ಈ ಮೇಲಿನ ಉದ್ಧರಣೆಗಳಲ್ಲಿ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿಯ ಆಕ್ರಮಣಶೀಲ ನೆಲೆಗಳಿಂದ ಕನ್ನಡ ಸಂವೇದನೆ ಮುಖಾಮುಖಿಯಾಗುವುದರ ಮುಖೇನ ತನ್ನ ಸಾಂಸ್ಕೃತಿಕ ಅನನ್ಯತೆಗಳ ಶೋಧನೆಯನ್ನು ನಡೆಸುತ್ತಿರುವುದನ್ನು ಕಾಣುತ್ತೇವೆ. ಸ್ಥಳೀಯ ಸಂಸ್ಕೃತಿಗಳು ತನ್ನ ಸಾಂಸ್ಕೃತಿಕ ಅಸ್ಮಿತೆಗಳಿಗೆ ಧಕ್ಕೆಯಾಗುವ, ತನ್ನತನಗಳಿಗೆ ಮಾರಕವಾಗುವ

ಎಲ್ಲ ಮಟ್ಟದ ಸಾಮ್ರಾಜ್ಯಶಾಹಿ ಕ್ರೌರ್ಯಗಳಿಗೆ ತೋರುವ ಸಂಘರ್ಷಾತ್ಮಕ ನೆಲೆಗಳಲ್ಲಿ ವಸಾಹತುಶಾಹಿಯ ಬಗೆಗಿನ ನಿಲುವುಗಳನ್ನು ಕಂಡುಕೊಳ್ಳಬಹುದು. ಇಂಥ ಗ್ರಹಿಕೆಗಳಿಂದ ಉತ್ಪನ್ನವಾಗುವ ವಿಚಾರದಿಂದ ವಸಾಹತುಶಾಹಿಯ ಸ್ವರೂಪ, ಲಕ್ಷಣಗಳನ್ನು ಗುರುತಿಸಿಕೊಳ್ಳಬಹುದು. ವಸಾಹತುಶಾಹಿ ಎಂದರೆ ಹೊರ ಮತ್ತು ಒಳಗಿನ ಕಾರಣಗಳಿಂದ ಏರ್ಪಡುವ ದಮನಾವಸ್ಥೆ. ಯಾವುದೇ ರೀತಿಯ ದಬ್ಬಾಳಿಕೆ, ಶೋಷಿತ ಸ್ಥಿತಿಯನ್ನು ವಸಾಹತುಶಾಹಿ ಸಂಸ್ಕೃತಿಯೆಂದು ತಿಳಿಯಬಹುದು. ರಾಷ್ಟ್ರ-ರಾಷ್ಟ್ರಗಳ, ವರ್ಣ-ವರ್ಗಗಳ, ದೇಶ-ಭಾಷೆಗಳ, ಗಂಡು-ಹೆಣ್ಣುಗಳ ಮಟ್ಟಗಳಲ್ಲಿ ಏರ್ಪಡುವ ಕ್ರೌರ್ಯ, ಶೋಷಿತಾವಸ್ಥೆ, ಧಾರ್ಮಿಕ, ಆರ್ಥಿಕ ಬಲತ್ಕಾರವನ್ನು ವಸಾಹತುಶಾಹಿ ಸಂಸ್ಕೃತಿಯೆಂದು ಗುರುತಿಸಿಕೊಳ್ಳಬಹುದಾಗಿದೆ. ಡಾ|| ಡಿ.ಆರ್.ನಾಗರಾಜರ ಮಾತುಗಳಲ್ಲಿ ಹೇಳುವುದಾದರೆ ಚರಿತ್ರೆಯಲ್ಲಿ 'ಮುಂದುವರಿದ' ಸಮಾಜಗಳು, ಶಕ್ತಿಗಳು 'ಹಿಂದುಳಿದಿರುವ' ಸಮಾಜಗಳನ್ನು ಆಕ್ರಮಿಸುವ ಪ್ರಕ್ರಿಯೆಯೆ ವಸಾಹತುಶಾಹಿ.

ಅನ್ಯಜ್ಞಾನಗಳ ಶಿಸ್ತು ವಿಕಾಸಗೊಂಡಂತೆ ನಾವು ಚರ್ಚಿಸುತ್ತಿದ್ದ ಮುಖ್ಯ ತಾತ್ತ್ವಿಕ ನೆಲೆಗಳು ಪುನರ್ ನಿರ್ವಚನಕ್ಕೆ ಒಳಗಾದದ್ದು ಒಂದು ಮುಖ್ಯ ನೆಲೆ. ವರ್ಗ ಸಂಬಂಧಗಳು, ಜಾತಿ, ಲಿಂಗ - ಈ ಮುಂತಾದ ಸಂಬಂಧಗಳೊಂದಿಗೆ ಹೊಂದಿಸಿ ಚರ್ಚಿಸುವುದು ಎಷ್ಟು ಅಗತ್ಯ ಎಂಬುದನ್ನು ನಾವೀಗ ತಿಳಿಯುತ್ತಿದ್ದೇವೆ. ಹೀಗಾಗಿ ಸಾಹಿತ್ಯಕ ಅಭಿವ್ಯಕ್ತಿಯು ಪ್ರಮುಖವಾಗಿ ಸಾಂಸ್ಕೃತಿಕ ಸ್ಥಿತಿ-ಗತಿಗಳ ಒಂದು ಚಲನಶೀಲ ಅಭಿವ್ಯಕ್ತಿಯೆಂಬುದು ಈ ಹೊತ್ತಿನ ಅಧ್ಯಯನದ ಮುಖ್ಯಧೋರಣೆಯಾಗಿದೆ.

ಒಂದು ಜೀವಂತ ಸಂಸ್ಕೃತಿಯ ಯಾವುದೇ ಅರ್ಥಪೂರ್ಣ ಅಭಿವ್ಯಕ್ತಿಯನ್ನು ಶೋಧಿಸಿದರೂ ಕೂಡ ಎಲ್ಲ ಮಟ್ಟದ ಸಂಕೀರ್ಣತೆಗಳನ್ನು ಕಾಣಲು ಸಾಧ್ಯ. ಈ ತಿಳುವಳಿಕೆ ನಮ್ಮ ಅಧ್ಯಯನದ ಮುಖ್ಯ ತಾತ್ತ್ವಿಕ ನೆಲೆ. ವಸಾಹತುಶಾಹಿಯ ಅಧಿಕಾರದ ನೆಲೆ ಹಾಗೂ ಅದು ದಮನಗೊಳಿಸಲು ಇಚ್ಛಿಸಿದ ನಮ್ಮ ಸಾಂಸ್ಕೃತಿಕ ಸಂದರ್ಭಗಳನ್ನು ಒಂದು ಏಕಾಕೃತಿಯ ನೆಲೆಯಲ್ಲಿ ಗ್ರಹಿಸುವುದರಿಂದ ಯಾವ ಪ್ರಯೋಜನವೂ ಇರಲಾರದು. ಏಕೆಂದರೆ ವಸಾಹತುಶಾಹಿಯ ಭೌತಿಕ ಆಕ್ರಮಣದ ಸ್ವರೂಪಕ್ಕೂ, ಮಾನಸಿಕ ಆಕ್ರಮಣದ ಸ್ವರೂಪಕ್ಕೂ ದೊಡ್ಡ ಅಂತರವಿದೆ. ಸಾಹಿತ್ಯಕ ಸಂಸ್ಕೃತಿಯ ಅಭಿವ್ಯಕ್ತಿಯು ಪ್ರಧಾನವಾಗಿ ನಮ್ಮ ಮನೋನೆಲೆಗಳನ್ನು ಅನ್ಯಾಕ್ರಮಣಕ್ಕೆ ಗುರಿಪಡಿಸಿದ ದುಃಸ್ವಪ್ನದ ಕಥನಗಳನ್ನು ನಿರೂಪಿಸುತ್ತದೆ. ಇಂಥ ರಾಜಕೀಯ ಅನ್ಯಾಕ್ರಮಣದಿಂದ, ಅನ್ಯಾಕ್ರಮಣಕ್ಕೆ ಗುರಿಯಾದ ಪರಿಸರದ ಮೈ-ಮನಸ್ಸುಗಳು ತಮ್ಮ ಸಂಸ್ಕೃತಿಯ ಆಯ್ಕೆಗಳಲ್ಲಿಯೇ ಒಂದು ದೊಡ್ಡ ಗೊಂದಲವನ್ನು ಎದುರಿಸುವಂತಾಗುತ್ತದೆ. ಆದರೆ ಕ್ರಿಯಾಶೀಲ ಸಾಂಸ್ಕೃತಿಕ ಅಭಿವ್ಯಕ್ತಿಯು ಭೌತಿಕ ಆಕ್ರಮಣವನ್ನು ಮೀರಲು ಅಸಂಖ್ಯ ಹುನ್ನಾರಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಈ ಧೋರಣೆ ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ನಿರಂತರವಾಗಿ ನಡೆದಿದೆ. ವ್ಯಕ್ತಿ ಚೈತನ್ಯವೂ ಕೂಡ ಈ ಅನ್ಯಾಕ್ರಮಣಗಳಿಗೆ ಒಳಗಾಗುತ್ತದೆ. ಆ ಚೇತನ ಅಶಕ್ತಿಯ ಒಂದು ಸಾಮಾಜಿಕವಾದ ಸಂದರ್ಭಗಳನ್ನು ಮೀರಲು ಯತ್ನಿಸುತ್ತದೆ.

ವಸಾಹತುಶಾಹಿಯ ಆಕ್ರಮಣ ಇಬ್ಬಗೆಯ ಆಕ್ರಮಣ. ಅಂದರೆ ಭೌತಿಕ ಹಾಗೂ ಮಾನಸಿಕ ಎರಡೂ ನೆಲೆಗಳಲ್ಲಿ ಇದು ನಡೆಯುತ್ತದೆ. ಗಾಂಧೀಜಿಯವರು ಅನ್ಯಾಕ್ರಮಣವನ್ನು ಅಹಿಂಸೆ, ಧಾರ್ಮಿಕಾತ್ಮಕ ರಾಜಕೀಯ ಈ ಹಿನ್ನೆಲೆಗಳಿಂದ

ಇಂಥ ಆಕ್ರಮಣಗಳನ್ನು ಚಿಂತಿಸಿದರು. ಅಂಥ ಆಕ್ರಮಣಗಳಿಗೆ ಪ್ರತಿರೋಧ ಒಡ್ಡಿದರು. ಕವಿಗಳು, ಸೃಷ್ಟಿಶೀಲ ಲೇಖಕರು, ಸಾಂಸ್ಕೃತಿಕ ಚಿಂತಕರು ಮನೋಪ್ರಕ್ರಿಯೆಗಳ ಮುಖೇನ ಮುಖಾಮುಖಿಯಾದರು. ಮಾನಸಿಕ ಆಕ್ರಮಣಗಳನ್ನು ಮೀರಲು ಅಭಿವ್ಯಕ್ತಿಯ ನೆಲೆಗಳನ್ನು, ಮಾದರಿಗಳನ್ನು ಆಶ್ರಯಿಸಿದರು. ವಸಾಹತುಶಾಹಿಯ ಪ್ರಭಾವ ಪರಿಣಾಮಗಳನ್ನು ಕನ್ನಡ ಸಂವೇದನೆ ಸ್ವೀಕರಿಸಿದ-ನಿರಾಕರಿಸಿದ ನೆಲೆಗಳು ಹಾಗೂ ತಮಗೆ ಬೇಕಾದ ಹಾಗೆ ಅಂಥ ನೆಲೆಗಳನ್ನು ತಿದ್ದಿ ಮಾರ್ಪಡಿಸಿಕೊಂಡ ಪ್ರಕ್ರಿಯೆಯು ನಮ್ಮ ಸಂದರ್ಭದಲ್ಲಿ ಅನನ್ಯವಾಗಿ ಕಾಣುತ್ತದೆ. ಅಂಥ ನೆಲೆಗಳನ್ನು ಅಧ್ಯಯನಕ್ಕೆ ಗುರಿಪಡಿಸುವುದರಿಂದ ಉತ್ಪನ್ನವಾಗುವ ಈ ಬಗೆಯ ಚಿಂತನೆಯನ್ನು ಬೇಂದ್ರೆ, ಕುವೆಂಪು, ಅಡಿಗ ಮತ್ತು ಕಂಬಾರರ ಕಾವ್ಯದ ಪರಿಶೀಲನೆಯಿಂದ ಶೋಧಿಸಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶ.

**ಅಡಿಟಿಪ್ಪಣಿ**

೧. ನಾಗರಾಜ ಕಿ.ರಂ. *ಸಿರಿಸಂಪಿಗೆ*, ಮುನ್ನುಡಿ, ಅಕ್ಷರ ಪ್ರಕಾಶನ, ಸಾಗರ, ೧೯೯೧

೨. ಶಂಕರ ಮೊಕಾಶಿ ಪುಣೇಕರ. *ಸಾಹಿತ್ಯ ಮತ್ತು ಅಭಿರುಚಿ*, ಮಿತ್ರಪ್ರಕಾಶನ, ಮೈಸೂರು, ೧೯೮೧, ಪುಟ-೧೨

೩. ನಾಗರಾಜ ಕಿ.ರಂ. '*ಕನ್ನಡ ಕಾವ್ಯ ರಚನಾ ಪರಂಪರೆಯ ವಿಶಿಷ್ಟತೆ*', (ಲೇಖನ) ಆಲೋಕ,೧೯೭೯

೪. ನಾರಾಯಣ ಕೆ.ವಿ. '*ಭಾಷಾಂತರದ ಭಾಷೆಯಾಗಿ ಕನ್ನಡ* ',(ಅಪ್ರಕಟಿತ ಭಾಷಣ), ಕನ್ನಡ ವಿ.ವಿ., ಹಂಪಿ, ೧೯೯೮

೫. ರಾಜೇಂದ್ರ ಚೆನ್ನಿ. *ದೇಶೀವಾದ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,೧೯೮೯, ಪುಟ-೧೯

# ಅಧ್ಯಾಯ : ಎರಡು

# ವಸಾಹತುಶಾಹಿ : ರಾಷ್ಟ್ರೀಯ - ಕರ್ನಾಟಕದ ಸಂದರ್ಭದಲ್ಲಿ

## ೧. ವಸಾಹತುಶಾಹಿ ನೆಲೆಗಳು : ಮೊದಲ ಘಟ್ಟ

ಭಾರತೀಯ ಸಂಸ್ಕೃತಿಯು ಎಲ್ಲ ಕಾಲಗಳಲ್ಲಿಯೂ ಹಲವಾರು ವಿಭಿನ್ನ ಸಂಸ್ಕೃತಿಗಳ ಸಂಪರ್ಕ, ಸಂಘರ್ಷಗಳಿಗೆ ಒಳಗಾಗುತ್ತ ಬಂದಿದೆ. ಅಂತಹ ಸಂಘರ್ಷಗಳಿಗೆ ಒಳಗಾಗುತ್ತಲೆ ತನ್ನ ಮೂಲ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರಿಯುತ್ತ ಬಂದಿರುವುದು ಈ ಸಂಸ್ಕೃತಿಯ ವಿಶಿಷ್ಟತೆಯಾಗಿದೆ. ಅಂದರೆ ಭಾರತೀಯ ಸಂಸ್ಕೃತಿ ಆಯಾ ಕಾಲದ ಪರಕೀಯ ಸಂಸ್ಕೃತಿಗಳ ಆಕರ್ಷಣೆ-ವಿಕರ್ಷಣೆಗಳಿಗೊಳಗಾಗುತ್ತ ಆ ಸಂಸ್ಕೃತಿಗಳ ಉತ್ತಮಾಂಶಗಳನ್ನು ಸ್ವೀಕರಿಸಿ ತನ್ನ ಅಸ್ತಿತ್ವಕ್ಕೆ ಧಕ್ಕೆ ತರುವ ಪ್ರತಿಗಾಮಿ ನೆಲೆಗಳಿಗೆ ಪ್ರತಿರೋಧವನ್ನು ಒಡ್ಡುತ್ತಾ ಬಂದಿರುವುದನ್ನು ಕಾಣಬಹುದು. ಇದನ್ನು ಆಯಾ ಕಾಲದ ಚರಿತ್ರೆ ಹಾಗೂ ಸಾಂಸ್ಕೃತಿಕ ಸಂದರ್ಭದಿಂದ ಗ್ರಹಿಸಬಹುದಾಗಿದೆ. ಇಂತಹ ಆಕರ್ಷಣೆ ಮತ್ತು ವಿಕರ್ಷಣೆಗಳ ಪರಿಸರ ಅತ್ಯಂತ ಸಂಕೀರ್ಣವಾದದ್ದು.ಬ್ರಿಟೀಷರು ಭಾರತದಲ್ಲಿ ರಾಜಕೀಯ ಪರಿಸರಕ್ಕೆ ಕೈ ಹಾಕಿದಾಗ ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಅನೇಕ ಬಿಕ್ಕಟ್ಟುಗಳೇ ಏರ್ಪಟ್ಟವು.

ವಾಸ್ಕೋಡಿಗಾಮ ೧೪೯೮ರಲ್ಲಿ ಭಾರತದ ಪಶ್ಚಿಮ ಭಾಗದ ಕಾಲಿಕಟ್‌ನ್ನು ತಲುಪಿದಾಗಲೇ ಏಷ್ಯಾ ಮತ್ತು ಯೂರೋಪ್ ರಾಷ್ಟ್ರಗಳ ವಾಣಿಜ್ಯ, ರಾಜಕೀಯ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ನವ ಸಂಘರ್ಷದ ಯುಗವೊಂದು ಆರಂಭವಾಯಿತು. ಏಷ್ಯಾ ಮತ್ತು ಯೂರೋಪ್ ಖಂಡಗಳ ನಡುವೆ ವ್ಯಾಪಾರ ಮತ್ತು ಧರ್ಮದ ವಿಷಯವಾಗಿ ಪರಂಪರಾಗತವಾಗಿ ನಡೆದುಬಂದಿದ್ದ ವೈರತ್ವವೇ ವಾಸ್ಕೋಡಿಗಾಮ, ಕೊಲಂಬಸ್‌ನಂತಹವರನ್ನು ಹೊಸ ಜಲಮಾರ್ಗಗಳ ಶೋಧನೆಗೆ ಪ್ರೇರೇಪಿಸಿತೆನ್ನಬಹುದು. ಜಲಮಾರ್ಗಗಳ ಶೋಧ ಆ ಕಾಲದಲ್ಲಿ ಹೊಸ ಕ್ರಾಂತಿಯನ್ನೇ ಉಂಟುಮಾಡುವುದರ ಜೊತೆಗೆ ಪ್ರಪಂಚ ಕಿರಿದಾಗುತ್ತಾ ಹೋದದ್ದು ಇಂತಹ ಸಂಘರ್ಷಕ್ಕೆ ಕಾರಣವಾಯಿತು. ಭರತಖಂಡದ ಶ್ರೀಮಂತಿಕೆಯನ್ನು, ಸಮೃದ್ಧತೆಯನ್ನು ಬಹುಕಾಲದಿಂದಲೂ ಕೇಳಿ ತಿಳಿದಿದ್ದ ಪರಕೀಯರು ಅತ್ಯಂತ ಸಂಪದ್ಭರಿತವಾದ ಭಾರತದಲ್ಲಿ ಪ್ರವೇಶಿಸಲು ಹಾತೊರೆಯುದ್ದರು. ಆ ಕಾಲದ ನವ ವೈಜ್ಞಾನಿಕ ಶೋಧಗಳು

ಆಕ್ರಮಣಶಾಲಿ ವ್ಯಾಪಾರ ಧೋರಣೆಯುಳ್ಳ ಪೋರ್ಚುಗೀಸರು, ಫ್ರೆಂಚರು, ಡಚ್ಚರು, ಇಂಗ್ಲಿಶ್‌ರಂತಹವರನ್ನು ಸನ್ನದ್ಧಗೊಳಿಸಿದವು.

ಹದಿನೇಳನೆಯ ಶತಮಾನದಲ್ಲಿ ಯೂರೋಪ್ ರಾಷ್ಟ್ರಗಳಲ್ಲಿ ಉಂಟಾದ ಪುನರುಜ್ಜೀವನ ಅಥವಾ ನವೋದಯ ಮತ್ತು ವೈಜ್ಞಾನಿಕ ಚಟುವಟಿಕೆಗಳಿಂದ ಹೊಸ ಶೋಧಗಳಿಗೆ ಚಾಲನೆ ದೊರಕಿತು. ಇಂತಹ ಚಾಲನೆಯಿಂದ ವಿಶಿಷ್ಟ ರಾಜಕೀಯ, ಧಾರ್ಮಿಕ ನಂಬಿಕೆಗಳುಳ್ಳ ಭಾರತದಂತಹ ರಾಷ್ಟ್ರದ ಕಡೆಗೆ ಯೂರೋಪಿಯನ್ನರು ಆಕರ್ಷಿತರಾದರು. ಅಂತೆಯೇ ಭಾರತವು ಅವರಿಗೆ ತಮ್ಮದೆ ಆದ ರೀತಿಯಲ್ಲಿ ಲಾಭ ಪಡೆಯಲು ಅನುಕೂಲವಾದ ರಾಷ್ಟ್ರವೂ ಆಗಿತ್ತು. ಪೋರ್ಚುಗೀಸರು, ಡಚ್ಚರು ಮತ್ತು ಫ್ರೆಂಚರು ವ್ಯಾಪಾರ ಮನೋಭಾವದಿಂದ ನಮ್ಮ ನೆಲದಲ್ಲಿ ಮೊದಲು ಕಾಲಿಟ್ಟರೂ, ಆ ನಂತರ ಬಂದ ಇಂಗ್ಲಿಶ್‌ರು ಆಗಿನ ಭಾರತದ ರಾಜಕೀಯ ಬಲಹೀನತೆಯ ಲಾಭವನ್ನು ಪಡೆಯುವುದರ ಜೊತೆಗೆ ರಾಜ್ಯ ಸ್ಥಾಪನೆಗೂ ತೊಡಗಿದರು. ಭಾರತದ ರಾಜಕೀಯ ದುಸ್ಥಿತಿಯ ಲಾಭವನ್ನು ಚೆನ್ನಾಗಿ ಪಡೆದುಕೊಂಡ ಇಂಗ್ಲಿಶ್‌ರು ತಮಗಿಂತ ಮೊದಲೇ ಬಂದಿದ್ದ ಪೋರ್ಚುಗೀಸ್, ಡಚ್ ಮತ್ತು ಫ್ರೆಂಚರನ್ನು ಈ ನೆಲದಿಂದ ಹೊರದೂಡಿಸಲು ಮುಂದಾದರು. ಅಂತೆಯೇ ಭಾರತೀಯ ಆಳರಸರ ಲೋಪದೋಷಗಳನ್ನು ಚೆನ್ನಾಗಿ ಅರಿತ ಇಂಗ್ಲಿಶ್‌ರು ಭಾರತೀಯರ ನೆರವಿನಿಂದಲೇ ಇಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ತೊಡಗಿದರು. ಕಲೆ, ಸಾಹಿತ್ಯ, ತತ್ವಜ್ಞಾನ, ಧರ್ಮ ಮೊದಲಾದ ನೆಲೆಗಳಲ್ಲಿ ಭಾರತೀಯರು ದೊಡ್ಡ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದ್ದರೂ ಆರ್ಥಿಕ ಮತ್ತು ರಾಜಕೀಯ ನೆಲೆಗಳ ಶೈಲಿ ಅತ್ಯಂತ ಪುರಾತನವಾಗಿದ್ದವು. ಯೂರೋಪಿನ ಪುನರುಜ್ಜೀವನ ಹಾಗೂ ಕೈಗಾರಿಕೀಕರಣದಿಂದ ದತ್ತವಾದ ಸಾಹಸ ಹಾಗೂ ಪರಸ್ಪರ ಸ್ಪರ್ಧೆಗಳು ಹೊಸ ಹೊಸ ಭೂಭಾಗಗಳ ಸಂಪತ್ತನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ಸಹಜವಾಗಿಯೇ ಅವರನ್ನು ಪ್ರೇರೇಪಿಸಿತು. ಇಂತಹ ಪ್ರೇರಣೆಗೆ ಬಲಿಯಾದದ್ದು ಒಂದು ರೀತಿಯಲ್ಲಿ ದುರಂತವೂ ವರವೂ ಆಯಿತು. ಈಗಾಗಲೇ ಪ್ರಸ್ತಾಪಿಸಿದಂತೆ ಭಾರತದ ಸಂಪದ್ಭರಿತ ಶ್ರೀಮಂತಿಕೆಯು ಪಾಶ್ಚಾತ್ಯ ಸಾಹಸಿಗಳ ಮೋಹಕ್ಕೆ ಸಿಲುಕಿತು.

ಬಲಗೈಯ ಖಡ್ಗದಿಂದೆಡಗೈ ಕೊರಾನಿನಿಂ
    ಭಾರತಿಯ ಪೀಡಿಸಿದ ಮುಸಲದಳಮಂ,
ಮೇಲೆ ಕ್ರಿಸ್ತನ ನಿರಿಸಿಯೊಳಗೆ ಸೈತಾನನಂ
    ಮರೆಮಾಡಿ ಹೇಮಾಭಿಲಾಷೆಯಿಂದ
ವಾರಿಧಿಯ ದಾಂಟಿ ಬೇಹಾರಕ್ಕೆತಂದರಂ,
ಕ್ರಿಸ್ತವೇಷವನಾಂತ ಸೈತಾನನಾಚಾರದಿಂ
ಭಾರತಿಯ ಪಣೆಯಿಂದ ಪದಕಿಳಿದ ಶೋಣಿತಮುಮಂ'

'ಅವರ ತಕ್ಕಡಿ ಮತ್ತು ಕೋವಿಗಳಿಗೆ' ಬಲಿಯಾಗುತ್ತಲೇ ಅವುಗಳನ್ನು ಅನುಸರಿಸಿ ಬಂದ ಪರಕೀಯ ಸಂಸ್ಕೃತಿಗೆ ಮೊದಲಮೊದಲು ಅತ್ಯಂತ ಪರಿಣಾಮಕಾರಿಯಾಗಿ ಕುರುಡತನದಿಂದ ಆಕರ್ಷಿತಗೊಂಡದ್ದು ನಮ್ಮ ಸಂದರ್ಭದ ದುರಂತವೆನ್ನಬಹುದು.

ಕ್ರಿ.ಶ.೧೬೦೦ರಲ್ಲಿ ಹುಟ್ಟಿದ 'ಈಸ್ಟ್ ಇಂಡಿಯಾ ಕಂಪನಿ'ಯೆಂಬ ಇಂಗ್ಲಿಶ್‍ರ ವಾಣಿಜ್ಯ ಸಂಘವು ೧೬೧೩ರಲ್ಲಿ ಸುಲ್ತಾನ ಜಹಾಂಗೀರ್‌ನಿಂದ ಅನುಮತಿಯನ್ನು ಪಡೆದು 'ಸೂರತ್'ನಲ್ಲಿ ಮೊತ್ತಮೊದಲು ವ್ಯಾಪಾರದ ಕೋಠಿಯನ್ನು ಸ್ಥಾಪಿಸುವುದರ ಮೂಲಕ ಬ್ರಿಟಿಷರು ನೆಲೆಯೂರಿದರು. ಅನಂತರ ಮಚಲೀಪಟ್ಟಣ, ಹರಿಹರಪುರ, ಮದ್ರಾಸ್ , ಹೂಗ್ಲಿ, ಬೊಂಬಾಯಿ, ಕಲ್ಕತ್ತಾಗಳಲ್ಲಿ ಕೇವಲ ಎಂಟು ದಶಕಗಳಲ್ಲಿಯೇ ಭಾರತದ ಸಮುದ್ರ ತೀರ ಪ್ರದೇಶಗಳ ಬಹುಮುಖ್ಯ ಸ್ಥಾನಗಳನ್ನು ವಶಪಡಿಸಿಕೊಂಡು ವ್ಯಾಪರಕ್ಕೂ ಮತ್ತು ರಾಜಕೀಯ ತಂತ್ರಗಳಿಗೂ ನೆಲೆಯನ್ನು ಸ್ಥಾಪಿಸಿಕೊಂಡರು. ತಮ್ಮ ವ್ಯಾಪಾರ-ವಹಿವಾಟು ಮತ್ತು ರಕ್ಷಣೆಗೆ ಬೇಕಾದ ಹಣವನ್ನು ಸ್ಥಳೀಯ ತೆರಿಗೆಗಳ ಮೂಲಕ ಕಂಪನಿಗೆ ಲಾಭವನ್ನು ಗಳಿಸಿಕೊಂಡದ್ದು ಬ್ರಿಟಿಷರ ರಾಜಕೀಯ ತಂತ್ರಕ್ಕೆ ಉತ್ತಮ ಉದಾಹರಣೆಯಾಗಿದೆ. ಅಂತೆಯೇ ತನ್ನ ಆರ್ಥಿಕ ಸಂಪನ್ಮೂಲಗಳನ್ನು, ರಾಜ್ಯ ವಿಸ್ತಾರವನ್ನೂ ತನ್ನ ರಾಜಕೀಯ ಚಾಣಾಕ್ಷತೆಯ ಮೂಲಕ ವಿಸ್ತರಿಸಿಕೊಂಡಿದ್ದು ಬ್ರಿಟಿಷರ ಆಕ್ರಮಣಕಾರಿ ಧೋರಣೆಯನ್ನು ಪರಿಚಯಿಸುತ್ತದೆ. ಈಸ್ಟ್-ಇಂಡಿಯಾ ಕಂಪನಿಯು ಮತ್ತಷ್ಟು ಬಲಗೊಳ್ಳಲು ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿರಂಗಗಳಲ್ಲಿ ಹೆಚ್ಚು ಹೆಚ್ಚು ಬಂಡವಾಳವನ್ನು ಹೂಡುವ ಮತ್ತು ತಾನು ಗೆದ್ದ ಪ್ರದೇಶಗಳಲ್ಲಿ ಕಂದಾಯದ ಮೇಲೆ ನೇರ ಹತೋಟಿಯನ್ನು ಇಟ್ಟುಕೊಂಡಿತು. ಆ ಮುಖೇನ ಅರಸರು, ಜಮೀನ್ದಾರರು ಸಂಗ್ರಹಿಸಿಟ್ಟ ಸಂಪತ್ತನ್ನು ಕಬಳಿಸುವುದರ ಜೊತೆಗೆ ತನ್ನ ಅಧಿಪತ್ಯವನ್ನು ಭಾರತದಲ್ಲಿ ಮತ್ತಷ್ಟು ಬಲಪಡಿಸಲು ಬಳಸಿತು. ಇದೇ ಸಮಯದಲ್ಲಿ ಭಾರತದ ವಾಣಿಜ್ಯ ಮತ್ತು ಉತ್ಪಾದನೆಯ ಮೇಲೆ ಏಕಸ್ವಾಮ್ಯ ನಿಯಂತ್ರಣವನ್ನು ಸಾಧಿಸುವುದರ ಮೂಲಕ ಭಾರತೀಯ ವರ್ತಕರನ್ನು ಸುಲಿಗೆ ಮಾಡಿತು. ನೇಕಾರರು, ಕುಶಲಕರ್ಮಿಗಳು ಉತ್ಪಾದಿಸಿದ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರುವಂತೆ ಅಥವಾ ಕಂಪನಿಯಲ್ಲಿ ತುಂಬಾ ಕಡಿಮೆ ಸಂಬಳಕ್ಕೆ ದುಡಿಯುವಂತೆ ಬಲಾತ್ಕರಿಸುವ ಕಾರ್ಯಕ್ಕೂ ಕೈ ಹಾಕಿತು.

ಹೀಗೆ ರಾಜಕೀಯ ನೆಲೆಯಲ್ಲಿ ವಿಭಜಿಸಿ ಆಳುವ ನೀತಿಯಿಂದ ಮೇಲುಗೈ ಸಾಧಿಸಿದಂತೆ ವಾಣಿಜ್ಯ ಮತ್ತು ಗೃಹ ಕೈಗಾರಿಕೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತ ಹತ್ತೊಂಬತ್ತನೇ ಶತಮಾನದ ವೇಳೆಗೆ ಭಾರತವನ್ನು ಒಂದು ಪಕ್ಕಾ ವಸಾಹತುವಾಗಿ ಪರಿವರ್ತಿಸಿತು. ಭಾರತ ಬ್ರಿಟಿಷ್ ವಸ್ತುಗಳಿಗೆ ಮಾರುಕಟ್ಟೆಯಾಗಿಯೂ, ಕಚ್ಚಾವಸ್ತುಗಳ ಮತ್ತು ಆಹಾರ ಪದಾರ್ಥಗಳ ಗಣಿಯಾಗಿಯೂ ಕಂಪನಿ ತನ್ನ ಬಂಡವಾಳವನ್ನು ಹೂಡಲು ಮುಖ್ಯಕ್ಷೇತ್ರವನ್ನಾಗಿ ನಿರ್ಮಿಸಿಕೊಂಡಿತು. ತಾನು ವಸಾಹತು ಭಾರತದಲ್ಲಿ ಸುಧಾರಣೆಯ ನೆಪದಲ್ಲಿ ಜಾರಿಗೊಳಿಸಿದ ಶಿಕ್ಷಣ, ಸಾರಿಗೆ, ಆಧುನಿಕ ಗಣಿ ಮತ್ತು ಕೈಗಾರಿಕೆಗಳು, ವಿದೇಶಿ ವ್ಯಾಪಾರ, ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳನ್ನು, ರೈಲ್ವೆ ಹಾದಿ, ಇಂಗ್ಲಿಶ್ ವೈದ್ಯಕೀಯ ಪದ್ಧತಿ ಇವುಗಳನ್ನು ನೆಲೆಗೊಳಿಸುವುದರ ಮೂಲಕ ಉದಾರ ಮತ್ತು ಸಹಾಯಾರ್ಥ ಯೋಜನೆಗಳೆಂದು ತೋರಿದರೂ ಅದರಲ್ಲಿನ ತನ್ನ ಸ್ವಲಾಭದ ತಂತ್ರ ಹೆಚ್ಚು ಕಾಲ ಗುಟ್ಟಾಗಿ ಉಳಿಯದೆ ಹೋಯಿತು. 'ಇದುವರೆಗೆ ಹಿಂದುಸ್ತಾನಕ್ಕೆ ಲಾಭಕರ ಎಂದು ನಾವು ತಿಳಿದಿದ್ದುದೆಲ್ಲವೂ ಈಗ ಹಾನಿಕರವೆಂದೇ ನನಗೆ ಕಾಣುತ್ತದೆ'.[೨] ಹೀಗೆ ತಮ್ಮೆಲ್ಲ ಆಳ್ವಿಕೆಯ ಮತ್ತು ಸುಧಾರಣೆಯ ತಂತ್ರಗಳು ಇಂಡಿಯಾ ದೇಶವನ್ನು ಭಾರತೀಯರ ಒಳಿತಿಗಾಗಿಯೇ ಆಳತೊಡಗುತ್ತೇವೆಂಬ ಮನೋಭಾವನೆಯನ್ನು ಭಾರತೀಯರಲ್ಲಿ ಉಂಟುಮಾಡಿತು. ಆದರೆ ಈ ನಂಬಿಕೆ ಹೆಚ್ಚು ಕಾಲ ಉಳಿಯಲಿಲ್ಲ.

ಬ್ರಿಟಿಷರ ಆಳ್ವಿಕೆಗೆ ಒಳಗಾದ ವಸಾಹತು ಭಾರತವು ರಾಜಕೀಯ, ವಾಣಿಜ್ಯ ಕ್ಷೇತ್ರಗಳಲ್ಲಿನ ದೌರ್ಬಲ್ಯಗಳಿಂದ ದೀನಾವಸ್ಥೆಗೆ ಒಳಗಾದರೂ, ಮತ್ತೊಂದು ದೃಷ್ಟಿಯಿಂದ ಬ್ರಿಟಿಷರ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ವಿಚಾರಧಾರೆಗಳು ನಮ್ಮ ಮೌಢ್ಯತೆಗೆ ಧರ್ಮ, ಜಾತಿ ಮೊದಲಾದ ಅನಿಷ್ಟ ಆಚಾರ, ನಂಬಿಕೆಗಳಿಗೆ ಅಗ್ನಿಸ್ಪರ್ಶವನ್ನು ಉಂಟುಮಾಡಿತು. ಇದರಿಂದ ಹೊಸದೊಂದು ಸಾಂಸ್ಕೃತಿಕ ಕ್ರಾಂತಿಯನ್ನೇ ಹುಟ್ಟಿ ಹಾಕಿದ ಕೀರ್ತಿ ಅದರದಾಗಿದೆ. ಅಂತಹ ಅಗ್ನಿಸ್ಪರ್ಶದ ಸಂಪರ್ಕದಿಂದ ಪಡೆದ ವಿವೇಕದ ಎಚ್ಚರದಿಂದಲೇ ಮುಂದೆ ಸ್ವಾತಂತ್ರ್ಯದ ಗಳಿಕೆಗೆ ಭಾರತದ ಸಂವೇದನೆ ತೊಡಗಿತೆನ್ನಬಹುದು. ನಮ್ಮ ಸಂಸ್ಕೃತಿಯ ಮೂಲಭೂತ ನೆಲೆಗಳನ್ನು ಪುನರ್‌ಮೌಲ್ಯಕ್ಕೆ ಗುರಿಪಡಿಸುವುದರ ಮೂಲಕ ಹೊಸ ವಿಚಾರಧಾರೆಯನ್ನು ಶೋಧಿಸಿಕೊಳ್ಳಲು ಪ್ರಯತ್ನಗಳು ನಡೆದವು. ಬ್ರಿಟಿಷರು ಭಾರತವನ್ನು ಪ್ರವೇಶಿಸಿದಾಗ ದೇಶದ ಸ್ಥಿತಿ ಶೋಚನೀಯ ನೆಲೆಯನ್ನು ಮುಟ್ಟಿತ್ತು. ಕುವೆಂಪು ಅವರು ಹೇಳುವಂತೆ -

> ಮೊಗಲರ ಚಕ್ರಾಧಿಪತ್ಯ ಒರಲೆ ಹಿಡಿದ ಮುದಿಮರದಂತೆ ತತ್ತರಿಸುತ್ತಿದ್ದಿತು.... ರಾಜಕೀಯ ಪ್ರಪಂಚದಲ್ಲಿದ್ದಂತೆಯೇ ಧರ್ಮಪ್ರಪಂಚದಲ್ಲಿಯೂ ಸಂಕುಚಿತ ಭಾವಗಳೂ, ಕುಂದು-ಕೊರತೆಗಳೂ ಒಡಕು-ಬಿರುಕುಗಳೂ ಯಥೇಚ್ಛವಾಗಿದ್ದವು. ಅರ್ಥಹೀನವಾದ ನೂರಾರು ದೇಶಾಚಾರ, ಲೋಕಾಚಾರ, ಮತಾಚಾರಗಳು, ಐಕ್ಯಭಂಗಕಾರಿಗಳಾದ ಸಾವಿರಾರು ಸಾಂಕ್ರಾಮಿಕ ಜಾತಿಪದ್ಧತಿಗಳೂ, ಕ್ಷುದ್ರವೂ, ಶುಷ್ಕವೂ ಈರ್ಷ್ಯಮೂಲವೂ ಆದ ಅನೇಕ ವಾದ-ವಿವಾದಗಳು ಭರತ ವರ್ಷವನ್ನು ಛಿದ್ರ ಛಿದ್ರವಾಗಿ ಮಾಡಿದ್ದವು..... ಜನರಲ್ಲಿ ರಾಜಕೀಯ ಬುದ್ಧಿಯಂತೆಯೆ ಆಧ್ಯಾತ್ಮಿಕ ಬುದ್ಧಿಯು ಲೋಪವಾಗಿತ್ತು. ಆರ್ಯ ಧರ್ಮದ ಉದಾರ ಚಿರಜ್ವಾಜಲ್ಯಮಾನವಾಗಿದ್ದ ಪ್ರದೀಪವು ಜನರ ಭಾಗಕ್ಕೆ ನಂದಿಹೋಗಿತ್ತು.[೩]

ಇಲ್ಲಿನ ಧಾರ್ಮಿಕ ಮಾನವೀಯ ನೆಲೆಗಳು ಪುರೋಹಿತಶಾಹಿಯ ಕಪಿಮುಷ್ಟಿಗೆ ಸಿಕ್ಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕು ದಿಕ್ಕು ತಪ್ಪಿ ಅನೇಕ ಶತಮಾನಗಳೇ ಸಂದಿದ್ದವು. ಬ್ರಿಟಿಷರ ಇಂಗ್ಲಿಶ್ ಶಿಕ್ಷಣದ ಪ್ರಭಾವ ಹೊಸ ಚೈತನ್ಯವನ್ನು, ವೈಜ್ಞಾನಿಕ ಮತಿಯನ್ನು, ಹೊಸ ಎಚ್ಚರವನ್ನು ಉಂಟುಮಾಡಿತು. ಆರಂಭದಲ್ಲಿ ಪಾಶ್ಚತ್ಯ ಸಂಸ್ಕೃತಿಯ ಅಂಧಾನುಕರಣೆಗೆ ಒಳಗಾದರೂ ಹೊಸ ಎಚ್ಚರದ ಆನಂತರ ವೈಜ್ಞಾನಿಕ ಮತಿಯ ಮಥನಕ್ಕೆ ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳು ಗುರಿಯಾಗುವುದರ ಮೂಲಕ ಹೊಸ ಪರಿಸರವೊಂದನ್ನು ಭಾರತೀಯ ಸಂವೇದನೆ ನಿರ್ಮಿಸಿಕೊಂಡಿದ್ದು ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಮಹತ್ತರವಾದ ಮುಖ್ಯ ನೆಲೆಯೆನ್ನಬಹುದು.

ಅಸಂಖ್ಯ ಸಂಸ್ಥಾನ ಹಾಗೂ ಅಸಂಖ್ಯ ಭಾಷೆಗಳ ತವರಾಗಿದ್ದ ಭಾರತ ಬ್ರಿಟೀಷರ ಏಕಚಕ್ರಾಧಿಪತ್ಯ, ಇಂಗ್ಲಿಶ್ ಭಾಷೆಯ ಬಳಕೆ ಭಾರತೀಯರಲ್ಲಿ ಮೊದಲಿಗೆ ರಾಷ್ಟ್ರದ ಕಲ್ಪನೆಯೊಂದು ಮೂಡಲು ಕಾರಣವಾಯಿತು. ಈ ಮುಖೇನ ವಿಭಿನ್ನ ಭಾಷೆಯ, ಸಂಸ್ಕೃತಿಗಳ ಅದರಲ್ಲಿಯೂ ಇಂಗ್ಲಿಶ್ ಶಿಕ್ಷಣದ ಸಂಪರ್ಕಕ್ಕೆ ಒಳಗಾದ ನಮ್ಮಲ್ಲಿ ಭಾರತವು ಏಕರಾಷ್ಟ್ರವೆಂಬ ಕಲ್ಪನೆ ಉಂಟಾದದ್ದು ಅಥವಾ ಬ್ರಿಟಿಷರ ಶಿಕ್ಷಣ ವ್ಯವಸ್ಥೆಯು ಅಂತಹ ಕಲ್ಪನೆಯೊಂದನ್ನು ಉಂಟುಮಾಡಿದ್ದು ಸ್ವಾತಂತ್ರ್ಯದ ಹಾದಿಗೆ ಅವರು ಕೊಟ್ಟ ಕೊಡುಗೆ ಎನ್ನಬಹುದು. ನಾವು ಒಂದು ರಾಷ್ಟ್ರವಾಗಿದ್ದುದರಿಂದಲೇ ಇಂಗ್ಲಿಶರಿಗೆ ಇಲ್ಲಿ ಒಂದೇ ರಾಜ್ಯ ಕಟ್ಟಲು ಅವಕಾಶವಾದುದು.[೪] ಅಂತೆಯೇ ಇಂಗ್ಲಿಶ್ ಶಿಕ್ಷಣ ಕೂಡ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ಈ ಮೂಲಕ ಆರಂಭಿಸಿತು.

ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳ ಸಂಘರ್ಷ ಮೊತ್ತಮೊದಲು ಎದುರಾದದ್ದು ಬಂಗಾಳದಲ್ಲಿ. ಆನಂತರ ಮಹಾರಾಷ್ಟ್ರ ಕರ್ನಾಟಕಗಳಲ್ಲೂ ಪ್ರಬಲವಾದ ಹೋರಾಟಕ್ಕೆ ಎಡೆಮಾಡಿಕೊಟ್ಟಿತು. ಈ ಎರಡೂ ಸಂಸ್ಕೃತಿಗಳ ಸಂಘರ್ಷವು ಹಿಂದೂ ಸಮಾಜದ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಯನ್ನೇ ಉಂಟುಮಾಡಿದವು. ಹತ್ತೊಂಬತ್ತನೆಯ ಶತಮಾನದ ಆರಂಭದಿಂದಲೇ ಸ್ಥಾಪನೆಗೊಂಡ ಕಾಲೇಜುಗಳು, ಶೈಕ್ಷಣಿಕ ಸಂಸ್ಥೆಗಳು ಪ್ರಾರಂಭವಾದವು. ಮುಂಬಯಿ, ಕಲ್ಕತ್ತ, ಮದರಾಸುಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ರಾಜಕೀಯ ಶೈಲಿಯಾಗಿ ತಳವೂರುತ್ತಿದ್ದಾಗಲೇ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಕ್ರೈಸ್ತ ಪಾದ್ರಿಗಳು ಗುಂಪು ಗುಂಪಾಗಿ ಭಾರತಕ್ಕೆ ಬಂದರು. ಹೀಗೆ ಧರ್ಮ ಪ್ರಚಾರಕ್ಕೆ ಬಂದ ಪಾದ್ರಿಗಳು ಶಿಕ್ಷಣ ಪ್ರಚಾರಕ್ಕೂ ಕೈ ಹಾಕಿದ್ದು ಅತ್ಯಂತ ಮಹತ್ವದ ವಿಚಾರ. ಶಿಕ್ಷಣ ಪ್ರಚಾರದ ಜೊತೆ ಜೊತೆಯಲ್ಲಿಯೇ ತನ್ನ ಆಕ್ರಮಣಶೀಲ ಧೋರಣೆಯಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಕ್ರೈಸ್ತ ಮತದ ವಿಚಾರಗಳನ್ನು ಬಿತ್ತಿದರು. ಅಂತೆಯೇ ಹಿಂದೂ ಧರ್ಮದಲ್ಲಿನ ಅವೈಜ್ಞಾನಿಕ (ಮೂಢ) ಹಾಗೂ ಮಾನವೀಯ ಮೂಲ ನೆಲೆಗಳನ್ನು ಮೊದಲು ಮಾಡಿಕೊಂಡು ಒಟ್ಟು ಹಿಂದೂ ಧರ್ಮದ ಆಶಯಗಳ ನಿಂದೆಗೆ ಗುರಿಯಾದವು. ಆ ಮೂಲಕ ಕ್ರೈಸ್ತ ಧರ್ಮದ ಶ್ರೇಷ್ಠತೆ, ಮಹತ್ವಗಳನ್ನು ಅಥವಾ ಹಿಂದೂಧರ್ಮದಲ್ಲಿ ಯಾವ ವಿಚಾರಗಳನ್ನು ದೂರಿದರೊ ಅಂತಹ ವಿಚಾರಗಳನ್ನೇ ಶ್ರೇಷ್ಠವೆಂದು ಬೋಧಿಸಲು ತೊಡಗಿದರು. ಇಂತಹ ಪ್ರಭಾವಕ್ಕೆ ಒಳಗಾದ ಅನೇಕ ಭಾರತೀಯ ಸ್ವಧರ್ಮ ಖಂಡನೆಗೆ ತೊಡಗುವುದು ಬಹುಮುಖ್ಯ ಮೌಲ್ಯವೆಂದೇ ಭಾವಿಸಿದರು. ವೈಜ್ಞಾನಿಕ ಮತಿಯಿಂದ ಎಲ್ಲವನ್ನೂ ವಿಮರ್ಶಿಸಿ, ಪರೀಕ್ಷಿಸಿ ಸ್ವೀಕರಿಸಬೇಕಂಬ ವಿಚಾರವನ್ನು ಬ್ರಿಟೀಷರಿಂದ ಕಲಿತರೂ ಪಾಶ್ಚಾತ್ಯರ ಸಂಸ್ಕೃತಿಯ ಅನುಕರಣೆಯ ವಿಚಾರದಲ್ಲಿ ಅದನ್ನು ಮರೆತರು. ಪಾಶ್ಚಾತ್ಯರ ಸಂಪ್ರದಾಯಗಳನ್ನು ಅನುಕರಿಸುವುದು ನವೀನತೆಯ ಲಕ್ಷಣವೆಂಬ ದೋರಣೆ ಗಾಢವಾಯಿತು.

ಆದರೆ ಎಲ್ಲ ಕಾಲಗಳಲ್ಲಿಯೂ ವಿಭಿನ್ನ ಪರಕೀಯ ಸಂಸ್ಕೃತಿಗಳ ಸಂಘರ್ಷಕ್ಕೆ ಒಳಗಾಗುತ್ತಲೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದ ಭಾರತೀಯ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಗೆ ಎದುರಾಗುತ್ತಲೇ ಹೊಸ ಸಂಸ್ಕೃತಿಯ ಉತ್ತಮಾಂಶಗಳನ್ನು ಮೈಗೂಡಿಸಿಕೊಳ್ಳುವ ಕ್ರಿಯೆಗೆ ತೊಡಗಿತು. ಅಂತಹ ಕ್ರಿಯೆಗೆ ಕಾರಣಪುರುಷರಾದ ಮೊದಲ ವ್ಯಕ್ತಿಯೆಂದರೆ ರಾಜಾರಾಮಮೋಹನರಾಯ. ಹಲವಾರು ಭಾಷೆಗಳನ್ನು ಬಲ್ಲ ಇವರು ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ಪರಿಸರದಲ್ಲಿ ಹೊಸ ಕ್ರಾಂತಿಗೆ ಕಾರಣರಾದರು. ಪಾಶ್ಚಾತ್ಯ ಸಂಸ್ಕೃತಿಯ ಮೌಲ್ಯಗಳೇ ಶ್ರೇಷ್ಠವೆಂಬ ನಂಬಿಕೆ ಆರಂಭ ಹಂತದಲ್ಲಿ ಮೋಹನರಾಯರಲ್ಲಿದ್ದರೂ, ಭಾರತೀಯ ಸಂಸ್ಕೃತಿಯ ಸುಧಾರಣೆಗೆ ತೊಡಗಿದ್ದು ಹಾಗೂ ಇಂಗ್ಲಿಶ್‌ರ ಸಹಾಯದಿಂದ 'ಸಹಗಮನ'ದಂತಹ ಅನಾಗರಿಕ ಕ್ರೂರ ಪದ್ಧತಿಯ ನಿರ್ನಾಮಕ್ಕೆ ಮೂರ್ತಿಪೂಜೆಯ ಖಂಡನೆಗೆ ಕಾರಣರಾಗಿ ಬ್ರಿಟೀಷ್ ವಿರೋಧಿ ನೆಲೆಯನ್ನು ಸಮರ್ಥವಾಗಿ ರೂಪಿಸಿದರು. ಆರಂಭದಲ್ಲಿ ಹಿಂದೂಪುರಾಣಗಳ ಅಪ್ರಸ್ತುತೆಯನ್ನು ಅವತಾರಗಳನ್ನು ಟೀಕೆಗೆ ಗುರಿಪಡಿಸಿದಂತೆ, ಆನಂತರ ಕ್ರಿಸ್ತನ ಅವತಾರಗಳನ್ನು ಪ್ರಶ್ನಿಸಿದ್ದು ರಾಜಾರಾಮ ಮೋಹರಾಯರ ಬಹು ದೊಡ್ಡ ಸಾಧನೆಯಾಗಿದೆ. ಆ ಕಾಲದ ಪಾಶ್ಚಾತ್ಯ ಸಂಸ್ಕೃತಿಯ ಆಕರ್ಷಣೆ-ವಿಕರ್ಷಣೆಗಳು ಹಾಗೂ ಹೊಸತು-ಹಳತರ ಸಮನ್ವಯವನ್ನು ರಾಜರಾಮ ಮೋಹನರಾಯ ಮತ್ತು ಬಂಕಿಮಚಂದ್ರ ಚಟರ್ಜಿಯವರ ಕ್ರಿಯಾಶೀಲತೆಯ ಹಂತಗಳನ್ನು ಸುಬೋಧಚಂದ್ರ ಸೇನ್ ಗುಪ್ತ ಅವರು ಹೀಗೆ ಗುರುತಿಸುತ್ತಾರೆ:

> ಬಂಗಾಲಿ ನಾಯಕರಿಗೆ ಮಾತ್ರವೇ ಸೀಮಿತಗೊಳಿಸಿಕೊಂಡಲ್ಲಿ ಭಾರತೀಯ ಪುನರುಜ್ಜೀವನಕ್ಕೆ ಎರಡು ಹಂತಗಳಿದ್ದುವೆಂದು ಹೇಳಬಹುದು. ಮೊದಲನೆಯ ಹಂತದಲ್ಲಿ ರಾಮಮೋಹನರಾಯ್ ಅವರು ಮೊದಲಿಗರಾಗಿ ನಿಂತು ಪ್ರಾಚೀನ ವ್ಯಾಕರಣ,ನಿರುಪಯುಕ್ತವಾದ ತಾತ್ವಿಕ ತರ್ಕಮೀಮಾಂಸೆ ಹಾಗೂ ಅಂಧಶ್ರದ್ಧೆ ಇವೆಲ್ಲವಕ್ಕೂ ದಾಸರಾಗಿದ್ದ ನಮ್ಮನ್ನು ಮುಕ್ತಗೊಳಿಸಲು ಹೋರಾಡಿದರು; ಮುಂದೆ ಈ ಚಳವಳಿಯು ಪಾಶ್ಚಿಮಾತ್ಯ ವೈಚಾರಿಕತೆ ಹಾಗೂ ವಿಜ್ಞಾನದೊಡನೆ ನಮ್ಮ ಮನಸ್ಸನ್ನು ಅನುಗೊಳಿಸಿತು. ಅನಂತರ, ಎರಡನೆಯ ಹಂತದಲ್ಲಿ ಹಿಂದು-ಮುಂದುಗಳೆರಡರ ಬಗೆಗೂ ಆಸಕ್ತಿ ಹೊಂದಿ, ಮಿತಿ ಮೀರಿದ ಪಾಶ್ಚಾತ್ಯೀಕರಣದ ವಿರುದ್ಧವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ಪ್ರಾಚೀನ ಜ್ಞಾನಸಂಪತ್ತು ಹಾಗೂ ಆಧುನಿಕ ಕಾಲದ ವೈಜ್ಞಾನಿಕ, ವೈಚಾರಿಕ ಆಲೋಚನೆ ಹೀಗೆ ಹಳತು-ಹೊಸತು ಇವೆರಡರ ಸಮನ್ವಯದ ಆಧಾರದ ಮೇಲೆ ರೂಪಿಸಲಾದ ಜೀವನ ತತ್ತ್ವದ ಅರಿವನ್ನು ಪಡೆಯಲು ಪ್ರಯತ್ನ ಪಡಲಾಯಿತು. ಆಗಸ್ಟ್ ಕಾಮ್ಟೆಯ ಲೋಕಸಿದ್ಧವಾದದೊಡನೆ ಭಗವದ್ಗೀತೆಯ ಈಶ್ವರವಾದವನ್ನು ಸಮನ್ವಯಗೊಳಿಸಿ ತಮ್ಮದೇ ಆದ 'ಸಂಸ್ಕೃತಿಯ ಧರ್ಮ'ವನ್ನು ಬೋಧಿಸಿದ ಬಂಕಿಮಚಂದ್ರರು ಎರಡನೆಯ ಹಂತದ ಪ್ರಮುಖ ಪ್ರತಿಪಾದಕರಾಗಿದ್ದರು"

ಮೇಲಿನ ಉದ್ಧರಣದ ಮೊದಲನೆಯ ಹಂತಕ್ಕೆ ರಾಮಮೋಹನರಾಯರ ಸಾಲಿಗೆ ಸಾಮಾಜಿಕ ಹಾಗೂ ಧಾರ್ಮಿಕ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗುತ್ತ, ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿದ್ದ ಅನಿಷ್ಟಗಳನ್ನು ನಿರ್ಮೂಲನ ಮಾಡಲು ಕ್ರಿಯಾಶೀಲರಾದವರಲ್ಲಿ ಬಹುಮುಖ್ಯರೆಂದರೆ ದೇವೇಂದ್ರನಾಥ ಠಾಕೂರ್, ಈಶ್ವರ ಚಂದ್ರ ವಿದ್ಯಾಸಾಗರ, ಕೇಶವ ಚಂದ್ರ ಮೊದಲಾದವರು. ಸ್ತ್ರೀ ಸ್ವಾತಂತ್ರ್ಯ, ಯಜ್ಞೋಪವೀತ ಪರಿತ್ಯಾಗ, ಅಸವರ್ಣ ವಿವಾಹ ಮೊದಲಾದ ಸುಧಾರಣೆಗಳಿಗಾಗಿ ಇಂತಹ ಸುಧಾರಕರು ಆ ಕಾಲದಲ್ಲಿ ತೊಡಗಿದರು. ಕೇಶವ ಚಂದ್ರಸೇನ ನಂತಹ ಸುಧಾರಕನ ಚಂಚಲ ಪ್ರವೃತ್ತಿಯು ಪ್ರಾಚ್ಯ ಮತ್ತು ಪಾಶ್ಚಾತ್ಯಗಳ ಆದರ್ಶಗಳ, ಸಂಸ್ಕೃತಿಗಳ ಸಂಘರ್ಷ ಕೊನೆಯವರೆಗೂ ಬಿಡದ ಕಾರಣ ಒಂದು ರೀತಿಯ ದ್ವಂದ್ವ ಪರಿಸ್ಥಿತಿ ಆ ಕಾಲಮಾನದಲ್ಲಿ ಏರ್ಪಟ್ಟಿತ್ತೆಂದರೆ ಸುಳ್ಳಲ್ಲ. ಭಾರತೀಯ ಸಾಮಾಜಿಕ ಸುಧಾರಕ ಹಾಗೂ ಕ್ರೈಸ್ತ ಪಾದ್ರಿಗಳ ಸಭೆಗಳು,ಉಪನ್ಯಾಸಗಳು,ಚರ್ಚೆಗಳು, ವಾಗ್ವಾದಗಳು ಅಂದಿನ ಸಮಾಜವನ್ನು, ಶ್ರೀ ಸಾಮಾನ್ಯನನ್ನು ಒಂದು ರೀತಿಯ ಗೊಂದಲದಲ್ಲಿ ಸಿಲುಕಿಸಿದ್ದವೆನ್ನಬಹುದು. ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳು ಒಂದನ್ನೊಂದು ಕಬಳಿಸುತ್ತಿದ್ದ ಸಂದರ್ಭ ಅದಾಗಿತ್ತು. ಈ ಕಾಲಮಾನವನ್ನು ಕುವೆಂಪು 'ಭರತ ಖಂಡವು ಕುಲುಮೆಯ ಮೇಲಿನ ಮೂಷೆಯಂತಿತ್ತು' ಎನ್ನುತ್ತಾರೆ.

> ಬ್ರಹ್ಮ ಸಮಾಜವು ಮೂರ್ತಿಪೂಜೆ, ದೇವ ದೇವತೆಯರ ಆರಾಧನೆ, ಅವತಾರವಾದ ಜನ್ಮಾಂತರ ಮೊದಲಾದವುಗಳನ್ನು ಖಂಡಿಸಿ ಜನರನ್ನು ದಂಡಿಸಿದ್ದರು. ಆರ್ಯ ಸಮಾಜವು ವೇದವನ್ನು ಮೇಲೆತ್ತಿ, ವೇದಾಂತವನ್ನು ಹಳಿದು, ಕ್ರೈಸ್ತಾದಿ ಮತಗಳನ್ನು ದೂಷಿಸಿ, ಮೂರ್ತಿಪೂಜೆಯನ್ನು ಧಿಕ್ಕರಿಸಿ, ವರ್ಣಭೇದವನ್ನು ಮೇಲ್ವಾಯ್ದು ವಿರೋಧಿಸಿ ಸಂಪ್ರದಾಯವನ್ನು ನೋಯಿಸಿತ್ತು. ಕ್ರೈಸ್ತ ಪಾದ್ರಿಗಳು ಹಿಂದೂ ಮತ ಖಂಡನೆಯಿಂದ ಜನರ ಜಿಗುಪ್ಸೆಗೆ ಪಕ್ಕಾಗುತ್ತಿದ್ದರು. ಥಿಯೊಸೊಫಿ ವರ್ಣಮಿಶ್ರಣ ಮಾಡುತ್ತಿದೆ ಎಂಬ ನಿಂದೆಗೆ ಗುರಿಯಾಗುತ್ತಿತ್ತು. ಈ ಸಂಸ್ಥೆಗಳಲ್ಲದೆ ನೂರಾರು ದೊಡ್ಡ ಸಣ್ಣ ಸುಧಾರಕರು ಸ್ವಯಂ ಆಚಾರ್ಯರಾಗಿ ತಮಗೆ ಸೂಕ್ತ ತೋರಿದಂತೆ ಸಮಾಜದ ರೀತಿ ನೀತಿ ಧರ್ಮಗಳನ್ನು

ವಿರೋಧಿಸಿ ಆರ್ಯಧರ್ಮವೆಂಬ ಅತಿ ಪುರಾತನ ಮಹಾವಟ ವೃಕ್ಷವನ್ನು ಬೇರು ಸಹಿತ ಕಿತ್ತು ಹಿಂದು ಮುಂದಾಗಿ ನೆಡಲು ಹವಣಿಸುತ್ತಿದ್ದರು. ಎಲ್ಲರೂ ಖಂಡನೆಯ ಖಡ್ಗವನ್ನು ಬೀಸಿ ರೋಗಕ್ಕೆ ಶಸ್ತ್ರಚಿಕಿತ್ಸೆ ಮಾಡುವ ಸಾಹಸದಲ್ಲಿದ್ದರೆ ಹೊರತು, ರೋಗವನ್ನು ಪರೀಕ್ಷಿಸಿ ರೋಗಿ ಕಠಿಣಶಸ್ತ್ರ ಚಿಕಿತ್ಸೆಯನ್ನು ಹೊಂದಿ ಪಾರಾಗಲು ಶಕ್ತನಾಗಿದ್ದಾನೆಯೇ ಎಂಬುದನ್ನು ಒಬ್ಬರಾದರೂ ಯೋಚಿಸಲಿಲ್ಲ; ವಿಚಾರಿಸಲೂ ಇಲ್ಲ[೬].

ಹತ್ತೊಂಭತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಪಾಶ್ಚಾತ್ಯ ಶಿಕ್ಷಣ ಪದ್ಧತಿ ಭಾರತಕ್ಕೆ ಒದಗಿಸಿಕೊಟ್ಟ ಕಾರ್ಯೋತ್ಸಾಹ ಚೈತನ್ಯಗಳು ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ಬದಲಾವಣೆಯನ್ನು ಉಂಟು ಮಾಡುವುದರ ಜೊತೆಗೆ ಭರತ ಖಂಡವೆಲ್ಲ ಏಕ ರಾಷ್ಟ್ರವೆಂಬ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿತು. ಈ ಹಿನ್ನೆಲೆಯಲ್ಲಿ ಆ ಕಾಲಮಾನದಲ್ಲಿ ನಡೆದ ರಾಷ್ಟ್ರೀಯ ಮಹಾಸಭೆಗಳು, ರಾಜಕೀಯ ಆಂದೋಳನಗಳು ಧರ್ಮಕೇಂದ್ರಿತ ಜನರ ಮನಸ್ಸನ್ನು ರಾಜಕೀಯದ ಕಡೆಗೆ ಅವಸ್ಥಾಂತರಗೊಳಿಸಿತು.

ಇದೇ ಕಾಲಮಾನದಲ್ಲಿ ಜೀವಿಸಿದ್ದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯಕ್ತಿಗಳಾದ ಬಂಕಿಮಚಂದ್ರ, ರವೀಂದ್ರನಾಥ ಠಾಗೂರ್ ಅವರಂಥ ಸೃಷ್ಟಿಶೀಲ ಲೇಖಕರು ಪರಕೀಯ ಆಕರ್ಷಣೆ-ವಿಕರ್ಷಣೆಗಳಿಗೆ ಒಳಗಾಗುತ್ತಲೇ ಆಕ್ರಮಣಶೀಲ ಸಂಸ್ಕೃತಿಗೆ ಪ್ರತಿರೋಧ ಒಡ್ಡಿರುವುದನ್ನು ಅವರ ಕೃತಿಗಳು ವಿಶದಪಡಿಸುತ್ತವೆ.

**೨ ವಂಗ : ನವ ಉದಯ - ಬಂಕಿಮಚಂದ್ರ - ವಂದೇಮಾತರಂ**

ಆಧುನಿಕ ಭಾರತೀಯ ಸಮಾಜ ಹಾಗೂ ಸಾಹಿತ್ಯ ನಿರ್ಮಾಪಕರಲ್ಲಿ ಬಂಕಿಮಚಂದ್ರರು ಮಹತ್ವದ ಲೇಖಕರು. ಅವರ ಕೃತಿಗಳಿಂದ ಉತ್ಪನ್ನವಾಗುವ ಚಿಂತನೆಗಳು ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಮಹತ್ವದ ಪಾತ್ರವಹಿಸಿವೆ ಎಂಬುದನ್ನು ತಿಳಿಯಬಹುದಾಗಿದೆ. ಅವರ ಪ್ರಸಿದ್ಧ ಕವಿತೆ "ವಂದೇಮಾತರಂ" ಅಂದಿನ ಸ್ವಾತಂತ್ರ್ಯ ಹೋರಾಟದ ರಾಷ್ಟ್ರಗೀತೆಯಾಗಿ ಪ್ರಸಿದ್ಧಿ ಪಡೆದದ್ದನ್ನು ಪರಿಶೀಲಿಸಿದರೂ ಸಾಕು, ಅವರ ಕೃತಿಗಳು ಹೇಗೆ ಸ್ವಾತಂತ್ರ್ಯ ಹೋರಾಟದ ಪ್ರೇರಕ ಶಕ್ತಿಗಳಾದವು ಎಂಬ ವಿಷಯ ಸ್ಪಷ್ಟವಾಗುತ್ತದೆ. ಹಲವಾರು ಭಾಷೆ, ಧರ್ಮ, ಪ್ರದೇಶಗಳ ಭಿನ್ನತೆಯನ್ನು ಹೊಂದಿರುವ ಭಾರತೀಯರಲ್ಲಿ ಏಕರಾಷ್ಟ್ರವೆಂಬ ಸ್ಫೂರ್ತಿಯನ್ನು, ಧ್ಯೇಯವನ್ನು ಪರಕೀಯರಿಂದ ಸ್ವಾತಂತ್ರ್ಯ ಪಡೆಯಬೇಕೆಂಬ ಸುಸಂಘಟಿತವಾದ ಹೋರಾಟವನ್ನು ಉಂಟು ಮಾಡಿತೆಂಬುದು ಈಗ ಚರಿತ್ರೆಯ ವಿಷಯ. ತಕ್ಕಡಿಯನ್ನು ಹಿಡಿದುಕೊಂಡು ಭರತಖಂಡದಲ್ಲಿ ತಳವೂರಿದ ಇಂಗ್ಲಿಶರಿಗೆ 'ವಂದೇಮಾತರಂ' ಮಂತ್ರವು ಇಡೀ ಭಾರತದಾದ್ಯಂತ ಸಾಮಾನ್ಯ-ಅಸಾಮಾನ್ಯರ ಬಾಯಲ್ಲೂ ಪ್ರತಿಧ್ವನಿಸಿದ್ದು ಆ ಕಾಲಕ್ಕೆ ಅಪಾಯದ ಸಂಕೇತವೆಂದು ಬ್ರಿಟಿಷರು ತಿಳಿದರು. ಬಂಕಿಮರ ಕೃತಿಗಳು ಪ್ರತಿಮಾತ್ಮಕ ಹಾಗೂ ವಾಸ್ತವಿಕ ನೆಲೆಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ವಸಾಹತು ಸಂಸ್ಕೃತಿಗೆ ಪ್ರತಿರೋಧ ಒಡ್ಡಿರುವುದನ್ನು ಅಲ್ಲಿ ಕಾಣಬಹುದಾಗಿದೆ. ಬಂಕಿಮರ ಕೃತಿ ರಚನೆಯ ಕಾಲಕ್ಕಾಗಲೇ ಬ್ರಿಟಿಷ್ ಆಡಳಿತದ ವಿರುದ್ಧ ಮಾತ್ರವಲ್ಲ ಪಾಶ್ಚಾತ್ಯ ಜೀವನಕ್ರಮ ಮತ್ತು ಪಾಶ್ಚಾತ್ಯ ಆಲೋಚನೆಗಳಿಂದ ಆಕರ್ಷಿತರಾದ ಜನರು ಅದಕ್ಕೆ ದಾಸರಾಗುವುದನ್ನು ಪ್ರತಿಭಟಿಸುವ ಚಳವಳಿಗಳು ಆರಂಭಗೊಂಡಿದ್ದವು. ೧೮೫೭ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ

ತಾರತಮ್ಯ ಧೋರಣೆಗೆ, ಆಕ್ರಮಣಶೀಲ ಕ್ರೌರ್ಯಕ್ಕೆ ಪ್ರತಿರೋಧ ಎದುರಾಗಿತ್ತು. ಇಂತಹ ಕಾಲ ಬಂಕಿಮರ ಕೃತಿ ರಚನೆಗೆ ಸೂಕ್ತ ಮಾರ್ಗದರ್ಶನ ಹಾಗೂ ಅಭಿವ್ಯಕ್ತಿಗೆ ಸಹಾಯಕವಾಗಿರಲೇಬೇಕು. ಇಂತಹ ವಿಚಾರಗಳು ಅವರ 'ಆನಂದಮಠ', 'ದುರ್ಗೇಶನಂದಿನಿ', 'ಮನೋರಮೆಯ ಕಥೆ', 'ವಿಷವೃಕ್ಷ', 'ಲೋಕರಹಸ್ಯ' ಮೊದಲಾದ ಕೃತಿಗಳಲ್ಲಿ ಕಾಣಿಸಿಕೊಂಡಿವೆ.

ಬಂಕಿಮಚಂದ್ರರ ಕೃತಿಗಳಿಂದ ಉತ್ಪನ್ನವಾಗುವ ವಿಚಾರಧಾರೆಯು ಪರಮಹಂಸರ ಸರ್ವಧರ್ಮ ಸಮನ್ವಯದಂತೆಯೇ ಹಲವು ಸಂಸ್ಕೃತಿಗಳ ಸಮನ್ವಯ ಏಕೀಕೃತಗೊಂಡಿರುವುದನ್ನು ಅಧ್ಯಯನದಿಂದ ತಿಳಿಯಬಬಹುದು. ಪೌರಾತ್ಯ ಹಾಗೂ ಪಾಶ್ಚಾತ್ಯ ಚಿಂತನೆಗಳ ಸಂಘರ್ಷ ಅವರ ಬರಹಗಳ ಕೇಂದ್ರವೂ ಆಗಿದೆ. ಶ್ರೀ ಕೃಷ್ಣನ ಕಥೆಯ ಬಗ್ಗೆ ಅವರು ಬರೆದಿರುವ ಪ್ರಸ್ತಾವನೆಯಲ್ಲಿ 'ಕೃಷ್ಣನನ್ನು ಕೇವಲ ಸಾಮಾನ್ಯ ಮನುಷ್ಯನಂತೆ' ಕಾಣುವ ಚಿಂತನೆಗಳಲ್ಲೂ ಈ ವಿಚಾರ ಸ್ಪಷ್ಟವಾಗುತ್ತದೆ. ಬಂಕಿಮಚಂದ್ರರ ಇಂತಹ ಕೃತಿಗಳು ಪೌರಾತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಸಮನ್ವಯವನ್ನು ಸಾಧಿಸುವಂತೆಯೇ ಬ್ರಿಟಿಷರ ಅಂಧಾನುಕರಣೆಯನ್ನೂ ಅಲ್ಪಜ್ಞಾನಿಗಳನ್ನೂ ಕಟು ವ್ಯಂಗ್ಯಕ್ಕೆ ಗುರಿಪಡಿಸುವುದನ್ನು ಕಾಣುತ್ತೇವೆ. 'ಇಂಗ್ಲಿಷ್‌ನ ಸ್ತೋತ್ರ', 'ಬಾಬು', 'ಗರ್ದಭ','ರಾಮಾಯಣದ ಸಮಾಲೋಚನೆ', 'ಒಬ್ಬ ಸ್ಪೆಷಲ್‌ನ ಪತ್ರ' ಮೊದಲಾದ 'ಲೋಕ ರಹಸ್ಯ' ಎಂಬ ಬರಹದ ಅಡಿಯಲ್ಲಿ ಬರುವ ಈ ಮೇಲಿನ ಲಘುಬರಹಗಳಲ್ಲಿ ಪಾಶ್ಚಾತ್ಯರು ಭಾರತೀಯ ಸಂಸ್ಕೃತಿಯನ್ನು ಗ್ರಹಿಸಿದ ಅವಿವೇಕಿತನವನ್ನು ವಿಡಂಬಿಸಿದ್ದಾರೆ. ಆರ್ಯ ಸಂಸ್ಕೃತಿಯ ನೈಜ ತತ್ವಗಳ ಪರಿಚಯವಿಲ್ಲದ ಪರಕೀಯರ ಭಾರತೀಯ ಸಂಸ್ಕೃತಿಯನ್ನು ಗ್ರಹಿಸಿದ ಅವಿವೇಕಿತನಕ್ಕೆ ಈ ಮುಂದಿನ ವಿಡಂಬನೆಗಳು ಉತ್ತಮ ಉದಾಹರಣೆಗಳಾಗಿವೆ. ಒಬ್ಬ ವಿಲಾಯಿತಿಯ ಸಮಾಲೋಚಕನು ಈ ದೇಶದ ಸಾಹಿತ್ಯ ಸಂಸ್ಕೃತಿಗಳನ್ನು ಸರಿಯಾಗಿ ತಿಳಿಯದೆ ಮಾಡುತ್ತಿದ್ದ ವಿಮರ್ಶೆಗಳ ವಿಡಂಬನೆಯನ್ನು ಇಲ್ಲಿ ಉದಾಹರಿಸಬಹುದು.

> ರಾಮಾಯಣವು ಕೀಳುದರ್ಜೆಯ ಯುರೋಪಿಯನ್ ಸಾಹಿತ್ಯದಂತಿದೆ. ಹೀಗೆಂದರೆ ಇದು ಸಾಮಾನ್ಯ ಗೌರವವೇನಲ್ಲ. ರಾಮಾಯಣದಲ್ಲಿ ಸ್ವಲ್ಪ ನೀತಿಯೂ ಇದೆ; ಕವಿಯು ಅದರಲ್ಲಿ ಬುದ್ಧಿಹೀನತೆಯ ದೋಷವನ್ನು ದುಷ್ಟಾಂತಪಡಿಸಿದ್ದಾನೆ. ದಶರಥನು ಬಹುಪತ್ನಿಯರನ್ನು ಕಟ್ಟಿಕೊಂಡದ್ದರ ದುಷ್ಫಲವನ್ನು ಅನುಭವಿಸಿದನು; ರಾಮನು ಸ್ವಭಾವಸಿದ್ಧವಾದ ಆಲಸ್ಯದಿಂದ, ತನಗೆ ನ್ಯಾಯವಾಗಿ ಬರಬೇಕಾಗಿದ್ದ ರಾಜ್ಯವನ್ನು ಪಡೆಯಲು ಪ್ರಯತ್ನಪಡಲಿಲ್ಲ; ಅರಳು-ಮರಳಿನ ತಂದೆಯ ಮಾತಿನಂತೆ ಕಾಡಿಗೆ ಹೋದನು. ಲಕ್ಷ್ಮಣನು ಕಾರ್ಯಕ್ಷಮನಾದರೂ, ಅವನ ಹಿಂದೆ ಅಲೆದನು. ಭರತನೊಬ್ಬ ದಡ್ಡ; ಕೈಗೆ ಬಂದ ರಾಜ್ಯವನ್ನು ಹಿಂದಕ್ಕೆ ಕೊಟ್ಟುಬಿಟ್ಟನು! ರಾವಣನು ಸೀತೆಯನ್ನು ಹೊತ್ತುಕೊಂಡು ಹೋಗಲು, ಅನಾರ್ಯ ಜಾತಿಯ ವಾನರರು ಅವಳನ್ನು ತಂದುಕೊಟ್ಟರು. ರಾಮನು ಅವಳನ್ನು ಸುಡುವುದಕ್ಕೆ ಯತ್ನಿಸುತ್ತಾನೆ. ಆಮೇಲೆ ಯಾರ ಮಾತೋ ಕೇಳಿಕೊಂಡು ಅವಳನ್ನು ಕಾಡಿಗೆ ಅಟ್ಟಿ, ಅವಳು ಮನೆಯ ಬಾಗಿಲಿಗೆ ಹೊಟ್ಟೆಗಿಲ್ಲದೆ ಬಂದಾಗ ಅವಳನ್ನು ಭೂಮಿಯಲ್ಲಿ ಹೂತು ಬಿಡುತ್ತಾನೆ. ಇದರ ಕರ್ತೃ ಯಾರೋ ಗೊತ್ತಿಲ್ಲ; ವಾಲ್ಮೀಕಿ ಎಂದು ಹೇಳಿರುವುದರಿಂದ, ಗ್ರಂಥವು ಒಂದು ಹುತ್ತದಲ್ಲಿ ದೊರೆತಿರಬೇಕು. ಬಂಗಾಳಿಯಲ್ಲಿ ಕೃತ್ತಿವಾಸನು ಬರೆದಿರುವ ಗ್ರಂಥದ ಆಧಾರದ ಮೇಲೆ ಇದು ಹುಟ್ಟಿರಬೇಕು. ಅದನ್ನು ಗ್ರಂಥಕರ್ತನು ಹುತ್ತದಲ್ಲಿ ಬಚ್ಚಿಟ್ಟಿರಬೇಕು; 'ರಾಮಾಯಣ'ವು 'ರಾಮ+ಯವನ' ಎಂಬುದರ ಅಪಭ್ರಂಶವಾಗಿ ಕಾಣುತ್ತದೆ.

ಇದರಲ್ಲಿ ಮೊದಲಿಂದ ಕೊನೆಯವರೆಗೂ ಅಶ್ಲೀಲತೆ ಇದೆ-ಸೀತಾ ವಿವಾಹ,ಸೀತಾಪಹರಣ ಇತ್ಯಾದಿ. ವಸಿಷ್ಠಾದಿಗಳಲ್ಲಿ ಸ್ವಲ್ಪ ಹಾಸ್ಯವಿದೆ. ವಾನರರು ಸಮುದ್ರಕ್ಕೆ ಸೇತುವೆ ಕಟ್ಟುವುದರಲ್ಲಿ ಕರುಣವಿದೆ. ಭಾಷೆ ಸ್ಪಷ್ಟವಾಗಿದ್ದರೂ ಅತ್ಯಂತ ಅಶುದ್ಧವೆನ್ನಬೇಕು; ಉದಾಹರಣೆ: 'ಅಯೋಧ್ಯಾಕಾಂಡ', ಯೋಧ್ಯಗಳು ಇಲ್ಲದ್ದರಿಂದ ಇದು 'ಅಯೋದ್ಯಾಕಾಂಡ'ವೆಂದಿರಬೇಕು.ಹಳೆಯ ಸಂಸ್ಕೃತ ಗ್ರಂಥಗಳಲ್ಲಿ ಇಂಥ ತಪ್ಪುಗಳು ಇರುತ್ತವೆ. ಆಧುನಿಕ ಯೂರೋಪಿನ ಪಂಡಿತರೇ ಶುದ್ಧ ಸಂಸ್ಕೃತಕ್ಕೆ ಪ್ರಮಾಣ[೭].

ಈ ಮೇಲಿನ ಉದ್ಧರಣೆಯಲ್ಲಿ ಭಾರತೀಯ ಸಮಾಜ ಹಾಗೂ ಸಾಹಿತ್ಯದ ಬಗ್ಗೆ ಆಂಗ್ಲರಿಗಿದ್ದ ಅಜ್ಞಾನವನ್ನು ಬಯಲಿಗೆಳೆದಿದ್ದಾರೆ. ಇಂತಹ ಕಾಲ್ಪನಿಕ ಬರಹಗಳು ಒಡ್ಡುವ ವಿಡಂಬನೆ ಅತ್ಯಂತ ಮಾರ್ಮಿಕವಾಗಿ ಬಂಕಿಮರ ಕೃತಿಗಳಲ್ಲಿ ಪ್ರಕಟವಾಗುವುದನ್ನು ಕಾಣಬಹುದಾಗಿದೆ. ದೇಶೀಯ ಕೃತಿಗಳನ್ನು ಸಾಮ್ರಾಜ್ಯಶಾಹಿಶಕ್ತಿಗಳು ಅನುವಾದಿಸಿಕೊಂಡ ಸಂದರ್ಭದಲ್ಲಿ ಆದ ಅನರ್ಥಗಳನ್ನು ಬಂಕಿಮಚಂದ್ರರು ವಿಡಂಬನಾತ್ಮಕ ನೆಲೆಯಿಂದ ವಿಶ್ಲೇಷಿಸಿದ್ದಾರೆ. ದೇಶೀಯ ಸಾಂಸ್ಕೃತಿಕ ಅನನ್ಯತೆಯನ್ನು, ನಂಬಿಕೆಗಳನ್ನು ವಸಾಹತುಶಾಹಿ ಮನಸ್ಸುಗಳು ವಿರೂಪಗೊಳಿಸಿದ ಹಾಗೆ ಗ್ರಹಿಸಿದ ಸಂವೇದನೆಗೆ ಒಡ್ಡಿದ ಪ್ರತಿತಂತ್ರಗಳನ್ನು ಈ ಮೇಲಿನ ಉದ್ಧರಣೆಗಳಲ್ಲಿ ಕಾಣುತ್ತೇವೆ.

## ೩. ರವೀಂದ್ರನಾಥ ಠಾಕೂರ್ : ಮನೆ - ಜಗತ್ತು

ಬಂಕಿಮರ ಆನಂತರ ಮಹತ್ವದ ಲೇಖಕರಲ್ಲಿ ರವೀಂದ್ರನಾಥ ಠಾಕೂರರು ಮುಖ್ಯರು. ಅವರು ವಂಗ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರು. ಆ ಕಾಲದ ಸಂಕೀರ್ಣವಾದ ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕನ್ನು ನಿಶ್ಚಿತವಾದ ವಿಮರ್ಶೆಗೆ ಗುರಿಪಡಿಸುವುದರ ಮೂಲಕ ಅನನ್ಯತೆಯ ಪ್ರಶ್ನೆಗೆ ಅವರು ಕೈ ಕೊಟ್ಟಿದ್ದಾರೆ. ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಕ್ಷಣ, ಮೊದಲಾದ ಅವರ ಸೃಷ್ಟಿಶೀಲ ಕೃತಿಗಳಲ್ಲಿ ಹಾಗೂ ಪ್ರಯೋಗಗಳಲ್ಲಿ ಪ್ರಾಚ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಚಿಂತನೆಗಳು ಮುಖಾಮುಖಿಯಾಗುವುದನ್ನು ಕಾಣುತ್ತೇವೆ. ಹಾಗೆ ಮುಖಾಮುಖಿಯಾಗುವುದರಿಂದ ಹೊಸ ವಿಚಾರಧಾರೆಯೊಂದನ್ನು ಕಟ್ಟಿಕೊಡುವುದು ಅವರ ಕೃತಿ ಸಮೂಹದ ವೈಶಿಷ್ಟ್ಯವಾಗಿದೆ. ಠಾಕೂರರ ಕೃತಿಗಳಲ್ಲಿ ಸ್ವಾತಂತ್ರ್ಯದ ಗುರಿ, ಭಾರತೀಯ ಸಂಸ್ಕೃತಿಯ ಮೌಢ್ಯತೆಯ ಖಂಡನೆ, ಪ್ರಗತಿ ಮತ್ತು ಪರಂಪರೆಗಳ ಚಿಂತನೆ, ಹೊಸ ಕಾಲದ ಬಗೆಗಿನ ಆಕರ್ಷಣೆ, ಪಾಶ್ಚಾತ್ಯ ಸಂಸ್ಕೃತಿಯ ವೈಜ್ಞಾನಿಕ ಶೋಧಗಳ ಬಗೆಗಿನ ಶ್ರದ್ಧೆ, ಭಾರತೀಯ ಸಂಸ್ಕೃತಿಯ ಅನನ್ಯತೆಯ ಬಗೆಗಿನ ಗೌರವ, ಆಂಗ್ಲರ ಸಾಮ್ರಾಜ್ಯಶಾಹಿ ಕ್ರೌರ್ಯದ ಬಗೆಗಿನ ಖಂಡನೆ, ಭಾಷೆ ಹಾಗೂ ಶಿಕ್ಷಣದ ಬಗೆಗಿನ ಚಿಂತನೆಗಳು ಬಹುಮುಖ್ಯ ಆಶಯಗಳಾಗಿ ವಿಶ್ಲೇಷಣೆಗೆ ಒಳಗಾಗುತ್ತವೆ.

ವಂಗ ದೇಶದಲ್ಲಿ ರಾಜಾರಾಮಮೋಹನರಾಯ್, ದೇವೇಂದ್ರನಾಥ ಠಾಕೂರ್, ಈಶ್ವರ ಚಂದ್ರ ವಿದ್ಯಾಸಾಗರ, ಬಂಕಿಮ ಚಂದ್ರ ಚಟರ್ಜಿ ಮೊದಲಾದವರಿಂದ ಸಾಂಸ್ಕೃತಿಕ ಪರಿಸರ ಸಮೃದ್ಧಿಗೊಂಡು ಅತ್ಯಂತ ಉನ್ನತಮಟ್ಟವನ್ನು ತಲುಪಿದ ಕಾಲದಲ್ಲಿ ರವೀಂದ್ರನಾಥ ಠಾಕೂರರ ಸಾಹಿತ್ಯಕೃಷಿ ಆರಂಭಗೊಂಡಿತು. ಒಂದು ಕಡೆ ಭಾರತೀಯ ಸಮಾಜದಲ್ಲಿನ ಲೋಪ-ದೋಷಗಳ, ಮೌಢ್ಯತೆಗಳ ವಿಮರ್ಶೆ, ಮತ್ತೊಂದು ಕಡೆ ಭಾರತೀಯ ಸಂಸ್ಕೃತಿಗೆ ಪಾಶ್ಚಾತ್ಯ ನಾಗರಿಕತೆಯಿಂದ ಎದುರಾಗಿರುವ ಆಘಾತಗಳ ಬಗೆಗಿನ ಕಳವಳಕ್ಕೆ ಈ ಮೇಲಿನ ಚಿಂತಕರು ಪ್ರತಿಕ್ರಿಯಿಸುತ್ತಿದ್ದ ಕಾಲವೂ

ಅದಾಗಿತ್ತು. ಅಂತೆಯೇ ಆ ಕಾಲದಲ್ಲಿ ಬ್ರಹ್ಮ ಸಮಾಜ, ಆರ್ಯ ಸಮಾಜ, ಸ್ವಾತಂತ್ರ್ಯ ಹೋರಾಟದ ಬಗೆಗೆ ಪ್ರಗತಿಪರರೆಲ್ಲರೂ ಗಾಢವಾಗಿ ಚಿಂತಿಸುತ್ತಿದ್ದು, ಮುಖ್ಯವಾಗಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಿಸರಗಳು ಅತ್ಯಂತ ಗೊಂದಲಗಳಿಗೆ ಗುರಿಯಾಗಿದ್ದ ವಾತಾವರಣ ಏರ್ಪಟ್ಟಿತ್ತು. ಇಂತಹ ವಾತಾವರಣದಲ್ಲಿ ಠಾಕೂರರು ತಮ್ಮ ಸೃಷ್ಟಿ ಶೀಲ ಕೃತಿಗಳ ಮೂಲಕ ಹಾಗೂ ವೈಚಾರಿಕ ಚಿಂತನೆಗಳಿಂದ ವಂಗದೇಶದ ಹಾಗೂ ಭಾರತೀಯ ಸಂಸ್ಕೃತಿಗೆ ಹೊಸ ಕಾಣ್ಕೆಯನ್ನು ಕಲ್ಪಿಸಿದರು. ಆಂಗ್ಲರ ರಾಜಕೀಯ ಆಕ್ರಮಣವು ಇಡೀ ರಾಷ್ಟ್ರವನ್ನು ಅಲ್ಲೋಲ ಕಲ್ಲೋಲ ಮಾಡುತ್ತಿದ್ದ ಸಂದರ್ಭದಲ್ಲಿ ಹಾಗೂ ಪರಕೀಯವೆಲ್ಲವೂ ನೂತನವೆಂಬ, ಶ್ರೇಷ್ಠವಾದುದೆಂಬ ವಾದಗಳು ಪ್ರಚಲಿತವಾಗುತಲಿದ್ದ ಕಾಲದಲ್ಲಿ ಠಾಕೂರರು ನಿರ್ದಾಕ್ಷಿಣ್ಯವಾಗಿ ಅಂತಹ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ಪುನರ್‌ವಿಮರ್ಶೆಗೆ ಗುರಿಪಡಿಸುತ್ತಾರೆ. ಪೂರ್ವ-ಪಶ್ಚಿಮಗಳ ಸಮನ್ವಯ ಅತ್ಯಂತ ಅವಶ್ಯಕವೆಂಬುದು ಠಾಕೂರರ ಕೃತಿ ಸಮೂಹದ ಬಹುಮುಖ್ಯ ನೆಲೆಯಾಗಿದೆ. ಭಾರತವು ಧಾರ್ಮಿಕ ಹಾಗೂ ಸಾಮಾಜಿಕ ಆಚಾರಗಳಿಗೆ ಕಟ್ಟುಬಿದ್ದು ತನ್ನನ್ನೇ ವಂಚಿಸಿಕೊಳ್ಳುತ್ತಿರುವ ಸ್ಥಿತಿಯನ್ನು ಸ್ಪಷ್ಟಪಡಿಸುತ್ತ ಅಂತಹ ಸ್ಥಿತಿಯಿಂದ ಹೊರ ಬರಬೇಕಾದರೆ ಪೂರ್ವ-ಪಶ್ಚಿಮಗಳ ಸಮ್ಮಿಳನದ ಅನಿವಾರ್ಯತೆಯನ್ನು ಅವರು ಎತ್ತಿಹಿಡಿಯುತ್ತಾರೆ. ಪೂರ್ವ-ಪಶ್ಚಿಮಗಳ ಸಮ್ಮಿಳನ ಅತ್ಯಂತ ನೋವಿನದಾದರೂ ಅದು ಅಗತ್ಯವೆಂಬುದನ್ನು ಠಾಕೂರರು ಪ್ರತಿಪಾದಿಸುವುದನ್ನು ಅವರ ಕೃತಿಗಳಲ್ಲಿ ಕಾಣುತ್ತೇವೆ.

> ಸತ್ಯವೊಂದೇ, ಅದರ ಮುಖಗಳು ಹಲವು; ಪೂರ್ವದ ಜ್ಞಾನ, ಪಶ್ಚಿಮದ ವಿಜ್ಞಾನ, ಎರಡೂ ಒಂದೇ ವಿದ್ಯೆಯ ಎರಡು ಧಾರೆಗಳು. ಎರಡನ್ನೂ ಸಮನ್ವಯ ಮಾಡಿಕೊಂಡಾಗಲೇ ನಿಖಿಲ ಲೋಕಾಶ್ರಯವಾದ ಸತ್ಯ ದೊರೆತೀತು. ಸತ್ಯದ ಪ್ರಾಪ್ತಿಯೇ ಮಾನವನ ಪರಮ ಸಿದ್ಧಿ- ಈ ಮಾತುಗಳಲ್ಲು ಠಾಕೂರರ 'ವಿಶ್ವ ಭಾರತಿ'ಯ ಮೂಲಧ್ಯೇಯ ಸೂತ್ರಗಳಷ್ಟೇ ಅಲ್ಲ; ಅವರ ವಿಶ್ವತೋಮುಖವಾದ ವ್ಯಕ್ತಿತ್ವಕ್ಕೂ ಸಮಗ್ರವಾಗಿ ಅನ್ವಯಿಸುವ ಮೂಲ ಸೂತ್ರಗಳೆನ್ನಬಹುದು.[೮]

ಈ ಮೇಲಿನ ಮಾತುಗಳು ಠಾಕೂರರ ಒಟ್ಟು ಚಿಂತನಧಾರೆಯನ್ನು ಸ್ಪಷ್ಟಪಡಿಸುತ್ತವೆ. ಅಂತೆಯೇ ಪೂರ್ವ-ಪಶ್ಚಿಮಗಳ ಸಮನ್ವಯವಾಗದೆ ಸಂಘರ್ಷ ನಿಲ್ಲದೆಂಬ, ಭಾರತ ಸಂಸ್ಕೃತಿಗೆ ವೈಜ್ಞಾನಿಕ ಸ್ಪರ್ಶ, ಪಾಶ್ಚಾತ್ಯರ ವೈಜ್ಞಾನಿಕ ಸಂಸ್ಕೃತಿಗೆ ಪೌರಾತ್ಯ ಸಂಸ್ಕೃತಿಯ ಆಧ್ಯಾತ್ಮಿಕ ಸ್ಪರ್ಶದ ಅಗತ್ಯ ಅತ್ಯವಶ್ಯಕವೆಂದು ಸೂಚಿಸುತ್ತಾರೆ. ಈ ಕೆಳಗಿನ ಉದ್ಧರಣೆಯಲ್ಲಿ ಇಂತಹ ವಿಚಾರಧಾರೆ ಮತ್ತೂ ವಿಶದವಾಗಿ ಪ್ರಕಟವಾಗುತ್ತದೆ.

> "ಈ ಜಗತ್ತಿನಲ್ಲಿ ಚಲಿಸುತ್ತಿರುವುದೆಲ್ಲಾ ದೇವರಿಂದ ಆವೃತವಾಗಿದೆ" "ಈ ಜಗತ್ತಿನಲ್ಲಿ ಚಲಿಸುತ್ತಿರುವುದೆಲ್ಲಾ" ಎಂಬುದು ವಿಜ್ಞಾನ ಪ್ರಪಂಚ. ದೇವರು ಇವುಗಳನ್ನೆಲ್ಲಾ ಆವರಿಸಿದ್ದಾನೆ ಎಂಬುದು ಆತ್ಮಜ್ಞಾನ. ಇವೆರಡನ್ನು ಸೇರಿಸಿ ಎಂದು ಋಷಿಗಳು ಹೇಳಿರುವುದರಲ್ಲಿ ಪೂರ್ವವನ್ನೂ ಪಶ್ಚಿಮವನ್ನೂ ಸೇರಿಸಿ ಎಂದು ಅರ್ಥ. ಈ ರೀತಿ ಎರಡಕ್ಕೂ ಮಿಳನವಿಲ್ಲದುದರಿಂದ ಪೂರ್ವದೇಶಗಳು ಹೊಟ್ಟೆಗಿಲ್ಲದೆ ಸಾಯುತ್ತಿವೆ. ಪಶ್ಚಿಮ ದೇಶಗಳು ಸುಖ ಶಾಂತಿಗಳಿಲ್ಲದೆ ಕಾಡುತ್ತಿವೆ. ಈ ಒಂದಾಗುವುದು ಎಂಬುದು ಆಧುನಿಕ ಪಾಶ್ಚಾತ್ಯ ಸಾಮ್ರಾಜ್ಯ ನಮ್ಮನ್ನು ನುಂಗುವುದರಿಂದ ಆಗುವುದಿಲ್ಲ.[೯]

ದುರಂತವೆಂದರೆ ಪೂರ್ವ-ಪಶ್ಚಿಮಗಳ ಸಮನ್ವಯ, ವಿಶ್ವಮಾನವತೆಯ ಕಲ್ಪನೆ, ವಿಶ್ವಶಾಂತಿಗೆ ಅತ್ಯವಶ್ಯಕವೆಂದು ಠಾಕೂರರು ಹೇಳುತ್ತಿರುವ ಸಂದರ್ಭದಲ್ಲಿಯೇ ಬಿಳಿಯರು 'ಒಡೆದು ಆಳುವ' ತಮ್ಮ ರಾಜಕೀಯ ತಂತ್ರವನ್ನು ಸಾಂಸ್ಕೃತಿಕ ಪರಿಸರಕ್ಕೂ ಅನ್ವಯಿಸಿದ್ದು ಶೋಚನೀಯ. ಅಂತೆಯೇ 'ಕರಿಯ ಮತ್ತು ಬಿಳಿಯರು' ಎಂಬ ಜನಾಂಗಿಕ ಭಿನ್ನತೆಗಳನ್ನು ಉಂಟು ಮಾಡಿ ಸಾಮಾಜಿಕ ಅಂತರಗಳನ್ನು ನಿರಂತರವಾಗಿ ಪೋಷಿಸಿದ್ದು ಮತ್ತೊಂದು ದುರಂತ. ಇಂತಹ ವಿಚಾರವನ್ನು ಬಿಪಿನ್‌ಚಂದ್ರ ಹೀಗೆ ವಿವರಿಸುತ್ತಾರೆ.

> ರಾಷ್ಟ್ರೀಯತೆ, ಪ್ರಜಾಸತ್ತೆ, ಆರ್ಥಿಕ ಅಭಿವೃದ್ಧಿ ಮುಂತಾದ ಆಧುನಿಕ ಭಾವನೆಗಳು ಹರಡುವುದನ್ನು ತಡೆಯುವುದಕ್ಕಾಗಿ ಬ್ರಿಟಿಷರು ಇನ್ನೂ ಒಂದು ದೃಷ್ಟಿಯನ್ನು ಹರಡಿದರು. ಭಾರತದ ಸಾಂಪ್ರದಾಯಿಕ ಭಾವನೆಗಳು ಮತ್ತು ಸಂಸ್ಥೆಗಳು ಭಾರತೀಯರಿಗೆ ಅತ್ಯಂತ ಸೂಕ್ತವಾಗಿ ಹೊಂದಿಕೆಯಾಗುವಂಥವು; ಭಾರತೀಯರು ತಮ್ಮ ತಾತ್ವಿಕ ಮತ್ತು ಧಾರ್ಮಿಕ ಪರಂಪರೆಯ ಮೇಲೆ ಹಾಗೂ ತಮ್ಮ ಜೀವನದ "ಆಧ್ಯಾತ್ಮಿಕ" ಮುಖವನ್ನು ಕುರಿತು ಕೇಂದ್ರೀಕರಿಸಬೇಕು. ಬ್ರಿಟಿಷರಿಗೆ ಅರ್ಥವ್ಯವಸ್ಥೆ, ರಾಜಕೀಯ ಹಾಗೂ ಆಡಳಿತಗಳ ವ್ಯವಸ್ಥೆಯ ವಿಚಾರವನ್ನು ಬಿಟ್ಟು ಬಿಡಬೇಕು...... ಕರಿಯರಿಗಿಂತ ಬಿಳಿಯರು ಮೇಲಾದವರು ಎಂದು ಬೋಧಿಸುವ ಸಿದ್ಧಾಂತಗಳು ಯೂರೋಪಿನಲ್ಲೆಲ್ಲ ಹರಡಿದುವು, ಪ್ರಭುತ್ವ ಹಾಗೂ ಸಾಮ್ರಾಜ್ಯಶಾಹಿ ತತ್ವಗಳ ವಿಕಾಸಗೊಂಡ ಹಾಗೆ ಭಾರತದಲ್ಲಿದ್ದ ಬ್ರಿಟೀಷರು ಈಗ ಬಹಿರಂಗ, ಭಾರತೀಯರು ಕೀಳು ಜನಾಂಗದವರು ಎಂದು ಘೋಷಿಸಿ ಆಕ್ರಮಿತ ಅಧಿಕಾರದ ಸೌಲಭ್ಯಗಳನ್ನು ಸ್ಥಿರಪಡಿಸಿಕೊಂಡರು. ವೈಸರಾಯ್ ಆಗಿದ್ದ ಮಿಸ್ ಮೇಯೋ (mayo) ಅಂತಹ ದೊಡ್ಡ ವ್ಯಕ್ತಿ ೧೮೭೦ರಲ್ಲಿ ಪಂಜಾಬಿನ ಲೆಫ್ಟಿನೆಂಟ್ ಗವರ್ನರನಿಗೆ ಹೀಗೆ ಬರೆದರು.'ನಾವು ಒಂದು ಕೆಳಮಟ್ಟದ ಜನಾಂಗವನ್ನು ಆಳುವ ಭವ್ಯವಾದ ಕೆಲಸದಲ್ಲಿ ತೊಡಗಿರುವ ಬ್ರಿಟಿಷ್ ಸಭ್ಯ ಜನ ಎಂಬುದನ್ನು ನಿಮ್ಮ ಕೈ ಕೆಳಗಿನವರಿಗೆ ಕಲಿಸಿರಿ.'[೧೦]

ಈ ಮೇಲಿನ ಉದ್ಧರಣೆಗಳಲ್ಲಿ ಪಶ್ಚಿಮ ಸಂಸ್ಕೃತಿಯ ರಾಜಕೀಯ ಧೋರಣೆಗಳು ಪ್ರಕಟವಾಗುತ್ತವೆ. ಇಂತಹ ಅಮಾನವೀಯ ಧೋರಣೆಗಳು ಪೂರ್ವ-ಪಶ್ಚಿಮಗಳ ಸಮನ್ವಯವನ್ನು ಉಂಟು ಮಾಡಬಲ್ಲವೇ? ಎಂಬ ಪ್ರಶ್ನೆಗಳು ಹಾಗಿಯೇ ಉಳಿದುಬಿಡುತ್ತವೆ. ಇಂತಹ ಧೋರಣೆಗಳೇ ಮುಂದೆ ಭಾರತೀಯರಲ್ಲಿ ದೈತ್ಯ ಹೋರಾಟವನ್ನು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸ್ಫೋಟಗೊಳ್ಳುವಂತೆ ಮಾಡಿದವೆಂಬುದು ಕುತೂಹಲವಾದುದು. ಅಂತಹ ಹೋರಾಟದ ವಿರುದ್ಧವಾಗಿ ಇಡೀ ಭಾರತದ ಮಾನವಶಕ್ತಿ ಒಂದುಗೂಡಿದ್ದು ವಿಸ್ಮಯವೆನ್ನಬಹುದು.

ಠಾಕೂರರ ಸೃಷ್ಟಿಕ್ರಿಯೆ ಮೊದಲೇ ಹೇಳಿದ ಹಾಗೆ ಪಾಶ್ಚಾತ್ಯ ಹಾಗೂ ಪೌರಾತ್ಯ ಸಂಸ್ಕೃತಿಗಳ ಸಂಘರ್ಷದಿಂದ ಕೂಡಿದ್ದಾಗಿದ್ದು, ವ್ಯಕ್ತಿ-ಕುಟುಂಬ-ಸಮಾಜಗಳ ಸಂದರ್ಭದಲ್ಲಿ ವ್ಯಕ್ತಿ ಎದುರಿಸಿದ ಆಘಾತಗಳನ್ನು ಅವರ ಕೃತಿಗಳು ಪರಿಚಯಿಸುತ್ತದೆ. 'ನೌಕಾಘಾತ', 'ಗೋರ, 'ಮನೆ'-ಜಗತ್ತು' ಇಂತಹ ಕೃತಿಗಳು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾರತೀಯರು ಹೊಸ ಮೌಲ್ಯಗಳಿಗೆ ಎದುರಾಗುತ್ತಾ ಅನಿವಾರ್ಯವಾಗಿ ಸಿಲುಕಿದ ದ್ವಂದ್ವಗಳನ್ನು ವಿಶ್ಲೇಷಣೆಗೆ ಗುರಿಪಡಿಸುತ್ತವೆ. ಹಾಗೂ ಅವರ ಅನೇಕ ಕತೆಗಳು ಮತ್ತು ನಾಟಕಗಳು ಸಾಂಸ್ಕೃತಿಕ ಅನನ್ಯತೆಯನ್ನು ಶೋಧಿಸುವ

ಮಹತ್ವದ ಆಶಯಗಳಿಂದ ಕೂಡಿದ್ದಾಗಿವೆ. ನೌಕಾಘಾತ ಕಾದಂಬರಿಯು ಪ್ರೇಮ ಮತ್ತು ದಾಂಪತ್ಯದ ಕಥಾವಸ್ತುವನ್ನು ಉಳ್ಳದ್ದಾದರೂ ಅದು ಒಂದು ಸಾಂಕೇತಿಕ ಕೃತಿ. ವಸಾಹತು ಸಂಸ್ಕೃತಿಯು ತಂದ ತಲ್ಲಣಗಳನ್ನು, ಮನುಷ್ಯ ಸಂಬಂಧಗಳಲ್ಲಿ ಎದುರಾದ ದ್ವಂದ್ವಗಳನ್ನು, ಆಘಾತಗಳನ್ನು ಸಂಕೇತಿಸುತ್ತದೆ. ನೌಕೆ, ರೈಲು, ಅಂಚೆ ವ್ಯವಸ್ಥೆಗಳು ನಮ್ಮ ಪರಿಸರದ ಭಾಗಗಳಾಗುವುದನ್ನು ಈ ಕೃತಿಯು ಪರಿಚಯಿಸುತ್ತದೆ. ಅಂತೆಯೇ ಆಗ ಪ್ರಚಲಿತವಾಗಿದ್ದ ಬ್ರಹ್ಮ ಸಮಾಜದ ಪ್ರೇರಣೆ, ಪ್ರಭಾವಗಳು, ಗೊಂದಲಗಳನ್ನು ಈ ಕೃತಿಯು ದಾಖಲಿಸುತ್ತದೆ. ಪಾಶ್ಚಾತ್ಯ ಸಂಪ್ರದಾಯದ ಹಲವು ಪದ್ಧತಿಗಳ ಬಗೆಗೆ ಭಾರತೀಯ ಮುಂದಾಳುಗಳಿಗೆ ಇದ್ದ ಆಕರ್ಷಣೆ ಹಾಗೂ ತಿರಸ್ಕಾರಗಳ ಬಗೆಗಿನ ಗೊಂದಲಗಳು ಇಲ್ಲಿನ ಮುಖ್ಯ ಭಿತ್ತಿಯಾಗಿ ವಿಶ್ಲೇಷಣೆಗೆ ಗುರಿಯಾಗುತ್ತವೆ.

'ಗೋರ' ಮತ್ತು 'ಮನೆ-ಜಗತ್ತು' ಠಾಕೂರರ ಬಹುಮುಖ್ಯ ಕೃತಿಗಳು. ವಸಾಹತು ಸಂಸ್ಕೃತಿ ತಂದ ಹೊಸ ಮೌಲ್ಯಗಳಾದ ರಾಷ್ಟ್ರೀಯತೆ, ದೇಶಪ್ರೇಮ, ಸ್ತ್ರೀ ಸ್ವಾತಂತ್ರ್ಯ ಮೊದಲಾದ ಮೌಲ್ಯಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸುವ ಪ್ರಕ್ರಿಯೆ ಈ ಎರಡೂ ಕೃತಿಗಳಲ್ಲಿ ಪ್ರಕಟಗೊಂಡಿದೆ. 'ಗೋರ' ಕಾದಂಬರಿಯ ಬಹುಮುಖ್ಯ ಪಾತ್ರಗಳಾದ ವಿನಯಭೂಷಣ, ಗೋರ ಪಾತ್ರಗಳ ಮುಖೇನ ಬ್ರಹ್ಮ ಸಮಾಜದ ಹಾಗೂ ಸಂಪ್ರದಾಯ ಬ್ರಾಹ್ಮಣರ ಸಂಘರ್ಷವನ್ನು, ಪಾಶ್ಚಾತ್ಯರ ಅಂಧಾನುಕರಣೆಯನ್ನು ಮುಖಾಮುಖಿಯಾಗಿಸುತ್ತದೆ.ವ್ಯಕ್ತಿ ಮತ್ತು ದೇಶ ಪ್ರೇಮಗಳಲ್ಲಿ ಯಾವುದು ಮುಖ್ಯ ಎಂಬ ಪ್ರಶ್ನೆ ಕೃತಿಯ ಉದ್ದಕ್ಕೂ ಎದುರಾಗುತ್ತದೆ. 'ಗೋರ'ನಂತಹ ಸಂಪ್ರದಾಯ 'ಭಾರತೀಯ'ನು ಭಾರತೀಯನೇ? ಅಲ್ಲವೇ? ಎಂಬ ಪ್ರಶ್ನೆ ಬಹುಮುಖ್ಯ ಆಯಾಮವನ್ನು ಪಡೆದುಕೊಳ್ಳುತ್ತದೆ. ಪಾಶ್ಚಾತ್ಯ ಸಿಪಾಯಿಯ ಮಗನೆಂದು ಅನಂತರ ತಿಳಿಯುವ 'ಗೋರ' ಬ್ರಹ್ಮಸಮಾಜದ ಪ್ರತಿನಿಧಿಯಂತಿರುವ 'ವಿನಯಭೂಷಣ'ನ ವ್ಯಕ್ತಿತ್ವಗಳನ್ನು ಮುಖಾಮುಖಿಯಾಗಿಸುವುದರ ಮೂಲಕ ನೈಜ ಭಾರತೀಯತೆಯ ಹುಡುಕಾಟದ ಸಮಸ್ಯೆಯನ್ನು ಸಂಕೀರ್ಣತೆಯನ್ನು ವಿಶ್ಲೇಷಿಸಿದ್ದಾರೆ.

'ಮನೆ - ಜಗತ್ತು' ಈ ಕೃತಿಯ ಹೆಸರೇ ಸೂಚಿಸುವಂತೆ ಮನೆಯ ಒಳ ಮತ್ತು ಹೊರಗಿನ ಸಮಾಜದ ಬದುಕಿನ ಸಂಘರ್ಷವನ್ನು ಸ್ತ್ರೀ ಕೇಂದ್ರಿತವಾದ ಈ ಕಾದಂಬರಿಯಲ್ಲಿ ಸ್ತ್ರೀ-ಪುರುಷರ ಟೊಳ್ಳುಗಳನ್ನು, ನೈಜತೆಗಳನ್ನು ವಿಶ್ಲೇಷಿಸಿದ್ದಾರೆ. ಸ್ತ್ರೀ ಸ್ವಾತಂತ್ರ್ಯದಂತಹ ಹೊಸ ಮೌಲ್ಯಗಳು ತಂದೊಡ್ಡಬಹುದಾದ ಸಂಕೀರ್ಣತೆ, ಕೌಟುಂಬಿಕ ಬಿರುಕುಗಳನ್ನು ಈ ಕೃತಿ ಮುಖ್ಯವಾಗಿ ವಿಶ್ಲೇಷಿಸುತ್ತದೆ. ಬಾಹ್ಯ ಜಗತ್ತಿನ ಬಗೆಗೆ ಸ್ತ್ರೀಗಿರುವ ಕುತೂಹಲ, ಆಕರ್ಷಣೆ, ಅಂತಹ ಆಕರ್ಷಣೆ-ಕುತೂಹಲಗಳು ದಿಕ್ಕು ತಪ್ಪಿಸುವ ಸಂದಿಗ್ಧ ಸ್ಥಿತಿಯನ್ನು ವಿಮಲೆಯ ಬದುಕಿನ ಸುತ್ತ ಠಾಕೂರರು ಹೆಣೆದಿದ್ದಾರೆ. ಸ್ತ್ರೀ ಪುರುಷನನ್ನು ಅನುಕರಿಸುವುದರ ವ್ಯಂಗ್ಯವೂ ದುರಂತವೂ ಈ ಕೃತಿಯ ಹಿನ್ನೆಲೆಗಿದೆ. ಅಂತೆಯೇ ಸ್ವಾತಂತ್ರ್ಯ ಹೋರಾಟದಂತಹ ಸಾಮಾಜಿಕ ಚಳವಳಿಗಳಲ್ಲಿ ತೊಡಗಿದ ಸ್ತ್ರೀ ಎದುರಿಸಬಹುದಾದ ಸಮಸ್ಯೆಗಳು ಇಲ್ಲಿ ಮೈ ಪಡೆದಿವೆ. ಸಂಪ್ರದಾಯ ಶರಣನಂತಿರುವ ನಿಖಿಲ, ಸ್ವಾತಂತ್ರ್ಯ ಹೋರಾಟದ ಸೋಗನ್ನು ಹೊತ್ತಿರುವ ಸಂದೀಪನ ಸಾಂಕೇತಿಕ ಪಾತ್ರಗಳ ಮೂಲಕ ಅಂದಿನ ಹೋರಾಟಕ್ಕೆ ಅಗತ್ಯವಾದ ವ್ಯಕ್ತಿತ್ವಗಳ ಹುಡುಕಾಟವನ್ನು ಮಾಡಿದ್ದಾರೆ. ಸಂದೀಪನ ಹೋರಾಟದ ಧೋರಣೆ ಮೇಲುನೋಟಕ್ಕೆ ಆಕರ್ಷಕವಾದರೂ ಕ್ರಾಂತಿಯ ಭ್ರಮೆಯ ಬೀಜಗಳನ್ನು

ವಿಮಲೆಯಲ್ಲಿ ಮತ್ತು ಅಮೂಲ್ಯನಂತಹ ಯುವಕರಲ್ಲಿ ಬಿತ್ತುವುದರ ಮೂಲಕ ದಿಕ್ಕು ತಪ್ಪಿಸುವ ಸ್ಥಿತಿಯನ್ನು ಇಲ್ಲಿ ಕಾಣುತ್ತೇವೆ.

ದೇಶದ ವಾಸ್ತವವನ್ನು, ಮನುಷ್ಯನನ್ನು ಪ್ರೀತಿಸದೆ, ದೇಶವನ್ನು ದೈವತ್ವಕ್ಕೆ ಹೊಯ್ದು ಶ್ರೀ ಸಾಮಾನ್ಯನನ್ನು ಉದ್ರೇಕಕ್ಕೆ ಒಳಗುಮಾಡಿ ದುರಂತಕ್ಕೆ ತಳ್ಳುವುದರ ಬಗ್ಗೆ ಕಟುವಿಮರ್ಶೆಯೂ ಇಲ್ಲಿದೆ. ಉಗ್ರಗಾಮಿ ಮತ್ತು ಮಂದಗಾಮಿ ಧೋರಣೆಗಳ ಸಂಘರ್ಷ ವಂಗ ವಿಭಜನೆಯ ಬಗೆಗಿನ ಖಂಡನೆ. ಸ್ತ್ರಿ ವಿಮೋಚನೆ, ಸ್ವದೇಶಿ ಚಳವಳಿ, 'ವಂದೇ ಮಾತರಂ' ರಾಷ್ಟ್ರದಲ್ಲಿ ನಿರ್ಮಾಣ ಮಾಡಿದ ರಾಷ್ಟ್ರಭಕ್ತಿ, ವಿದೇಶಿ ವಸ್ತುಗಳ ದಹನದಿಂದ ಶ್ರೀ ಸಾಮಾನ್ಯನು ಎದುರಿಸಿದ ಸಂಕಷ್ಟಗಳು ಈ ಕೃತಿಯ ಉದ್ದಕ್ಕೂ ವಿಮರ್ಶಾತ್ಮಕವಾದ ನೆಲೆಯಲ್ಲಿ ಠಾಕೂರರು ಪ್ರತಿಕ್ರಿಯಿಸಿದ್ದಾರೆ. ಮುಖ್ಯವಾಗಿ ಅಂದಿನ ಸಮಾಜದ ವಾಸ್ತವತೆ-ಅವಾಸ್ತವತೆಗಳನ್ನು ಈ ಕೃತಿಯ ಉದ್ದಕ್ಕೂ ಮುಖಾಮುಖಿಯಾಗಿಸುವುದರ ಮೂಲಕ ಭಾರತೀಯ ಸಂಸ್ಕೃತಿಗೆ ಹೊಸ ಕಾಣ್ಕೆಯನ್ನು ಠಾಕೂರರು ನೀಡಿದ್ದಾರೆಂದು ಹೇಳಬಹುದು. ಅಂತೆಯೇ ಪಶ್ಚಿಮದ ಅಹಂಕಾರದ ನಿಲುವುಗಳನ್ನು, ಅಂತಹ ನಿಲುವುಗಳು ಮನುಷ್ಯ ಸಂಸ್ಕೃತಿಗಳನ್ನೇ ದುರಂತಕ್ಕೆ ಒಳಗು ಮಾಡುವ ಸ್ಥಿತಿಗತಿಗಳನ್ನು ಅವರ ಅಪಾರ ಗದ್ಯ ಬರಹಗಳಲ್ಲಿ ಅಭಿವ್ಯಕ್ತಸಿದ್ದಾರೆ. ರಾಜಕೀಯ ಮತ್ತು ವ್ಯಾಪಾರ ದುರಾಸೆಯ ಪಶ್ಚಿಮದ ಸಂಸ್ಕೃತಿಗೆ ಶಾಂತಿ, ಪ್ರೇಮ, ಸತ್ಯಗಳು ಕಾಣಲಾರವೆನ್ನುತ್ತಾರೆ. ಅಶಕ್ತರು ಹಾಗೂ ಅಶಕ್ತ ಸಂಸ್ಕೃತಿ ದೈವ ಬೆಂಬಲದಿಂದ ಹೇಗೆ ಒಳಗೆ ಶಕ್ತಿಗೊಂಡು ಸ್ಫೋಟಗೊಳ್ಳಬಹುದೆಂಬ ಕಾಲಜ್ಞಾನವನ್ನು ಈ ಕೆಳಗಿನ ಉದಾರಣೆಗಳು ಪ್ರಕಟಗೊಳಿಸುತ್ತವೆ.

> ಈ ವಿಶ್ವವು ವ್ಯಕ್ತಿಯ ಅಥವಾ ಧರ್ಮದ ಧ್ಯೇಯದ ನಾಶದ ಮೇಲೆಯೇ ಯಂತ್ರ ಮತ್ತು ಶಿಸ್ತುಕ್ರಮದ ಅಧಿಕಾರ ಬಲವಾಗಿ ಸ್ಥಾಪಿತವಾಗಿದೆ. ಮನುಷ್ಯ ತನ್ನ ರಾಜ್ಯವನ್ನು ಕಳೆದುಕೊಂಡು ಭಿಕಾರಿಯಾಗಿದ್ದಾನೆ.ಹಸಿದು ಮನೆಯಿಲ್ಲದೆ ಅಶಾಂತಿಯಿಂದ ಅಲೆಯುವ ರಣಹದ್ದುಗಳಂತೆ ಪಾಶ್ಚಾತ್ಯರು ನಮ್ಮಲ್ಲಿಗೆ ಬಂದಿದ್ದಾರೆ. ಅವರು ಬರಿಯ ದರ್ಪದ ಆಸೆಯಿಂದಲೇ ಪೌರಾತ್ಯರನ್ನು ಲೂಟಿ ಮಾಡುತ್ತಿದ್ದಾರೆ. ಈ ರೀತಿ ಪೂರ್ವ-ಪಶ್ಚಿಮದವರು ಸೇರಿದುದಕ್ಕೆ ದೇವರ ಆಶೀರ್ವಾದವಿಲ್ಲ. ರೈಲ್ವೆಗಳು ಬೇಕಾದ ಹಾಗೆ ತಿರುಗುತ್ತಿದ್ದರೂ ಹಡಗುಗಳು ನಮ್ಮನ್ನು ಸೇರಿಸಲು ದಡದಿಂದ ದಡಕ್ಕೆ ತಿರುಗುತ್ತಿದ್ದರೂ ಈ ಪಾಶ್ಚಾತ್ಯ-ಪೌರಾತ್ಯ ಸೇರುವಿಕೆ ನಿಜವಾದ ಮಿಳನವಾಗಿಲ್ಲ. ಇದು ನಮ್ಮನ್ನೂ ಅವರನ್ನೂ ಬೇರೆ ಬೇರೆ ಮಾಡಿದೆ....... ಆಧುನಿಕ ನಾಗರೀಕತೆಗೆ ಮನುಷ್ಯರೇ ಕಚ್ಚಾಮಾಲು. ಪರಸ್ಪರ ಸಂಬಂಧ ಬರಿಯ ಉಪಯುಕ್ತತೆಯ ದೃಷ್ಟಿಯಿಂದ ಮನುಷ್ಯ ಪೂರ್ಣವಾಗಿ ಪ್ರಕಟವೇ ಆಗುವುದಿಲ್ಲ. ಪ್ರಕಟವಾಗದಿರಲು ಕಾರಣ ಅವನು ಉಪಯುಕ್ತವಾದ ವಸ್ತು ಮಾತ್ರವೇ ಆಗಿ ಆತ್ಮವಾಗಿಲ್ಲದಿರುವುದು. ಸೃಷ್ಟಿಗೆ ಯಂತ್ರವೇ ಮೂಲ ಎಂದು ತಿಳಿದು ಅದರ ಆಧಾರದ ಮೇಲೆಯೇ ಅವಲಂಬಿಸುವುದರಿಂದ ಅಗ್ನಿಪರ್ವತದಿಂದ ಜ್ವಾಲೆ ಹೊರಟಂತೆ ಶಕ್ತಿ ಉತ್ಪತ್ತಿಯಾಗುವುದು. ಆದರೆ ಆ ಪ್ರವಾಹ ಸಾವಿರಾರು ವರುಷಗಳಿಂದ ಕಟ್ಟಿದ ಮನುಷ್ಯರ ಮನೆಗಳನ್ನು ಕೊಚ್ಚಿಕೊಂಡು ಹೋಗುತ್ತದೆ. ಪ್ರಾಣವನ್ನು ನಾಶಮಾಡುತ್ತದೆ. ಇತರರ ಮೇಲೆ ಸರ್ವಾಧಿಕಾರವನ್ನು ಮಾಡುವವರಿಗೆ, ಒಂದು ದಿನ ಆ ಸರ್ವಾಧಿಕಾರದ ಕಾರಣದಿಂದ ದಬ್ಬಾಳಿಕೆಗೆ ಒಳಗಾದವರಲ್ಲಿ ಒಂದು ಶಕ್ತಿ ಉತ್ಪತ್ತಿಯಾಗಿ ಆ ಸರ್ವಾಧಿಕಾರವನ್ನು ಚೂರು ಚೂರು ಮಾಡುತ್ತದೆ

> ಎಂಬುದು ತಿಳಿಯುವುದಿಲ್ಲ. ಗುಲಾಮರ ಮೌನವಾದ ಕೋಪಕ್ಕೆ, ಪ್ರಕೃತಿಗೆ ಎಲ್ಲಾ ಶಕ್ತಿಗಳನ್ನು ಸಮವಾಗಿಡುವ ಸ್ವಭಾವವಿದೆ. ನಿಶ್ಯಕ್ತರ ನೋವಿಗೆ ಪ್ರಕೃತಿಯ ಸಹಾಯ ದೊರಕುತ್ತದೆ. ಹಗುರವಾಗಿರುವ ಗಾಳಿ ಯಾವುದೂ ತಡೆಯಲಾರದ ಬಿರುಗಾಳಿಯನ್ನು ಏಳಿಸುವುದಿಲ್ಲವೇ? ಇದು ಇತಿಹಾಸದಲ್ಲಿ ಅನೇಕ ಸಲ ವ್ಯಕ್ತವಾಗಿದೆ. ಮನುಷ್ಯ ಪ್ರಪಂಚ, ಈ ಸರ್ವಾಧಿಕಾರಕ್ಕೆ ಎದುರಾಗಿ ತನ್ನ ಶಕ್ತಿಯನ್ನು ಶೇಖರಿಸುತ್ತಿದೆ. ಆದರೂ ಶಕ್ತರ ಮನೋಭಾವ ಯಾವ ಎಚ್ಚರಿಕೆಯನ್ನು ಲಕ್ಷ್ಯ ಮಾಡುವುದಿಲ್ಲ. ಅಶಕ್ತಿಯೂ ಒಂದು ಅದ್ಭುತ ಶಕ್ತಿ ಎಂಬುದನ್ನು ಅದು ಒಪ್ಪುವುದಿಲ್ಲ. ರೋಗದ ಹುಳ ಹೃದಯದಲ್ಲಿ ಸೇರಿಕೊಂಡು ದೇಹವನ್ನು ತಿನ್ನುವಂತೆ ಈ ಅಜ್ಞಾನ ಧನಿಕ ರಾಷ್ಟ್ರಗಳನ್ನು ತಿನ್ನುತ್ತಿದೆ......ಪಾಶ್ಚಾತ್ಯರಿಗೆ ವಿಜ್ಞಾನ ತನ್ನ ಗುಟ್ಟುಗಳನ್ನೆಲ್ಲಾ ಬಿಟ್ಟುಕೊಟ್ಟು ಅವರನ್ನು ಆತ್ಮಹತ್ಯೆಕ್ಕೆ ಪ್ರೇರಿಸುತ್ತಿದೆ. ಅಶಕ್ತರ, ನಿಶ್ಯಸ್ತ್ರರ ಈ ಸವಾಲಿಗೆ ಪರಮಾತ್ಮನ ಬೆಂಬಲವಿದೆ ಎಂಬುದನ್ನೂ ತಿಳಿಯದೆ ಪಾಶ್ಚಾತ್ಯರು ಆ ಸವಾಲನ್ನು ಎದುರಿಸುತ್ತಿದ್ದಾರೆ[೧೧].

ಒಟ್ಟಿನಲ್ಲಿ ಠಾಕೂರರ ಇಂತಹ ವಿಚಾರಧಾರೆ ಕೇವಲ ವಂಗದೇಶಕ್ಕೆ ಸೀಮಿತವಾಗದೆ ಇಡೀ ರಾಷ್ಟ್ರದ ಮೇಲೆ ತನ್ನ ಪ್ರಭಾವವನ್ನು ಬೀರುವುದರ ಮೂಲಕ ರಾಷ್ಟ್ರೀಯ ಚಳವಳಿಗೆ ಪ್ರಾದೇಶಿಕ ಪ್ರತಿಭೆಗಳನ್ನು ಎಚ್ಚರಗೊಳ್ಳುವಂತೆ ಮಾಡಿದ ಕೀರ್ತಿ ಇವರ ಕೃತಿಗಳದಾಗಿದೆ. ಅಂತೆಯೇ ಅವರ ಚಿಂತನೆಗಳು ಪ್ರಾದೇಶಿಕ ನೆಲೆಯಲ್ಲಿ ರಾಷ್ಟ್ರೀಯ ಚಳವಳಿಗೆ ಅಗತ್ಯವಾದ ಮನಸ್ಥಿತಿಯನ್ನು ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟವು. ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ದೇಶಾಭಿಮಾನ ಮತ್ತು ಪೂರ್ವ-ಪಶ್ಚಿಮಗಳ ಸಂಗಮದ ಸಂಘರ್ಷಗಳು ಪ್ರಾದೇಶಿಕ ಕೃತಿಗಳಲ್ಲಿ ಪುನರ್‌ವ್ಯಾಖ್ಯೆಗಳಿಗೆ ಒಳಗಾಗುತ್ತ, ಬದುಕಿನ ನವೋದಯವನ್ನು ಭಾರತೀಯ ಪುನರುತ್ಥಾನಕ್ಕೆ ಪ್ರೇರಣೆ ನೀಡಿದವು. ಕರ್ನಾಟಕದ ಸಂದರ್ಭದಲ್ಲಿ ಬೇಂದ್ರೆ, ಕುವೆಂಪು, ಮಾಸ್ತಿ, ಪು.ತಿ.ನ., ಶಿವರಾಮಕಾರಂತ ಮೊದಲಾದವರ ಸೃಷ್ಟಿಶೀಲ ಕೃತಿಗಳಲ್ಲಿ ಠಾಕೂರರ ವಿಚಾರಧಾರೆಗೆ ಸಮನಾದ ಚಿಂತನೆ ಬೆಳೆದಿರುವುದನ್ನು ನಿಚ್ಚಳವಾಗಿ ಕಾಣಬಹುದಾಗಿದೆ. ವಂಗದೇಶದ ಲೇಖಕರ ಇಂತಹ ಪ್ರತಿಭೆಯು ಪ್ರಾದೇಶಿಕ ನೆಲೆಯನ್ನೂ ಮೀರಿ ರಾಷ್ಟ್ರವ್ಯಾಪಿಯಾಗಿ ಪ್ರಭಾವ ಬೀರುವ ಕ್ರಿಯೆ ಗಮನಾರ್ಹವಾದುದು.

### ೪. ರಾಷ್ಟ್ರೀಯ ಪ್ರಜ್ಞೆ ಮತ್ತು ಭಗವದ್ಗೀತೆ: ಗೀತೆಗೆ ಹಲವು ವ್ಯಾಖ್ಯೆಗಳು ಏಕೆ ?

ರಾಷ್ಟ್ರೀಯ ಹೋರಾಟದ ಸಂದರ್ಭದ ಮುಖ್ಯ ಚಿಂತಕರು ಭಗವದ್ಗೀತೆಯನ್ನು ಹಲವು ವ್ಯಾಖ್ಯೆಗಳಿಗೆ ಈ ಕಾಲಮಾನದಲ್ಲಿ ಗುರಿಪಡಿಸಿದ್ದಾರೆ. ಹೀಗೆ ಒಂದೇ ಕಾಲಮಾನದಲ್ಲಿ ಗೀತೆ ಹಲವು ವ್ಯಾಖ್ಯೆಗಳಿಗೆ ಒಳಗಾಗಿರುವುದು ವಿಸ್ಮಯವನ್ನುಂಟು ಮಾಡುತ್ತದೆ. ಆ ಮೂಲಕ ಅಂದಿನ ಸ್ವಾತಂತ್ರ್ಯ ಹೋರಾಟದ ಧೋರಣೆಗೆ ಅನುಗುಣವಾಗಿ ಗೀತೆಯನ್ನು ಪುನರ್‌ವ್ಯಾಖ್ಯಾನಗಳಿಗೆ ಅಳವಡಿಸಿರುವುದನ್ನು ಕುತೂಹಲದಿಂದ ಗಮನಿಸಬೇಕಾಗುತ್ತದೆ. ಹಿಂದೂಗಳ ಗಾಢ ಪ್ರೀತಿಯನ್ನೂ ವಿಶ್ವಾಸವನ್ನೂ ಗಳಿಸಿಕೊಂಡ ಗೀತೆಯೂ ಪುನರ್‌ವ್ಯಾಖ್ಯಾನಗಳ ಮೂಲಕ, ವ್ಯಾಖ್ಯಾನಕಾರರು ಅಂದಿನ ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ಭಾರತೀಯ ಮನಸ್ಥಿತಿಗಳನ್ನು ಸಿದ್ಧಗೊಳಿಸಲು ಪ್ರಯತ್ನಿಸುತ್ತಿರುವುದನ್ನು ಅಂತಹ ವ್ಯಾಖ್ಯೆಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಬಾಲಗಂಗಾಧರ ತಿಲಕ್, ಅರವಿಂದರು, ಬಂಕಿಮಚಂದ್ರ ಚಟರ್ಜಿ,

ಲಾಲಾಲಜಪತ್ ರಾಯ್ , ವಿವೇಕಾನಂದ, ಗಾಂಧೀಜಿ, ವಿನೋಬಾ ಭಾವೆ ಗೀತೆಯನ್ನು ವ್ಯಾಖ್ಯಾನಕ್ಕೆ ಒಳಪಡಿಸಿದವರಲ್ಲಿ ಪ್ರಮುಖರು. ಅಸಂಖ್ಯ ಸಂಶಯಗಳಿಗೆ ಒಳಗಾದ ಅರ್ಜುನನ ಅನುಮಾನಗಳನ್ನು ಇಲ್ಲವಾಗಿಸಿದ್ದು ಗೀತೆ. ಅರ್ಜುನನ ಸಂಶಯಗಳನ್ನು ನಿವಾರಿಸುವುದರ ಮೂಲಕ ಕೃಷ್ಣನ ಗೀತೆ ಅವನನ್ನು ಯುದ್ಧಮುಖಿಯನ್ನಾಗಿ ಮಾಡುತ್ತದೆ. ಕೃಷ್ಣನು ಅರ್ಜುನನ ಕರ್ತವ್ಯವನ್ನು ಗೀತೆಯ ಮೂಲಕ ಎಚ್ಚರಿಸುತ್ತ ಮನುಷ್ಯ ಸಂಬಂಧಗಳು, ದೇಹ-ಆತ್ಮಗಳ ಜಿಜ್ಞಾಸೆ,ಕರ್ಮ-ಧರ್ಮಗಳ ಪ್ರಶ್ನೆಗಳನ್ನು ಸ್ಪಷ್ಟಪಡಿಸುತ್ತ, ಅವನ ಗೊಂದಲಗಳಿಗೆ ಸ್ಪಷ್ಟತೆಯನ್ನು ನೀಡುತ್ತಾನೆ. ಹಾಗೆಯೇ ಅರ್ಜುನನ ತಟಸ್ಥ ಸ್ಥಿತಿಯನ್ನು ಎಚ್ಚರಗೊಳಿಸುತ್ತ, ಕರ್ಮಮುಖಿಯನ್ನಾಗಿ ಮಾಡುವುದರ ಮೂಲಕ ಗೀತೆ ಸಾರ್ಥಕಗೊಳ್ಳುತ್ತದೆ. ಅಂತೆಯೇ ತನಗೆ ರಾಜ್ಯ ದೊರೆಯಬೇಕಾದರೆ ಯುದ್ಧಮಾಡಲೇ ಬೇಕಾದ ಅನಿವಾರ್ಯತೆಯ ಅರಿವನ್ನು ಉಂಟು ಮಾಡುವುದರ ಮೂಲಕ, ಕೊಲ್ಲುವುದು ಪಾಪಕರವಲ್ಲವೆಂಬ ಹಾಗೂ ದುಷ್ಟತೆಯನ್ನು ಶಿಕ್ಷಿಸದೆ ಬಿಡುವುದು ಪಾಪವೆಂಬ ವಿಚಾರವನ್ನು ಕೃಷ್ಣನು ಅರ್ಜುನನಿಗೆ ಮನದಟ್ಟು ಮಾಡುತ್ತಾನೆ.

ಗೀತೆ ಒಂದು ರೀತಿಯಲ್ಲಿ ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸುವ, ಅನುಮಾನಗಳನ್ನು ಹೋಗಲಾಡಿಸಿ ವಿವೇಕಗಳನ್ನು ಮೂಡಿಸುವ ಕೃತಿ. ಕೃಷ್ಣ ಗೀತೆಯನ್ನು ಹಾಡುವ ಚಿಂತಕನಾಗಿಯೂ, ಅರ್ಜುನ ಅದನ್ನು ಕೇಳಿ ವಿವೇಕ ಮೂಡಿ ಎಚ್ಚರಗೊಂಡು ಕರ್ತವ್ಯನಿರತನಾಗುವ ಶ್ರೋತೃವಾಗಿದ್ದಾನೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪರಕೀಯರ ಆಕರ್ಷಣೆಗಳಿಗೆ ಹಾಗೂ ಆಘಾತಗಳಿಗೆ ಒಳಗಾದ ಭಾರತೀಯನ ಸಂಶಯಗಳನ್ನು ನಿವಾರಿಸಲು ಗೀತೆಯನ್ನು ಒಂದು ಅಸ್ತ್ರದಂತೆ ವ್ಯಾಖ್ಯಾನಕಾರರು ಬಳಸುತ್ತಾರೆ. ಅಂದು ಯುದ್ಧಭೂಮಿಯಲ್ಲಿ ನಿಂತ ಅರ್ಜುನನ ಸಂಶಯಗಳನ್ನು ಕೃಷ್ಣನು ಸಹಾಯಮಾಡಿದಂತೆ, ಇಂದು ಅಸಂಖ್ಯ ಸಂಶಯಗಳಿಗೆ ಒಳಗಾದ ಮನಸ್ಥಿತಿಯನ್ನು ಭಗವದ್ಗೀತೆ ನಿವಾರಿಸುತ್ತದೆಂದು ಚಿಂತಕರು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ವಿಭಿನ್ನ ಧರ್ಮೀಯರಲ್ಲಿ ಸಾಮರಸ್ಯವನ್ನುಂಟುಮಾಡುವುದು ಅಂದು ಅತ್ಯವಶ್ಯಕವಾಗಿತ್ತು. ಆ ಕೆಲಸವನ್ನು ಭಗವದ್ಗೀತೆಯ ತತ್ತ್ವಗಳನ್ನು ಸಾರ್ವತ್ರಿಕಗೊಳಿಸುವುದರ ಮೂಲಕ ನಿರ್ವಹಿಸುತ್ತಾರೆ. ಅಹಿಂಸೆ, ಸತ್ಯ, ಬ್ರಹ್ಮಚರ್ಯ, ಸರ್ವಧರ್ಮ ಸಮನ್ವಯ ಭಾವ, ಸ್ವದೇಶಿ ಹಾಗೂ ಕರ್ಮ ತತ್ವಗಳನ್ನು ಹೊಸ ವ್ಯಾಖ್ಯಾನಗಳಿಗೆ ಗುರಿಪಡಿಸುವುದರ ಮೂಲಕ ಧರ್ಮ ಸಾಮರಸ್ಯ ಹಾಗೂ ಕ್ರಿಯಾಶೀಲತೆಯನ್ನು ಎಚ್ಚರಿಸಲು ಅಂದಿನ ಚಿಂತಕರು ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಅಂದರೆ ಕೇವಲ ಗೀತೆಯನ್ನು ಹಿಂದೂ ಧರ್ಮದ ನೆಲೆಯಲ್ಲಿ ಮಾತ್ರ ಅರ್ಥೈಸದೆ ಇಸ್ಲಾಂ, ಜೈನ, ಬೌದ್ಧ, ಕ್ರೈಸ್ತ ಮೊದಲಾದ ಭಿನ್ನ ಧರ್ಮಗಳ ವಿಚಾರಧಾರೆಯನ್ನು ಒಳಗೊಂಡ ಕೃತಿ ಎಂಬ ವಿಚಾರವನ್ನು ಸ್ಪಷ್ಟಪಡಿಸುತ್ತ ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ರಾಷ್ಟ್ರೀಯ ಮನಸ್ಥಿತಿಯನ್ನು ಎಚ್ಚರಗೊಳಿಸುವ ಅವಶ್ಯಕತೆಯನ್ನು ಇಲ್ಲಿ ಕಾಣುತ್ತೇವೆ. ಭಗವದ್ ಗೀತೆಯಲ್ಲಿರುವ ವಾಕ್ಯಗಳಿಗೆ ಯಾವೊಬ್ಬ ಮುಸಲ್ಮಾನನೂ ವಿರೋಧ ಮಾಡಲಾರ [೧೨]. ಪ್ರಕೃತದಲ್ಲಿ ನಿನ್ನ ಧರ್ಮದಲ್ಲಿ ಅನುರಕ್ತನಾಗಿ ಧರ್ಮ ಮಾಡು, ಪಾಪ ಬರುವುದೆಂದು ಹೆದರಬೇಡ. ಆ ಕರ್ತವ್ಯಗಳು ನಿನ್ನ ಧರ್ಮಗಳಾಗಿದ್ದರೆ, ರಾಗ ದ್ವೇಷಗಳ ಅಥವಾ ಪ್ರಾಪಂಚಿಕ ಲಾಭದ ಆಸೆಯಿಂದ ಮಾಡದವುಗಳಾಗಿದ್ದರೆ ನಿನಗೆ ಯಾವ ಪಾಪವೂ ಇಲ್ಲ. ಇದೇ ಭಗವದ್ಗೀತೆಯ ತಿರುಳು [೧೩]. ಇಲ್ಲಿ ಧರ್ಮ ಎಂಬುದುನ್ನು ದೇಶದ ಸ್ವಾತಂತ್ರ್ಯ ಪಡೆಯುವುದೇ ಧರ್ಮ ಎಂದು ತಿಳಿದಂತಿದೆ. ಅಂತೆಯೇ ಅಂತಹ ಧರ್ಮ ಸಂಪಾದನೆಗೆ ನೀನು ಮಾಡುವ ಯಾವುದೇ ಕೆಲಸ ಪಾಪವಲ್ಲವೆಂಬ

ಮನೋಭಾವವನ್ನು, ಅಂತಹ ಕರ್ಮದ ಸಾರ್ಥಕತೆಯನ್ನು ಸ್ಪಷ್ಟಪಡಿಸುವ ಕೆಲಸ ಇಂತಹ ವ್ಯಾಖ್ಯಾನಗಳ ಹಿಂದಿದೆ. ಈ ಮಾತುಗಳನ್ನು ಲಾಲಾ ಲಜಪತ ರಾಯರ ಮಾತುಗಳಿಂದಲೇ ಸ್ಪಷ್ಟಪಡಿಸಬಹುದು.

> ದೇಶದ ಏಳಿಗೆಗೂ ವೈಭವಕ್ಕೂ ಕೃಷ್ಣನಂತಹ ಜ್ಞಾನಿಯೂ ಅರ್ಜುನನಂತಹ ಧೀರನೂ ಬೇಕು. ಎರಡರಲ್ಲಿ ಒಂದು ಇಲ್ಲದಿದ್ದರೂ ದೇಶಕ್ಕೆ ಕುಂದಕ. ಇದೇ ಗೀತೆಯ ಬೋಧನೆಯ ಅನಿವಾರ್ಯದ ತತ್ವ. ಅನಾಸಕ್ತನಾಗಿ ಕರ್ಮ ಮಾಡಬೇಕು. ಯಾವ ಕಷ್ಟ ಬಂದರೂ ತನ್ನ ಕರ್ಮವನ್ನು ಬಿಡಬಾರದು. ಮಾಡಿಯೇ ತೀರಬೇಕು. ಕೃಷ್ಣನ ಅನುಯಾಯಿಗಳಾದ ನಮಗೆ ಈಗ ಅಧೋಗತಿ ನಿರಾಶೆ ನಿರುತ್ಸಾಹ ಧೈರ್ಯಹೀನತೆ ಸುಖಾಭಿಲಾಷೆ, ಹೇಗಾದರೂ ಜೀವಿಸಿದ್ದರೆ ಸಾಕು ಎಂಬ ಭಾವವೂ, ಭಯವೂ ಹಿಂದೆಂದೂ ಇಲ್ಲದಿದ್ದಷ್ಟು ಪ್ರಾಪ್ತವಾಗಿದೆ. ಈ ಸಂದೇಶ ಈಗ ನಮಗೆ ಬೇಕು. ಈಗ ಆ ಸಂದೇಶವನ್ನು ನಾವು ಧ್ಯಾನಿಸೋಣ. ನಮ್ಮ ಹೇಡಿತನ ಪಲಾಯನವಾಗುವುದು. ಧೈರ್ಯ ಸಾಹಸಗಳು ನಮ್ಮ ನಮ್ಮ ಮೈಗೂಡುವುವು. ನಮ್ಮ ದೇಶ ಹಿಂದಲ ವೈಭವವನ್ನು ಹೊಂದುವುದು..... ನಮ್ಮ ಶತ್ರುಗಳು ಎಷ್ಟೇ ಬಲಶಾಲಿಗಳಾದರೂ ಭಯವಿಲ್ಲ. ಭೀಷ್ಮ ದ್ರೋಣರಂತಹ ಅತಿರಥ ಮಹಾರಥರು ಅರ್ಜುನನನ್ನು ಎದುರಿಸಲಿಲ್ಲವೆ?[೧೪].

ಈ ಮೇಲಿನ ಉದ್ಧರಣೆ ಗೀತಾವ್ಯಾಖ್ಯಾನಗಳ ಕೆಲವು ಉದ್ದೇಶಗಳನ್ನಾದರೂ ಸ್ಪಷ್ಟಪಡಿಸುತ್ತದೆ. ಒಟ್ಟಿನಲ್ಲಿ ೧೯ನೇ ಶತಮಾನದಲ್ಲಿ ಭಾರತದ ರಾಷ್ಟ್ರೀಯ ಮುಖಂಡರಿಗೆ ಗೀತೆ ಮಾರ್ಗದರ್ಶಿಯಾಗಿದೆ. ನಿರ್ವೀರ್ಯನಾದ ಅರ್ಜುನನನ್ನು ಗೀತೆಯ ಉಪದೇಶ ಅವನೊಳಗಿನ ವಿವೇಕವನ್ನು ಎಚ್ಚರಗೊಳಿಸುವುದರ ಮೂಲಕ ಚೈತನ್ಯವನ್ನುಂಟು ಮಾಡಿ ಧರ್ಮ ಯುದ್ಧಕ್ಕೆ ಅಣಿಗೊಳಿಸಿ ಜಯಶೀಲನನ್ನಾಗಿ ಮಾಡಿತು. ಅಂತೆಯೇ ಗೀತೆ ಪರಕೀಯರ ಆಕ್ರಮಣಕ್ಕೆ ಸಿಕ್ಕಿ ದಿಕ್ಕು ತಪ್ಪಿರುವ ಭಾರತೀಯನ ಸ್ಥಿತಿಯು ಅರ್ಜುನನ ಸ್ಥಿತಿಯಂತೆಯೇ ಇದೆ. ಅಂತಹ ಸಂದೇಹಾತೀತ ಭಾರತೀಯನ ಮನಸ್ಥಿತಿಗೆ ಗೀತೆ ಒಂದು ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತದೆಂದು, ಪ್ರತಿಯೊಬ್ಬನಲ್ಲಿ ಅನುಮಾನಗಳು, ಗೊಂದಲಗಳು ಎದುರಾದಾಗ ಗೀತೆಯ ಮೊರೆ ಹೋಗಬೇಕೆಂದು ಅಂದಿನ ಚಿಂತಕರು ಒತ್ತಿ ಹೇಳುತ್ತಾರೆ. ತನಗೊದಗಿದ ಅನುಮಾನಗಳ ಪರಿಹಾರವನ್ನು, ತಾವು ಕಂಡುಕೊಂಡ ಸತ್ಯಗಳನ್ನು ತಮ್ಮ ವ್ಯಾಖ್ಯಾನಗಳಲ್ಲಿ ದಾಖಲಿಸುತ್ತ ಅಂದಿನ ಜನತೆಯನ್ನು ಎಚ್ಚರಿಸುವ ಕೆಲಸದಲ್ಲಿ ಇಂತಹ ವ್ಯಾಖ್ಯಾನಗಳು ಮಹತ್ವದ ಪಾತ್ರವನ್ನು ವಹಿಸಿವೆ.

### ೫. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ : ಸ್ವದೇಶಿ ಚಳವಳಿಗಳ ಆರಂಭ

ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಗೆ ಅನೇಕ ಬಗೆಯ ಸ್ಥಳೀಯ ದಂಗೆಗಳು ಎದುರಾದವು. ಆದರೆ ಈಸ್ಟ್ ಇಂಡಿಯಾ ಕಂಪನಿ ಆಳ್ವಿಕೆಯ ವಿರುದ್ಧ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಭಾರತದ ಸ್ವಾತಂತ್ರ್ಯಕ್ಕೆ ಅಗತ್ಯವಾದ ಐಕ್ಯಮತ್ಯವನ್ನು ಉಂಟು ಮಾಡುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ಆ ಕಾಲಮಾನದಲ್ಲಿ ಸಾಮ್ರಾಜ್ಯಶಾಹಿ ಆಡಳಿತದಲ್ಲಿನ ತಾರತಮ್ಯ ಹಾಗೂ ಜನಾಂಗಿಕ ತಾರತಮ್ಯಗಳು ಭಾರತೀಯರ ಬದುಕಿನಲ್ಲಿ ಆಘಾತವನ್ನುಂಟು ಮಾಡಿದ್ದವು. ಅಂತೆಯೇ ಭಾರತೀಯ ಸಾಮಾಜಿಕ, ಧಾರ್ಮಿಕ ನಂಬಿಕೆಗಳನ್ನು ಕಟುವಾಗಿ

ಟೀಕಿಸಿದ್ದು, ಅಂತಹ ಟೀಕೆಗಳು ಉಂಟು ಮಾಡಿದ ಅವಮಾನಗಳಿಗೆ ಎದುರಾದ ಆತ್ಮಗೌರವದ ಪ್ರತೀಕದಂತೆಯೂ ಈ ಚಳವಳಿ ರೂಪ ತಾಳಿತು. ಬಹು ಹಿಂದಿನಿಂದಲೂ ಹಿಂದೂ-ಮುಸ್ಲಿಂರಲ್ಲಿದ್ದ ಮತೀಯ ಭಾವನೆಗಳು ಈ ದಂಗೆಯ ಸಂದರ್ಭದಲ್ಲಿ ಗೌಣವಾಗಿ, ತಮ್ಮ ನಡುವಿನ ಭಿನ್ನತೆಗಳನ್ನು ಮರೆತು ತಮ್ಮಿಬ್ಬರ ಶತ್ರುವಿಗಾಗಿ ಹೋರಾಡಿದ್ದು ಈ ದಂಗೆಯ ವಿಶಿಷ್ಟತೆಗಳಲ್ಲೊಂದು. ಬ್ರಿಟಿಷ್ ಸಾಮ್ರಾಜ್ಯದ ತಂತ್ರಕ್ಕೆ ಈ ದಂಗೆ ಬಲಿಯಾದರೂ ಜನರಲ್ಲಿ ಹೋರಾಟದ ಮನೋಭಾವವನ್ನು ಉಂಟುಮಾಡಿತು.

ವಸಾಹತುಶಾಹಿಯ ತಂತ್ರದಿಂದ ವಿಫಲವಾದ ೧೮೫೭ರ ಕ್ರಾಂತಿಯ ದೌರ್ಬಲ್ಯಗಳನ್ನು ಅರಿತ ಅಂದಿನ ಭಾರತೀಯ ಹೋರಾಟಗಾರರು ತಮ್ಮ ಪ್ರತಿಭಟನೆಗೆ ಹೊಸ ಮಾರ್ಗಗಳನ್ನು ಶೋಧಿಸುವುದರ ಕಡಗೆ ಮುಖ ಮಾಡಿದರು. ಅದರಲ್ಲಿಯೂ ಭಾರತೀಯ ವಿದ್ಯಾವಂತ ಪ್ರಗತಿಪರರು ವಸಾಹತುಶಾಹಿ ಸಂಸ್ಕೃತಿಯ ಶೋಷಣೆಯ ಮುಖಗಳನ್ನು ವಿಶ್ಲೇಷಣೆಗೆ ಗುರಿಪಡಿಸುತ್ತ ಜನತೆಗೆ ಅದರ ಅರಿವನ್ನು ಉಂಟು ಮಾಡುವುದರ ಮೂಲಕ ಹೊಸ ಎಚ್ಚರ ಮೂಡಿಸುವ ಚಟುವಟಿಕೆಗಳಲ್ಲಿ ತೊಡಗಿದರು. ರಾಜಾರಾಮ್ ಮೋಹನರಾಯ್, ದಾದಾಬಾಯಿನವರೋಜಿ, ರಾನಡೆ ಮುಂತಾದವರು ಬ್ರಿಟೀಷ್ ಪ್ರಗತಿ ವಿರೋಧಿ ಧೋರಣೆಗಳನ್ನು ಆರ್ಥಿಕ ನೆಲೆಯಲ್ಲಿ ವಿಶ್ಲೇಷಣೆಗೆ ಗುರಿಪಡಿಸಿದರು. ಆಯುಧಗಳ ಕಾಯಿದೆ, ಭಾರತೀಯ ಗೃಹ ಕೈಗಾರಿಕೆಗಳ ಮೇಲೆ ಸಾಧಿಸಿದ ಹಿಡಿತ, ಪತ್ರಿಕಾ ಸ್ವಾತಂತ್ರ್ಯಕ್ಕೆ ತಂದ ಧಕ್ಕೆ, ಬ್ರಿಟಿಷ್ ಆಡಳಿತಗಾರರ ದುಂದುವೆಚ್ಚ, ಉದ್ಯೋಗಾವಕಾಶಗಳಲ್ಲಿ ತೋರಿದ ತಾರತಮ್ಯಗಳನ್ನು ಈ ಮೇಲಿನ ಚಿಂತಕರು ವಿಮರ್ಶಿಸುವುದರ ಮೂಲಕ ವಸಾಹತುಶಾಹಿಯ ಆಳ್ವಿಕೆಯ ಸುಲಿಗೆ ಮತ್ತು ಅದರ ಸ್ವರೂಪವನ್ನು ಬಯಲಿಗೆಳೆದು, ಸ್ವದೇಶಿ ಚಳವಳಿಗೆ ಅಗತ್ಯವಾದ ಮನಸ್ಥಿತಿಯನ್ನು ಭಾರತೀಯರಲ್ಲಿ ರೂಪಿಸಲು ನೆರವಾದರು. ೧೮೮೫ರಲ್ಲಿ 'ಭಾರತ ರಾಷ್ಟ್ರೀಯ ಕಾಂಗ್ರೆಸ್'ನ್ನು ಸ್ಥಾಪಿಸುವುದರ ಮೂಲಕ ಅಂತಹ ಮನಸ್ಥಿತಿಯನ್ನು ರೂಪಿಸಲು ಪ್ರಯತ್ನಿಸಿದರು. ಅಂತೆಯೇ ರಾಷ್ಟ್ರದ ರಾಜಕೀಯ ವಿಮೋಚನೆಗಾಗಿ ಅಗತ್ಯವಾದ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಭಾರತೀಯರನ್ನು ಒಂದುಗೂಡಿಸುವ ಕೆಲಸವನ್ನು ಈ ಸಂಸ್ಥೆ ನಿರ್ವಹಿಸಿತು.

> ಭಾರತೀಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸಾಧನವಾಗಿ ಸ್ವದೇಶಿ ಭಾವನೆಯನ್ನು ಅವರು ಜನಪ್ರಿಯಗೊಳಿಸಿದರು. ಅನೇಕಾನೇಕ ಸ್ವದೇಶಿ ಮಾರಾಟದ ಮಳಿಗೆಗಳನ್ನು ತೆರೆಯಲಾಯಿತು... ಆಮದುಗಳ ಮೇಲೆ ಸುಂಕವನ್ನು ತೆಗೆದುಹಾಕಿದುದರ ವಿರುದ್ಧವಾಗಿ ೧೮೭೫ ರಿಂದ ೧೮೮೦ರವರೆಗೆ ಮತ್ತು ಹತ್ತಿಯ ಮೇಲೆ ಎಕ್ಸೈಸ್ ತೆರಿಗೆ ವಿಧಿಸಿದುದರ ವಿರುದ್ಧ ೧೮೯೪ರಲ್ಲಿ ಮತ್ತು ೧೮೯೬ರಲ್ಲಿ ರಾಷ್ಟ್ರೀಯತಾವಾದಿಗಳು ಒಂದು ಬಲಯುತವಾದ ಅಖಿಲ ಭಾರತ ರಾಷ್ಟ್ರೀಯ ಚಳವಳಿಯನ್ನು ವ್ಯವಸ್ಥೆಗೊಳಿಸಿದರು. ದೇಶದಾದ್ಯಂತ ರಾಷ್ಟ್ರೀಯ ಭಾವನೆಗಳನ್ನು ಪ್ರಚೋದಿಸುವುದರಲ್ಲಿ ಮತ್ತು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ನಿಜವಾದ ಧ್ಯೇಯಗಳು ಮತ್ತು ಉದ್ದೇಶಗಳನ್ನು ಕುರಿತು ಜನರಿಗೆ ಶಿಕ್ಷಣ ಕೊಡುವುದರಲ್ಲಿ ಈ ಚಳವಳಿ ಬಹಳ ಮಹತ್ವಪೂರ್ಣ ಪಾತ್ರವಹಿಸಿತು"

ರಾಷ್ಟ್ರೀಯ ಕಾಂಗ್ರೆಸ್ ಆಳ್ವಿಕೆಯ ದಮನಕಾರಿ ನೀತಿಗಳನ್ನು ಜನತೆಯಲ್ಲಿ ತಿಳಿಯಪಡಿಸುವ ಮಹತ್ವದ ಕೆಲಸವನ್ನು ಮಾಡಿತು. ಆಡಳಿತ ಸುಧಾರಣೆಗಳು, ನಾಗರೀಕ ಹಕ್ಕುಗಳಿಗಾಗಿ ಹೋರಾಟ, ಸಂವೈಧಾನಿಕ ಸುಧಾರಣೆ ಮತ್ತು ಸ್ವಯಂ ಆಡಳಿತದ ಬಯಕೆಗಳನ್ನು ಜನತೆ ಹಾಗೂ ಆಂಗ್ಲರ ಆಡಳಿತದ ಮುಂದಿಡುತ್ತಾ, ರಾಷ್ಟ್ರವ್ಯಾಪಿ ಮುನ್ನಡೆಸಿದ ಚಳವಳಿಯು ಬ್ರಿಟಿಷ್ ಸರ್ಕಾರಕ್ಕೆ ಬಹಳ ತೊಡಕಾಗಿಯೇ ಕಾಣಿಸಿತು. ಪ್ರಬಲವಾಗಿ ರೂಪತಾಳುತ್ತಿದ್ದ ರಾಷ್ಟ್ರೀಯ ಚಳವಳಿಯನ್ನು ಬ್ರಿಟಿಷರು ತಮ್ಮ 'ಒಡೆದು ಆಳು'ವ ನೀತಿಯಿಂದ ಭಗ್ನಗೊಳಿಸಿದರು. ಮೊದಲ ಸ್ವಾತಂತ್ರ್ಯ ಸಂಗ್ರಾಮ ಮೊದಲಾದ ಸಂದರ್ಭಗಳಲ್ಲಿ ಒಂದುಗೂಡಿಸಿ ತಾತ್ಕಾಲಿಕ ಹಿಂದೂ-ಮುಸ್ಲಿಂ ಬಾಂಧವ್ಯ ಬಿರುಕು ಬಿಟ್ಟಿತು. ಹಿಂದೂ-ಮುಸ್ಲಿಂರಲ್ಲಿ ಮತ್ತೆ ದ್ವೇಷ-ಅಸೂಯೆಗಳನ್ನು ಮರುಕಳಿಸುವಂತೆ ಮಾಡುವುದರ ಮೂಲಕ ಆಂಗ್ಲರ ಸರಕಾರ ರಾಷ್ಟ್ರೀಯ ಕಾಂಗ್ರೇಸ್‌ನಲ್ಲಿನ ಕಾರ್ಯ ಚಟುವಟಿಕೆಗಳಿಗೆ ದೊಡ್ಡ ತೊಡಕುಂಟು ಮಾಡಿತು.

## ೬. ಗಾಂಧಿ : ಸ್ವದೇಶಿ - ಆಗಮನ

ತಿಲಕ್‌ರಂತಹ ಹೋರಾಟಗಾರರು ರಾಷ್ಟ್ರೀಯ ಭಾವನೆಗಳನ್ನು ಜನರಲ್ಲಿ ಪ್ರಚುರಗೊಳಿಸುವುದಕ್ಕಾಗಿ ಸಾಂಪ್ರದಾಯಿಕವಾದ 'ಗಣೇಶನ ಉತ್ಸವ', 'ಶಿವಾಜಿ ಜಯಂತಿ'ಗಳನ್ನು ವ್ಯವಸ್ಥೆಗೊಳಿಸಿದ್ದು ಹಿಂದೂ-ಮುಸ್ಲಿಂರ ನಡುವಣ ಬಿರುಕುಗಳಿಗೆ ಕಾರಣವಾಗಿ ಪರಿಣಮಿಸಿತು. ಇಂತಹ ಅವಕಾಶವನ್ನೇ ಚೆನ್ನಾಗಿ ಬಳಸಿಕೊಂಡ ಆಂಗ್ಲಸರ್ಕಾರ 'ಬಂಗಾಳ'ದಂತಹ ಪ್ರಗತಿಪರ ಧ್ಯೇಯಗಳ ಪ್ರದೇಶವನ್ನು ವಿಭಜಿಸುವುದರ ಮೂಲಕ ರಾಷ್ಟ್ರೀಯ ಚಳವಳಿಯ ಒಂದು ಶಕ್ತಿಯನ್ನೇ ಒಡೆದು ದುರ್ಬಲಗೊಳಿಸಿತು. ಹಿಂದೂ ಮುಸ್ಲಿಂ ಮತ್ತು ಬಂಗಾಳ ಪ್ರದೇಶದ ಬಿರುಕುಗಳನ್ನು ಒಂದುಗೂಡಿಸಲು ಪ್ರಯತ್ನಗಳು ಆ ಕಾಲದಲ್ಲಿ ನಡೆದವಾದರೂ ಕಾರ್ಯರೂಪಕ್ಕೆ ಬಾರದೇ ಹೋದದ್ದು ದುರಂತವೆನ್ನಬಹುದು. ಇಂಗ್ಲಿಶರ ಹಡಗಿನಲ್ಲಿ ತೂತು ಮಾಡಿದಂತೆ ವಂಗಭಂಗ ನಮ್ಮೊಳಗೂ ಒಡಕನ್ನು ಮಾಡಿತು. ಮಹಾಘಟನೆಗಳ ಪರಿಣಾಮವು ಮಹತ್ವರವೇ[೧೬]. ಬಂಕಿಮಚಂದ್ರ, ರವೀಂದ್ರನಾಥಠಾಕೂರ್ ರಂತಹ ಸೃಷ್ಟಿಶೀಲ ಹೋರಾಟಗಾರರು ಇಂತಹ ಸಂದರ್ಭಗಳಲ್ಲಿ ತಮ್ಮ ಸಾಹಿತ್ಯ ಕೃಷಿಯ ಮೂಲಕ ಜನತೆಯಲ್ಲಿ ಐಕ್ಯವನ್ನುಂಟು ಮಾಡಲು ಪ್ರಯತ್ನಿಸಿದರು. ಅಂತೆಯೇ ಆ ಕಾಲದ ಹೋರಾಟಗಾರರು ಹುಟ್ಟು ಹಾಕಿದ ಸ್ವದೇಶಿ ಚಳವಳಿಯು ಹೊಸ ಚಾಲನೆಗಳನ್ನುಂಟು ಮಾಡಿತು. ಆ ಮುಖೇನ ಜಾತಿ-ಪಂಥಗಳ ಭೇದವಿಲ್ಲದೆ ಸಾಧನೆಗೆ ದುಡಿಯುವಂತೆ ಪ್ರೇರೇಪಿಸಿತು.

ವಿದೇಶಿ ವಸ್ತುಗಳ ಬಹಿಷ್ಕಾರ ಮೊದಲಾದ ಕಾರ್ಯಚಟುವಟಿಕೆಗಳ ಮೂಲಕ ಸಾಮ್ರಾಜ್ಯಶಾಹಿ ಸಂಸ್ಕೃತಿಗೆ ಪ್ರತಿಭಟನೆಯನ್ನು ಸ್ವದೇಶಿ ಚಳವಳಿಯು ಎದುರಾಗಿಸಿತು. ಅಂತೆಯೇ ಠಾಕೂರರು ತಮ್ಮ ಕೃತಿಗಳಲ್ಲಿ ಪರಕೀಯ ಸಂಸ್ಕೃತಿಯ ಕುರುಡು ಅನುಕರಣೆಯನ್ನು, ಬ್ರಿಟಿಷ್ ಶಿಕ್ಷಣವನ್ನು ಭಾರತೀಯರು ಅನುಕರಿಸಿದ ರೀತಿ ನೀತಿಗಳನ್ನು ವಿಡಂಬಿಸಿದರು. ಆದರೆ ಈ ಎಲ್ಲ ಪ್ರಯತ್ನಗಳು ಬ್ರಿಟಿಷರ ಒಡೆದು ಆಳುವ ನೀತಿಗೆ ಮತ್ತೊಮ್ಮೆ ಬಲಿಯಾದವು. ಸ್ವಾತಂತ್ರ್ಯನಂತರ (ಧರ್ಮ) ಅಲ್ಪಸಂಖ್ಯಾತರು ಅನುಭವಿಸಬಹುದಾದ ಸಮಸ್ಯೆಗಳನ್ನು ದೊಡ್ಡದು ಮಾಡಿ ಪ್ರಚಾರ ಮಾಡಿದುದು ಇಂತಹ ಬಿರುಕುಗಳಿಗೆ ಕಾರಣವಾಯಿತು. ಇದೇ ಸಂದರ್ಭದಲ್ಲಿ ಹಿಂದೂ ಧರ್ಮದ ಹೋರಾಟಗಾರರ

ಧಾರ್ಮಿಕ ಪಕ್ಷಪಾತದ ನೆಲೆಗಳನ್ನು ಬ್ರಿಟಿಷ್ ಸರ್ಕಾರ ಸೂಕ್ಷ್ಮವಾಗಿ ವಿಶ್ಲೇಷಣೆಗೆ ಗುರಿಪಡಿಸುವುದರ ಮೂಲಕ ಮುಸ್ಲಿಂ ಜನಾಂಗಕ್ಕೆ ಎಚ್ಚರಿಕೆಯನ್ನು ಕೊಡುವ ಕೆಲಸವನ್ನು ನಿರ್ವಹಿಸಿತು. ಇಂತಹ ಕ್ರಿಯೆಗಳಿಂದ ಸ್ವಾತಂತ್ರ್ಯ ಹೋರಾಟಕ್ಕೆ ಅಗತ್ಯವಾದ ಐಕ್ಯತೆಗೆ ಭಂಗವುಂಟಾಯಿತು. ಈ ರೀತಿಯ ಎಲ್ಲ ಗೊಂದಲಗಳಿಗೆ ಹೊಸ ತಿರುವನ್ನು ಕೊಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ಅಗತ್ಯವಾದ ಚಳವಳಿಯನ್ನು ನಿರ್ಮಿಸಬೇಕಾದ ನಾಯಕತ್ವದ ಕೊರತೆ ಎದ್ದು ಕಾಣುವಂತಾಯಿತು. ಅಂತಹ ನಾಯಕತ್ವದ ಕೊರತೆಯನ್ನು ೧೯೧೫ರಲ್ಲಿ ಭಾರತಕ್ಕೆ ಬಂದ ಗಾಂಧೀಜಿಯವರು ತುಂಬುವುದರ ಮೂಲಕ ರಾಷ್ಟ್ರೀಯ ಚಳವಳಿಯನ್ನು ವಿಭಿನ್ನ ರೀತಿಯಲ್ಲಿ ಮುನ್ನಡೆಸಿದರು.ಅವರ ವ್ಯಕ್ತಿತ್ವ ಮತ್ತು ಚಿಂತನೆಗಳು ಜನರನ್ನು ಆಕರ್ಷಿಸಿದವು.ಆ ಮುಖೇನ ಜನಸಾಮಾನ್ಯರೊಂದಿಗೆ ತಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಸಮೀಕರಿಸಿಕೊಳ್ಳುವುದರ ಮೂಲಕ ಜನತೆಯ ಪ್ರೀತಿಯನ್ನು ಗಳಿಸಿದರು.

ಹೋರಾಟಕ್ಕೆ ಅಗತ್ಯವಾದ ಸತ್ಯಾಗ್ರಹವನ್ನು ಗಾಂಧೀಜಿಯವರು ಕ್ರಿಯಾಶೀಲಗೊಳಿಸುವುದರ ಮೂಲಕ ಚಳವಳಿಗೆ ತೊಡಗಿದರು. ಸತ್ಯ ಮತ್ತು ಅಹಿಂಸೆಗಳ ಅರ್ಥ, ಸತ್ಯ ಮತ್ತು ಅಹಿಂಸೆಗಳನ್ನು ಪಾಲಿಸಲು ಅಗತ್ಯವಾದ ಮನಸ್ಥಿತಿ ಸತ್ಯಾಗ್ರಹದ ಶಕ್ತಿ, ಸ್ವದೇಶಿ ನೀತಿಗಳನ್ನು ಜನತೆಗೆ ಪರಿಚಯಿಸುವುದರ ಮೂಲಕ ಅವರಲ್ಲಿ ಹೊಸ ಎಚ್ಚರವನ್ನು ಉಂಟುಮಾಡಿದರು. ಅಂತಹ ಒಂದು ಎಚ್ಚರ ಜನತೆಯಲ್ಲಿ ಉತ್ಸಾಹದ ಅಲೆಯನ್ನು ಉಂಟು ಮಾಡಿತು. ಗಂಡು-ಹೆಣ್ಣು, ಹಿಂದೂ-ಮುಸ್ಲಿಂ, ಸಂಪ್ರದಾಯ ನಿಷ್ಠ ಹಾಗೂ ಪ್ರಗತಿಪರರೆಂಬ ಭೇದ-ಭಾವನೆಗಳಿಲ್ಲದೆ ಸ್ವಾತಂತ್ರ್ಯ ಹೋರಾಟಕ್ಕೆ ಜನತೆ ಸನ್ನದ್ಧಗೊಂಡಿತು. ರಾಷ್ಟ್ರಕ್ಕೋಸ್ಕರ ಪ್ರಾಣವನ್ನು ತ್ಯಾಗ ಮಾಡಲು ಸಿದ್ಧವಾಗಿತ್ತು. ಅಂತಹ ಉತ್ಸಾಹವನ್ನು ಗಾಂಧೀಜಿಯವರು ಜನತೆಯಲ್ಲಿ ಉಂಟು ಮಾಡುವುದರ ಮೂಲಕ ಬ್ರಿಟಿಷ್ ಸಂಸ್ಕೃತಿ ಒಡ್ಡಿದ ಆಕ್ರಮಣಶಾಲಿ ನೆಲೆಗಳಿಗೆ ಅಹಿಂಸೆಯಿಂದಲೇ ಪ್ರತಿರೋಧವನ್ನು ಒಡ್ಡುತ್ತಾ ಸ್ವಾತಂತ್ರ್ಯವನ್ನು ಪಡೆದು ಕೀರ್ತಿ ಅವರದಾಗಿದೆ.

ಪರಕೀಯ ಸಂಸ್ಕೃತಿಯು ಒಡ್ಡಿದ ಸುಮಾರು ಇನ್ನೂರು ವರ್ಷಗಳ ಆಕ್ರಮಣಶೀಲ ಸಂಸ್ಕೃತಿಗೆ ಭಾರತೀಯ ಸಂಸ್ಕೃತಿ ನಿರಂತರವಾಗಿ ಪ್ರತಿಕ್ರಿಯೆಯನ್ನು ತೋರುತ್ತಲೇ ಬಂದಿದೆ. ಅಂತಹ ಪ್ರತಿಕ್ರಿಯೆಯನ್ನು ಆಯಾಕಾಲದ ಮತ್ತು ಆ ನಂತರದ ಸೃಷ್ಟಿಶೀಲ ಕೃತಿಗಳು ದಾಖಲಿಸುತ್ತ ಬಂದಿವೆ. ಅಂತೆಯೇ ಭಾರತೀಯ ಸಾಂಸ್ಕೃತಿಕ ಪರಿಸರವು ಅಂತಹ ಆಕ್ರಮಣಶೀಲ ಸಂಸ್ಕೃತಿಗೆ ಪ್ರತಿರೋಧ ಮತ್ತು ಅನುಸಂಧಾನಗಳನ್ನು ಒಡ್ಡುವುದರ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ದಾಖಲಿಸಿವೆ. ಇಂಥ ಸಾಂಸ್ಕೃತಿಕ ದಾಖಲೆಗಳನ್ನು ಅಧ್ಯಯನಕ್ಕೆ ಒಳಗು ಮಾಡಿಕೊಳ್ಳುವುದರ ಮೂಲಕ ಒಂದು ಸಂಸ್ಕೃತಿಯ ಅನನ್ಯತೆಗಳ ಹುಡುಕಾಟದ ನೆಲಗಳ ಶೋಧ ನಮ್ಮ ಈ ಹೊತ್ತಿನ ಸಾಂಸ್ಕೃತಿಕ ಅಗತ್ಯಗಳಲ್ಲಿ ಮುಖ್ಯವಾದದ್ದಾಗಿದೆ.

**೭.. ವಸಾಹತುಶಾಹಿ : ಕರ್ನಾಟಕದಲ್ಲಿ**

ಟಿಪ್ಪು ನಾಲ್ಕನೆಯ ಮೈಸೂರು ಯುದ್ಧ(೧೭೯೯)ದಲ್ಲಿ ಮರಣವಾದಾಗಲೇ ಮೈಸೂರು ಪ್ರಾಂತ್ಯಕ್ಕೆ ವಸಾಹತುಶಾಹಿಯ ಆಗಮನವಾಯಿತೆನ್ನಬಹುದು. ಟಿಪ್ಪು ದೇಶವನ್ನು ಬ್ರಿಟಿಷ್ ದಾಸ್ಯದಿಂದ ಬಿಡುಗಡೆಗೊಳಿಸಲು ಮಾಡಿದ

ಪ್ರಯತ್ನಗಳೆಲ್ಲವೂ ಸ್ಥಳೀಯ ರಾಜರ ಹಾಗೂ ಬ್ರಿಟಿಷರ ಕುತಂತ್ರಕ್ಕೆ ಬಲಿಯಾದವು. ಬ್ರಿಟಿಷರ ರಾಜಕೀಯ ತಂತ್ರ ಸ್ಥಳೀಯ ರಾಜರ ಸಹಾಯವನ್ನು ಚೆನ್ನಾಗಿಯೇ ಬಳಸಿಕೊಳ್ಳುವುದರ ಮೂಲಕ, ಅಂದರೆ ಬ್ರಿಟಿಷ ಸಾಮ್ರಾಜ್ಯ ನಿಜಾಂ-ಮರಾಠಾ ಮೈತ್ರಿಕೂಟವನ್ನು ಏರ್ಪಡಿಸಿಕೊಂಡು ಟಿಪ್ಪುವನ್ನು ವ್ಯವಸ್ಥಿತವಾಗಿ ಕೊಲ್ಲಲಾಯಿತು.

ಟಿಪ್ಪು ಬ್ರಿಟಿಷರ ವಿರುದ್ಧ ಪ್ರತಿಭಟಿಸುತ್ತಿದ್ದ ಕಾಲಮಾನದಲ್ಲಿಯೆ ಮೈಸೂರು ಅರಸರ ಮನೆತನ ಬ್ರಿಟಿಷರ ಮೊರೆ ಹೋದದ್ದು ಸಂಪೂರ್ಣವಾಗಿ ವಸಾಹತುಶಾಹಿ ತಂತ್ರಗಳಿಗೆ ಮೈಸೂರು ಪ್ರಾಂತ್ಯವನ್ನು ಬಲಿ ಕೊಟ್ಟಂತಾಯಿತು. ಮೈಸೂರು ಅರಸು ಮನೆತನದ ದೌರ್ಬಲ್ಯವನ್ನು ಅರಿತ ಬ್ರಿಟಿಷ ಸಾಮ್ರಾಜ್ಯಶಾಹಿ ನೀತಿಯು ಅರಸರನ್ನು ಸಂಪೂರ್ಣವಾಗಿ ಅತಂತ್ರಗೊಳಿಸುವುದರ ಮೂಲಕ ಕೈ ಗೊಂಬೆಗಳನ್ನಾಗಿ ಮಾಡಿಕೊಂಡಿತು. ಮೈಸೂರು ಮನೆತನದ ಇಂತಹ ದುರಂತ ನಿರ್ಧಾರಗಳಿಂದಾಗಿ ಆ ಪ್ರಾಂತ್ಯವು ಯಾವುದೇ ತಕರಾರುಗಳೂ ಪ್ರತಿರೋಧಗಳೂ ಇಲ್ಲದೆ ಅತಿ ಶೀಘ್ರವಾಗಿ ಬ್ರಿಟಿಷರ ಹಿಡಿತಕ್ಕೆ ಒಳಪಟ್ಟಿತು. ಇದರಿಂದ ಅವರ ಪ್ರಭಾವ ಕರ್ನಾಟಕದಲ್ಲಿ ಪ್ರಬಲಗೊಳ್ಳುವಂತಾಯಿತು. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡಗು, ಹಳೆಯ ಮೈಸೂರು, ದಕ್ಷಿಣ ಕನ್ನಡ ಅಂದರೆ ಅಖಂಡ ಕರ್ನಾಟಕದ ಸಂದರ್ಭದಲ್ಲಿಯೂ ಈ ಮಾತು ನಿಜ. ಹೀಗೆ ಎರಡು ಶಕ್ತಿಗಳು ಏಕಕಾಲದಲ್ಲಿ ಆಡಳಿತವನ್ನು ನಡೆಸಲು ಮುಂದಾದಾಗ ಗೊಂದಲಗಳು ಏರ್ಪಟ್ಟು, ಸಾಮಾಜಿಕ, ರಾಜಕೀಯ ಹಾಗೂ ಕೃಷಿ ವಲಯಗಳಲ್ಲಿ ಕ್ರಾಂತಿಯೇ ಆಯಿತೆನ್ನಬಹುದು.

ಈಸ್ಟ್ ಇಂಡಿಯಾ ಕಂಪನಿಯು ಜಾರಿಗೊಳಿಸಿದ ತೆರಿಗೆ, ನ್ಯಾಯ ಪದ್ಧತಿ, ಆರ್ಥಿಕ ಸುಧಾರಣೆಗಳು ಸ್ಥಳೀಯರನ್ನು ಸಂಕಷ್ಟಗಳಿಗೆ ಗುರಿಮಾಡಿದವು. ಅಲ್ಲದೆ, ಬ್ರಿಟಿಷರು ಒಡ್ಡಿದ ತೆರಿಗೆ, ಕಪ್ಪಗಳನ್ನು ಸ್ಥಳೀಯರಿಂದ ವಸೂಲಿ ಮಾಡಿ ಕೊಡುವುದು ದಾಸ್ಯವನ್ನು ಸ್ವೀಕರಿಸಿದ ಮೈಸೂರು ಅರಸರಿಗೆ ಸುಲಭದ ಕೆಲಸವಾಗಿರಲಿಲ್ಲ. ಸ್ಥಳೀಯ ಸಂಪನ್ಮೂಲಗಳಿಂದಲೇ ಬ್ರಿಟಿಷರಿಗೆ ಪ್ರತಿ ವರ್ಷ ಕೊಡಬೇಕಾಗಿದ್ದ ಅಪಾರ ಮೊತ್ತದ ಕಾಣಿಕೆಗಳನ್ನು ಒದಗಿಸಿ ಕೊಡಬೇಕಾಗಿತ್ತು. ಅಂತೆಯೇ ದತ್ತು ಮಕ್ಕಳಿಗೆ ಹಕ್ಕಿಲ್ಲ, ನಿರಾಯುಧ ಕಾಯಿದೆ ಮೊದಲಾದ ಕಾಯಿದೆಗಳು ಸ್ಥಳೀಯರನ್ನು ದುರ್ಬಲಗೊಳಿಸಿದವು. ಇಂತಹ ಧೋರಣೆ, ನೀತಿಗಳು ಸ್ಥಳೀಯ ನಾಯಕರನ್ನು ರೊಚ್ಚಿಗೆಬ್ಬಿಸಿದವು. ಧೊಂಡಿಯಾವಾಘ್, ಐನೂರು ವೆಂಕಟಾದ್ರಿ ನಾಯಕ ಮೊದಲಾದವರಿಗೆ ಬ್ರಿಟಿಷರ ಪ್ರಭಾವವು ಮೈಸೂರು ಪ್ರಾಂತ್ಯದಲ್ಲಿ ಪ್ರಬಲವಾಗಬಾರದೆಂಬ ಆಶಯವಾಗಿತ್ತು. ಅದರಲ್ಲಿಯೂ ಪರಾಕ್ರಮಿ ಹಾಗೂ ಆಕ್ರಮಣಶೀಲನಾದ ಧೊಂಡಿಯವಾಘನು ಬ್ರಿಟಿಷರಿಗೆ ತೊಡಕಾಗಿಯೇ ಕಾಣಿಸಿದನು. ಈ ಕಾಲಮಾನದಲ್ಲಿ ಕರ್ನಾಟಕದಲ್ಲಿ ಅನೇಕ ಬಂಡಾಯಗಳು ನಡೆದವು. ಕಿತ್ತೂರು, ಸಂಗೊಳ್ಳಿ, ಶಿಂದಗಿ, ಸುರಪುರ, ದಕ್ಷಿಣ ಕನ್ನಡ, ಕೊಡಗು ಮತ್ತು ರೈತ ಬಂಡಾಯಗಳು ಅವುಗಳಲ್ಲಿ ಮುಖ್ಯವಾದವು. ಆದರೆ, 'ಒಡೆದು-ಆಳುವ' ಆಂಗ್ಲರ ನೀತಿ ಇಲ್ಲಿಯೂ ಚೆನ್ನಾಗಿಯೇ ಫಲಿಸಿತು. ಆದರೂ ಇಂತಹ ಸ್ಥಳೀಯ ನಾಯಕರ ಬಂಡಾಯಗಳು ಸ್ಥಳೀಯರಲ್ಲಿ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವ ಮನಸ್ಥಿತಿಯನ್ನು ಉಂಟುಮಾಡಿದವೆನ್ನಬಹುದು. ಇಂತಹ ದಂಗೆಗಳ ಅನನ್ಯತೆ, ಹೋರಾಟಗಾರರ ವೀರತ್ವ, ತ್ಯಾಗ ಜೀವನ ಹಾಗೂ ಆಂಗ್ಲರ ಸಾಮ್ರಾಜ್ಯಶಾಹಿ ನೀತಿಯ ಬಗೆಗೆ ಅವರು ತೋರಿದ ಪ್ರತಿರೋಧ ಗಮನಾರ್ಹವಾದುದು.

ಇದೇ ಕಾಲಮಾನದಲ್ಲಿ ರೂಪುಗೊಳ್ಳುತ್ತಿದ್ದ ೧೮೫೭ರ ಪ್ರಥಮ ರಾಷ್ಟ್ರೀಯ ಸಂಗ್ರಾಮ ಇಂತಹ ಪ್ರಾದೇಶಿಕ ದಂಗೆಗಳ ಮೇಲೆ ನೇರ ಪ್ರಭಾವವನ್ನುಂಟು ಮಾಡದಿದ್ದರೂ ಒಂದು ಬಗೆಯ ಸ್ಫೂರ್ತಿ ನೀಡಿತು. ಪರೋಕ್ಷವಾಗಿ ಸಿಕ್ಕ ಈ ಪ್ರಭಾವವನ್ನು ಉಪಯೋಗಿಸಿಕೊಂಡ ಸ್ಥಳೀಯ ದಂಗೆಗಳು ರಾಷ್ಟ್ರವ್ಯಾಪಿ ಹರಡಿಕೊಳ್ಳುವುದರ ಮುಖೇನ ಬ್ರಿಟಿಷ ಸಾಮ್ರಾಜ್ಯದ ಮೇಲೆ ಮಹತ್ವದ ಪರಿಣಾಮವನ್ನು ಬೀರಿದವು.ಹೀಗೆ ಆಂಗ್ಲರು ನಮ್ಮ ರಾಷ್ಟ್ರವನ್ನು ಆಕ್ರಮಿಸಿ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ನೆಲೆಗಳನ್ನು ಆಘಾತಕ್ಕೆ ಗುರಿಮಾಡುತ್ತಿದ್ದ ಸಂದರ್ಭದಲ್ಲಿ ಭಾರತೀಯ ಸಾಂಸ್ಕೃತಿಕ ಪರಿಸರವೂ ತನ್ನದೇ ಆದ ಪ್ರತಿರೋಧವನ್ನು ತೋರಿರುವುದನ್ನು ಆ ಕಾಲದ ಅನೇಕ ದಾಖಲೆಗಳು ಮನದಟ್ಟುಮಾಡುತ್ತವೆ. ಆ ಕಾಲಮಾನದಲ್ಲಿ ರಚಿತಗೊಂಡಿರುವ ಸಾಹಿತ್ಯ ಕೃತಿಗಳಾದ ತತ್ವಪದ, ಹಾಡು, ಲಾವಣಿಗಳು ಹೋರಾಟದ ಪ್ರಮುಖ ಘಟನೆ, ಸನ್ನಿವೇಶಗಳನ್ನು ದಾಖಲಿಸುವುದರ ಜೊತೆಗೆ ಸ್ವಾತಂತ್ರ್ಯ ಹೋರಾಟದ ಪ್ರಚಾರ, ಪ್ರೇರಣೆಗಳನ್ನೂ ಉಂಟು ಮಾಡಿವೆ.

ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ, ಸುರಪುರದ ವೆಂಕಟಪ್ಪನಾಯಕ, ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾಯ, ಹಲಗಲಿಯ ಬೇಡರ ಪ್ರತಿಭಟನೆಗಳನ್ನು ಒಳಗೊಂಡ ಲಾವಣಿ ಸಾಹಿತ್ಯ ನಿರ್ಮಾಣವಾಗಿದೆ. ಅಂತೆಯೇ ರಾಷ್ಟ್ರ ನಾಯಕರ ಹಾಗೂ ರಾಷ್ಟ್ರೀಯ ಚಳವಳಿಯ ಘಟನೆಗಳನ್ನು, ಬ್ರಿಟಿಷ ಸಾಮ್ರಾಜ್ಯಶಾಹಿಯ ಕ್ರೂರ ಕ್ರಮಗಳನ್ನು ಕುರಿತು ಆ ಕಾಲಮಾನದಲ್ಲಿ ವಿಪುಲವಾಗಿ ಮೌಖಿಕಸಾಹಿತ್ಯ ನಿರ್ಮಾಣವಾಗಿದೆ. ಇಂತಹ ಸಾಹಿತ್ಯ ಕೃತಿಗಳು ಮುಖ್ಯವಾಗಿ ಸ್ಥಳೀಯ ಹೋರಾಟದ ಮಾದರಿ ಹಾಗೂ ಭಾರತೀಯ ಸ್ವಾತಂತ್ರ್ಯದ ಹೋರಾಟದಲ್ಲಿ ಅಂತಹ ಹೋರಾಟಗಾರರು ಅಂದು ವಹಿಸಿದ ಮಹತ್ವವಾದ ಪಾತ್ರವನ್ನು ತಿಳಿಯಲು ಉಪಯುಕ್ತ ಸಾಂಸ್ಕೃತಿಕ ದಾಖಲೆಗಳಾಗಿವೆ ಈ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ನೋಡಿ ಅನುಬಂಧ.

ರಾಷ್ಟ್ರೀಯ ಚರಿತ್ರೆಕಾರರು ಇದುವರೆಗೂ ನಿರ್ಲಕ್ಷಿಸಿದ್ದ ಚರಿತ್ರೆಯನ್ನು ಇಂತಹ ಕೃತಿಗಳ ಅಧ್ಯಯನವು ತುಂಬಬಲ್ಲದೆಂಬುದು ಮಹತ್ವದ ವಿಚಾರ. ಅಂತೆಯೇ ಇಂತಹ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತವಾಗಿರುವ ರಾಜಕೀಯ, ಆರ್ಥಿಕ, ಸಾಮಾಜಿಕ ವಿಚಾರಗಳನ್ನು ವಿಶ್ಲೇಷಣೆಗೆ ಗುರಿಪಡಿಸುವುದರಿಂದ ಹೊಸ ಚರಿತ್ರೆಯೊಂದು ಪ್ರಕಟಗೊಳ್ಳಬಹುದಾದ ಸಾಧ್ಯತೆಗಳು ಇವೆ. ಹಾಗೆಯೇ ಸ್ಥಳೀಯ ಸಂಸ್ಕೃತಿಯ ಮೇಲೆ ಪರಕೀಯ ಸಂಸ್ಕೃತಿಯ ಆಕ್ರಮಣಗಳು ತರುವ ಆಘಾತಗಳ ಪರಿಣಾಮ, ಪ್ರಭಾವಗಳನ್ನು ಕಂಡುಕೊಳ್ಳಬಹುದು. ಮತ್ತು ಆ ಮಾದರಿಯ ಆಕ್ರಮಣಕಾರಿ ಸಂಸ್ಕೃತಿಗೆ ಸ್ಥಳೀಯ ಸಂಸ್ಕೃತಿಯ ಪ್ರತಿಕ್ರಿಯೆಯ ನೆಲೆಗಳನ್ನು ಗುರುತಿಸಿಕೊಳ್ಳಬಹುದು.

## ಅಡಿಟಿಪ್ಪಣಿ

೦೧. ಕುವೆಂಪು: *ಕೊಳಲು,* ಉದಯರವಿ ಪ್ರಕಾಶನ, ಮೈಸೂರು, ೧೯೭೦, ಪುಟ-೩೯,

೦೨. ಗಾಂಧೀ.ಮೋ.ಕ.: *ಆತ್ಮಕಥೆ (ಸಂಕ್ಷಿಪ್ತ)* ಮತ್ತು *ಹಿಂದ್ ಸ್ವರಾಜ್,* ಅನು: ಸಿದ್ಧವನಹಳ್ಳಿ ಕೃಷ್ಣಶರ್ಮ, ಗಾಂಧೀ ಸ್ಮಾರಕ ನಿಧಿ, ೧೯೫೮ ಪುಟ-೨೭

೦೩. ಕುವೆಂಪು: *ಶ್ರೀ ರಾಮಕೃಷ್ಣ ಪರಮಹಂಸ,* ಮೈಸೂರು ವಿಶ್ವವಿದ್ಯಾಲಯ, ಮೈಸೂರು,೧೯೩೪,ಪುಟ- ೧-೨

೦೪. ಗಾಂಧೀ.ಮೋ.ಕ.: *ಆತ್ಮಕಥೆ (ಸಂಕ್ಷಿಪ್ತ)* ಮತ್ತು *ಹಿಂದ್ ಸ್ವರಾಜ್,* ಅನು: ಸಿದ್ಧವನಹಳ್ಳಿ ಕೃಷ್ಣಶರ್ಮ, ಗಾಂಧೀ ಸ್ಮಾರಕ ನಿಧಿ, ೧೯೫೮, ಪುಟ-೨೯

೦೫. ಸುಬೋಧ ಚಂದ್ರಸೇನ ಗುಪ್ತ :*ಬಂಕಮಚಂದ್ರ ಚಟರ್ಜಿ* ಅನು: ಯ.ಶ್ರೀ.ಜ್ಯೋತಿ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೮೧, ಪುಟ-೬,

೦೬. ಕುವೆಂಪು: *ಶ್ರೀ ರಾಮಕೃಷ್ಣ ಪರಮಹಂಸ,* ಮೈಸೂರು ವಿಶ್ವವಿದ್ಯಾಲಯ, ಮೈಸೂರು,೧೯೩೪, ಪುಟ-೧೫

೦೭. ಕೃಷ್ಣಶಾಸ್ತ್ರಿ ಎ.ಆರ್.: *ಬಂಕಿಮಚಂದ್ರ,* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,ಮೈಸೂರು,೧೯೬೦,೩೬೩-೩೬೪

೦೮. ಕೃಷ್ಣಮೂರ್ತಿ ಕೆ.: *ರವೀಂದ್ರ ಪ್ರಶಸ್ತಿ,* ಸಂ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮೈಸೂರು ಸರಕಾರದ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಶಾಖೆ, ಬೆಂಗಳೂರು,೧೯೬೨,ಪುಟ-೯೯,

೦೯. ರವೀಂದ್ರನಾಥ ಠಾಕೂರ, *ಸ್ವಾತಂತ್ರ್ಯವೇ ಧರ್ಮ,* ರಾಷ್ಟ್ರೀಯ ಸಾಹಿತ್ಯ ಗೊರೂರು, ಪುಟ-೨೮೦

೧೦. ಚಂದ್ರ ಬಿಪನ್ : *ಸ್ವಾತಂತ್ರ್ಯದ ಹೋರಾಟ,* ಅನು: ಆರ್.ಎಲ್.ಅನಂತರಾಮಯ್ಯ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ,೧೯೭೪,ಪುಟ-೪೨-೪೩

೧೧. ರವೀಂದ್ರನಾಥ ಠಾಕೂರ, *ಸ್ವಾತಂತ್ರ್ಯವೇ ಧರ್ಮ,* ರಾಷ್ಟ್ರೀಯ ಸಾಹಿತ್ಯ, ಗೊರುರೂ, ಪುಟ-೨೮೭-೨೮೯

೧೨. ಗಾಂಧೀ ಮೋ.ಕ.: *ಆತ್ಮಕಥೆ (ಸಂಕಿಪ್ತ)* ಮತ್ತು *ಹಿಂದೂ ಸ್ವರಾಜ್ಯ,* ಗಾಂಧೀ ಸ್ಮಾರಕ ನಿಧಿ,೧೯೫೮, ಪುಟ-೩೫

೧೩. ಲಾಲ ಲಜಪತರಾಯ, *ಸ್ವಾತಂತ್ರ್ಯವೇ ಧರ್ಮ,* ರಾಷ್ಟ್ರೀಯ ಸಾಹಿತ್ಯ, ಗೊರೂರು, ಪುಟ-೪೦

೧೪. ಅದೇ-ಪುಟ-೪೧

೧೫. ಅಮಲೇಶ ತ್ರಿಪಾಠಿ: *ಸ್ವಾತಂತ್ರ್ಯದ ಹೋರಾಟ,* ಅನು: ಆರ್.ಎಲ್.ಅನಂತರಾಮಯ್ಯ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೧೯೭೪, ಪುಟ-೬೬-೬೭

೧೬. ಗಾಂಧೀ.ಮೋ.ಕ.: *ಆತ್ಮಕಥೆ (ಸಂಕ್ಷಿಪ್ತ)* ಮತ್ತು *ಹಿಂದ್ ಸ್ವರಾಜ್,* ಅನು: ಸಿದ್ಧವನಹಳ್ಳಿ ಕೃಷ್ಣಶರ್ಮ, ಗಾಂಧೀ ಸ್ಮಾರಕ ನಿಧಿ, ೧೯೫೮, ಪುಟ-೮

# ಅಧ್ಯಾಯ : ಮೂರು

# ನವೋದಯ ಪೂರ್ವ ಕಾವ್ಯ

## ೧. ತತ್ತ್ವಪದ, ದೇಶೀದುಂದುಮೆ, ಸ್ವಾತಂತ್ರ್ಯ ಸಂಗ್ರಾಮ ಗೀತೆಗಳು

ಹದಿನೆಂಟು ಮತ್ತು ಹತ್ತೊಂಭತ್ತನೆಯ ಶತಮಾನಗಳಲ್ಲಿ ಸೃಷ್ಟಿಗೊಂಡ ಕನ್ನಡ ಸಾಹಿತ್ಯ ತುಂಬಾ ವ್ಯಾಪಕವಾಗಿದ್ದು, ಅನೇಕ ದೃಷ್ಟಿಗಳಿಂದ ಗಮನಾರ್ಹವಾದದ್ದಾಗಿದೆ. ಈ ಕಾಲಘಟ್ಟ ಭಾರತದ ಚರಿತ್ರೆಯ ದೃಷ್ಟಿಯಿಂದ ತುಂಬ ಮಹತ್ವದ್ದು. ಭಾರತದ ಇನ್ನಿತರ ಭಾಷಾ ಸಂದರ್ಭಗಳಲ್ಲಿ ಹೇಗೋ ಹಾಗೆಯೇ ಕನ್ನಡ ಸಂದರ್ಭದಲ್ಲಿಯೂ ಕೂಡ ವಸಾಹತುಶಾಹಿ ಪ್ರಭಾವಕ್ಕೆ ಹಾಗೂ ಅಂಥ ವಾತಾವರಣಕ್ಕೆ ಕನ್ನಡ ಸಾಹಿತ್ಯ ತೋರಿದ ಪ್ರತಿಕ್ರಿಯೆಯನ್ನು ಅನೇಕ ಮಟ್ಟಗಳಲ್ಲಿ ಪರಿಶೀಲಿಸುವುದು ಸಾಧ್ಯ. ಭಿನ್ನ ಸಂಸ್ಕೃತಿಯೊಂದು ಜೀವಂತ ಸಂಸ್ಕೃತಿಯ ಮೇಲೆ ಆಕ್ರಮಣ ಹೂಡಿದಾಗ ಉಂಟಾಗುವ ಘರ್ಷಣೆ, ಅದಕ್ಕೆ ಎದುರಾಗುವ ಪ್ರತಿಕ್ರಿಯೆ ಯಾವುದೇ ಸಾಂಸ್ಕೃತಿಕ ಅಧ್ಯಯನದ ಮುಖ್ಯ ನೆಲೆ ಆಗುತ್ತದೆ.

ಪರಕೀಯ ಆಕ್ರಮಣದಿಂದ ನಮ್ಮ ಸಂಸ್ಕೃತಿಯ ಮುಖ್ಯ ನೆಲೆಗಳು ತೀವ್ರವಾದ ಆಘಾತಕ್ಕೆ ಗುರಿಯಾದದ್ದನ್ನು ಈ ಕಾಲಮಾನದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂದರ್ಭಗಳಲ್ಲಿ ಕಾಣುತ್ತೇವೆ. ಹೊಸ ಪರಿಸರ ನಮ್ಮ ಒಟ್ಟು ಸಂದರ್ಭವನ್ನು ಆವರಿಸಿದ್ದರಿಂದ ಮನುಷ್ಯ ಎದುರಿಸಬೇಕಾಗಿ ಬಂದ ಸವಾಲುಗಳು ಕೂಡ ಬಹುಮುಖವಾಗಿದ್ದವು. ಪಾರಂಪರಿಕ ಜೀವನ ವಿಧಾನಕ್ಕೂ ಹೊಸ ಸಂದರ್ಭದಿಂದ ನಿರ್ಮಾಣವಾದ ವಾತಾವರಣಕ್ಕೂ ಘರ್ಷಣೆ ಏರ್ಪಡುವುದು ಅನಿವಾರ್ಯವೇ ಆಯಿತು.

ಬ್ರಿಟಿಷರು ಭಾರತದಲ್ಲಿ ಅಧಿಕಾರವನ್ನು ನೆಲೆಗೊಳಿಸಲು ನಡೆಸಿದ ಪ್ರಯತ್ನ ಹಾಗೂ ತಂತ್ರಗಳು ಅನೇಕ ಸ್ಥಿತ್ಯಂತರಗಳಿಗೆ ದಾರಿ ಮಾಡಿಕೊಟ್ಟವು. ಇದು ವ್ಯಾಪಾರೀ ಕೇಂದ್ರದಿಂದ ಹೊರಟು ರಾಜಕೀಯ ಆಳ್ವಿಕೆಯ ತನಕ ಹಂತಹಂತವಾಗಿ ವ್ಯಾಪಿಸಿತು. ಇದರಿಂದ ಭಾರತೀಯ ಸಂದರ್ಭದಲ್ಲಿ ಅನೇಕ ತಳಮಳಗಳಿಗೆ ಕಾರಣವಾಗುತ್ತಲೇ ಹೊಸ

ಎಚ್ಚರ ಮತ್ತು ಸ್ಥಳೀಯ ಸಂಸ್ಕೃತಿಯ ನೆಲೆಗಳನ್ನು ಮತ್ತೆ ಕಂಡುಕೊಳ್ಳಲು ದಾರಿ ಮಾಡಿಕೊಟ್ಟಿತು. ಪರಕೀಯ ಆಕ್ರಮಣದ ಅಸಹಾಯಕತೆಯ ಮಧ್ಯದಲ್ಲಿಯೇ ಹುಟ್ಟಿಕೊಂಡ ಆತ್ಮ ವಿಶ್ವಾಸದ ನೆಲೆ ನಮ್ಮ ಸಾಹಿತ್ಯ ಸಂದರ್ಭದ ಅಭಿವ್ಯಕ್ತಿಯ ಮುಖ್ಯ ಭಾಗವಾಗಿದೆ.

ಬ್ರಿಟಿಷರ ಆಗಮನಕ್ಕೆ ಮುಂಚೆ ಭಾರತೀಯ ರಾಜ್ಯವ್ಯವಸ್ಥೆಯಲ್ಲಿ ಅನೇಕ ಪಲ್ಲಟಗಳಾಗಿದ್ದವು. ಸಣ್ಣ ಸಣ್ಣ ಸಂಸ್ಥಾನಗಳಾಗಿ ಹರಿದು ಹಂಚಿಹೋಗಿದ್ದ ಭಾರತದಲ್ಲಿ ಬ್ರಿಟಿಷರ ರಾಜಕೀಯ ವ್ಯವಸ್ಥೆ-ಏಕಚಕ್ರಾಧಿಪತ್ಯವನ್ನು ನಿರ್ಮಿಸುವ ಪ್ರಯತ್ನಕ್ಕೆ ತಕ್ಕ ಅನುಕೂಲಗಳೇ ಒದಗಿಬಂದವು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಅನೇಕ ಮಟ್ಟದ ಛಿದ್ರಾವಸ್ಥೆ ನಿರ್ಮಾಣಗೊಂಡಿತ್ತು. ಪಾರಂಪರಿಕ ಸಮಾಜ ವ್ಯವಸ್ಥೆಯಲ್ಲಿಯೇ ಇದ್ದ ಏರುಪೇರುಗಳು ಬ್ರಿಟಿಷ ರಾಜಕೀಯ ವ್ಯವಸ್ಥೆಯಿಂದಾಗಿ ಇನ್ನೂ ಹೆಚ್ಚು ಬಲಗೊಳ್ಳಲು ಇಂಬುಕೊಟ್ಟವು. ಇಂಥ ಸ್ಥಿತಿಗಳಲ್ಲಿ ನಮ್ಮ ಸಂಸ್ಕೃತಿಯ ಮೂಲ ಚಹರೆಗಳನ್ನೇ ಬದಲಿಸಿದವು. ಪುರೋಹಿತಶಾಹಿ, ಅದರ ನೇತೃತ್ವದಲ್ಲಿದ್ದ ಜಾತಿ-ಮತ, ಸ್ಪೃಶ್ಯ-ಅಸ್ಪೃಶ್ಯತೆ, ಶಿಷ್ಟ-ಪರಿಶಿಷ್ಟ ನೆಲೆಗಳು ಹೊರಗಿನ ಶಕ್ತಿಯು ನಿರ್ಮಾಸಿದ ಕಾನೂನು ಹಾಗೂ ಕ್ರೂರ ಶಾಸನಗಳಿಂದಾಗಿ ಆಂತರಿಕವಾಗಿ ಹೆಚ್ಚು ಬಲಗೊಳ್ಳುತ್ತಲೂ ಬಾಹ್ಯ ಸಂದರ್ಭದಲ್ಲಿ ಉದಾರವಾದಿಯಾಗಿ ಕಾಣಿಸಿಕೊಳ್ಳುತ್ತಲೂ ವಿಲಕ್ಷಣ ಸಂದರ್ಭ ಒಂದನ್ನು ಸೃಷ್ಟಿಸಿದ್ದು ವಸಾಹತುಶಾಹಿಯ ಮುಖ್ಯ ತಂತ್ರವಾಯಿತು.

ಕನ್ನಡ ಭಾಷಾ ಸಂದರ್ಭದಲ್ಲಿ ಮತ್ತೊಂದು ಗಂಭೀರ ಸಮಸ್ಯೆ ಪ್ರಧಾನವಾಗಿತ್ತು. ಕನ್ನಡ ಸಂಸ್ಕೃತಿಯ ಮುಖ್ಯ ಪ್ರಾದೇಶಿಕ ಭಾಗಗಳು ಹರಿದು ಹಂಚಿ ಹೋಗಿದ್ದವು. ಮದರಾಸು, ಹೈದರಾಬಾದ್ , ಮುಂಬಯಿ ಹಾಗೂ ಕೇರಳದ ಅನೇಕ ಭಾಗಗಳಿಗೆ ನಮ್ಮ ಭೂಭಾಗ ಸೇರಿಕೊಂಡು ಹೋಗಿದ್ದರಿಂದ ಕನ್ನಡಿಗರ ಐಕ್ಯತೆ ಹಾಗೂ ಜಾಗೃತಿಯ ವಿಚಾರದಲ್ಲಿ ತುಂಬ ದೊಡ್ಡ ವಿಘ್ನವನ್ನೇ ತಂದೊಡ್ಡಿತು. ಕನ್ನಡಗರು ತಮ್ಮನ್ನು ತಾವು ಸಂವಹಿನಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಂಥ, ಉಸಿರುಕಟ್ಟಿಸುವ ಸ್ಥಿತಿ ಏರ್ಪಟ್ಟಿತ್ತು.

ಇಂಥ ಸಂದರ್ಭದಲ್ಲಿ ಕನ್ನಡ ಕಾವ್ಯ ತನ್ನ ಅಭಿವ್ಯಕ್ತಿಯನ್ನು ಗಂಭೀರವಾಗಿ ಪ್ರಸ್ತುತ ಪಡಿಸುವುದಕ್ಕೆ ಹದಿನೆಂಟನೆ ಶತಮಾನದ ಆರಂಭದಲ್ಲಿ ಪ್ರಾರಂಭಿಸಿತು. ಆ ಹೊತ್ತಿಗೆ ಕ್ರೈಸ್ತ ಮಿಶನರಿಗಳು ವ್ಯವಸ್ಥಿತವಾಗಿ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ನೆಲೆಯೂರಿದವು, ಮುದ್ರಣಯಂತ್ರ, ಪಾಶ್ಚಾತ್ಯ ಶಿಕ್ಷಣಕ್ರಮ, ಪಠ್ಯಪುಸ್ತಕಗಳ ರಚನೆ, ನಿಘಂಟು, ವ್ಯಾಕರಣಗಳನ್ನು ರೂಪಿಸಿದ ಪಾಶ್ಚಾತ್ಯ ವಿದ್ವಾಂಸರು ಕನ್ನಡ ಸಾಹಿತ್ಯದ ಅಧಿಕೃತ ವಕ್ತಾರರೇ ಆಗಿಬಿಟ್ಟರು. ಕನ್ನಡ ಸಾಹಿತ್ಯ ಸೃಷ್ಟಿಯನ್ನು ಒಂದು ಅವಶೇಷವನ್ನು ನೋಡುವ ದೃಷ್ಟಿಯಿಂದ ನೋಡಿ ಅವರು ತಮ್ಮ ಗ್ರಹಿಕೆಗಳನ್ನು ರೂಪಿಸಿಕೊಂಡವರಾಗಿದ್ದರು. ಅವರು ರೂಪಿಸಿದ ಗ್ರಂಥ ಸಂಪಾದನೆ ಹಾಗೂ ಕಾವ್ಯ ಸಂಕಲನಗಳು ಪ್ರಸಾರಗೊಂಡಿತಾದರೂ ಕನ್ನಡ ಸಾಹಿತ್ಯ ಪರಂಪರೆಯ ಜೀವಂತಿಕೆಯನ್ನು ಕ್ರಿಯಾತ್ಮಕಗೊಳಿಸುವುದು ಅವರ ಪಠ್ಯ ನಿರ್ಮಾಣದ ಉದ್ದೇಶವಾಗಿರಲಿಲ್ಲ. ಕ್ರೈಸ್ತ ಮಿಶನರಿಗಳ ಮೂಲಕ ನಿರ್ಮಾಣವಾದ ಧಾರ್ಮಿಕ ಸಾಹಿತ್ಯ, ಭಕ್ತಿಗೀತೆ, ಪ್ರಾರ್ಥನಾ ರಚನೆಗಳು ಅಪಾರ ಪ್ರಮಾಣದಲ್ಲಿ ಈ ಕಾಲಮಾನದಲ್ಲಿ ಪ್ರಕಟಗೊಂಡವು.

ಆದರೆ ಇಂಥ ರಚನೆಗಳು ಆ ಕಾಲದಲ್ಲಿ ಸೃಷ್ಟಿಯಾಗುತ್ತಲಿದ್ದ ಕನ್ನಡ ಸಾಹಿತ್ಯವನ್ನು ಪ್ರಭಾವಿಸದೇ ಹೋದದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಏಕೆಂದರೆ ಪರಕೀಯ ದಬ್ಬಾಳಿಕೆಗೆ ಗುರಿಯಾಗಿಯೂ, ಅದರ ಸೃಷ್ಟಿಯು ಕನ್ನಡ ಪರಂಪರೆಯ ಭಾಗವಾಗದೇ ಹೋದದ್ದು ಒಂದು ವಿಸ್ಮಯವೆಂಬಂತೆ ತೋರುತ್ತದೆ. ಆ ಹೊತ್ತಿಗೆ ಬರೆಯುತ್ತಿದ್ದ ಶಿಶುನಾಳ ಶರೀಫ, ಕಡಕೊಳದ ಮಡಿವಾಳಪ್ಪ, ಶಾಂತಕವಿ, ಹುಲಕುಂದದ ಭೀಮಕವಿ, ಶ್ರೀಧರ ಖಾನೋಲ್ಕರ, ಎಂ.ಎನ್ .ಕಾಮತ್, ಪುಂಡೂರು ಲಕ್ಷ್ಮೀನಾರಾಯಣ ಪುಣಂಚತ್ತಾಯ ಮುಂತಾದ ಅನೇಕ ಕವಿಗಳ ಕಾವ್ಯ ಪಾಶ್ಚಾತ್ಯ ಪ್ರಭಾವ-ಪರಿಣಾಮಗಳಿಗೆ ಸಂಪೂರ್ಣವಾಗಿ ವಿರುದ್ಧ ದಿಕ್ಕಿನಲ್ಲಿ ನಿಂತುದಾಗಿತ್ತು. ಇದನ್ನು ಅನೇಕ ಪ್ರಭಾವಗಳ ಮಧ್ಯೆ ಸೃಜನಶೀಲತೆಯನ್ನು ಕಾಯ್ದುಕೊಳ್ಳುವ ಸಂದರ್ಭವೆಂದು ಸ್ಪಷ್ಟವಾಗಿ ಗುರುತಿಸಬಹುದು. ಕನ್ನಡ ಕಾವ್ಯದ ಚರಿತ್ರೆಯಲ್ಲಿ ಈ ಕಾಲಮಾನ ಅನೇಕ ದೃಷ್ಟಿಗಳಿಂದ ಕುತೂಹಲವಾದ ಪ್ರಯೋಗಗಳಿಗೆ ದಾರಿ ಮಾಡಿಕೊಟ್ಟಿತ್ತು. ಈ ಎಲ್ಲ ಪ್ರಯೋಗಗಳ ಹಿಂದಿನ ಪ್ರಮುಖ ತಾತ್ವಿಕ ನೆಲೆ ಎಂದರೆ ವಸಾಹತುಶಾಹಿಗೆ ಸ್ಪಷ್ಟವಾದ ಹಾಗೂ ಖಚಿತವಾದ ಪ್ರತಿಕ್ರಿಯೆ ಹಾಗೂ ಪ್ರತಿಬಂಧಕಗಳನ್ನು ಒಡ್ಡುವುದೇ ಆಗಿದೆ. ಈ ಕಾಲಮಾನದ ಕಾವ್ಯವನ್ನೆಲ್ಲಾ ಒಂದು ಕೇಂದ್ರಕ್ಕೆ ತಂದುಕೊಂಡು ಹೇಳಬಹುದಾದರೆ ಒಂದು ರೀತಿಯ ನಿರಾಕರಣೆ ಹಾಗೂ ಹೊಸ ಆಶಯಗಳನ್ನು ಪ್ರತಿಪಾದಿಸುವ ಅಭಿವ್ಯಕ್ತಿಯಾಗಿದೆ. ಈ ಕಾಲದ ಅಭಿವ್ಯಕ್ತಿಯಲ್ಲಿ ಪ್ರಾದೇಶಿಕ ಭಿನ್ನತೆಯ ಬೇರೆ ಬೇರೆ ಮಾದರಿಗಳನ್ನು ಕಾಣುತ್ತೇವೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಳೆಯ ಮೈಸೂರು, ಹೈದರಾಬಾದ್ ಕರ್ನಾಟಕ, ಹೀಗೆ ತಮ್ಮ ಪ್ರಾದೇಶಿಕ ನೆಲೆಯಲ್ಲಿ ನಿಂತು ತಮ್ಮ ಸಂದರ್ಭದ ಓದುಗರು ಹಾಗೂ ಕೇಳುಗರೊಂದಿಗೆ ಸಂಬಂಧವನ್ನು ಬೆಳೆಸುತ್ತ ಅನೇಕ ಪ್ರಾದೇಶಿಕ ಕಾವ್ಯದ ಗೂಡುಗಳು ನಿರ್ಮಾಣಗೊಂಡಿರುವುದು ಈ ಕಾಲದ ಕಾವ್ಯವನ್ನು ಅಭ್ಯಸಿಸುವುದರಿಂದ ತಿಳಿದುಬರುತ್ತದೆ. ಇವರಲ್ಲಿ ಅನೇಕ ಚಾರಣ ಕವಿಗಳಿದ್ದಾರೆ. ಅಂತೆಯೇ ಬರಹ ಮತ್ತು ಅದರ ಪ್ರಸಾರವನ್ನು ಒಂದು ನಿಟ್ಟಿನಲ್ಲಿ ಅಭಿವ್ಯಕ್ತಿಗೊಳಿಸುವವರೂ ಇದ್ದಾರೆ. ಇವರ ಕವಿತೆಗಳು ಆಯಾ ಪ್ರದೇಶದ ಸಾಮುದಾಯಿಕ ಭಾಷಾಸತ್ತ್ವವನ್ನು ಅಭಿವ್ಯಕ್ತಿಸುವುದರಲ್ಲಿಯೂ ಕೂಡ ತನ್ನ ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ. (ನೋಡಿ, ಅನುಬಂಧ-ಮೂರು).

ಬೇಂದ್ರೆಯವರ ಈ ಕೆಳಗಿನ ಉಲ್ಲೇಖ ಬ್ರಿಟಿಷರ ಆಳ್ವಿಕೆಯಿಂದ ಏರ್ಪಟ್ಟ ಕನ್ನಡ ನಾಡಿನ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಯನ್ನು ವಿವರಿಸುತ್ತದೆ:

> ಎಷ್ಟೋ ದಿವಸಗಳಿಂದ ರಾಜಾಶ್ರಯವನ್ನು ಕಳೆದುಕೊಂಡು ತೊಳಲುತ್ತಿರುವ ಕರ್ನಾಟಕವು ಇಂಗ್ಲೀಷರ ಆಳ್ವಿಕೆಯಲ್ಲಿ ಭಿನ್ನ ಭಿನ್ನವಾಗಿದ್ದುದು ಮೊದಲನೆಯ ಕಾರಣವು; ಪೇಶ್ವೆಯರ ಆಳ್ವಿಕೆ ತೀರಿದ ಮೇಲೆ ಅದೇ ಅಮಲದಾರರ ಆಳ್ವಿಕೆಯು ಎರಡನೆಯ ಕಾರಣವು; ರಾಜಾಶ್ರಯ್ಯ ದೊರೆತ ಮೈಸೂರ ಕನ್ನಡವು ಯಾವುದೇ ಒಂದು ಕಾರಣದಿಂದ ನಮ್ಮ ಕೂಡ ಬಳಕೆ ಮಾಡದೆ ಇದ್ದುದು ಮೂರನೆಯ ಕಾರಣ; ಕಾಲ ಪ್ರತಿಕೂಲತೆಯು ನಾಲ್ಕನೆಯ ಕಾರಣ; ಮೊದಲನೆಯ ತರಗತಿಯ ಕರ್ತೃತ್ವಶಾಲಿಗಳು ಹುಟ್ಟದಿದ್ದದ್ದು ಐದನೆಯ ಕಾರಣ.[೧]

ಈ ನಿಲುವು ಕರ್ನಾಟಕದ ರಾಜಕೀಯ ವಾಸ್ತವವನ್ನು ಪರಿಚಯಿಸುತ್ತದೆ. ವಸಾಹತುಶಾಹಿ ವಿರುದ್ಧವಾದ ಈ ಕಾಲದ ಕನ್ನಡ ಲೇಖಕರ ಧೋರಣೆಯಲ್ಲಿಯೇ ಮುಂದಿನ ಭಾರತೀಯ ರಾಜಕೀಯ ಸ್ವರೂಪದ ಸ್ಥಿತ್ಯಂತರಗಳ ಸಂದರ್ಭ ಹಾಗೂ

ಆದರ ಆಯ್ಕೆಗೆ ಒಂದು ಹಿನ್ನೆಲೆಯನ್ನು ಒದಗಿಸುವುದನ್ನು ನಾವು ಕಾಣುತ್ತೇವೆ.

ಸಂಸ್ಕೃತಿಯ ನಿರಂತರತೆಯನ್ನು ಒಪ್ಪಿದ ಕನ್ನಡ ಅಭಿವ್ಯಕ್ತಿ ವಾಕ್‌ಸಂಪ್ರದಾಯ ಹಾಗೂ ಬರಹವನ್ನು ಒಂದಾಗಿ ಪರಿಭಾವಿಸಿದ್ದು ಕನ್ನಡ ನವೋದಯ ಪೂರ್ವ ಸಾಹಿತ್ಯದ ವಿಶಿಷ್ಟ ವಿಚಾರವಾಗಿದೆ. ಕನ್ನಡ ನವೋದಯವನ್ನು ಕುರಿತು ವಿಚಾರ ಮಾಡುವಾಗ ಬರಹದ ಅಧಿಕೃತ ದಾಖಲೆಗಳಿಗೆ ಮಾತ್ರ ಒಳಗಾಗುವ ಅಂಶ ನಮ್ಮ ಆಲೋಚನೆಗಳ ಮಧ್ಯೆ ಇದೆ. ಆದರೆ ಬರಹದ ಅಭಿವ್ಯಕ್ತಿ ಹಾಗೂ ಬರಹೇತರ ಅಭಿವ್ಯಕ್ತಿಯ ನೆಲೆ ಇವೆರಡು ನಮ್ಮ ಚರ್ಚೆಯ ಮಧ್ಯೆ ಇರುವುದು ಅನಿವಾರ್ಯವಾಗಿದೆ. ಈ ಎರಡೂ ಪರಂಪರೆಗಳು ಸಂಸ್ಕೃತಿಯ ನೆಲೆಗಳನ್ನು ಸಮಗ್ರವಾಗಿ ಹಿಡಿದಿಡುವುದರಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದೆ.

> ಈ ಅನುಭಾವಿ ಕವಿಗಳು ತಮ್ಮ ಅಂತರಂಗದ ಸೂಕ್ಷ್ಮ ಕಂಪನಗಳನ್ನು, ಆರೋಗ್ಯಕರ ಪ್ರೇಮವನ್ನು ಬ್ರಿಟೀಷರ ದಬ್ಬಾಳಿಕೆ ಮತ್ತು ಕ್ರೂರ 'ಯಂತ್ರ-ನಾಗರೀಕತೆ'ಯ ಸಂದರ್ಭದಲ್ಲಿ ಅಭಿವ್ಯಕ್ತಿಸಿದವರು. ತಮ್ಮ ಸುತ್ತಣ ಸಮುದಾಯದ ಸಂದರ್ಭಗಳಲ್ಲಿ ನಾಶಗೊಳ್ಳುತ್ತಿದ್ದ ಮನುಷ್ಯ ಸಂಬಂಧಗಳನ್ನು ಕುರಿತು ಅವರು ಬರೆದರು. ಅವರ ರಚನೆಗಳಲ್ಲಿ ರಾಜಕೀಯ ಕೋಲಾಹಲ, ಅಸ್ಥಿರ ಆರ್ಥಿಕಬದುಕು, ಗುಲಾಮಗಿರೆಗೆ ತಮಗರಿವಿಲ್ಲದಂತೆಯೇ ಒಳಗಾದ ಸ್ಥಿತಿ ಇವುಗಳ ಹಿನ್ನೆಲೆಯಲ್ಲಿ ತಮ್ಮ ಪ್ರಸ್ತುತವನ್ನು ಗುರುತಿಸಿಕೊಂಡಿರುವ ಸ್ವರೂಪವನ್ನು ಆ ರಚನೆಗಳಲ್ಲಿ ಕಾಣಬಹುದು. ಕಳೆದ ಶತಮಾನದ ಮಧ್ಯಭಾಗದಲ್ಲಿದ್ದ ಈ ಚಾರಣ ಕವಿಗಳು ಕನ್ನಡದಲ್ಲಿ ಪ್ರಾದೇಶಿಕ ಸಂಸ್ಕೃತಿಗಳ ಆವರಣವನ್ನು ಜಾಗೃತಗೊಳಿಸಿದವರು.[೨]

ಈ ಮೇಲಿನ ಕಿ.ರಂ. ನಾಗರಾಜ ಅವರ ಮಾತುಗಳು ಚಾರಣ ಕವಿಗಳ ಒಟ್ಟು ಧೋರಣೆಯನ್ನು ಅಭಿವ್ಯಕ್ತಿಸುವಂತದ್ದಾಗಿದೆ. ನಮ್ಮ ಈ ಹೊತ್ತಿನ ಕನ್ನಡ ಕಾವ್ಯವನ್ನು ರೂಪಿಸುವಲ್ಲಿ ಚಾರಣ ಕವಿತೆಗಳ ಹಾಗೂ ಆ ಹೊತ್ತಿನಲ್ಲಿ ವಸಾಹತುಶಾಹಿ ಸಂಸ್ಕೃತಿಗೆ ಕ್ರಿಯಾತ್ಮಕವಾದ ಪ್ರತಿಕ್ರಿಯೆಯನ್ನು ತೋರಿಸಿದ ಹೆಸರು ತಿಳಿಯುವ ಹಾಗೂ ಹೆಸರು ತಿಳಿಯದ ಅಸಂಖ್ಯ ಕವಿಗಳ ಪಾತ್ರ ಅತ್ಯಂತ ಪ್ರಮುಖವಾದದ್ದಾಗಿದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಎರಡು ಮುಖ್ಯ ಧಾರೆಗಳಿವೆ. ಅವೆಂದರೆ ಲಿಖಿತ ಹಾಗೂ ಮೌಖಿಕ ಕಾವ್ಯ ಸೃಷ್ಟಿಯ ನೆಲೆಗಳು. ಆದರೂ ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಸಂವಹನಕ್ಕೆ ಗುರಿಯಾಗುವ ರೀತಿ ವಾಕ್ ಸಂಪ್ರದಾಯದ ಗತಿಗಳನ್ನು ಆಧರಿಸಿದ್ದೆಂದು ನಮ್ಮ ಚಿಂತಕರು ವಿಶ್ಲೇಷಿಸುತ್ತ ಬಂದಿದ್ದಾರೆ. ಇದಕ್ಕೆ ಬೇಂದ್ರೆ, ಮುಳಿಯ ತಿಮ್ಮಪ್ಪಯ್ಯ ಮುಂತಾದ ಚಿಂತಕರ ವಿಚಾರಗಳೇ ಮುಖ್ಯ ಆಧಾರ.

ನಮ್ಮ ೧೮, ೧೯ ನೇ ಶತಮಾನದ ಅನುಭಾವಿ ಕವಿಗಳು (ತತ್ತ್ವಪದಕಾರರು) ನಮ್ಮ ಕಾವ್ಯ ಪರಂಪರೆಯಲ್ಲಿ ಹರಿದು ಬಂದ ಪಾತ್ರ ಸೃಷ್ಟಿ, ಕಲ್ಪಕತೆ, ಭಾಷಿಕ ಚಲನಶೀಲತೆ ಇವುಗಳ ಮೂಲಕ ನಮ್ಮ ಕಾವ್ಯ ಪರಂಪರೆಯ ಜನಪದ ಹಾಗೂ (ಜನ ಪ್ರಿಯ) ಅಭಿಜಾತ ನೆಲೆಗಳ ಸಮಗ್ರತೆಯನ್ನು ಸಮುದಾಯದ ಮಧ್ಯೆ ನಿವೇದಿಸುವ ಆಶಯವನ್ನು

ಹೊಂದಿರುವುದನ್ನು ಈ ರಚನೆಗಳ ಮೂಲಕ ಕಾಣುತ್ತೇವೆ. ಸಗರ ನಾಡಿನ ಕವಿಗಳು, ಬೆಳುವಲನಾಡಿನ ಕವಿಗಳು, ಒಳನಾಡಿನ ಕವಿಗಳು ಹಾಗೂ ಕರಾವಳಿಯ ಕವಿಗಳು ತಮ್ಮ ತಮ್ಮ ಪ್ರಾದೇಶಿಕ ಸಂದರ್ಭಗಳಿಗೆ ಎದುರಾಗುವ ಸಂದರ್ಭಗಳನ್ನು ಅವರ ಕವಿತೆಗಳ ಮೂಲಕ ಪ್ರಕಟಪಡಿಸಿದ್ದಾರೆ. ಕಾವ್ಯವೆಂಬುದು ತಮ್ಮ ಆಲೋಚನೆಗಳ ಮಂಡನೆಗೆ ಇರುವ ಒಂದು ಜೀವಂತ ಮಾಧ್ಯಮವೆಂದು ಈ ಕಾಲದ ಕವಿಗಳು ತಿಳಿಯುತ್ತಾರೆ. ಇವರೆಲ್ಲರ ಕವಿತೆಯ ಮಧ್ಯೆ ಹರಿಯುವ ಮುಖ್ಯ ಸತ್ವವೆಂದರೆ ನಾಡಿನ ಪರಂಪರಾಗತ ಕಾವ್ಯಚಿಂತನೆಯ ಸಂಘರ್ಷಾತ್ಮಕವಾದ ತಾತ್ವಿಕತೆಯೇ ಆಗಿದೆ.

ವಸಾಹತುಶಾಹಿ ಸಂಸ್ಕೃತಿಯ ಕಲ್ಪನೆಗಳಿಗೆ ದೇಶೀ ಅಭಿವ್ಯಕ್ತಿ ವಿಧಾನವು ತೋರುವ ಮುಖಾಮುಖಿಯಲ್ಲಿ ನಮ್ಮ ಅಭಿವ್ಯಕ್ತಿಯ ಸ್ವರೂಪವನ್ನು ಗ್ರಹಿಸಲು ಈಗತಾನೆ ಅಷ್ಟಿಷ್ಟು ಮಾಹಿತಿಗಳು ಒದಗಿಬರುತ್ತಲಿವೆ. ಇಂಥ ಮಾಹಿತಿಗಳ ಸಂಘಟನೆ ನನ್ನ ಮುಂದಿನ ಅಧ್ಯಯನದ ಮುಖ್ಯ ಭಾಗವಾಗುವುದೆಂದು ನಾನು ತಿಳಿದಿದ್ದೇನೆ. ಪುಸ್ತಕ ರೂಪದಲ್ಲಿ ದೊರೆಯುವ ಮಾಹಿತಿಗಳನ್ನು ಸಂಘಟಿಸಲು ಕೂಡ ತುಂಬ ದೊಡ್ಡ ಸಮಸ್ಯೆಗಳೇ ಇವೆ. ಈ ಶತಮಾನಗಳ ಕಾವ್ಯಸೃಷ್ಟಿಯ ವಿಪುಲತೆಯನ್ನು, ಅದರ ಸಂಕೀರ್ಣತೆಯನ್ನು ಅದರಲ್ಲಿ ತೋರಿ ಬರುವ ಎಲ್ಲ ಮಟ್ಟದ ವಾಗ್ವಾದಗಳನ್ನು ವಿವರಿಸಿಕೊಳ್ಳಲು ಅಂಥ ಪದ್ಯಗಳ ಸಂಕಲನ ಸಂಯೋಜನೆಗಳು ಈಗ ಅಲ್ಪ ಪ್ರಮಾಣದಲ್ಲಿಯೇ ಆದರೂ ಪ್ರಕಟಗೊಳ್ಳುತ್ತಿರುವುದು ನಮ್ಮ ಅಧ್ಯಯನದ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. ಈ ಜಾಡನ್ನು ಹಿಡಿದು ನಮ್ಮ ಕಾವ್ಯ ಪರಂಪರೆಯ ಜೀವಂತ ಪ್ರಸರಣದ ನೆಲೆಗಳನ್ನು ಪ್ರಸ್ತುತ ಮಹಾ ಪ್ರಬಂಧದ ಚೌಕಟ್ಟಿಗೆ ತರಲು ನಾನು ಪ್ರಯತ್ನಿಸುತ್ತಿದ್ದೇನೆ. ಈ ಅಧ್ಯಯನದಲ್ಲಿ ಹೆಚ್ಚಿನ ಮಾಹಿತಿ ಸಂಗ್ರಹ ಮತ್ತು ಅವುಗಳ ವಿಶ್ಲೇಷಣೆಯನ್ನು ಮಾಡುವ ಇಚ್ಛೆಯನ್ನು ಹೊಂದಿದ್ದೇನೆ.

ಈ ಕಾಲಮಾನದಲ್ಲಿ ಬ್ರಿಟಿಷ್ ವಸಾಹತು ಶಾಹಿಯ ಆರ್ಥಿಕ ಸ್ವರೂಪ ಹಾಗೂ ಅದರ ಬೆಳವಣಿಗೆಯ ಬಗೆಗೆ ವಿಚಾರ ಮಂಡನೆ ಹೆಚ್ಚು ಪ್ರಮುಖವಾದ ಸ್ಥಾನವನ್ನು ಪಡೆದಿರಲಿಲ್ಲ. ಅದೇನಿದ್ದರೂ ಬ್ರಿಟಿಷರ ಬರವಣಿಗೆಗಳಲ್ಲಿ ಸ್ಥಾಪಿತವಾದ ಅಂಶಗಳೇ ಪ್ರಧಾನವಾಗಿ ಪ್ರಕಟಗೊಂಡದ್ದಾಗಿತ್ತು. ದೇಶೀಯ ಚಿಂತನೆಗಳು ಪಾಶ್ಚಾತ್ಯ ಚಿಂತನೆಗಳ ಮಧ್ಯೆ ಪ್ರಕಟಗೊಳ್ಳುತ್ತಿದ್ದವು. ಆಗತಾನೇ ಕ್ಷೀಣವಾಗಿ ಕಾಲು ಇಡುತ್ತಿದ್ದ ಪತ್ರಿಕೋದ್ಯಮ, ಸಾಹಿತ್ಯಾಧ್ಯಯನದ ಬೇರೆ ಬೇರೆ ನೆಲೆಗಳು, ಪಾರಂಪರಿಕ ಹಾಗೂ ಹೊಸ ಪಲ್ಲಟದಿಂದ ಉತ್ಪನ್ನಗೊಂಡ ವಿಚಾರಧಾರೆ ಇವುಗಳಿಂದಾಗಿ ಒಂದು ವಿಶ್ವಾಸಾರ್ಹವೂ ಅಧಿಕೃತವೂ ಆದ ಸ್ಥೂಲ ಚಿಂತನಕ್ರಮವೊಂದು ರೂಪುಗೊಂಡದ್ದನ್ನು ಈ ಕಾಲದ ಕಾವ್ಯಾಭಿವ್ಯಕ್ತಿಯಿಂದ ತಿಳಿಯಬಹುದಾಗಿದೆ. ನಿರ್ದಿಷ್ಟ ಭಾಷಾಸಂಸ್ಕೃತಿಯ ಸೂಕ್ಷ್ಮಾಂಗವಾದ ಕಾವ್ಯಾಭಿವ್ಯಕ್ತಿಯು ಒಂದು ಮಟ್ಟದಲ್ಲಿ ನಿರಾಕರಣಾತ್ಮಕವಾದ ಸಂವೇದನೆಯನ್ನು ಪ್ರಕಟಪಡಿಸುತ್ತಾ ಮತ್ತೊಂದು ನೆಲೆಯಲ್ಲಿ ವಾಗ್ವಾದಾತ್ಮಕವಾದ ಚಿಂತನೆಯನ್ನು ಬಿತ್ತರಿಸುವ ಉದ್ದೇಶಗಳನ್ನು ಹೊಂದಿದ್ದವು. ಅಂಥ ಅಭಿವ್ಯಕ್ತಿಯು ಈ ಹೊತ್ತಿನ ಓದುಗರಾದ ನಮಗೆ ಈ ಎಲ್ಲ ದಾಖಲೆಗಳು ಸಂಸ್ಕೃತಿಯ ಸಂಘರ್ಷದ ಮುಖ್ಯ ಪ್ರಶ್ನೆಗಳಾಗಿಯೇ ತೋರುತ್ತವೆ.

ಹೀಗಾಗಿ ಆರ್ಥಿಕ ವ್ಯವಸ್ಥೆಯ ಭಗ್ನತೆ ಹಾಗೂ ವಸಾಹತುಶಾಹಿಯ ಆರ್ಥಿಕ ಕ್ರಮಗಳ ಬಗೆಗೆ ಒಂದು ಸ್ಪಷ್ಟ ಕಲ್ಪನೆ ಏರ್ಪಡಲಿಲ್ಲ. ಈ ಕಾಲದ ಕನ್ನಡ ಕವಿಗಳು ಇಂಥ ಚಿಂತನೆಗಳನ್ನು ಸಮಗ್ರ ರೂಪಕಗಳನ್ನಾಗಿಸುವ ಪ್ರಯತ್ನ

ಮಾಡಿದ್ದಾರೆ. ಇದಕ್ಕೆ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಸರ್ಪಭೂಷಣ ಶಿವಯೋಗಿ, ಬಾಲಲೀಲ ಮಹಾಂತೇಶ ಶಿವಯೋಗಿಗಳು ಇವರ ರಚನೆಗಳ ಓದು, ಅನೇಕ ಗ್ರಹಿಕೆಗಳನ್ನು ಒದಗಿಸುತ್ತಲಿವೆ. ಈ ರಚನೆಗಳು ಸಾಮ್ರಾಜ್ಯಶಾಹಿ ಆರ್ಥಿಕ ಕಲ್ಪನೆಯನ್ನಾಗಲಿ, ಅದಕ್ಕೆ ವಿರುದ್ಧವಾದ ಕಲ್ಪನೆಯನ್ನಾಗಲಿ, ರಾಷ್ಟ್ರೀಯವಾದಿಗಳ ಕಲ್ಪನೆಯನ್ನಾಗಲಿ ಮುಖ್ಯವಾಗಿಸದೆ ಪ್ರಾದೇಶಿಕ ಆಶೋತ್ತರಗಳನ್ನು ಪ್ರತಿನಿಧಿಸುವುದಾಗಿದೆ.

ಶರೀಫ, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ ಶರಣ, ಹೇರೂರು ವಿರುಪಣ ಗೌಡ, ಬಂಡೆ ಗವಿಸಿದ್ಧ ಮುಂತಾಗಿ ಅಸಂಖ್ಯ ಚಾರಣ ಕವಿಗಳು ಆಗಿ ಹೋಗಿದ್ದಾರೆ. ಅಂತೆಯೇ ಶಾಂತಕವಿ, ಕಾವ್ಯಾನಂದ ಪುಣೇಕರ್, ಪಂಜೆ ಮಂಗೇಶರಾಯ, ಪಿ.ಧೂಲಾ ಮುಂತಾಕ ಕವಿಗಳು ಈ ಕಾಲಮಾನದಲ್ಲಿ ಸಂಸ್ಕೃತಿಯ ಆಶಯಗಳನ್ನು ಅಭಿವ್ಯಕ್ತಿಸಿದ್ದಾರೆ.

ಈ ಕಾವ್ಯಾಭಿವ್ಯಕ್ತಿಯಲ್ಲಿ ಸಂಸ್ಕೃತಿ ಮತ್ತು ಚರಿತ್ರೆಯ ಪ್ರಶ್ನೆ ಸಂಕೀರ್ಣ ಸ್ವರೂಪದ್ದಾಗಿ ಪ್ರಕಟಗೊಂಡಿದೆ. ಚರಿತ್ರೆ ಮತ್ತು ಸಂಸ್ಕೃತಿಯ ವಿಭಿನ್ನ ರಚನೆಗಳನ್ನು ಈ ಕಾಲದ ಕಾವ್ಯಾಭಿವ್ಯಕ್ತಿಯ ಮೂಲಕ ಗ್ರಹಿಸಲು ಸಾಧ್ಯವಿದೆ. ಪರಂಪರೆ, ಸಾಮಾಜಿಕ ಸಂಸ್ಥೆಗಳು, ಆ ಸಂಸ್ಥೆಗಳಿಂದ ನಿರ್ಮಾಣವಾಗುವ ಅನೇಕ ಆಂತರಿಕ ಸಂಘರ್ಷಗಳ ನೆಲೆ ಈ ಕಾಲಮಾನದ ಕಾವ್ಯಾಭಿವ್ಯಕ್ತಿಯಲ್ಲಿ ಪ್ರಮುಖವಾಗಿ ಕಾಣುತ್ತೇವೆ. ಚಾರಿತ್ರಿಕತೆಯ ನಿರಂತರ ಸರಣಿ ಹಾಗೂ ಬದಲಾವಣೆಗೆ ಗುರಿಯಾಗುವ ಸಂಸ್ಕೃತಿಯ ಸಂದರ್ಭ ಇವೆರಡೂ ಒಂದು ಮುಖ್ಯ ಸಂಕೇತವೇ ಆಗುವಷ್ಟು ಗಟ್ಟಿತನವನ್ನು ಈ ಕಾಲದ ಕಾವ್ಯಾಭಿವ್ಯಕ್ತಿ ಪ್ರಕಟಿಸುತ್ತದೆ. ಈ ಹಿನ್ನೆಲೆಗೆ ಶರೀಫರ ರಚನೆಯಿಂದ ಎರಡು ಸಾಲುಗಳನ್ನು ಉಲ್ಲೇಖಿಸಬಹುದು.

> ರಾಜ ನೀತಿಯಲ್ಲಿ ಜಯವೋ
> ಬಂತೋ ಇಂಗ್ಲಂಡ ದೇಶಕ್ಕ ಬೆಂಕಿಯ ಮಳಿಯೋ.[೩]

ಇಂಥ ಅಭಿವ್ಯಕ್ತಿ ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಹುಟ್ಟಿದ ಆತಂಕ, ತೀವ್ರತೆ ಹಾಗೂ ಇಡೀ ಪರಿಸರದಲ್ಲಿ ಉಂಟಾದ ಭಗ್ನತೆಯನ್ನು ಪ್ರತಿನಿಧಿಸುತ್ತದೆ.

> ಹಿಂದುಸ್ಥಾನಕ ಬಂತು ಶೋಕ
> ಮಂದಿ ಕುಂಡ್ಲಾಕ ನರಬೈಲಿ ಹೋತೋ ಕೈಲಾಕ
> ಹಣದ ತೆರಿಗೆಯ ತಲೆಗೆ ಏಳು
> ಎಣಿಸಿ ಹಡಗವ ತುಂಬಿ ಹೂರಣವ
> ಹವಳ ದೇಶಕೆಲ್ಲ ಇದು
> ಕುಣಿದು ಕುಣಿದು ದಣವು ಆದಿತು.[೪]

ಈ ಕಾಲಮಾನದಲ್ಲಿ ಭಾರತದಲ್ಲಿ ಹಬ್ಬಿದ್ದ ಯಾಂತ್ರಿಕ ಪ್ರಗತಿ ತತ್ತ್ವಪದಕಾರರ ಮುಖ್ಯ ಸಂಕೇತವಾಗಿ ಕಾಣಿಸಿಕೊಂಡಿತು. ಯಾಂತ್ರಿಕ ಪ್ರತೀಕಗಳೊಂದಿಗೆ ಪಾರಂಪರಿಕ ಶ್ರದ್ಧೆ ಹಾಗೂ ಸಮಕಾಲೀನ ಒತ್ತಡಗಳು ಪ್ರಧಾನವಾಗಿದ್ದವು. ಸೂಜಿ, ಆಗಿನ ಗಾಡಿ, ಗಿರಣಿ, ಯುದ್ಧ, ವಿಲಾಯತಿ ಹತ್ತಿ, ಶ್ರಮ ಹಾಗೂ ಕೂಲಿಯ ಪ್ರಶ್ನೆಗಳು ತತ್ತ್ವಪದಕಾರರಲ್ಲಿ ವ್ಯಾಪಕವಾಗಿ ಕಾಣಿಸಿಕೊಂಡಿತು. ವಸಾಹತುಶಾಹಿ ನಿರ್ಮಿಸಿದ ಭೌತಿಕ ವಸ್ತು-ಪ್ರಪಂಚ ಹಂತ ಹಂತವಾಗಿ ನಮ್ಮ ಮಾನಸಿಕ ಪ್ರಪಂಚದ ಭಾಗವಾಗುತ್ತಿರುವುದನ್ನು ಅಲ್ಲಿ ಕಾಣುತ್ತೇವೆ. ಈ ಎರಡು ಸಂಬಂಧಗಳ ಸಂಘರ್ಷದ ಅಂಶ ಈ ಕಾಲಮಾನದ ಕಾವ್ಯಾಭಿವ್ಯಕ್ತಿಯ ಮುಖ್ಯ ಭಾಗವಾಗಿದೆ.

ಮನುಷ್ಯನ ಸುಖ-ಸಂತೋಷ, ಪರಕೀಯ ಒತ್ತಡಗಳಿಂದ ಜೀವನದಲ್ಲಿ ಕಂಡುಬರುವ ನಶ್ವರತೆ, ಅಮರತ್ವದ ಬಗೆಗೆ ಹುಟ್ಟುವ ಕಲ್ಪನೆಗಳು, ಹಾಗೂ ಹೊಸ ಯಾಂತ್ರಿಕ ಬೆಳವಣಿಗೆಯ ಮಧ್ಯೆ ಸಿಲುಕಿ ಭಗ್ನವಾದ ಮನುಷ್ಯ ಚೇತನವನ್ನು ತತ್ತ್ವಪದಕಾರರ ರಚನೆಗಳಲ್ಲಿ ಕಾಣುತ್ತೇವೆ. ತತ್ತ್ವಪದಗಳ ಧಾಟಿ ಸಮೂಹದೊಂದಿಗೆ ಸಂವಹನಿಸುವ ಉದ್ದೇಶವನ್ನು ಹೊಂದಿದ್ದಾಗಿವೆ. ಅಧುನಿಕ ವಿಜ್ಞಾನದ ಹೊಸ ಶೋಧನೆಗಳು ಕನ್ನಡ ಗ್ರಾಮೀಣ ಪರಿಸರದಲ್ಲಿ ಕಾಣಿಸಿಕೊಂಡ ಬಗೆ ಈ ಕಾಲಮಾನದ ಕವಿಗಳಲ್ಲಿ ಒಂದು ಮಟ್ಟದ ವಿಸ್ಮಯ ಹಾಗೂ ಆತಂಕವನ್ನು ಸೃಷ್ಟಿಸಿರುವುದನ್ನು ಗುರುತಿಸುತ್ತೇವೆ.

ತತ್ತ್ವಪದಕಾರರ ಪ್ರಧಾನ ಸಾಮಗ್ರಿ ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಚಳುವಳಿಯಾದ ವಚನ ಹಾಗೂ ದಾಸ ಸಾಹಿತ್ಯದ ನೆಲೆಯಿಂದ ಬಂದದ್ದು. ಆದರೆ ಆ ಸಾಮಗ್ರಿಯನ್ನು ವರ್ತಮಾನದ ಸಂದರ್ಭವನ್ನು ಹೊರತುಪಡಿಸುವಂತೆ ಅವರು ಪುನರ್ ನಿರ್ಮಾಣ ಮಾಡುತ್ತಾರೆ. ಹೀಗಾಗಿ ತತ್ತ್ವಪದಕಾರರ ರಚನೆಗಳು ಪಾಂಡಿತ್ಯದ ಪ್ರಭಾವದಿಂದ ಪಾರಾಗಲು ಸಾಧ್ಯವಾಗದೆ ಹೋಗಿದೆ. ಆದರೂ ತತ್ತ್ವಪದಕಾರರ ಒಟ್ಟು ಸೃಷ್ಟಿ ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಗಂಭೀರವಾದ ಸೃಜನಶೀಲ ದಾಖಲೆಗಳಾಗಿವೆ.

ತಮ್ಮ ಸುತ್ತಣ ಪ್ರಪಂಚದ ಖಚಿತ ವಿವರಗಳನ್ನು ಬಳಸುತ್ತಾ, ಅದನ್ನು ತಾತ್ತ್ವಿಕವಾದ ಒಂದು ಸಂವಾದವಾಗಿ ನಿರೂಪಿಸುವ ಈ ಮಾದರಿ ಕನ್ನಡ ಕಾವ್ಯದ ಮುಂದಿನ ಹಂತದಲ್ಲಿ ಇನ್ನೂ ಹೆಚ್ಚಿನ ಸಾಧ್ಯತೆಗಳನ್ನು ಪಡೆಯುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ ಕನ್ನಡ ಕಾವ್ಯದ ಹೊಸ ಬೆಳವಣಿಗೆಗೆ ಪೂರ್ವಪೀಠಿಕೆ ಈ ಕಾಲದಲ್ಲಿ ನಿರ್ಮಾಣಗೊಂಡಿದೆ.

ಈ ಕಾಲಮಾನದ ಕಾವ್ಯದ ಮುಖ್ಯ ನೆಲೆ ಪರಕೀಯ ಸಂಸ್ಕೃತಿಯ ಅನೇಕ ಅಂಶಗಳ ಗ್ರಹಿಕೆ ಹಾಗೂ ಅದರ ಸ್ವೀಕೃತಿಯ ಸಂದರ್ಭ. ಅಲ್ಲದೆ ನಮ್ಮ ಸಂದರ್ಭದಲ್ಲಿಯೇ ಸ್ಥಳೀಯ ವಸಾಹತುಶಾಹಿಯ ವಾಸ್ತವಿಕತೆ, ಇವುಗಳನ್ನು ಖಚಿತವಾಗಿ ವಿರೋಧಿಸುವುದಾಗಿತ್ತು. ತತ್ತ್ವಪದಕಾರರು ಸಮಾಜದ ವಿಮರ್ಶಕರಾಗಿರುವರಂತೆಯೇ, ಹರಿತವಾದ ವಿಡಂಬನೆಯನ್ನು ಪ್ರಕಟಿಸುತ್ತಾರೆ. ದೇವಾಲಯದ ಕಲ್ಪನೆ, ಢಾಂಬಿಕತೆ, ಸಿರಿತನ, ಹೆಣ್ಣಿನ ಸ್ಥಾನ ಮಾನ, ಮೇಲಿನ ಅಧಿಕಾರಿಗಳ ಬಗೆಗೆ ತೋರುವ ಪ್ರತಿಕ್ರಿಯೆ ಮುಂತಾದ ದಿನನಿತ್ಯ ಎದುರಾಗುವ ಸಮಸ್ಯೆಗಳಿಗೆ ಈ ಕಾಲಮಾನದ ಕಾವ್ಯ ಪ್ರತಿಕ್ರಿಯಿಸಿದೆ.

ತತ್ತ್ವಪದಕಾರರು ವಸಾಹತುಶಾಹಿಗೆ ತೋರಿದ ಪ್ರತಿಕ್ರಿಯೆಯನ್ನು ಕುರಿತು ಈ ಹಿಂದೆಯೆ ವಿಚಾರ ಮಾಡಿದ್ದೇವೆ. ಇದರಲ್ಲಿ ಪ್ರಮುಖವಾಗಿ ತೋರುವ ಅಂಶವೆಂದರೆ ಪ್ರಭುತ್ವದ ಶೋಷಣೆಯನ್ನು ನಿರಾಕರಿಸುವ ಅಂಶ ಪ್ರಧಾನವಾದದ್ದಾಗಿದೆ. ಈ ಅಂಶ ಇಡೀ ಕನ್ನಡ ಕಾವ್ಯ ಪರಂಪರೆಯಲ್ಲಿಯೆ ಹರಿದು ಬಂದಿರುವ ಮುಖ್ಯ ವಿಚಾರವಾಗಿದೆ. ತತ್ತ್ವಪದಕಾರರಲ್ಲಿ ತಮ್ಮ ಕಾಲದಲ್ಲಿ ಆವರಿಸಿದ ಪ್ರಭುತ್ವದ ಕ್ರೌರ್ಯವನ್ನು ಅವರು ನೇರವಾಗಿ ಎದುರಿಸಿದ್ದಾರೆ. ವ್ಯಾಪಾರ ವಹಿವಾಟು, ಗ್ರಾಮದ ಆಡಳಿತ, ರಾಜಕೀಯ ಕೋಲಾಹಲ, ಭೂಮಿಯ ಒಡೆಯರಿಂದ ಆಗುತ್ತಿದ್ದ ಸುಲಿಗೆ, ಕ್ರೂರ ಶಾಸನಗಳು ಇವುಗಳು ಸಮುದಾಯದ ಜೀವನವನ್ನೇ ನಾಶಪಡಿಸಿದವು. ಜೀವನ ನಶ್ವರವೆಂದು ಹೇಳುವ ಇವರ

ಅನಿಸಿಕೆಗಳ ಹಿನ್ನೆಲೆಗೆ ಕ್ರೌರ್ಯದಿಂದ ಕೂಡಿದ ವ್ಯವಸ್ಥೆಯೇ ಮುಖ್ಯ ಕಾರಣವೆಂದು ತಿಳಿಯಬಹುದಾಗಿದೆ. ಒಂದು ಕಡೆ ಬ್ರಿಟಿಷ್ ವ್ಯವಸ್ಥೆಯ ಹಿಡಿತ, ಅದರೊಂದಿಗೆ ಜಾತಿ ಪದ್ಧತಿಯ ಕ್ರೌರ್ಯ-ಅಸಮಾನತೆಗಳು ಸೇರಿಕೊಂಡಿದ್ದರಿಂದ ಮನುಷ್ಯನ ಬದುಕು ದುರ್ಭರವಾದುದಾಗಿತ್ತು. ಇದನ್ನು ಮೀರುವ ಪ್ರಯತ್ನಗಳನ್ನು ಕೂಡ ಕನ್ನಡ ಜೀವನ ತೋರಿತು. ಇಂಥ ಸಂದರ್ಭಗಳನ್ನು ಈ ಕಾಲಮಾನದ ಕಾವ್ಯ ಅಭಿವ್ಯಕ್ತಿ ಮಾಡಿದೆ. ವಸಾಹತುಶಾಹಿಯ ಆರ್ಥಿಕ ಯೋಜನೆಗಳು ಪಟ್ಟಣಗಳ ಬೆಳವಣಿಗೆಯ ಕಡೆಗೆ ಹೊರಟು ಗ್ರಾಮೀಣ ಬದುಕಿನ ವಿಘಟನೆಗೆ ಕಾರಣವಾದದ್ದನ್ನು ಈ ಕಾಲಮಾನದ ಕಾವ್ಯ ಅತ್ಯಂತ ಸೂಕ್ಷ್ಮವಾಗಿ ಹೇಳುತ್ತದೆ.

ಬ್ರಿಟಿಷ್ ವಿದ್ಯಾಭ್ಯಾಸವೇ ನಮ್ಮಲ್ಲಿ ಹೊಸ ಜಾಗ್ರತೆಯನ್ನು ಉಂಟುಮಾಡಿತು ಎಂಬ ವಾದ ಪ್ರಚಲಿತವಿದೆ. ಆದರೆ ಹದಿನೆಂಟು, ಹತ್ತೊಂಬತ್ತನೆಯ ಶತಮಾನದ ಕಾವ್ಯವನ್ನು ಗಮನಿಸಿದರೆ ಈ ವಾದಕ್ಕೆ ವಿರುದ್ಧವಾದ ಅನೇಕ ಅಂಶಗಳು ಕಂಡುಬರುತ್ತವೆ. ಇನ್ನೂ ಇಂಗ್ಲಿಶ್ ವಿದ್ಯಾಭ್ಯಾಸ ನಮ್ಮ ಸಂದರ್ಭದಲ್ಲಿ ಪ್ರಸಾರಗೊಳ್ಳದ ಕಾಲದಲ್ಲಿಯೇ ಪರಕೀಯ ಪ್ರಭುತ್ವವನ್ನು ದೇಶೀಯ ರಾಜರನ್ನು ವಿರೋಧಿಸುವ ತೀವ್ರವಾದ ವಿಚಾರಗಳು ಈ ಕಾಲದ ಕವಿಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದೆ. ಈ ತತ್ತ್ವಪದಕಾರರು ಸಾರ್ವಜನಿಕ ಸಂಬಂಧವನ್ನು ಸ್ಥಾಪಿಸಿದ್ದಲ್ಲದೆ ಅವರ ಬದುಕನ್ನು ಕುರಿತು ನೇರವಾಗಿ ಸ್ಪಂದಿಸಿದವರೂ ಆಗಿದ್ದರು. ಹೀಗಾಗಿ ತಮ್ಮ ಸಾರ್ವಜನಿಕ ವ್ಯಕ್ತಿತ್ವ ಹಾಗೂ ಅಭಿವ್ಯಕ್ತಿಯ ಮಧ್ಯೆ ಸಮತೋಲವನ್ನು ಸಾಧಿಸಿದವರೂ ಆಗಿದ್ದಾರೆ.

ವಸಾಹತುಶಾಹಿ ಆಕ್ರಮಣದಿಂದ ನಮ್ಮ ಸಾಹಿತ್ಯದ ನೆಲೆಯಲ್ಲಿಯೇ ಮೂಲಭೂತ ಪಲ್ಲಟಗಳು ಕಾಣಿಸಿಕೊಂಡವು. ಚಾರಿತ್ರಿಕ ಅನುಭವಗಳು ಮತ್ತು ಏರ್ಪಟ್ಟ ಹೊಸ ಪರಿಸ್ಥಿತಿಯ ಮಧ್ಯೆ ವಿನೂತನ ಅಭಿವ್ಯಕ್ತಿ ಕ್ರಮವನ್ನು ಕಂಡುಕೊಳ್ಳುವ ಪ್ರಯೋಗಶೀಲತೆ ಈ ಕಾಲಮಾನದ ಮುಖ್ಯ ಆಶಯಗಳಾಗಿವೆ. ಶಿಷ್ಟ ಹಾಗೂ ಜಾನಪದೀಯ ಅಭಿವ್ಯಕ್ತಿಗಳ ನಡುವೆ ನಂತರದ ಹೊಸ ಶೈಲಿಕ ಸ್ತರವನ್ನು ನಿರ್ಮಿಸುವುದು ಕೂಡ ಈ ಕಾಲದ ಕಾವ್ಯದ ವಿಶಿಷ್ಟ ಅಂಶವಾಗಿದೆ. ವಸಾಹತುಶಾಹಿ ಅನುಭವದ ಒಳಗಿನ ವಿನಾಶಕಾರಿ ಪ್ರವೃತ್ತಿಗಳನ್ನು ದಾಟಿ ಸಂಸ್ಕೃತಿಯ ಆಳವಾದ ಪ್ರಜ್ಞೆಯ ಕಡೆಗೆ ಚಲಿಸುವುದು ಈ ಕಾಲಮಾನದ ಕಾವ್ಯಾಭಿವ್ಯಕ್ತಿಯ ಮುಖ್ಯ ಗುರಿಯಾಗಿದೆ. ಭಾರತದ ಇನ್ನಿತರ ಭಾಗಗಳಲ್ಲಿ ಏರ್ಪಟ್ಟ ವಿದ್ಯಮಾನಗಳಿಗೆ ಸಮಾನವಾದ ಅನುಭವಗಳು ಕರ್ನಾಟಕದ ಸಂದರ್ಭದಲ್ಲಿ ಕಾಣಿಸಿಕೊಂಡದ್ದಾಗಿತ್ತು. ಅಳುವ ವರ್ಗದ ಸಂಸ್ಕೃತಿ ನಮ್ಮ ಸಂಸ್ಕೃತಿಗಿಂತ ಉನ್ನತವಾದದ್ದೆಂಬ ಸಾರ್ವತ್ರಿಕ ಧೋರಣೆಗೂ ತತ್ತ್ವಪದಕಾರರ ದೇಶೀ ಸಂಸ್ಕೃತಿ ವಿಶಿಷ್ಟವಾದ ಧೋರಣೆಗೂ ಸಾಕಷ್ಟು ಅಂತರವೇ ಇದೆ. ಬ್ರಿಟಿಷರನ್ನು ಎದುರಿಸಲು ಏರ್ಪಟ್ಟ ದೇಶಿನಿಷ್ಠ ವಿಚಾರಧಾರೆಗೆ ಇಂಥ ಕವಿಗಳ ಕೊಡುಗೆ ತುಂಬ ಮಹತ್ವದ್ದು.

ರಾಷ್ಟ್ರೀಯ ಚಳುವಳಿಯ ಅಂಗವಾಗಿ ಹುಟ್ಟಿಕೊಂಡ ನಾಡಿನಾದ್ಯಂತದ ಕಾವ್ಯಾಭಿವ್ಯಕ್ತಿ ವಸಾಹತುಶಾಹಿ ವಿರೋಧ ನೆಲೆಗಳನ್ನು ತುಂಬ ಸಮರ್ಥವಾಗಿ ಅಭಿವ್ಯಕ್ತಿಸಿದೆ. ರಾಷ್ಟ್ರೀಯ ಚಳುವಳಿಯ ಎಲ್ಲ ಕಾರ್ಯಕ್ರಮಗಳನ್ನು ಮತ್ತು ಅದರಿಂದ ಉಂಟಾಗುತ್ತಿದ್ದ ಪರಿಣಾಮಗಳನ್ನು ತಮ್ಮ ಆಶುಕವಿತ್ವ ಹಾಗೂ ಜಾನಪದ ಧಾಟಿಯಲ್ಲಿ ಅಭಿವ್ಯಕ್ತಿಗೊಳಿಸಿ ವಿನೂತನ

ಕಾವ್ಯಾಭಿವ್ಯಕ್ತಿಯನ್ನು ರೂಪಿಸಿದ್ದಾರೆ. ಮಾಳವಾಡದ ಉಮತಾರ ಬಸಪ್ಪ, ಹಲಗುಂದ ಶಿವಲಿಂಗ ಕವಿ, ದೊಡ್ಡವಾಡದ ಸೋಮಲಿಂಗ, ಸಂಬಾರಸಂಗಯ್ಯ, ಹುಲಕುಂದ ಭೀಮ ಕವಿ, ನಾಗನೂರ ದೇವಯ್ಯ, ಮೂಗಬಸವ ಮಲ್ಲಪ್ಪ, ರಾಣೆಬೆನ್ನೂರಿನ ಸಮ್ಮದಸಾಬ, ಕಲಾದಗಿಯ ಇನಾಮದಾರ, ಮಾರನ ಬಸರಿಯ ಮೋದಿನಸಾಬ ಇವರೆಲ್ಲರ ರಚನೆ ಆ ಹೊತ್ತಿನ ಕಾವ್ಯ ಸೃಷ್ಟಿಯ ಮುಖ್ಯ ದಾಖಲೆಗಳಾಗಿವೆ. ಅನಂತರದ ದಿನಗಳಲ್ಲಿ ಪ್ರಕಟಗೊಂಡ ಶಾಂತಕವಿಗಳ ಕಾವ್ಯ-ಕೀರ್ತನೆಗಳು ವಸಾಹತುಶಾಹಿ ಆಳ್ವಿಕೆಗೆ ತೀವ್ರ ಪ್ರತಿಕ್ರಿಯೆಯನ್ನು ತೋರಿದ ರಚನೆಗಳಾಗಿವೆ. (ನೋಡಿ: ಅನುಬಂಧ-ಮೂರು).

ಈ ಕಾಲಮಾನದ ಮುಖ್ಯ ಒತ್ತಡಗಳಾದ ಪರಕೀಯ ಆಕ್ರಮಣ ಹಾಗೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಇದ್ದ ಏರುಪೇರುಗಳನ್ನು ವಿಮರ್ಶಾತ್ಮಕವಾಗಿ ಎದುರಾಗುವ ಧೋರಣೆ ಪ್ರಧಾನವಾದದಾಗಿದೆ.

- ಸಾಹಿತ್ಯ ಪರಂಪರೆ ಹಾಗೂ ಜನಪದ ಪರಂಪರೆಗಳ ಮುಖ್ಯಾಂಶಗಳನ್ನು ಒಂದು ನೆಲೆಗೆ ತರುವ ಪ್ರಯತ್ನ .
- ಸಂಸ್ಕೃತಿಯ ಪ್ರಾದೇಶಿಕ ಸತ್ತ್ವಗಳ ಕೇಂದ್ರ ಈ ಕಾಲದ ಕವಿಗಳಲ್ಲಿ ಮುಖ್ಯವೆನಿಸಿದೆ.
- ಕನ್ನಡ ಸಮಾಜದ ವಿಚಾರ, ಆಲೋಚನೆ ಈ ಅಭಿವ್ಯಕ್ತಿಯ ಮುಖ್ಯ ಸತ್ವವಾಗಿದೆ.
- ಪರಂಪರೆಯ ಜೀವಂತಿಕೆ ಮತ್ತು ಅದರಿಂದ ಹುಟ್ಟುವ ಜೀವಂತಿಕೆಯ ವಿರುದ್ಧವಾದ ನೆಲೆಗಳನ್ನು ಪರೀಕ್ಷಿಸುವ ಮತ್ತು ಸ್ವೀಕರಿಸುವ ವಿಮರ್ಶಾತ್ಮಕ ನೆಲೆ ಈ ಕಾಲದ ಮುಖ್ಯ ಧೋರಣೆಯಾಗಿದೆ.

ಈ ಪ್ರಬಂಧ ಕಾವ್ಯಾಭಿವ್ಯಕ್ತಿಯನ್ನು ಪ್ರಧಾನವಾಗಿ ಗಮನದಲ್ಲಿಟ್ಟುಕೊಂಡಿದ್ದಾಗಿದೆ. ಕಾವ್ಯ ಪ್ರಕಾರವೇ ಅಲ್ಲದೆ ಅಸಂಖ್ಯ ಇನ್ನಿತರ ದಾಖಲೆಗಳು ಕೂಡ ದೊಡ್ಡ ಪ್ರಮಾಣದಲ್ಲಿವೆ. ಕನ್ನಡ ಗದ್ಯದ ಬೆಳೆವಣಿಗೆ, ಪತ್ರಿಕೋದ್ಯಮ, ನಾಟಕ(ರಂಗಭೂಮಿ),ಕಥಾ ಸಾಹಿತ್ಯ, ಇವುಗಳ ಅಧ್ಯಯನದಿಂದಲೂ ಈ ಕಾಲಮಾನದ ಸಾಂಸ್ಕೃತಿಕ ವಿವೇಚನೆಗೆ ಅನೇಕ ಒಳನೋಟಗಳನ್ನು ಪಡೆಯಬಹುದಾಗಿದೆ.

### ೨. ಲಾವಣಿ ಸಾಹಿತ್ಯ: ರಾಷ್ಟ್ರೀಯತೆ - ವಸಾಹತುಶಾಹಿ

ಫ್ಲೀಟರು ಸಂಗ್ರಹಿಸಿದ ಲಾವಣಿಗಳು ಚಾರಿತ್ರಿಕ ದೃಷ್ಟಿಯಿಂದ ಅತ್ಯಂತ ಮಹತ್ವವಾದವು. ಬ್ರಿಟಿಷರ ಆಳ್ವಿಕೆ, ವ್ಯಾಪಾರಿ ಧೋರಣೆಗಳು, ಕಾಯಿದೆಗಳು ದೇಶಿಯ ರಾಜಕೀಯದಲ್ಲಿ ಗೊಂದಲವನ್ನುಂಟು ಮಾಡಿದವು. ಸಾಮ್ರಾಜ್ಯಶಾಹಿ ಧೋರಣೆಗಳಿಗೆ ದೇಶಿಯರು ತೋರಿದ ಪ್ರತಿಭಟನೆಯನ್ನು ಈ ಲಾವಣಿಗಳಲ್ಲಿ ಮುಖ್ಯವಾಗಿ ಕಾಣುತ್ತೇವೆ. ಬ್ರಿಟಿಷರು ತಮ್ಮ ಅಧಿಕಾರವನ್ನು ಸ್ಥಿರಗೊಳಿಸಲು ನಡೆಸಿದ ಅನೇಕ ಕುಮ್ಮಕ್ಕುಗಳಿಗೆ ನೇರವಾಗಿ ಪ್ರತಿಕ್ರಿಯಿಸಿದ ಘಟನೆಗಳ ದಾಖಲೆಗಳು ಲಾವಣಿಗಳಲ್ಲಿ ಅಭಿವ್ಯಕ್ತಿಗೊಂಡಿವೆ. ಅಂತೆಯೇ ವಸಾಹತು ಸಂಸ್ಕೃತಿಗೆ ತೋರಿದ ತಮ್ಮ ವಿರೋಧಗಳಲ್ಲಿ

ಈ ಲಾವಣಿಗಳನ್ನು ಕುರ್ತಕೋಟಿ-ಕಲ್ಮೇಶ, ಅಪ್ಪು, ಸುಂದರ ಹೆಬ್ಬಳ್ಳಿ ಬಸವ, ಗುರುಸಿದ್ಧ, ಮಂಡಲ ಹೆಬ್ಬಳ್ಳಿ ಪುಂಡರುಬಸವರು ಮೊದಲಾದವರು ಬರೆದಿದ್ದಾರೆ.

ಈ ಕಾಲದಲ್ಲಿ ದೇಶಿಯರನ್ನು ಅಸಹಾಯಕರನ್ನಾಗಿಸಲು ಹೂಡಿದ ತಂತ್ರಗಳು ಬಹುಮುಖವಾದವು. ದತ್ತು ಮಕ್ಕಳಿಗೆ ಹಕ್ಕಿಲ್ಲದಿರುವುದು, ನಿರಾಯುಧ ಕಾಯಿದೆ, ಆದಾಯ ತೆರಿಗೆ ಮೊದಲಾದ ಕಾಯಿದೆಗಳು ಜನರನ್ನು ತಲ್ಲಣಗೊಳಿಸಿದವು. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಈ ನಿಯಮಗಳು ಜನತೆಯನ್ನು ಘಾಸಿಗೊಳಿಸಿದ ವಾಸ್ತವ ಚಿತ್ರವನ್ನು ಈ ಲಾವಣಿಗಳಲ್ಲಿ ಕಾಣುತ್ತೇವೆ. ಫ್ಲೀಟ್ ಸಾಹೇಬರು ಬರೆದ ಟಿಪ್ಪಣಿಗಳು ಚಾರಿತ್ರಿಕ ಅಂಶಗಳನ್ನು ಒದಗಿಸುತ್ತವೆ. ಇವು ಫ್ಲೀಟರಂಥ ಸಂಸ್ಕೃತಿಯ ಆಸಕ್ತರಿಗೆ ಚಾರಿತ್ರಿಕ ದೇಶಿಯ ಸಂಸ್ಕೃತಿಯ ಬಗ್ಗೆ ಇದ್ದ ಕಾಳಜಿ ಹಾಗೂ ಒಲವುಗಳನ್ನು ಈ ಟಿಪ್ಪಣಿಗಳಲ್ಲಿ ಕಾಣುತ್ತೇವೆ. ಅಂದಿನ ಪರಿಸರದ ಭಗ್ನ ಹಾಗೂ ಸ್ಥಿತ್ಯಂತರಗಳಿಗೆ ಒಳಗಾದ ಸ್ಪಷ್ಟ ಚಿತ್ರವನ್ನು ಕೊಡುವುದರ ಮೂಲಕ, ಆ ಕಾಲದಲ್ಲಿ ಕನ್ನಡ ಸಂಸ್ಕೃತಿಗೆ ಬದ್ಧವಾಗಿನಿಂತ ಗ್ರಾಮಿಣ ಪರಿಸರದ ಸಂವೇದನೆಯ ಸ್ವರೂಪ ಆ ಕಾಲದ ಲಾವಣಿ, ಜನಪದ ಹಾಡು ಹಾಗೂ ಇನ್ನಿತರ ಅಭಿವ್ಯಕ್ತಿಗಳಲ್ಲಿ ವ್ಯಕ್ತವಾಗಿದೆ.

ಸಂಗೊಳ್ಳಿರಾಯಣ್ಣ, ಆದಾಯತೆರಿಗೆ, ಹಲಗಲಿಯ ಬೇಡರು, ಕಿತ್ತೂರ ಚನ್ನವ್ವನ ಸೊಸೆ, ಲಾವಣಿಪದಾ, ಬಾದಾಮಿ ಕಿಲೆ ಕೆಡವಿದ ಪದ, ಇಂಗ್ರೇಜ ಸಂಸ್ಥಾನದ ಮೇಲಿನ ಪದ, ಮುಂತಾದ ಲಾವಣಿಗಳಲ್ಲಿ ಮುಖ್ಯವಾಗಿ ವೈಯಕ್ತಿಕ ಹಾಗೂ ಸಾಮುದಾಯಿಕವಾಗಿ ಉಂಟಾದ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಛಿದ್ರಾವಸ್ಥೆ ಹಾಗೂ ಅದಕ್ಕೆ ದೇಶೀಯರು ತೋರಿದ ಬಂಡಾಯವೆ ಮುಖ್ಯ ವಸ್ತುವಾಗಿದೆ. ವಸಾಹತು ಸಂಸ್ಕೃತಿಯ ದಬ್ಬಾಳಿಕೆಯ ಅತಿಕ್ರಮಣದಿಂದ ಶೋಷಿತನಾದ ರಾಮಣ್ಣನ ಪ್ರತಿಭಟನೆಯ ಚಿತ್ರವನ್ನು 'ಸಂಗೊಳ್ಳಿರಾಯಣ್ಣ'ನ ಲಾವಣಿಯಲ್ಲಿ ನೋಡುತ್ತೇವೆ. ಸ್ಥಳೀಯ ಹಾಗೂ ಬ್ರಿಟಿಷ್ ಅಧಿಕಾರಿಶಾಹಿಗಳ ವಿರುದ್ಧ ಹೂಡಿದ ಬಂಡಾಯ ಈ ಲಾವಣಿಯಲ್ಲಿ ಮುಖ್ಯವಾಗಿದೆ. (ನೋಡಿ; ಅನುಬಂಧ-ಮೂರು)

'ಆದಾಯತೆರಿಗೆ' ಲಾವಣಿಯು ಇಂಗ್ರೇಜಿ ಸರಕಾರದಿಂದ ಉಂಟಾದ ಜನಜೀವನದ ದೀನಸ್ಥಿತಿಯನ್ನು ವಸ್ತುವನ್ನಾಗಿ ಹೊಂದಿದೆ. ಜೊತೆಗೆ ಸಾಮಾಜಿಕ ವಿಡಂಬನೆ ಪ್ರಮುಖವಾಗಿ ವ್ಯಕ್ತಗೊಂಡಿದೆ.

ಏನ ಹೇಳಲಿ ಜನ್ಮದ ಗೋಳಾ
ಇಂಗ್ರಜಿ ಉಪದರ್ ಆದೀತ ಬಾಳಾ
ಬಡವರ ಅಳತಾರೊ ಗಳಗಳಾ
ಮಾಡತಾರ ಚಿಂತಿ.
- - - - - - - - - - - - -
ಸರಕಾರಕ ದೊರಿತ ಮಸಲತ್ತಾ
ಕರಪಟ್ಟಿ ಹಕ್ಕಾರ ತುರತಾ-ತುರತಾ
ರೈತರ ದುಡ್ಡ ಎಳುವ ಹಿಕಮತ್ತ
ಮಾಡಿದಾರ ಹೀಂಗ[೫]

ರಸ್ತೆ, ಕಾಲುವೆ, ಇತರ ರಿಪೇರಿಗಳ ಕಾರಣದಿಂದ ವಿಧಿಸಿದ ಆದಾಯತೆರಿಗೆಯು ಸಾಮಾನ್ಯ ಜನರನ್ನು ಕಷ್ಟಕ್ಕೆ ಗುರಿಮಾಡಿತು. ಆಗ ಸಾಮಾಜಿಕ ಜೀವನದಲ್ಲಿ ತಲೆದೋರಿದ ಸಮಸ್ಯೆಗಳನ್ನು ಈ ಲಾವಣಿ ಚಿತ್ರಿಸುತ್ತದೆ.

> ಬ್ರಿಟಿಷರ ದಬ್ಬಾಳಿಕೆಯ ಮತ್ತೊಂದು ಕ್ರೂರ ನೋಟ ಇಲ್ಲಿದೆ. ಗೌಡ ಊರ ಮುಂದೆ ಕುಣಿದರೆ ಕುಳುವಾಡಿ ಕೋಣೆ ಮುಂದೆ ಕುಣಿದ ಎಂಬಂತೆ ಬ್ರಿಟಿಷರು ಭೂಮಿಯನ್ನು ದೋಚಿದುದಲ್ಲದೆ ಆ ಭೂಮಿಯಿಂದ ನಮ್ಮ ಜನ ಕಷ್ಟ ಪಟ್ಟು ತೆಗೆಯುತ್ತಿದ್ದ ಸಂಪತ್ತನ್ನು ಅಧಿಕೃತವಾಗಿ ಪಡೆಯಲು ಅಧಿಕಾರಿಗಳನ್ನು ನೇಮಿಸಿದರೆ ಆ ಅಧಿಕಾರಿಗಳು ಅನ್ನ ಇಕ್ಕಿದ ಮನೆಗೆ ಕನ್ನ ಇಕ್ಕುವ ಕೆಲಸವನ್ನು ಪರೋಕ್ಷವಾಗಿ ಕೈಗೊಳ್ಳುತ್ತಾರೆ[1]

ಈ ಮೇಲಿನ ಮಾತುಗಳು 'ಆದಾಯ ತೆರಿಗೆ' ಲಾವಣಿಯ ಮುಖ್ಯ ಧೋರಣೆಯಾಗಿದೆ. 'ಹಲಗಲಿಯ ಬೇಡರು; 'ಕಿತ್ತೂರ ಚನ್ನವ್ವನ ಸೊಸೆ, ಲಾವಣಿಗಳಲ್ಲಿ ವಸಾಹತುಶಾಹಿ ಅಧಿಕಾರವನ್ನು ನೆಲೆಗೊಳಿಸಲು ಹೂಡಿದ ತಂತ್ರಗಳ ಬಗೆಗಿನ ವಿರೋಧವೇ ವಸ್ತು. ಆಯುಧಗಳ ಒಪ್ಪಿಸುವಿಕೆ, ದತ್ತು ಮಕ್ಕಳಿಗೆ ಹಕ್ಕಿಲ್ಲದಿರುವುದು ಮೊದಲಾದ ಕಾಯಿದೆಗಳು ಸ್ಥಳೀಯರನ್ನು ಬಲಹೀನರನ್ನಾಗಿಸಲು ಸೃಷ್ಟಿಸಿದ ತಂತ್ರ-ಖೆಡ್ಡಾಗಳು. ಇಂಥ ಬ್ರಿಟಿಷ್ ಧೋರಣೆಗಳು ಆಯುಧಗಳನ್ನೆ ಜೀವನೋಪಾಯದ ವಸ್ತುಗಳನ್ನಾಗಿಸಿಕೊಂಡಿದ್ದ ಬೇಡರನ್ನು ತತ್ತರಿಸುವಂತೆ ಮಾಡಿತು. ಫ್ಲೀಟರ ಮಾತುಗಳಲ್ಲಿಯೇ ಹೇಳುವುದಾದರೆ-

> ದಕ್ಷಿಣ ಮರಾಠಾ ನಾಡಿನ ಮುಧೋಳ ಸಂಸ್ಥಾನಕ್ಕೆ ಸೇರಿದ ಹಲಗಲಿ ಎಂಬ ಹಳ್ಳಿಯ ದೃಶ್ಯವನ್ನೊಳಗೊಂಡು ೧೮೫೭ರ ಬಂಡಾಯದ ಪರಿಣಾಮವಾಗಿ ಬ್ರಿಟಿಷ್ ಜಿಲ್ಲೆಗಳಲ್ಲಿ ಮತ್ತು ರಾಜಕೀಯ ಮೇಲ್ವಿಚಾರಣೆಗೊಳಪಟ್ಟು ಸ್ವದೇಶೀ ಸಂಸ್ಥಾನಗಳಲ್ಲಿ ಜಾರಿಗೆ ಬಂದ ನಿಶ್ಯಸ್ತ್ರೀಕರಣ ಹಂಚಿಕೆಗಳಿಗೆ ಸಂಬಂಧಪಟ್ಟಿದ್ದು ಈ ಲಾವಣಿ:[2]

ಪೂಜಾರಿ ಹನುಮ, ಬಾಲ, ಜಡಗ ಮತ್ತು ರಾಮ ಮುಂತಾದವರ ಪ್ರೇರಣೆಯಿಂದ ಹಲಗಲಿಯ ಬೇಡರು ತಮ್ಮ ಆಯುಧಗಳನ್ನು ತಂದು ಒಪ್ಪಿಸದಿರಲು ಬಂಡಾಯವನ್ನೇ ಹೂಡುತ್ತಾರೆ. ಆಯುಧಗಳೇ ಜೀವನಾಧಾರವಾಗಿದ್ದ ಬೇಡರನ್ನು ಇಂತಹ ಕ್ರೂರ ಶಾಸನಗಳು ಸಿಟ್ಟಿಗೇಳುವಂತೆ ಮಾಡಿದವು. ಆಯುಧಗಳನ್ನು ತಂದೊಪ್ಪಿಸಲು ನಿರಾಕರಿಸಿದ ಬೇಡರ ಮತ್ತು ಬ್ರಿಟಿಷರ ನಡುವೆ ಭೀಕರದಾಳಿಯೇ ನಡೆಯಿತು. ರಾತ್ರೋರಾತ್ರಿ ಇಡೀ ಊರನ್ನೇ ಬೆಂಕಿಗೆ ಆಹುತಿಯನ್ನಾಗಿ ಮಾಡಿದರು.

ಕತ್ತಿ ಕುದುರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಭಂಗಾರಾ ಹರಳಿನ್ -ಉಂಗುರಾ ಹೊನ್ನ್ -ಉಂಗುರಗೋಲಾ
- - - - - - - - - - - - -
ಸರಗಿಸರ್ದಳಿ ಬುಗುಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣಾ ನಡವಿನ-ಡಾಬಾ ನಡಕಟ್ಟು ರುಮಾಲಾ
- - - - - - - - - - - - -

ಉಪ್ಪು ಯೆಣ್ಣೆ ಅರಶಿಣ ಜೀರಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳ ಚರಗಿ ಮಂಗಳ-ಸೂತ್ರಾತ ಕೊಂಡ ಹೋದರ ಬಿಸು-ಕಲ್ಲು
- - - - - - - - - - - - -
ಯೆಲ್ಲ ತಗೊಂಡರೊ ಶಿಕ್ಕ್ -ಅಷ್ಟು
ಸರ್ದ ನಿಂತರೊ ವೂರಿಗೆ ಕೊಳ್ಳಿ ಕೊಟ್ಟು
ಬೂದಿ ಮಾಡೆರ ಹಗಲಲಿ ಸುಟ್ಟು
ಹಲಗಲಿ ಗುರ್ತ ಎಳ್ಳಷ್ಟು[೮]

ಹಲಗಲಿಯನ್ನು ಲೂಟಿ ಮಾಡುವ, ಬೆಂಕಿಹಚ್ಚಿ ಬೂದಿ ಮಾಡುವ ಕ್ರಿಯೆಗಳು ಇಡೀ ಭಾರತೀಯ ಸಾಂಸ್ಕೃತಿಕ ಬದುಕನ್ನೇ ಬಹುದೊಡ್ಡ ಆಘಾತಕ್ಕೆ ಗುರಿ ಮಾಡಿದ ಚಿತ್ರವನ್ನು ಇಂತಹ ಲಾವಣಿಗಳಲ್ಲಿ ದಾಖಲಿಸಿದೆ. ಈ ಲಾವಣಿಗಳು ನಾಡಿನ ಬದುಕಿನ ದಿನನಿತ್ಯದ ಸಂಗತಿಗಳನ್ನು ದಾಖಲಿಸುವುದರ ಮೂಲಕ ವಸಾಹತುಶಾಹಿಯ ಆಕ್ರಮಣ ನಾಡವರ ಮನಸ್ಸು ಹಾಗೂ ಭೌತಿಕ ಸಂಬಂಧಗಳ ಮೇಲೆ ಉಂಟು ಮಾಡಿದ ಗಾಢ ಪರಿಣಾಮವನ್ನು ಪ್ರತಿಬಿಂಬಿಸುತ್ತವೆ. ಅದನ್ನು ಮೀರಿ ನಿಲ್ಲುವ ತೀವ್ರತೆ ಹಾಗೂ ಪ್ರತಿರೋಧಗಳನ್ನು ಇಲ್ಲಿ ಕಾಣುತ್ತೇವೆ. ವಸಾಹತುಶಾಹಿಯ ಪ್ರಭಾವ ಗ್ರಾಮಜೀವನದ ಆಳಕ್ಕೆ ಇಳಿಯುತ್ತಿರುವುದರ ಸಂದರ್ಭವನ್ನು ಇಲ್ಲಿ ಗುರುತಿಸಬಹುದು. ಕಾವ್ಯದಂತಹ ನಿರ್ಮಿತಿಯಿಂದ ಒಂದು ಸಾಂಸ್ಕೃತಿಕ ಸಂದರ್ಭದ ಎಲ್ಲ ಮಟ್ಟದ ಸಂಬಂಧಗಳನ್ನು ಈ ಲಾವಣಿಗಳು ಕ್ರಿಯಾಶೀಲವಾಗಿ ಹಿಡಿದಿಟ್ಟಿವೆ. ಇಂಥದೇ ಧೋರಣೆ ಅನಂತರದ ಕನ್ನಡ ಕಾವ್ಯದಲ್ಲಿ ಮತ್ತೂ ಸ್ಫುಟಗೊಳ್ಳುವುದನ್ನು ಕಾಣುತ್ತೇವೆ.

ಕರ್ನಾಟಕದ ಸಂದರ್ಭದಲ್ಲಿ ರಾಷ್ಟ್ರೀಯ ಚಳವಳಿ ಸುಮಾರು ೧೮೮೦ರ ಹೊತ್ತಿಗೆ ಆರಂಭವಾಯಿತು. ಕೆಳವರ್ಗದಲ್ಲಿ ಹೊಸಪ್ರಜ್ಞೆ ಏರ್ಪಟ್ಟು ಅವರು ನಿಧಾನವಾಗಿ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಲು ಆರಂಭಿಸಿದರು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿದ್ಯಾಸಂಸ್ಥೆಗಳು ಹುಟ್ಟಿಕೊಂಡವು. ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧವಾಗಿ ಹೊಸ ರಾಜಕೀಯ ಜಾಗೃತಿ ಆರಂಭವಾಯಿತು. ಬ್ರಾಹ್ಮಣೇತರ ರಾಜಕೀಯ ಸಂಘಟನೆಗೆ ವಿಶೇಷ ಮಹತ್ವ ಪ್ರಾಪ್ತವಾಯಿತು. ಒಂದು ರೀತಿಯಲ್ಲಿ ಬ್ರಾಹ್ಮಣೇತರ ರಾಜಕೀಯ ಸಂಘಟನೆ ಕಾಂಗ್ರೆಸ್‌ಪಕ್ಷ ಕರ್ನಾಟಕದಲ್ಲಿ ಪ್ರಭಾವಶಾಲಿಯಾದ ರಾಜಕೀಯ ಶಕ್ತಿಯಾಗಿ ಬೆಳೆಯಲು ಅಡ್ಡಿ ಉಂಟುಮಾಡಿದೆ.

ಈ ಕಾಲದ ಕನ್ನಡಕಾವ್ಯ ಪ್ರಮುಖವಾಗಿ ಲಾವಣಿ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಂಡಿದೆ. ಈ ಲಾವಣಿ ಸಾಹಿತ್ಯ ವ್ಯಾಪಕವಾದದ್ದಾಗಿದ್ದು, ಅವುಗಳ ಸಂಗ್ರಹ ಹಾಗೂ ವಿಶ್ಲೇಷಣೆಗಳಿಗೆ ಇದೀಗ ಆರಂಭವಾಗುತ್ತಿದೆ. ಈ ರಚನೆಗಳು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಇದುವರೆಗೆ ಅಷ್ಟು ಪ್ರಮುಖ ಸ್ಥಾನವನ್ನು ಪಡೆಯದಿರುವುದು ನಮ್ಮ ಗಮನಕ್ಕೆ ಬಂದಿದೆ. ದೇಶದ ಗತವೈಭವ, ಪ್ರಮುಖ ರಾಜಕೀಯ ನಾಯಕರು, ಬ್ರಿಟಿಷರ ಹೊಸ ಕಾಯಿದೆಗಳನ್ನು ವಿರೋಧಿಸಿದ ನೆಲೆ, ಪೋಲಿಸರ ಕೌರ್ಯ, ಜೈಲಿನಲ್ಲಿ ಅಮಾನವೀಯವಾಗಿ ನಡೆಸಿಕೊಂಡಿದ್ದರ ಬಗ್ಗೆ ಪ್ರತಿಕ್ರಿಯೆ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ನಡೆದ ವಿದ್ಯಮಾನ, ಮಹಾಯುದ್ಧಗಳ ಭೀಕರತೆ, ಇವುಗಳು ಪ್ರಮುಖ ವಸ್ತುಗಳಾಗಿದ್ದವು. ಅಲ್ಲದೆ ಸ್ತ್ರೀ

ಸಮುದಾಯದ ಮೇಲೆ ಆಗುತ್ತಿದ್ದ ದಮನವನ್ನು ವಿರೋಧಿಸಿ ಕೂಡ ಅನೇಕ ಲಾವಣಿಗಳು ರಚಿತವಾಗಿವೆ. ಈ ಲಾವಣಿ ಕವಿಗಳು ಬ್ರಿಟಿಷರನ್ನು ವಿರೋಧಿಸಿದ ರೀತಿಯಲ್ಲಿಯೆ ದೇಶಿಯ ಸಂಸ್ಥಾನಗಳಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಯನ್ನು ಕೂಡ ವಿರೋಧಿಸಿದ್ದಾರೆ. (ನೋಡಿ : ಅನುಬಂಧ : ಮೂರು)

ರಾಷ್ಟ್ರೀಯ ಚಳವಳಿಯ ಮತ್ತು ಪ್ರಮುಖ ಭಾಗವಾಗಿದ್ದ ಗಾಂಧೀಜಿಯವರ ರಚನಾತ್ಮಕ ಕಾರ್ಯ ಚಟುವಟಿಕೆಗಳು ನವೋದಯಪೂರ್ವ ಕನ್ನಡಕಾವ್ಯದ ಮುಖ್ಯವಸ್ತುವಾಗಿದೆ. ಬ್ರಿಟಿಷರ ಉತ್ಪಾದನೆಯನ್ನು ವಿರೋಧಿಸಿ ದೇಶಿ ಉತ್ಪಾದನೆಗಳ ಬಗ್ಗೆ ಆಸಕ್ತಿಯನ್ನು ತೋರಿದ ಬಗೆಗೆ ಲಾವಣಿ ಸಾಹಿತ್ಯದಲ್ಲಿ ಉಲ್ಲೇಖಗಳಿವೆ. ಅಲ್ಲದೆ, ಪಾನನಿರೋಧದ ಬಗೆಗೆ ತಿಳುವಳಿಕೆ ಅಸ್ಪೃಶ್ಯರ ಸಮಸ್ಯೆಯನ್ನು ಕುರಿತ ಜಿಜ್ಞಾಸೆ, ಕರ್ನಾಟಕದ ಏಕೀಕರಣಕ್ಕಾಗಿ ಒತ್ತಾಯ, ಇವೆಲ್ಲ ಆ ಹೊತ್ತಿನ ಕಾವ್ಯಕ್ಕೆ ಒದಗಿ ಬಂದ ಮುಖ್ಯ ದ್ರವ್ಯವಾಗಿದೆ.

ಅಸ್ಪೃಶ್ಯತೆಯ ವಿರುದ್ಧವಾಗಿ ರಚಿತವಾಗಿರುವ ಲಾವಣಿಗಳು ಅನೇಕ ದೃಷ್ಟಿಗಳಿಂದ ಗಮನಾರ್ಹವಾಗಿವೆ. ಸಂಪ್ರದಾಯ ಸಮಾಜವ್ಯವಸ್ಥೆಗೆ ಸವಾಲನ್ನು ಎಸೆಯುವ ಹುಲಕುಂದ ಭೀಮಕವಿಯ ಅನೇಕ ರಚನೆಗಳು ಇಂಥ ಹಿನ್ನೆಲೆಯನ್ನು ಹೊಂದಿವೆ.

ಕನ್ನಡದ ದೇಸಿಕಾವ್ಯ ಪ್ರಕಾರಗಳಿಂದ ಪ್ರಭಾವಿತವಾದ ಅಂದಿನ ಈ ಲಾವಣಿಗಳು ಜನಪ್ರಿಯ ಅಭಿವ್ಯಕ್ತಿಯಾಗಿ ಹರಿದು ಬಂದಿರುವುದನ್ನು ಈ ಹಿಂದೆಯೇ ವಿವೇಚಿಸಿದ್ದೇವೆ. ಈ ಲಾವಣಿಗಳ ಹಿಂದೆ ಒಬ್ಬ ಕವಿ ಕಾಣುತ್ತಾನಾದರೂ, ಅದರ ಹಿಂದೆ ನಾಡಿನ ಸಮುದಾಯದ ಆಶಯಗಳು ಪ್ರತಿಧ್ವನಿತಗೊಂಡಿವೆ. ಆದ್ದರಿಂದ ಈ ಲಾವಣಿಗಳಿಗೆ ಸಾಂಸ್ಕೃತಿಕ ವ್ಯಾಪ್ತಿ ಒದಗಿಬಂದಿದೆ.

## ಅಡಿಟಿಪ್ಪಣಿ

೧. ಬೇಂದ್ರೆ, ದ.ರಾ., *ಸಾಹಿತ್ಯ ವಿರಾಟ್ ಸ್ವರೂಪ,* ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪, ಪುಟ-೬೩೪

೨. ನಾಗರಾಜ,ಕಿ.ರಂ.; *ಕರ್ನಾಟಕ ಜಾನಪದ,* ಸಂ-ಶಿವರುದ್ರಪ್ಪ. ಜಿ.ಎಸ್., ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,೧೯೮೧, ಪುಟ-೩೯,೪೦

೩. ಶಿಶುನಾಳ ಶರೀಫ, *ಬರಕೊ ಪದಾ ಬರಕೋ,* (ಸಂ)ಶಿವಾನಂದ ಗುಬ್ಬಣ್ಣನವರ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೧೯೮೧; ಪುಟ-೧೫೭

೪. ಶಿಶುನಾಳ ಶರೀಫ, ಅದೇ ಪುಟ-೧೫೭

೫ ಕ್ಯಾತನ ಹಳ್ಳಿ ರಾಮಣ್ಣ (ಸಂ); *ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು,* ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨, ಪುಟ-೫೧-೫೨

೬. ಕ್ಯಾತನ ಹಳ್ಳಿ ರಾಮಣ್ಣ (ಸಂ); ಅದೇ ಪುಟ-೧೧

೭. ಜಾನ್ ಫೆಯ್ತ್ ಫುಲ್ ಫ್ಲೀಟ್; *ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು,* (ಸಂ) ಕ್ಯಾತನ ಹಳ್ಳಿ ರಾಮಣ್ಣ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨, ಪುಟ-೫೯

೮ ಕ್ಯಾತನ ಹಳ್ಳಿ, ರಾಮಣ್ಣ; (ಸಂ) *ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು;* ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨, ಪುಟ-೬೭

# ಅಧ್ಯಾಯ : ನಾಲ್ಕು

## ಬೇಂದ್ರೆ ಕಾವ್ಯ : ಸ್ಥಳೀಯತೆ, ವಸಾಹತುಶಾಹಿ

ಹಳುವ ತಪ್ಪಿದ ಹಕ್ಕಿ
ಬಟ್ಟ ಬಯಲೊಳು ಸಿಕ್ಕಿ-
ಕೊಂಡು ತೊಳಲಾಡುವುದು ಗೂಡಿಗಾಗಿ.
ಪ್ರತಿಯೊಂದು ಜೀವವೂ
ಪ್ರತಿಯೊಂದು ಭಾವವೂ
ಹುಡುಕುವುದು ತನ್ನೊಂದು ನಾಡಿಗಾಗಿ.

ಗೂಡ ಹುಡುಕುವ ಹಕ್ಕಿ
ನಿನ್ನ ಎರಡೂ ರೆಕ್ಕೆ
ಮನೆ ಸಿಗುವವರೆಗೆ ಬಲಗುಂದದಿರಲಿ.
ಗಾಳಿ ಬಯಲಿನ ಬೀದಿ
ಹೆಜ್ಜೆ ಮೂಡದ ಹಾದಿ-
ಯಲ್ಲಿ ಕುರುಹನು ಕಾಂಬ ಕಣ್ಣು ಬರಲಿ.

-ಬೇಂದ್ರೆ

ಬ್ರಿಟಿಷರು ಭಾರತಕ್ಕೆ ಬಂದ ಸಂದರ್ಭದಲ್ಲಿ ಇಲ್ಲಿನ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಿಸರ ಅತ್ಯಂತ ದಮನೀಯ ನೆಲೆಯನ್ನು ಮುಟ್ಟಿತ್ತು. ಭಾರತ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತಕ್ಕೆ ಕ್ರಮಕ್ರಮೇಣ ಒಳಪಡುವ ಮೊದಲು ಸಣ್ಣ ಸಣ್ಣ ಸಂಸ್ಥಾನಗಳಾಗಿ ದೇಶೀಯ ಆಳರಸರ ಸ್ವತಂತ್ರ ಆಳ್ವಿಕೆಗೆ ಒಳಪಟ್ಟಿತ್ತು. ಹಾಗೆಯೇ ಅಂದಿನ ರಾಜಕೀಯ ಪರಿಸ್ಥಿತಿ ವೈಯಕ್ತಿಕ ಭೋಗಾಸಕ್ತಿಗಳಲ್ಲಿ ಮುಳುಗಿ ತನ್ನ ಜವಾಬ್ದಾರಿಗಳನ್ನೆ ಮರೆತಿತ್ತು. ಜಾತಿ, ಧರ್ಮ, ಬಾಲ್ಯ ವಿವಾಹ, ಜೀತಪದ್ಧತಿ ಮೊದಲಾದ ಸಮಸ್ಯೆಗಳು ದೇಶದಲ್ಲಿ ಸಾಮಾಜಿಕ ಅಸಮಾನತೆಗೆ ಎಡೆಗೊಟ್ಟಿದ್ದರಿಂದ ಇಡೀ ರಾಷ್ಟ್ರ ಶುಷ್ಕವಾದ ವಾದ - ವಿವಾದಗಳಲ್ಲಿ ಮುಳುಗಿತ್ತು. ಪುರೋಹಿತಶಾಹಿ ವ್ಯವಸ್ಥೆಯು ವೈದಿಕ ಧರ್ಮದ ಮೂಲ ಸೆಲೆಗಳನ್ನು, ಅದರ ಮಾನವೀಯ ಜೀವಂತ ಕಾಣ್ಕೆಗಳನ್ನು ಸಾಮಾನ್ಯರ ಪಾಲಿಗೆ ಎಟುಕದಂತೆ ಎಚ್ಚರವಹಿಸಿತ್ತು. ಧರ್ಮ-ಧರ್ಮಗಳ ನಡುವೆ ಏರ್ಪಟ್ಟ ವೈರುಧ್ಯಗಳು ಹಾಗೂ ಶೈವ-ವೈಷ್ಣವರಲ್ಲಿ ತಲೆದೋರಿದ ವಾದ ವಿವಾದಗಳು ಅಖಂಡ ಭಾರತದ ಬದುಕನ್ನು ತಲ್ಲಣಗಳಿಗೆ ಗುರಿಮಾಡಿದ್ದವು. ಮತೀಯ ಮೌಢ್ಯತೆಯೂ ಸಮಗ್ರ ಬದುಕನ್ನು ವ್ಯಾಪಿಸಿತ್ತು. ಭಾರತೀಯ ಸನಾತನ ಹಾಗೂ ಮಾನವೀಯ ವಿಚಾರಧಾರೆಗಳು ಮರೆಯಾಗಿ, ಕೇವಲ ಯಾಂತ್ರಿಕ ಕ್ರಿಯಾಚರಣೆಗಳಲ್ಲಿಯೂ ಅರ್ಥಹೀನ ಮತಾಚಾರಗಳಲ್ಲಿಯೂ ಜನತೆ ಮುಳುಗಿತ್ತೆಂಬ ವಿಚಾರವನ್ನು ಆ ಕಾಲದ ಅನೇಕ ಸಾಂಸ್ಕೃತಿಕ ದಾಖಲೆಗಳು ಪ್ರಕಟಪಡಿಸುತ್ತವೆ.



ಇಂತಹ ಚಾರಿತ್ರಿಕ ಸನ್ನಿವೇಶದಲ್ಲಿ ಬ್ರಿಟಿಷರ ಆಗಮನವು ಭಾರತದ ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಅಗಾಧ ಪಲ್ಲಟಗಳನ್ನುಂಟುಮಾಡಿತು. ಅಂಥ ಪಲ್ಲಟಗಳ ಪರಿಣಾಮ ದೇಶದ ಎಲ್ಲ ಭಾಗಗಳ ಮೇಲೂ ಕ್ರಮಕ್ರಮೇಣ ಉಂಟಾಯಿತು. ಪುರೋಹಿತಶಾಹಿ ವ್ಯವಸ್ಥೆಯಿಂದ ತಳಮಳಕ್ಕೆ ಒಳಗಾಗಿದ್ದ ಜನತೆ ಪಾಶ್ಚಾತ್ಯ ವಿಚಾರಧಾರೆಗೆ ಆಕರ್ಷಿತರಾದರು. ಪಾಶ್ಚಾತ್ಯರ ವಿಜ್ಞಾನ, ದರ್ಶನ ಶಾಸ್ತ್ರ, ಇತಿಹಾಸ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಧಾರೆ ಇಲ್ಲಿನ ಜನಜೀವನದ ಮೇಲೆ ವಿಶೇಷ ಹಿಡಿತವನ್ನು ಸಾಧಿಸಿತು. ವಸಾಹತುಶಾಹಿಯು ತನ್ನ

ಆಕ್ರಮಣಕಾರಿ ಸಂಸ್ಕೃತಿಯನ್ನು ನೆಲೆಗೊಳಿಸಲು ಕೈಗೊಂಡ ಕ್ರಮಗಳು ಇಲ್ಲಿನ ಒಟ್ಟು ಸಾಂಸ್ಕೃತಿಕ ಪರಿಸರದ ಮೇಲೆ ತಮ್ಮ ಪ್ರಭಾವವನ್ನು ಬೀರಿದವು. ಅಂತೆಯೇ ಬ್ರಿಟಿಷರ ರಾಜಕೀಯ ಯಂತ್ರ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಲು ಅನೇಕ ಸುಧಾರಣಾವಾದಿ ಚಟುವಟಿಕೆಗಳಲ್ಲಿ ತೊಡಗಿತು.

ಇಂಗ್ಲಿಷ್ ವಿದ್ಯಾಭ್ಯಾಸ ಹಾಗೂ ಕ್ರೈಸ್ತಧರ್ಮ ಪ್ರಚಾರವು ಅಂಥ ಚಟುವಟಿಕೆಗಳಲ್ಲಿ ಬಹುಮುಖ್ಯವಾದುವು. ಇಂಗ್ಲಿಷ್ ವಿದ್ಯಾಭ್ಯಾಸದಿಂದ ಉತ್ಪನ್ನವಾದ ಹೊಸ ವಿಚಾರಧಾರೆ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ತಲೆದೋರಿದ್ದ ಅನಿಷ್ಟಗಳನ್ನು ಪರಿಹರಿಸಿ ಕೊಳ್ಳಲು ಸಹಾಯಕವಾಯಿತು. ಹೊಸ ವಿಚಾರಧಾರೆಗಳು ಸಮಗ್ರವಾಗಿ ಪಲ್ಲಟಗಳನ್ನು ತರದಿದ್ದರೂ ಧಾರ್ಮಿಕ-ಸಾಮಾಜಿಕ ಬದುಕಿನ ಮೇಲ್ಮಟ್ಟದ ಬದಲಾವಣೆಗೆ ಗುರಿ ಮಾಡಿತೆನ್ನಬಹುದು. ಕ್ರೈಸ್ತ ಧರ್ಮದ ಪ್ರಚಾರಣೆಗೆ ತೊಡಗಲು ಪರಕೀಯರು ನೇರವಾಗಿ ವೈದಿಕ ಧರ್ಮದ ಮೌಢ್ಯಗಳನ್ನು, ಆಚಾರ-ವಿಚಾರಗಳನ್ನು ಕಟುವಿಮರ್ಶೆ ಹಾಗೂ ಟೀಕೆಗಳಿಗೆ ಗುರಿ ಮಾಡಿದರು. ಇಂಥ ಆಕ್ರಮಣಕಾರಿ ನೆಲೆಗಳಿಂದ ಹೊರಟ ವಸಾಹತುಶಾಹಿಗೆ, ಸ್ಥಳೀಯ ಪುರೋಹಿತಶಾಹಿ ಮೌಢ್ಯಗಳಿಗೆ ಒಳಗಾದ ಜನತೆ ಪಾಶ್ಚಾತ್ಯ ವಿಚಾರಧಾರೆಗೆ ಸುಲಭವಾಗಿ ಆಕರ್ಷಿತವಾಗುವುದರೊಂದಿಗೆ, ಪಾಶ್ಚಾತ್ಯ, ಸಂಸ್ಕೃತಿಯನ್ನು ಜೀವನದ ಬಹುಮುಖ್ಯ ಮೌಲ್ಯ ಎಂಬಂತೆ ಅನುಕರಿಸಿತು. ಆದರೆ ಅಂಥ ಅನುಕರಣೆಯಿಂದ ಹೊರಬಂದು ತಮ್ಮ ಅನನ್ಯತೆಗಳನ್ನು ಶೋಧಿಸಿಕೊಳ್ಳಲು ತೊಡಗಿದ್ದು ನವೋದಯ ಕಾಲದ ಮುಖ್ಯ ಪ್ರವೃತ್ತಿ.

ಬ್ರಿಟಿಷರ ಶೈಕ್ಷಣಿಕ, ಧಾರ್ಮಿಕ ಹಾಗೂ ರಾಜಕೀಯ ಚಿಂತನೆಗಳು ಸ್ವತಂತ್ರ ಮನೋಭಾವ, ರಾಷ್ಟ್ರೀಯ ಪ್ರಜ್ಞೆ ಹಾಗೂ ಸ್ವದೇಶಿಪ್ರಜ್ಞೆಯನ್ನು ಭಾರತೀಯರಲ್ಲಿ ಎಚ್ಚರಿಸಿದವು. ಈ ಎಚ್ಚರ ಅಖಿಲ ಭಾರತೀಯ ಮಟ್ಟದಲ್ಲಿ ಎಂತೊ ಅಂತೆಯೆ ಪ್ರಾದೇಶಿಕ ನೆಲೆಗಳಲ್ಲಿಯೂ ಉಂಟಾದದ್ದನ್ನು ಕನ್ನಡ ಕಾವ್ಯದಲ್ಲಿ ಕಾಣಬಹುದು. ಭಾರತೀಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಸ್ಥಿತ್ಯಂತರಗಳಿಗೆ ಮುಖಾಮುಖಿಯಾದ ಸಂವೇದನೆ ನವ ಭಾರತೀಯ ನಿರ್ಮಾಪಕರಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮಾನವೀಯ ನೆಲೆಗಳಲ್ಲಿನ ಕ್ರಿಯಾಶೀಲತೆಯಲ್ಲಿ ಎದುರಾದದ್ದು ನವೋದಯದ ಪ್ರವೃತ್ತಿಗಳಲ್ಲಿ ಬಹುಮುಖ್ಯವಾದುದು. ಇದನ್ನು ಅಖಿಲ ಭಾರತದ ನವೋದಯ ಪ್ರವೃತ್ತಿ ಎಂದು ಗುರುತಿಸಿಕೊಳ್ಳಬಹುದು.

ಆದರೆ ಕನ್ನಡದ ಸಂದರ್ಭದಲ್ಲಿ ಹತ್ತೊಂಬತ್ತನೆಯ ಶತಮಾನದ ಸಾಂಸ್ಕೃತಿಕ ಬದುಕನ್ನು ಇಂಥ ವಿಚಾರಗಳು ನೇರವಾಗಿ ಪ್ರವೇಶಿಸದೆ ಹೋದದ್ದು ಅತ್ಯಂತ ಮಹತ್ವದ ವಿಷಯ ಎನ್ನಬಹುದು. ಕನ್ನಡ ಸಂಸ್ಕೃತಿಯ ಮುಖ್ಯ ಪ್ರಾದೇಶಿಕತೆಯು ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಳೇ ಮೈಸೂರು ಹಾಗೂ ಹೈದರಾಬಾದ್ ಕರ್ನಾಟಕ ಹೀಗೆ ಹರಿದು ಹಂಚಿಹೋಗಿದ್ದವು. ಅಂತೆಯೆ ನೆರೆ ರಾಜ್ಯಗಳ (ಮಹಾರಾಷ್ಟ್ರ) ರಾಜಕೀಯ ಹಾಗೂ ಸಾಂಸ್ಕೃತಿಕ ಒತ್ತಡಗಳು ಕನ್ನಡ ಸಂಸ್ಕೃತಿಯ ಮೇಲೆ ಆಕ್ರಮಣವನ್ನು ನಡೆಸುತ್ತಲೇ ಇದ್ದವು. ಈ ಎಲ್ಲ ಸಂಗತಿಗಳು ಕನ್ನಡಿಗರ ಐಕ್ಯತೆ ಹಾಗೂ ಜಾಗೃತಿಯ ವಿಚಾರಕ್ಕೆ ಅನುವು ಮಾಡಿಕೊಟ್ಟವೆನ್ನಬಹುದು. ಅದಕ್ಕೆ ಅನೇಕ ರಾಜಕೀಯ ಸಮಸ್ಯೆಗಳೂ ಎದುರಾಗಿದ್ದವು. ಈ ಕಾಲಮಾನದಲ್ಲಿ ವಸಾಹತು ಸಂಸ್ಕೃತಿಯ ಆಗಮನದಿಂದ ಕನ್ನಡ ಸಂಸ್ಕೃತಿಯಲ್ಲಿ ಎದುರಾದ ಸಂಕೀರ್ಣತೆಯನ್ನು ಅನುಭಾವಿಗಳ ತತ್ತ್ವಪದ, ಕೀರ್ತನೆ, ಲಾವಣಿಗಳಲ್ಲಿ ಕಾಣಬಹುದಾಗಿದೆ. ಕನ್ನಡ ನವೋದಯ ಪ್ರವೃತ್ತಿಗಳ ಸ್ವರೂಪ

ಅನನ್ಯಗೊಳ್ಳುವ, ಮೈ ಪಡೆಯುವ, ದಟ್ಟವಾಗುವ ಸುಳಿವುಗಳು ಈ ಕಾಲಮಾನದ ಸೃಷ್ಟಿಶೀಲ ಕೃತಿಗಳಲ್ಲಿ ಪ್ರಕಟವಾಗುತ್ತವೆ. ಹಿಂದಿನ ಅಧ್ಯಾಯದಲ್ಲಿ ಈ ಬಗೆಗೆ ವಿಶ್ಲೇಷಣೆ ಮಾಡಲಾಗಿದೆ.

ಬೇಂದ್ರೆಯವರ ಸೃಜನಕ್ರಿಯೆಗೆ ತಾತ್ವಿಕತೆಯೊಂದು ಒದಗಿಬರುವುದು ಈ ಮೇಲಿನ ಚಾರಿತ್ರಿಕ ಸಂದಿಗ್ಧತೆಗಳಿಗೆ ತೋರಿದ ಪ್ರಕ್ರಿಯೆಗಳಿಂದಲೇ ಎಂದು ಹೇಳಬಹುದು. ಅವರ ಕಾವ್ಯದಲ್ಲಿ ಪ್ರಕಟಗೊಳ್ಳುವ ವಸಾಹತು ಸಂಸ್ಕೃತಿಯ ಪ್ರತಿರೋಧದ ನೆಲೆಗಳ ಸ್ವರೂಪವು ಇಂಥ ಹಿನ್ನೆಲೆಯಿಂದಲೆ ರೂಪುಗೊಂಡದ್ದಾಗಿದೆ. ಈ ಮಾತನ್ನು ಕನ್ನಡ ನವೋದಯ ಕಾವ್ಯದ ಸ್ವರೂಪವನ್ನು ಕುರಿತೂ ಹೇಳಬಹುದು. ಬೇಂದ್ರೆಯವರ ಕಾವ್ಯಸಂವೇದನೆ ಇಂಥ ಚಾರಿತ್ರಿಕ ಸಂದಿಗ್ಧತೆಗಳಿಗೆ ಎದುರಾಗುತ್ತಲೆ ದೇಶೀಯ ಸಾಂಸ್ಕೃತಿಕ ಮೂಲ ಸೆಲೆಗಳನ್ನು ಶೋಧಿಸತೊಡಗಿದ್ದರಿಂದ ಕನ್ನಡ ಕಾವ್ಯಸಂದರ್ಭದಲ್ಲಿ ಅವರ ಕಾವ್ಯಕ್ಕೆ ಅನನ್ಯತೆ ಒದಗಿಬರುತ್ತದೆ. ಬೇಂದ್ರೆಯವರ ಕಾವ್ಯದಲ್ಲಿ ಪ್ರಕಟಗೊಳ್ಳುವ ವಸಾಹತುಶಾಹಿ ಸಂಸ್ಕೃತಿಗೆ ತೋರಿದ ಪ್ರತಿರೋಧದ ಸ್ವರೂಪ ಅತ್ಯಂತ ಸಂಕೀರ್ಣವಾದುದು. ವಸಾಹತುಸಂಸ್ಕೃತಿಯ ಆಗಮನದಿಂದ ಎದುರಾದ ತಲ್ಲಣಗಳಿಂದಲೂ ಅಂಥ ಸಂಸ್ಕೃತಿಯ ಪ್ರವೇಶದ ಪರಿಣಾಮವಾಗಿ ದೇಶೀಯ ಸಾಂಸ್ಕೃತಿಕ ಬದುಕಿಗೆ ಅನ್ಯರಾಗಿ ಬದುಕಿದ್ದರಿಂದಲೂ ಉಂಟಾದ ಗೊಂದಲಗಳು ತಮ್ಮ ಸುತ್ತಣ ಪರಿಸರದ ಶೋಧನೆಗೆ ಮುಖ ಮಾಡಿದ್ದು ಬೇಂದ್ರೆಯವರ ಕಾವ್ಯದ ಮುಖ್ಯ ಧೋರಣೆ.

ದೇಶೀಯ ಹಾಗೂ ಧಾರವಾಡದ ಬದುಕಿನ ಅನುಭವಗಳ ಅನನ್ಯತೆಯ ಶೋಧ ಬೇಂದ್ರೆಯವರ ಕಾವ್ಯದ ಮುಖ್ಯ ಕೇಂದ್ರಬಿಂದು. ಬದುಕಿನ ಅತ್ಯಂತ ಗಾಢ ಅನುಭವ ದಾಖಲೆಗಳ ಮುಖೇನ ಇವರ ಕಾವ್ಯ ಸಾಂಸ್ಕೃತಿಕ ಅನನ್ಯತೆಗಳ ಹುಡುಕಾಟಕ್ಕೆ ಮುಖಾಮುಖಿಯಾಗುತ್ತದೆ. ಇಂಥ ಹುಡುಕಾಟ ಆತ್ಮಕಥನ ಹಾಗೂ ಆತ್ಮವಿಮರ್ಶೆಯ ಮುಖೇನ ಮೈಪಡೆಯುತ್ತಲೇ ಸಾಂಸ್ಕೃತಿಕ ಧ್ವನಿಯೊಂದನ್ನು ಪ್ರಕಟಿಸುತ್ತದೆ. ಇದು ಬೇಂದ್ರೆಯವರ ಕಾವ್ಯದ ಬಹುಮುಖ್ಯ ಆಶಯವೂ ಆಗಿದೆ. ಇವರ ಒಟ್ಟು ಕಾವ್ಯ ಸ್ವರೂಪದ ಚಿಂತನಾಕ್ರಮವು ಈ ಬಗೆಯದು. ಈ ಎಲ್ಲ ಕಾರಣಗಳಿಂದ ವಸಾಹತು ಸಂಸ್ಕೃತಿಗೆ ಬೇಂದ್ರೆಯವರ ಕಾವ್ಯದಲ್ಲಿ ಎದುರಾದ ಪ್ರತಿರೋಧಗಳ ಚಿಂತನಾಕ್ರಮವು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇನ್ನಿತರ ಕವಿಗಳಿಗಿಂತ ವಿಶಿಷ್ಟ ಧ್ವನಿಯಾಗಿ ಕಾಣಿಸಿಕೊಳ್ಳುತ್ತದೆ.

ಹೊಸ ಸಂಸ್ಕೃತಿಯೊಂದರ ಸಂಘರ್ಷದಿಂದ ಎದುರಾದ ಎಲ್ಲ ಮಟ್ಟದ ಪ್ರೇರಣೆ-ಪ್ರಭಾವ, ಅನುಸಂಧಾನ, ಅಭಿವ್ಯಕ್ತಿ ನೆಲೆಗಳಲ್ಲಿ ಕನ್ನಡ ನವೋದಯದ ಸಂವೇದನೆಯು ವಸಾಹತು ಸಂಸ್ಕೃತಿಗೆ ಪ್ರತಿಕ್ರಿಯಿಸತ್ತಲೇ ಸೃಷ್ಟಿಕ್ರಿಯೆಯಲ್ಲಿ ತೊಡಗಿತು ಎಂಬ ವಿಚಾರ ಎಲ್ಲರೂ ಒಪ್ಪುವಂತಹದು. ಹಾಗಾಗಿ, ಈ ಕಾಲಮಾನದ ಸಾಂಸ್ಕೃತಿಕ ಅಧ್ಯಯನ ಹಾಗೂ ಕಾವ್ಯಾಧ್ಯಯನವೆಂದರೆ ವಸಾಹತುಸಂಸ್ಕೃತಿಗೆ ತೋರಿದ ಪ್ರತಿರೋಧಗಳ ಸ್ವರೂಪವನ್ನು ತಿಳಿಯುವ ಅಧ್ಯಯನವೇ ಆಗುತ್ತದೆ. ಇಲ್ಲಿ ನವೋದಯವೆಂದರೆ, ಆ ಕಾಲದ ಒಟ್ಟು ಸಂವೇದನೆ ಎಂದು ಗ್ರಹಿಸಲಾಗಿದೆ. ಸೃಷ್ಟಿಕ್ರಿಯೆಯ ಮುಖೇನ ಆ ಸಂವೇದನೆ ವಸ್ತು, ಅಭಿವ್ಯಕ್ತಿ, ಪ್ರಕೃತಿ ಅಥವಾ ಪರಿಸರ ಹಾಗೂ ಒಟ್ಟು ಸಂಸ್ಕೃತಿಯನ್ನು ಗ್ರಹಿಸುವ ನೆಲೆಗಳಲ್ಲಿ ಕಂಡು ಬಂದ ನಾವೀನ್ಯತೆ, ಎಚ್ಚರ,ಹೊಸಪ್ರಜ್ಞೆಯನ್ನು ನವೋದಯ ಎಂದು ಈ ಪ್ರಬಂಧದ ವ್ಯಾಪ್ತಿಯಲ್ಲಿ ತಿಳಿಯಲಾಗಿದೆ.

ಬೇಂದ್ರೆಯವರ ಕಾವ್ಯ ವಸಾಹತುಸಂಸ್ಕೃತಿಗೆ ತೋರಿದ ಪ್ರತಿರೋಧ -ರಾಷ್ಟ್ರೀಯತೆ, ಅಖಂಡ ಕರ್ನಾಟಕದ ಕಲ್ಪನೆ, ಕನ್ನಡದ ಅನನ್ಯತೆಯ ಪ್ರಶ್ನೆಗಳು, ದೇವರು - ಧರ್ಮಗಳ ಪಾರಂಪರಿಕ ದೃಷ್ಟಿಗೆ ಎದುರಾದ ಕ್ರಮ, ನೆಲ ಮತ್ತು ಮನುಷ್ಯ ಸಂಬಂಧಗಳು, ಗಂಡು-ಹೆಣ್ಣುಗಳ ಪ್ರೀತಿ ಪ್ರೇಮ, ಹಸಿವು - ಅನ್ನ, ಐಂದ್ರಿಯಿಕ ಹಾಗೂ ಅತೀಂದ್ರಿಯ ಸಂಬಂಧಗಳು- ಹೀಗೆ ವಿಭಿನ್ನ ನೆಲೆಗಳಲ್ಲಿ ಪ್ರಕಟವಾಗುತ್ತದೆ. ಇಂಥ ಪ್ರತಿರೋಧ ಬೇಂದ್ರೆಯವರ ಕಾವ್ಯದಲ್ಲಿ ಅಬ್ಬರದಲ್ಲಿ ಪ್ರಕಟವಾಗದೆ ಅತ್ಯಂತ ಮೇಲುದ್ಧ್ವನಿಗಳಲ್ಲಿ ಅನುಕರಣಗೊಳ್ಳುತ್ತಲೇ ಧ್ವನಿಪೂರ್ಣವಾಗಿ ಪ್ರಕಟವಾಗುವುದು ಇವರ ಕಾವ್ಯದ ವೈಶಿಷ್ಟ್ಯವಾಗಿದೆ.

ಬೇಂದ್ರೆಯವರ ಕಾವ್ಯದ ಪ್ರಮುಖ ನೆಲೆಯೆಂದರೆ, ರಾಷ್ಟ್ರೀಯತೆ ಹಾಗೂ ಅಖಂಡ ಕರ್ನಾಟಕದ ಕಲ್ಪನೆ. ೧೯೧೮ರಿಂದ ೧೯೩೨ರವರೆಗೆ ಬರೆದ 'ಗರಿ' ಸಂಕಲನದಲ್ಲಿನ ಪದ್ಯಗಳಲ್ಲಿ ಸ್ವಾತಂತ್ರ್ಯ ಹೋರಾಟದ ಕನಸು ಹಾಗೂ ಕರ್ನಾಟಕ ಏಕೀಕರಣವಾಗಬೇಕೆಂಬ ಅಭೀಪ್ಸೆಯೂ ಗಾಢವಾಗಿ ಪ್ರಕಟವಾಗುತ್ತದೆ. 'ಕನ್ನಡದ ಪುನರ್‌ಜನ್ಮದ ಪ್ರಭಾತದಲ್ಲಿ ಹಾಡುವ ಕವಿಗಣದಲ್ಲಿ ನಾನೊಬ್ಬ' ಎನ್ನುವ ಬೇಂದ್ರೆಯವರ ಈ ಮಾತು, ಕನ್ನಡ ಸಂಸ್ಕೃತಿ ಪುನರುಜ್ಜೀವನಗೊಳ್ಳುತ್ತಲೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಿರುವ ಸಾಂಸ್ಕೃತಿಕ ಪರಿಸರದ ಸ್ವರೂಪವನ್ನು ತಿಳಿಸುತ್ತದೆ.

> ಇಲ್ಲಿ ತುಂಗಭದ್ರೆಯ ಉತ್ತರಾಪಥದ ''ದೇಶೀ''ಯ ಮಾರ್ಗವನ್ನು ಹುಡುಕುವ ಹಾಗೆಯೇ ಹುಟ್ಟಿಸುವ ಕುರುಹಿದೆ. ಮೈಸೂರು, ಧಾರವಾಡ, ಮಂಗಳೂರು ಎಂಬ ಭೇದವಡಗಿ ಹೆಣ್ಣು-ಗಂಡು ಎಲ್ಲರೂ ಒಂದೇ ಕನ್ನಡವನ್ನು ಆಡಬೇಕು. ಆ ಕನ್ನಡದ ಬೀದಿ, ಈ ಕನ್ನಡವು ಹಾದಿ.[೧]

ಬೇಂದ್ರೆಯವರ ಈ ಮೇಲಿನ ಮಾತುಗಳು ಸ್ವಾತಂತ್ರ್ಯಪೂರ್ವದ ಕನ್ನಡ ರಾಜಕೀಯ ಸಾಂಸ್ಕೃತಿಕ ಬದುಕಿನ ಒಡಕು ಹಾಗೂ ಅಂಥ ಒಡಕುಗಳು ದೂರವಾಗಿ ಒಂದಾಗಬೇಕೆಂಬ ದೇಶೀಯ ಐಕ್ಯತೆಯ ಹುಡುಕಾಟದ ಆಶಯಗಳನ್ನು ಪ್ರಕಟಿಸುತ್ತವೆ. ಸಾವಿರದ ಒಂಭೈನೂರ ಇಪ್ಪತ್ತೆಂಟರಲ್ಲಿ ಬೇಂದ್ರೆಯವರು ಸಂಪಾದಿಸಿದ 'ನನ್ನದು ಈ ಕನ್ನಡ ನಾಡು' ಕಾವ್ಯ ಮಾಲೆಯ ಮುಖ್ಯ ಉದ್ದೇಶ ಕರ್ನಾಟಕ ಏಕೀಕರಣವನ್ನೇ ಕುರಿತದ್ದಾಗಿದೆ. ಪ್ರಾಚೀನ ಹಾಗೂ ಆಧುನಿಕ ಕವಿಗಳ ಕವನಗಳನ್ನು ಒಳಗೊಂಡ ಈ ಕೃತಿ ಕನ್ನಡ ನಾಡಿನ ಹಿರಿಮೆಗರಿಮೆಗಳನ್ನು, ದೇಶಪ್ರೀತಿಯ ಆಶಯಗಳನ್ನುಳ್ಳದ್ದಾಗಿದೆ. ಕರ್ನಾಟಕದ ಬೇರೆ ಬೇರೆ ಭಾಗದ, ಬೇರೆ ಬೇರೆ ಕಾಲದ ಇಲ್ಲಿನ ಕವಿ ಕೃತಿಗಳು ಆಯಾ ಪ್ರದೇಶದ ಅನನ್ಯತೆಗಳನ್ನು ಒತ್ತಿ ಹೇಳುತ್ತಲೇ ರಾಷ್ಟ್ರೀಯತೆಯನ್ನು ಎಚ್ಚರಿಸುವ ಕವನಗಳಾಗಿವೆ. ಸ್ವತಃ ಬೇಂದ್ರೆಯವರ 'ಮುನ್ನುಡಿ'ಯ ಈ ಕೆಳಗಿನ ಮಾತುಗಳು ಅಂದಿನ ಕರ್ನಾಟಕ ಏಕೀಕರಣದ ಕಾಳಜಿಗಳನ್ನು ಮತ್ತಷ್ಟು ವಿಶದಪಡಿಸುತ್ತವೆ.

> ನಮ್ಮದು ಏಕೀಕರಣದ ಕಾಲ, ಏಕೆಂದರೆ ನಾಡ ತುಂಬೆಲ್ಲ ಒಡಕೆ ಒಡಕು. ಕುಮಾರಸ್ವಾಮಿಯು ತನ್ನ ಆರು ದೇಹಗಳನ್ನು ಒಂದಾಗಿಸಿಕೊಂಡು ಷಣ್ಮುಖನಾದರೂ ಹೇಗೆ ಏಕಮೂರ್ತಿಯಾದನೊ ಹಾಗೆ ಹಂಚಿದ ಕರ್ನಾಟಕದೊಳಗಿಂದ ವಿಶ್ವಕರ್ನಾಟಕದ ಉದಯವಾಗಬೇಕಾಗಿದೆ. ತಾರಕಾಸುರನ ವಧೆಗಾಗಿ ಕುಮಾರ ಜನ್ಮವು ಹೇಗೆ ಎಲ್ಲ ದೇವತೆಗಳಿಂದ ಅಪೇಕ್ಷಿತವಾಗಿತ್ತೊ ಕನ್ನಡಿಗರಿಗೆ ವಿಶ್ವಕರ್ನಾಟಕವು ಹಾಗೆ. ......ರಾಷ್ಟ್ರದ ಜನ್ಮವು ಒಂದು 'ದಿವ್ಯಗಾನ'ದಂತೆ. ಈಗ ಆ ಕಾಲವು ಬಂದಿದೆ, ಕೊರಲು ಕೂಡಿಸಿ

> ಕನ್ನಡಗರೆಲ್ಲರೂ-ಕೊಡಗರು,ತುಳುವರು, ಬಡಗರು, ಸಾರಸ್ವತರು, ಮೈಸೂರವರು, ಉತ್ತರದವರು-
> ಹಾಡಬೇಕಾಗಿದೆ 'ನನ್ನದು ಈ ಕನ್ನಡ ನಾಡು' ಎಂದು.[೨]

ಈ ಮೇಲಿನ ಉದ್ಧರಣೆಯು, ಇಲ್ಲಿನ ಕಾವ್ಯಪರಂಪರೆಯು ಸಹೃದಯರಲ್ಲಿ ಬಾಹ್ಯ ಏಕೀಕರಣಕ್ಕೆ ಎಂತೊ ಅಂತೆಯೇ ಅಂತರಂಗ ಏಕೀಕರಣಕ್ಕೆ ಸಹಾಯಕವಾಗುವುದಲ್ಲದೆ, ದೇಶಪ್ರೀತಿ, ಭಾಷಾಪ್ರೀತಿ ಹಾಗೂ ಕಾವ್ಯಪ್ರೀತಿಗಳು ಸಮಸ್ತ ಜನರಲ್ಲಿ ಉಂಟಾಗಬೇಕೆಂಬ ಉದ್ದೇಶದಿಂದ ಕೂಡಿದೆ. ಭಾರತಿ ಮತ್ತು ಕನ್ನಡತಿಯರಲ್ಲಿರುವ ತಾಯಿ-ಮಕ್ಕಳ ಸಂಬಂಧವು, ದೇಶಾಭಿಮಾನವನ್ನು ಉಂಟು ಮಾಡುವುದರೊಂದಿಗೆ, ರಾಷ್ಟ್ರ ಮತ್ತು ವಿಶ್ವಕರ್ನಾಟಕದ ಏಕೀಕರಣಕ್ಕಾಗಿ ಕನ್ನಡ ಜನತೆ ಎಚ್ಚತ್ತುಕೊಳ್ಳಬೇಕೆಂಬ ಆಶಯ ಇಲ್ಲಿನದಾಗಿದೆ. ಈ ಕೃತಿಯಲ್ಲಿನ 'ವಾಙ್ಮಯ ಸಾಮ್ರಾಜ್ಯದೊಳಗಿನ ಏಕೀಕರಣವು ಸುಲಭವಾದೀತೆಂದು ನಮ್ಮ ಅಪೇಕ್ಷೆಯಿದೆ' ಎನ್ನುವ ಬೇಂದ್ರೆಯವರ ಈ ಮಾತು ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ರಾಷ್ಟ್ರ ಮತ್ತು ಕರ್ನಾಟಕ ಏಕೀಕರಣದ ಅಭೀಪ್ಸೆ ಅವರ ಕಾವ್ಯದ ಬಹುಮುಖ್ಯ ಆಯಾಮವಾಗಿ ಪ್ರಕಟಗೊಳ್ಳುತ್ತದೆ.

### ೧. ಸ್ವಾತಂತ್ರ್ಯ - ಸ್ವಚ್ಛಂದತೆಗಳ ಬಯಕೆ:

"ಗರಿ" ಸಂಕಲನದ, 'ಅಹಹ ಸ್ವಾತಂತ್ರ್ಯ ದೇವಿ', 'ಹಂಪೀ-ವಿಜಯನಗರದ ದರ್ಶನ', 'ಓ ಹಾಡೇ', 'ಲೀಲೆ', 'ಹರಕೆ', ಕನಸಿನೊಳಗೊಂದು ಕನಸು', 'ಸೀಮೋಲ್ಲಂಘನ', 'ಮೂವತ್ತು ಮೂರು ಕೋಟಿ', 'ರುದ್ರವೀಣೆ' ಮೊದಲಾದ ಕವಿತೆಗಳು ಸ್ವಾತಂತ್ರ್ಯಪ್ರೇಮ ಹಾಗೂ ದೇಶಭಕ್ತಿಯ ಆಶಯಗಳನ್ನು ಹೊಂದಿವೆ. ಅಂತೆಯೇ ಕರ್ನಾಟಕದ ಗತವೈಭವದ ನೆನಪು, ವಾಸ್ತವದ ದುರಂತ, ನಾಡಿನ ಒಡಕನ್ನು ಕುರಿತ ಮರುಕ, ಜನತೆಯಲ್ಲಿ ಕಂಡ ನಿರ್ವೀರ್ಯತೆ ಹಾಗೂ ಬಂಧನಗಳಿಂದ ಮುಕ್ತವಾಗಬೇಕೆಂಬ ಕರೆ ಇಲ್ಲಿನದಾಗಿದೆ. ಹಾಗೆಯೇ ಹೊಸ ವಿಚಾರಧಾರೆಗಳ ಶೋಧನೆಯು ಈ ಕವಿತೆಗಳದ್ದಾಗಿದೆ.

'ಗರಿ' ಸಂಕಲನದ ಮುಖ್ಯ ಆಶಯಗಳಲ್ಲಿ ಸ್ವಾತಂತ್ರ್ಯದ ಹಂಬಲ ಮುಖ್ಯ ಪ್ರವೃತ್ತಿಯಾಗಿ ಶೋಧನೆಗೆ ಗುರಿಯಾಗಿದೆ. ರಾಷ್ಟ್ರವು ಪಾರತಂತ್ರ್ಯದಿಂದ ಮುಕ್ತಿ ಪಡೆದು, ಎಲ್ಲೆಲ್ಲೂ ಚೈತನ್ಯವನ್ನು ಕಾಣಬೇಕೆಂಬ ಆಶಯ ಇಲ್ಲಿನ ಬಹುಪಾಲು ಕವನಗಳಲ್ಲಿ ಪ್ರಕಟವಾಗುತ್ತದೆ. ಸ್ವಾತಂತ್ರ್ಯದ ಬಯಕೆ ಕೇವಲ ಮನುಷ್ಯನೊಬ್ಬನ ಬಯಕೆಯಲ್ಲ; ಅದು ದೇವರ ಬಯಕೆಯೂ ಹೌದು. ದಾಸ್ಯದಲ್ಲಿ ಸ್ವತಂತ್ರ್ಯವಾದ, ಸುಸೂತ್ರವಾದ ವಿಚಾರಗಳು ಹುಟ್ಟಲು ಸಾಧ್ಯವಿಲ್ಲ. ಬೇಂದ್ರೆಯವರ ಈ ಮುಂದಿನ ಮಾತುಗಳೇ ಸ್ವಾತಂತ್ರ್ಯದ ಮಹತ್ವವನ್ನು ಸೂಕ್ಷ್ಮವಾಗಿ ಸೂಚಿಸುತ್ತವೆ.

> ಅತಂತ್ರತೆಯು ಅಂಧತಮಸ್ಸಿನಿಂದ ತುಂಬಿದ ಅಸೂರ್ಯಲೋಕ; ಪರತಂತ್ರತೆಯು ದುಃಖಮಯವಾದ ಯಮರಾಜ್ಯ.....ನಮ್ಮ ಸ್ವತಂತ್ರ ಬುದ್ಧಿಯು ಒಬ್ಬ ಶಿಲ್ಪಿಗನಂತಿದೆ. ನಮ್ಮ ಭಾವದಂತೆ ಜಗತ್ತಿನಲ್ಲಿ ಜೀವ ತುಂಬಿಸುವದೊಂದು ಕಾರ್ಯ; ಜಗತ್ತಿನಲ್ಲಿ ಜಂಗಮನಂತಿದ್ದ ಜೀವವನ್ನು ನಮ್ಮ ಭಾವದ ನಿಟ್ಟೆದುರಿನಲ್ಲಿ ಬೊಂಬೆ ಮಾಡಿ ನಿಲ್ಲಿಸುವುದೆಂದು ಕಾರ್ಯ. ಈ ಜೀವಭಾವದ ದಾಂಪತ್ಯದ ಅಪತ್ಯಗಳೇ

ಈ ವಿಶ್ವರೂಪಗಳೆಂದು ತೋರಿಸುವದೊಂದು ಕಾರ್ಯ. ಸ್ವ-ತಂತ್ರವಿಲ್ಲದ ಬುದ್ಧಿಯೇ ಸ್ವತಂತ್ರ ಬುದ್ಧಿಯು. ಇದನ್ನುಳಿದು ಬೇರೆ ಸ್ವತಂತ್ರತೆಯಿಲ್ಲ.[೩]

ದಾಸ್ಯದಿಂದ ಎದುರಾಗುವ ನೋವು-ಆತಂಕಗಳು,ಮಾರಕಗಳು ಯಾವ ಬಗೆಯವು ಎಂಬುದನ್ನು ಈ ಮೇಲಿನ ಮಾತುಗಳಲ್ಲಿ ಕಾಣುತ್ತೇವೆ.

ಬೇಂದ್ರೆಯವರ 'ಬೆಳಗು' ಕವನ ಇಂಥ ಅಂಧ ತಮಸ್ಸಿನಿಂದ ತುಂಬಿದ ಅಸೂರ್ಯಲೋಕಕ್ಕೆ ಆಹ್ವಾನಿಸಿದ ಪ್ರತಿಮೆ ಹಾಗೂ ಆ ಕಾಲದ ಒಟ್ಟು ಸಂವೇದನೆಗೆ ಒಡ್ಡಿದ ರೂಪಕ. ಆದ್ದರಿಂದಲೇ ಬೇಂದ್ರೆಯವರ 'ಬೆಳಗು','ಕೋಗಿಲೆ'ಯಂಥ ಕವನಗಳಿಗೆ ಸಾಂಸ್ಕೃತಿಕ ಮಹತ್ವ ದತ್ತವಾಗಿರುವುದು. ಇಡೀ ರಾಷ್ಟ್ರ ಪಾರತಂತ್ರ್ಯದ ಹಿಡಿತಕ್ಕೆ ಒಳಗಾಗಿದ್ದಾಗ ಬೇಂದ್ರೆ ಸಂವೇದನೆಗೆ ಮೂಡಲ ಮನೆಯಲ್ಲಿ ಕಂಡ ಸೂರ್ಯನ ಬೆಳಗು 'ಬರಿ ಬೆಳಗಲ್ಲ'. ನಿಸರ್ಗದ ವಿಸ್ಮಯಗಳು, ಸ್ವಾತಂತ್ರ್ಯ-ಸ್ವಚ್ಛಂದತೆಗಳ ಬಯಕೆ, ಪ್ರೀತಿ-ಪ್ರೇಮ, ಪಾರತಂತ್ರ್ಯದಿಂದ ಎದುರಾಗಿದ್ದ ನೋವು-ನಿರಾಶೆ, ಹೀಗೆ ಅಸಂಖ್ಯ ಸಂಭ್ರಮ-ಸಮಸ್ಯೆಗಳ ಸರಮಾಲೆಯನ್ನು ಎದುರಾಗಿಸುತ್ತದೆ. 'ಅತ್ತಿಕೊಳ್ಳ'ದ ಬೆಳಗು ಲೋಕದ ಎಲ್ಲ ಭೌತಿಕ ಹಾಗೂ ಜೈವಿಕ ನೆಲೆಗಳಲ್ಲಿ ಚೈತನ್ಯವನ್ನು ತರುವ ಹರಿಕಾರನಂತೆ ಎದುರಾಗುತ್ತದೆ. ಇಂಥ ಚೈತನ್ಯ ಎಲ್ಲೆಲ್ಲೂ ಸ್ವಾತಂತ್ರ್ಯದ ಬಯಕೆಯಾಗಿ ಮೈ ಪಡೆಯುವುದನ್ನು 'ಅಹಹ ಸ್ವಾತಂತ್ರ್ಯದೇವಿ!' ಕವಿತೆಯಲ್ಲಿ ಕಾಣುತ್ತೇವೆ.

ದೇವ ಮಾವನರೆಲ್ಲ ಕಂಡ ಕನಸ್ಸೇ
ಬಾರೆ, ಮನಸಿನೊಳು ನೆಲಸು ನನಸೇ
ನೆನೆಸುತಿಹೆ ಹಸಿದ ಚೇತನೆಯ ತಿನಿಸೇ
ಬಾರೆ, ನನ್ನ ಎದೆಯೊಳಗೆ ಜನಿಸೇ
ಸೆರೆಯೆಂಬ ಹಿರಿಹಾವ ಹಿಡಿದ ಹದ್ದೇ
ಬಾರೆ, ಬೆಳಕು ಕತ್ತಲೆಯ ಜಿದ್ದೇ
ಪರಮಪುರುಷನು ಜಗಕೆ ಕೊಟ್ಟ ಮುದ್ದೇ
ಬಾರೆ, ಪ್ರೀತಿಯುಗ ಬರುವ ಸದ್ದೇ[೪]

ದೇವ ಮಾವನರೆಲ್ಲ ಕಂಡ ಕನಸಾದ ಸ್ವಾತಂತ್ರ್ಯದೇವಿಗೆ ತನ್ನ ಎದೆಯಲ್ಲಿ ನೆಲಸುವಂತೆ ಆಹ್ವಾನಿಸುವುದರೊಂದಿಗೆ, ಜಿಂಕೆಯಲ್ಲಿ ಪುಟಿಯುವಂಥ ಚೈತನ್ಯ ತನ್ನಲ್ಲಿ ಉಂಟಾಗಲಿ ಎಂಬ ಬಯಕೆ ಇಲ್ಲಿಯದಾಗಿದೆ. ಹಾವು-ಹದ್ದು, ಬೆಳಕು-ಕತ್ತಲೆ ಪ್ರತಿಮೆಗಳು ದಾಸ್ಯ ಹಾಗೂ ಬಿಡುಗಡೆಯ ಸಂಘರ್ಷವನ್ನು ಸೂಚಿಸುವುದರೊಂದಿಗೆ ಸ್ವಾತಂತ್ರ್ಯ ತರುವ ಪ್ರೀತಿಯುಗದ ಆಗಮನವನ್ನು ಪ್ರಕಟಿಸುತ್ತವೆ. ಆಂಗ್ಲ ಕವಿ'ಶೆಲ್ಲಿ' ಕಾವ್ಯದ ಜೀವಧಾತುವಾದ ಸ್ವಾತಂತ್ರ್ಯದ ಕಲ್ಪನೆ ಮತ್ತು ಸತ್ಯಯುಗವಾದ ಕೃತಯುಗದ ಸಾಮ್ರಾಜ್ಯ ಮತ್ತೆ ನೆಲಸಲಿ ಎಂಬ ಧೋರಣೆಯುಳ್ಳ ಈ ಕವಿತೆಯು ಭಾರತಾಂಬೆಯ ಬಿಡುಗಡೆಯ ಅಭೀಪ್ಸೆಯನ್ನು ಒತ್ತಿ ಹೇಳುತ್ತದೆ. ಇಂಥ ಬಿಡುಗಡೆಯನ್ನು ಪಡೆಯಲು ಹಾತೊರೆಯುವ ಸಂವೇದನೆ ನೆನಪು-ನೋವುಗಳ ಮಧ್ಯೆ ಏರ್ಪಡುವ ವೈರುಧ್ಯಗಳ ನಡುವೆಯೇ ಸೃಷ್ಟಿಕ್ರಿಯೆಯಲ್ಲಿ ತೊಡಗುವ ಅದಮ್ಯ

ಉತ್ಸಾಹದ ನೆಲೆಗಳು 'ಚಂದ್ರ', 'ಗಂಡಸು-ಹೆಂಗಸಿಗೆ', 'ಚತುರ್ಮುಖ ಸೌಂದರ್ಯ', 'ಹಸಿ-ಹಂಬಲ' ಕವಿತೆಗಳಲ್ಲಿ ಮೈ ಪಡೆಯುತ್ತದೆ. ಲೋಕದ ಸೌಂದರ್ಯ-ಸತ್ಯಗಳನ್ನು, ಸ್ವಾತಂತ್ರ್ಯ ಸಂಭ್ರಮಗಳನ್ನು ಸೃಷ್ಟಿಕ್ರಿಯೆಗೆ ಗುರಿಯಾಗಿಸುವ ಪ್ರಕ್ರಿಯೆಯು ಈ ಕೆಳಗಿನ ಸಾಲುಗಳಲ್ಲಿ ಮೈ ಪಡೆಯುವುದನ್ನು ಕಾಣಬಹುದು.

ಬಹಳ ಹೊತ್ತಿನ ತನಕ, ಒಳಗೆ ಜೀವಾಳದೊಳು
ಸಹಿಸಲಾರದ ನೋವನನುಭವಿಸುವನಿತರೊಳು
ಅಹಹ! ಹೃದ್‌ಬಂಧಗಳು ನಡುಗಿ ಸೊಲ್ಲುತಿಹವ-
    ದೇಕೋ ತಮ್ಮಿಂದ ತಾವೆ![೫]

ಬೇಂದ್ರೆಯವರ ಸಂವೇದನೆಯಲ್ಲಿ ಕಾವ್ಯಸೆಲೆ ಪುಟಿಯುವ ಸಂಭ್ರಮಗಳ ಕ್ಷಣಗಳನ್ನು ಇಲ್ಲಿ ಕಾಣುತ್ತೇವೆ. 'ಮುಪ್ಪಿನ ಹೆಗಲ ಹತ್ತಿ 'ಥಕ ಥೈ' ಎಂದು ಕಂದ ಕುಣಿದಾಡುವನು' ಎನ್ನುವಲ್ಲಿ ಪರಂಪರೆಯ ಗರ್ಭದಲ್ಲಿಯೇ ಕಾವ್ಯಕ್ರಿಯೆ ಮೈ ಪಡೆಯುವುದು ಬೇಂದ್ರೆಯವರ ಕಾವ್ಯಶೋಧನೆಯ ನೆಲೆಗಳಲ್ಲಿ ಪ್ರಕಟವಾಗುತ್ತದೆ. ಇಂಥ ಅನೇಕ ಕವಿತೆಗಳಲ್ಲಿ ಬೇಂದ್ರೆಯವರ ಸೂಕ್ಷ್ಮ ಸೃಜನಾತ್ಮಕ ಪ್ರತಿಭಟನಾ ಮನೋಧರ್ಮ ಸೃಜನಕ್ರಿಯೆಯ ಶೋಧನೆಯಲ್ಲಿಯೇ ಮೈ ಪಡೆಯುವುದು ಇಲ್ಲಿನ ವಿಶೇಷ.

'ಲೀಲೆ', 'ಅಭಯ ಯಾಚನೆ' ಕವಿತೆಗಳಲ್ಲಿ ಹೊಸ ಸಂಸ್ಕೃತಿಯ ಸಂಘರ್ಷದಿಂದ ಎದುರಾದ ವಿಚಾರಧಾರೆಗೆ ಹಾಗೂ ಅನುಭವ ಗ್ರಹಿಕೆಗೆ ತೊಡಗಬೇಕೆಂಬ ಆಶಯವಿದೆ. ಈ ಕಾಲಮಾನದ ಬೇಂದ್ರೆಯವರ ಕೃತಿಗಳು ಜೀವನ ಶ್ರದ್ಧೆ, ಬದುಕಿನ ಬಗೆಗಿನ ಸಿದ್ಧಿ ಹಾಗೂ ಶುದ್ಧಿಯ ಶೋಧನೆಯ ಕಡೆಗೆ ಮುಖಮಾಡಿದ್ದು ವಿಶಿಷ್ಟವಾಗಿ ಕಾಣುತ್ತದೆ. ಎಲ್ಲ ರೀತಿಯ ಗೊಂದಲಗಳಿಗೆ ಎದುರಾಗುತ್ತಲೆ, ಅಂಥ ಸಂದರ್ಭಕ್ಕೆ ಬತ್ತಲಾದ ಬಾಲಕನಂತೆ ನಿಂತದ್ದು, ಲೋಕದ ಗ್ರಹಿಕೆಗೆ ಎದುರಾದದ್ದು ಬೇಂದ್ರೆಯವರ ಕಾವ್ಯ ಸಮೃದ್ಧತೆಗೆ ಎಡೆಮಾಡಿಕೊಟ್ಟಿದೆ. 'ಸುತ್ತಿರುವ ಬೆದರಿಕೆಯ ಬಟ್ಟೆಯನು ಕಳೆದೊಗೆದು ಬತ್ತಲಾದೆನು ಬಾಲಕನಂತೆ ನಾನು'ಎಂದ ಸಂವೇದನೆ ತನ್ನ ಒಳ-ಹೊರಗುಗಳನ್ನು ಲೋಕ ಗ್ರಹಿಕೆಗೆ ತೆರೆದುಕೊಳ್ಳುತ್ತದೆ. ಅಂಥ ತಲ್ಲಣ-ಸಮೃದ್ಧಗಳ ಗ್ರಹಿಕೆಯಿಂದಲೇ, ಬೇಂದ್ರೆ ಸೃಷ್ಟಿಕ್ರಿಯೆಗೆ ತನ್ನನ್ನು ಒಗ್ಗಿಸಿಕೊಂಡ ನೆಲೆಗಳಲ್ಲಿ ವಸಾಹತು ಸಂಸ್ಕೃತಿಯು ಎದುರಾಗಿಸಿದ ಆತಂಕಗಳಿಗೆ ಪ್ರತಿರೋಧ ಮೈ ಪಡೆಯುತ್ತದೆ. ಅಂದಿನ ಕನ್ನಡ ಸಾಂಸ್ಕೃತಿಕ ಪರಿಸರದ ಜಡಾವಸ್ಥೆಯನ್ನು ಕವಿ ಮುದ್ದಣನ ಮುಖೇನ ಹೀಗೆ ನೆನಪು ಮಾಡುತ್ತಾರೆ.

ಸಂಜೆ ಸೇರಿತು ಬಂದು ಕನ್ನಡ ನಾಡಿನೊಳು
ಮಂಜು ಮುಸುಗಿದ ಕತ್ತಲೆಯ ಗೂಡಿಸಿತೋ?
ನಂಜೇರಿ ನಿದ್ದೆಗೈದಿತೋ? ಸತ್ತಿತೋ ಜೀವ?
        ಮಿಡುಕಿಲ್ಲದಾಯಿತಾಗ
ಮುಂಜಾವಿನವಳ ತಂಬೆಲರೊಡನೆ ಮುದ್ದಣನ
ಹುಂಜವಕ್ಕಿಕ್ಕಿ ಕೂಗಿದ ಮೇಲೆ ಆ ದನಿಯ
ಸಜೀವವೆಬ್ಬಿಸಿತು ಸಾಸಿಗರ ಹಿಂಜರಿಯ-
    ದಂಥ ಚೈತನ್ಯವನ್ನು[೬]

ಈ ಮೇಲಿನ ಕಾವ್ಯಭಾಗ, ಅಂದಿನ ಕನ್ನಡ ಸಾಂಸ್ಕೃತಿಕ ಪರಿಸರದ ಜಡಾವಸ್ಥೆ ಹಾಗೂ ಮುದ್ದಣನ ಕಾವ್ಯ ಪ್ರತಿಭೆ ಮುಖಾಮುಖಿಯಾಗಿಸಿದ ಶಕ್ತಿ-ಚೈತನ್ಯಗಳನ್ನು ಒಟ್ಟಿಗೇ ಪ್ರಕಟಿಸುತ್ತದೆ. ಕನ್ನಡ ನಾಡು-ನುಡಿಗಳು ನಂಜೇರಿ ನಿರ್ವೀರ್ಯಗೊಂಡು ನಿದ್ದೆಗೈದಿದ್ದಾಗ, ಸತ್ತಿತೋ ಜೀವ ಎಂಬಂತಿದ್ದಾಗ ಮುದ್ದಣನ ಹುಂಜವೆಕ್ಕಿಕ್ಕಿ ಸಮಷ್ಟಿ ಬದುಕಿನಲ್ಲಿ ಎದುರಾಗಿಸಿದ ಚೈತನ್ಯಗಳನ್ನು ಈ ಕವಿತೆ ಆದ್ಯಂತವಾಗಿ ಧ್ವನಿಸುತ್ತದೆ. ಮುದ್ದಣನ ಕೃತಿಗಳನ್ನು 'ಜನ್ನಗುದುರೆ' ಎಂದು ಕರೆಯುವುದರೊಂದಿಗೆ ಆ ಕೃತಿಗಳು ಕನ್ನಡ ನಾಡು-ನುಡಿಗಳ ಪರಿಸರಕ್ಕೆ ಒದಗಿಸಿದ ಪ್ರೇರಣೆ ಪ್ರಭಾವಗಳನ್ನು, ಅಂಥ ಪ್ರೇರಣೆ ಪ್ರಭಾವಗಳಿಂದ ಕನ್ನಡ ಸಾಂಸ್ಕೃತಿಕ ಬದುಕು ಸಂಭ್ರಮಿಸಿದ ನೆಲೆಗಳನ್ನು ಸೂಚಿಸುತ್ತದೆ. ಈ ಕವಿತೆಯಲ್ಲಿ ಬರುವ ಪಶು-ಪಕ್ಷಿ ಪ್ರತೀಕಗಳು ಕನ್ನಡ ಸಾಂಸ್ಕೃತಿಕ ಬದುಕಿನ ಶೋಧನಾ ನೆಲೆಗಳನ್ನು ಮಾರ್ಮಿಕವಾಗಿ ಧ್ವನಿಸುತ್ತವೆ. ಕನ್ನಡ ಹಿರಿಯ ಲೇಖಕರಾದ ವಿ.ಸೀತಾರಾಮಯ್ಯನವರ ಈ ಕೆಳಗಿನ ಮಾತುಗಳು ಇಂಥ ಪ್ರತೀಕಗಳ ಹಲವು ಮುಖಗಳನ್ನು ಸಮರ್ಥವಾಗಿ ಪರಿಚಯಿಸುತ್ತವೆ:

> ಕೋಗಿಲೆ ಸಾಮಾನ್ಯವನದ ಹಕ್ಕಿಯಲ್ಲ; ತನುವೆಂಬ ವನದಲ್ಲಿ ಮನದ ಮಾಮರದಲ್ಲಿ ಕೊನರಲೆಯಲ್ಲಿ ಕುಳಿತು, ಭಾವನಂದನದಲ್ಲಿ ಯಾವುದೋ ಹೂವರಳಲು ಮಾತ್ರ ಧಾವತಿಗೊಳ್ಳುವ ಹಕ್ಕಿ, ಮಗ್ಗುಲಲ್ಲಿ ಮಲಗಿದ್ದ ಮಗು ತಾಯಿಗೆ ಎಚ್ಚರವಾದಾಗ ತೀರಿಕೊಂಡಿರುವ ಸನ್ನಿವೇಶವು ಪಂಜರದಲ್ಲಿ ಇಲ್ಲದ ಗಿಳಿಯದು; ಸಾಮ್ರಾಜ್ಯಗಳ ದರ್ಪವೈಭವಗಳನ್ನು ಮೆಟ್ಟಿ, ವಿಶ್ವವ್ಯಾಪಿಯಾಗಿ, ಬ್ರಹ್ಮಾಂಡಗಳನ್ನು ಒಡೆಯಲು ಹೊಂಚು ಹಾಕಿದಂತೆ, ದಿಙ್ಮಂಡಲಗಳ ಅಂಚನ್ನು ಮುಟ್ಟಿ, ಆಚೆಗೂ ಚುಂಚನ್ನು ಚಾಚಿ ಹಾರುತ್ತಿರುವ ಹಕ್ಕಿ ಕಾಲಪಕ್ಷಿ[೭]

ಬೇಂದ್ರೆಯವರ ಕಾವ್ಯದ ಪ್ರಾಣಿ-ಪಕ್ಷಿ ಪ್ರತೀಕಗಳು ಹೊರಡಿಸುವ ಅರ್ಥ ಪರಂಪರೆಗಳ ಸ್ವರೂಪವನ್ನು 'ಕೋಗಿಲೆ' ಕವಿತೆಯ ಈ ಕೆಳಗಿನ ಸಾಲುಗಳಲ್ಲಿ ಉದಾಹರಣೆಗಾಗಿ ಪರಿಶೀಲಿಸಬಹುದು.

> ಇನ್ನು ನಿದ್ದೆಯ ತೊರೆದು ತನ್ನ ತನವನರಿದು
> ಭಿನ್ನ ಭಾವವ ಬಿಟ್ಟು ಕೋಗಿಲೆ
> ನನ್ನ ಕನ್ನಡ ನಾಡ ಚೆನ್ನರೇಳುವಂತೆ
> ಕೂಗುವಿಯಾ ಹೇಳು ಕೋಗಿಲೇ?[೮]

ಹೊಸ ಸಂಸ್ಕೃತಿಯೊಂದರ ಸಂಪರ್ಕ-ಸಂಘರ್ಷಗಳಿಂದ ಎಚ್ಚೆತ್ತ ಸೃಷ್ಟಿಶೀಲ ಸಂವೇದನೆ ತನ್ನ ದುರಾವಸ್ಥೆ-ಜಡಾವಸ್ಥೆಗಳನ್ನು ವಿಡಂಬನೆಗೆ ಗುರಿಯಾಗಿಸುತ್ತಲೆ, ರಾಷ್ಟ್ರ ಹಾಗೂ ಅಖಂಡ ಕರ್ನಾಟಕದ ಅನನ್ಯತೆಗಳನ್ನು ಅಭಿವ್ಯಕ್ತಿಗೆ ಗುರಿಯಾಗಿಸುವ ಪ್ರಕ್ರಿಯೆಯಲ್ಲಿಯೇ ಆಕ್ರಮಣಶೀಲ ಸಂಸ್ಕೃತಿಯ ಬಗೆಗಿನ ಪ್ರತಿರೋಧಗಳು ಮೈ ಪಡೆಯುವುದು ಬೇಂದ್ರೆಯವರ ಕಾವ್ಯದ ಅನನ್ಯತೆಯಾಗಿದೆ. ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ಸಂಸ್ಕೃತಿಗಳ ಬೇತಾಳ ಕುಣಿತ, ಕಾಳ ನರ್ತನದ ಕಾಲ್ಕೆಳಗೆ ಸಿಕ್ಕಿ ಹುಡುಗೂಡಿ ಹೋದ ರಾಷ್ಟ್ರ ಹಾಗೂ ಕರ್ನಾಟಕವನ್ನು ಕಟ್ಟಬೇಕೆಂಬ ಅಭೀಪ್ಸೆ ಈ ಕವನಗಳ ಮುಖ್ಯ ಆಶಯ. ಅಂದರೆ ಕನ್ನಡ ನಾಡು-ನುಡಿಗಳ ಬಗೆಗಿನ ಪ್ರೀತಿ, ಅಭಿಮಾನ, ಹೊಸ ಸೃಷ್ಟಿಗೆ

ಎದುರಾಗಲೇಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳುತ್ತವೆ. ದೇಶ-ಭಾಷೆಗಳ ಬಗೆಗಿನ ಉದಾಸೀನ ಮನೋಭಾವ ಇಲ್ಲವಾಗಿ, ಒಡಕಿನ ಕರ್ನಾಟಕವನ್ನು ಅಖಂಡ ಕರ್ನಾಟಕವನ್ನಾಗಿ ಕಟ್ಟುವ ಕನಸು ಇಲ್ಲಿಯದಾಗಿದೆ.

**೨. ಏಕೀಕರಣ, ಸ್ವಾತಂತ್ರ್ಯ, ಯುದ್ಧ, ಬಂಧನ, ಬಿಡುಗಡೆ**

ವಸಾಹತು ಸಂಸ್ಕೃತಿಯ ಎಲ್ಲ ಆಮಿಷಗಳಿಂದ ಬಿಡುಗಡೆ ಹೊಂದಿ ನಾಡು-ಹಾಡನ್ನು ಕಟ್ಟುವ ಶಕ್ತಿಯಾರ್ಜನೆಗೆ ಬೇಂದ್ರೆಯವರ ಕಾವ್ಯ ತಮ್ಮ 'ಸೀಮೋಲ್ಲಂಘನ'ಕ್ಕೆ ಆಹ್ವಾನಿಸುತ್ತದೆ.

ಇಲ್ಲ ಸಲ್ಲದ ಕಾಲ ತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನು ಹಿಡಿದು
- - - - - - - - - - - - - - -
ಹೇವದಿರಿ ಗುರಿಯಿಟ್ಟು ಮೇಳ ಹೊರಟಿಹುದು
ಏರಿಕೆಯ ಕರಿನಾಡ ಸೀಮೆಯನ್ನು ದಾಟಿ.[೯]

ರಾಷ್ಟ್ರ-ರಾಜ್ಯಗಳ ನಡುವೆ ಏರ್ಪಟ್ಟಿರುವ ಚಾರಿತ್ರಿಕವಾದ 'ಹರಕುತನ', 'ಒಡಕುತನ'ಗಳನ್ನು ದಾಟಿ ರಾಷ್ಟ್ರವ್ಯಾಪಿ ಹೋರಾಟಕ್ಕೆ 'ಒಂದೇ ತಾಯಿಯ ಮಕ್ಕಳಂತೆ' ಒಂದಾಗಬೇಕೆಂಬ ಕರೆ ಇಲ್ಲಿದೆ. ಹಾಗೆಯೇ, ರಾಷ್ಟ್ರಕ್ಕೆ ಒದಗಿರುವ ಕೇಡನ್ನು ಇಲ್ಲವಾಗಿಸಲು ಉನ್ನತಾದರ್ಶಗಳೊಂದಿಗೆ ಸೀಮೋಲ್ಲಂಘನಕ್ಕೆ 'ಕರುನಾಡ ಮೇಳ' ಹೊರಟ ಚಿತ್ರವನ್ನು ಈ ಕವಿತೆಯಲ್ಲಿ ಕಾಣುತ್ತೇವೆ. ಈ ಬಗೆಯ ನೆಲೆಗಳಿಗೆ ಬೇಂದ್ರೆ ಕಾವ್ಯ ಎದುರಾಗಿಸುವ ರೂಪಕಗಳನ್ನಷ್ಟೇ ವಿಶ್ಲೇಷಿಸಿ ಪ್ರತ್ಯೇಕ ಪ್ರಬಂಧವಾಗಿ ಬರೆಯಲು ಅವಕಾಶವಿದೆ. ಭೂಮಿ-ಆಕಾಶ, ಹಗಲು-ರಾತ್ರಿ, ಪ್ರಾಣಿ-ಪಕ್ಷಿ, ನಾದ-ನೃತ್ಯರೂಪಕಗಳು ಹೊರಡಿಸುವ, ಧ್ವನಿಸುವ ಅರ್ಥಪರಂಪರೆಗಳು ಅಸಂಖ್ಯ ಸೃಷ್ಟಿಸ್ಥಿತಿಲಯಗಳಿಗೆ ಅವರ ಒಟ್ಟು ಕಾವ್ಯವೇ ಅಖಂಡರೂಪಕವೆಂದರೂ ತಪ್ಪಾಗಲಾರದು. ಬದುಕಿನ ಸಂಕೀರ್ಣತೆಗಳೆಲ್ಲವೂ ರೂಪಕಗಳಾಗಿ ಮೈಪಡೆದು ಕಾವ್ಯಾರ್ಥಗಳನ್ನು ಹಿಗ್ಗಿಸುವ ಕ್ರಮ ಮಾರ್ಮಿಕವಾದುದು.

ಉನ್ನತಾದರ್ಶನಗಳಿಂದ ಹೊಸನಾಡನ್ನು ಕಟ್ಟಲು ಹೊರಟ 'ಕರುನಾಡ ಮೇಳ'ಕ್ಕೆ ದುತ್ತನೆ ಎದುರಾಗುವುದು ಕನ್ನಡಾಂಬೆ ಮತ್ತು ಭಾರತಾಂಬೆಯರ ದುರಾವಸ್ಥೆಗಳ ವಿರಾಟ್‌ದರ್ಶನ. 'ಕನಸಿನೊಳಗೊಂದು ಕಣಸು' ಹಾಗೂ 'ಮೂವತ್ತು ಮೂರು ಕೋಟಿ' ಕವನಗಳಲ್ಲಿ ಜನತೆಯ ಅಭಿಮಾನ್ಯಶೂನ್ಯತೆ ಹಾಗೂ ನಿರ್ವೀರ್ಯತೆಗಳಿಂದ ನಾಡು ಅನುಭವಿಸಬೇಕಾಗಿ ಬಂದ ಶೋಚನೀಯ ಸ್ಥಿತಿಗತಿಗಳನ್ನು ಬೇಂದ್ರೆ ಸಂವೇದನೆ ನಾಟ್ಯೀಕರಿಸುತ್ತದೆ. ತಾಯಿ-ಮಕ್ಕಳ ಸಂವಾದದಿಂದ ಸಾಗುವ 'ಕನಸಿನೊಳಗೊಂದು ಕಣಸು' ಕವಿತೆ ಒಮ್ಮೆಗೆ ಕನ್ನಡಾಂಬೆಗೆ ಒದಗಿರುವ ದುಸ್ಥಿತಿಗಳನ್ನು, ಅಂಥ ದುಸ್ಥಿತಿಗಳಿಂದ ತಾಯಿಯನ್ನು ಉದ್ಧರಿಸಲು ಕನ್ನಡ ಸಂವೇದನೆ ತಳೆಯಬೇಕಾದ ನಿಲುವುಗಳನ್ನು ಪ್ರಕಟಿಸುತ್ತದೆ. 'ಯಾರು ನಿಂದವರಲ್ಲಿ ತಾಯೆ? ನೀನಾರ ಮನೆಯವಳು? ಮನೆಯಿಲ್ಲವೆ ಇರಲು ಪರದೇಶಿಯೇನು?' ಮಗನ ಈ ಮೇಲಿನ ಪ್ರಶ್ನೆಗಳು ಕನ್ನಡಾಂಬೆಯ ಬಗೆಗೆ ಮಕ್ಕಳು ತಳೆದ ಉದಾಸೀನತೆಯನ್ನು ಹಾಗೂ ಪಾರತಂತ್ರ್ಯದಿಂದ ಕನ್ನಡಾಂಬೆಗೆ

ಒದಗಿರುವ ಅವಸ್ಥೆಯನ್ನು ಸೂಚಿಸುತ್ತವೆ. ತಾಯಿಯನ್ನೆ ಅಪರಿಚಿತಳಂತೆ ಪ್ರಶ್ನಿಸುವ ಇಂಥ ಮಗನ ಪ್ರಶ್ನೆಗಳು ಹೊರಡಿಸುವ ದುರಂತ ಮಾರ್ಮಿಕವಾದುದು. ಕನ್ನಡಿಗರ ಆಲಸ್ಯ ಹಾಗೂ ನಿರ್ವೀರ್ಯತೆಗಳನ್ನು ಪ್ರಶ್ನಿಸುವ ಕವಿತೆ ಇದು. 'ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು?' ಎಂಬ ತಾಯಿಯ ಪ್ರಶ್ನೆ ಕನ್ನಡ ಜನತೆಯ ವೀರ್ಯತ್ವವನ್ನೆ ಪ್ರಶ್ನಿಸುತ್ತದೆ. ಇಂಥ ವಿಡಂಬನೆ ಇನ್ನೂ ಪ್ರಖರವಾಗುವುದು, ಮೊನಚಾಗುವುದು 'ಮೂವತ್ತುಮೂರು ಕೋಟಿ' ಕವನದಲ್ಲಿ.

'ಮೂವತ್ತು ಮೂರು ಕೋಟಿ' ಕವಿತೆ ವಸಾಹತು ಸಂಸ್ಕೃತಿಯ ಆಕ್ರಮಣಶೀಲತೆಯಿಂದ ರಾಷ್ಟ್ರೀಯ ನೆಲೆಗಳಲ್ಲಿ ಕಂಡುಬಂದ ನಿರ್ವೀರ್ಯತೆ ಹಾಗೂ ನಿಷ್ಕ್ರಿಯೆಗಳಿಗೆ ಮುಖಾಮುಖಿಯಾಗಿಸಿದ ಅಖಂಡ ನಾಟ್ಯರೂಪಕ. ಕವಿತೆಯ (೩೩,೦೦,೦೦,೦೦೦) ಹೆಸರಿನಲ್ಲಿರುವ ಸೊನ್ನೆಗಳ ಸಂಖ್ಯೆಯೇ ಹಲವು ಧ್ವನಿಗಳನ್ನು ಹೊರಡಿಸುತ್ತದೆ. ಕವನದ ಆರಂಭದ ಆವರಣದಲ್ಲಿ ಕೊಟ್ಟಿರುವ ವಿವರಣೆಯ ಸಣ್ಣ ಟಿಪ್ಪಣಿಯೆ ಭಾರತಾಂಬೆಯ ದೀನಾವಸ್ಥೆಯನ್ನು ಕಟ್ಟಿಕೊಡುತ್ತದೆ. ಕಡೆಯಿಲ್ಲದ ಕಡಲ ನಡುವೆ ಸ್ಥಿರಾಸನದಲ್ಲಿ ಭೂಮಿತಾಯಿಯು ಧ್ಯಾನ ಮುದ್ರೆಯಲ್ಲಿ ಕುಳಿತಿದ್ದಾಳೆ. ಅವಳ ಎಡದೊಡೆಯ ಮೇಲೆ ಭಾರತಿಯು ತನ್ನ ಮೊಗವನ್ನು ಬಲಗೈಯಿಂದ ಒರಗಿಸಿ ಎಡಗೈಯನ್ನೆತ್ತಿ ಹಾಡಿ ಹಾಡಿ ತನ್ನ ಪಾಡನ್ನು ತೋಡಿಕೊಳ್ಳುತ್ತಲಿದ್ದಾಳೆ. ಅವಳ ಸುತ್ತಲೂ ವಿವಿಧಾಕಾರದ ಕೋಟ್ಯಾವಧಿ ಪ್ರಾಣಿಗಳು ಅಸ್ತವ್ಯಸ್ತವಾಗಿ ಬಿದ್ದುಕೊಂಡಿವೆ[೧೦]. ಇಂಥ ಅವಸ್ಥೆಗೆ ಕಾರಣಗಳೇನೆಂಬುದನ್ನು ಈ ಲೇಖನದ ಪೀಠಿಕೆಯ ಭಾಗವನ್ನು ನೋಡಬಹುದು.

ದೇಶ ಪಾರತಂತ್ರ್ಯಕ್ಕೆ ಒಳಗಾದ ಸಂದರ್ಭದಲ್ಲಿ ಭಾರತೀಯರಲ್ಲಿ ಐಕ್ಯತೆಯನ್ನು ಉಂಟು ಮಾಡುವುದು ಅಂದಿನ ಸಾಂಸ್ಕೃತಿಕಸಂವೇದನೆಯ ಬಹುಮುಖ್ಯ ಹೊಣೆಗಳಲ್ಲಿ ಒಂದಾಗಿತ್ತು.ಏಕಚಕ್ರಾಧಿಪತ್ಯಕ್ಕೆ ಒಳಪಡದ ಭಾರತ ರಾಜಕೀಯವಾಗಿಯೆ ಅಲ್ಲದೆ ಜಾತಿ, ಧರ್ಮ, ಭಾಷೆಯಂಥ ಸಾಂಸ್ಕೃತಿಕ ನೆಲೆಗಳಲ್ಲಿಯೂ ಏಕತ್ರತೆಯಿಲ್ಲದೆ ದುರ್ಬಲಗೊಂಡಿತ್ತು. ಜೊತೆಗೆ ಪುರೋಹಿತಶಾಹಿ ವ್ಯವಸ್ಥೆ ಎಸಗಿದ್ದ ಮೌಢ್ಯತೆಯಿಂದ ಜನತೆಯಲ್ಲಿ ಒಳಜಗಳಗಳೂ, ಅಂತರಗಳೂ ಬಹಳವಾಗಿಯೇ ಮನೆ ಮಾಡಿದ್ದವು. ಎಲ್ಲೆಲ್ಲೂ ಅಸಮಾಧಾನ ಹೊಗೆಯಾಡುತ್ತಿತ್ತು. ದೇಶದಲ್ಲಿ ಅನೈತಿಕತೆ, ಅನೈಕ್ಯತೆಗಳ ಪರಿಣಾಮವಾಗಿ ಹೊರಗಿನ ಶಕ್ತಿಗಳ ಪ್ರವೇಶಕ್ಕೆ ಅವಕಾಶವೊಂದು ಸೃಷ್ಟಿಯಾಗಿತ್ತು. ಇಂಥ ಸಂದರ್ಭದಲ್ಲಿ ವ್ಯಾಪಾರಕ್ಕೆಂದು ಬಂದ ಪಾಶ್ಚಾತ್ಯರಿಗೆ ತಮ್ಮ ರಾಜಕೀಯ ಅಸ್ತಿತ್ವವನ್ನು ಸ್ಥಾಪಿಸಲು ಭಾರತ ಅನುಕೂಲವಾಗಿ ತೋರಿತು. ಇಲ್ಲಿನ ಆಂತರಿಕ ರಾಜಕೀಯ ದ್ವೇಷಗಳು ಅವರಿಗೆ ವರವಾಗಿ ಪರಿಣಮಿಸಿದವು. ಬ್ರಿಟಿಷರು 'ಒಡೆದು ಆಳು' ನೀತಿಯಿಂದ ಇಂಥ ಆಂತರಿಕ ಕಲಹಗಳನ್ನು ಪ್ರೇರೇಪಿಸುತ್ತಲೇ, ಅವುಗಳ ಲಾಭ ಪಡೆಯುವುದರೊಂದಿಗೆ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಆದರೆ, ಅಂಥ ಚಕ್ರಾಧಿಪತ್ಯದಿಂದ ರಾಜಕೀಯ ಐಕ್ಯತೆಯ ಪ್ರಜ್ಞೆ ಭಾರತೀಯರಲ್ಲಿ ಪ್ರಬಲವಾಗುತ್ತಿದ್ದಂತೆ, 'ರಾಷ್ಟ್ರೀಯತೆಯ ಪ್ರಜ್ಞೆ'ಯು ಎಚ್ಚರವಾಯಿತು. ಸ್ವಾತಂತ್ರ್ಯದ ಹಂಬಲವೂ ಭಾರತೀಯರದಾಯಿತು. ಇಂಥ ಹಂಬಲವನ್ನು ಅಧಿಕಗೊಳಿಸುವುದು, ಸ್ವಾತಂತ್ರ್ಯ ಅಗತ್ಯದ ಬಗೆಗಿನ ತಿಳಿವಳಿಕೆಗಳಿಂದ ಜನತೆಯಲ್ಲಿ ಎಚ್ಚರ ಮೂಡಿಸುವುದು ರಾಜಕೀಯ ನಾಯಕರ ಹೊಣೆಯಾಗಿದ್ದಂತೆಯೇ, ಸಾಂಸ್ಕೃತಿಕನಾಯಕರ ಜವಾಬ್ದಾರಿಯೂ ಆಯಿತು. ಆದ್ದರಿಂದ ನಾಡಿನ ಪಾರತಂತ್ರ್ಯತೆಗೆ ಜನತೆಯ ಆಲಸ್ಯ, ನಿರ್ವೀರ್ಯತೆ, ದೇಶಾಭಿಮಾನದ ಬಗೆಗಿನ ನಿರಾಶೆಗಳೆ ಕಾರಣವೆಂಬ ಎಚ್ಚರವನ್ನು ಮೂಡಿಸುವುದು, ಪ್ರತಿಯೊಬ್ಬರಲ್ಲೂ ಸ್ವದೇಶಾಭಿಮಾನ,

ಸ್ವಭಾಷಾಭಿಮಾನಗಳನ್ನು ಉಂಟು ಮಾಡುವುದು ಈ ಶತಮಾನದ ಸಂವೇದನೆಯ ಕರ್ತವ್ಯವಾಗಿದ್ದಂತೆ ತೋರುತ್ತದೆ. ಬೇಂದ್ರೆಯವರ ಈ ಕಾಲಮಾನದ ಕವಿತೆಗಳು ಅಂಥ ಹೊಣೆಗಾರಿಕೆಯಿಂದ ಮೈಪಡೆಯುವುದನ್ನು ಕಾಣಬಹುದು.

ಸಾಂಸ್ಕೃತಿಕ ಪರಿಸರ ಜನತೆಯಲ್ಲಿ ದೇಶಾಭಿಮಾನ, ಭಾಷಾಭಿಮಾನಗಳನ್ನು ಉಂಟುಮಾಡಲು ಕಂಡುಕೊಂಡ ತಂತ್ರಗಳು ಅಸಂಖ್ಯ. ಬೇಂದ್ರೆಯವರ ಈ ಬಗೆಯ ಕಾವ್ಯತಂತ್ರಗಳ ಮಾದರಿಗಳಿಗೆ 'ಕನಸಿನೊಳಗೊಂದು ಕಣಸು', 'ಮೂವತ್ತು ಮೂರು ಕೋಟಿ', 'ನರಬಲಿ' ಕವನಗಳನ್ನು ಹೆಸರಿಸಬಹುದು. ತಾಯಿ ಮಕ್ಕಳ ಸಂವಾದದಿಂದಲೇ ಪಾರತಂತ್ರ್ಯದಿಂದ ಒದಗಿದ ದುಸ್ಥಿತಿಗಳನ್ನು ನಾಟ್ಯೀಕರಣಗೊಳಿಸುವುದು ಈ ಕವನಗಳ ವೈಶಿಷ್ಟ್ಯ. ಇಂಥ ನಾಟ್ಯೀಕರಣದಿಂದ ಬೇಂದ್ರೆಯವರ ಕಾವ್ಯ ವ್ಯಂಗ್ಯ, ವಿಡಂಬನೆ, ಮೂದಲಿಕೆಗಳಿಂದಲೆ ಆಕ್ರಮಣಸಂಸ್ಕೃತಿಗೆ ತನ್ನ ಪ್ರತಿರೋಧಗಳನ್ನು ದಾಖಲಿಸುತ್ತವೆ.

'ಮೂವತ್ತು ಮೂರು ಕೋಟಿ', ಈ ಕವಿತೆಯ ಪಲ್ಲವಿಯಂತಿರುವ 'ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ ಮೂವತ್ತು ಮೂರು ಕೋಟಿ?' ಎಂಬ ತಾಯಿಯ ಪ್ರಶ್ನೆಯಲ್ಲಿ ಅತ್ಯಂತ ನೋವು, ವಿಷಾದ, ಪಶ್ಚಾತ್ತಾಪದ ಧ್ವನಿಗಳು ಹೊರಡುತ್ತವೆ. ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವ ಈ ಪ್ರಶ್ನೆ ನಾಡಿನ ಸಂವೇದನೆಯಲ್ಲಿ ಕಾಣಿಸಿಕೊಂಡಿರುವ ಬಿಕ್ಕಟ್ಟುಗಳನ್ನು ಪ್ರಶ್ನಿಸುತ್ತಲೆ, ಕೆಚ್ಚನ್ನು ಕೆರಳಿಸುವ ಆಶಯವನ್ನು ಹೊಂದಿದೆ. ಅಸಂಖ್ಯ ಮಕ್ಕಳ ತಾಯಿಯ ನಿಟ್ಟುಸಿರುಗಳು ಕವಿತೆಯ ಉದ್ದಕ್ಕೂ ಮೈಪಡೆಯುವುದು ಮಾರ್ಮಿಕವಾಗಿದೆ. ಸ್ಥಳೀಯ ಸಾಮ್ರಾಜ್ಯಶಾಹಿ ಹಾಗೂ ಪುರೋಹಿತಶಾಹಿ ವ್ಯವಸ್ಥೆಗಳಿಂದ ಏರ್ಪಟ್ಟ ಬಿರುಕುಗಳು, ಮೌಢ್ಯತೆಗಳು ಹಾಗೂ ಯಾಂತ್ರಿಕ ಕ್ರಿಯಾಚರಣೆಗಳಿಂದಾಗಿ ಭಾರತಾಂಬೆಯ ಮಕ್ಕಳಲ್ಲಿ ಅನೈಕ್ಯತೆಯು ಮನೆಮಾಡಿರಲು, ತಮ್ಮ ತಮ್ಮಲೇ ಪ್ರೀತಿ-ಆದರಗಳು ದೂರವಾಗಿ ತಾಯಿಯನ್ನೇ ಮರೆತ ಮಕ್ಕಳ ಬಗೆಗಿನ ಮರುಕವು ಇಲ್ಲಿದೆ. ಜಾತಿ, ಧರ್ಮ, ವರ್ಣವ್ಯವಸ್ಥೆಗಳು ಎದುರಾಗಿಸಿದ ಅಂತರಗಳಿಂದಲೂ ಲಿಂಗ ಬೇಧಗಳಿಂದಲೂ ಹೋಳು ಹೋಳಾದ ಜನತೆಯ ದಾರುಣಚಿತ್ರವನ್ನು ಇಲ್ಲಿ ಕಾಣುತ್ತೇವೆ. ಹಾಗಾಗಿ ಮನೆಯೇ ಮಲ್ಲಸಾಲೆಯಾಗಿ, ಹಂಗಿನರಮನೆಯಾಗಿ ಮಾರ್ಪಟ್ಟು, ದೇಶದಸ್ಥಿತಿ ನರಕದಂತಾದುದನ್ನು ಕಂಡು ಕೇಳುವ ಭಾರತಾಂಬೆಯ ಈ ಮುಂದಿನ ಪ್ರಶ್ನೆಗಳು ಮಹತ್ವದ್ದಾಗಿವೆ.

ಹಡೆದೊಡಲು ಬಂಜೆಯಾಯ್ತೆ ಬಾಳ್ಮೊದಲೆ ಸಂಜೆಯಾಯ್ತೆ?
ಭಾರತಿಗೆ ತಲೆಭಾರ ಇರುವಳೆಂಬ ವಿಚಾರ-
    ಬಾಳ್ವಣ್ಣು ಗಿಂಜು ಆಯ್ತೆ?
        ಬರಿ ಶೂನ್ಯ
    ಮೂವತ್ತು ಮೂರು ಕೋಟಿ!![೧೧]

'ಹಡೆದೊಡಲು ಬಂಜೆಯಾಯಿತೆ?' ಇದು ಮೂವತ್ತು ಮೂರು ಕೋಟಿ ಮಕ್ಕಳುಳ್ಳ ತಾಯಿಯ ಪ್ರಶ್ನೆ . ಇಂಥ ಪ್ರಶ್ನೆಗಳಿಂದಲೇ, ಮಕ್ಕಳಿಗೆ ಉನ್ನತಾದರ್ಶನಗಳ ಬಯಕೆಯಿಂದ ಜನ್ಮವಿತ್ತ ತಾಯಿ ಮಕ್ಕಳ ಮುಂದೆ ತನ್ನ ಅಳಲನ್ನು ತೋಡಿಕೊಳ್ಳುತ್ತಲೆ ಜನತೆಯಲ್ಲಿ ಕೆಚ್ಚನ್ನು ಕೆರಳಿಸಿ ತನ್ನ ರಕ್ಷಣೆಗೆ ಮುಂದಾಗುವಂತೆ ಆಹ್ವಾನವೀಯುತ್ತಾಳೆ.

ಡಿಂಭಗಳನೊಡೆದು ಬನ್ನಿ! ಕಂಬಗಳನೊಡೆದು ಬನ್ನಿ!
ಮೈಯಲ್ಲಿ ಮಡಗದಿರಿ! ಮನದಲ್ಲಿ ಅಡಗದಿರಿ
ತಾಯಿ ಇದೋ ಬಂದೆವೆನ್ನೀ!
ನಾ ಪಡೆದ
ಮೂವತ್ತು ಮೂರು ಕೋಟಿ!![೧೨]

ಬಡತನ, ಅಜ್ಞಾನ, ಅಂಧಕಾರಗಳಿಂದ ಜಡಾವಸ್ಥೆಗಳಲ್ಲಿ ನಿದ್ರಿಸಿದ್ದ ಜನತೆಯನ್ನು ಕವಿಸಂವೇದನೆ ಎಚ್ಚರಿಸುವುದನ್ನು ಈ ಬಗೆಯ ಕವಿತೆಗಳಲ್ಲಿ ಕಾಣುತ್ತೇವೆ. ಆಕ್ರಮಣಶೀಲ ಸಂಸ್ಕೃತಿಗಳಿಗೆ ಬೇಂದ್ರೆ ಸಂವೇದನೆ ಇಂಥ ನೆಲೆಗಳಿಂದಲೆ ಪ್ರತಿರೋಧ ಒಡ್ಡುವುದು ವಿಶಿಷ್ಟವಾದುದು.

'ನರಬಲಿ' ಕವಿತೆ ಸಾಮ್ರಾಜ್ಯಶಾಹಿಗಳು ಸೃಷ್ಟಿಸುತ್ತಿರುವ ಯುದ್ಧದ ಅನರ್ಥಗಳನ್ನು ವಿಡಂಬಿಸುವುದರೊಂದಿಗೆ, ಯುದ್ಧದಿಂದ ಎದುರಾಗುವ ಎಲ್ಲ ಮಟ್ಟದ ನೋವುಗಳನ್ನು, ಅದರ ಭೀಕರ ಪರಿಣಾಮಗಳನ್ನು, ಅದಕ್ಕೆ ಕಾರಣವಾಗುವ ಶಕ್ತಿಗಳನ್ನು ವಿಮರ್ಶೆಗೆ ಗುರಿಪಡಿಸಿದೆ. 'ನರಬಲಿ'ಯ ಹಿನ್ನೆಲೆಗೆ ಬೇಂದ್ರೆಯವರ ಈ ಕವನ ರಚನೆಯ ಸಂದರ್ಭಸೂಚಿಯನ್ನು ಗಮನಿಸುವುದು ಉಚಿತವೆಂದು ತೋರುತ್ತದೆ. 'ಪ್ರಾಣದಯಾ ಸಂಘದವರು ಪಶುಬಲಿಯನ್ನು ನಿಲ್ಲಿಸುತ್ತಿದ್ದಾರೆ. ಯಾವುದಾದರೂ ನರದಯಾ ಸಂಘದವರು ನರಬಲಿಯನ್ನು ನಿಲ್ಲಿಸಲಾರರೆ? ಪಶುಬಲಿಗೆ ಹೀನ ದೈವಗಳು ಮೆಚ್ಚುವವು. ನರಬಲಿಯನ್ನು ಬೇಡುವ ಯುದ್ಧವೆಂಬ ದೈವ ಮಾನವನ ಮನದ ಯಾವ ನೀಚಲೋಕದಿಂದ ಬಂದಿಯೋ? ನರಬಲಿ ನಿಲ್ಲಿಸುವ ಯುದ್ಧ ಬರಲಿ. ಅದು ನಮ್ಮ ಕುರುಕ್ಷೇತ್ರ'.[೧೩] ಈ ಮಾತುಗಳಲ್ಲಿಯೇ ಕವನದ ಮುಖ್ಯ ಆಶಯವೊಂದು ಪ್ರಕಟವಾಗುತ್ತದೆ. 'ನರಬಲಿ', ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ಎದುರಾಗಿಸಿದ ವಿರೋಧವೆಂದು ಭ್ರಮಿಸಿದ ಬ್ರಿಟಿಷರಿಂದ ಬೇಂದ್ರೆಯವರು ಜೈಲುವಾಸವನ್ನು ಅನುಭವಿಸಬೇಕಾಗಿ ಬಂದ ಘಟನೆ ಚಾರಿತ್ರಿಕವಾಗಿ ಮಹತ್ವವನ್ನು ಪಡೆಯುತ್ತದೆ.

ಸಾಮ್ರಾಜ್ಯಶಾಹಿಗಳ ದುರಾಸೆಗಳಿಂದ ಎದುರಾಗುವ ಯುದ್ಧಗಳು ತರುವ ಅನರ್ಥಗಳಿಗೆ 'ನರಬಲಿ' ಕವನ ಮರುವ್ಯಾಖ್ಯಾನವೊಂದನ್ನು ಕಾಣಿಸುತ್ತದೆ. ಯುದ್ಧವು ಕೆಲವೇ ಮನುಷ್ಯರ ಭೋಗ, ಅಧಿಕಾರ ಲಾಲಸೆಗಳಿಂದ ಎದುರಾಗುವುದು. ಅಂಥ ಯುದ್ಧಗಳಿಂದ ಜನಸಾಮಾನ್ಯರು ಹಾಗೂ ಸಮಷ್ಟಿ ಪರಿಸರವೂ ಅನಿವಾರ್ಯವಾಗಿ ದುರಂತಕ್ಕೆ ಈಡಾಗುವುದು ಅತ್ಯಂತ ಅಮಾನವೀಯ. ಮೊದಲನೇ ಮಹಾಯುದ್ಧದ ಭೀಕರ ಪರಿಣಾಮಗಳನ್ನು ಕಂಡ ಬೇಂದ್ರೆಯವರ ಸಂವೇದನೆ 'ನರಬಲಿ' ಕವಿತೆಯಲ್ಲಿ ಯುದ್ಧ ವಿರೋಧಿ ವ್ಯಾಖ್ಯೆಯೊಂದನ್ನು ಮುಖಾಮುಖಿಯಾಗಿಸುತ್ತದೆ. ಸಾಮ್ರಾಜ್ಯಶಾಹಿ ಎಸಗುವ ಅಮಾನವೀಯ ಯುದ್ಧಗಳನ್ನು ತಡೆಯಲು ಬೇಂದ್ರೆ ಸಂವೇದನೆ 'ನರಬಲಿ'ಯಂಥ ಕವಿತೆಯಲ್ಲಿ, ಯುದ್ಧಕ್ಕೆ ಪ್ರತಿರೋಧವನ್ನು ಒಡ್ಡುವ ಕಾಣ್ಕೆಯೊಂದನ್ನು ಎದುರಾಗಿಸುತ್ತದೆ.

ಸಾಮ್ರಾಜ್ಯವೆಂಬ ಮಹಾಕಾಳಿ ಬಲಗಾಲಲ್ಲಿ ಬಿಡುಗಡೆಯನ್ನು ಮೆಟ್ಟನಿಂತಿದ್ದರೆ, ಅವಳ ಎಡಗಾಲನ್ನು ನಾಯಿ-ಹಂದಿಗಳಂತೆ ನೆಕ್ಕುತ್ತಿರುವ ಸ್ವಾರ್ಥಲೋಲುಪರ ಚಿತ್ರ ಕವನದಲ್ಲಿ ಮೊದಲಿಗೆ ಎದುರಾಗುತ್ತದೆ. ಇಂಥ ಸ್ವಾರ್ಥಲೋಲುಪರ, ಸಾಮ್ರಾಜ್ಯಶಾಹಿಗಳ ದುರಾಸೆಗಳಿಂದ ಉಂಟಾಗುವ ಯುದ್ಧದ ಭೀಕರತೆಯನ್ನು ಕಾಳಿಯ

ಪ್ರತಿಮೆಯೊಂದಿಗೆ ನಾಟ್ಯೀಕರಣಕ್ಕೆ ಗುರಿಪಡಿಸಲಾಗಿದೆ. 'ಆರುವೆ ಎಂದು? ಎಂದು ಆರುವೆ? ನೆಲದಗಲಕೆ ಮುಗಿಲುದ್ದಕ್ಕೆ ಹೊತ್ತಿಹ ಎಲೆಲೆ ಬಂಜೆ ಬೆಂಕಿ!' ಇಂಥ ಪ್ರಶ್ನೆಗಳು ಯುದ್ಧದ ವಿನಾಶವನ್ನೇ ಮಾರ್ದನಿಸುತ್ತವೆ.

ರಕ್ತದ ಅಭಿಷೇಕ, ರುಂಡಗಳ ಹಾರ, ಮದ್ದಿನ ಧೂಪ ಹಾಗೂ ನರಬಲಿಯ ನೈವೇದ್ಯಗಳಿಂದ ಕಾಳಿಯಪೂಜೆ ನೆರವೇರುವ ಚಿತ್ರವು ಎರಡನೆಯ ಭಾಗದಲ್ಲಿದೆ. ನೀತಿ, ದಯೆ, ನ್ಯಾಯಗಳೆಲ್ಲ ಇಲ್ಲಿ ಇಲ್ಲವಾಗಿ, ಬಲಗಾಲ್ ಬುಡದಿಂದ ಬಿಡುಗಡೆ ಪಡೆಯಲು ಕಾಳಿಗೆ ಸಲ್ಲಿಸುವ ಪೂಜೆಯು ನರಬಲಿಯನ್ನು ಬೇಡುತ್ತದೆ. 'ಇದುವೆ ಕಾಳಿಯ ಪೂಜೆಯು ಶುದ್ಧ, ಇದಕ್ಕೆ ಹಂಬರು ಎಂಬರು ಯುದ್ಧ!' ಎನ್ನುವಲ್ಲಿ ಕಾಳಿಯಪೂಜೆ ಮತ್ತು ಯುದ್ಧವನ್ನು ಕುರಿತ ವಿಡಂಬನೆಯನ್ನು ಕಾಣುತ್ತೇವೆ. ಇಂಥ ಯುದ್ಧಗಳಿಂದ ಎದುರಾಗುವ ದುಃಖದಮ್ಮಾನಗಳು, ಹಾಗೂ ಅನಾಥಗೊಳ್ಳುವ ತಾಯಿ-ತಂದೆ, ಬಂಧು-ಬಳಗಗಳ ಆರ್ತನಾದಗಳೇ ಪೂಜೆಯ ವಾದ್ಯಗಳಾಗಬೇಕೆಂಬ ಇಲ್ಲಿಯ ಆಶಯವು ಯುದ್ಧಗಳು ತರುವ ಭೀಕರತೆಯನ್ನು ಯುದ್ಧಕ್ಕೆ ಕಾರಣವಾಗುವ ಮನುಷ್ಯನನ್ನು ಹುಟ್ಟಿಸಿದುದೇತಕ್ಕೆ? ಎಂಬ ಪ್ರಶ್ನೆಯು ವ್ಯಂಗ್ಯದ ಮೂಲಕ ಪ್ರಕಟಗೊಂಡಿದೆ.

ಯುದ್ಧದ ಅನರ್ಥಗಳನ್ನು ತಡೆಯದ ದೈವದ ಅಸ್ತಿತ್ವವನ್ನೇ ಕವಿತೆಯು ವಿಡಂಬಿಸುತ್ತದೆ. ಬುದ್ಧ, ಯೇಸು ಮೊದಲಾದ ಮಾನವತಾವಾದಿಗಳ ವಿಚಾರಧಾರೆ ಎಲ್ಲೆಲ್ಲೂ ತನ್ನ ಪ್ರಭಾವವನ್ನು ಬೀರಿದ್ದರೂ ರಕ್ತಪಾತಗಳು ಮುಂದುವರೆದಿರುವುದನ್ನು ಕವಿತೆ ಪ್ರಶ್ನಿಸುತ್ತದೆ. ಕುರಿ-ಕೋಳಿಗಳನ್ನು ಕೊಂದರೆ ತಡೆಯುವವರುಂಟು. ಆದರೆ ಸ್ವಾತಂತ್ರ್ಯಕ್ಕಾಗಿ ಕಾಳಿಯ ಪೂಜೆಗೆ ಆತ್ಮಾಹುತಿಯಾಗುವ, ನರಬಲಿಯನ್ನು ಅರ್ಪಿಸುವ ಗುಬ್ಬಿ ಮಾನವನನ್ನು ಕೊಂದರೇನು? ಕೇಳುವವರಿಲ್ಲವೆಂಬ ಪ್ರಶ್ನೆಯೊಂದಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಸ್ವಾತಂತ್ರ್ಯ ಹೋರಾಟದಲ್ಲಿ ಅಸಂಖ್ಯ ನರಬಲಿಗೈದ ಕೃತ್ಯವನ್ನು ಈ ಕವಿತೆ ಅತ್ಯಂತ ಮಾರ್ಮಿಕವಾಗಿ ಕಾಣಿಸುತ್ತದೆ. ಸ್ವಾತಂತ್ರ್ಯಕ್ಕಾಗಿ ಎದುರಾಗುವ ಆತ್ಮಾಹುತಿಗಳು ಆಶ್ವಮೇಧಕ್ಕಿಂತ ಭೀಕರವಾದುವೆಂಬ ಸಂಗತಿ ಈ ಕವಿತೆಯಲ್ಲಿ ಧ್ವನಿತವಾಗಿದೆ.

ಸಾಮ್ರಾಜ್ಯಶಾಹಿಗಳು ಸೃಷ್ಟಿಸಿದ ಬಂಧನ ಮತ್ತು ಪಾರತಂತ್ರ್ಯದಿಂದ ಮುಕ್ತಿವಾಗಲು ನರಬಲಿಯ ಅಗತ್ಯತೆಯನ್ನು ಹಾಗೂ ಯುದ್ಧದ ಕ್ರೌರ್ಯಗಳಿಂದ ಏರ್ಪಡುವ ಅನರ್ಥಗಳನ್ನು 'ನರಬಲಿ' ಕವಿತೆಯು ಒಟ್ಟಿಗೆ ಧ್ಯಾನಿಸುತ್ತದೆ. ಈ ಕಾರಣದಿಂದ ಕವಿತೆಯು ವಿಶ್ಲೇಷಣೆಗೆ ಸುಲಭವಾಗಿ ದಕ್ಕುವುದಿಲ್ಲ. ಕವಿತೆಯಲ್ಲಿ ಏರ್ಪಟ್ಟಿರುವ ಸಂದಿಗ್ಧತೆ ಹಲವು ಧ್ವನಿಗಳನ್ನು ಹೊರಡಿಸುವುದರೊಂದಿಗೆ ಒಂದು ಬಗೆಯ ಅನನ್ಯತೆಯು ಈ ಕವನಕ್ಕೆ ಪ್ರಾಪ್ತವಾಗಿದೆ.

**೩. ನಾಡು - ನುಡಿ - ರಾಷ್ಟ್ರ**

ನಾಡು-ನುಡಿ-ರಾಷ್ಟ್ರಗಳ ಅನನ್ಯತೆಗಳ ಬಗೆಗೆ ಜನತೆಯಲ್ಲಿ ಅಭಿಮಾನವನ್ನು ಮೂಡಿಸುವುದು ರಾಷ್ಟ್ರೀಯ ಪ್ರಜ್ಞೆಯ ಮುಖ್ಯ ಲಕ್ಷಣ. ರಾಷ್ಟ್ರದ ಅನನ್ಯತೆಗಳಿಗೆ ಮಾರಕವಾಗುವ ಹೊರಗಿನ ಶಕ್ತಿಗಳನ್ನು ವಿರೋಧಿಸುವಂತೆ ಜನತೆಯನ್ನು ಪ್ರೇರೇಪಿಸುವುದು ಸಾಂಸ್ಕೃತಿಕ ಸಂವೇದನೆಯ ಹೊಣೆ. ಇಂಥ ಬಾಧ್ಯತೆಗಳ ಪರಂಪರೆಯು ಬಂಕಿಮಚಂದ್ರ ಅವರ 'ವಂದೇ ಮಾತರಂ', ರವೀಂದ್ರನಾಥ ಠಾಕೂರರ 'ಜನಗಣಮನ' ಗೀತೆಗಳಿಂದಲೇ ಆರಂಭವಾಯಿತೆನ್ನಬಹುದು. ಈ ಬಗೆಯ

ಕೃತಿಗಳ ಮುಖ್ಯ ಉದ್ದೇಶ ಮೊದಲೇ ಹೇಳಿದಂತೆ, ದೇಶದ ಅನನ್ಯತೆಗಳನ್ನು ಎತ್ತಿ ಹೇಳುತ್ತಾ ಜನತೆಯಲ್ಲಿ ಒಮ್ಮತವನ್ನು ಉಂಟುಮಾಡುವುದರೊಂದಿಗೆ, ಪರಕೀಯ ಆಕ್ರಮಣಗಳಿಗೆ ಎದುರಾಗುವಂತೆ ಮಾಡುವುದು. ಬೇಂದ್ರೆಯವರ 'ಸಂಚಯ' ಸಂಕಲನದಲ್ಲಿ ಬರುವ ನಾರ್ವೆ, ಗ್ರೀಸ್, ಜಪಾನ್, ಇಂಗ್ಲೆಂಡ್, ಪೋಲೆಂಡ್ ರಾಷ್ಟ್ರಗಳ ರಾಷ್ಟ್ರ ಗೀತೆಗಳ ಅನುವಾದಗಳ ಹಿಂದೆ ಇಂಥ ಸಂವೇದನೆ ಕ್ರಿಯಾಶೀಲಗೊಂಡಿದೆ. ಆಯಾ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವಿಶಿಷ್ಟ್ಯತೆಗಳನ್ನು ಬಿಂಬಿಸುವ ಈ ಕವನಗಳ ಆಶಯವೂ ಇದೇ ಆಗಿದೆ. ರಾಷ್ಟ್ರೀಯ ಪ್ರಜ್ಞೆಯನ್ನು ಜನತೆಯಲ್ಲಿ ಮೂಡಿಸುವ ಬೇಂದ್ರೆಯವರ ಸಂವೇದನೆ ಬಿಡುಗಡೆಗಾಗಿ ಕರೆ ಕೊಡುತ್ತದೆ. 'ಸಂಚಯ' ಸಂಕಲನದ 'ಬಿಡುಗಡೆ' ಹಾಗೂ 'ಯಕ್ಷ-ಯಕ್ಷಿ' ಸಂಕಲನದ 'ಬಿಡುಗಡೆ' ಕವನಗಳು ರಾಷ್ಟ್ರ ಹಾಗೂ ಬದುಕಿನ ಎಲ್ಲ ಮಟ್ಟದ ದಾಸ್ಯ-ಬಂಧನಗಳಿಗೆ ಮುಖಾಮುಖಿಯಾಗಿಸಿದ ಕಾಣ್ಕೆಗಳಂತಿವೆ.

> ಇಗೊ! ಹೊರಟೆವು ಬಿಡುಗಡೆಗಾಗಿ
> ಬಹ|ರಾರು ನಮಗಿದಿರಾಗಿ? ||ಪ||
> ಇದು| ನಾಡಿನ ಪಂಚ ಪ್ರಾಣಾ
> ಇದು| ಇಲ್ಲದ ಜನನಿತ್ರಾಣಾ
> ಹಾ|ಗಾಗಿರೆ ಕಾಣಾ ಕಾಣಾ
> ಇಹು| ದೆಂತು ಹೇಳೋ ಜಾಣಾ
> ಅದಕಾಗಿ | ತಾಗಿ |ಸಾಗಿ
> ಇಗೊ...........
> ಗೋ|ಣಿನೊಳಿದೆ ಬಿಟ್ಟಿಯ ನೊಗವು
> ಕೆಳ| ಗೊಗೆವುದೆ ಜೀವಕೆ ಸೊಗವು
> ಅಂ|ದರಳ್ವುದು ತಾಯಿಯ ಮೊಗವು
> ಅದು|ವರೆಗೂ ಸೆರೆಮನೆ ಜಗವು
> ಅದಕಾಗಿ | ತಾಗಿ|ಸಾಗಿ
> ಇಗೊ......[೧೪]

ಈ ಮೇಲಿನ ಸಾಲುಗಳಲ್ಲಿ, ದಾಸ್ಯದಿಂದ ಎದುರಾಗುವ ಅನರ್ಥಗಳನ್ನು ತಿಳಿಹೇಳುತ್ತಲೇ, ಬಿಡುಗಡೆ ಅಥವಾ ಸ್ವಾತಂತ್ರ್ಯದ ಅಗತ್ಯತೆಯನ್ನು ಸೂಚಿಸಲಾಗಿದೆ. ಯುಗಯುಗಳ ದಾಸ್ಯದ ನೊಗವನ್ನು ಕಳೆದೊಗೆಯುವುದರಲ್ಲಿ ತಾಯಿಯ ಮೊಗವು ಅರಳುವುದೆಂದು, ಅದುವರೆಗೂ ಜಗ ಸೆರೆಮನೆಯಾಗಿಯೇ ಉಳಿಯುವುದೆಂದು, ಅದಕ್ಕಾಗಿ ಸ್ವಾತಂತ್ರ್ಯ-ಸ್ವಚ್ಛಂದಗಳನ್ನು ಪಡೆಯಲು ಹೋರಾಡಬೇಕೆಂಬ ಕರೆ ಇದೆ.

> ಮುಗಿ| ಲೊಳಗೂ ಹಕ್ಕಿಗೆ ಹಾದಿ
> ಕಡ|ಲೊಳಗೂ ಮೀನಕೆ ಬೀದಿ
> ಮಲೆ| ಗಳೊಳೂ ಹೊಳೆಗೂ ಕೋಡಿ

ನಮ|ಗಷ್ಟೇ ಏಕೀ ಬೇಡಿ?

ಆದಕಾಗಿ| ತಾಗಿ| ಸಾಗಿ

ಇಗೊ.....[೧೫]

ಸೃಷ್ಟಿಯ ಚರಾಚರಗಳಿಗೆ ಇರುವ ಸ್ವಾತಂತ್ರ್ಯ ಮನುಷ್ಯನಿಗೆ ಏಕಿಲ್ಲವೆಂಬ ಪ್ರಶ್ನೆ ಬೇಂದ್ರೆ ಕಾವ್ಯದಲ್ಲಿ ಮತ್ತೆ ಮತ್ತೆ ಎದುರಾಗುವಂತಹದು. ಮನುಷ್ಯನ ಸ್ವಾರ್ಥ ಹಾಗೂ ಸಾಮ್ರಾಜ್ಯಶಾಹಿ ನೆಲೆಗಳು ಎದುರಾಗಿಸುವ ಬಂಧನಗಳು ಮನುಷ್ಯನನ್ನು ನಿರಂತರವಾಗಿ ತಲ್ಲಣಗಳಿಗೆ ಗುರಿಮಾಡುತ್ತಲೇ ಬಂದಿವೆ. ಇಂಥ ಪ್ರಶ್ನೆಗಳಿಗೆ "ಗರಿ" ಸಂಕಲನದ 'ಯುಗಾದಿ' ಕವಿತೆಯಲ್ಲಿಯೇ ಬೇಂದ್ರೆ ಸಂವೇದನೆ ಕಾಣ್ಕೆಯೊಂದನ್ನು ಪ್ರಕಟಿಸಿದೆ.'ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ ಒಂದೆ ಹರೆಯ ನಮಗದಷ್ಟೆ ಏತಕೆ|' ಎಂಬ ಪ್ರಶ್ನೆಯು ಮನುಷ್ಯನನ್ನು ಅನಾದಿಕಾಲದಿಂದಲೂ ಕಾಡುತ್ತಿರುವುದೇ ಆಗಿದೆ. ಹುಟ್ಟು-ಸಾವು, ಮುಪ್ಪು - ರೋಗರುಜಿನಗಳಿಂದ ಎದುರಾಗುವ ಬಂಧನದ ಅವಸ್ಥೆಗಳನ್ನು 'ಯುಗಾದಿ' ಕವನ ಮಾರ್ಮಿಕವಾಗಿ ಧ್ವನಿಸುತ್ತದೆ.

'ಬಂಧನ ಎಲ್ಲಿಂದ ಬರುತ್ತದೆಯೋ ಅಲ್ಲಿಂದಲೇ ಬಿಡುಗಡೆ'ಯೆಂಬ ನಂಬಿಕೆಯನ್ನು 'ಪಡುವಲಕಡಲ ಅಂಬಿಗರ ಹಾಡು', 'ಬಂದಿಕಾರಾ ಶ್ರಾವಣಾ' ಕವಿತೆಗಳಲ್ಲಿ ಪ್ರತಿಪಾದಿಸಲಾಗಿದೆ. ಪಶ್ಚಿಮದ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಎದುರಾದ ಬಂಧನದ ಬಿಡುಗಡೆಗೆ ಅಲ್ಲಿಂದಲೇ ಸ್ವಾತಂತ್ರ್ಯಗೊಳ್ಳಬೇಕೆಂಬ ಎಚ್ಚರಗಳು ಮೈ ಪಡೆದ ಚಾರಿತ್ರಿಕ ಸಂಗತಿಯನ್ನು ಇಂಥ ಕವಿತೆಗಳು ಸ್ಪಷ್ಟಪಡಿಸುತ್ತವೆ.

ಪಡುವಲ ಕಡಲಿದು ಏನಂದವೊ|
ಉಕ್ಕೇರಿ ಬರುತಿದೆ ಆನಂದವೊ|
ಬಂಧನ ಬಂದಿತು ಎಲ್ಲಿಂದಲೋ|
ಬಿಡುಗಡೆ ಇಂದೂನು ಅಲ್ಲಿಂದಲೋ||

ಏ| ಲೇಲಾಲಿ....

- - - - - - - - - - - - - - - - - -

ಮುತ್ತೇನು ಮೆಣಸೇನು ಲಾವಂಗವೋ|
ಕುದರೇನು ಹವಳೇನು ಲಬರಂಗವೋ|
ಬೇಹಾರ ಆಹಾರ ಸಂಹಾರವು
ಮತಮೂಢ ಹುಂಕಾರ ಠಂಕಾರವು|

ಏ| ಲೇಲಾಲಿ.......[೧೬]

ಈ ಮೇಲಿನ ಕವಿತೆಯ ಜತೆಯಲ್ಲಿ 'ಬಂದಿಕಾರಾ ಶ್ರಾವಣಾ' ಕವನವನ್ನು ಇಟ್ಟು ನೋಡಬೇಕು. ಬಂಧನಕ್ಕೆ ಕಾರಣನಾದ ಬಂದಿಕಾರಾ ಶ್ರಾವಣನಿಂದಲೇ ಬಿಡುಗಡೆಯೆಂಬ ಸಂದೇಶ ಈ ಎರಡೂ ಕವಿತೆಗಳಲ್ಲಿ ಮೈ ತಳೆದಿದೆ. ಕೃಷ್ಣನ ಪುರಾಣ ಪ್ರತಿಮೆ ಬಂಧನ-ಬಿಡುಗಡೆಗಳ ಸಂಕೇತವಾಗಿ ಧ್ವನಿಸುತ್ತದೆ. ಅಂದರೆ ಕೃಷ್ಣನೇ ಇಲ್ಲಿ ಶ್ರಾವಣನಾಗಿ

ಮೈ ಪಡೆದಿದ್ದಾನೆ. ದ್ವಾಪರಯುಗದ ಬಂಧನದ ತೊಡಕುಗಳನ್ನು ಬಿಡಿಸಿದ ನಿನಗೆ ಇಂದು ಬಂದಿಹುದು ಮತ್ತೊಂದು ಸಮಯವು. ಅಂತೆಯೇ ಇಂದು ಬಂದೊದಗಿದ ಬಂಧನಗಳಿಂದ ನಾಡನ್ನು ಮುಕ್ತಿಗೊಳಿಸು ಎಂಬ ನಿವೇದನೆ ಇಲ್ಲಿದೆ. ವಸಾಹತುಶಾಹಿ ಸಂಸ್ಕೃತಿಯು ಭಾರತಾಂಬೆಗೆ ಹಿಡಿಸಿದ ಚಂಡರಾಹುಗ್ರಾಸದಿಂದ ಬಿಡುಗಡೆಗೊಳಿಸಬೇಕೆಂಬ ಕರೆಯು ಇಲ್ಲಿದೆ. ಕೃಷ್ಣ ಇಲ್ಲಿ ಕೇವಲಶಕ್ತಿಯಾಗಿ ಮೈ ಪಡೆಯುವುದಿಲ್ಲ. ಗಾಯತ್ರಿ, ಗೀತೆ, ತುತ್ತೂರಿಗಳ ಮೂಲಕ ಜನತೆಯ ಮನೋಮಯವನ್ನು ಎಚ್ಚರಿಸಲು ಬಂದವನು. ಅಂಥ ಎಚ್ಚರಗಳಿಂದಲೇ ಬಿಡುಗಡೆಗೆ ಕಾರಣನಾಗುವ ಪ್ರತಿಮೆಯಾಗಿ ಕಾಣುತ್ತಾನೆ. ಆ ಪ್ರತಿಮೆ ಸಂಪತ್ತು-ಚೈತನ್ಯ, ಎಚ್ಚರಗಳನ್ನು ತರುವುದರ ಮೂಲಕವೇ ಬಂಧನವನ್ನು ಬಿಡಿಸುವಂತಹದಾಗುತ್ತದೆ. ಶ್ರಾವಣಮಾಸ ಬೇಂದ್ರೆ ಅವರಿಗೆ ಕಾವ್ಯಕೋಡಿಗೆ ಕಾರಣವಾದಂತೆ ಬಿಡುಗಡೆಯ ಸ್ವಚ್ಛಂದವೂ ಆಗಿದೆ.

'ಗಂಗಾಷ್ಟಕ' ಮತ್ತು 'ಗಂಗಾವತರಣ' ಕವಿತೆಗಳಲ್ಲಿಯೂ ಈ ಬಗೆಯ ಜಿಜ್ಞಾಸೆ ಮತ್ತೂ ಬೇರೆಯದೇ ಆದ ಆಶಯಗಳನ್ನು ಹರಳುಗಟ್ಟಿಸುತ್ತದೆ. ಇಲ್ಲಿ ಗಂಗೆ ಭಗೀರಥನಿಗೆ ಎದುರಾದಂತೆ ಸ್ವಾತಂತ್ರ್ಯ-ಸ್ವಚ್ಛಂದ, ಅರಿವು-ಎಚ್ಚರಗಳ ದೃಶ್ಯವೊಂದು ಎದುರಾಗುತ್ತದೆ. ಅಂತೆಯೇ, ಅರವಿಂದರಂಥ ದಾರ್ಶನಿಕರ ವಿಚಾರಧಾರೆ ಜನತೆಯಲ್ಲಿ ಎದುರಾಗಿಸಿದ ಎಚ್ಚರಗಳ ಬಗೆಗೆ 'ಬಂದಿಕಾರಾ ಶ್ರಾವಣ'ದಲ್ಲಿ ಒತ್ತು ಇರುವುದನ್ನು ಕಾಣಬಹುದು. 'ಕತ್ತಲೆಯ ತುಟ್ಟತುದಿ ಹತ್ತಿರವೆ ಬೆಳಕುಬದಿ ಎಂದು ಸಾರೋ ಶ್ರಾವಣಾ' ಎಂಬ ಸಂದೇಶ ಬಂಧನಕ್ಕೆ ಕಾರಣನಾದವನಿಂದಲೇ ಬಿಡುಗಡೆ ಎಂಬ ಆಶಯವನ್ನು ಮುಖಾಮುಖಿಯಾಗಿಸುವುದರೊಂದಿಗೆ ಸಾರ್ವಕಾಲಿಕ ಸತ್ಯವೊಂದು ಪ್ರಕಟವಾಗುತ್ತದೆ.

'ಪಡುವಲ ಕಡಲ ಅಂಬಿಗರ ಹಾಡು', 'ಬಂದಿಕಾರಾ ಶ್ರಾವಣ', 'ಬಿಡುಗಡೆ' ಕವಿತೆಗಳಲ್ಲಿ ಸ್ವಾತಂತ್ರ್ಯ-ಬಂಧನಗಳ ಜಿಜ್ಞಾಸೆ ಈ ಹಿಂದಿಗಿಂತ ಸಂಕೀರ್ಣವಾಗಿ ವಿಶ್ಲೇಷಣೆಗೆ ಒಳಗಾಗುತ್ತದೆ. ಕೇವಲ ರಾಜಕೀಯ ನೆಲೆಗಳಲ್ಲಿ ಮಾತ್ರ ಈ ಜಿಜ್ಞಾಸೆ ಚಿಂತಿತವಾಗದೆ, ಬದುಕಿನ ಎಲ್ಲ ಮಟ್ಟಗಳಲ್ಲಿಯೂ ಎದುರಾಗುವ ಬಂಧನ-ಸ್ವಾತಂತ್ರ್ಯಗಳ ನೆಲೆಗಳನ್ನು ಆವರಿಸಿಕೊಳ್ಳುತ್ತದೆ. ಬಿಡುಗಡೆ-ತೊಡಕುಗಳ ಸಮಸ್ಯೆ ಅನಾದಿ ಕಾಲದ್ದು. ತೊಡಕಿರುವುದರಿಂದಲೆ ಬಿಡುಗಡೆಯ ಬಯಕೆ ಎದುರಾಗುವುದು. ನಿರಂತರವಾಗಿ ಎದುರಾಗುವ ತೊಡಕಿನ ತೊಂದರೆಗಳಿಂದ ತಪ್ಪಿಸಿ ಕೊಳ್ಳಲು ಬಿಡುಗಡೆಯ ಭೈರಾಗಿ ಎದುರಾಗುತ್ತಲಿದ್ದಾನೆ. ಆದರೂ ನಿರಂತರವಾಗಿ ತೊಡಕು-ಬಿಡುಗಡೆಗಳ ನೆರಳು-ಬಿಸಿಲಾಟ ನಡೆಯುತ್ತಲೇ ಇದೆ. 'ತೊಡಕು ಇದ್ದರೆ ಬಿಡುಗಡೆ ಹೇಗೆ? ತೊಡಕು ಇರದಿದ್ದರೆ ಬಿಡುಗಡೆ ಏನು?' ಇದು ಬಿಡುಗಡೆ-ಬಂಧನಗಳ ತೊಡಕಿನ ತೊಡಕು. ಇದನ್ನು ಬಿಡಿಸುವವರೆಗೆ ಬಿಡುಗಡೆ ಇಲ್ಲವೆನ್ನುವುದು ಬೇಂದ್ರೆಯವರ ತಾತ್ವಿಕ ಚಿಂತನೆಯಾಗಿದೆ. 'ತೊಡಕಿನ' ಸಮಸ್ಯೆ ಎದುರಾಗುವುದು ಒಬ್ಬರನ್ನೊಬ್ಬರು ಆಳಬೇಕೆಂಬ ಅಹಂಕಾರದಿಂದ.ಅನ್ಯರನ್ನು ಆಳು ಮಾಡದೆ ತನ್ನತಾನಾಳಿದರೆ ಅದೆ ಬಿಡುಗಡೆ ಎಂಬ ವಿಚಾರ ಅಂಥ ಅಹಂಕಾರಕ್ಕೆ ಒಗ್ಗಲಾರದು. ಅನ್ಯರನ್ನು ಆಳಬೇಕೆಂಬ ಅಹಂಕಾರ ದೇವ-ದಾನವರನ್ನೂ ಬಿಟ್ಟಿಲ್ಲ. ಈ ದೇವ-ದಾನವರ ಗುದ್ದಾಟದಲ್ಲಿ ಮಾನವ ನುಗ್ಗಾಗಿದ್ದಾನೆ. 'ಬಿಡುಗಡೆ' ಬೆಲೆಗಲ್ಲದೆ ಉಡುಗೊರೆಯಾಗಿ ದೊರಕಲಾರದು. ಮನುಷ್ಯ ತನ್ನನ್ನು ತಾನರಿಯದೆ ತನ್ನ ಮನೆತನಕ್ಕೆ ತಾನೇ ಮಾರಿಯಾಗುವುದರಿಂದ ಸ್ವಾತಂತ್ರ್ಯ-ಪಾರತಂತ್ರ್ಯಗಳ ತೊಡಕು ಮನುಷ್ಯ-ಮನುಷ್ಯರಲ್ಲಿ ಏರ್ಪಟ್ಟಿದೆ. ಸ್ವಾತಂತ್ರ್ಯ-ಪಾರತಂತ್ರ್ಯಗಳ ಜಿಜ್ಞಾಸೆ 'ಬಿಡುಗಡೆ' ಕವನದ ಈ ಮುಂದಿನ ಸಾಲುಗಳಲ್ಲಿ ಮತ್ತೂ ಬೇರೆಯದೆ ಆದ ದಿಕ್ಕನ್ನು ಪಡೆಯುವುದನ್ನು ಕಾಣುತ್ತೇವೆ.

'ಬಿಡುಗಡೆ, ಬಿಡುಗಡೆ, ಬಿಡುಗಡೆ'
ಎಂದು ಯುಗ ಯುಗದ ಕೂಗು;
'ತೊಡಕು, ತೊಡಕು, ತೊಡಕು'
ಎಂದು ಅದಕ್ಕೆ ಅಡಿಗಡಿಗೆ ಉತ್ತರ.
ತೊಡಕಿನ ತೊಂದರೆಯಿರದಿದ್ದರೆ
ಬಿಡುಗಡೆಯ ಬಯಕೆ ಇರುತ್ತಿರಲಿಲ್ಲ.
ತೊಡಕಿನ ತೊಂದರೆ ತಪ್ಪಿಸಿಕೊಳ್ಳಲು
ಬಿಡುಗಡೆಯ ಬೈರಾಗಿ ಬಳಲುತ್ತಿದ್ದಾನೆ.
- - - - - - - - - - - - - - - - -
ಹಸಿವೆಯ ಸೆರೆಯಿರುವ ವರೆಗೆ, ಮೈಗೆ ಬಿಡುಗಡೆಯಿಲ್ಲ;
ಅನ್ನವು ಸ್ವಾಧೀನವಾಗಲಿ!
ಸಾವಿನ ಸೆರೆಯಿರುವ ವರೆಗೆ, ಸಂತತಿಗೆ ಬಿಡುಗಡೆಯಿಲ್ಲ;
ಪ್ರಾಣವು ಸ್ವಾಧೀನವಾಗಲಿ!
ಸಂಶಯದ ಸೆರೆಯಿರುವ ವರೆಗೆ, ತಿಳುವಳಿಕೆಗೆ ಬಿಡುಗಡೆಯಿಲ್ಲ.
ಸತ್ಯವು ಸ್ವಾಧೀನವಾಗಲಿ![೧೭]

ಅನ್ನ-ಹಸಿವು, ಸಾವು-ಪ್ರಾಣ, ಯೌವನ-ವಾರ್ಧಕ್ಯ, ಸಂಶಯ-ತಿಳುವಳಿಕೆ, ಇಂಥ ಬದುಕಿನ ದ್ವಂದ್ವಗಳಿಂದ ಎದುರಾಗುವ ಬಂಧನ ಹಾಗೂ ಬಿಡುಗಡೆಗಳ ಚಿಂತನೆ ಇಲ್ಲಿ ಮುಖಾಮುಖಿಯಾಗುತ್ತದೆ. ಹಾಗೆಯೇ ಅನ್ನ, ಪ್ರಾಣ ಹಾಗೂ ಸತ್ಯಗಳನ್ನು ಸ್ವತಂತ್ರವಾಗಿಡದಿರುವುದು ಅಧರ್ಮವೆಂಬ ನಿಲುವನ್ನು ಕವಿತೆ ತಾಳುತ್ತದೆ. "ವಿಚಾರ ಮಂಜರಿ" ಕೃತಿಯಲ್ಲಿ ಇಂಥ ತೊಡಕುಗಳ ಸಮಸ್ಯೆಯನ್ನು ಬೇಂದ್ರೆಯವರೇ ಎತ್ತಿರುವುದನ್ನು ಈ ಕೆಳಗಿನ ಉದ್ಧರಣೆಯಲ್ಲಿ ಕಾಣಬಹುದು:

> ಅನ್ನ ಮತ್ತು ಹಸಿವು ಇವಕ್ಕೆ 'ಅರ್ಥ' ಮತ್ತು 'ಕಾಮ' ಎಂಬ ದೊಡ್ಡ ಹೆಸರುಗಳಿವೆ. ಅನ್ನ-ಹಸಿವುಗಳ ತೊಡಕನ್ನು ತೊಡಕಿಲ್ಲದೆ ಬಿಡಿಸುವ ಪ್ರಯೋಗಕ್ಕೆ 'ಧರ್ಮ'ಎಂದು ಹೆಸರು. ಈ ಧರ್ಮಶಕ್ತಿಯು ಹಸಿವು, ಅನ್ನಗಳ ತೊಡಕಿನಲ್ಲಿ ಸಿಗದಂತೆ ಮೀರಿ ನಿಂತ ಜ್ಞಾನದಲ್ಲಿದೆ. ಆ ಜ್ಞಾನವು ಎಷ್ಟು ಪೂರ್ಣವೊ ಅಷ್ಟು ಆ ಧರ್ಮವೂ ಪೂರ್ಣ,ಅಷ್ಟೇ ಹಸಿವು ಅನ್ನಗಳ ಸಮಸ್ಯೆಯಲ್ಲಿ ತೃಪ್ತಿ. ಆ ಮಾನದಿಂದಲೇ ಮಾನವನೂ ಮುಕ್ತ. ಈ ಜ್ಞಾನ, ಈ ಸಮತೂಕ, ಈ ಒಂದನ್ನೊಂದು ನುಂಗುವ ಎರಡು ಶಕ್ತಿಗಳು- ಈ ನಾಲ್ಕಕ್ಕೇ 'ಪುರುಷಾರ್ಥ' ಎಂದು ಹೇಳುವರು. ಪ್ರಕೃತಿಯು ಪುರುಷನಿಗೆ ಹಾಕಿದ ಒಗಟವೇ ಇದು; ಇದನ್ನು ಬಿಡಿಸುವದರಲ್ಲಿ ಅವನ ಗಂಡಸುತನದ ಸಿದ್ಧಿಯಾಗುವದು. ಮಾತು ಬಹಳ ಚಿಕ್ಕದಾಗಿ ತೋರುವವು, ನಿಜ; ಆದರೆ ಈ ಸಮಸ್ಯೆಯು ಭೂಮಂಡಲವನ್ನು ವ್ಯಾಪಿಸಿದೆ. ಮಾನವನಿಗೆ ತಪಸ್ಸು ಮಾಡಹಚ್ಚಿದೆ. ಯುಗ ಯುಗ ಕಳೆದರೂ ಸಮಸ್ಯೆಯಾಗಿಯೇ ಉಳಿದಿದೆ.
>
> ........ಗಾಳಿ-ಬೆಳಕು-ನೀರು ಇವೂ ಅನ್ನಗಳೇ. ನಮ್ಮ ಬಾಳು-ಸಾವುಗಳೆರಡೂ ಈ ಮಹಾಭೂತಗಳ

ಅಧೀನವಾಗಿವೆ. ಹೀಗಿದ್ದರೂ ಭೂಮಿತಾಯಿಯೆ ಮಾನವನ ಅನ್ನದ ಅಕ್ಷಯ ನಿಧಿಯಾಗಿದೆ, ಎಂಬುದು ತೀರ ಪ್ರತ್ಯಕ್ಷವಾದ ಮಾತು. ಆದರೆ ಈ ಪ್ರತ್ಯಕ್ಷ ಮಾತೂ ಇನ್ನೂ ಸಾಕಷ್ಟು ಪ್ರಮಾಣಕ್ಕೆ ಬರದಿದ್ದುದರಿಂದಲೇ ಅನ್ನವು ಮಾನವನ ಪ್ರಾಣದೊಡನೆ ಚೆಕ್ಕಿನಾಟವನ್ನಾಡುತ್ತದೆ.[೮]

ಅನ್ನ-ಹಸಿವುಗಳ ಸಮಸ್ಯೆಯನ್ನು, ಅನಾದಿ ಕಾಲದಿಂದ ಇಂಥ ಸಮಸ್ಯೆಗಳು ಅನುರಣನಗೊಳ್ಳುತ್ತಿರುವುದನ್ನು ಬೇಂದ್ರೆಯವರ ಈ ಮೇಲಿನ ಮಾತುಗಳಲ್ಲಿ ಕಾಣಿಸುತ್ತದೆ. 'ಬಿಡುಗಡೆ'ಯಂಥ ಕವಿತೆ ಬಂಧನ-ಸ್ವಾತಂತ್ರ್ಯ ಸ್ವಚ್ಛಂದಗಳ ಜಿಜ್ಞಾಸೆಯನ್ನು ನಡೆಸುತ್ತಲೇ ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ಧ್ಯಾನಕ್ಕೆ ಗುರಿಪಡಿಸುತ್ತ ಅರ್ಥಗ್ರಹಿಕೆಗೆ ಸವಾಲುಗಳನ್ನು ಒಡ್ಡುವ ಕವಿತೆಯಗಿದೆ. 'ಬೆಡಗಿನ ವಚನ', ಅನುಭಾವಿಗಳ ತತ್ತ್ವಪದ' ಗಳನ್ನು ನೆನಪಿಸುವ ಈ ಕವಿತೆ ಬದುಕಿನ ಕ್ರೌರ್ಯಗಳ ಸೂಕ್ಷ್ಮ ನೆಲೆಗಳಿಗೆ ಲಗ್ಗೆ ಹಾಕಿ ಅನುರಣನಗೊಳ್ಳುವ ಶಕ್ತಿಯನ್ನು ಪಡೆದಿದೆ.

### ೪. ನೃತ್ಯ ರೂಪಕಗಳು : ತಲ್ಲಣ, ತನ್ಮಯತೆ

ಕುಣಿಯೋಣ ಬಾರಽ
ಕುಣಿಯೋಣು ಬಾ

ಕೀಸರು
ಬಾಸರು
ಇಟ್ಟರು ನಿಟ್ಟುಸುರು
ಕುಣಿತಾನಽ ಆಸರು| ಕುಣಿ....... - *ಬೇಂದ್ರೆ*

ವಸಾಹತು ಶಾಹಿಯ ಸಂಘರ್ಷದಿಂದ ಎದುರಾದ ಎಲ್ಲ ರೀತಿಯ ತಲ್ಲಣಗಳಿಗೆ ಬೇಂದ್ರೆಯವರ ಕಾವ್ಯ ಸಂಭ್ರಮದ ಕ್ಷಣಗಳನ್ನು ಮುಖಾಮುಖಿಯಾಗಿಸುವುದರೊಂದಿಗೆ ತೋರುವ ಪ್ರತಿಕ್ರಿಯೆ ಬೇರೆ ಬೇರೆ ಪ್ರತಿಮೆಗಳಲ್ಲಿ ಮೈ ಪಡೆಯುವುದು ವಿಶಿಷ್ಟವಾಗಿ ಕಾಣುತ್ತದೆ. ಮುಖ್ಯವಾಗಿ ಅಂಥ ಸಂಭ್ರಮದ ಕ್ಷಣಗಳು ಪ್ರಕೃತಿ ಮತ್ತು ನೃತ್ಯ ರೂಪಕಗಳಲ್ಲಿ ತೀವ್ರವಾಗಿ ಪ್ರಕಟವಾಗುತ್ತದೆ. ಆಕ್ರಮಣಶೀಲ ಸಂಸ್ಕೃತಿಯು ಎದುರಾಗಿಸುವ ದುಃಖ ದುಮ್ಮಾನಗಳನ್ನು ತಾಳಿಕೊಳ್ಳುವ ಶಕ್ತಿಗೆ ಇಂಥ ಪ್ರತಿಮೆಗಳು ಎದುರಾಗಿಸುವ ಸಂಭ್ರಮಗಳಲ್ಲಿ ಬೇಂದ್ರೆ ಸಂವೇದನೆ ಒಡ್ಡುವ ಪ್ರತಿರೋಧದ ನೆಲೆಗಳು ಗುಪ್ತಗಾಮಿನಿಯಾಗಿ ಮೈದಳೆಯುತ್ತವೆ. ಅಂಥ ಪ್ರತಿರೋಧ ನೃತ್ಯ ರೂಪಕಗಳಲ್ಲಿ ಪ್ರಕಟವಾದ ಬಗೆಯನ್ನು ಈ ಮುಂದೆ ವಿಶ್ಲೇಷಿಸಲಾಗುತ್ತದೆ.

'ನೃತ್ಯ' ಭಾಷೆಗೂ ನಿಲುಕದ, ನಾದಕ್ಕೂ ಎಟುಕದ, ಅಸಂಖ್ಯ ಬದುಕಿನ ಶ್ರದ್ಧೆ ಹಾಗೂ ದ್ವಂದ್ವಗಳಿಗೆ ಅಭಿವ್ಯಕ್ತಿಯ ರೂಪವನ್ನೂ, ಆಕಾರವನ್ನೂ ನಿರ್ಮಿಸುತ್ತದೆ. ಅಂದರೆ ನೃತ್ಯದ ಪ್ರತೀಕಗಳು ಭಾಷೆ,ನಾದಗಳ ಆಚೆಗಿನ ಅನುಭವಗಳನ್ನು ಸಂವಾದಕ್ಕೆ ಗುರಿಪಡಿಸುತ್ತವೆ. ಇಂಥ ಸಂವಾದಗಳು ಇತಿ-ಮಿತಿಗಳನ್ನು ಮೀರಿದ್ದು. ಜೀವನದ ಎಲ್ಲ ವೈರುಧ್ಯಗಳಿಗೆ ಮನುಷ್ಯನನ್ನು ಗುರಿಪಡಿಸುತ್ತ ಬದುಕಿನ ಶೋಧನೆಗೆ ಒಳಗು ಮಾಡಿಕೊಳ್ಳುವುದು ನೃತ್ಯದ ಅಭೀಪ್ಸೆಯಾಗಿದೆ. ಆದರೆ

ನೃತ್ಯದ ಅಂತಿಮ ಉದ್ದೇಶ ಆನಂದ. ನೃತ್ಯ ಮೈ ಮನಗಳನ್ನು ನವಿರೇಳಿಸುವಂಥದ್ದು. ನೃತ್ಯ ಎಲ್ಲ ರೀತಿಯ ದುಃಖ ದುಮ್ಮಾನಗಳಿಗೆ, ಅಹಂಕಾರಗಳಿಗೆ ಮುಖಾಮುಖಿಯಾಗುತ್ತ, ಅದರಾಚೆಗಿನ ಅನುಭಾವದ ನೆಲೆಗೆ ಕೊಂಡೊಯ್ಯುವ ತನ್ಮಯತೆಯನ್ನು, ಸೃಷ್ಟಿ ಸೌಂದರ್ಯದ ಸಾಕ್ಷಾತ್ಕಾರವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತದೆ. ರಾಸಕ್ರೀಡೆಯಲ್ಲಿ ಗಂಡು-ಹೆಣ್ಣುಗಳು ಒಳ ಹೊರಗುಗಳ ಪ್ರಪಂಚವನ್ನೇ ಮರೆತು ಸಚ್ಚಿದಾನಂದವನ್ನು ಪಡೆಯುವಂತೆ, ನೃತ್ಯ ಇಡೀ ಲೋಕ ಚೈತನ್ಯವನ್ನು ಆವರಿಸಿಕೊಳ್ಳುತ್ತದೆ. ಬದುಕಿನಲ್ಲಿ ಎದುರಾದ ತಲ್ಲಣಗಳಿಗೆ ಬೇಂದ್ರೆ ಕಾವ್ಯದ ನೃತ್ಯ ರೂಪಕಗಳು ಎದುರಾಗಿ ವಿಶಿಷ್ಟ ವಾತಾವರಣವನ್ನು ನಿರ್ಮಿಸುತ್ತದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ನೃತ್ಯ ರೂಪಕಗಳು ನಿರಂತರವಾಗಿ ಕಾಣಸಿಗುತ್ತವೆ. ಇಂಥ ರೂಪಕಗಳನ್ನು ಕಾಲಕಾಲಕ್ಕೆ ವಿಭಿನ್ನ ಅರ್ಥ, ಕಾಣ್ಕೆ ಹಾಗೂ ಉದ್ದೇಶಗಳಿಗೆ ಕನ್ನಡ ಸಂವೇದನೆ ದುಡಿಸಿಕೊಂಡಿದೆ. 'ಪಂಪನ ನೀಲಾಂಜನೆಯ ನೃತ್ಯ', ರಾಘವಾಂಕನ 'ಹೊಲತಿಯರ ಕುಣಿತ', ಹರಿಹರನ 'ಕುಂಬಾರ ಗುಂಡಯ್ಯನ ಕುಣಿತ' ಮುಂತಾದವುಗಳು ಕನ್ನಡ ಕಾವ್ಯ ಪರಂಪರೆಯಲ್ಲಿ ಗಮನ ಸೆಳೆಯುವ ನೃತ್ಯ ರೂಪಕಗಳು. ಸಂಸಾರ ಹಾಗೂ ಲೌಕಿಕ ಬದುಕಿನ ಮೋಹ,ಅದರ ತನ್ಮಯತೆಯಲ್ಲಿ ಎದುರಾಗುವ ಭೋಗದ ಕಡುವಾಸ್ತವದ ಕ್ಷಣಿಕತೆಯನ್ನು ಹಾಗೂ ಅನಿತ್ಯತೆಯನ್ನು ಪಂಪನ ನೀಲಾಂಜನೆಯ ನೃತ್ಯ ಧ್ವನಿಸುತ್ತದೆ. ಹಾಗೆಯೇ, ಅದು ಅಂಥ ಚಿಂತನೆಯನ್ನು ಮನಸ್ಸಿನಲ್ಲಿ ಗಾಢವಾಗಿಸುತ್ತ ನಿತ್ಯದ ಸತ್ಯಗಳನ್ನು, ಮುಕ್ತಿಯ ಹುಡುಕಾಟವನ್ನು ಅಭಿವ್ಯಕ್ತಿಸುತ್ತದೆ. ಮನುಷ್ಯನು ವಸ್ತು ಪ್ರಪಂಚದ ಬಗೆಗೆ ತೋರುವ ಪ್ರೀತಿಯನ್ನು ಈ ರೂಪಕ ಹೊಸ ವ್ಯಾಖ್ಯಾನಕ್ಕೆ, ವಾಗ್ವಾದಕ್ಕೆ ಅನುವು ಮಾಡಿಕೊಡುತ್ತದೆ. ಮಾಯೆಯ ಮೋಹ ಹಾಗೂ ಅಹಂಕಾರಗಳಿಂದ ಮುಕ್ತನಾದ ಅಲ್ಲಮನು ಕೊನೆಗೆ ಅನುಭಾವದ ನೆಲೆ ತಲುಪಿದ್ದನ್ನು 'ಅಲ್ಲಮನ ಮದ್ದಲೆಯ ಪ್ರಸಂಗವು' ಚಿತ್ರಿಸುತ್ತದೆ. ದ್ವೇಷ-ವೈರ, ಗಂಡು-ಹೆಣ್ಣು, ಸತ್ಯ-ಅಸತ್ಯ, ಸ್ಪೃಶ್ಯ-ಅಸ್ಪೃಶ್ಯ ಮೊದಲಾದ ರಾಜಕೀಯ ಮತ್ತು ಸಾಮಾಜಿಕ ಸಂಘರ್ಷಗಳನ್ನು ಹರಿಶ್ಚಂದ್ರ ಕಾವ್ಯದ 'ಹೊಲತಿಯರ ಕುಣಿತ' ತಾತ್ತ್ವಿಕ ವಿಶ್ಲೇಷಣೆಗೆ ಗುರಿಪಡಿಸುತ್ತದೆ. ಹರಿಹರನ 'ಕುಂಬರ ಗುಂಡಯ್ಯ'ನ ರೂಪಕ ಬದುಕಿನ ತನ್ಮಯತೆ, ಸಾಧನೆ ಮತ್ತು ಮೋಕ್ಷದ ಶೋಧನೆಗೆ ಎಡೆ ಮಾಡಿಕೊಟ್ಟಿದೆ. ಅಂತೆಯೇ ಪಾರಂಪರಿಕ ಭಕ್ತಿಗೆ ಮುಖಾಮುಖಿಯಾಗಿಸಿದ ಪ್ರತಿಮೆಯೂ ಇದಾಗಿದೆ. ತಾನು ದಿನಂಪ್ರತಿ ಮಡಿಕೆ ಮಾಡುವ ಕಾಯಕದಲ್ಲಿ ತೊಡಗುತ್ತಲೆ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುವ ನೃತ್ಯ ಅನನ್ಯವಾದದ್ದು. ಕುಂಬರ ಗುಂಡಯ್ಯನ ಈ ನೃತ್ಯ ರೂಪಕ ದೈವವನ್ನೆ ಬೆರಗುಗೊಳಿಸಿದೆ. ನಟರಾಜ ಶಿವನನ್ನೇ ನಾಟ್ಯಕ್ರಿಯೆಯಲ್ಲಿ ಒಂದಾಗಿಸಿಕೊಳ್ಳುವ ಈ ಕುಣಿತ ಕನ್ನಡ ಕಾವ್ಯ ಪರಂಪರೆಯಲ್ಲಿ ತನ್ನದೇ ಅದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ.

ಬೇಂದ್ರೆ ಕಾವ್ಯದ ಮೂಲ ಸೆಲೆಗಳಲ್ಲಿ ನೃತ್ಯಕೇಂದ್ರಿತ ಪ್ರಜ್ಞೆ ಮುಖ್ಯವಾದದ್ದು. ನೃತ್ಯ ರೂಪಕಗಳು ಆವರ್ತನಗೊಳ್ಳುವ ಕ್ರಿಯೆ, ಹಾಗೂ ಅದರಿಂದ ಉತ್ಪನ್ನವಾಗುವ ಕುತೂಹಲ ಬಹುಮುಖಿಯಾದದ್ದು. ಗಂಡು-ಹೆಣ್ಣು, ಪ್ರೀತಿ-ಪ್ರೇಮ, ಸ್ನೇಹ-ವಿರಹ, ವಿಸ್ಮಯ-ಮುಗ್ಧತೆ, ರೌದ್ರತೆ-ಸಮೃದ್ಧತೆ, ನಿರೀಕ್ಷೆ-ಬಯಕೆ, ಅನ್ನ-ಹಸಿವು ಹೀಗೆ ಹಲವು ನೆಲೆಗಳಲ್ಲಿ ಬೇಂದ್ರೆ ಕಾವ್ಯದ ನೃತ್ಯ ಪ್ರಜ್ಞೆ ಮತ್ತೆ ಮತ್ತೆ ಎದುರಾಗುತ್ತದೆ. ಅಂತಹ ರೂಪಕಗಳು ಬದುಕಿನ ಶೋಧನೆ ಹಾಗೂ ಕಾಣ್ಕೆಗೆ ಹೇಗೆ ಒದಗಿ ಬರುತ್ತದೆ ಎಂಬ ವಿಚಾರದ ವಿಶ್ಲೇಷಣೆಯನ್ನು ಮುಂದೆ ಬೇಂದ್ರೆಯವರ ಕಾವ್ಯಾಧ್ಯಯನದಿಂದ ಮಾಡಲಾಗಿದೆ.

ಬೇಂದ್ರೆ ಕಾವ್ಯದ ನೃತ್ಯ ರೂಪಕಗಳಲ್ಲಿ ಬದುಕಿನ ಬಗೆಗಿನ ತನ್ಮಯತೆಯ ಗುಣ ಪ್ರಧಾನವಾಗಿ ಕಂಡು ಬರುತ್ತದೆ. ಈ ರೀತಿಯ ಗುಣಗಳಿಂದಲೇ ಬೇಂದ್ರೆ ಕಾವ್ಯಕ್ಕೆ ಮಾಂತ್ರಿಕತೆಯೊಂದು ಮೂಡುತ್ತದೆ. ಪಟ್ಟ ಪಾಡೆಲ್ಲ ಹುಟ್ಟು ಹಾಡಾಗುತ್ತಲೆ ಬೇಂದ್ರೆ ಕಾವ್ಯದ ಕುಣಿತದ ಪ್ರತೀಕಗಳು ಈ ಮಾದರಿಯ ಹಾಡಿಗೆ ಜೀವಂತಿಕೆಯ ಸೆಲೆಯನ್ನು ದೊರಕಿಸಿ ಕೊಡುತ್ತವೆ. 'ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ' ಎಂಬ ಸಾಲು ಕಲೆಯ ಸಾರ್ವಕಾಲಿಕ ವ್ಯಾಖ್ಯಾನವೂ ಹೌದು. ಸೃಷ್ಟಿಕ್ರಿಯೆಗೆ ತೊಡಗುವ ಸಂವೇದನೆಯ ಹಿಂದಿನ ಎಲ್ಲ ರೀತಿಯ ಭಯ-ಆತಂಕಗಳನ್ನು, ನೋವುಗಳನ್ನು ಮರೆಮಾಚುತ್ತ, ಅವುಗಳಿಗೆ ಒಂದು ರೂಪಕಗತಿಯನ್ನು ಈ ಮಾದರಿಯ ಕಾವ್ಯ ನಿರ್ಮಿಸುತ್ತದೆ. ಸಾಮಾನ್ಯ-ಅಸಾಮಾನ್ಯ ಸಂಗತಿಗಳೂ ಮೈ ಪಡೆದುಕೊಳ್ಳುವುದು ಇಂತಹ ರೂಪಕಗಳಿಂದಲೇ ಎಂಬುದನ್ನು ಬೇಂದ್ರೆ ಕಾವ್ಯ ಪ್ರತೀಕಗಳು ದೃಢಪಡಿಸುತ್ತವೆ. ತಾನು ಪಟ್ಟ ಪಾಡಿಗೆ ನಾಟ್ಯದ ಶಕ್ತಿಯನ್ನು ಆರೋಪಿಸಿ, ಬದುಕನ್ನು ವ್ಯಾಖ್ಯಾನಕ್ಕೆ ಗುರಿ ಪಡಿಸುವುದು ಬೇಂದ್ರೆ ಕಾವ್ಯದ ಮತ್ತೊಂದು ವೈಶಿಷ್ಟ್ಯ.

ಬೇಂದ್ರೆಗೆ ಕಾವ್ಯ ಹೇಗೆ ಅನಿವಾರ್ಯವಾದದ್ದೋ ಅಂತೆಯೇ ಅಂತಹ ಕಾವ್ಯಕ್ಕೆ ನಾದ ಹಾಗೂ ಕುಣಿತ ಅನಿವಾರ್ಯವಾದದ್ದಾಗಿದೆ. ಹೀಗಾಗಿ ಬೇಂದ್ರೆ ಪ್ರತಿಭಾ ಸೃಷ್ಟಿಗೆ ಕಾವ್ಯ ಮತ್ತು ಕುಣಿತಗಳು ಅಭಿನ್ನವಾದುದ್ದಾಗಿವೆ. ಇಂತಹ ಚಿಂತನೆಗಳು 'ಕುಣಿಯೋಣು ಬಾರ', 'ಸಚ್ಚಿದಾನಂದ', 'ಸಖೀಗೀತ', 'ನೃತ್ಯ ಯಜ್ಞ', 'ಗಂಗಾವತರಣ', 'ನಾದಲೀಲೆ', 'ಉಷಾ ಸೂಕ್ತ', 'ಕುರುಡು ಕಾಂಚಾಣ'- ಮೊದಲಾದ ರಚನೆಗಳಲ್ಲಿ ಕಾಣಬಹುದಾಗಿದೆ.

ಆ ಕಾಗಿ
ಯಾಕಾಗಿ
ಕುಣಿಯೋದು ಬೇಕಾಗಿ
ಇಲ್ಲ ಬಣ್ಣದ ಸೋಗಿ! ಕುಣಿ...

- - - - - - - - - - - - - - - -

ತೀರದ
ತೋರದ
ಹಾಳು ಸಂಸಾರ್ ಅದ
ಮೀರಿದ ಭಾರ್ ಅದ ಕುಣಿ.....೧೯

'ಕುಣಿಯೋಣು ಬಾರ' ಕವಿತೆಯ ಭಾವ ಸಂದರ್ಭದಲ್ಲಿ ಬೇಂದ್ರೆಯವರೇ ಹೇಳುವ ಹಾಗೆ 'ಬಾಳು ಒಂದು ಕುಣಿತ, ತಿಳಿದು ಹಾಕಿದ ಒಂದು ಹೆಜ್ಜೆಯೂ ನೃತ್ಯ ವಿಧಾನ', ಈ ಮಾತುಗಳು ಅವರ ಕಾವ್ಯದ ಕುಣಿತ ಪ್ರತೀಕಗಳ ಆಶಯವನ್ನು ಹೊರ ಚೆಲ್ಲುತ್ತವೆ. 'ಕುಣಿಯೋಣು ಬಾರ' ಕವಿತೆಯ ಕುಣಿತ ಏಕಾಂತದ ನೋವನ್ನು, ಆನಂದದ ಸಂಭ್ರಮವನ್ನು ಮುಖಾಮುಖಿಯಾಗಿಸುತ್ತದೆ.

ಆಕಾಗಿ, ಯಾಕಾಗಿ, ಕುಣಿಯೋದು? ಎಂಬ ಪ್ರಶ್ನೆಗೆ 'ಹಿಗ್ಗು ಹಾಕಿತು ಕ್ಯಾಕಿ ಇರಲಾರೆನೇಕಾಕಿ, ಬಾ! ಬಾರಾ! ನನ್ನಾಕಿ!' ಎಂದು ಪುರುಷ ಸ್ತ್ರೀಗೆ ಆಹ್ವಾನವನ್ನು ಕೊಡುತ್ತ ಸಂಸಾರದ ಸಂಭ್ರಮಗಳಿಗೆ, ದ್ವಂದ್ವಗಳಿಗೆ, ಸಮಸ್ಯೆಗಳಿಗೆ

ಎದುರಾಗುತ್ತಾರೆ. ದೇಹಕ್ಕೆ ಎದುರಾಗುವ ಮುಪ್ಪು, ಅನೇಕ ಸಮಸ್ಯೆಗಳಿಂದ ಎದುರಾಗುವ ಬೇಸರ, ಸಂಸಾರದ ಸಂಘರ್ಷಗಳಿಗೆ ವಿಮುಖರಾಗದೆ ಅಭಿಮುಖವಾಗಿ ಸುಗ್ಗಿಯ ಸಿರಿ ಕುಣಿತವನ್ನೇ ಬೇಂದ್ರೆ ಕಾವ್ಯ ಪ್ರತಿಭೆ ಇಂಥ ಕವಿತೆಗಳಲ್ಲಿ ನೃತ್ಯ ರೂಪಕಗಳನ್ನಾಗಿಸಿದೆ.

ತಾಳ್ಯಾಕ
  ತಂತ್ಯಾಕ
   ರಾಗದ ಚಿಂತ್ಯಾಕ
     ಹೆಜ್ಯಾಕ ಗೆಜ್ಜ್ಯಾಕ! ಕುಣಿ....

- - - - - - - - - - - - - - - - - -

ಹುಲ್ಲಿಲಾ
  ಸ್ಥಿರ ಜಲಾ
   ಚಿಕ್ಕೆಲ್ಲಾ ಮುಗಿಲೆಲ್ಲಾ
     ಕುಣಿತಿಲ್ದ ಜಗ ಇಲ್ಲಲಾ! ಕುಣಿ...

.

ಕುಣಿತಕ್ಕ ಇತಿ ಇಲ್ಲ
  ಕುಣಿತಕ್ಕ ಮಿತಿ ಇಲ್ಲ
    ಬೇರೊಂದು ಗತಿ ಇಲ್ಲ! ಕುಣಿ.....[೨೦]

ಈ ಕುಣಿತ ಎಲ್ಲ ರೀತಿಯ ಜಡ ಹಾಗೂ ಯಾಂತ್ರಿಕ ಬದುಕನ್ನು ನಿರಾಕರಿಸುವಂಥದ್ದು. ಬದುಕಿನ ಪ್ರೀತಿ ಶ್ರದ್ಧೆಗಳಿಗೆ ಕುಣಿತ ಕ್ರಿಯಾಶೀಲ ಭಿತ್ತಿಯಾಗುತ್ತದೆ. ಕುಣಿತದ ಕೋಲು, ತಾಳ, ತಂತಿ, ಹೆಜ್ಜೆ, ಗೆಜ್ಜೆಗಳ ಅಗತ್ಯ-ಅನಿವಾರ್ಯತೆಯನ್ನು ಪ್ರಶ್ನಿಸುತ್ತಲೇ ಬದುಕಿನ ಅಗಾಧತೆಯ ಗಂಭೀರವಲಯವನ್ನು ಕುರಿತು ಚಿಂತಿಸುತ್ತದೆ. ಇಂಥ ಕುಣಿತ ನಿರಂತರವಾದದ್ದು.'ಕುಣಿತಕ್ಕ ಮಿತಿ ಇಲ್ಲ; ಬೇರೊಂದು ಗತಿ ಇಲ್ಲ! ಈ ಮಾತುಗಳು ಕುಣಿತದ ಎಲ್ಲ ಆಯಾಮಗಳನ್ನು ಮೀರುವ ದರ್ಶನವನ್ನು ಬಗೆಯುತ್ತವೆ. ಕುಣಿತ ಅಮರತ್ವವನ್ನು ತರುವಂಥದ್ದು. ಸಚ್ಚಿದಾನಂದದ ತನ್ಮಯತೆಯನ್ನು ಹದಿನಾಲ್ಕು ಲೋಕಗಳಿಗೂ ಹಬ್ಬುವಂತೆ ಮಾಡುವ ಈ ಕುಣಿತ, ಲೋಕದ ಸಮಷ್ಟಿ ಬಾಳನ್ನೇ ನೃತ್ಯ ರೂಪಕಕ್ಕೆ ಅಳವಡಿಸಿಕೊಂಡ ಬಗೆ 'ಕುಣಿಯೋಣು ಬಾರ' ಕವಿತೆಯದ್ದಾಗಿದೆ.

'ನಾದಲೀಲೆ' ಕವನದಲ್ಲಿಯೂ ಬದುಕಿನ ಹಾಗೂ ಸೃಷ್ಟಿಕ್ರಿಯೆಯ ದ್ವಂದ್ವಗಳ ದರ್ಶನವಿದೆ. ಅಂಥ ದರ್ಶನವನ್ನು ಬೇಂದ್ರೆ ಕುಣಿತಕ್ಕೆ ಮುಖಾಮುಖಿಯಾಗಿಸುವುದರ ಮೂಲಕ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ. ಜೀವನದ ಎಲ್ಲ ಬಗೆಯ ಸಮಸ್ಯೆಸವಾಲುಗಳಿಗೆ ಕುಣಿತ ಅಭಿಮುಖವಾಗುತ್ತದೆ. ಹಾಗೆ ಅಭಿಮುಖವಾಗುತ್ತಲೇ ಬದುಕಿನ ರೌದ್ರತೆಗೆ ಎದುರಾಗುವುದು 'ನಾದಲೀಲೆ' ಕವನದ ಆಶಯವಾಗಿದೆ. 'ಜೀವನದ ತಾಲ-ಲಯಾನುಸಾರಿತ್ವದಲ್ಲಿ ಒಂದು ನಾದದ ತನ್ಮಯತೆ ಇದೆ. ಮರಣದ ಭಯ ಬೇತಾಲಕ್ಕೆ ಎಳೆಯುವುದು. ಜೀವನದ ತನ್ಮಯತೆ ಬೆಳಕು, ಹೂವು, ಹರಿಣ, ಹಸುಗಳ ಜೀವನದಲ್ಲೂ ದಿನವೂ

ಕಂಗೊಳಿಸುವುದು.' 'ನಾದಲೀಲೆ' ಕವನದ ಭಾವ ಸಂದರ್ಭದ ಈ ಮಾತುಗಳು ಇಂಥದೇ ನೆಲೆಯಿಂದ ಹೊರಟ ಇತರ ಕವಿತೆಗಳ ಆಶಯವನ್ನೂ ವ್ಯಕ್ತಪಡಿಸುತ್ತವೆ.

ಕೋಲು ಸಖೀ, ಚಂದ್ರಮುಖೀ, ಕೋಲೆ ನಾದಲೀಲೆ
ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ
ತರಳ ಎರಳೆ, ಚಿಗುರ ಚಿಗುರೆ, ಹೂವು ಹೂವು ಹುಲ್ಲೆ,
ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ
ಅತ್ತಣಿಂದ ಬೇಟೆಗಾರ ಬರುವ ನಾನು ಬಲ್ಲೆ.
ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ
ಕೋಲು ಸಖೀ....[೨೧]

ಅತ್ಯಂತ ಆನಂದದಿಂದ ಕುಣಿಯುವ ಬದುಕು ಎಲ್ಲವನ್ನೂ ಎದುರಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕಾದ ಸ್ಥಿತಿಯನ್ನು ಈ ಕವಿತೆ ಸಾರುತ್ತದೆ. ಎರಳೆ, ಚಿಗುರೆ, ಹೂವು ಮೊದಲಾದ ನೈಸರ್ಗಿಕ ಚಿತ್ರಗಳ ಹಾಗೂ ಅವುಗಳ ಸಂಪರ್ಕದ ಸಂಭ್ರಮದಿಂದ 'ನಾದಲೀಲೆ' ಕುಣಿತ ಆರಂಭಗೊಳ್ಳುತ್ತದೆ. ಜೀವನದಲ್ಲಿ ಸಂತೋಷ ಸಂಭ್ರಮಗಳೇ ಮಾತ್ರವಲ್ಲ, ಅಸಂಖ್ಯ ರೀತಿಯ ದಿಕ್ಕು ತಪ್ಪಿಸುವ ಭಯಾನಕ ಸಂಗತಿಗಳೂ ಎದುರಾಗುತ್ತವೆ ಎಂಬುದನ್ನು 'ಅತ್ತಣಿಂದ ಬರುವ ಬೇಟೆಗಾರ, ಕಂಗೊಳಿಸುವ ಕೆಂಪು, ಕಂಗೆಡಿಸುವ ಮಂಜು' ಮೊದಲಾದ ಚಿತ್ರಗಳು ಸಂಕೇತಿಸುತ್ತವೆ. ಇಂಥ ರೂಪಕಗಳು ಭಯ ಹಾಗೂ ದುಗುಡಗಳನ್ನು ದೂರಮಾಡಿ ಜೀವನ ಪ್ರೀತಿಗೆ ಹೇಗೆ ಗುರಿಪಡಿಸುತ್ತದೆ ಎಂಬುದನ್ನು ಈ ಕೆಳಗಿನ ಸಾಲುಗಳು ಸಮರ್ಥಿಸುತ್ತವೆ.

ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ, ನಾರಿ
ಮುಗಿಲ ಬಾಯ ಗಾಳಿಕೊಳಲ ಬೆಳಕ ಹಾಡ ಬೀರಿ
(ಕಂಗೊಳಿಸುವ ಕೆಂಪು ಇರಲಿ, ಕಂಗೆಡಿಸುವ ಮಂಜು ಬರಲಿ)
ಕಳೆಯಲಿಲ್ಲೆ ಕತ್ತಲಂಥ ಕತ್ತಲವೇ ಜಾರಿ
ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ, ನಾರಿ.[೨೨]

ಇಲ್ಲಿ ಜೀವನ ಶ್ರದ್ಧೆಗೆ ಅಭಿಮುಖವಾಗುವುದರಿಂದಲೇ ಬೇಟೆ ಆಟವಾಗಿ ಪ್ರೀತಿಯ ಬಗೆಯಾಗಿ ಪರಿವರ್ತಿತಗೊಳ್ಳುತ್ತದೆ. 'ಕಂಗೊಳಿಸುವ ಕೆಂಪು ಇರಲಿ, ಕಂಗೆಡಿಸುವ ಮಂಜು ಬರಲಿ' ಎಂಬ ಆಶಯ ವ್ಯಕ್ತವಾಗುತ್ತದೆ. ಕುಣಿತದಲ್ಲೇ ಮನುಷ್ಯ ವಿಕಾಸಗೊಳ್ಳುವ ಕ್ರಿಯೆಯು ಈ ಕವಿತೆಯ ಹಿನ್ನೆಲೆಯಾಗಿದೆ. ಕವಿತೆಯ ಆರಂಭದಿಂದ ಕೊನೆಯವರೆಗೆ ಬರುವ ಸ್ತ್ರೀಯು ವಿಕಸನಗೊಳ್ಳುತ್ತ ಹೋಗುವ ಕ್ರಮ ಅನನ್ಯವಾದದ್ದು. ಈ ಚಿಂತನೆಯನ್ನು ನಲ್ಲೆ, ನೀರೆ, ಬಾಲೆ, ನಾರಿ ಚಿತ್ರಗಳು ದೃಢಪಡಿಸುತ್ತದೆ. ಪ್ರಕೃತಿ-ಪುರುಷರ ಜೀವನದ ನಿರಂತರವಾದ ಕುಣಿತದ ಕ್ರಿಯೆ ಬೇಟದ ಬಗೆಯಾಗುತ್ತ ಸೃಷ್ಟಿಶೀಲತೆಗೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿಬಿಡುತ್ತದೆ.

"ಸಖೀಗೀತ" ಬೇಂದ್ರೆಯವರ ಕುಣಿತದ ನಡಿಗೆಯಲ್ಲಿ ಸಾಗುವ ಆತ್ಮಕಥಾತ್ಮಕ ಕವಿತೆ. ಇತರ ಅನೇಕ ಕವಿತೆಗಳ ಕುಣಿತದ ಸ್ಪರ್ಶ ಈ ಕವಿತೆಯಲ್ಲಿ ಮತ್ತಷ್ಟು ತೀವ್ರತೆಯನ್ನು ಪಡೆದುಕೊಂಡಿದೆ. 'ಕುಣಿಯೋಣ ಬಾರು' ಕವಿತೆಯಂತೆಯೇ ಈ ಕವಿತೆಯಲ್ಲೂ ಭಾಷೆ, ಲಯ, ಛಂದಸ್ಸು ಮೊದಲಾದ ರಚನಾ ಸಾಮಗ್ರಿಯಲ್ಲೂ ನೃತ್ಯದ ಪರಿಣಾಮ ಗಾಢವಾಗಿದೆ. ಕುಟುಂಬದ ಎಲ್ಲ ರೀತಿಯ ದ್ವಂದ್ವಗಳು ಹಾಗೂ ಸಾಮಾಜಿಕ ಸಾಂಸ್ಕೃತಿಕ ಬದುಕಿನಲ್ಲಿ ಮುಖಾಮುಖಿಯಾಗುವ ಅನೇಕ ನೆಲೆಗಳು ನೃತ್ಯದ ಲಯದ ಮೂಲಕ ಈ ಕವಿತೆಯಲ್ಲಿ ಅಭಿವ್ಯಕ್ತಗೊಂಡಿದೆ.

> ಗೆಳೆಯ ದಂಪತಿಗಳು ರಾಸನೃತ್ಯಕ್ಕೆ ನೆರೆದು
> ಗೆಜ್ಜೆ ಗೋಲುಗಳಿಂದ ತಾಳದಲಿ
> ಹೊಳಲು ಗೊಡತಲಿರೆ ಕೊಳಲ ಜೋಡಿಯ ಜತೆಗೆ
> ದನಿ ಮೇಳದಲಿ ಸವಿದನಿಗೂಡಿಸಿ
> - - - - - - - - - - - - - - - -
> ಕುಣಿತದ ಹಾಡಿದು ಕುಣಿಯ ಹಚ್ಚಿತು ಜನಕೆ
> ಕಲ್ಲಾದ ಮನಗಳ ಕರಗಿಸಿತು
> ಅಂಬಿಕಾತನಯನ ಜಂಭವ ಪಾಡಳಿದು
> ನಂಬಿಕೆಯ ಹಾಡಾಗಿ ಬಂತಿಲ್ಲಿಗೆ [೨೩]

ಆತ್ಮ ನಿವೇದನೆಯ ಹಾಗೆ ಕಾಣುವ ಈ ಕವಿತೆಯಲ್ಲಿ ಈ ಬದುಕಿನ ಸೌಂದರ್ಯ ಹಾಗೂ ಭೀಕರ ಮುಖಗಳನ್ನ ಗಂಡು-ಹೆಣ್ಣುಗಳ ಸಮಸ್ಯೆಯಿಂದ ವಾಗ್ವಾದಕ್ಕೆ ಗುರಿಪಡಿಸಲಾಗಿದೆ. ಕುಣಿತದ ನೆಲೆಯಲ್ಲಿ ಗೆಳೆಯ-ದಂಪತಿಗಳು ರಾಸನೃತ್ಯಕ್ಕೆ ಎದುರಾಗುವ ಕ್ರಿಯೆಯು ಜೀವನದ ಬಗೆಗಿನ ಆಸ್ಥೆಯನ್ನೇ ಸಂಕೇತಿಸುತ್ತದೆ. ಕುಣಿತದ ಈ ಹಾಡು ಕಲ್ಲಾದ ಮನಗಳನ್ನು ಕರಗಿಸಿಬಿಡುತ್ತದೆ. ಅಹಂಕಾರ ಗರ್ವಗಳನ್ನು ಕುಣಿತದ ಹಾಡು ಸೃಜನಕ್ರಿಯೆಗೆ ತೊಡಗಿಸಿಕೊಳ್ಳುವ ಕ್ರಿಯೆ ವಿಶಿಷ್ಟವಾದದ್ದು. ದಂಪತಿಗಳ ರಾಸಕ್ರಿಯೆಯ ಕಾಂಕ್ಷೆ ಲೋಕದ ಕಲ್ಯಾಣವನ್ನೇ ಬಯಸುವಂಥದ್ದು. ಕುಣಿತದ ಕುಶಲತೆಯಿಂದ ಬೇಂದ್ರೆ ಈ ಕವಿತೆಗೆ ಮಾಂತ್ರಿಕತೆಯನ್ನು ಲೇಪಿಸಿ ಬಿಟ್ಟಿದ್ದಾರೆ. ಸಂಸಾರದ ಮಾಯೆಯ ಮುಖಗಳನ್ನು ಲೋಕಕ್ಕೆ ಪರಿಚಯಿಸುವ ಕ್ರಿಯಾಶಕ್ತಿಯು ಈ ಕುಣಿತಕ್ಕೆ ದತ್ತವಾಗಿದೆ.

ಈ ಕುಣಿತ ಗಂಡು-ಹೆಣ್ಣುಗಳ ಅನುಭವದ ಆಚೆಗಿನ ನೆಲ-ಬಾನುಗಳ ಅಸ್ತಿತ್ವವನ್ನು ಆವರಿಸಿಕೊಳ್ಳುತ್ತದೆ. ಇಂತಹ ಕುಣಿತದ ರೂಪಕಗಳು ಜೀವಲೋಕದ ಅಸಂಖ್ಯ ಸಮಸ್ಯೆಗಳಿಗೆ ಎದುರಾಗಲು ಬೇಕಾದ ತಾಳ್ಮೆ ದೃಢತೆಗಳನ್ನು ಗಟ್ಟಿಗೊಳಿಸುತ್ತವೆ. ಸ್ತ್ರೀ-ಪುರುಷರ ಎಲ್ಲ ಮಜಲುಗಳ ಕಟು-ಮಧುರ ಸಂಘರ್ಷಗಳು ಸಖ್ಯದ ವ್ಯಾಖ್ಯಾನಕ್ಕೆ ಒಳಗಾಗಿವೆ. ಗಂಡು-ಹೆಣ್ಣು, ತಾಯಿ-ತಂದೆ, ಹುಟ್ಟು-ಸಾವು, ಪ್ರೀತಿ-ಸ್ನೇಹ, ಅನ್ನ-ಹಸಿವು, ನಿರುದ್ಯೋಗ, ಪಾರತಂತ್ರದಿಂದ ಎದುರಾದ ತಲ್ಲಣಗಳಿಂದ ಉತ್ಪನ್ನವಾಗುವ ಎಲ್ಲ ರೀತಿಯ ಕಷ್ಟ-ಕಾರ್ಪಣ್ಯಗಳು, ಪರಿಸರ ಹಾಗೂ ಮನುಷ್ಯ ಸಂಬಂಧಗಳು ಸಖೀಗೀತದಲ್ಲಿ ಕುಣಿತದ ರೂಪಕಕ್ಕೆ ಅಳವಡಿಸಲ್ಪಟ್ಟಿವೆ. ಬದುಕಿನ ಭಂಗಿಯ ಭಣಿತಕ್ಕೆ, ಮಾತಿಗೆ, ಮೌನಕ್ಕೆ, ಮರಣಕ್ಕೆ, ಜನುಮಕ್ಕೆ ಈ ಕುಣಿತ ಎಡೆ ಮಾಡುತ್ತ ಒಂದು ಸಾಂಸ್ಕೃತಿಕ ಆಯಾಮವನ್ನು ನಿರ್ಮಿಸಿ ಬಿಡುತ್ತದೆ. ಈ ಎಲ್ಲ ಕಾರಣಗಳಿಂದ 'ಸಖೀಗೀತ' ಕುಣಿತದ ಪ್ರತೀಕಕ್ಕೆ ಅನನ್ಯತೆಯ ಛಾಪು ದೊರಕಿದೆ.

‘ಸಚ್ಚಿದಾನಂದ’ ಕವಿತೆ ಇತರ ಕವಿತೆಗಳ ಕುಣಿತದ ರೂಪಕದಂತೆ ದೇಸೀಯ ಮಾದರಿಯದ್ದು. ಮೂರ್ತ-ಅಮೂರ್ತವಾದ ಚಿಂತನೆಗಳಿಗೆ ‘ಸಚ್ಚಿದಾನಂದ’ ಕವಿತೆ ಕುಣಿತದ ಮೂಲಕ ವಿರಾಟ್ ಸ್ವರೂಪವನ್ನೇ ದರ್ಶನಕ್ಕೆ ಎಡೆ ಮಾಡಿಕೊಡುತ್ತದೆ. ಗಂಡು-ಹೆಣ್ಣು, ಆತ್ಮ-ಪರಮಾತ್ಮದ ಸಂಬಂಧವನ್ನು ಸತಿಪತಿಯ ರಾಸಕ್ರಿಯೆಯ ರೂಪಕದ ಮೂಲಕ ಈ ಕವಿತೆ ಬೆಳೆಯುತ್ತದೆ. ತಾಂಡವ ಹಾಗೂ ಲಾಸ್ಯದ ಮೇಳೈಸುವಿಕೆಯು ಈ ಕವಿತೆಯಲ್ಲಿ ಹೊಳೆಯುತ್ತದೆ. ಬೇಂದ್ರೆ ಕಾವ್ಯದ ನೃತ್ಯ ರೂಪಕದ ನೆಲೆಗಳು ಐಂದ್ರಿಯಿಕ- ಅತೀಂದ್ರಿಯ ಹಾಗೂ ಸೃಷ್ಟಿಕ್ರಿಯೆಯ ನೆಲೆಗಳನ್ನು ಒಳಗೊಳ್ಳುವಷ್ಟು ಗಾಢವಾದದ್ದಾಗಿದೆ. ಅಂತೆಯೇ ಅನುಭಾವದ ಅತೀತ ಶ್ರದ್ಧೆ-ಪ್ರೀತಿಗಳು ಅನುಭವಗಳ ಚೌಕಟ್ಟಿನಲ್ಲಿ ಮಗ್ನವಾಗಿಯೂ ಸೃಜನಶೀಲತೆಯ ತಲ್ಲೀನತೆಯಲ್ಲಿ ಇದ್ದಂತೆ ತೋರುತ್ತವೆ.‘ಸಚ್ಚಿದಾನಂದ’ ಕವಿತೆ ಇಂಥ ವಿಚಾರಗಳಿಂದ ಹೊರಟದ್ದು.

ಬಾ, ಹಾಕು ರಿಂಗಣಾ ಗಗನದಂಗಣಽದಾಽಗ|
ನನ್ನ ಕಾಲಾಗ||
ಒಳಗೊಳಗ ಕುದಿವ ಭೂಕಂಪ,
ಹೊರಗ ಹಸಿತಂಪ
ಮೇಲೆ ನರುಗಂಪೋ| ಮೇಲೆ ನರುಗಂಪು|
ಬಂತೆಲ್ಲ ನೆಲದ ಬಸಿರಿಂದ! ಮನೆಯು ನೆಲದಿಂದ| ಅನ್ನ ಮಣ್ಣಿಂದ|
ಮೈಯು-
ಅದರಿಂದೋಂ - ಸಚ್ಚಿದಾನಂದ|[೨೪]

ಗರುಡನ ಕಾಲಿಗೆ ಸುತ್ತುವರಿದ ಹಾವಿನಂತೆ ಗಗನದ ಅಂಗಳದಲ್ಲಿ ಹಾರಾಡುತ್ತ ಸಾವಿನಂತಹ ರೌದ್ರತೆಗೂ ಅಳುಕದ ಸತಿಯ ಕರೆ ಸಚ್ಚಿದಾನಂದದ ಗುರಿಯಾಗಿದೆ. ಇಂಥ ರೌದ್ರತೆಯಲ್ಲಿ ಸತಿ-ಪತಿಯಾಗಿ ಗಂಡು-ಹೆಣ್ಣುಗಳು ಮೇಳೈಸುವಾಗ ದೊರೆಯುವ ಆನಂದಕ್ಕಾಗಿ ಸತಿ ಅವನ ಆಗಮನಕ್ಕೆ ಹಲುಬುತ್ತಾಳೆ. ಸತಿಯ ಒಳಗೆ ಕುದಿವ ಭೂಕಂಪ, ಅದನ್ನು ಮೀರಿದ ಹಸಿತಂಪು, ನರುಗಂಪು, ನೆಲದ ಬಸಿರು, ಅನ್ನ, ಮನೆ, ಮಣ್ಣು, ಇವುಗಳು ಭೂಮಿ ಆಕಾಶಗಳ ನಡುವೆಯ ನಿತ್ಯ ಸಂಬಂಧಗಳನ್ನು ಅಂತರಂಗದ ಅಪೇಕ್ಷೆಗಳನ್ನು ಸಂಕೇತಿಸುತ್ತವೆ. ಮನುಷ್ಯಲೋಕದ ಸೆಳೆತಗಳನ್ನು, ಆ ಕ್ಷಣದ ಸತ್ಯಗಳನ್ನು ಒಂದು ಮಟ್ಟದಲ್ಲಿ ತನ್ಮಯತೆ ಹಾಗೂ ದೃಢ ವಾಸ್ತವಗಳ ಬೆಳಕಿನಲ್ಲಿ ಸಮಗ್ರೀಕರಿಸುವ ದೃಷ್ಟಿಯಿಂದ ಇಂಥ ರೂಪಕಗಳು ಮಹತ್ವ ಪಡೆಯುತ್ತವೆ.

ಚೌರ್‍ಯೈಶಿ( ೮೪ ಲಕ್ಷ)ಲಕ್ಷದ ಸಿಡಿಲಿಗೆ ಸತಿ ತನ್ನನ್ನೇ ಪತಿಯ ರಿಂಗಣಕ್ಕೆ ಒಡ್ಡಿಕೊಳ್ಳಲು ಸಿದ್ಧಳಾಗುತ್ತಾಳೆ. ‘ನನ ಒಡಪ ಒಡೆದವ ಯಾವಾ, ನೋವೆ ನನ ಜೀವಾ ಈಗಿನೀ ಭಾವಾ! ಈಗಿನೀ ಭಾವ!’ ಎನ್ನುತ್ತಲೇ ಪತಿಯ ರಿಂಗಣಕ್ಕಾಗಿ ಹಗಲು ಚಂದ್ರನನ್ನು, ರಾತ್ರಿ ಸೂರ್ಯನನ್ನು ಕಂಡ ಹುಚ್ಚಳಂತೆ ಮನದ ಮಕರಂದನಾದ ಪತಿಗಾಗಿ ಹಲುಬುತ್ತಾಳೆ.

ಇಷ್ಟ್ಯಾಕ ಹಲಬತೀ ಬಾಲಿ, ಬಂದೆ ಮೀನಾಽಕ್ಷಿಽ!
ಪ್ರಾಣವೇ ಸಾಕ್ಷಿ||
ನೀ ಕೂತಿ ಬೆಂಕಿಯನು ನಂಬಿ

ಪ್ರೀತಿಯದಕೆಂಬಿ

ಕಪ್ಪುರದ ಗೊಂಬಿ| ಕಪ್ಪುರದ ಗೊಂಬಿ|[೨೫]

ಕಪ್ಪುರದ ಗೊಂಬಿಯಾದ ಸತಿ ಬೆಂಕಿಯಾದ ಪತಿಯನ್ನು ನಂಬಿ ಹಲುಬುವ ಚಿತ್ರ ಅತ್ಯಂತ ಮಾರ್ಮಿಕವಾದದ್ದು. ಎಲ್ಲೆಲ್ಲು ನಾನೆ ಇರಲು ಮರಿಮಾಡಿ ಯಾಕೆ ಅಳುತಿ. ಒಳ ಹೊರಗು ಬೆಳಕು ನಾನಿರಲು ಯಾ ನಿನ ಹಣತಿ, ಬಂದಿತ ಹದಾ ತೆರಿತೆರೀ ನಿನ್ನ ಎದಿಕದಾ ಎಂದು ಸಚ್ಚಿದಾನಂದ ತನ್ಮಯತೆಗೆ ಒಳಗಾಗುತ್ತಲೇ ಸೃಷ್ಟಿಕ್ರಿಯೆಯಂಥ ಉನ್ಮತ್ತ ಆನಂದಗಳ ನೃತ್ಯಪ್ರತೀಕವಾಗಿ ಈ ಕವಿತೆ ಕಾಣಿಸುತ್ತದೆ.

ಬೇಂದ್ರೆ ಕಾವ್ಯದ ಕೌಟುಂಬಿಕ ನೆಲೆಯ ಮುಖಾಮುಖಿಯಲ್ಲಿ ಗಂಡು ಹೆಣ್ಣಿನ ಸಖ್ಯದಲ್ಲಿ ಹುಟ್ಟುವ ಚಿಂತನೆಯನ್ನು ಸಂಘಟಿಸುವ ಕ್ರಮ ಈ ಬಗೆಯದೇ ಆಗಿದೆ. ಗರುಡ-ಸರ್ಪ,ಭೂಕಂಪ-ಹಸಿತಂಪ, ಹಗಲು-ಇರುಳು, ಸೂರ್ಯ-ಚಂದ್ರ, ಬೆಳಕು-ಕತ್ತಲೆ, ಕಪ್ಪುರ-ಬೆಂಕಿ ಮುಂತಾದ ವಿರುದ್ಧ ಚಿತ್ರಗಳಿಂದ ಎದುರಾಗುವ ರೌದ್ರತೆಯನ್ನು ಸತಿಪತಿಗಳ ರಾಸಕ್ರೀಡೆಯ ನೆಲೆಯಲ್ಲಿ ಕವಿತೆ ಪ್ರವಹಿಸುತ್ತದೆ. ಅಮೂರ್ತವಲಯದ ಶೋಧನೆ ಬೇಂದ್ರೆ ಕಾವ್ಯದ ಬಹುಮುಖ್ಯ ಆಸಕ್ತಿ. ಅಂಥ ಆಸಕ್ತಿಗಳಿಗೆ ಇವರ ಕಾವ್ಯ ಬಹುಮುಖೀ ನೃತ್ಯರೂಪಕಗಳನ್ನು ನಿರ್ಮಿಸುತ್ತದೆ. "ಸಖೀಗೀತ", 'ನೃತ್ಯಯಜ್ಞ', 'ಕೊಳಲನೂದಿದ', 'ಕಲ್ಪವೃಕ್ಷವೃಂದಾವನಂಗಳಲಿ' ಮೊದಲಾದ ಅನೇಕ ಕವಿತೆಗಳಲ್ಲಿ ನೃತ್ಯರೂಪಕಗಳು (ನವಿಲು,ಗರುಡ, ಹೆಣ್ಣು, ಗಂಡು) ಅಮೂರ್ತವನ್ನು ಮೂರ್ತಗೊಳಿಸುವ ತೀವ್ರತೆಯಲ್ಲಿ ಅನುಸಂಧಾನಗೊಳ್ಳುತ್ತವೆ.

ಬೇಂದ್ರೆ ಕಾವ್ಯದಲ್ಲಿ ನವಿಲಿನ ಪ್ರತೀಕ ಮತ್ತೆ ಮತ್ತೆ ಸೃಷ್ಟಿಕ್ರಿಯೆಯ ಶೋಧನೆಯಲ್ಲಿ ಕಾಣಿಸಿಕೊಳ್ಳುತ್ತದೆ. ಅನೇಕ ವಿಮರ್ಶಕರು ಗುರುತಿಸುವಂತೆ ಈ ಪ್ರತಿಮೆ ಜೀವ ಚೈತನ್ಯವನ್ನೂ, ಕಲೆಯನ್ನೂ, ಪ್ರೇಮವನ್ನೂ, ಗಂಡು-ಹೆಣ್ಣುಗಳ ಪ್ರಣಯವನ್ನು ಸಂಕೇತಿಸುತ್ತದೆ. ಆದರೆ ನವಿಲಿನ ಕುಣಿತದ ಪ್ರತಿಮೆ ಇನ್ನೂ ಹಲವು ಅರ್ಥಗ್ರಹಿಕೆಗಳಿಗೆ, ಅನುಮಾನಗಳಿಗೆ ಅಸ್ಪದ ನೀಡುತ್ತದೆ.

'ಉಯ್ಯಾಲೆ" ಸಂಕಲನದ ಕವಿತೆಯಲ್ಲಿ ಬರುವ 'ನವಿಲಿನ ಕುಣಿತ' ಲೋಕ ಕಲ್ಯಾಣದ, ಸಮೃದ್ಧತೆಯ ಆಶಯವನ್ನು ಹೊಂದಿರುವಂಥದ್ದು. ಜೊತೆಗಾತಿಯ ಜೊತೆ ತಾನು ಒಟ್ಟಾಗಿ ಕುಣಿಯುವುದರಿಂದ ನೆಲ-ಮುಗಿಲುಗಳ ನಡುವೆ ಸಾಮರಸ್ಯವನ್ನು,ಸಮೃದ್ಧತೆಯನ್ನು ಹನಿಸುತ್ತದೆ. ಅಂಥ ಕುಣಿತದಿಂದ ಸಮಷ್ಟಿ ಬದುಕಿನ ಸಮೃದ್ಧತೆಯನ್ನು ಕಾಣುವ ಉತ್ಕಟ ಆಶಯ ಈ ಪ್ರತೀಕಗಳ ಹಿನ್ನೆಲೆಯಲ್ಲಿದೆ. ಇಳೆಗೆ ನವಿಲನ ಕುಣಿತದಿಂದ ದತ್ತವಾಗುವ ಮಳೆ, ಸ್ತ್ರೀ-ಪುರುಷರನ್ನು ಹರೆಯದ ಪರಿವೆಯಿಲ್ಲದೆ ಅಂಥ ಮಳೆಗೆ ಎದುರಾಗಿಸುವ ಚೇತನವನ್ನು ಉಂಟು ಮಾಡುತ್ತದೆ.

ಮಳೆ ಬರುವ ಕಾಲಕ್ಕ
ಒಳಗ್ಯಾಕ ಕೂತೇವೊ
ಇಳೆಯೊಡನೆ ಜಳಕ ಮಾಡೋಣ
ನಾವೂನು, ಮೋಡಗಳ ಆಟ ನೋಡೋಣ[೨೬]

ನವಿಲಿನ ಕುಣಿತದ ಮಳೆ ತರುವ ಸಮೃದ್ಧತೆಗೆ ಇಳೆಯಂತೆ ಗಂಡು-ಹೆಣ್ಣು ತಮ್ಮಮೈಯನ್ನು ಒಡ್ಡಿಕೊಳ್ಳುತ್ತಲೇ ಇಳೆಯೊಡನೆ ಜಳಕದ ಆಟವನ್ನು ಆಡುವಂತೆ ಪ್ರೇರೇಪಿಸುವ ಕ್ರಿಯೆ ಅಂಥ ಪ್ರತೀಕಗಳ ವೈಶಿಷ್ಟ್ಯವಾಗಿದೆ. ನೃತ್ಯದ ಪ್ರತೀಕವನ್ನು ಕೇಂದ್ರವಾಗಿ ಉಳ್ಳ ಕವಿತೆ 'ನೃತ್ಯಯಜ್ಞ'. ಈ ಕವಿತೆ ಅನೇಕ ವಿಮರ್ಶಕರ ವಿಮರ್ಶೆ-ವಿಶ್ಲೇಷಣೆಗೆ ಗುರಿಯಾಗಿದೆ. ಅರ್ಥಗಳು ಸುಲಭವಾಗಿ ಬಿಚ್ಚಿಕೊಳ್ಳದೆ ಮತ್ತೆ ಮತ್ತೆ ಅಸ್ಪಷ್ಟವಾಗುವ ಈ ಕವಿತೆ ಸಹಜವಾಗಿಯೇ ಅಸಂಖ್ಯ ವಿಶ್ಲೇಷಣೆಗಳಿಗೆ ಗುರಿಯಾಗುವ ಕವಿತೆಗಳಲ್ಲಿ ಒಂದಾಗಿದೆ. 'ಶಂಕರ ಮೊಕಾಶಿ ಪುಣೇಕರ, ಕೀರ್ತಿನಾಥ ಕುರ್ತಕೋಟಿ, ಡಿ.ಆರ್.ನಾಗರಾಜ್ , ಜಿ.ಎಸ್.ಆಮೂರ್ ಮೊದಲಾದ ವಿಮರ್ಶಕರ ಸಂವೇದನೆ ಈ ಕವಿತೆಯ ಎಲ್ಲ ಮಜಲುಗಳನ್ನು ವಿಶ್ಲೇಷಣೆಗೆ ಗುರಿಪಡಿಸಿದ್ದರೂ, ಇನ್ನೂ ಅಸಂಖ್ಯ ವಿಶ್ಲೇಷಣೆಗೆ ಬೇಕಾದ ಸಾಮಗ್ರಿಯನ್ನು ಹೊಂದಿದೆ ಎಂಬ ಅನುಮಾನ ನನ್ನದಾಗಿದೆ. 'ಸಾಹಿತ್ಯ-ಕಾವ್ಯ ಬರೀ ವಿಲಾಸವಲ್ಲ ಅದು ಕಲ್ಯಾಣ ಕರೆಯುವ ಮಯೂರ ನೃತ್ಯ-ಯಜ್ಞರೂಪ' ಬೇಂದ್ರೆಯವರ ಈ ಮೇಲಿನ ಭಾವ ಸಂದರ್ಭಸೂಚಿಯು ಈ ಕವನಕ್ಕೆ ಪ್ರವೇಶವನ್ನು ದೊರಕಿಸಿಕೊಡುತ್ತದೆ. ಅಂಥ ಪ್ರವೇಶಕ್ಕೆ ಹಲವು ಮಾರ್ಗಗಳನ್ನು ಅನುಮಾನಗಳನ್ನು ನಿರ್ಮಿಸುತ್ತದೆ.

ನವಿಲಿನ ನೃತ್ಯ ಪ್ರತೀಕಗಳ ಓದಿನ ಗ್ರಹಿಕೆ ಬೇಂದ್ರೆ ಕಾವ್ಯ ಸಂವೇದನೆ 'ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ' ಎಂಬ ಆಶಯವನ್ನು ನೆನಪು ಮಾಡಿಕೊಡುತ್ತದೆ. ನವಿಲು ಕುಣಿತವು ಇಂಥ ಉದ್ದೇಶದಿಂದಲೇ ಉತ್ಪನ್ನವಾಗುವುದು. 'ನೃತ್ಯ ಯಜ್ಞ' ಕವಿತೆಯ ಕುಣಿತ ಶಿವನ ತಾಂಡವ ಹಾಗೂ ಪಾರ್ವತಿಯ ಲಾಸ್ಯ, ನೃತ್ಯವನ್ನು ಒಳಗೊಂಡ ರೂಪಕ. ಇಂಥ 'ನಟುವರ' ನಾಟ್ಯ ಮನುಷ್ಯ-ದೈವ ಪ್ರಾಣಿ-ಪಕ್ಷಿ, ಪ್ರಕೃತಿ-ಪುರುಷ, ಭೂಮಿ-ಆಕಾಶಗಳನ್ನು ಒಳಗೊಳ್ಳುವಂತಹದು.ಅಂದರೆ ಅಂಗಾಲಿನಿಂದ ನೆತ್ತಿಯತನಕ ಬದುಕಿದ್ದನ್ನು ಅಭಿವ್ಯಕ್ತಿಸುವ, ವಿಚಾರ-ಗ್ರಹಿಕೆಗಳಿಗೆ ದಕ್ಕದ ಸ್ವಚ್ಛಂದ ಕುಣಿತ ಈ ಬಗೆಯದು.

ಈ ಕವಿತೆಯು 'ಗಿರಿ ಶಿಖರದಿ ಶಿಖೆಯನೆತ್ತಿ ಶಿಖಿಯ ಕೇಕೆ ಕರೆಯವುದು?'' ಎಂಬ ಪ್ರಶ್ನೆಯೊಂದಿಗೆ ಆರಂಭಗೊಳ್ಳುತ್ತದೆ. ಈ ಪ್ರಶ್ನೆಗೆ ''ಜಗವೆಲ್ಲವು ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೀ'' ಎಂಬ ಸಾಲಿನೊಂದಿಗೆ ಮಯೂರ ನೃತ್ಯದ ಉದ್ದೇಶ ಸ್ಪಷ್ಟವಾಗುತ್ತದೆ. ಆದರೂ ದ್ವಂದ್ವದ ನೆಲೆಯನ್ನು ಬಿಟ್ಟುಕೊಡುವುದಿಲ್ಲ. ಕವನದ ಉದ್ದಕ್ಕೂ ವಿರುದ್ಧವಾದ ಚಿತ್ರಗಳ ಪಟ್ಟಿಯೇ ಇದೆ. ಇಂಥ ಅಸಂಖ್ಯ ಚಿತ್ರಗಳಿಂದ ಅನೇಕ ಅನುಮಾನ, ಪ್ರಶ್ನೆಗಳನ್ನು ಈ ಕವಿತೆ ಎದುರಾಗಿಸುತ್ತದೆ.

> ಥಕ ಥೈ ಥೈ ಧಿಕಿ ತಟತೋಂ ಇದೇ ಕಾಲ ಮಳೆಯದೋ
> ಹಳ್ಳ ಕೊಳ್ಳಗಿರಿದರಿಯಲಿ ಹರಿಯುತ್ತಿಹ ಹೊಳೆಯದೋ?
> ಬರಲಿಹ ಬೆಳೆ ಪಯಿರಿನಲ್ಲಿ ಕುತುಕದಿಂದ ಕುಣಿವುದೋ
> ಋತುರಾಜನ ಋತುಜಾತದ ಜೀವನದಲಿ ಋಣವಿದೋ!
>
> ಗೌರೀ ಶಂಕರ ತಲೆಯೆತ್ತಿದೆ ಕೇತುವೆ ಎಂದೋ
> ದಿಮುಕಿಡುತಿದೆ ಆ ಕುಮಾರಿ ಆ ಸೇತುವೆಯಿಂದೋ?

ಹಾ ಭಯವೋ ಓ ನಿದ್ರೆಯೋ ಮಿಥುನದ ಒಲವೋ?
ರೌದ್ರದ ಮೊರೆ ಹೇಸಿಗೆ ಹೊರೆ ಮಾನವ ದಳವೋ[೨೭]

ಇಂಥ ಸಾಲುಗಳಲ್ಲಿ ಅಗಾಧ ಪ್ರಶ್ನೆ ಹಾಗೂ ಅನುಮಾನಗಳು ದಟ್ಟವಾಗಿವೆ.

ಅನ್ನ ಅನ್ನ ಬುಸುಗುಡುತಿದೆ ಮಾನವ ನಾಗರವು
ತೆರೆತೆರೆಯಲಿ ತೆರೆಯಿತು ನವ ದುಃಖ ಸಾಗರವು
ತಾರಕ ಸಂಹಾರಕನಾಗುತ ಅಗೂ ಕಂದರ್ಪ
ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ[೨೮]

ಈ ಮೇಲಿನ ಸಾಲುಗಳಲ್ಲಿ ಬರುವ ನವಿಲು-ಸರ್ಪ ಪ್ರತೀಕಗಳು ಪ್ರಕೃತಿ-ಪುರುಷನ ನಡುವಿನ ನಿರಂತರ ಸಂಘರ್ಷವನ್ನು, ಅಂತಹ ಅನಿವಾರ್ಯತೆಯನ್ನು ಸೂಚಿಸುತ್ತದೆ. 'ಅನ್ನ ಅನ್ನ ಬುಸುಗುಡುತಿದೆ ಮಾನವ ನಾಗರವು', 'ರೌದ್ರದ ಮೊರೆ ಹೇಸಿಗೆ ಮಾನವ ದಳವೋ' ಈ ಸಾಲುಗಳು ಗಮನಾರ್ಹವಾದುವು. ಮನುಷ್ಯ ತನ್ನ ಅಗಾಧವಾದ ದಾಹದಿಂದ, ಪ್ರಗತಿಯ ಅಹಂಕಾರದಿಂದ ಪ್ರಕೃತಿ ಹಾಗೂ ಪರಿಸರದ ಸೂಕ್ಷ್ಮತೆಗಳನ್ನು, ಸಮೃದ್ಧತೆಗಳನ್ನು ನಿರಂತರವಾಗಿ ಭಗ್ನಗೊಳಿಸುವ ಕ್ರಿಯೆಯನ್ನು 'ದರ್ಪದಿಂದ ಹೆಡೆಯೆತ್ತಿದ ತಾಂಡವ ಸರ್ಪ'ದ ಪ್ರತಿಮೆ ಹಾಗೂ 'ಮಾನವ ದಳದ' ಚಿತ್ರಗಳು ಧ್ವನಿಸುತ್ತವೆ. ಅಂಥ ದುಷ್ಟ ಶಕ್ತಿಯನ್ನು ಎದುರಾಗಲು ನವಿಲಿಗೆ ಏಳು ತಾಯಿಯ ಹಾಲನ್ನು ಕುಡಿದ ಕಾರ್ತೀಕನ ಶಕ್ತಿ ಅನಿವಾರ್ಯವಾಗುತ್ತದೆ. ಮನುಷ್ಯನ ಅಹಂಕಾರದಿಂದ ಭಗ್ನಗೊಂಡ ಸೃಷ್ಟಿ-ಸಮೃದ್ಧತೆಗಳು ನೆಲೆಗೊಳ್ಳಬೇಕಾದರೆ 'ನೃತ್ಯ ಯಜ್ಞ' ಅನಿವಾರ್ಯವೆಂಬ ಆಶಯ ಈ ಕವಿತೆಯ ಹಿನ್ನೆಲೆಗೆ ಇರಬಹುದು. ಒಟ್ಟಿನಲ್ಲಿ ಮಯೂರ ನೃತ್ಯ ತರುವ ಮಳೆಯನ್ನು ತಡೆದುಕೊಳ್ಳುವ ಶಕ್ತಿ, ಅಂಥ ಶಕ್ತಿಯಿಂದ ಲೋಕವನ್ನು ರಕ್ಷಿಸಲು ಕಾರ್ತೀಕನ ಸಹಾಯ ಅನಿವಾರ್ಯ. ರೌದ್ರತೆ ಹಾಗೂ ಸಮೃದ್ಧತೆಯ ಚಿತ್ರಗಳನ್ನು ಮುಖಾಮುಖಿಯಾಗಿಸುವ ಈ ಕವಿತೆ ಅಸಂಖ್ಯ ಓದುಗಳನ್ನು, ಉತ್ಕಟತೆಯನ್ನು ನಿರಂತರವಾಗಿ ಬಯಸುತ್ತದೆ.

ಬೇಂದ್ರೆ ಕಾವ್ಯದ ಕುಣಿತದ ಪ್ರತೀಕಗಳಲ್ಲಿ ಬರುವ ಸಖ-ಸಖಿಯರು ನವಿಲುಗಳಂತೆ ಕುಣಿಯುತ್ತ, ದಣಿಯತ್ತ ಹೊಸ ಕಾಣ್ಕೆಗೆ ಎದುರಾಗವ ಕ್ರಮ ವಿಶಿಷ್ಟವಾದುದು. ಒಬ್ಬರು ಮತ್ತೊಬ್ಬರನ್ನು ತೆಕ್ಕೈಸಿಕೊಳ್ಳುತ್ತಲೇ ರತಿಸುಖದ ತೀವ್ರಕ್ಷಣಗಳನ್ನು ಅನುಭವಿಸುತ್ತ, ಅದರ ನೋವು-ಸಂಭ್ರಮಗಳ ಅನುಭವದ ನೆಲೆಯಲ್ಲಿಯೇ ಹೊಸ ಸೃಷ್ಟಿಗೆ ಕಾರಣರಾಗುತ್ತಾರೆ. ಈ ಬಗೆಯ ಕುಣಿತ ಅಂಗಾಲಿನಿಂದ ಶಿರದವರೆಗೂ ಚೈತನ್ಯವನ್ನುಂಟು ಮಾಡುವುದರ ಮುಖೇನ ಹೊಸ ಲೋಕವನ್ನು ನಿರ್ಮಿಸಿಬಿಡುತ್ತದೆ. ಇಂತಹ ನೆಲೆಯಿಂದ ಹೊರಟ ನೃತ್ಯ ಗಂಭೀರ ಹಾಗೂ ಅನಿರ್ವಚನೀಯ. ಅಂತೆಯೇ ರಸಾನುಭವದ ಮೂಲ ಸೆಲೆಯ ಒಳ-ಹೊರಗುಗಳ ನೋವು-ಯಾತನೆಗಳು; ಆನಂದದ ಉತ್ಕಟ ಅನುಭವಗಳನ್ನು ಹೊರ ಹೊಮ್ಮಿಸುತ್ತವೆ. ತನ್ನ ಪರಾಕಾಷ್ಠೆಯಲ್ಲಿ ದೈವಿಕತೆಯನ್ನು ಸಾಕ್ಷಾತ್ಕರಿಸಿಕೊಳ್ಳವಂಥ ನೃತ್ಯ ಬೇಂದ್ರೆ ನೃತ್ಯರೂಪಕಗಳಲ್ಲಿ ಆಕಾರಗೊಂಡಿದೆ. ಹಾಗೆ ಆಕಾರಗೊಳ್ಳುತ್ತಲೇ ಓದುಗನನ್ನು ಆಸ್ವಾದನೆಯ ಧಾನ್ಯದ

ಗುಂಗಿನಲ್ಲಿ ಮುಳುಗಿಸಿಬಿಡುತ್ತದೆ. ಇಂಥ ಗುಂಗುಗಳಿಂದ ದತ್ತವಾಗುವ ತನ್ಮಯತೆ, ಸಂಭ್ರಮಗಳು, ಸಾಮಾಜಿಕ, ರಾಜಕೀಯ ತಲ್ಲಣಗಳಿಗೆ ಎದುರಾಗುವ ಚೈತನ್ಯವನ್ನು ಹರಳುಗಟ್ಟಿಸುತ್ತವೆ.

ಇದು ವಸ್ತುಕೇಂದ್ರಿತ ಅಧ್ಯಯನವಾದ್ದರಿಂದ ಬೇಂದ್ರೆಯವರ ಒಟ್ಟು ಕಾವ್ಯವನ್ನು ಕಾವ್ಯಾಭ್ಯಾಸಕ್ಕೆ ಗುರಿಪಡಿಸುವುದು ಕಷ್ಟಸಾಧ್ಯ. ಬೇಂದ್ರೆಯವರ ಕಾವ್ಯದ ವೈವಿಧ್ಯತೆ ಇಂತ ಅಧ್ಯಯನಕ್ಕೆ ಸವಾಲಾಗಿ ಎದುರಾಗುತ್ತದೆ. ಕಾವ್ಯಾಧ್ಯಯನಕ್ಕೆ ತೊಡಗುವ ವಿಮರ್ಶೆ, ತಾನು ಶೋಧಿಸಿಕೊಳ್ಳುವ ತಾತ್ತ್ವಿಕ ಆಕೃತಿಗಳನ್ನು ಈ ಬಗೆಯ ಕಾವ್ಯದಲ್ಲಿ ಇಂತಿಷ್ಟೇ ಎಂದು ಗ್ರಹಿಸಲು ಅನೇಕ ಸಮಸ್ಯೆಗಳು ಎದುರಾಗುತ್ತವೆ. ಏಕೆಂದರೆ ಬೇಂದ್ರೆ ಕಾವ್ಯ ಸಂವೇದನೆಯಲ್ಲಿ ಹಲವು ತಾತ್ತ್ವಿಕ ಚಿಂತನೆಗಳು ಗುಪ್ತಗಾಮಿನಿಯಂತೆ ಎಲ್ಲೆಲ್ಲೂ ಪ್ರಕಟಗೊಳ್ಳುವುದು ಅವರ ಕಾವ್ಯಾಧ್ಯಯನದಿಂದ ತಿಳಿದು ಬರುವ ಸಂಗತಿ. ಕಾವ್ಯಸೃಷ್ಟಿಯ ಬಗೆಗಿನ ಕವನಗಳಲ್ಲಾಗಲಿ, ದಾಂಪತ್ಯದ ಕವಿತೆಗಳಲ್ಲಾಗಲಿ, ವ್ಯಕ್ತಿ ಚಿತ್ರಗಳಲ್ಲಾಗಲಿ, ಪ್ರೇಮ-ವಿರಹ, ನಾಡು-ನುಡಿಗಳ ಗೀತೆಗಳಲ್ಲಿಯೂ ಕವಿಸಂವೇದನೆ ವಸಾಹತು ಸಂಸ್ಕೃತಿಯ ಪ್ರತಿರೋಧದ ನೆಲೆಗಳನ್ನು ಎದುರಾಗಿಸುವುದು ಬೇಂದ್ರೆ ಕಾವ್ಯದ ವೈಶಿಷ್ಟ್ಯವೆನ್ನಬಹುದು. ಈ ಮಾತಿಗೆ ಸಮರ್ಥನೆಯಾಗಿ ಬೇಂದ್ರೆಯವರ ಕಾವ್ಯ ಸೃಷ್ಟಿಯನ್ನು ಕುರಿತ ತಾತ್ತ್ವಿಕ ಅಧ್ಯಯನವನ್ನು ಮಾಡುತ್ತ ಡಾ|| ರಾಜೇಂದ್ರ ಚೆನ್ನಿ ಅವರು ಹೇಳುವ ಈ ಕೆಳಗಿನ ಮಾತುಗಳನ್ನು ಈ ಸಂದರ್ಭದಲ್ಲಿ ಉದಾಹರಿಸುವುದು ಉಚಿತವೆಂದು ಕಾಣುತ್ತದೆ.

> ಶ್ರೇಷ್ಠ ಕವಿಯ ಒಂದೊಂದು ಕವನವೂ ಮೂರ್ತವಾದ ಶಾಬ್ದಿಕ ರಚನೆಯಾಗಿರುತ್ತದೆ. ಅನುಭವವೊಂದರ ಪ್ರತೀಕವಾಗಿರುತ್ತದೆ. ವಿಮರ್ಶೆ ಇಂಥ ಮೂರ್ತವಾದ ಶಾಬ್ದಿಕ ರಚನೆಗೆ ಸ್ಪಂದಿಸುವ ಒಂದು ವೈಚಾರಿಕ ಆಕೃತಿಯನ್ನು ಹುಡುಕುತ್ತಿರುತ್ತದೆ. ವಿಮರ್ಶೆಯೆಂದರೆ ಕವನದ ಮೂರ್ತ ಶಾಬ್ದಿಕ ರಚನೆ ಮತ್ತು ವಿಮರ್ಶೆಯ ವೈಚಾರಿಕ ರಚನೆಗಳ ಮಧ್ಯೆ ಆದಷ್ಟು ಮಟ್ಟಿಗೆ ಸಾಮರಸ್ಯವನ್ನು ಸಾಧಿಸುವ ಪ್ರಯತ್ನವಾಗಿದೆ. ಬೇಂದ್ರೆಯವರ ಕಾವ್ಯ ವಿಮರ್ಶೆಯು ಈ ಕೆಲಸಕ್ಕೆ ಬಹುದೊಡ್ಡ ಸವಾಲಾಗಿದೆ. ಅವರ ಕಾವ್ಯದಲ್ಲಿ ಒಟ್ಟಂದವನ್ನು ಹುಡುಕುವುದು ಕಷ್ಟ ಸಾಧ್ಯವಾಗಿರುವುದಕ್ಕೆ ಕೇವಲ ಅವರ ಕಾವ್ಯದ 'ಹುಚ್ಚು ಹಿಡಿಸುವ ವೈವಿಧ್ಯ' ಮಾತ್ರ ಕಾರಣವಾಗಿಲ್ಲ. ಅವರ ಕಾವ್ಯದ ವೈವಿಧ್ಯಕ್ಕೆ ಕಾರಣವಾಗಿರುವ ಅವರ ತಾತ್ವಿಕ ನಿಲುವು, ಜೀವನಶ್ರದ್ಧೆ ಇವುಗಳು ಕೂಡ ಸುಲಭವಾದ ಒಟ್ಟಂದವನ್ನು ತಿರಸ್ಕರಿಸುವ ಬಗೆಯಾಗಿದೆ. ಬೇಂದ್ರೆಯವರಿಗೆ ಕಾವ್ಯವೆಂದರೆ ಪ್ರತಿಯೊಂದು ಅನುಭವದ ಮೂರ್ತವಾದ ಪುನಃ ಸೃಷ್ಟಿಯನ್ನು ಶಬ್ದ ಮಾಧ್ಯಮದ ಮೂಲಕ ಸಾಧಿಸುವ ಶ್ರದ್ಧೆಯ ಕೆಲಸವಾಗಿತ್ತು ಮತ್ತು ಈ ಶ್ರದ್ಧೆಯ ಕೆಲಸವೇ ಅವರಿಗೆ ಬದುಕಿನ ಒಂದು ದೊಡ್ಡ ಮೌಲ್ಯವೂ ಆಗಿತ್ತು. ಆದ್ದರಿಂದಲೇ ಅವರ ಬಹುಮುಖ್ಯ ಕವನಗಳು ಕಾವ್ಯಸೃಷ್ಟಿಯ ಬಗೆಗೇ ಇವೆ. ನೇರವಾಗಿ ಕಾವ್ಯ ಸೃಷ್ಟಿಯ ಬಗೆಗೇ ಇಲ್ಲದ ಕವನಗಳೂ ಕೂಡ ಕಾವ್ಯಸೃಷ್ಟಿಯನ್ನು ಹೋಲುವ ಹಲವಾರು ರೀತಿಯ ಸೃಷ್ಟಿಶೀಲತೆಯ ಬಗೆಗಿವೆ[4]

ಕಾವ್ಯಸೃಷ್ಟಿ ಮತ್ತು ಬದುಕಿನ ಅನುಭವ ಗ್ರಹಿಕೆಗಳ ಅಭಿವ್ಯಕ್ತಿ ಹಾಗೂ ಸವಾಲುಗಳು ಬೇಂದ್ರೆಯವರಲ್ಲಿ ಮುಪ್ಪುರಿಗೊಳ್ಳುವುದರಿಂದಲೇ ಒಂದು ಬಗೆಯ ಸಂಕೀರ್ಣತೆ ಅವರ ಕಾವ್ಯಕ್ಕೆ ದತ್ತವಾಗಿದೆ. ಅಂಥ ಸಂಕೀರ್ಣತೆಗಳಲ್ಲಿ ವಿಮರ್ಶೆ ಶೋಧಿಸುವ ತಾತ್ತ್ವಿಕತೆಗಳು ಬೇರೆ ಬೇರೆ ನೆಲೆಗಳಲ್ಲಿ ಪ್ರಕಟವಾಗುತ್ತವೆ. ಆದ್ದರಿಂದ ಬೇಂದ್ರೆಕಾವ್ಯಸೃಷ್ಟಿಯ

ಅಸಂಖ್ಯ ಪ್ರತೀಕ-ರೂಪಕಗಳು ವಸ್ತು ವೈವಿಧ್ಯತೆಗಳ ನಡುವೆಯೂ ವಿಮರ್ಶಕನ ಸಂವೇದನೆಗೆ ಹೊಸ ಹೊಸ ಅರ್ಥಪರಂಪರೆಗಳನ್ನು ಬಿಟ್ಟುಕೊಡುವುದನ್ನು ಕಾಣುತ್ತೇವೆ.

**೫. ಸೃಷ್ಟಿಶೀಲತೆ : ಸಂಕೀರ್ಣತೆಗಳ ಜಿಜ್ಞಾಸೆ**

ಸೃಷ್ಟಿಶೀಲತೆ ಬೇಂದ್ರೆಯವರ ಕಾವ್ಯದ ಬಹುಮುಖ್ಯ ಚಿಂತನೆ. ಇಂಥ ಚಿಂತನೆ ಬೇಂದ್ರೆಯವರ ಕಾವ್ಯದಲ್ಲಿ ಅಗಾಧವಾಗಿ ಶೋಧನೆಗೆ ಗುರಿಯಾಗುತ್ತದೆ. 'ಓ ಹಾಡೇ', 'ಕೋಗಿಲೆ', 'ನನ್ನ ಹಾಡು', 'ಭಾವಗೀತೆ', 'ಗಂಗಾವತರಣ', 'ಪರಾಗ', 'ದವನ-ಕವನ', 'ಲೀಲೆ', 'ಬೆಳಗು', 'ಹಂಸದ ಹಾಡು', 'ಗಾರುಡಿಗ', 'ಕವಿ-ರಸಿಕನಿಗೆ' ಮೊದಲಾದ ಕವನಗಳು ಸೃಷ್ಟಿಶೀಲತೆ ಮತ್ತು ಕಾವ್ಯಸ್ವಾದದ ಜಿಜ್ಞಾಸೆಯನ್ನು ಒಳಗೊಂಡ ಉತ್ತಮ ಉದಾಹರಣೆಗಳು. ಬೇಂದ್ರೆಯವರ ಕಾವ್ಯ ಶೋಧನೆಯ ಇಂಥ ಚಿಂತನೆಗಳಲ್ಲಿ ಅಭಿವ್ಯಕ್ತಿ, ಆಕೃತಿ, ಛಂದಸ್ಸು ಮೊದಲಾದ ಕಾವ್ಯಸಾಮಗ್ರಿಯ ಚಿಂತನೆಯು ಮೈ ಪಡೆಯುತ್ತದೆ.

> ಇದು ಮಂತ್ರ; ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ;
> ತಾನೆ ತಾನೆ ಸಮರ್ಥಛಂದ; ದೃಗ್ಬಂಧ-ದಿ-
> ಗ್ಬಂಧ; ಪ್ರಾಣದ ಕೆಚ್ಚು ಕೆತ್ತಿ ರಚಿಸಿದ;......
> ......... ಗರುಡನಂ-
> ತೆರಗಿ ಬಂದಿತು-ಭ್ರಮೆಯೊ? ಹಮ್ಮದವೊ? ನಂಜೊ? ಮರ
> ಣವೊ? ನಿದ್ದೆಯೋ! ಮೋಹನವೋ! ಎಚ್ಚರಕೆ ಕವಿದ
> ಮರೆವೊ! ಕನಸೋ! ನನಸು-ಎಲ್ಲ ಹಾಲೋ ಹಾಲು![೩೦]

ಬೇಂದ್ರೆಗೆ ಕವಿತೆ ಮಂತ್ರವಾಗಿಯೂ, ಅರ್ಥಕ್ಕೆ ನಿಲುಕದ ಶಕ್ತಿಯಾಗಿಯೂ ಕಂಡಿದೆ. ಕವಿ, ಕಾವ್ಯ ಹಾಗೂ ಸಹೃದಯನ ಸಂಬಂಧಗಳನ್ನು ಈ ಬಗೆಯ ಕವಿತೆಗಳು ಧ್ಯಾನಿಸುತ್ತವೆ. 'ಗಾರುಡಿಗ','ಗರುಡ', 'ಹಾಲು', 'ಕನಸು' ಮೊದಲಾದ ಚಿತ್ರಗಳು ಸೃಜನಕ್ರಿಯೆಯ ಮಾಂತ್ರಿಕತೆ ಹಾಗೂ ಅಂಥ ಸಮೃದ್ಧತೆಯ ಸಂಕೇತಗಳಾಗಿವೆ. 'ಕಂಡಿಲ್ಲವೇನೋ ಅಂಗೈಯ ಗರುಡನ ಗೆರೆಯ'ಎಂಬ ಮಾತು ಇಡೀ ಸೃಷ್ಟಿಕ್ರಿಯೆಯನ್ನು ಅದರ ವೈರುಧ್ಯಗಳನ್ನು ಮುಖಾಮುಖಿಯಾಗಿಸುವುದರ ಮೂಲಕ ತನ್ನ ನಿರಂತರತೆಯ ಶೋಧನೆಯನ್ನು ಪ್ರಕಟಿಸುತ್ತದೆ. 'ಭಾವಗೀತೆ' ಕವಿತೆಯೂ ಇದೇ ಹಿನ್ನೆಲೆಯದ್ದು. ಇಲ್ಲಿ ಕವಿಯ ಕಲ್ಪನೆಯು ಭೃಂಗದ ಬೆನ್ನೇರಿದೆ. ಕನಸಿನಲ್ಲಿ ಕಂಡ ಕಾಣ್ಕೆಯನ್ನು ಭಾವ-ಗೀತೆಯಲ್ಲಿ ದಾಖಲಿಸಲಾಗಿದೆ. ಭೃಂಗದಂತೆ ತನ್ನ ವಜ್ರಮುಖವನ್ನು ಚಾಚಿ ಹೂವಿನ ಮಕರಂದವನ್ನುಈಂಟುವ ಹಾಗೆ ಕವಿ ಸೃಷ್ಟಿಕ್ರಿಯೆಯ ಅಗಾಧ ಅನುಭವದ ಶೋಧನೆಗೆ ಸೃಜನಕ್ರಿಯೆಯಲ್ಲಿ ತೊಡಗುವುದನ್ನು ಕಾಣುತ್ತೇವೆ. ಕವಿಗೆ ಸೃಷ್ಟಿಕ್ರಿಯೆ ಸಂತೋಷದ, ನೋವಿನ ಹಾಗೂ ಬಿಡುಗಡೆಯ ಸಂಗತಿಯಾಗಿದೆ. ಇಂಥ ಚಿಂತನೆಯನ್ನು ಡಾ||ಶಂಕರ ಮೊಕಾಶಿ ಪುಣೇಕರ ಅವರು 'ಬೇಂದ್ರೆ ಕಾವ್ಯ ಮೀಮಾಂಸೆ' ಪುಸ್ತಕದಲ್ಲಿ ವಿಸ್ತಾರವಾದ, ಆಳವಾದ ಅಧ್ಯಯನ ನಡೆಸಿದ್ದಾರೆಂಬುದನ್ನು ಇಲ್ಲಿ ನೆನೆಯುವುದು ಸೂಕ್ತ.

ನವೋದಯ ಸ್ವರೂಪದ ಬಹುಮುಖ್ಯ ನೆಲೆಗಳಲ್ಲಿ ನಿಸರ್ಗ ಮತ್ತು ಅದರ ಬಗೆಗಿನ ಶ್ರದ್ಧೆ ಅಪಾರವಾದದ್ದು. ಪ್ರಕೃತಿ ಬೇಂದ್ರೆಗೆ ಚೇತನವಾಗಿ, ಅನುಭವದ ಸಮೃದ್ಧತೆಯ ನಿಧಿಯಾಗಿ, ತನ್ನೆಲ್ಲ ರೀತಿಯ ತನ್ಮಯತೆಗಳಿಗೆ ಸೆಲೆಯಾಗಿ, ಸತ್ಯದ ಸಾಕ್ಷಾತ್ಕಾರದ ಹುಡುಕಾಟವಾಗಿ, ಒಟ್ಟು ಇಂದ್ರಿಯ ಪ್ರಪಂಚದ ಅನುಭವವಾಗಿ ಗೋಚರಿಸಿದೆ.

ಮನದ ಮೂಲೆ ಮೂಲೆಯಲ್ಲಿ ಮಲೆತ ತಮ
          ಶಮನಗೊಳಿಸಲೆಂದು
ಬಳಿಗೆ ಬಂತೊ ಈ ಚಿಗುರು-ಬೆಳಕು
ಮನ ಮನೆಯನುಳಿಸಲೆಂದು [೩೧]

'ಚಿಗುರು ಬೆಳಕು' ಕವಿತೆಯ ಈ ಸಾಲುಗಳು ಬೇಂದ್ರೆ ಕಾವ್ಯ ಸ್ವರೂಪದ ಮೂಲ ಸ್ಥಾಯಿಭಾವವಾದ ನಿಸರ್ಗ ಹಾಗೂ ಪರಿಸರದ ಒಟ್ಟು ಕಾಣ್ಕೆಯನ್ನು ಎದುರಾಗಿಸುವಂತಿವೆ.

ಬೇಂದ್ರೆ ಕಾವ್ಯದ ಮತ್ತೊಂದು ಮುಖ್ಯ ಕಾಣ್ಕೆಯೆಂದರೆ ಐಂದ್ರಿಯಕ ಹಾಗೂ ಅತೀಂದ್ರಿಯ ಸಂಬಂಧಗಳೊಂದಿಗೆ ನಡೆಯುವ ಸಂಘರ್ಷ. ಇದು ಪಾರಂಪರಿಕ ಚಿಂತನೆಗಳಿಗೆ ಎದುರಾದದ್ದು.ಕನ್ನಡ ಅನುಭಾವ ಕಾವ್ಯದ ಬಗೆಗಿನ ಶ್ರದ್ಧೆ-ಪ್ರೀತಿಗಳನ್ನು ಬೇಂದ್ರೆ ತಮ್ಮ ಅನುಭವಗಳ ಚೌಕಟ್ಟಿನಲ್ಲಿ, ಸೃಷ್ಟಿಕ್ರಿಯೆಗೆ ತಮ್ಮದೇ ಆದ ತೀವ್ರತೆಯಲ್ಲಿ ಅಭಿವ್ಯಕ್ತಿಸಿದ್ದಾರೆ. 'ಸಚ್ಚಿದಾನಂದ', 'ಅರಿಯುವಿಯೋ ಮರೆಯುವಿಯೋ', 'ಎಲ್ಲಿರುವೆ ರಾಜಗಂಭೀರ', 'ಮಾಯಾ ಕಿನ್ನರಿ', 'ಕಲ್ಪವೃಕ್ಷ ವೃಂದಾವನಂಗಳಲಿ', 'ಜೋಗಿ' ಮೊದಲಾದ ಕವಿತೆಗಳು ಉತ್ತಮ ಉದಾಹರಣೆಗಳು.

ಒಳಗೊಳಗ ಕುದಿವ ಭೂಕಂಪ
  ಹೊರಗ ಹಸಿತಂಪ
    ಮೇಲೆ ನರುಗಂಪೋ| ಮೇಲೆ ನರುಗಂಪು
ಬಂತೆಲ್ಲ ನೆಲದ ಬಸಿರಿಂದ| ಮನೆಯು ನೆಲದಿಂದ| ಅನ್ನ ಮಣ್ಣಿಂದ|
                                        ಮೈಯು-
                    ಅದರಿಂದೋಂ- ಸಚ್ಚಿದಾನಂದ [೩೨]

ಒಳಗಿನ ಕುದಿವ ಭೂಕಂಪದ ಭೀಕರತೆಯನ್ನು ಮೀರಿನಿಂತ ಹೊರಗಿನ ಹಸಿತಂಪು, ನರುಗಂಪು, ನೆಲದ ಬಸಿರು, ಅನ್ನ-ಮಣ್ಣು ಎಲ್ಲವೂ ಈ ಮಣ್ಣಿಂದಲೇ, ಅಂದರೆ ಭೂತಾಯಿಯ ಒಡಲಿಂದಲೇ ದತ್ತವಾಗುವಂತಹವು. ಬೇಂದ್ರೆಯವರಲ್ಲಿ ಅತೀಂದ್ರಿಯ ಹಾಗೂ ಐಂದ್ರಿಯಿಕ ಪ್ರಪಂಚವು ಕಡೆಯದಾಗಿ ಮಾನವೀಯ ಜಗತ್ತನ್ನು ಕುರಿತದ್ದೇ ಆಗಿದೆ.

ಎಲ್ಲೆಲ್ಲು ಬೆಳಕು ಇರಲಾಕ ಅಳುತಿ ನೀ ಹಾಽಽs!
                    ಒಡಲ ಮರಿ ಮಾಡಿ
ಒಳ ಹೊರಗು ಬೆಳಕು ನಾನಿರಲು ಯಾಕ ನಿನ ಹಣತಿs!
                    ಬಾರ ನನ ಗೆಣತಿ|| [೩೩]

ಇಲ್ಲಿ ಭೂಮಿ-ಆಕಾಶಗಳ ಮಧ್ಯೆ ಮಾನವೀಯ ಮನಸ್ಸಿನ ಅಂತರಂಗದ ಅಪೇಕ್ಷೆಯು ಲೋಕದ ಅನುಭವದ ತೀವ್ರತೆ ಆಗಿರುವುದು ಬೇಂದ್ರೆ ಕಾವ್ಯದ ಮತ್ತೊಂದು ವೈಶಿಷ್ಟ್ಯ. ಒಂದು ರೀತಿಯಲ್ಲಿ ಮನುಷ್ಯಲೋಕದ ಅನುಭವಗಳಲ್ಲಿನ ತನ್ಮಯತೆ ಇಂಥ ಕವಿತೆಗಳ ಮುಖ್ಯ ಆಶಯವೂ ಆಗಿದೆ.

ಕನಸು ಮತ್ತು ವಾಸ್ತವಗಳ ಸಂಘರ್ಷ- 'ಏಳು ಕನ್ನಿಕೆಯರು', 'ಕಲ್ಪವೃಕ್ಷ ವೃಂದಾವನಂಗಳಲಿ', 'ಕನಸಿನೊಳಗೊಂದು ಕಣಸು' ಮೊದಲಾದ ಕವಿತೆಗಳಲ್ಲಿ ಮುಖಾಮುಖಿಯಾಗುವ ರೀತಿ ಗಮನಾರ್ಹವಾದದ್ದು. ಕನಸಿನಲ್ಲಿ ಹುಟ್ಟುವ ಸವಾಲುಗಳು, ಜವಾಬ್ದಾರಿಗಳು ಇಂಥ ಕವಿತೆಗಳಲ್ಲಿ ಎಚ್ಚರದದನಿಯಾಗಿ, ಚಿಂತನೆಯಾಗಿ ಮೈ ಪಡೆಯುವುದು ಇಲ್ಲಿನ ಮುಖ್ಯ ಆಶಯವಾಗುತ್ತದೆ. ವಾಸ್ತವದಲ್ಲಿ ಪಡೆಯಲಾಗದ ಅನುಭವಗಳ ಸಂಘರ್ಷ ಕನಸಿನಲ್ಲಿ ಸಹಜರೂಪವನ್ನು ಪಡೆದುಕೊಳ್ಳುತ್ತದೆ. ದೃಢವಾಸ್ತವದ ಸೋಲು-ಗೆಲುವುಗಳು ಕನಸಿನಲ್ಲಿ ಮುಖಾಮುಖಿಯಾಗಿಸುವ ತಂತ್ರ ಕೂಡ ಬೇಂದ್ರೆ ಕಾವ್ಯದ ಸ್ವರೂಪವೇ ಆಗಿದೆ.

ಬೇಂದ್ರೆ ಕಾವ್ಯದ ಮತ್ತೊಂದು ಮುಖ್ಯ ನೆಲೆಯೆಂದರೆ ದೇವರು-ಧರ್ಮ, ಅನ್ನದ ಸಮಸ್ಯೆಗಳನ್ನು ಕುರಿತ ಚಿಂತನೆ. ದೇವರು-ಧರ್ಮಗಳ ಬಗೆಗಿನ ವಿಚಾರಗಳನ್ನು ಪರಂಪರಾಗತ ದೃಷ್ಟಿಗಳಿಂದ ಭಿನ್ನವಾಗಿ ಶೋಧನೆಗೆ ಗುರಿಪಡಿಸಿದ್ದು ಅಂಥ ನೆಲೆಗಳಲ್ಲಿ ಒಂದು. ಅಂದರೆ, ಇಂಥ ವಿಚಾರಗಳನ್ನು ಮಾನವೀಯ ಹಾಗೂ ವೈಚಾರಿಕ ನೆಲೆಯಲ್ಲಿ ಶೋಧನೆಗೆ ಒಳಪಡಿಸಿ, ವಾಸ್ತವ ಹಾಗೂ ಅವಾಸ್ತವಗಳ ಸಂಘರ್ಷವನ್ನು ಎದುರಿಸಿದ್ದು ಬೇಂದ್ರೆ ಕಾವ್ಯದ ಬಹುಮುಖ್ಯ ಧೋರಣೆಯಾಗಿದೆ. ಇಂತಹ ವಿಚಾರಧಾರೆಗೆ ಕನ್ನಡ ವಚನಕಾರರ ಹಾಗೂ ಅನುಭಾವಿ ಕವಿಗಳ ಪ್ರಭಾವವೂ ಇದೆ. ಧರ್ಮ-ದೇವರ ಕಲ್ಪನೆಯನ್ನು ಅನಿವಾರ್ಯವಾಗಿ ಮಾನವೀಯ ನೆಲೆಯಲ್ಲಿ ಶೋಧಿಸಬೇಕಾದ ಸ್ಥಿತಿ ನವೋದಯ ಕಾಲದಲ್ಲಿ ಎದುರಾದದ್ದು ಅತ್ಯಂತ ಗಮನಾರ್ಹವಾದದ್ದು. ಏಕೆಂದರೆ ಮೊದಲೇ ಸೂಚಿಸಿದ ಹಾಗೆ ಆರ್ಯಧರ್ಮ ಅಥವಾ ಸಾಂಪ್ರದಾಯಿಕ ಸಂಸ್ಕೃತಿ ಜಡವಾದ ಆಚಾರ-ವಿಚಾರಗಳಲ್ಲಿ ತೊಡಗಿದ್ದರಿಂದ ಕ್ರೈಸ್ತಧರ್ಮ ಅಂತಹ ಒಂದು ಪರಿಸರದಲ್ಲಿ ತನ್ನದೇ ಆದ ಆಕ್ರಮಣವನ್ನು ನಡೆಸಿತ್ತು. ಆದ್ದರಿಂದ ದೇಶೀಯ ಮಾನವೀಯ ಮೌಲ್ಯಗಳನ್ನು ಧರ್ಮ ಅಥವಾ ದೇವರನ್ನು ಹೊಸದಾಗಿ ಅರ್ಥೈಸಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿ ನವೋದಯ ಸಂದರ್ಭದಲ್ಲಿ ಎದುರಾಯಿತು. ಇದು ಒಂದು ರೀತಿಯಲ್ಲಿ ಪರಕೀಯ ಧಾರ್ಮಿಕ ನಂಬಿಕೆಗಳಿಗೆ ಎದುರಾಗಿಸಿದ ಚಿಂತನಾಕ್ರಮವೂ ಆಗಿದೆ. ಇಂಥ ಚಿಂತನಧಾರೆ 'ಕುವೆಂಪು' ಅವರ ಕಾದಂಬರಿಗಳಲ್ಲೂ ಹಾಗೂ ಕಾವ್ಯದಲ್ಲಿಯೂ ಮುಖ್ಯ ಭಿತ್ತಿಯಾಗಿದೆ. ಅಂತೆಯೇ ಧಾರ್ಮಿಕ ಆಚರಣೆಗಳ ವಿರುದ್ಧದ ಪ್ರತಿಭಟನೆ ಬೇಂದ್ರೆ ಕಾವ್ಯದಲ್ಲಿ ನಿಚ್ಚಳವಾಗಿದೆ. 'ತುತ್ತಿನ ಚೀಲ', 'ಕುರುಡು ಕಾಂಚಾಣ', 'ಅನ್ನಾವತಾರ', 'ಅನ್ನಯಜ್ಞ', 'ಭೂಮಿತಾಯಿ ಚೊಚ್ಚಲ ಮಗ', 'ಅನ್ನಬಕಾಸುರ ರಾಜ್ಯದಲ್ಲಿ', 'ಬಿಡುಗಡೆ' ಮೊದಲಾದ ಕವಿತೆಗಳಲ್ಲಿನ ವಿಚಾರಗಳು ಬೇಂದ್ರೆಯವರ ಸಾಂಪ್ರದಾಯಕ ಮೌಲ್ಯಗಳ ಬಗೆಗಿನ ಪ್ರತಿಭಟನೆಯನ್ನು ದಾಖಲಿಸುತ್ತವೆ.

ದೈವವುಳ್ಳವರಿಗೆ
ದಯವೇ ಇಲ್ಲ

ತಿತ್ತಿರಿ ತುಂಬಿದೆ
ಕೂಳಿನ ಕೋಟೆ!
ಬಿಡುಗಣ್ಣವರಿಗೆ
ಕಾಣುವದಿಲ್ಲ
ಅಮೃತದ ತೇಗಿನ
ಮದವಂತಹದು!
ಹಸಿದವ ಬಲ್ಲ
ಹಸಿವೆಯ ಶೂಲಿ![೩೪]

ಈ ಕವಿತೆಗಳು ಸಾಮಾಜಿಕ ಶೋಷಣೆಗೆ ಒಳಗಾದವರ ವಾಸ್ತವದ ದಾರುಣತೆಯನ್ನು ದಾಖಲಿಸುತ್ತವೆ. ದೇವರು-ಧರ್ಮಗಳ ಸ್ಥಾನವನ್ನು 'ಪರಿಸರ' ಹಾಗೂ 'ಅನ್ನ' ಪಡೆದುಕೊಂಡಿವೆ. ಬೇಂದ್ರೆಯವರ ಅಸಂಖ್ಯ ಕವನಗಳಲ್ಲಿ ಇವೇ ಮೂಲಭಿತ್ತಿಯಾಗಿವೆ. ಇದು ಕೇವಲ ಮನುಷ್ಯನ ಅನ್ನಮಾತ್ರವಾಗದೆ ಒಟ್ಟು ಜೀವ ಸಂಕುಲದ ಅನ್ನದ ಸಮಸ್ಯೆಯನ್ನು ಕುರಿತದ್ದಾಗಿದೆ. ಬೇಂದ್ರೆಯವರು 'ಅನ್ನಪೂರ್ಣೆಯನ್ನು ಸ್ವತಂತ್ರ ಮಾಡುವವರಿಗೆ ಧರ್ಮವು ಅತಂತ್ರವಾಗಿರತಕ್ಕದ್ದು'ಎಂದು ನುಡಿದಿದ್ದಾರೆ. 'ತುತ್ತಿನ ಚೀಲ' ಅನ್ನುವ ಪ್ರತಿಮೆಯೇ ಅತ್ಯಂತ ಮಾರ್ಮಿಕವಾದುದು. ಇದನ್ನೇ ಕವಿ 'ಅನ್ನ ಬ್ರಹ್ಮದ ದೇಗುಲ'ವೆಂದು ಕರೆದಿದ್ದಾರೆ. ಬಡವನ ಅನ್ನದ ಸಮಸ್ಯೆಯನ್ನು ವೇದದ ಬಲೆಯಲ್ಲಿ, ಪಾಪ-ಪುಣ್ಯಗಳ ಜಾಳಿಗೆಯಲ್ಲಿ ನೇತು ಹಾಕಿದ್ದನ್ನು ಕಟುವಿಮರ್ಶೆಗೆ ಗುರಿಪಡಿಸಿದ್ದಾರೆ. ಬಡತನಕ್ಕೆ ಕಾರಣವಾದ ಶ್ರೀಮಂತರ ನಿಷ್ಕರಣೆಯನ್ನೂ ದೇವತೆಗಳ ಕುರುಡತನವನ್ನೂ ಬಡವನ ಸಮಸ್ಯೆಯ ಪರಿಹಾರಕ್ಕೆ ಬದಲಾಗಿ ವಾದ-ವಿವಾದಗಳಲ್ಲಿ ತೊಡಗಿದ ಆಡಳಿತ ವ್ಯವಸ್ಥೆಯನ್ನು ಮಾನವೀಯ ನೆಲೆಗಳಲ್ಲಿ ಶೋಧಿಸಿದ್ದಾರೆ.

ಪರಂಪರೆಯ ಆರ್ಥಿಕ ವ್ಯವಸ್ಥೆಗಿಂತ ಭಿನ್ನವಾದ ಅರ್ಥವ್ಯವಸ್ಥೆಯ ಹುಡುಕಾಟ ಇಂಥ ಕವಿತೆಗಳ ಹಿನ್ನೆಲೆಗಿದೆ. ಹಾಗೆಯೇ ದೇವರು-ಧರ್ಮ ಮೊದಲಾದ ಅರ್ಥಹೀನ ಆಚಾರ-ವಿಚಾರಗಳಿಗಿಂತ ಬೇಂದ್ರೆಯವರಿಗೆ ಮುಖ್ಯವಾಗಿ ಕಾಣುವುದು ಬದುಕಿನ ಶ್ರದ್ಧೆ ಹಾಗೂ ಒಟ್ಟು ಪರಿಸರದ ಬಗೆಗಿನ ಮಾನವೀಯತೆ. ಬಡತನದಿಂದ ಎದುರಾಗುವ ಅನ್ನದ ಸಮಸ್ಯೆಯನ್ನು ಬೇಂದ್ರೆ ತಮ್ಮ ಕಾವ್ಯದಲ್ಲಿ ಮತ್ತೆ ಮತ್ತೆ ಶೋಧನೆಗೆ ಗುರಿಪಡಿಸುತ್ತಾರೆ. ಅನ್ನ ಲೋಕದಲ್ಲಿದ್ದರೂ ಅದು ಕೆಲವೇ ಜನರ ಸೊತ್ತಾಗಿರುವುದನ್ನು ಕಂಡು 'ಪ್ರಾಣದೇವನು ನಿತ್ರಾಣನಾಗುತ ಅಂದ, ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ ಇನ್ನೂ ಬರಲಿಲ್ಲಾ' ಎಂದು ನೊಂದು ನುಡಿದಿದ್ದಾರೆ. ಇದೇ ರೀತಿಯ ವಿಚಾರಗಳು 'ಅನ್ನಯಜ್ಞ' ಕವಿತೆಯಲ್ಲಿಯೂ ಮುಂದುವರೆದಿದೆ.

ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ
ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ
ವಿಷದ ಒಡಲಿನಿಂದ ರಸದ ಊಟೆ ಚಿಮ್ಮಿ ಚೆಲ್ಲಲಿ
ಪ್ರೇಮವೆ ಹಣ್ಣಾಗಿ ಬರಲಿ ಕವಿಯ ಬಲ್ಲ ಸೊಲ್ಲಲಿ

ಹೊನ್ನ ನೆಕ್ಕಿ ಬಾಳ್ವರಿಲ್ಲ, ಅನ್ನ ಸೂರೆ ಮಾಡಿರಿ

ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಿಸಬೇಡಿರಿ[೩೫]

ಮನುಷ್ಯನ ಅತಿಯಾದ ಆಸೆಯಿಂದ ಎದುರಾದ ಅನ್ನದ ಸಮಸ್ಯೆ ಹಾಗೂ ಅದಕ್ಕೆ ಬಲಿಯಾದ ಬದುಕನ್ನು 'ಅನ್ನಯಜ್ಞ'ಕವಿತೆಯು ಅತ್ಯಂತ ಮಾರ್ಮಿಕವಾದ ನೆಲೆಯಲ್ಲಿ ಶೋಧಿಸಲು ತೊಡಗುತ್ತದೆ. 'ಬರುವ ಸಾವ ನೆನೆದು ಕೆಲವು ತಿನ್ನುತಿಹವು ಹೆಚ್ಚಿಗೆ', 'ಅನ್ನದಾನ ಮಹಾಯಜ್ಞ', 'ಸಾವಿಗಿಂತ ಬಾಳು ಮೇಲು' ಎಂಬ ಮಾತುಗಳು ಶೋಷಣೆಗೆ ಒಳಗಾದ ವ್ಯವಸ್ಥೆಯ ಬಗೆಗಿನ ಮರುಕ ಹಾಗೂ ಶ್ರದ್ಧೆಗಳನ್ನು, ಪ್ರತಿಭಟನೆಯನ್ನು ಸೂಚಿಸುತ್ತದೆ. 'ಹೊನ್ನ ನೆಕ್ಕಿ ಬಾಳ್ವರಿಲ್ಲಾ, ಅನ್ನ ಸೂರೆ ಮಾಡಿರಿ'ಎಂಬ ಮಾತು ಇಂತಹ ಕವಿತೆಗಳ ಒಟ್ಟು ಮನೋಧರ್ಮವನ್ನೇ ವಾಗ್ಮಾದಕ್ಕೆ ಒಳಪಡಿಸುವಂಥದು. ಹಾಗೆಯೇ ಇಂಥ ಅಮಾನವೀಯ ಧಾರ್ಮಿಕ ಸಂಪ್ರದಾಯಗಳ ಆಕ್ರಮಣದ ನೆಲೆಯನ್ನು ಸ್ತ್ರೀ ಸಂವೇದನೆಯ 'ಪುಟ್ಟವಿಧವೆ', 'ಹೆಣದ ಹಿಂದೆ' ಮುಂತಾದ ಕವಿತೆಗಳಲ್ಲಿ ಗುರುತಿಸಬಹುದು. ಹೆಣ್ಣಿನ ಸ್ವಾತಂತ್ರ್ಯ ಹರಣ ಹಾಗೂ ಸಾಮಾಜಿಕ ಕಟ್ಟುಪಾಡುಗಳ ಹೊರೆ, ಮುಂತಾದವುಗಳಿಂದ ತತ್ತರಿಸಿ ಹೋದ ಸಂವೇದನೆಯನ್ನು ಬೇಂದ್ರೆಯವರು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಹೆಣ್ಣು ಬೇಂದ್ರೆಯವರಿಗೆ ಇಡೀ ತಮ್ಮ ಬದುಕಿನ ಶ್ರದ್ಧೆಯ, ಸಂವೇದನೆಯ ಜೀವಂತ ಚೈತನ್ಯವಾಗಿ ರೂಪುಗೊಂಡಿದ್ದಾಳೆ.

ಕನ್ನಡ ನವೋದಯದ ಮತ್ತೊಂದು ಮುಖ್ಯ ಚಿಂತನೆಯೆಂದರೆ,ನೆಲ ಮತ್ತು ಮನುಷ್ಯ ಸಂಬಂಧ ಹಾಗೂ ಗಂಡು-ಹೆಣ್ಣುಗಳ ಪ್ರೇಮ. ಈ ಚಿಂತನೆ ಹಿಂದೆಯೇ ಕನ್ನಡ ಸಾಹಿತ್ಯದಲ್ಲಿ ನಡೆದಿದೆಯಾದರೂ, ಆಧುನಿಕ ಸಂದರ್ಭದಲ್ಲಿ ಭೂಮಿಗೆ ಜೀವಾರೋಪ ಮಾಡಿ, ಮಾನವೀಯ ನೆಲೆಯಲ್ಲಿ ಅರ್ಥೈಸುವ ಪರಿಕಲ್ಪನೆ ನವೋದಯ ಸಂದರ್ಭದ ಸ್ವರೂಪವಾಗಿದೆ. ಬೇಂದ್ರೆಯವರ ಕಾವ್ಯದಲ್ಲಿ ಭೂಮಿ ತಾಯ್ತನವನ್ನು, ಹೆಂಡತಿಯ ಜವಾಬ್ದಾರಿಯನ್ನು, ಶೋಷಿತಳ ಸಿಟ್ಟನ್ನು, ಅಬಲೆಯ ಅಸಹಾಯಕತೆಯನ್ನು ಸಂಕೇತಿಸುವ ಸಂಕೀರ್ಣ ಪಾತ್ರವಾಗಿ ಜೀವಂತವಾಗಿ ಕಾಣಿಸಿಕೊಳ್ಳುತ್ತಾಳೆ. ಈ ವಿಚಾರಗಳು ಅವರ ಪ್ರೇಮ, ಸಾವು, ದಾಂಪತ್ಯ ಗೀತೆಗಳಲ್ಲಿಯೂ ವಿಭಿನ್ನ ನೆಲೆಗಳಲ್ಲಿ ಮೈದಾಳಿವೆ. 'ಮೊದಲಗಿತ್ತಿ', 'ಓ ತಾಯಿ ಮಾಯಿ', 'ಭೂಮಿ ತಾಯಿ', 'ಚಿಗರಿಗಂಗಳ ಚೆಲುವೆ', 'ಧಾರವಾಡದ ತಾಯಿ', 'ಇಳೆ ಎಂದರೆ ಬರಿ ಮಣ್ಣಲ್ಲ' ಮೊದಲಾದ ಕವಿತೆಗಳಲ್ಲಿ ಸ್ಪಷ್ಟವಾಗಿ ಅಂಥ ವಿಚಾರಗಳು ಕಾಣುತ್ತವೆ. ಬೇಂದ್ರೆ ಕಂಡ ಭೂಮಿ ತಾಯ್ತನದ ಸಂಕೇತವಾಗುತ್ತಾಳೆ. ಹಾಗೆಯೇ ಅವರ ಕಾವ್ಯದ ವಸ್ತುವಾಗಿದ್ದಾಳೆ.

ನಿನ್ನ ನೆನವೇ ನನಗೆ ಪ್ರತಿ ಪ್ರತಿಭೆಯಾಗಿರಲು
ನಿನ್ನ ಮೂರ್ತಿಯ ಕಾವ್ಯವಸ್ತು ಮಾಡಿ
ಇನ್ನು ಮುನ್ನಿನ ಜನ್ಮ ಹಾಡಿ ಉದ್ಧರಿಸುವೆನು
ನಿನ್ನ ತೊಡೆಯಿರಲೆನೆಗೆ ಪವಡಿಸಲು ಆಡಿ.[೩೬]

- - - - - - - - - - - - - -

ತನ್ನ ತಾ ಸುತ್ತ್ಯಾಳೊ
ಹೊತ್ತಿನ ಬೆನ್ನತ್ತ್ಯಾಳೊ
ತಿಂಗಳಿನ ಬಗಲಾಗೆತ್ತ್ಯಾಳೊ
ಗೆಣೆಯಾ ಎತ್ತ್ಯಾಳೋ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ
ನಿಂತ ನೆಲವೆಂದು ಕಡಲಾಽಕೊ
ಹಡಿಲಾಽಕೊ
ಒಡಿಲಾಽಕೊ
ಒಡವ್ಯಲ್ಲೋ ಮಗನೆ ಉಸಿರಿದ್ದೊಡಲಂತಾಽಳೋ|| ಚಿಗರಿಗಂಗಳ.........[೩೭]

ಇಲ್ಲಿ ಪ್ರಧಾನವಾಗಿ ಪ್ರಕೃತಿ-ಪುರುಷನ ನಡುವಿನ ನಿರಂತರ ಸಂಘರ್ಷ ನಡೆದಿದೆ. ಜೀವನೋತ್ಸಾಹದ ಸಮೃದ್ಧತೆಯನ್ನು ತುಂಬಿಕೊಡುವ ಚಿತ್ರ ಒಂದು ಕಡೆಯಾದರೆ, ಈ ಒಡಲಿನಿಂದಲೇ ಜೀವ ಪಡೆದ ತಾನು, ತಾನು ಉಂಡ ಹಾಲನ್ನೇ ವಿಷವಾಗಿಸುವ ಮನುಷ್ಯನ ಕ್ರೌರ್ಯ ಮುಖಾಮುಖಿಯಾಗಿದೆ. ಮನುಷ್ಯನ ಹಿಂಸಕ ಶಕ್ತಿಯು ಪರಿಸರದ ಸೂಕ್ಷ್ಮತೆಗಳನ್ನು, ಸಮೃದ್ಧತೆಗಳನ್ನು ನಿರಂತರವಾಗಿ ಭಗ್ನಗೊಳಿಸುವುದರ ಬಗೆಗೆ ಆತಂಕ ಹಾಗೂ ರೋಧನದ ಸ್ಥಿತಿ ಇಂಥ ಕವಿತೆಗಳಲ್ಲಿದೆ. ತನ್ನ ಸಂಸ್ಕೃತೀಕರಣದ ಅಹಂಕಾರದಿಂದ ನಿಸರ್ಗವನ್ನು ‘ವಸ್ತು’ವನ್ನಾಗಿ ಗ್ರಹಿಸಿದ ಮನುಕುಲ ಎದುರಾಗಿಸಿದ, ಆಕ್ರಮಣದ ಆಘಾತಗಳನ್ನು ಕಂಡ ಭೂಮಿತಾಯಿಯ ಹೃದಯದಿಂದ ಹುಟ್ಟಿದ ಮಾತು ಹೀಗಿದೆ- “ಒಡವ್ಯಲ್ಲೋ ಮಗನೆ ಉಸಿರಿದ್ದೋಲಂತಽಳೋ”. ಆದರೆ, ‘ಮೊದಲಗಿತ್ತಿ’ ಕವನದ ಈ ಕೆಳಗಿನ ಸಾಲುಗಳು ಭೂಮಿತಾಯಿಯ ಬೇರೊಂದು ಮುಖವನ್ನು ಚಿತ್ರಿಸುತ್ತದೆ.

ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ|
ಮೊದಲಗಿತ್ತಿಯಂತೆ ಮೆರೆಯುತಿಹೆ ||ಪ||

ಹಿಂಡಾಗಿ ಪುಂಡರು ಅಂಡೆಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನ್ನು ಮಡಿಲಾಗ ಮಡಗಿಸಿಹೆ

ಹದಿನಾರು ರಾಜರು ತಲೆಕೆಳಗಾದರು
ಆದರು ತಲೆಯೆತ್ತಿ ನಿಂತಿರುವೆ
ನಿನ್ನ ತೇಜದ ಮುಂದೆ ರಾಜತೇಜವು ಕೂಸು!
ಮೊದಲಗಿತ್ತಿಯು ನೀನು ಮೆರೆಯುತಿಹೆ[೩೮]

ಮನುಷ್ಯನ ಆಕ್ರಮಣಶೀಲತೆಗೆ 'ಮೊದಲಗಿತ್ತಿ' ಎದುರಾಗುವ ಕ್ರಿಯೆಯು ಮಾರ್ಮಿಕವಾದುದು. ಅಂಥ ಮಾರ್ಮಿಕತೆಯ ಹಲವು ಮಜಲುಗಳನ್ನು ಡಾ|| ಡಿ.ಆರ್.ನಾಗರಾಜ್ ಅವರ ಈ ಕೆಳಗಿನ ಮಾತುಗಳಲ್ಲಿ ಕಾಣಬಹುದು.

> ಮನುಷ್ಯನ ಇತಿಹಾಸವೆಂದರೆ ಅವನ ಬರ್ಬರತೆಯ ಕಥನ ಕೂಡಾ ಎಂಬ ಮಾತನ್ನು ಮೇಲಿನ ಸಾಲುಗಳು ಸಮರ್ಥಿಸುತ್ತವೆ. ಭೂಮಿಗೆ ಬೆನ್ನು ಹತ್ತಿರುವ ಪುಂಡರೆಂದರೆ ರಾಜರೇ, ತಾಯಿಗ್ಗಂಡರು ಎಂದರೆ ಭೂಪತಿಗಳೇ, ರಾಜತ್ವದ ವಿರುದ್ಧ ಅತ್ಯಂತ ಉತ್ಕಟ ಪ್ರತಿಭಟನೆಯನ್ನು ಈ ಸಾಲುಗಳು ವ್ಯಕ್ತಪಡಿಸುತ್ತವೆ. ರಾಜತ್ವ ಎಂಬ ಸಂಸ್ಥೆಯೇ ಇತಿಹಾಸದಲ್ಲಿಯ ಅನೇಕ ಕ್ರೌರ್ಯಗಳಿಗೆ ಪ್ರೇರಣೆ. ರಾಜತ್ವವನ್ನು ಪಡೆಯಲೆಂದೇ ಮಹತ್ವಾಕಾಂಕ್ಷಿಗಳು ರಕ್ತದ ಹೊಳೆ ಹರಿಸುವುದು ಅಣ್ಣ ತಮ್ಮ-ತಾಯಿ-ತಂದೆ ಯಾರೂ ಈಗ ಮುಖ್ಯರಾಗುವುದಿಲ್ಲ. ಇನ್ನು ರಕ್ತಸಂಬಂಧ ಇಲ್ಲದ ಜನಸಾಮ್ಯಾನರ ಮಾತೇ ಬೇಡ. ಇತಿಹಾಸದ ರುದ್ರದರ್ಶನದಲ್ಲಿ ಈ ರಾಜತ್ವ ಎಂಬ ಸಂಸ್ಥೆಯೇ ಮುಖ್ಯ ಅಪರಾಧಿ ಲೋಕದ ಬದುಕಿನೊಳಗೆ ರಕ್ತಪಾತದ ಮೇಲೆ ನಿಂತ ಈ ಸಂಸ್ಥೆಗೆ ಸಹಜವಾಗಿ ಆದ್ಯತೆ ಸಲ್ಲುವುದರಿಂದ, ಉಳಿದ ಯಾವ ಅರ್ಥಪೂರ್ಣ ಮೌಲ್ಯಗಳೂ ಅದರ ಜೊತೆಗೆ, ಸಾಮರಸ್ಯ ಸಾಧಿಸಲಾರದೆ ಹೋಗುತ್ತದೆ.[೩೯]

'ಶಕ್ತಿ ಶಾರದೆಯ ಮೇಳ' ಮಹಾಪ್ರಬಂಧದಲ್ಲಿ ಡಾ|| ಡಿ.ಆರ್.ನಾಗರಾಜ್ ಅವರು 'ಬೇಂದ್ರೆ ಕಾವ್ಯದಲ್ಲಿ ಭೂಮಿಯ ದರ್ಶನ'ದ ಹಲವು ಮುಖಗಳನ್ನು ಅಧ್ಯಯನಕ್ಕೆ ಗುರಿಪಡಿಸಿರುವುದನ್ನು ಇಲ್ಲಿ ನೆನೆಯಬಹುದು.

ಬೇಂದ್ರೆಗೆ 'ತಾಯಿ' ತನ್ನ ಸೃಜನಕ್ರಿಯೆಯ ಜೀವಂತ ಸೆಲೆ. 'ವಿಶ್ವಮಾತೆ', 'ಭೂಮಿತಾಯಿ', 'ಭರತಮಾತೆ', 'ಕನ್ನಡ ತಾಯಿ', 'ನನ್ನ ತಾಯಿ' ಈ ಐದೂ ತಾಯಿಯರ ಹೃದಯದಲ್ಲಿ ಅರಳಿದ ದತ್ತನಾಗಿ ಬೇಂದ್ರೆ ನಡೆಸುವ ಶೋಧ ಅವರ ಕಾವ್ಯದ ಕೌಟುಂಬಿಕ ನೆಲೆಗಳಲ್ಲಿಯೂ ಮುಂದುವರಿಯುತ್ತದೆ. ಇವರ ದಾಂಪತ್ಯ ಕವಿತೆಗಳಲ್ಲಿ ಗಂಡು-ಹೆಣ್ಣುಗಳ ಸಂಭ್ರಮ, ಪ್ರೀತಿ, ದುಃಖ ಹಾಗೂ ಮೌನಗಳು ಮತ್ತೆ ಮತ್ತೆ ಆವರ್ತನಗೊಳ್ಳುತ್ತವೆ.

'ಸಖೀಗೀತ', 'ನೀ ಹೀಂಗ ನೋಡಬ್ಯಾಡ ನನ್ನ', 'ಹುದುಗಲಾರದ ದುಃಖ', 'ಮನದನ್ನೆ' ಕವಿತೆಗಳಲ್ಲಿ ಗಂಡು-ಹೆಣ್ಣುಗಳು ಮುಖಾಮುಖಿಯಾಗಿರುವುದರಿಂದ ಎದುರಾಗುವ ಬಂಧನ ಹಾಗೂ ಬಿಡುಗಡೆ, ವಿರಸ ಹಾಗೂ ದುಃಖ, ಆಂಥ ಅಸಂದರ್ಭ ಸೃಷ್ಟಿಕ್ರಿಯೆಗೆ ಒಳಗಾಗುವ ಹಿನ್ನೆಲೆ ಬೇಂದ್ರೆಯರಲ್ಲಿ ಅನನ್ಯವಾದದ್ದಾಗಿದೆ. 'ಸಖೀಗೀತ'ದಂಥ ದೀರ್ಘ ದಾಂಪತ್ಯ ಕವಿತೆಯಲ್ಲಿ ಸಖ-ಸಖಿಯರು ಅನುಭವಿಸಿದ ವೈಯಕ್ತಿಕ ಹಾಗೂ ಸಾಮಾಜಿಕ ಅನುಭವಗಳ ಸುಖ-ದುಃಖಗಳ ದಟ್ಟ ವಿವರಣೆಗಳಿವೆ. ದೇಶವು ಅನುಭವಿಸಿದ ದಾಸ್ಯದ ಸ್ಥಿತಿ, ನಿರುದ್ಯೋಗ ಬದುಕಿನ ವಿವಿಧ ಸ್ವರೂಪಗಳು, ತನ್ನ ಆಪ್ತರನ್ನು ಕಳೆದುಕೊಂಡ ನೆನಪುಗಳು, ಸಂಸಾರದ ಒಡಕಿನ ವಿವರಗಳು, ಅಂಥ ವಿವರಗಳ ಮಧ್ಯೆ ಸೃಜನಕ್ರಿಯೆಗೆ ಎದುರಾಗುವ ಘಟನೆಗಳು ವ್ಯಾಖ್ಯಾನಕ್ಕೆ ಒಳಗಾಗಿವೆ. ಹಾಗೆ ಒಳಗಾಗುತ್ತಲೇ ವೈಯಕ್ತಿಕ ಅನುಭವಗಳು ಸಾಧರಣೀಕರಣಗೊಳಿಸಿರುವ ಕ್ರಿಯೆ ವಿಸ್ಮಯದಿಂದ ಕೂಡಿದೆ. ಈ ಕವಿತೆ ಬರೀ ದಾಂಪತ್ಯ ನೆಲೆಯಲ್ಲಿ ನಿಲ್ಲದೆ ಇಡೀ ನವೋದಯ ಕಾಲದ ಎಲ್ಲ ರೀತಿಯ ಸಂಘರ್ಷಗಳಿಗೆ, ಶೋಧನೆಗಳಿಗೆ ಗುರಿಯಾಗುತ್ತಲೆ, ಇದೊಂದು ಸಾಂಸ್ಕೃತಿಕ ಚರಿತ್ರೆಯಾಗಿ ಮೈ ಪಡೆಯುತ್ತದೆ.

"ಸಖೀಗೀತ"ದ ಭಾಗವೇ ಆದ 'ಬಾಲ್ಯಕಾಂಡ' ದೀರ್ಘಕವನದಲ್ಲಿ ಈ ಶತಮಾನದ ಆದಿಯಲ್ಲಿನ ಪಾಶ್ಚಾತ್ಯ ಮತ್ತು ಪೌರಾತ್ಯ ಸಂಸ್ಕೃತಿಗಳ ಸಂಘರ್ಷ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿಸ್ತರಣೆಯ ವಿವರಗಳು, ರಾಷ್ಟ್ರಿಯ ಚಳುವಳಿಯ ಸ್ವರೂಪ, ಕ್ಷಾಮ ಮತ್ತು ಪ್ಲೇಗಿನಂಥ ರೋಗರುಜಿನಗಳಿಂದ ಎದುರಾದ ಸಂಕಟಗಳು ಮೈದಾಳುತ್ತವೆ. ಹಾಗೆಯೇ ಶಾಂತಕವಿ, ಕಾವ್ಯಾನಂದ ಪುಣೇಕರ್‌ರಂಥ ಲೇಖಕರ ಹಾಗೂ ಅರವಿಂದ, ರವೀಂದ್ರನಾಥ ಠಾಗೂರ್ ಮೊದಲಾದ ದಾರ್ಶನಿಕರ ವಿಚಾರಧಾರೆಯ ಪ್ರಭಾವಗಳು ಬೇಂದ್ರೆಯವರ ಕಾವ್ಯದಲ್ಲಿ ಹರಳುಗಟ್ಟುವ ಸೂಚನೆಗಳು ಇಲ್ಲಿ ಕಾಣುತ್ತವೆ. ಅಂತೆಯೇ ಇಂಗ್ಲಿಷ್ ಶಿಕ್ಷಣ-ಸಾಹಿತ್ಯಗಳು ದೇಶೀಯ ಸಾಂಸ್ಕೃತಿಕ ಬದುಕಿಗೆ ಮುಖಾಮುಖಿಯಾಗುವಂಥ ಸಂಕೀರ್ಣಾವಸ್ಥೆಗಳಲ್ಲಿಯೇ ಬೇಂದ್ರೆಯವರ ಸಂವೇದನೆ ಸೃಷ್ಟಿಕ್ರಿಯೆಯಲ್ಲಿ ತೊಡಗಿದ ವಿವರಗಳು ಕವನದ ಉದ್ದಕ್ಕೂ ದಟ್ಟವಾಗಿ ಬರುತ್ತವೆ. ಲಾವಣೀ-ಜಾನಪದ ಗೀತೆ ಹಾಗೂ ಪ್ರಾಚೀನ ಕಾವ್ಯಗಳ ಆಸ್ವಾದನಾ ನೆಲೆಗಳಲ್ಲಿಯೇ ಬೇಂದ್ರೆಯವರು ತಮ್ಮ ಕಾವ್ಯಶೈಲಿಯೊಂದನ್ನು ರೂಪಿಸಿಕೊಳ್ಳುತ್ತಿದ್ದ ವಿವರಗಳು ಎದುರಾಗುತ್ತವೆ.ಇಂಥ ಅಸಂಖ್ಯ ವಿವರಗಳ ಹಿಂದೆ ಅಂದಿನ ದೇಶೀಯ ಸಂವೇದನೆಯ ಹುಡುಕಾಟದ ನೆಲೆಗಳು ಮೈದಾಳುವುದನ್ನು ಕಾಣುತ್ತೇವೆ.ಹಾಗೆಯೇ ಇಂಥ ದೇಶೀ ಸಂವೇದನೆಯ ಹುಡುಕಾಟದ ನೆಲೆಗಳಿಂದಲೇ ಪಾಶ್ಚಾತ್ಯರ ಆಕ್ರಮಣ ಮತ್ತು ಕನ್ನಡ ನಾಡಿನ ಗಡಿನಾಡುಗಳಿಂದ ದೇಶೀಯ ಅನನ್ಯತೆಗಳಿಗೆ ಎದುರಾಗುತ್ತಿದ್ದ ಆತಂಕಗಳಿಗೆ ಪ್ರತಿರೋಧವೊಂದು ರೂಪುಗೊಳ್ಳುತ್ತಿದ್ದ ಸೂಚನೆಗಳು ಈ ಕಾವ್ಯದಲ್ಲಿ ಗುಪ್ತಗಾಮಿನಿಯಾಗಿ ಹರಡಿಕೊಂಡಿವೆ.

### ೬. ಪೂರ್ವ-ಪಶ್ಚಿಮಗಳ ಅನುಸಂಧಾನ

ನವೋದಯ ಸಾಹಿತ್ಯದಲ್ಲಿ ಪೂರ್ವ-ಪಶ್ಚಿಮಗಳ ಅನುಸಂಧಾನವು ಮುಖ್ಯ ಪ್ರಕ್ರಿಯೆಯಾಗಿ ಅಭಿವ್ಯಕ್ತಗೊಂಡಿದೆ. ಈ ಪ್ರಕ್ರಿಯೆ ವಸಾಹತುಶಾಹಿ ಸಂಸ್ಕೃತಿಯ ರಾಜಕೀಯ ನೆಲೆಗಳಿಗೆ ವಿರೋಧವನ್ನು ಒಡ್ಡುವುದು ಒಂದು ನೆಲೆಯದಾದರೆ ಸಾಂಸ್ಕೃತಿಕ ನೆಲೆಗಳೊಂದಿಗೆ ಕ್ರಿಯಾತ್ಮಕ ಅನುಸಂಧಾನ ನಡೆಸುವುದು ಮಹತ್ವದ ಕ್ರಿಯೆಯಾಗಿ ಕಾಣುತ್ತದೆ. ಬೇಂದ್ರೆ ಮತ್ತು ಕುವೆಂಪು ಅವರ ಸಾಹಿತ್ಯದಲ್ಲಿ ಈ ಪ್ರಕ್ರಿಯೆ ಮುಖ್ಯ ಜಿಜ್ಞಾಸೆಯಾಗಿ ಪ್ರಕಟಗೊಂಡಿದೆ. ಪಾಶ್ಚಾತ್ಯ ಸಾಂಸ್ಕೃತಿಕ ಸಂವೇದನೆ ಕುವೆಂಪು-ಬೇಂದ್ರೆಯವರ ಕಾವ್ಯದಲ್ಲಿ ಗುಪ್ತಾಗಾಮಿನಿಯಾಗಿ ಕೊಡುಕೊಳೆಯ ಸಂಧಾನವಾಗಿ ಕ್ರಿಯಾಶೀಲವಾಗುತ್ತದೆ. ಈ ಸಂಧಾನ ಹೊಸದೊಂದು ಸಾಂಸ್ಕೃತಿಕ ಸಂಘರ್ಷಕ್ಕೆ ಗುರಿಯಾಗುತ್ತಲೇ ದೇಶೀಯ ಸಾಂಸ್ಕೃತಿಕ ಮರುಹುಟ್ಟು ಪಡೆಯುವ ಕಡೆಗೆ ಚಲಿಸುತ್ತದೆ. ಇಂಥ ಕೊಡುಕೊಳೆಯ ಸಾಂಸ್ಕೃತಿಕ ಸಂಘರ್ಷಗಳು ದಾಸ್ಯದ ಮನಸ್ಥಿತಿಗಳಿಗೆ ಹೊಸ ಬೆಳಕನ್ನು, ಹೊಸ ಹಾದಿಯನ್ನು ಕಾಣಿಸಿದ್ದು ಈ ಶತಮಾನದ ಸಾಂಸ್ಕೃತಿಕ ಸಾಧನೆಯಾಗಿದೆ.

ನವೋದಯ ಪೂರ್ವ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ನೆಲೆಗಳಲ್ಲಿ ಎದುರಾಗಿದ್ದ ತಲ್ಲಣಗಳು ಜನತೆಯನ್ನು ಒಂದು ಬಗೆಯ ಅಧೀರತೆಗೆ ಗುರಿಯಾಗಿಸಿದ್ದರಿಂದಲೇ ಭಕ್ತಿಯ ಮತ್ತು ವೈರಾಗ್ಯದ ಹಾಡುಗಬ್ಬಗಳು ಹುಟ್ಟಿದವೆಂಬ ವಿಚಾರವನ್ನು ಕುವೆಂಪು ಅವರು ಮಂಡಿಸುತ್ತಾರೆ. ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿಯ ಸಾಹಿತ್ಯ ಮತ್ತು ವಿಜ್ಞಾನಗಳೊಂದಿಗೆ ಎದುರಾದ ಕನ್ನಡ ಸಂವೇದನೆ ಪಡೆದುಕೊಂಡ ಹೊಸ ದಿಕ್ಕುಗಳನ್ನು ಈ ಕೆಳಗಿನ ಉದ್ಧರಣೆಯಲ್ಲಿ ಕಾಣುತ್ತೇವೆ.

ಸುಮಾರು ಹದಿನಾರನೆಯ ಶತಮಾನದಿಂದ ಪ್ರಾರಂಭವಾದ ಹೊಸಗನ್ನಡ ಯುಗವು ಅಶಾಂತಿಯ ಕಾಲ, ಅವನತಿಯ ಕಾಲ, ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ಪ್ರಪಂಚಗಳೆಲ್ಲವೂ ವಿಕ್ಷುಬ್ಧವಾಗಿದ್ದ ಕಾಲ; ಸಂಕಟದ ಕಾಲ. ಜನತೆ ಹೋರಾಡಿ ಕೈಲಾಗದೆ ಕೆಳಗುರುಳಿದ ಕಾಲ. ಅಂತಹ ಶೋಕ ಸಮಯದಲ್ಲಿ ದಾಸ್ಯಭಾವ ತಲೆದೋರುತ್ತದೆ;ಹೆಚ್ಚುತ್ತದೆ. ಆದ್ದರಿಂದಲೆ ಸಾಹಿತ್ಯದಲ್ಲಿಯೂ ಭಕ್ತಿಯ ಮತ್ತು ವೈರಾಗ್ಯದ ಹಾಡುಗಬ್ಬಗಳು ಯಥೇಚ್ಛವಾಗಿ ಹುಟ್ಟಿದವು. ರಾಜಕೀಯ ಪ್ರಪಂಚದಲ್ಲಿ ಪಾಶ್ಚಾತ್ಯ ದೇಶಗಳ ಪ್ರಾಬಲ್ಯವು ಸರ್ವಶಕ್ತವೂ ಸರ್ವವ್ಯಾಪಿಯೂ ಆಗಿರುವ ಈ ಯುಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ, ಸಾಹಿತ್ಯದ ಮತ್ತು ವಿಜ್ಞಾನ ಪ್ರಭಾವದಿಂದ ದೂರವಾಗುವುದಾಗಲಿ ತಪ್ಪಿಸಿಕೊಳ್ಳುವುದಾಗಲಿ ಸಾಧ್ಯವೂ ಅಲ್ಲ, ಶ್ರೇಯಸ್ಸು ಅಲ್ಲ. ಈಗಾಗಲೇ ಇಂಗ್ಲಿಷ್ ವಿದ್ಯೆಯ ಥೇಮ್ಸ್ ನದಿ ಸಂಸ್ಕೃತದ ಭಾಗೀರಥಿ ಮತ್ತು ಕನ್ನಡ ಕಾವೇರಿಗಳೊಡನೆ ಸಂಗಮಿಸಿ ಹರಿಯತೊಡಗಿದೆ. ಹೊಸ ನೀರಿನ ಮಹಿಮೆಯಿಂದ ಹೊಸ ಹೊಸ ಪೈರು ಹಸುರಾಗಿ ಹುಲುಸಾಗಿ ಬೆಳೆಯಲಾರಂಭಿಸಿದೆ. ಕೊಯ್ಲಿನ ಪರಿಶೀಲನೆ ಮುಂದೆ ಬರುವವರಿಗಿರಲಿ'[೮೦]

ಈ ಮೇಲಿನ ಮಾತುಗಳಲ್ಲಿ ಕುವೆಂಪು ಅವರು ವಸಾಹತುಶಾಹಿ ಸಂಸ್ಕೃತಿಯು ಎದುರಾಗಿಸಿದ ದಾಸ್ಯದಿಂದ ಒದಗಿದ ದುರಂತಗಳನ್ನು, ಹಾಗೆಯೇ ಹೊಸ ಸಂಸ್ಕೃತಿಯೊಂದರ ಸಾಂಸ್ಕೃತಿಕ ಅನುಸಂಧಾನ ವರವಾಗಿ ಪರಿಣಮಿಸುವ ನೆಲೆಗಳನ್ನು ಕುರಿತು ಹೀಗೆ ಚಿಂತಿಸುತ್ತಾರೆ.

ಮೇಲಿನ ವಿವೇಚಿಸಿದ ಹಾಗೆ ಈ ಅನುಸಂಧಾನದ ಪ್ರಕ್ರಿಯೆ ತುಂಬ ಸಂಕೀರ್ಣ ಸ್ವರೂಪದ್ದು. ಅದರಲ್ಲಿಯೂ ಸೃಷ್ಟಿಶೀಲತೆಯ ಪ್ರಕ್ರಿಯೆಯಲ್ಲಿ ಅನುಸಂಧಾನದ ವಿವಿಧ ಬಗೆಗಳನ್ನು ಕನ್ನಡ ಲೇಖಕರು ಗುರುತಿಸಿಕೊಂಡರು. ಸಾಹಿತ್ಯ ಸೃಷ್ಟಿ ಹಾಗೂ ಸಾಮಾಜಿಕ ಸಂದರ್ಭ ಇವೆರಡೂ ಪ್ರತ್ಯೇಕವಲ್ಲವೆಂಬ ಧೋರಣೆ ಕನ್ನಡ ಸಾಹಿತ್ಯದ ಅಭಿವ್ಯಕ್ತಿಯ ಮುಖ್ಯ ಭಾಗ ಎಂಬುದನ್ನು ಕುವೆಂಪು, ಬೇಂದ್ರೆ, ಕಾರಂತ ಇತರರ ಚಿಂತನೆಗಳು ಸ್ಪಷ್ಟಪಡಿಸುತ್ತವೆ.

'ಆಧುನಿಕರನ್ನು ಹಾಡಲು ಪ್ರೇರೇಪಿಸುವ ಕಾರಣಗಳಾದರೂ ಆಧುನಿಕ ಚೇತನವಾದ ಆಂಗ್ಲ ಸಾಹಿತ್ಯ; ನವೋನವರೂಪಗಳಿಂದ ಮೆರೆಯುವ ಪಾಶ್ಚಿಮಾತ್ಯ ಸಾಹಿತ್ಯ, ನೂತನ ವಿಮರ್ಶಾ ದೃಷ್ಟಿಗೆ ಗೋಚರವಾಗುವ ಸಂಸ್ಕೃತ ಸಾಹಿತ್ಯದ ಹೊಸ ಜೀವಾಳ; ಭಾರತದ ಸಾಂಸ್ಕೃತಿಕ ಪುನರ್ಜೀವನ; ಅಸೇತು ಹಿಮಾಚಲವಿಷ್ಟೇ ಅಲ್ಲ- ಆದರೆ ಜಪಾನದ ಮೊದಲಿಂದ ಆ ಅಮೇರಿಕೆಯ ತುದಿಯವರೆಗೆ ಕಾಣುವ ವಿಪುಲ ಪೃಥ್ವಿಯ ಹೊಸ ಬಾಳುವೆ, ಸದ್ಯಶ್ಚರಿತ್ರೆ; ಹೊಸ ಕನ್ನಡದ ಹೊಸ ದೇಹ,ಹೊಸ ಪ್ರಾಣ ಇವೇ ಮೊದಲಾದ ವಿಷಯಗಳೂ ಸಂಗತಿಗಳೂ ಹೊಸ ಹಾದಿಯನ್ನೇ ಹುಡುಕಿಕೊಟ್ಟಿವೆ. ಆ ಹಾದಿಯನ್ನು ಆಧುನಿಕ ಕನ್ನಡ ಕವಿತೆಯು ತುಳಿಯುತ್ತಲಿದೆ. ಆಧುನಿಕವೆಂದಷ್ಟಕ್ಕೆ ಇದು ತೀರ ಪರಂಪರೆಯನ್ನು ಬಿಟ್ಟ ಕವಿತೆಯೆಂದು ಯಾರೂ ಭಾವಿಸಲಾಗದು. ಹಳೆಯ ಕವಿಗಳನ್ನು ಹೊಸ ಕಣ್ಣಿನಿಂದ ಅದು ನೋಡುತ್ತಿದೆ..... ಹೊಸದು ಹಳೆಯದರ ಕೂಡಲಸಂಗಮವು ಇದೇ.

ಆಧುನಿಕ ಕವಿತೆ ಹೀಗೆ ಹುಟ್ಟಿದುದೇನೋ ಸರಿ. ಆದರೆ ಅದರ ಕೊನೆಯು ಇಲ್ಲಿಗೇ ಆಗದು. ಜೀವದೊಡನೆ ಇನ್ನೂ ಅದು ಕಲೆಯಬೇಕಾಗಿದೆ, ಬೆರೆಯಬೇಕಾಗಿದೆ.ತನ್ನ ಜೀವಭಾವಗಳನ್ನು ಆಡಿ ತೋರಿಸುವ ಮಾತನ್ನು ಕಲಿಯಬೇಕಾಗಿದೆ; ಅದರಲ್ಲಿ ನುಡಿಯಬೇಕಾಗಿದೆ. ನಮ್ಮ ನಾಡಿಗೆ ತಕ್ಕ ನಿಸರ್ಗ

ವರ್ಣನಾಕಾವ್ಯವನ್ನು ಮೈದೋರಬೇಕು. ನಮ್ಮ ಸಂಸ್ಕೃತಿಗೆ ತಕ್ಕ ಆತ್ಮಾನುಭವದ ಕವಿತೆ ಇನ್ನೂ ತಲೆದೋರಲಿಲ್ಲ. ಆಧುನಿಕ ಈಗ ಆಡುತ್ತಿರುವದು-ಎಲ್ಲಿಯೋ ಗಿಳಿಮಾತು, ಗುಹಾಧ್ವನಿ, ಅಣಕ, ಅನುಕರಣ,ತೊದಲು. ಅದರ ಛಂದವೂ,ಬಂಧವೂ, ಆನಂದವೂ ಇನ್ನೂ-ಸಾಕಷ್ಟು ಪರಿಸ್ಫುಟವಾಗಿಲ್ಲ."[೪೧]

ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಚಿಂತನೆಗಳು ಕೇವಲ ಸಾಹಿತ್ಯಕ ಮಾತ್ರ ಅಲ್ಲ. ಸಾಹಿತ್ಯದ ಮುಖ್ಯ ಆಶಯಗಳು ಸಾಮಾಜಿಕವೂ-ಒಟ್ಟಂದದಲ್ಲಿ ಸಾಂಸ್ಕೃತಿಕವಾದದ್ದೂ ಆಗಿದೆ. ಹೊಸ ಕಾಲದ ಅಪೇಕ್ಷೆಗಳಿಗೆ ಬದ್ಧವಾಗುತ್ತಲೇ ಆ ಕಾಲದ ಸಂಕೀರ್ಣ ಸಮಸ್ಯೆಗಳ ಪರಿಶೀಲನೆ ಈ ಹೊತ್ತಿನ ನಮ್ಮ ಸಾಹಿತ್ಯದ ಮುಖ್ಯ ಆಶಯವಾಗಿದೆ.

ವಿಜ್ಞಾನ ಮತ್ತು ವೈಚಾರಿಕ ಜ್ಞಾನಶಾಖೆಗಳು ದೇಶೀಯ ಜಡಾವಸ್ಥೆಗಳಲ್ಲಿ ಚೈತನ್ಯವನ್ನು ಉಂಟುಮಾಡುವುದರೊಂದಿಗೆ ಪೂರ್ವ-ಪಶ್ಚಿಮಗಳ ಸಂಬಂಧಗಳು ಗಾಢವಾಗುತ್ತವೆ. ಅಂಥ ಗಾಢ ಸಂಬಂಧಗಳಿಂದ ನವಯುಗವೊಂದು ಎದುರಾಗುತ್ತದೆಂಬ ಭವಿಷ್ಯವನ್ನು ಬೇಂದ್ರೆ ಸಂವೇದನೆ ಈ ಕೆಳಕಂಡಂತೆ ನುಡಿಯುತ್ತದೆ.

ದಕ್ಷಿಣಾಪಥವಾಣಿ
ಉತ್ತರಕೆ ಚುಕ್ಕಾಣಿ
ಪೂರ್ವ-ಪಶ್ಚಿಮದಲ್ಲಿ ನಂಟು ಬೆಳೆದು
ಬಂದೀತು ನವಯುಗವು
    ನವರೂಪ ತಳೆದು
    ಜಯವಾಗತೈತೇ
  - - - - - - - - -
ನಮ್ಮ ಜಯ ಜಯಕಾರದಲ್ಲಿ ಮುಳುಗಿಸು
ನವಭಾರತವು ಬರಲಿ
ತೊಳ ತೊಳಗಿಸು.ಒಳ ತೊಳಗಿಸು
ಜಯಭೇರಿಯನು ಮೊಳಗಿಸು[೪೨]

ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣಗಳ ಸಂಬಂಧಗಳು ದೇಶೀಯ ಸಾಂಸ್ಕೃತಿಕ ನೆಲೆಗಳಿಗೆ 'ನವಯುಗ'ವೊಂದನ್ನು ತರುತ್ತವೆ. ಹಾಗೆಯೇ ಅಂಥ ಸಂಬಂಧಗಳು ಬಾಹ್ಯ ಮತ್ತು ಆಂತರಿಕ ಚೈತನ್ಯಗಳಿಗೆ ಅನುವು ಮಾಡಿಕೊಡುತ್ತವೆಂಬ ವಿಚಾರವೊಂದು ಬೇಂದ್ರೆಯವರ ಕಾವ್ಯದಲ್ಲಿ ನಿರಂತರವಾಗಿ ಪ್ರಕಟವಾಗುತ್ತದೆ. ಮೂಡಲ ಮತ್ತು ಪಡುವಲದ ಸಂಯೋಗವು ಕತ್ತಲೆಯನ್ನು ದೂರಮಾಡಿ ಬೆಳಕನ್ನೂ, ಮೃತ್ಯುವನ್ನು ಕತ್ತರಿಸಿ ಬಾಳಿಗೆ ಅಮೃತವನ್ನೂ ತಂದೀತೆಂಬ ಕಾಣ್ಕೆಯನ್ನು 'ಇದು ನಭೋವಾಣಿ' ಕವಿತೆಯಲ್ಲಿ ಪ್ರಕಟಿಸುತ್ತಾರೆ.

ಮೂಡಲವ ಪಡುವಲವ ಸುತ್ತಿ ಹಾಕಿ ಬರುತ್ತಿರುವ ನಭೋವಾಣಿಗೆ 'ಜೇನು ಹುಟ್ಟು'ಕಟ್ಟಲು ನಿಮ್ಮ ಹೃದಯಗಳಲ್ಲಿ ಆಶ್ರಯ ಕೊಡಬೇಕೆಂಬ ಕರೆಯನ್ನು ಕೊಡುವುದರೊಂದಿಗೆ, ಅಂಥ ಆಶ್ರಯದಿಂದ ಪೂರ್ವ-ಪಶ್ಚಿಮಗಳ ವೈಷಮ್ಯ

ಹರಿದು ಹೋಗಿ ಸಾಮರಸ್ಯ ಮೈ ಪಡೆಯುತ್ತದೆಂಬ ದರ್ಶನವನ್ನು ಕಾಣಿಸುತ್ತಾರೆ. ಪೂರ್ವ-ಪಶ್ಚಿಮಗಳ ಸಾಮರಸ್ಯ, ಬಾಂಧವ್ಯಗಳು ಎಲ್ಲರ ನಡೆ-ನುಡಿಗಳಲ್ಲಿ ಪ್ರಕಟವಾಗುವಂತೆ ಕರುಣಿಸೆಂಬ ನಿವೇದನೆಯನ್ನು 'ಭಾರತ ನವಶಕ್ತಿ'ಕವಿತೆಯಲ್ಲಿ ಕಾಣುತ್ತೇವೆ.

............ ಭಾರತ ನವಶಕ್ತಿ!
ನಮ್ಮಾತ್ಮವೆ, ಪರಮಾತ್ಮವೆ, ಕರುಣಿಸು ತವಭಕ್ತಿ
- - - - - - - - - - - - - - -
ಎಂದೆಂದೂ ಈ ಮಕ್ಕಳ ಕೈ ಮೈ ಹಿಡಿದಾಕೇ!
ಯಾರಾರಿಗೊ ಬಾಗಿದರೂ ನಮ್ಮೆದೆ ಬಿಡದಾಕೇ!
ಆಪತ್ತನು ತಡೆದಾಕೇ, ಜೊತೆ ಜೊತೆ ನಡೆದಾಕೇ!
- - - - - - - - - - - - - - -
ತೆರೆದಿರುವೀ ಬಿಡುಗಡೆಯಾಗಲಿ ಜಗದುದಯಾ-
ಹಿಗ್ಗುತಿರಲಿ ಸನ್ಮಹಿಮೆಯ ನವದಿಗ್ವಲಯಾ-
ನಾಡನಾಡಿಗಿದು ನೀಡಲಿ ಬಾಳ್ಕಾಣಿಕೆಯಾ-[೪೩]

ನಿರಂತರವಾಗಿ ಪರಕೀಯ ಆಕ್ರಮಣಗಳಿಗೆ ಗುರಿಯಾದರೂ, ಅಂಥ ಪರಕೀಯ ಆಕ್ರಮಣಗಳಿಂದ ಎದುರಾದ ಆಪತ್ತುಗಳೆಲ್ಲವನ್ನು ತಡೆದುಕೊಳ್ಳುತ್ತಲೇ ಭಾರತೀಯರನ್ನು ಕೈಬಿಡದೆ ನಡೆಸಿದ ತಾಯಿಯ ಶಕ್ತಿಯ ಬಗೆಗೆ ಪ್ರಶಂಸೆಯನ್ನು, ಕೃತಜ್ಞತೆಯನ್ನು ಇಲ್ಲಿ ಕಾಣುತ್ತೇವೆ. ಸಾಮ್ರಾಜ್ಯಶಾಹಿಗಳಿಂದ ಎದುರಾಗುವ ಅನರ್ಥಗಳು ಇಲ್ಲವಾಗಿ, ದೇಶ-ದೇಶಗಳಲ್ಲಿ, ಮನುಷ್ಯ-ಮನುಷ್ಯರಲ್ಲಿ ಸಾಮರಸ್ಯ ಏರ್ಪಡುವಂತೆ ನಡೆಸು, ನುಡಿಸು ಎಂದು ಪ್ರಾರ್ಥಿಸುತ್ತಾರೆ. ಭಾರತಿಗೆ ದೊರೆತಿರುವ ಬಿಡುಗಡೆಯು ನಾಡ-ನುಡಿಗೆ ಬಾಳಿನ ಕಾಣ್ಕೆಯಾಗಲಿ ಎಂಬ ಆಶಯ ಈ ಕವನದಲ್ಲಿ ಮೈದಾಳುತ್ತದೆ.

**ಅಡಿಟಿಪ್ಪಣಿ**

೦೧. ಅಂಬಿಕಾತನಯದತ್ತ: *ಗರಿ,* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-೨,

೦೨. ಅಂಬಿಕಾತನಯದತ್ತ: (ಸಂ). *ನನ್ನದು ಈ ಕನ್ನಡ ನಾಡು,* ಪ್ರ. ಜೋಶಿ ಶಂಕರರಾಯ, ಸಾದನಕೆರೆ, ಧಾರವಾಡ, ಗೆಳೆಯರ ಗುಂಪು,೧೯೨೮, ಪು:೧,

೦೩. ಬೇಂದ್ರೆ: *ವಿಚಾರ ಮಂಜರಿ,* ಗೀತಾಬುಕ್ ಹೌಸ್, ಮೈಸೂರು, ೧೯೬೯, ಪುಟ-೬೬,

೦೪. ಅಂಬಿಕಾತನಯದತ್ತ : *ಗರಿ,* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-೪

೦೫. ಅದೇ ಪುಟ-:೧೨

೦೬. ಅದೇ ಪುಟ-೧೬

೦೭. *ಪ್ರಬುದ್ಧ ಕರ್ನಾಟಕ,* ಮೈಸೂರು ವಿಶ್ವವಿದ್ಯಾಲಯ,೧೯೫೫, ಸಂ:೧೬

೦೮. ಅಂಬಿಕಾತನಯದತ್ತ : *ಗರಿ* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-೨೮,

೦೯. ಅದೇ ಪುಟ-೪೦-೪೧

೧೦. ಅದೇ ಪುಟ-೫೦

೧೧. ಅದೇ ಪುಟ-೫೧

೧೨. ಅದೇ ಪುಟ-೫೩

೧೩. ಅಂಬಿಕಾತನಯದತ್ತ : ಅದೇ (ಭಾವ ಸಂದರ್ಭ-ಸೂಚನೆ) ಪುಟ-೨

೧೪. ಅಂಬಿಕಾತನಯದತ್ತ : *ಸಂಚಯ* ಸಮಾಜ ಪುಸ್ತಕಾಲಯ, ಧಾರವಾಡ,೧೯೫೯,ಪುಟ-೮೮,

೧೫. ಅದೇ ಪುಟ-೮೯

೧೬. ಅಂಬಿಕಾತನಯದತ್ತ : *ಗಂಗಾವತರಣ* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-:೫೫,

೧೭. ಅಂಬಿಕಾತನಯದತ್ತ : *ಯಕ್ಷಾ-ಯಕ್ಷಿ* ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨, ಪುಟ-೪೯-೫೧

೧೮. ಬೇಂದ್ರೆ ದ.ರಾ. : *ವಿಚಾರ ಮಂಜರಿ* ಗೀತಾ ಬುಕ್ ಹೌಸ್, ಮೈಸೂರು, ೧೯೬೯, ಪುಟ-೪೬-೪೭

೧೯. ಅಂಬಿಕಾತನಯದತ್ತ : *ಗರಿ* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-೧೨೨-೧೨೫

೨೦. ಅಂಬಿಕಾತನಯದತ್ತ : *ಗರಿ* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-೧೨೨-೧೨೫

೨೧. ಅಂಬಿಕಾತನಯ ದತ್ತ : *ನಾದಲೀಲೆ* ಪ್ರತಿಭಾ ಗ್ರಂಥ ಮಾಲೆ, ಧಾರವಾಡ,೧೯೫೫,ಪುಟ-೧

೨೨. ಅದೇ, ಪುಟ-೨

೨೩. ಅಂಬಿಕಾತನಯದತ್ತ : *ಸಖೀಗೀತ* ಶ್ರೀಮಾತಾ ಪ್ರಕಾಶನ, ಧಾರವಾಡ,೧೯೮೭,ಪುಟ-೪೨

೨೪. ಅಂಬಿಕಾತನಯದತ್ತ : *ನಾದಲೀಲೆ* ಪ್ರತಿಭಾ ಗ್ರಂಥಮಾಲೆ, ಧಾರವಾಡ,೧೯೫೫,ಪುಟ-೪೬

೨೫. ಅದೇ, ಪುಟ-೪೭-೪೮

೨೬. ಅಂಬಿಕಾತನಯದತ್ತ : *ಉಯ್ಯಾಲೆ* ಸಮಾಜ ಪುಸ್ತಕಾಲಯ, ಧಾರವಾಡ,೧೯೫೮,ಪುಟ-೭೪

೨೭. ಅಂಬಿಕಾತನಯದತ್ತ : *ಅರಳು ಮರಳು* ಶ್ರೀಮಾತಾ ಪ್ರಕಾಶನ, ಧಾರವಾಡ,೧೯೫೫,ಪುಟ-೨೯

೨೮. ಅದೇ, ಪುಟ-೨೯

೨೯. ರಾಜೇಂದ್ರ ಚೆನ್ನಿ : *ಬೇಂದ್ರೆ ಕಾವ್ಯ*, ಸಂಪ್ರದಾಯ ಮತ್ತು ಸ್ವಂತಿಕೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೮೯, ಪುಟ-೧೦,

೩೦. ಅಂಬಿಕಾತನಯದತ್ತ : *ಉಯ್ಯಾಲೆ* ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮, ಪುಟ-೩೦

೩೧. ಅಂಬಿಕಾತನಯದತ್ತ : *ಬಾ ಹತ್ತ* ಗೀತಾ ಬುಕ್ ಹೌಸ್, ಮೈಸೂರು,೧೯೭೦, ಪುಟ-೧೫೬

೩೨. ಅಂಬಿಕಾತನಯದತ್ತ : *ನಾದಲೀಲೆ* ಪ್ರತಿಭಾ ಗ್ರಂಥಮಾಲೆ, ಧಾರವಾಡ,೧೯೫೫, ಪುಟ-೪೮

೩೩. ಅದೇ, ಪುಟ-೪೮

೩೪. ಅಂಬಿಕಾತನಯದತ್ತ : *ಗರಿ* ಮನೋಹರ ಗ್ರಂಥ ಪ್ರಕಾಶನ, ಸಮಿತಿ, ಧಾರವಾಡ,೧೯೫೧,ಪುಟ-೫೦

೩೫. ಅಂಬಿಕಾತನಯದತ್ತ : *ನಾದಲೀಲೆ* ಪ್ರತಿಭಾ ಗ್ರಂಥಮಾಲೆ, ಧಾರವಾಡ,೧೯೫೫, ಪುಟ-:೮೦

೩೬. ಅಂಬಿಕಾತನಯದತ್ತ : *ಗರಿ* ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ,೧೯೫೧,ಪುಟ-೨೭

೩೭. ಅಂಬಿಕಾತನಯದತ್ತ : *ಸಖೀಗೀತಾ* ಶ್ರಿಮಾತಾ ಪ್ರಕಾಶನ, ಧಾರವಾಡ,೧೯೮೭, ಪುಟ-೯೭

೩೮. ಅಂಬಿಕಾತನಯದತ್ತ : *ನಾದಲೀಲೆ* ಪ್ರತಿಭಾ ಗ್ರಂಥಮಾಲೆ, ಧಾರವಾಡ,೧೯೫೫,ಪುಟ-೪೧

೩೯. ನಾಗರಾಜ್ ಡಿ.ಆರ್ : *ಶಕ್ತಿ-ಶಾರದೆಯ ಮೇಳ* ಅಕ್ಷರ ಪ್ರಕಾಶನ, ಸಾಗರ,೧೯೯೩, ಪುಟ-೫೨

೪೦. ಕುವೆಂಪು : *ಸಾಹಿತ್ಯ ಪ್ರಚಾರ* ಉದಯರವಿ ಪ್ರಕಾಶನ, ಮೈಸೂರು,೧೯೭೨, ಪುಟ-೬೧-೬೨

೪೧. ಬೇಂದ್ರೆ ದ.ರಾ.: *ಸಾಹಿತ್ಯ ವಿರಾಟ ಸ್ವರೂಪ* ಸಮಾಜ ಪುಸ್ತಕಾಲಯ, ಧಾರವಾಡ,೧೯೭೪,ಪುಟ-೨೪೨-೨೪೩

೪೨. ಅಂಬಿಕಾತನಯದತ್ತ : *ಮರ್ಯಾದೆ* ಸಮಾಜ ಪುಸ್ತಕಾಲಯ, ಧಾರವಾಡ,೧೯೬೬,ಪುಟ-೧೯-೨೧

೪೩. ಅಂಬಿಕಾತನಯದತ್ತ : *ವಿನಯ* ಗೀತಾಬುಕ್ ಹೌಸ್, ಮೈಸೂರು,೧೯೭೮,ಪುಟ-೯೭

# ಅಧ್ಯಾಯ : ಐದು

## ಕುವೆಂಪು ಕಾವ್ಯ : ಪುರೋಹಿತಶಾಹಿ, ವಸಾಹತುಶಾಹಿ

೧. ಸಾಂಸ್ಕೃತಿಕ ಸಂಕೀರ್ಣತೆಗಳು : ಪ್ರತಿಕ್ರಿಯೆ

ಕುವೆಂಪು ಈ ಶತಮಾನದ ಕನ್ನಡ ಸಾಹಿತ್ಯದ ಶ್ರೇಷ್ಠ ಕವಿ, ಕಾದಂಬರಿಕಾರ, ವಿಮರ್ಶಕ ಹಾಗೂ ಚಿಂತಕ. ಈ ಶತಮಾನದ ಆದಿಯಲ್ಲಿ ಜನಿಸಿದ ಇವರು ಕನ್ನಡ ಸಾಹಿತ್ಯಕ್ಕೆ ಹೊಸ ಹೊಸ ಆಯಾಮಗಳನ್ನು ತಂದುಕೊಟ್ಟವರು. ತಮ್ಮ ಕೃತಿಗಳಲ್ಲಿ ಸನಾತನ ಚಿಂತನೆಗಳಿಗೆ ಆಧುನಿಕ ವೈಚಾರಿಕ ಹಾಗೂ ವೈಜ್ಞಾನಿಕ ಆಯಾಮಗಳನ್ನು ಮುಖಾಮುಖಿಯಾಗಿಸಿದವರು. ಹಾಗೆಯೇ ತಮ್ಮ ಕೃತಿಗಳ ಮೂಲಕ ಪುರಾಣಗಳನ್ನು ಮರು ವ್ಯಾಖ್ಯಾನಕ್ಕೆ ಗುರಿಪಡಿಸಿ ಹೊಸ ಮೌಲ್ಯಗಳ ಆವಿಷ್ಕಾರಕ್ಕೆ ಅನ್ವೇಷಣೆಗೆ ತೊಡಗಿದರು. ಆಯಾ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ ನೆಲೆಗಳಿಗೆ ನಿರಂತರವಾಗಿ ಪ್ರತಿಕ್ರಿಯಿಸುವುದು ಅವರ ಒಟ್ಟು ಸಾಹಿತ್ಯದ ಕೇಂದ್ರ ಚಿಂತನಾ ನೆಲೆ. ಅವೈಜ್ಞಾನಿಕ ಅವೈಚಾರಿಕ ಮೌಲ್ಯಗಳನ್ನು ವಿಮರ್ಶಿಸಿ ಮಾನವೀಯ ಮೌಲ್ಯಗಳ ಶೋಧನೆಗೆ ತೊಡಗಿದ್ದು ಕುವೆಂಪು ಅವರ ಸಂವೇದನೆಯ ವೈಶಿಷ್ಟ್ಯವಾಗಿದೆ. ಹೀಗಾಗಿ ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ಅವರ ಕೃತಿಗಳಿಂದ ಉತ್ಪನ್ನವಾಗುವ ವೈಚಾರಿಕ ಆಕೃತಿಗಳು ಅಭ್ಯಾಸ ಯೋಗ್ಯವಾದದ್ದಾಗಿವೆ. ಅಂತೆಯೇ ಪುರೋಹಿತಶಾಹಿ ವ್ಯವಸ್ಥೆಯು ಸೃಷ್ಟಿಸಿದ ಮತೀಯ ಹಾಗೂ ಮೌಢ್ಯ ಪ್ರಪಂಚಕ್ಕೆ ಇವರ ಕೃತಿಗಳು ತೋರುವ ಪ್ರತಿಕ್ರಿಯೆ ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ವಿಶಿಷ್ಟವಾದದ್ದು. ಈ ಎಲ್ಲ ವಿಶಿಷ್ಟ ಅಂಶಗಳು ಅವರ ಸಮಗ್ರ ಕೃತಿ ಸಮೂಹದ ಮೂಲಕ ನಮ್ಮ ಅನುಭವಕ್ಕೆ ತಂದುಕೊಡುತ್ತದೆ. ಹಾಗೆಯೇ ಕುವೆಂಪು ಅವರ ಕೃತಿಗಳ ಪ್ರತಿ ಓದು ಸಮಕಾಲೀನವಾಗುತ್ತಾ ಹೋಗುವುದರೊಂದಿಗೆ ಸಮಕಾಲೀನ ಸಮಸ್ಯೆಗಳಿಗೆ ಪ್ರತಿಕ್ರಿಯಿಸುತ್ತಾ ಹೊಸ ದರ್ಶನವೊಂದನ್ನು ಕಟ್ಟಿಕೊಡುತ್ತದೆ.

ವಸಾಹತುಶಾಹಿ ಸಂಸ್ಕೃತಿಗೆ ಸಂಪೂರ್ಣವಾಗಿ ದೇಶವು ಅಧೀನವಾದ ಕಾಲಮಾನದಲ್ಲಿ ಬರವಣಿಗೆಯಲ್ಲಿ ತೊಡಗಿದ ಕುವೆಂಪು ಅವರು ಆ ಸಂಸ್ಕೃತಿಯ ಆಕರ್ಷಣೆ - ವಿಕರ್ಷಣೆಗಳಿಗೆ ಒಳಗಾಗಿದ್ದು ಆ ಕಾಲಮಾನದ ಚಾರಿತ್ರಿಕ ಸಂಗತಿಗಳ ವಾಸ್ತವತೆಯನ್ನು ಸೂಚಿಸುತ್ತದೆ. ಅಂದರೆ ವಸಾಹತುಶಾಹಿ ಸಂಸ್ಕೃತಿಯ ಹೊಸ ವಿಚಾರಗಳು ಕುವೆಂಪು ಅವರಂತೆಯೇ

ಆ ಕಾಲದ ಅನೇಕರನ್ನು ಆಕರ್ಷಿಸಿದ್ದವು. ಹಾಗಿದ್ದು ಕುವೆಂಪು ಅವರ ಸಂವೇದನೆ ಸಾಂಪ್ರದಾಯಿಕ ವೈದಿಕ ಸಂಸ್ಕೃತಿ ಹಾಗೂ ವಸಾಹತು ಸಂಸ್ಕೃತಿಗಳಿಗೆ ಏಕಕಾಲದಲ್ಲಿ ಮುಖಾಮುಖಿಯಾದ ಬಗೆ ಕನ್ನಡ ಸಾಹಿತ್ಯದಲ್ಲಿಯೇ ಹೆಚ್ಚು ಗಂಭೀರವಾದದ್ದಾಗಿದೆ. ಪುರೋಹಿತಶಾಹಿಯ ನಿರ್ಮಿತಿಗಳಾದ ಮತಾಂಧತೆ, ಜಾತೀಯತೆ, ಧಾರ್ಮಿಕ ಮೌಢ್ಯಗಳಿಂದಾಗಿ ಭಾರತೀಯ ಸಮಾಜದಲ್ಲಿ ಸೃಷ್ಟಿಸಿದ್ದ ನಿಷ್ಕ್ರಿಯತೆಯನ್ನು ಹಾಗೂ ಅದಕ್ಕೆ ಕಾರಣಗಳನ್ನು ಶೋಧಿಸಲು ಕುವೆಂಪು ಅವರ ಸೃಷ್ಟಿಶೀಲತೆ ತೊಡಗಿತು. ಪರಕೀಯ ಸಂಸ್ಕೃತಿಯು ಹೇರುವ ಮೌಲ್ಯಗಳನ್ನು ತಾತ್ತ್ವಿಕವಾಗಿ ಪ್ರಶ್ನಿಸುವ ಪರಿಶೀಲಿಸುವ ಅವರ ಧೋರಣೆಗಳು ಗಮನಾರ್ಹವಾದದ್ದಾಗಿವೆ.

ಕುವೆಂಪು ಅವರ ಈ ಬಗೆಯ ಧೋರಣೆಗಳು ಒಳ ಮತ್ತು ಹೊರಗಿನ ಸಂಸ್ಕೃತಿಗಳು ಹೇರುವ ಹಾಗೂ ಶೋಷಿಸುವ ಸ್ಥಿತಿಗತಿಗಳನ್ನು ಕಂಡು ಸಿಡಿದೇಳುತ್ತವೆ. ವೈಚಾರಿಕ - ವೈಜ್ಞಾನಿಕ ನಿಕಷಕ್ಕೆ ಒಂದು ಸಿದ್ಧ ಮೌಲ್ಯವ್ಯವಸ್ಥೆಯನ್ನು ಗುರಿಪಡಿಸುವ ಕ್ರಮ ಅವರ ಎಲ್ಲ ಕೃತಿಗಳ ಮುಖ್ಯ ಆಶಯವಾಗಿದೆ. ಇದರ ಜೊತೆಯಲ್ಲಿಯೇ ವಸಾಹತು ಸಂಸ್ಕೃತಿಯು ತಂದ ವಿಸ್ಮಯ ಹಾಗೂ ಸಮಸ್ಯೆಗಳಿಗೆ ಅವರ ಕೃತಿಗಳು ಪ್ರತಿಕ್ರಿಯಿಸುವ ಪ್ರಕ್ರಿಯೆಯೂ ಅತ್ಯಂತ ಸಂಕೀರ್ಣವಾದುದು. ಅಂದರೆ ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಳ್ಳುವ ಸಂಕೀರ್ಣತೆಯು ವೈದಿಕ ಹಾಗೂ ವಸಾಹತುಶಾಹಿ ವ್ಯವಸ್ಥೆಗಳೆರಡರ ಸ್ವೀಕರಣೆ ಮತ್ತು ನಿರಾಕರಣೆಯ ನೆಲೆಗಳಲ್ಲಿ ಪ್ರಕಟವಾಗುತ್ತದೆ. ವಸಾಹತು ಸಂಸ್ಕೃತಿಯ ಆಗಮನದಿಂದ ಪರಿಚಿತವಾದ ಸಾಹಿತ್ಯ ಹಾಗೂ ವೈಚಾರಿಕ ಚಿಂತನೆಗಳಿಗೆ ಮಾರುಹೋದ ಕುವೆಂಪು ಅವರ ಸಂವೇದನೆ, ಪರಕೀಯ ರಾಜಕೀಯ, ಧಾರ್ಮಿಕ ವ್ಯವಸ್ಥೆಗಳಿಗೆ ಒಡ್ಡುವ ಪ್ರತಿಕ್ರಿಯೆಗಳು ವಿಸ್ಮಯಕಾರಿಯಾಗಿ ಕಾಣುತ್ತದೆ. ಏಕಕಾಲಕ್ಕೆ ವ್ಯವಸ್ಥೆಗಳ ಜಡಾವಸ್ಥೆಗಳಿಗೆ ತೋರುವ ಈ ರೀತಿಯ ಮಿಶ್ರ ಪ್ರತಿಕ್ರಿಯೆ ಸೃಷ್ಟಿಸುವ ದ್ವಂದಗಳಿಗೆ ಕುವೆಂಪು ಕೃತಿಗಳ ಅಧ್ಯಯನದಿಂದ ಉತ್ತರಗಳನ್ನು ಕಂಡುಕೊಳ್ಳಬಹುದು. ಈ ಬಗೆಯ ದ್ವಂದ್ವ ವೈದಿಕ ಸಂಸ್ಕೃತಿಯಲ್ಲಿನ ಮಾನವೀಯ ಮೌಲ್ಯಗಳ ಆಯ್ಕೆಗಳು ಹಾಗೂ ಅಮಾನವೀಯ ಮೌಲ್ಯಗಳ ನಿರಾಕರಣೆಯ ಸಂದರ್ಭದಲ್ಲಿಯೂ ಎದುರಾಗುತ್ತವೆ. ಅಂದರೆ, ಅಮಾನವೀಯ ನೆಲೆಗಳನ್ನು ವಿಮರ್ಶೆ, ವಿಶ್ಲೇಷಣೆಗಳಿಗೆ ಒಳಪಡಿಸುವುದು ಇವರ ಕೃತಿಗಳ ಮೂಲಧಾತು. ಹೀಗಾಗಿ ಕುವೆಂಪು ಅವರ ಕೃತಿಗಳ ಅಧ್ಯಯನದಿಂದ ವೈದಿಕ ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯೊಂದಿಗೆ ವಸಾಹತು ಸಂಸ್ಕೃತಿಗೆ ತೋರಿದ ಪ್ರಕ್ರಿಯೆಯನ್ನು ಕಾಣುತ್ತೇವೆ. ಆದ್ದರಿಂದ ಈ ಬರಹಕ್ಕೆ 'ಕುವೆಂಪು ಅವರ ಕಾವ್ಯ ವಸಾಹತು ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯನ್ನು ಕುರಿತ ಅಧ್ಯಯನ' ಎಂಬ ತಲೆಬರಹವಿದ್ದರೂ, ಕುವೆಂಪು ಸಾಹಿತ್ಯ ಯಾವುದೇ ಬಗೆಯ ಆಕ್ರಮಣಕಾರಿ ವ್ಯವಸ್ಥೆಗೆ ತೋರಿದ ಪ್ರಕ್ರಿಯೆಯೇ ಆಗಿದೆ ಎಂಬ ನಿಲುವಿನಿಂದ ಈ ಅಧ್ಯಯನವನ್ನು ನಡೆಸಲಾಗಿದೆ.

ಕುವೆಂಪು ಅವರು ಬರೆಯಲು ತೊಡಗಿದ ಕಾಲಕ್ಕೆ ಭಾರತ ಸಂಪೂರ್ಣವಾಗಿ ಬ್ರಿಟಿಷರ ಕೈವಶವಾಗಿತ್ತು. ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಅನೇಕ ಗೊಂದಲಗಳು ಎದುರಾಗಿದ್ದವು. ಒಂದು ಕಡೆ ಪಾಶ್ಚಾತ್ಯ ಚಿಂತನಧಾರೆಯ ಆಕರ್ಷಣೆ, ಮತ್ತೊಂದು ಕಡೆ ಪರಮಹಂಸ, ವಿವೇಕಾನಂದ, ತಿಲಕ್ , ಗಾಂಧಿಯವರ ಚಿಂತನೆಗಳು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ದೇಶದಲ್ಲಿ ಗಾಢವಾಗಿ ಹಬ್ಬಿದ್ದವು. ಹಾಗಾಗಿ, ಪ್ರಾಚ್ಯ ಮತ್ತು ಪೌರಾತ್ಯ ಚಿಂತನೆಗಳಿಂದ ಕುವೆಂಪು ಅವರ ಸೃಷ್ಟಿಶೀಲತೆ ಅಭಿವ್ಯಕ್ತಿಸಿದ್ದು ಈ ಶತಮಾನದ ಸಂಕೀರ್ಣಾವಸ್ಥೆಯನ್ನೇ.

ಇಂಥ ಸಂಕೀರ್ಣಾವಸ್ಥೆಯಲ್ಲಿ ರೂಪುಪಡೆದದ್ದು ಶೂದ್ರ ಹಾಗೂ ಶೋಷಕ ವರ್ಗದ ಪ್ರತಿಮೆಗಳೇ ಆಗಿವೆ. ವೈಚಾರಿಕ, ವೈಜ್ಞಾನಿಕ ದೃಷ್ಟಿಗಳು ಶ್ರೀ ಸಾಮಾನ್ಯವರ್ಗ ಸಾಮಾಜಿಕ ಪೀಡೆಗಳಿಂದ ಬಿಡುಗಡೆ ಪಡೆಯಲು ಸಹಾಯಕವಾದವು. ಈ ದೃಷ್ಟಿಗಳು ಸಾಮಾಜಿಕ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರಗಳನ್ನು ಹುಡುಕಲು ತೊಡಗಿದವು. ಹಾಗಾಗಿ ಸಾಂಪ್ರದಾಯಿಕ ಮೌಲ್ಯಗಳಿಗೆ ವಿಮರ್ಶಾತ್ಮಕವಾಗಿ ಮುಖಾಮುಖಿಯಾಗುವುದರೊಂದಿಗೆ ಹೊಸ ವಿಚಾರಧಾರೆಯನ್ನು ಶೋಧಿಸಿಕೊಳ್ಳಲು ಕುವೆಂಪು ಅಂಥವರ ಪ್ರತಿಭೆ ಮುಂದಾಯಿತು.

ಕನ್ನಡದ ಮಹತ್ವ ಚಿಂತಕರಾದ ಕೆ.ವಿ.ಸುಬ್ಬಣ್ಣ ಮತ್ತು ಡಾ. ಶಂಕರ ಮೊಕಾಶಿ ಪುಣೇಕರ ಅವರ ಕೆಳಗಿನ ಉದ್ಧರಣೆಗಳು, ಕುವೆಂಪು ಬರೆಯತೊಡಗಿದ ಕಾಲಮಾನದ ಸಂಕೀರ್ಣಾವಸ್ಥೆಗಳನ್ನು ವಿಭಿನ್ನ ನೆಲೆಗಳಲ್ಲಿ ಹಿಡಿದಿಡುತ್ತವೆ. ಹಾಗೆಯೇ ಆ ಕಾಲಮಾನದ ಸಾಂಸ್ಕೃತಿಕ ದ್ವಂದ್ವಗಳನ್ನು ಸ್ಪಷ್ಟಪಡಿಸಿಕೊಳ್ಳಲು ಸಹಾಯಕವಾಗುತ್ತವೆ.

> ಈ ಶತಮಾನವೆಂದರೆ - ಇಡೀ ಭಾರತವು ಹೊಸದಾಗಿ ಎಚ್ಚೆತ್ತು ತೀವ್ರ ಜೀವಂತಿಕೆಯಲ್ಲಿ ಕಣ ಕಣ ಕಂಪಿಸುತ್ತಿದ್ದ ಕಾಲ; ಪಶ್ಚಿಮದಿಂದ ದುತ್ತೆಂದು ಎದುರಾದ ಅತಿ ಭಿನ್ನ ಅತ್ಯಾಕರ್ಷಕ ನಾಗರಿಕತೆಗೆ ಮುಖಗೊಟ್ಟು ದಿಙ್ಮೂಢವಾದಂಥ ಕಾಲ ; ನಮ್ಮ ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಲು ಪೂರ್ವ-ಪಶ್ಚಿಮ, ಪ್ರಾಚೀನ - ಅರ್ವಾಚೀನ ಎರಡೂ ಅಸಂಖ್ಯರಾಶಿಗಳಿಂದ, ಕಡೆಗೂ ಬಹು ಜಾಗೃತ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗಿದ್ದ ಕಾಲ; ಅನಿವಾರ್ಯವಾಗಿ ಆ ಮಹತ್ತರ ಜವಾಬ್ದಾರಿಗೆ ಒಡ್ಡಿಕೊಳ್ಳಲೇಬೇಕಾಗಿ ಬಂದ ಕಾಲ. ಎರಡೂ ರಾಶಿಗಳನ್ನು ತಡಹಿ ತಡಹಿ ಅವುಗಳಲ್ಲಿ ಅಪೇಕ್ಷಿತಗಳನ್ನು ಆಯ್ದುಕೊಳ್ಳುತ್ತಾ ತ್ಯಾಜ್ಯಗಳನ್ನು ನಿವಾರಿಸಿಕೊಳ್ಳುತ್ತ ನಡೆದ ಈ ಶೋಧದಲ್ಲಿ ಪೂರ್ವ-ಪ್ರಾಚೀನಗಳ ಶೋಧಕ್ಕೆ ಪಶ್ಚಿಮ-ಅರ್ವಾಚೀನಗಳು ಬೆಳಕಾದರೆ, ಪಶ್ಚಿಮ-ಅರ್ವಾಚೀನಗಳ ಶೋಧಕ್ಕೆ ಪೂರ್ವ-ಪ್ರಾಚೀನಗಳು ಬೆಳಕಾಗಿ ಒದಗಿದವು. ಉದಾಹರಣೆಗೆ - ಪಶ್ಚಿಮದ ನಾಗರಿಕತೆಯ ಬೆಳಕಿನಲ್ಲಿಯೇ ನಮಗೆ, ನಮ್ಮ ಜಾತಿ ತಾರತಮ್ಯ ವೈಷಮ್ಯಗಳು ಅದೆಂಥ ಅಮಾನವೀಯ ಸಂಗತಿಗಳೆಂದು ಕಂಡಿತು. ಮತ್ತು ನಮ್ಮ ಸಂಸ್ಕೃತಿಯ ಬೆಳಕಿನಲ್ಲಿ ಪಶ್ಚಿಮದ ಐಹಿಕ ಅತ್ಯಾಕಾಂಕ್ಷೆಗಳು ಅದೆಷ್ಟು ರಾಕ್ಷಸೀಯ ಅನ್ನುವುದು ತಿಳಿಯುವಂತಾಯಿತು. ಈ ಕಾಲದ ನಮ್ಮ ಸಾಹಿತ್ಯ ಕಲೆಗಳು ಈ ಮಹತ್ ಪ್ರಕ್ರಿಯೆಯನ್ನು ಬಿಂಬಿಸಲು ತಹತಹಿಸಿದವು. ಇಂಥದೊಂದು ವಿಶಿಷ್ಟ ಕಾಲಸಂಧಿಯಲ್ಲಿ ಮೊತ್ತಮೊದಲ ಶೂದ್ರವಾಣಿಯು ಕುವೆಂಪುರ ಮೂಲಕ, ದುರ್ದಮನೀಯವೆನ್ನುವ ಥರದಲ್ಲಿ, ಚರಿತ್ರೆಯು ಗಡಗುಟ್ಟಿ ನಡುಗುವ ಥರದಲ್ಲಿ ಗುಡುಗಿ ಬಂದಿತು. ಅಂದರೆ, ಆಗ ಕುವೆಂಪು ಅವರು ಬರೆಯತೊಡಗಿದ್ದೇ ಒಂದು ಐತಿಹಾಸಿಕ ಪ್ರಕ್ರಿಯೆಯಾಗಿತ್ತು[೧]

> ಅನೇಕ ವಿದ್ವಾಂಸರು ಬ್ರಿಟಿಷರ ಆಳಿಕೆಯನ್ನು Confrontation of Cultures (ಸಂಸ್ಕೃತಿಗಳ ಮುಖಾಮುಖಿ) ಎಂದು ಕರೆದಿದ್ದಾರೆ. ಇದು ಯಥಾರ್ಥವಲ್ಲ. ಮುಖಾಮುಖಿಯಲ್ಲಿ ತುಸುವಾದರೂ ಸಾಂಸ್ಕೃತಿಕ ಕೊಡುಕೊಳ್ಳು ಇರುತ್ತದೆ. ಆದರೆ ಇತಿಹಾಸದ ಈ ನೂರು ವರ್ಷಗಳು ಏಕಮುಖಗತಿ (One- way traffic)ಯಾದುದು ದುರ್ದೈವ. ಭಾರತದ ಐರೋಪ್ಯೀಕರಣ ಈ ಅವಧಿಯ ಪರಿಣಾಮವೇ ಹೊರತು ಇಂಗ್ಲೆಂಡದ ಭಾರತೀಕರಣವಲ್ಲ, ಎಂಬುದನ್ನು ಗಮನಿಸಬೇಕು. ಭಾರತವು

> ಇಂಗ್ಲೆಂಡಿನಿಂದ ಏನನ್ನು ಪಡೆಯಿತೋ ಅದರ ಒಂದು ಸಾವಿರಾಂಶವನ್ನು ಇಂಗ್ಲೆಂಡು ಭಾರತದಿಂದ ಕಲಿಯಲಿಲ್ಲವೆಂಬುದನ್ನು ಗಮನಿಸಬೇಕು.[೨]

ಈ ಉದ್ಧರಣೆಗಳಲ್ಲಿ ಈ ಶತಮಾನದಾದಿಯ ರಾಜಕೀಯ ಹಾಗೂ ಸಾಂಸ್ಕೃತಿಕ ನೆಲೆಗಳ ವಿಭಿನ್ನ ಮುಖಗಳನ್ನು ಕಾಣುತ್ತೇವೆ. ಈ ಬಗೆಯ ವಿಭಿನ್ನ ನೆಲೆಗಳು ಕುವೆಂಪು ಅವರ ಅಭಿವ್ಯಕ್ತಿಯಲ್ಲಿ ಕಾಣುವ ಸ್ವರೂಪ - ಧೋರಣೆಗಳನ್ನು ಅವರ ಕಾವ್ಯಾಧ್ಯಯನದಿಂದ ಮುಂದೆ ಕಂಡುಕೊಳ್ಳಲಾಗುತ್ತದೆ.

**೨. ಸಾಮಾಜಿಕ ಹಾಗೂ ಧಾರ್ಮಿಕ ಜಡಾವಸ್ಥೆಗಳಿಗೆ ಪ್ರತಿರೋಧ**

ಸಾಮಾಜಿಕ ಹಾಗೂ ಧಾರ್ಮಿಕ ಜಡಾವಸ್ಥೆಗಳಿಗೆ ಅತ್ಯಂತ ತೀವ್ರವಾದ ಪ್ರತಿರೋಧದ ಸ್ವರೂಪವನ್ನು ಕುವೆಂಪು ಅವರ ಸಾಹಿತ್ಯದಲ್ಲಿ ದಟ್ಟವಾಗಿ ಕಾಣುತ್ತದೆ. ಶೂದ್ರನೊಬ್ಬ ಗ್ರಂಥಾಧ್ಯಯನ, ಬರವಣಿಗೆಯಲ್ಲಿ ತೊಡಗಿದ ಐತಿಹಾಸಿಕ ಪ್ರಕ್ರಿಯೆಗೆ ಅನೇಕ ಜವಾಬ್ದಾರಿಗಳು ಆ ಕಾಲದಲ್ಲಿ ಮೂಡಿದುದು ಮಹತ್ವವೆನ್ನಬಹುದು. ಸಾಂಸ್ಕೃತಿಕ ಸಂಘರ್ಷದಿಂದ ರೂಪಿತಗೊಂಡ ಸಂವೇದನೆಯೊಂದು ಪ್ರತಿಕ್ರಿಯಿಸಿದ ಮಾದರಿಗಳು ಕುವೆಂಪು ಅವರ ಕೃತಿಗಳಲ್ಲಿ ಕ್ರಿಯಾಶೀಲವಾಗುವುದನ್ನು ಕಾಣುತ್ತೇವೆ. ಈ ಬಗೆಯ ಕ್ರಿಯಾಶೀಲ ಶೂದ್ರಸಂವೇದನೆ, ಒಂದು ಸಂಸ್ಕೃತಿಯ ವಿಶ್ವತತ್ವಗಳನ್ನು ತಿರುಚಿ ಬರೆದ, ತಿರುಚಿದ್ದನ್ನೇ ಸತ್ಯಗಳೆಂದು ನಂಬಿಸಿದ ವ್ಯವಸ್ಥೆಯ ಬಗೆಗಿನ ಆಕ್ರೋಶವು ಇಂಥ ಸಾಂಸ್ಕೃತಿಕ ಸಂಘರ್ಷದಿಂದ ಉಂಟಾದದ್ದೆಂದು ಕುವೆಂಪು ಸಾಹಿತ್ಯ ಸಮರ್ಥಿಸುತ್ತದೆ. ಅನಿಷ್ಟಕಾರಕ ಆಚಾರ ವಿಚಾರಗಳನ್ನು ಒಂದು ಸಂಸ್ಕೃತಿಯ ಮನೋಭೂಮಿಕೆಯಲ್ಲಿ ಬಿತ್ತಿದ ಮೇಲ್ವರ್ಗದ ಕುತಂತ್ರಗಳನ್ನು ಪ್ರಶ್ನಿಸುವುದರೊಂದಿಗೆ, ಅದರಿಂದ ಹೊರಬರುವಂತೆ ಎಚ್ಚರಿಸುವ ಹೊಣೆಗಾರಿಕೆಗೆ ಕುವೆಂಪು ಎದುರಾದದ್ದು ಈ ಕಾಲಮಾನದ ಮಹತ್ವದ ಘಟ್ಟ. 'ಕ್ರಾಂತಿ ಕಾಳಿ' ಯಂಥ ಕವಿತೆಯಲ್ಲಿ ಇಂಥ ಧೋರಣೆ ಮುಖ್ಯ ಆಯಾಮವಾಗಿ ಪ್ರಕಟಗೊಂಡಿದೆ. ಕವಿಯ ಕರ್ತವ್ಯ ಹಾಗೂ ದೃಷ್ಟಿ - ಧೋರಣೆಗಳ ಧ್ವನಿ ಇಂಥ ಕವಿತೆಗಳಲ್ಲಿ ವ್ಯಕ್ತವಾಗಿವೆ.

ಕಾವ್ಯದ ಪಾರಂಪರಿಕ ತಿಳುವಳಿಕೆಯನ್ನು ಪ್ರಶ್ನಿಸುವ ಧೋರಣೆ ಈ ಕವಿತೆಯ ಮುಖ್ಯ ಆಶಯವಾಗಿದೆ. ಕಾವ್ಯದ ಧೋರಣೆ ಮತ್ತು ವಸ್ತುವಿನ ಆಯ್ಕೆಗಳಲ್ಲಿ ಆಗಬೇಕಾದ ಬದಲಾವಣೆಯನ್ನು ಈ ಕವಿತೆ ಸೂಚಿಸುತ್ತದೆ.

> ಕ್ರಾಂತಿಕಾಳಿ ಕಠಾರಿಯಂ ನನ್ನೆದೆಗೆ ಕುರಿತು
> ಝಳಪಿಸುತೆ, ಬದ್ಧಭ್ರುಕುಟಿ ಕೋಪದಲಿ ನಿಂತು,
> ದಂಷ್ಟ್ರಘರ್ಷಣರವಂ ಪೂಣ್ಮೆ ಗಜರಿದಳಿಂತು :-
> ಓ ದ್ರೋಹಿ ಕವಿಯೆ, ನಿನಗಿತ್ತಾಣತಿಯ ಮರೆತು
> ಕ್ಲೀಬತನದಲಿ ಹೆಣ್ಣು ಸೋಬಾನೆಗಳ ಹಾಡಿ
> ಪಾಳ್ಗಯ್ದೆ ಕಜ್ಜಮಂ! ಶುಕ, ಪಿಕ, ವಸಂತ, ಲತೆ,
> ಮುಂಗುರುಳು, ತಂಗಾಳಿ, ದೊರೆಗಿರೆಗಳಜ್ಜಿಕಥೆ
> ಬೆಳ್ದಿಂಗಳೆಂಬುವಂ ನೂಕಾಚೆ, ಹೆಂಬೇಡಿ !

ಬಡತನಂ, ಗೊಬ್ಬರಂ, ಕತ್ತಿ, ಗುದ್ದಲಿ, ಹಾರೆ,
ಬೆವರು, ನೆತ್ತರ್ಗಳಂ ಗಾನಗೈವುದು ನಿನ್ನ
ಕರ್ತವ್ಯವಿಂದು ಹಾ! ಹೊಟ್ಟೆಗಿಲ್ಲದೆ ಅನ್ನ
ಬಡಜನರು ಸಾಯುತಿರೆ, ರಸಗಂಧವನು ತೋರೆ
ತಣಿವಹುದೆ? ಕ್ರಾಂತಿಕಾಳಿಯು ನಾನು ಕೈಬೀಸಿ
ಕರೆಯೆ, ಬಾ, ಪೂಜೆಗೈ ಹೃದಯ ರಕ್ತವ ಸೂಸಿ![೩]

ನವೋದಯ ಕಾಲದಲ್ಲಿ ಪ್ರಚಲಿತವಿದ್ದ ಪ್ರಾಚೀನ ಮತ್ತು ಅರ್ವಾಚೀನ ಮೌಲ್ಯಗಳ ಸಂಘರ್ಷವು ಇಲ್ಲಿನ ಮುಖ್ಯ ಭಿತ್ತಿಯಾಗಿದೆ. ಆ ಭಿತ್ತಿಯೇ 'ಕ್ರಾಂತಿಕಾಳಿ' ಕವಿತೆಯ ಮುಖ್ಯ ಧ್ವನಿಯಾಗಿದೆ. ಸಮಕಾಲೀನ ಕಾವ್ಯದ ಜವಾಬ್ದಾರಿ , ಜರೂರುಗಳನ್ನು ಮರೆತ ಸಂವೇದನೆಗೆ ತೋರಿದ ಪ್ರತಿಕ್ರಿಯೆ 'ಕ್ರಾಂತಿಕಾಳಿ'ಯ ಗರ್ಜನೆಯಲ್ಲಿ ಧ್ವನಿತವಾಗಿದೆ. ಒಟ್ಟು ಈ ಕವಿತೆಯ ಧ್ವನಿ, ಸ್ವಾತಂತ್ರ್ಯಪೂರ್ವದ ಸೃಷ್ಟಿಕ್ರಿಯೆಯಲ್ಲಿ ಸಂವೇದನಾಶೀಲರ ಬಾಧ್ಯತೆಗಳೆಲ್ಲವನ್ನೂ ಒಮ್ಮೆಗೆ ನೆನಪಿಸುವಂತೆ ಕಾಣುತ್ತದೆ. ನವೋದಯದ ಸಂವೇದನೆ ಕೇವಲ ಸೌಂದರ್ಯ - ಆಧ್ಯಾತ್ಮಗಳಲ್ಲಿ ಮಾತ್ರವೇ ಆಗಿರದೆ, ಬದುಕಿನ ದೃಢ - ವಾಸ್ತವತೆಗಳನ್ನು ಹಿಡಿದಿಡಲು ಹೊರಟ ಮಾದರಿಗಳನ್ನು ಈ ಕವಿತೆ ಪ್ರಕಟಿಸುತ್ತದೆ. ಕುವೆಂಪು ಅವರ ಈ ಕೆಳಗಿನ ಮಾತುಗಳು ಸಮಕಾಲೀನ ಸಮಸ್ಯೆಗಳಿಗೆ ಮನಸ್ಸುಗಳು ಸ್ಪಂದಿಸಬೇಕಾದ ಅಗತ್ಯತೆಯನ್ನು ಸೂಚಿಸುತ್ತಿವೆ.

> ದೇಶದ ದಾಸ್ಯವನ್ನು ಪರಿಹರಿಸಿ ಸ್ವಾತಂತ್ರ್ಯ ಸಾಮ್ರಾಜ್ಯ ಸ್ಥಾಪನೆ ಮಾಡುವ ಕಾರ್ಯಭಾರದಲ್ಲಿ ಕವಿಗಳು ತಟಸ್ಥರಾಗಿರುವುದು ಉಚಿತವಲ್ಲ. ಹಾಗೆ ಮಾಡಿದರೆ ರೋಮ್ ನಗರ ಉರಿಯುತ್ತಿದ್ದಾಗ ನೀರೊ ಚಕ್ರವರ್ತಿ ಪಿಟೀಲು ಬಾರಿಸಿದಂತಾಗಿ ಹಾಸ್ಯಾಸ್ಪದವಾಗುತ್ತದೆ.[೪]

ಇಂಥ ಧೋರಣೆಯಿಂದಲೇ ಕುವೆಂಪು ಅವರ ಕಾವ್ಯ ಸಮಕಾಲೀನ ಸಮಸ್ಯಗಳಿಗೆ ಪ್ರತಿಕ್ರಿಯಿಸುತ್ತದೆ. 'ಕೀರ್ತಿಶನಿ', 'ಮಾದೇಶ್ವರ ಬೆಟ್ಟಕಂತೆ', 'ಖಗೋಲ ವಿಜ್ಞಾನದ ಪ್ರಥಮ ಪರಿಚಯ' , ಚಂದ್ರಗ್ರಹಣ ಮತ್ತು ಸಾಕ್ರೆಟೀಸ್', 'ಬಲಿಪಾಡ್ಯಮಿ', 'ಬುದ್ಧದೇವ', 'ಸ್ವಾತಂತ್ರ್ಯ', 'ರಕ್ತಧುನಿ', ಹಾಗೂ 'ಪಾಂಚಜನ್ಯ' ಸಂಕಲನದ ಅನೇಕ ಕವಿತೆಗಳಲ್ಲಿ ಸಮಕಾಲೀನ ಸಮಸ್ಯೆಗಳಿಗೆ ಇವರ ಕಾವ್ಯ ಸ್ಪಂದಿಸಿರುವುದನ್ನು ಕಾಣಬಹುದು.

### ೩. ಸೃಷ್ಟಿಶೀಲತೆಯ ಜವಾಬ್ದಾರಿ

'ಕೀರ್ತಿಶನಿ' ಕವಿತೆ ಕ್ರಿಯಾಶೀಲತೆಗೆ ಒದಗುವ ಜಡತೆಯನ್ನು ಒಮ್ಮೆಗೇ ನಿರಾಕರಿಸುತ್ತದೆ. ಹಾಗೆ ನಿರಾಕರಿಸುವುದರ ಧ್ವನಿಯು ನವೋದಯ ಕಾವ್ಯದ ಸಂಘರ್ಷದ ಪ್ರವೃತ್ತಿಗಳಲ್ಲಿ ಒಂದಾಗಿರುವುದನ್ನು ಕುವೆಂಪು ಅವರ ಕವಿತೆಗಳಲ್ಲಿ ನೋಡಬಹುದು. 'ಕೀರ್ತಿ'ಯ ಬೆನ್ನು ಹತ್ತಿದ ಮನಸ್ಸು ಭ್ರಾಂತಿಗೆ ಒಳಗಾಗಿ ತನ್ನ ಕರ್ತವ್ಯಗಳನ್ನು ಮರೆಯುವ ಅವಕಾಶವೇ ಹೆಚ್ಚು. ಆದ್ದರಿಂದ ಕವಿ ಸಂವೇದನೆ ತನಗೊದಗುವ 'ಕೀರ್ತಿ'ಯನ್ನು 'ಶನಿ'ಯೆಂದು ತಿಳಿಯುತ್ತದೆ.

ಪೀಡಿಸುತ್ತಿಹೆ ಏಕೆ ? ತೊಲಗಾಚೆ, ಕೀರ್ತಿಶನಿ;
ಸಾಕೆನಗೆ ನಿನ್ನ ಸಹವಾಸ ವಿಭವಭ್ರಾಂತಿ !

ಬಾ ಬಳಿಗೆ, ಸಾಮಾನ್ಯತಾ ದೇವಿ, ಓ ಶಾಂತಿ ;
ನನ್ನೆದೆಯ ತಂತಿಯಿಂ ಮಿಂಟುತಿದೆ ನಿನ್ನ ದನಿ
ಬ್ರಹ್ಮನಾಡಿಯ ಗುಹ್ಯಗಾನಮಂ ----- [೫]

ಹೀಗೆ ಆರಂಭವಾಗುವ ಕವನದಲ್ಲಿ, ಸಾಮಾನ್ಯದೇವಿಯೊಂದಿಗೆ ಅಂತರಗಳನ್ನು ಉಂಟುಮಾಡುವ ಕೀರ್ತಿಯನ್ನು ನಿರಾಕರಿಸುತ್ತಾ, ಸರಳತೆಯನ್ನು ಆಹ್ವಾನಿಸುವ ಪ್ರಜ್ಞೆ ಕೀರ್ತಿಯನ್ನು 'ಸಪ್ತಮವೈರಿ',ಯೆಂದು ವಿನಾಶಕಾರಿ ಎಂದು ಕರೆಯುತ್ತದೆ. ಆ ಕ್ಷುದ್ರತೆಗೆ ಬಲಿಯಾಗುವ ವಿಚಾರ ಇಲ್ಲಿ ವಿಶ್ಲೇಷಣೆಗೊಂಡಿದೆ. 'ಮತಿ' ಇಂಥ ಕೀರ್ತಿಶನಿಯಿಂದ ಮುಕ್ತಿಹೊಂದಿ ಎಚ್ಚರಾಗಬೇಕಾದ ಸ್ಥಿತಿಯನ್ನು ಈ ಕವನ ಹೇಳುತ್ತಿದೆ. ಇಂಥ ಧೋರಣೆಯೊಂದು 'ಕವಿ' ಕವನದಲ್ಲಿಯೂ ಎದುರಾಗುತ್ತದೆ.

ವಸಂತವನದಲಿ ಕೂಗುವ ಕೋಗಿಲೆ
    ರಾಜನ ಬಿರುದನು ಬಯಸುವುದಿಲ್ಲ ;
ಹೂವಿನ ಮರದಲಿ ಜೇನುಂಬುಳುಗಳು
    ಮೊರೆವುದು ರಾಜನ ಭಯದಿಂದಲ್ಲ
ವನದೇಕಾಂತದಿ ಪೆಣ್ ನವಿಲೆಡೆಯಲಿ
ಮಯೂರ ನೃತ್ಯೋನ್ಮತ್ತ ವಿಲಾಸಕೆ
    ರಾಜನ ಕತ್ತಿಯ ಗಣನೆಯೆ ಇಲ್ಲ ;
- - - - - - - - - - - - - -
ಕತ್ತಲೆ ಮುತ್ತಿದ ಬಾನಲಿ ಮಿಣುಕುವ
    ತಾರೆಗೆ ದೊರೆಯಾಣತಿ ತೃಣವಿಲ್ಲ
ವಿಪ್ಲವ ಮೂರ್ತಿಯ ಸಖಿನಾಗಿನಹೈ ;
    ಕವಿಗರಸುಗಿರಸುಗಳ ಋಣವಿಲ್ಲ !
        ಅವನಗ್ನ ಮುಖಿ !
        ಪ್ರಲಯ ಶಿಖಿ ! [೬]

ಸೃಷ್ಟಿಕ್ರಿಯೆಗೆ ಕೀರ್ತಿಯಿಂದ ಎದುರಾಗುವ ಬಂಧನದ ನೆಲೆಗಳನ್ನು ಮೇಲಿನ 'ಕವಿ' ಕವಿತೆ ವಿವೇಚಿಸುತ್ತದೆ. ದೈನಂದಿನ ಪ್ರಾಕೃತಿಕ ಘಟನೆಗಳು ಯಾರೊಬ್ಬರ ಹಂಗಿಲ್ಲದೆ ತಮ್ಮ ಕ್ರಿಯೆಗಳಲ್ಲಿ ತೊಡಗಿರುವಂತೆಯೇ, 'ಕವಿಕಾರ್ಯ'ವು ಅರಸುಗಿರಸುಗಳ ಋಣವಿಲ್ಲದೆ, ಅಂಥ ಋಣಕ್ಕೆ ಬಲಿಯಾಗದೆ ತನ್ನ ಕಾಣ್ಕೆಯನ್ನು ರೂಪಿಸುವ ಮನೋಧರ್ಮ ಈ ಕವಿತೆಯಲ್ಲಿ ವಿಡಂಬನೆಯ ಮೂಲಕ ಮೈ ಪಡೆದಿದೆ. ಬಿರುದು-ಬಾವಲಿಗಳ ಕ್ಷಣಿಕತೆಗೆ ತೋರುವ ದಿವ್ಯನಿರ್ಲಕ್ಷ್ಯತೆಯಲ್ಲಿ ಒಂದು ಬಗೆಯ ಪ್ರತಿಭಟನೆ ಪ್ರಕಟಗೊಂಡಿದೆ.

ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಎದುರಾದ ಹೊಸ ವಿಚಾರಧಾರೆಗಳು ಪುರೋಹಿತಶಾಹಿಯ ಸಾಂಪ್ರದಾಯಿಕ ಮೌಲ್ಯಗಳನ್ನು ಒಡೆಯಲು ಸಹಾಯಕವಾದವು. ತಲೆತಲಾಂತರಗಳಿಂದ ಗುಟ್ಟಾಗಿದ್ದ ಅಮಾನವೀಯ ನೆಲೆಗಳು ವೈಜ್ಞಾನಿಕ

ನಿಕಷಕ್ಕೆ ಗುರಿಯಾಗುವುದರೊಂದಿಗೆ ಬಯಲಾದವು. ಮಠೀಯ ಪರಂಪರೆಯ ಪಾವಿತ್ರ್ಯತೆಯನ್ನು ಪ್ರಶ್ನಿಸುವ ಕುವೆಂಪು ಅವರ ಕಾವ್ಯ ಜನಸಾಮಾನ್ಯರ 'ಮತಿ'ಯನ್ನು ತಿದ್ದುವ ಹಸನುಗೊಳಿಸುವ, ತಿಳಿಹೇಳುವ ಆಕ್ರಮಣಶೀಲ ಸಂಸ್ಕೃತಿಯ ಬಗೆಗೆ ಎಚ್ಚರಗೊಳ್ಳುವಂತೆ ಮಾಡುವ ಕಾರ್ಯಕ್ಕೆ ತೊಡಗಿತು.

### ೪. ವೈಜ್ಞಾನಿಕ 'ಮತಿ'ಯ ಅಗತ್ಯ

ಮನುಷ್ಯನ ಏಳಿಗೆಗೆ ದೊಡ್ಡ ಬಂಧನವಾದ 'ಮತ'ವನ್ನು ಪುನರ್‌ವ್ಯಾಖ್ಯಾನಿಸುವ ಜವಾಬ್ದಾರಿಯು ನವೋದಯದ ಸೃಷ್ಟಿಶೀಲತೆಯ ಮುಖ್ಯ ನೆಲೆಗಳಲ್ಲಿ ಒಂದು. 'ಮತ' ಮತ್ತು 'ಮತಿ'ಗಳ ಬಗೆಗೆ ಪುನರ್ ವ್ಯಾಖ್ಯಾನ ನವೋದಯ ಸಂವೇದನೆಯ ಬಹುಮುಖ್ಯ ನೆಲೆ. ಕುವೆಂಪು ಅವರ "ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ" ಕೃತಿ ಈ ಬಗೆಯ ತಾತ್ತ್ವಿಕತೆಯನ್ನೆ ಪ್ರತಿಪಾದಿಸುತ್ತದೆ. ವೈದಿಕ ಸಂಸ್ಕೃತಿ ಯಾವ 'ಮತಿ'ಯನ್ನು ನಿಸ್ತೇಜಗೊಳಿಸಿತೊ ಅದೇ 'ಮತಿ'ಗೆ ವೈಜ್ಞಾನಿಕ ಸತ್ಯಗಳನ್ನು ಮುಖಾಮುಖಿಯಾಗಿಸುವುದರೊಂದಿಗೆ 'ಮತಿ'ಯನ್ನು 'ಮಾನವನ ಸರ್ವೋತ್ಕೃಷ್ಟವಾದ ಆಯುಧ'ವನ್ನಾಗಿ ಮಾರ್ಪಡಿಸಿದ್ದು ಕುವೆಂಪು ಚಿಂತನೆಯ ಬಹುದೊಡ್ಡ ಕೊಡುಗೆ. ಈ ಬಗೆಯ ಸಂವೇದನೆ 'ಮತಿ'ಯ ಸ್ವರೂಪವನ್ನು 'ಖಗೋಲ ವಿಜ್ಞಾನದ ಪ್ರಥಮ ಪರಿಚಯ', 'ಚಂದ್ರ ಗ್ರಹಣ ಮತ್ತು ಸಾಕ್ರೇಟೀಸ್', 'ಬುದ್ಧದೇವ', 'ಮಾದೇಶ್ವರ ಬೆಟ್ಟಕಂತೆ' ಮೊದಲಾದ ಅಷ್ಟಷಟ್ಪದಿಗಳಲ್ಲಿ ಅತ್ಯಂತ ಸಮರ್ಥವಾಗಿ ವಿಶ್ಲೇಷಣೆಗೆ ಗುರಿಪಡಿಸಿದೆ.

'ಖಗೋಲ ವಿಜ್ಞಾನದ ಪ್ರಥಮ ಪರಿಚಯ' ಕವಿತೆ, ವಿದ್ಯೆಯ ಮಹತ್ತನ್ನು, ಅದು ತೆರೆಯುವ ಜ್ಞಾನದ ಬೆಳಕನ್ನು, ಮತೀಯ ಭ್ರಾಂತಿಗಳಿಗೆ ವಿದ್ಯೆ ಅಸ್ತ್ರವಾದ ನೆಲೆಯನ್ನು ಕುರಿತು ಧ್ಯಾನಿಸುತ್ತದೆ. ವಿದ್ಯೆಯ ಶಕ್ತಿ-ಸಾಧ್ಯತೆಗಳ ಬಗೆಗೆ ಕವಿ ಸಂವೇದನೆ ವಿಸ್ಮಯಗೊಳ್ಳುವ ನೆಲೆಯು ಈ ಕವಿತೆಯದಾಗಿದೆ. 'ಚಂದ್ರಗ್ರಹಣ ಮತ್ತು ಸಾಕ್ರೇಟೀಸ್' ಕವಿತೆಯಲ್ಲಿ, ಕತ್ತಲು ಮತ್ತು ಬೆಳಕುಗಳ ಪ್ರತಿಮೆಗಳನ್ನು ಅಜ್ಞಾನ- ಜ್ಞಾನಗಳೊಂದಿಗೆ ಸಮೀಕರಿಸಿದ ಕ್ರಮ ಹೀಗಿದೆ :

ಸೂರ್ಯನಂ ಸುತ್ತುತಿಹ ಪೃಥ್ವಿಯ ಮಹಾಛಾಯೆ
    ಬಹುದೂರದಾಕಾಶದೇಶದಿ ಚಲಿಸಿ ಬೀಳೆ
    ದೃಗ್ಗಣಿತ ನಿಯಮದಿಂದಿಂದುಗೋಲದ ಮೇಲೆ
ಗ್ರಹಣಮಹುದೆಂದು ವಿಜ್ಞಾನ ತೋರಿದೆ. ಮಾಯೆ
ಹಿಡಿದಿರುವುದೆಮಗೆ ! ಚಂದ್ರನಿಗೆಲ್ಲಿಯದು ರಾಹು?
    ಬಾ, ಸನ್ಮತಿಯ ದೀಪಧಾರಿ, ಓ ಸಾಕ್ರೇಟಿಸ್ ,
    ನಮ್ಮ ಭಾರತವಿಂದು ನೀನು ಬರಲಿರ್ದ ಗ್ರೀಸ್!
ಕೊಲ್ಲುತಿಹುದಜ್ಞಾನ ಸಂಪ್ರದಾಯದ ಬಾಹು
ನಮ್ಮ ಬದುಕಿನ ಕುತ್ತಿಗೆಯ ಹಿಸುಕಿ,
- - - - - - - - - - - - - - -
ದಾಸ್ಯಮತಿ ಸೈತಾನ್ ; ನಿರಂಕುಶಮತಿಯೆ ಯೇಸು![೭]

ಸಂಪ್ರದಾಯದ ಅಜ್ಞಾನದ ಬಾಹುಗಳಿಂದ ಭಾರತಾಂಬೆ ಮುಕ್ತಿಗೊಳ್ಳಲು ವೈಜ್ಞಾನಿಕ ಚಿಕಿತ್ಸಕ ಮನಸ್ಸಿನ ಸಾಕ್ರೇಟಿಸನ ಅಗತ್ಯತೆಯನ್ನು ಈ ಕವಿತೆ ಒತ್ತಿ ಹೇಳುತ್ತದೆ. ಅಂದರೆ ವೈಜ್ಞಾನಿಕ ಚಿಕಿತ್ಸೆಯಿಂದ ಭಾರತೀಯ ಮೌಢ್ಯತೆಗೆ ಬೆಳಕನ್ನು ನೀಡುವುದರೊಂದಿಗೆ, ಪಾರಂಪರಿಕ ನಂಬಿಕೆಗಳಿಗೆ ಮರು ಅರ್ಥಗಳನ್ನು ಈ ಕವಿತೆಯಲ್ಲಿ ಎದುರಾಗಿಸಲಾಗಿದೆ. ಸಾಕ್ರೆಟಿಸ್, ಬುದ್ಧ, ಯೇಸು - ಇಂಥ ಪ್ರತಿಮೆಗಳ ಮುಖೇನ 'ನಿರಕುಂಶಮತಿ' ಗಳ ಅಗತ್ಯತೆಯನ್ನು ಒತ್ತಿ ಹೇಳಲಾಗಿದೆ. ಹಾಗೂ ಅವುಗಳಿಗೆ ಆಹ್ವಾನವನ್ನಿಯಲಾಗಿದೆ. ಅಂತೆಯೇ, ಮೌಢ್ಯಮತಿ ದಾಸ್ಯಕ್ಕೆ ಆಹ್ವಾನವೀಯುತ್ತದೆಂಬ ವಿಚಾರವು ಪ್ರಕಟವಾಗುತ್ತದೆ.

ಮೌಢ್ಯತೆಗೆ ಒಳಗಾದ 'ಮತಿ'ಯ ಅವಸ್ಥೆಯನ್ನು 'ಮಾದೇಶ್ವರ ಬೆಟ್ಟಕಂತೆ!' ಕವಿತೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ವಿವೇಚಿಸಲಾಗಿದೆ. ಈ ಕವನದ ಅರ್ಥಪರಂಪರೆ ಶತಶತಮಾನಗಳ ಹಾಗೂ ಸಮಕಾಲೀನ ಮತೀಯ ಮೂಲಭೂತವಾದಿಗಳ ಅಕೃತ್ಯಗಳ ನೆಲೆಗಳನ್ನೇ ಪ್ರಶ್ನಿಸುತ್ತದೆ. ಮತೀಯ ವ್ಯವಸ್ಥೆ ಎದುರಾಗಿಸಿದ 'ಮತಿ' ದಾಸ್ಯಕ್ಕೆ ಉಪಮೆಯೇ ಇಲ್ಲವೆಂಬ ಆಶಯ ಅದರ ಪರಿಣಾಮಗಳನ್ನು ಸ್ಪಷ್ಟಪಡಿಸುತ್ತದೆ. ಪುರೋಹಿತಶಾಹಿ ಎದುರಾಗಿಸಿದ 'ಮತಿ' ಮೌಢ್ಯಕ್ಕೆ ಗುಡಿಗೋಪುರಗಳನ್ನು ಕಟ್ಟಿ ಶೋಷಿಸುವ ವಿಮರ್ಶಾ ನೆಲೆ ಇಲ್ಲಿದೆ. ಕಬ್ಬಿಣದ ಸಂಕೋಲೆ, ಕಲ್ಲುಕೋಟೆ, ಪೋಲೀಸು- ಇಂಥ ಉಪಮೆಗಳು 'ಮತಿ' ಬಂಧನದ ಭಿನ್ನ ಅವಸ್ಥೆಗಳನ್ನು ಸಂಕೇತಿಸುತ್ತವೆ. 'ಬಗೆಸೆರೆಯ ಭೀಷಣ ಬಲಿಷ್ಠತೆಗುಪಮೆಯಿಲ್ಲ', ಈ ಸಾಲು 'ಮತಿ' ದಾಸ್ಯದ ಕಾಠಿಣ್ಯವನ್ನು ಅನುರಣಿಸುತ್ತದೆ. ಉರಿಬಿಸಿಲಿನ ನಡುಹಗಲಿನಲ್ಲಿ ಮಾದೇಶ್ವರನ ಬೆಟ್ಟಕ್ಕೆ ಹೊರಟಿರುವ ಹೊಟ್ಟೆಬಟ್ಟೆಗಿಲ್ಲದ ಹಳ್ಳಿಗರ ಚಿತ್ರ ಮೌಢ್ಯತೆಯ ಪರಮಾವಧಿಯನ್ನೆ ಮಾರ್ಮಿಕವಾಗಿ ಕಾಣಿಸುತ್ತದೆ. ಮತದ ಅಫೀಮು ಒಡ್ಡುವ ಬಂಧನದ ಬಗೆಗಳನ್ನು ಈ ಕವಿತೆಯಲ್ಲಿ ಕಾಣುತ್ತೇವೆ.

ಗೊಡ್ಡು ಸಾಂಪ್ರದಾಯಿಕ ಕ್ರಿಯಾಚರಣೆಗಳಲ್ಲಿ ತೊಳಲುತ್ತಿದ್ದ ಮಾನವನ 'ಮತಿಹೀನತೆ'ಗೆ ಎದುರಾಗಿಸಿದ 'ಸನ್ಮತಿ'ಯ ಪರಿಣಾಮವನ್ನು 'ಬುದ್ಧದೇವ' ಕವಿತೆಯಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ಬುದ್ಧನ ಕಾಣ್ಕೆಗಳು, ಜನರಲ್ಲಿ ಮನೆಮಾಡಿದ್ದ ಮತೀಯ ಹೆಬ್ಬಂಡೆಗಳು ಬಿರಿಯುವಂತೆ ಮಾಡಿದ ಶಕ್ತಿಯನ್ನು 'ಮೂರ್ಖತೆಯ ದಹಿಸುವ ಮಹಾಜ್ವಾಲೆ' ಎಂದು ಕರೆಯುತ್ತಾರೆ. ವೈರಾಗ್ಯ- ಆಧ್ಯಾತ್ಮಗಳ ವರ್ಷಧಾರೆಯನ್ನು ಎರೆದು ನರನಲ್ಲಿ ಸನ್ಮತಿಯ ಗುರುವನ್ನು ಸ್ಥಾಪಿಸಿದ ಬುದ್ಧನ ಬೋಧನೆಗಳ ಪ್ರಶಂಸೆ ಇಲ್ಲಿ ಪ್ರಕಟವಾಗುತ್ತದೆ.

**೫. 'ಪುರೋಹಿತಶಾಹಿ'ಗೆ ಹೊಸ ವ್ಯಾಖ್ಯಾನ**

ಪೂಜಾರಿಗಳಿಂದ ಆಗುವ ಅನರ್ಥಗಳನ್ನು 'ದೇವರು - ಪೂಜಾರಿ' ಕವಿತೆ ಧ್ಯಾನಿಸುತ್ತದೆ. ಪುರೋಹಿತ ವ್ಯವಸ್ಥೆಗೆ ಹೊಸ ವ್ಯಾಖ್ಯೆಯೊಂದು ಈ ಕವಿತೆಯಲ್ಲಿ ಎದುರಾಗುತ್ತದೆ. ಮೂಲಶಕ್ತಿಯನ್ನು ಇಲ್ಲವಾಗಿಸುವ ಮಧ್ಯವರ್ತಿಗಳೆಲ್ಲರನ್ನು ಇಲ್ಲಿ ಕಾಲ-ದೇಶ ಮತಧರ್ಮಗಳಿಗೆ ಅನ್ವಯವಾಗುವಂತೆ ವಿಶ್ಲೇಷಿಸಲಾಗಿದೆ. ಲೋಕದ ಅನನ್ಯತೆಗಳನ್ನು, ಸತ್ಯಗಳನ್ನು ಮರೆಮಾಚಿಸುವ, ವಿರೂಪಗೊಳಿಸುವ, ತಿರುಚುವ ಮಧ್ಯವರ್ತಿಗಳನ್ನು ಪೂಜಾರಿಗಳೆಂದು ವ್ಯಾಖ್ಯಾನಿಸಲಾಗಿದೆ. ಹಾಗೆಯೇ ಮಹಾಜ್ಞಾನಿಗಳು ಕಾಲಕಾಲಕ್ಕೆ ಹೊತ್ತಿಸಿದ ಜ್ಞಾನಜ್ಯೋತಿಗಳನ್ನು ನಂದಿಸಿ, ಲೋಕಕ್ಕೆ ಅಂಧಕಾರವನ್ನು

ಎಸಗುವ ಪುರೋಹಿತ ವ್ಯವಸ್ಥೆಯ ವಿಡಂಬನೆ ಈ ಕವಿತೆಯ ಮುಖ್ಯ ಧಾತುವಾಗಿ ಮೈಪಡೆಯುತ್ತದೆ. ತಮಂಧತೆಯಲ್ಲಿ ಇಡೀ ಧಾತ್ರಿಯೆ ತನ್ನ ಅಸ್ತಿತ್ವವನ್ನು ನಿರಂತರವಾಗಿ ಕಳೆದುಕೊಳ್ಳುವ ಧ್ವನಿಯನ್ನು ಈ ಕವಿತೆ ಹೊರಡಿಸುತ್ತದೆ.

ವಸಾಹತು ಸಂಸ್ಕೃತಿಯ ಸಂಪರ್ಕದಿಂದ ಎದುರಾದ, ವೈಜ್ಞಾನಿಕ ಆವಿಷ್ಕಾರಗಳಿಂದ ಉತ್ಪನ್ನವಾದ ಹೊಸವಿಚಾರಧಾರೆಯು ನವೋದಯ ಕಾವ್ಯದ ಮುಖ್ಯ ಪ್ರವೃತ್ತಿಯಾಗಿ ಮೈಪಡೆಯುತ್ತದೆ. ವೈಜ್ಞಾನಿಕ ಸತ್ಯಗಳು ವಿಶ್ವವ್ಯಾಪ್ತಿ ಪಾರಂಪರಿಕ ಪುರೋಹಿತಶಾಹಿಯ ಮತೀಯ ಗುಟ್ಟುಗಳನ್ನು ಬಯಲು ಮಾಡಿದ ಕಾರಣದಿಂದ, ವೈಜ್ಞಾನಿಕ ಶೋಧನಾ ನೆಲೆಗಳನ್ನು ಕುವೆಂಪು ಗಾಢವಾಗಿ ಚಿಂತಿಸಿದರು. ಹಾಗೆಯೇ ವೈಜ್ಞಾನಿಕ ಆವಿಷ್ಕಾರಗಳಿಂದ ಮೈತಳೆದ ಸತ್ಯಗಳನ್ನು ಪಾರಂಪರಿಕ ಭಾರತೀಯ ನೆಲೆಗಳಿಗೆ ಎದುರಾಗಿಸುವಲ್ಲಿ ವಸಾಹತು ಸಂಸ್ಕೃತಿಯು ಕುವೆಂಪು ಅವರ ಕಾವ್ಯದಲ್ಲಿ ಹಲವು ಘಟ್ಟದ ಸ್ವೀಕೃತ ನೆಲೆಗಳಲ್ಲಿ ಮೈ ಪಡೆಯುತ್ತದೆ. 'ಯಂತ್ರರ್ಷಿ', 'ಕೈ ಮುಗಿ ಆ ತಂತಿಯ ಕಂಬಕ್ಕೆ' ಕವನಗಳಲ್ಲಿ ವೈಜ್ಞಾನಿಕ ಅನ್ವೇಷಣೆಯ ಕೂಸುಗಳಾದ ಯಂತ್ರಗಳ ಬಗೆಗಿನ ವಿಸ್ಮಯ ವೈಚಿತ್ರ್ಯಗಳನ್ನು ಹಾಗೂ ಅವುಗಳ ಅನ್ವೇಷಣೆಗೆ ಕಾರಣವಾದ ಮನುಷ್ಯನ 'ಮತಿ'ಯ ವಿಸ್ತಾರವಾದ ಬಗೆಗೆ ಮೆಚ್ಚುಗೆಯನ್ನು ಕಾಣುತ್ತೇವೆ. 'ಮತಿ'ಯನ್ನು ವೈಜ್ಞಾನಿಕ ಚಿಕಿತ್ಸೆಗೆ ಒಳಪಡಿಸಿದ ನೆಲೆಯ ಬಗೆಗೆ ಅಗಾಧ ಕುತೂಹಲವಿರುವುದು 'ಯಂತ್ರರ್ಷಿ' ಕವನದಲ್ಲಿ ಕಾಣುತ್ತದೆ. ಋಷಿ ಅಥವಾ ತಪಸ್ವಿಯ ಪಾರಂಪರಿಕ ಅರ್ಥಗಳಿಗೆ ಯಂತ್ರರ್ಷಿಯನ್ನು ಸಮೀಕರಿಸುವ ಮೂಲಕ ಹೊಸ ಕಾಣ್ಕೆಯೊಂದು ಇಲ್ಲಿ ಪ್ರಕಟವಾಗುತ್ತದೆ. ಪ್ರಾಕೃತಿಕ ಶಕ್ತಿಗಳಾದ ಅಗ್ನಿ, ವಾಯು, ಜಲಗಳಿಗೆ ದೈನ್ಯದಿಂದ ತಲೆಬಾಗಿದ್ದ ಮಾನವ, ವಿಜ್ಞಾನದ ಮಹಿಮೆಯಿಂದ ಇಡೀ ಪ್ರಕೃತಿಯನ್ನೇ ಗೆದ್ದು ಲೋಕೇಶನಾದ ಬಗೆಗೆ ಕವಿತೆ ಚಿಂತಿಸುತ್ತದೆ.

ಜೀವ ವಿಕಾಸದ ಹಂತದಲ್ಲಿ, ನಾಗರಿಕ ಮನುಜನು ಸಾಧನೆಯ ಔನ್ನತ್ಯಕ್ಕೆ ಏರುವ ಸ್ವಪ್ನವನ್ನು ಕಂಡವರಾರು? ಎಂಬ ವಿಸ್ಮಯ ಇಲ್ಲಿದೆ. ಹಿಂದಿನ ಮೂಢನರೆನೆಲ್ಲಿ? ಈ ಯಂತ್ರರ್ಷಿ ಎಲ್ಲಿ? ಆ ಅನಾಗರೀಕನೆಲ್ಲಿ ? ಈ ನಾಗರಿಕನೆಲ್ಲಿ? ಎಂಬ ಪ್ರಶ್ನೆಗಳೊಂದಿಗೆ ವೈಜ್ಞಾನಿಕ ಶೋಧದ ವಿಸ್ಮಯಗಳನ್ನು, ಅದರ ಶಕ್ತಿ ಸಾಮರ್ಥ್ಯಗಳನ್ನು ಕುವೆಂಪು ಕಾವ್ಯ ಹೀಗೆ ನಿರೂಪಿಸುತ್ತದೆ :

ಯುಗಯುಗಗಳ ಜ್ಞಾನದಿಂದೆಮ್ಮನುತ್ತರಿಸಿ
ವಿಜ್ಞಾನ ವಿದ್ಯೆಯನು ನೀಡಿ ಕಾಪಾಡಿರುವ
ಓ ಮಾನವನ ಧೀರ ಮತಿಯೆ, ನೀನಿಂದೆಮಗೆ
ಆರಾಧ್ಯ ದೇವತೆಯು! ನಿನ್ನ ಪೂಜಿಪ ನರರು,
ಯಂತ್ರರ್ಷಿ ಮಾನವರೆ, ಮಂತ್ರರ್ಷಿಗಳು ನಮಗೆ !
ಹೇ ಪುಣ್ಯಯಂತ್ರರ್ಷಿ, ನೀನೆಮ್ಮ ವಿಜಿಗೀಷು
ಮತಿಗೆ ಪ್ರತಿನಿಧಿಯಾಗಿ ನಿಂತಿರುವೆ ; ಅದರಿಂದೆ
ರಾಜರಾಜರ ಹೊಗಳಲಾರದೀ ಕಬ್ಬಿಗನ
ವಾಣಿ ನಿನ್ನನು ಕುರಿತು ಹಾಡುತಿದೆ ! ಇನ್ನೆಲ್ಲಿ
ಭೂತಳಾದಿಪರ ನುತಿ? ಇನ್ನೆಲ್ಲಿ ಮಾನವರ
ಕೊಲೆಗೈವ ರಕ್ತದಾಹಾತರರ ವೀರಕಥೆ?[೮]

ವೈಜ್ಞಾನಿಕ ಮತಿಯನ್ನು ಕುರಿತು ಯೋಚಿಸುವ ಪ್ರಜ್ಞೆ ಇಲ್ಲಿ ಆರಾಧ್ಯ ದೈವವಾಗಿ, ಯಂತ್ರರ್ಷಿ ಮಾನವರು, ಮಂತ್ರರ್ಷಿಗಳಾಗಿ ದೈವತ್ವಕ್ಕೇರುವುದರೊಂದಿಗೆ, ರಾಜರಾಜರನ್ನು ಹೊಗಳಲಾರದ ಕಬ್ಬಿಗನ ಸಂವೇದನೆ ಯಂತ್ರರ್ಷಿಯನ್ನೆ ಇಲ್ಲಿ ಕಾವ್ಯ ವಸ್ತುವನ್ನಾಗಿ ಮಾಡಿಕೊಂಡಿದೆ. ಹಿಂದಿದ್ದ ಮತೀಯ ಭೇದದ ಗೋಡೆಗಳನ್ನು ಒಡೆದು, ಮನುಷ್ಯನ ನೆಮ್ಮದಿಗೆ ಕಾರಣವಾದ ವೈಜ್ಞಾನಿಕ 'ಮತಿ'ಯ ಪ್ರತಿನಿಧಿಯಾದ ಯಂತ್ರರ್ಷಿಯ ಶಕ್ತಿಯ ಬಗೆಗೆ ಇಲ್ಲಿ ಮೆಚ್ಚುಗೆಯಿದೆ. ಇಂಥ ಶಕ್ತಿಗೆ ಶುಭವಾಗಲೆಂಬ, ಜಯವಾಗಲೆಂಬ ಹಾರೈಕೆಯು ಇಲ್ಲಿದೆ. ಹಾಗೆಯೇ ಯಂತ್ರರ್ಷಿಯ ತಂತ್ರಗಾರಿಕೆಯಿಂದ ಪ್ರಕೃತಿಯನ್ನು ಮಾನವ ಹಿತಾಸಕ್ತಿಗಳಿಗೆ ದುಡಿಸಿಕೊಂಡ ಕ್ರಿಯಾಶಕ್ತಿಯ ಬಗೆಗೆ ವಿಸ್ಮಯಗೊಂಡಂತೆ ಮನುಷ್ಯನ 'ಮತಿ'ಗೆ ಜ್ಞಾನಗಂಗೆಯನ್ನು ಎಳೆದು ತಂದ 'ಯಂತ್ರರ್ಷಿ' ಭಗೀರಥನಿಗೆ ಚಿರಂಜೀವತ್ವ ಒದಗಲೆಂಬುದು ಇಲ್ಲಿನ ಆಶಯ. ವೈಜ್ಞಾನಿಕ ಅನ್ವೇಷಣೆಗಳು ಪುರೋಹಿತಶಾಹಿ ಒಡ್ಡಿದ ಪಾರಂಪರಿಕ ಆತಂಕಗಳಿಗೆ ದಾರಿತೋರಿದ್ದರಿಂದ ಯಂತ್ರರ್ಷಿ ಆರಾಧ್ಯದೈವತ್ವಕ್ಕೇರುತ್ತಾನೆ. ಇಂಥ ನೆಲೆಗಳಲ್ಲಿ ವಸಾಹತುಶಾಹಿ ಹೊತ್ತು ತಂದ ವೈಜ್ಞಾನಿಕ ವಿಚಾರಧಾರೆ ಕುವೆಂಪು ಕಾವ್ಯದಲ್ಲಿ ಸ್ವೀಕೃತವಾಗುತ್ತದೆ. ಆದರೆ, ಸಾಮ್ರಾಜ್ಯಶಾಹಿ ಎಸಗುವ ಆಕ್ರಮಣಕಾರಿ ನೆಲೆಗಳಿಗೆ ಅವರ ಸಂವೇದನೆ ಪಾಂಚಜನ್ಯವಾಗಿ ಮೊಳಗುತ್ತಲೇ, ವಿಪ್ಲವ ಮೂರ್ತಿಯಾಗಿ ಅವತಾರ ತಾಳುತ್ತದೆ.

ವಿಜ್ಞಾನ - ಮನುಷ್ಯ - ಸ್ವಾತಂತ್ರ್ಯ - ಹೊಸ ಪ್ರಜ್ಞೆ ಇವುಗಳ ವಿಕಾಸಶೀಲತೆ ಒಂದು ಸಮಗ್ರ ರೂಪಕವಾಗಿ ಪ್ರಕಟಗೊಳ್ಳುವುದರ ಮೂಲಕ ವಸಾಹತೀಕರಣದ ವಿಚಾರಶೀಲತೆ ಇಲ್ಲಿನ ಮುಖ್ಯ ಶೋಧವಾಗಿರುವುದನ್ನು ಗುರುತಿಸಬಹುದು.

### ೬. ಸ್ವಾತಂತ್ರ್ಯ ಯುದ್ಧ : ನವಭಾರತದ ಅಭೀಪ್ಸೆ

ಸಮಕಾಲೀನ ಭಾರತೀಯ ಸಮಸ್ಯೆಗಳಲ್ಲಿ ಸ್ವಾತಂತ್ರ್ಯ ಸಂಪಾದನೆಯೂ ಒಂದು. ಈ ಸಮಸ್ಯೆ ಕುವೆಂಪು ಅವರ ಕಾವ್ಯದಲ್ಲಿ ಅತ್ಯಂತ ತೀವ್ರವಾಗಿ ಮೈ ಪಡೆಯುತ್ತದೆ. ಸ್ವಾತಂತ್ರ್ಯಕ್ಕೆ ಅತ್ಯಗತ್ಯವಾದ ಮನೋಭೂಮಿಕೆಯನ್ನು ಜನರಲ್ಲಿ ಎಚ್ಚೆತ್ತುವಂತೆ ಪ್ರೇರೇಪಿಸುವುದರ ಕಡೆಗೆ ಇವರ ಕಾವ್ಯ ತುಡಿಯುತ್ತದೆ. ಹಾಗೆ ತುಡಿಯುತ್ತಲೆ, ಸ್ವಾತಂತ್ರ್ಯ ಸಂಪಾದನೆಗೆ ಅಗತ್ಯವಾದ ತರುಣಶಕ್ತಿಯ ಗಮನ ಸೆಳೆಯುವಲ್ಲಿ ಕ್ರಿಯಾಶೀಲವಾಗುತ್ತದೆ. ಹಾಗೆ ಕ್ರಿಯಾಶೀಲವಾಗುತ್ತಲೆ, ವಸಾಹತು ಸಂಸ್ಕೃತಿಯ ಆಕ್ರಮಣಶೀಲ ನೆಲೆಗಳನ್ನು, ಅದರ ಕ್ರೌರ್ಯದ ಬಗೆಗಳನ್ನು ವಿಶ್ಲೇಷಣೆಗೆ ಗುರಿಪಡಿಸುತ್ತದೆ. ಈ ಕೆಳಗಿನ ಉದ್ಧರಣೆ ಅಂದಿನ ಭಾರತದ ಸ್ಥಿತಿಗತಿಗಳನ್ನು ಪ್ರಕಟಿಸುತ್ತದೆ. ಹಾಗೆಯೆ ಭಾರತದ ಸಂವೇದನೆ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟದ ಅಗತ್ಯವನ್ನು ಮನಗಾಣಿಸುತ್ತದೆ.

> ಆಧುನಿಕ ಜಗಜ್ಜೀವನ ರಾಜಕೀಯಾಗ್ನಿಯಿಂದ ಕುದಿಯುತ್ತಿರುವಂತೆ ಮತ್ತಾವುದರಿಂದಲೂ ಕುದಿಯುತ್ತಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ತಾವೂ ಸ್ವತಂತ್ರ್ಯವಾಗಿದ್ದುಕೊಂಡು, ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿಕೊಂಡು ಹೊಟ್ಟೆ ತುಂಬಿರುವ ದೇಶಗಳು ಕಟ್ಟಿದ ಬುತ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಕಾತರತೆಯಿಂದ ಕತ್ತಿ ಮಸೆಯುತ್ತಿವೆ. ಸ್ವತಂತ್ರವಾಗಿದ್ದರೂ ಹಿಂದಿದ್ದ ಸಾಮ್ರಾಜ್ಯವನ್ನು ಕಳೆದುಕೊಂಡಿರುವ ದೇಶಗಳು ಮಾತ್ಸರ್ಯ, ಸ್ಪರ್ಧೆ ಮತ್ತು ಲಾಭದೃಷ್ಟಿ ಇವುಗಳಿಂದ ಪ್ರೇರಿತವಾಗಿ ಪುನಃ ಸಾಮ್ರಾಜ್ಯ

ನಿರ್ಮಾಣಮಾಡಲೆಂದು ತೋಳುತಟ್ಟಿ ಕಾಲು ಕೆರೆಯುತ್ತಿವೆ......... ಸ್ವಾತಂತ್ರ್ಯವನ್ನು ಕಳೆದುಕೊಂಡು, ಪ್ರಬಲವಾದ ಪರಕೀಯರ ಪದಾಘಾತಕ್ಕೆ ಸಿಕ್ಕಿ, ನರಳುತ್ತಿರುವ ದೇಶಗಳು ಸ್ವಾತಂತ್ರ್ಯ ಸಂಪಾದನೆಗಾಗಿ ಹಗಲಿರುಳೂ ಹಾರೈಸಿ ದುಡಿಯುತ್ತಿವೆ.

ರಾಷ್ಟ್ರೀಯತೆಯಂತೆ ಅಂತರರಾಷ್ಟ್ರೀಯತೆಯಂತೆ; ಸಾಮ್ರಾಜ್ಯವಾದವಂತೆ ಸಮತಾವಾದವಂತೆ; ಫ್ಯಾಸಿಸಂ ಅಂತೆ ನಾಜಿಸಂ ಅಂತೆ; ಬಂಡವಾಳಗಾರರಂತೆ, ಕೆಲಸಗಾರರಂತೆ! ನೂರಾರು ಪಕ್ಷ ಪ್ರತಿಪಕ್ಷಗಳಿಗೆ ಹಣಾಹಣಿಯಾಗುತ್ತಿದೆ.

ನಮ್ಮ ಹೊಸ ಸಾಹಿತ್ಯಕ್ಕೆ ಪ್ರಕೃತವಾದುದು ಭರತ ಖಂಡದ ರಾಜಕೀಯ ಪರಿಸ್ಥಿತಿ. ಇಲ್ಲಿ ಬಹು ಮುಖ್ಯವಾದುದೆಂದರೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ತಪಸ್ಸು.[6]

ಈ ಮೇಲಿನ ಉದ್ಧರಣೆಯಲ್ಲಿ ವಸಾಹತುಶಾಹಿ ಈ ಶತಮಾನದಾದಿಯಲ್ಲಿ ಎದುರಾಗಿಸಿದ ತಲ್ಲಣಗಳ ವಿಶ್ಲೇಷಣೆಯಿದೆ. ಅಂಥ ತಲ್ಲಣಗಳಿಂದ ಎದುರಾದ ದಾಸ್ಯ ಹಾಗೂ ದಾಸ್ಯದಿಂದ ಉತ್ಪನ್ನವಾದ ಸಂಕಟಗಳನ್ನು ಇಲ್ಲಿ ದಾಖಲಿಸಲಾಗಿದೆ. ದೇಶೀಯ ಸಂಸ್ಕೃತಿಯೊಂದರ ಮೇಲೆ ಎರಗಿದ ವಿಶ್ವದ ರಾಜಕೀಯ ಚಿಂತನೆಗಳ ಆಕ್ರಮಣಗಳಿಗೆ ಹಾಗೂ ಅವುಗಳಿಂದ ಎದುರಾದ ಗೊಂದಲಗಳಿಗೆ ಸಾಹಿತ್ಯ ಮುಖಾಮುಖಿಯಾಗಬೇಕಾದ ಜರೂರನ್ನು ಒತ್ತಿ ಹೇಳುತ್ತಿದೆ. 'ಪಾಂಚಜನ್ಯ', 'ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ' ಕವನಸಂಕಲನಗಳ ಮನೋಧರ್ಮ ಇಂಥ ಜರೂರುಗಳಿಂದ ಕೂಡಿದೆ.

'ಪಾಂಚಜನ್ಯ' ಶೀರ್ಷಿಕೆಯನ್ನುಳ್ಳ ಕವಿತೆ ಆ ಕಾಲದ ಯುವ ಸಂವೇದನೆಯನ್ನು ಸ್ವಾತಂತ್ರ್ಯ ಸಮರಕ್ಕೆ ಅಣಿಗೊಳಿಸುವ, ನವಭಾರತ ನಿರ್ಮಾಣಕ್ಕೆ ಅಗತ್ಯವಾದ ಮನೋಭೂಮಿಕೆಯನ್ನು ಬಿತ್ತುವ ಧೋರಣೆಯುಳ್ಳದ್ದಾಗಿದೆ. ಈ ಬಗೆಯ ಧೋರಣೆಗಳಲ್ಲಿ ಭಾರತೀಯ ನವೋದಯದ ರಾಷ್ಟ್ರೀಯತೆಯ ಪರಿಕಲ್ಪನೆಗಳು ಪ್ರಕಟವಾಗುತ್ತವೆ. ವಿಜ್ಞಾನ ಹಾಗೂ ಪಾಶ್ಚಾತ್ಯ ವಿಚಾರಧಾರೆಯ ಸಂಸರ್ಗದಿಂದ ಎಚ್ಚೆತ್ತ ಭಾರತೀಯ ಸಂವೇದನೆ ಶೋಧಿಸಿಕೊಳ್ಳುತ್ತಿದ್ದ ಪ್ರಜ್ಞೆಯನ್ನು ಈ ಕವಿತೆಯಲ್ಲಿ ಕಾಣುತ್ತೇವೆ. ಶತ್ರುವಿನೊಂದಿಗೆ ಹೋರಾಟಕ್ಕೆ ಅಗತ್ಯವಾದ ಮನಸ್ಥಿತಿಯನ್ನು ದೇಶದ ಮೂಲೆ ಮೂಲೆಯಲ್ಲೂ ಎಚ್ಚರಿಸುತ್ತಿದ್ದ ನೆಲೆಗಳು ಇಲ್ಲಿ ಮೈ ಪಡೆಯುತ್ತವೆ. ಆ ನೆಲೆಗಳು ಯಾವ ಬಗೆಯವು ಎಂಬುದು ಈ ಕೆಳಗಿನ ಕವಿತೆಯ ಸಾಲುಗಳಲ್ಲಿಯೇ ವ್ಯಕ್ತವಾಗುತ್ತದೆ.

ಭರತ ಖಂಡ ಹಿತವೆ
    ನನ್ನ ಹಿತ ಎಂದು,
- - - - - - - - - - - -
 ನುಗ್ಗು ಮುಂದಕೆ, ವೀರ
   ಸಗ್ಗದಾ ನೆಲೆಗೆ
ನೋಡದೋ ನೋಡಲ್ಲಿ

ದರ್ಪರಥದಡಿಯಲ್ಲಿ
ಹೊರಳುತಿರುವಳು ತಾಯಿ
ನೆತ್ತರಿನ ಪುಡಿಯಲ್ಲಿ !೧೦

ಜಾತಿ, ಮತ, ದೇಶಗಳ ಅಂತರಗಳನ್ನು ಮರೆತು, ಭರತಮಾತೆಯ ಮುಕ್ತಿಯೇ ತನ್ನ ಮುಕ್ತಿ ಎಂದು ಪ್ರತಿಯೊಬ್ಬನೂ ತಿಳಿದು, ಸ್ವಾತಂತ್ರ್ಯ ಸಮರಕ್ಕೆ ಸಿದ್ಧವಾಗಬೇಕಾದ ಅನಿವಾರ್ಯತೆಯನ್ನು ಇಲ್ಲಿ ಕಾಣುತ್ತೇವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಶ್ರೀ ಸಾಮಾನ್ಯನನ್ನು ಕ್ರಿಯಾಶೀಲವಾಗುವಂತೆ ಪ್ರೇರೇಪಿಸುವ ಇಂಥ ಪ್ರಕ್ರಿಯೆ 'ಕುಮಾರವ್ಯಾಸನು ಹಾಡಿದನೆಂದರೆ' ಕವಿತೆಯಲ್ಲಿ ಪ್ರಕಟಗೊಂಡಿರುವ ಸ್ವರೂಪ ಗಮನೀಯವಾದದ್ದಾಗಿದೆ. ಮೇಲುನೋಟಕ್ಕೆ ಈ ಕವಿತೆ ಕುಮಾರವ್ಯಾಸನ ಕಾವ್ಯಾಸ್ವಾದನೆಯಂತೆ ಕಾಣುತ್ತದೆ. ಆದರೆ ಆಳದಲ್ಲಿ ಭಾರತದ ಸ್ವಾತಂತ್ರ್ಯ ಸಮರಕ್ಕೆ ಅಣಿಗೊಳಿಸುವ ಮನೋಭೂಮಿಕೆಯನ್ನೇ ಕುರಿತದ್ದಾಗಿದೆ. ವಸಾಹತು ಸಂಸ್ಕೃತಿಯ ಸಂಘರ್ಷದಿಂದ ಎದುರಾದ ರಾಜಕೀಯ ಹಾಗೂ ಸಾಂಸ್ಕೃತಿಕ ದಾಸ್ಯದಿಂದ ಬಿಡುಗಡೆ ಪಡೆಯುವ ಪ್ರಕ್ರಿಯೆಯು ಕಲಿಯುಗ ದ್ವಾಪರವಾಗುವ ಅನುಭವದಲ್ಲಿ ಮುಖಾಮುಖಿಯಾಗುತ್ತದೆ. ಕುರುಕ್ಷೇತ್ರದ ರಣಭೂಮಿಯ ಚಿತ್ರಮಾಲೆಯಲ್ಲಿ ಎದುರಾಗಿಸುವ ದೃಶ್ಯಗಳ ಮುಖೇನ, ಭಾರತೀಯ ಯುವಶಕ್ತಿಯಲ್ಲಿ ಆತ್ಮಸ್ಥೈರ್ಯವನ್ನು, ಹೋರಾಟದ ಮನೋಭಾವ ಮತ್ತು ಕರ್ತವ್ಯಗಳನ್ನು ಎಚ್ಚರಿಸುವ ವಾಣಿಯಂತೆ ಈ ಕವಿತೆ ಕೇಳಿಸುತ್ತದೆ. ವಸಾಹತುಶಾಹಿ ಸಂಸ್ಕೃತಿಯ ಕುತಂತ್ರಗಳಿಂದ ಎದುರಾಗುವ ಅನ್ಯಾಯಗಳ ಬಗೆಗೆ ಯುವ ಜನತೆಯನ್ನು ಪ್ರೇರೇಪಿಸುವ ನೆಲೆಯು ಈ ಕವಿತೆಯ ಆಶಯವಾಗಿದೆ. ನವೋದಯ ಕಾಲದ ಕಾವ್ಯಾಸ್ವಾದನೆಯು ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕವಾಗುವ ವ್ಯಕ್ತಿತ್ವ ನಿರ್ಮಾಣಗಳ ಶೋಧನೆ-ಪ್ರೇರಣೆಗಳಿಗೆ ಅಣಿಗೊಳಿಸುವ ಧ್ವನಿಯು ಇಲ್ಲಿ ಪ್ರಕಟವಾಗುತ್ತದೆ.

ಪ್ರತಿಯೊಬ್ಬ ಕಲಿಯ ಹೋರಾಟ ಮನೋಭಾವ, ಕಲಿಯುಗ ಭಾರತದ ಸಮಷ್ಟಿ ಜನತೆಯಲ್ಲಿ ಮೈ ಪಡೆಯಬೇಕೆಂಬುದು ಈ ಕವಿತೆಯ ಬಹುಮುಖ್ಯ ಆಶಯಗಳಲ್ಲಿ ಒಂದು. ಇಂಥ ಮನೋಭೂಮಿಕೆಯ ಅವತಾರವು 'ವಿಪ್ಲವ ಮೂರ್ತಿ', 'ಭೈರವ ನಾರಿ', ಕವಿತೆಗಳಲ್ಲಿ ವಿಭಿನ್ನ ನೆಲೆಗಳಲ್ಲಿ ಅದರ ವಿರಾಟ್ ರೂಪವನ್ನು ತಾಳುತ್ತದೆ.

'ಶ್ರಾವಣ ಸಂಧ್ಯಾ ಸಮೀರ' ಕವಿತೆ ಬೇಂದ್ರೆಯವರ 'ಶ್ರಾವಣ' ಪದ್ಯಗಳನ್ನು ನೆನಪಿಸುತ್ತದೆ. ಶ್ರಾವಣ ಮಾಸದ ಈ 'ಸಮೀರ'ನು ನಾಡಿನ ಬದುಕಿಗೆ ಚೈತನ್ಯವನ್ನು ತರುವವನಾಗಿದ್ದಾನೆ. 'ಶ್ರಾವಣ ಸಮೀರ'ನು ಹೊತ್ತು ತಂದ ಹೊಸ ವಿಚಾರಧಾರೆಗಳು ದೇಶದಾದ್ಯಂತ ಎಬ್ಬಿಸಿದ ಚೈತನ್ಯಶೀಲತೆಯನ್ನೆ ಸೂಚಿಸುತ್ತವೆ. ಅಂಥ 'ಸಮೀರ'ನನ್ನು ಕವಿ ಸಂವೇದನೆ ಅಸಂಖ್ಯ ಸಮಸ್ಯೆಗಳಿಗೆ, ಸಂಕೀರ್ಣತೆಗಳಿಗೆ ಪರಿಹಾರಗಳನ್ನು ತರುವ ಶಕ್ತಿಯೆಂದು ಭಾವಿಸಿದೆ. ಕಡಲಾಚೆಗಿನ ಜ್ಞಾನರಾಶಿಗಳನ್ನು ಹೊತ್ತು ತರುವ ಸಮೀರನೆ ಸ್ವಾತಂತ್ರ್ಯ ಸಂದೇಶವನ್ನು ಸಾರುವ, ಜಡ ಬದುಕಿನಲ್ಲಿ ಎಚ್ಚರವನ್ನುಂಟುಮಾಡುವ ಪ್ರತಿನಿಧಿಯಾಗುತ್ತಾನೆ, ಚೇತನವಾಗುತ್ತಾನೆ. ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಜಾಗೃತಗೊಂಡ ಭಾರತೀಯ ಸಂವೇದನೆ ಆ ಸಂಸ್ಕೃತಿಗೆ ಮುಖಾಮುಖಿಯಾಗುವ ನೆಲೆಗಳು ಇಲ್ಲಿವೆ. ಅಂಥ ನೆಲೆಗಳಲ್ಲಿಯೆ ರಕ್ತಕ್ರಾಂತಿಯು ಮೈಪಡೆಯುತ್ತಿದ್ದುದನ್ನು 'ರಕ್ತಧುನಿ' ಕವಿತೆಯಲ್ಲಿ ಕಾಣುತ್ತೇವೆ. 'ರಕ್ತಧುನಿ' ಕವಿತೆಯ

ಪ್ರವಾಹದಲ್ಲಿ ಹೊಸ ವಿಚಾರಧಾರೆಯು ಮೌಢ್ಯ ಮತ್ತು ದಾಸ್ಯಗಳಿಗೆ ಮುಖಾಮುಖಿಯಾಗುವ ಸನ್ನಿವೇಶ - ಸಂದರ್ಭಗಳು ಪ್ರಾಮುಖ್ಯತೆ ಪಡೆಯುತ್ತವೆ. ಈ ಹೊಸ ವಿಚಾರಧಾರೆಯ ಆರ್ಭಟ ರಕ್ತಕ್ರಾಂತಿಗೆ ಕರೆ ನೀಡುತ್ತದೆ. ಇಲ್ಲಿ ಲೇಖನಿಯು ತೀವ್ರವಾಗುತ್ತದೆ.

**೨. ಸ್ವಾತಂತ್ರ್ಯ : ಸರ್ವೋದಯದ ಕಲ್ಪನೆ**

ಮತ ಮೌಢ್ಯತೆಗಳಿಂದ ಎದುರಾದ ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕಿ, ಸರ್ವೋದಯದ ಮಂತ್ರವನ್ನು ಶೋಧಿಸಿಕೊಳ್ಳುವುದರ ಕಡೆಗೆ ಪ್ರೇರಿತವಾದದ್ದು ನವೋದಯ ಕಾವ್ಯದ ಗಂಭೀರವಾದ ಕಾಣ್ಕೆಯಾಗಿದೆ. ಪುರೋಹಿತಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಅವನತಿಯ ಹಾದಿಯನ್ನು ಹಿಡಿದು, ಶ್ರೀ ಸಾಮಾನ್ಯನು ಮಾನ್ಯವಾಗುವ ವ್ಯವಸ್ಥೆಯ ಶೋಧನೆ ಈ ಮುಂದೆ ಕುವೆಂಪು ಅವರ ಕಾವ್ಯ ಪ್ರವೃತ್ತಿಯಾಗುವ ನೆಲೆಗಳನ್ನು ಕಾಣಿಸುತ್ತದೆ. ಸಾಮಾಜಿಕ ಅಸಮಾನತೆಯ ವಿರಾಟ್‌ದರ್ಶನ 'ಕಲ್ಕಿ' ಕವನದಲ್ಲಿ ಹಠಾತ್ತನೆ ಮುಖಾಮುಖಿಯಾಗು ವುದರೊಂದಿಗೆ, ಸಾಮಾಜಿಕ ಅಸಾಂಗತ್ಯಗಳ ಕರಾಳ ಮುಖಗಳ ಚಿತ್ರಗಳು ಪ್ರಕಟವಾಗುತ್ತವೆ.

ಕುವೆಂಪು ಅವರ ಮಹತ್ವದ 'ಕಲ್ಕಿ' ಕವನವು ಈ ಶತಮಾನದಾದಿಯ ಸಮಷ್ಟಿಯನ್ನು ನಿದ್ದೆಗೆಡಿಸಿತೆನ್ನಬಹುದು. ಸಾಮಾಜಿಕ ಅಸಾಂಗತ್ಯಗಳ ಕ್ರೌರ್ಯಗಳನ್ನು ನಾಟ್ಯೀಕರಿಸುವ ಈ ಕವನ, ಶತಶತಮಾನಗಳ ಮತೀಯ ಮೌಢ್ಯತೆಗೆ ಎದುರಾಗಿಸಿದ ಪ್ರತಿಮೆಯೂ ಆಗಿದೆ. ಅಂಥ ಮೌಢ್ಯತೆಗೆ ಒಳಗಾದ ಶೋಷಕನ ದುರಾವಸ್ಥೆಗಳು ನಿರೂಪಕನ ಕನಸನ್ನು ಭಗ್ನಗೊಳಿಸುವುದರೊಂದಿಗೆ, ವಾಸ್ತವತೆಗಳ ಕಡೆಗೆ ಕಣ್ತೆರೆಯುವಂತೆ ಮಾಡುವ ಪ್ರಕ್ರಿಯೆಯು ನವೋದಯ ಕಾವ್ಯದ ಮುಖ್ಯ ಪ್ರವೃತ್ತಿ ಎನ್ನಬಹುದು. ಈ ಪ್ರವೃತ್ತಿ ದೃಢವಾಸ್ತವಗಳ ಶೋಧನೆಯಲ್ಲಿ ಪುರೋಹಿತಶಾಹಿ ಮತ್ತು ವಸಾಹತುಶಾಹಿಯ ಆಕ್ರಮಣಶೀಲ ನೆಲೆಗಳಿಗೆ ಮುಂದೆ ಎದುರಾದ ಪ್ರಕ್ರಿಯೆಯು ಅತ್ಯಂತ ಗಮನಾರ್ಹವಾದುದು. ಈ ಮೇಲಿನ ಶೋಷಕ ನೆಲೆಗಳಿಂದ ದೇಶ ಮತ್ತು ಶ್ರೀ ಸಾಮಾನ್ಯನಿಗೊದಗಿದ ದುರಾವಸ್ಥೆಗಳ ಬಗೆಗಳನ್ನು ಶೋಧಿಸಿಕೊಳ್ಳಲು ಈ ಕಾಲದ ಸೃಷ್ಟಿಶೀಲ ಸಂವೇದನೆ ತೊಡಗುತ್ತದೆ. ಮುಂದೆ ವಿಶ್ಲೇಷಣೆಗೆ ತೆಗೆದುಕೊಳ್ಳುವ ಕವಿತೆಗಳಿಂದ ಆ ಕಾಲದ ಶೋಧನೆಯ ನೆಲೆಗಳು ಯಾವ ಬಗೆಯದು ಎಂಬುದನ್ನು ಕಂಡುಕೊಳ್ಳಲಾಗುತ್ತದೆ. ಪ್ರಕೃತಿ ಆರಾಧನೆಯ ತನ್ಮಯತೆಗಳಲ್ಲಿ ತನ್ನ ಅನನ್ಯತೆಗಳನ್ನು ಕಂಡುಕೊಳ್ಳುತ್ತಿದ್ದ ನವೋದಯ ಸೃಷ್ಟಿಶೀಲ ಮನಸ್ಸು ಎಲ್ಲ ಮಟ್ಟದ ದಾಸ್ಯದ ಬಿಡುಗಡೆಗಾಗಿ, ಮಾನವೀ ನೆಲೆಗಳ ಶೋಧಕ್ಕಾಗಿ ತೊಡಗುತ್ತದೆ.

ಈ ಬಗೆಯ ಶೋಧ ಈ ಮೊದಲಿನ ವೈಚಾರಿಕ ಪ್ರಜ್ಞೆಯನ್ನು ರೂಪಿಸಿಕೊಳ್ಳುವುದರ ಮುಖೇನ ಎದುರಾಗುತ್ತದೆ. ದೇಶದ ದುರಾವಸ್ಥೆ ಹಾಗೂ ಶ್ರೀ ಸಾಮಾನ್ಯನ ದುಃಖ-ದುಮ್ಮಾನಗಳು ಈ ಕವಿತೆಯ ಮುಖ್ಯ ಚಿಂತನೆ. ಅಂದರೆ ಪಾರಂಪರಿಕ ಹಾಗೂ ಆಧುನಿಕ ಶಕ್ತಿಗಳು ಮತ್ತೂ ಬೇರೆಯದೇ ಆದ ಸಮಸ್ಯೆಗಳನ್ನು ಒಡ್ಡುತ್ತವೆ. ಇಂಥ ದ್ವಂದ್ವಗಳೂ ಭಾರತೀಯ ಸಂವೇದನೆ ಹೊಸನಾಡನ್ನು ಕಟ್ಟುವ ಕನಸು, ನಾಡು-ನುಡಿಗಳ ಅನನ್ಯತೆಗಳ ಶೋಧನೆಗೆ ತೊಡಗಿದ್ದು ಈ ಶತಮಾನದ ಕನ್ನಡ ಕಾವ್ಯದ ಮಹತ್ವದ ಪ್ರಕ್ರಿಯೆಯಾಗಿದೆ.

ದೇಶ ದಾಸ್ಯಕ್ಕೆ ಒಳಗಾದ ಕಾರಣಗಳ ಅನ್ವೇಷಣೆ 'ಇಂದಿನ ದೇವರು' ಕವಿತೆಯಲ್ಲಿ ಪ್ರಕಟವಾಗುತ್ತದೆ. ಪುರೋಹಿತಶಾಹಿ ಒಡ್ಡಿದ ಮೌಢ್ಯತೆಯಿಂದ ಜಡಶಿಲೆಗಳಿಗೆ ಪೂಜೆಗೈದು ದುಸ್ಥಿತಿಗೊಳಗಾದ ತನ್ನ ತಪ್ಪಿನ ಅರಿವನ್ನು ಕಾಣುತ್ತಲೆ, ತನ್ನ ದೈವದ ಅನ್ವೇಷಣೆ ಇಲ್ಲಿ ಎದುರಾಗುತ್ತದೆ. 'ನೂರು ದೇವರನೆಲ್ಲ ನೂಕಾಚೆ ದೂರ, ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರಾ' ಎನ್ನುವಲ್ಲಿ ಈ ಅನ್ವೇಷಣೆ ಮೈ ಪಡೆಯುತ್ತದೆ. ಇಂಥ ಅನ್ವೇಷಣೆಯಿಂದ ಪಾರಂಪರಿಕ ಜಡಮೌಲ್ಯಗಳಿಗೆ ತೋರುವ ತಿರಸ್ಕಾರ, ಮತ್ತು ತನ್ನಲ್ಲಿ ತುಂಬಿಕೊಳ್ಳುವ ಆತ್ಮಸ್ಥೈರ್ಯ ತನ್ನ ಮತ್ತು ಭಾರತಾಂಬೆಯ ಅಸ್ತಿತ್ವದ ಬಗೆಗೆ ಚಿಂತಿಸುವಂತೆ ಮಾಡುತ್ತದೆ.

ಭಾರತಿಯೆ ನಮಗಿಂದು ಜೀವನದ ದೇವತೆಯು;
ವಿಶ್ವರೂಪಿಣಿಯವಳು, ವಿಶ್ವಮುಖಿಯೈ!
ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ,
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ!

ಇಂದೊ ನಾಳೆಯೊ ದಾಸನೀಶನಾಗಲೆ ಬೇಕು,
ಎಂದಿಂದೆ ಎದ್ದೇಳು ; ನಾಳೆಯನೆ ಹೋಕು !
ನಾವೆ ದೇವತೆಗಳೈ ! ಭಾರತವೆ ಸ್ವರ್ಗವೈ !
ಭಾರತಾಂಬೆಯೆ ನಮಗೆ ದೇವಿಯೈ, ಜನನಿ![೧೯]

ಈ ಮೇಲಿನ ಭಾಗದಲ್ಲಿ ಭಾರತಾಂಬೆಯನ್ನು ದೇವತೆಯನ್ನಾಗಿ ಕಾಣುವ, ಅವಳ ಸ್ವಾತಂತ್ರ್ಯದಲ್ಲಿಯೆ ತನ್ನ ಸುಖವನ್ನು ಕಾಣುವ ಆಶಯಗಳಿವೆ. ಸ್ವಾತಂತ್ರ್ಯದಿಂದ ಶ್ರೀ ಸಾಮಾನ್ಯನು ದೈವತ್ವಕ್ಕೆ ಏರುವ, ಭಾರತ ಸ್ವರ್ಗವಾಗುವ ಆಶಯವನ್ನು ಕವಿತೆ ತೀವ್ರವಾಗಿ ಪ್ರಕಟಿಸುತ್ತದೆ. ಅಂದರೆ 'ಇಂದೊ ನಾಳೆಯೋ ದಾಸನೀಶನಾಗಲೆ ಬೇಕು' ಎಂಬುದು ಇಲ್ಲಿನ ಆಶಯ.

ಬ್ರಿಟಿಷ್ ಸಾಮ್ರಾಜ್ಯಶಾಹಿ ದೆಸೆಯಿಂದ ದೇಶಕ್ಕೆ ಒದಗಿದ ದುಸ್ಥಿತಿಗಳನ್ನು 'ಕಾಳರಾತ್ರಿ', 'ಭರತಮಾತೆ', 'ಭರತಮಾತೆಗೆ', 'ಭಾರತ ತಪಸ್ವಿನಿ' ಕವಿತೆಗಳಲ್ಲಿ ವಿಶ್ಲೇಷಿಸಲಾಗಿದೆ. 'ಕಾಳರಾತ್ರಿ', ಪ್ರತಿಮೆಯು ದೇಶಕ್ಕೆ ಒದಗಿದ ದುಸ್ಥಿತಿಯನ್ನು , ಅದರ ಕರಾಳತೆಯನ್ನು ಸಂಕೇತಿಸುತ್ತದೆ. ದೇಶೀಯ ಅನನ್ಯತೆಗಳಿಗೆ ಎದುರಾದ ಆಘಾತಗಳಿಂದ ಇಲ್ಲಿನ ಬದುಕು ತಲ್ಲಣಗೊಂಡದ್ದು ಇಂಥ ಕವಿತೆಗಳಲ್ಲಿ ಕಾಣುತ್ತದೆ. ವಸಾಹತುಶಾಹಿ ಎದುರಾಗಿಸಿದ ಇಂಥ ತಲ್ಲಣಗಳ ಬದುಕಿನಲ್ಲಿಯೇ ಮೊಳೆಯುತ್ತಿರುವ ಹೋರಾಟದ ಮನೋಭಾವಗಳು ಮೈಪಡೆಯುವ ಬಗೆಯನ್ನು 'ಕಾಳರಾತ್ರಿ' ಕವಿತೆ ಧ್ವನಿಸುತ್ತದೆ. 'ಕೆಸರಿನಲ್ಲಿಯೇ ಕಮಲಗಳು ಜನಿಸುವಂತೆ, ಕತ್ತಲೆಯಿಂದಲೇ ಸೂರ್ಯನು ಉದಯಿಸಿ ದೇಶಕ್ಕೆ ಬೆಳಕು ತರುತ್ತಾನೆಂಬ ಆಶಯ 'ಕಾಳರಾತ್ರಿ' ಕವಿತೆಯಲ್ಲಿ ಮಾರ್ಧನಿಸುತ್ತದೆ. ಕಾಳರಾತ್ರಿಯು ತೊಲಗಿ ಶಾಂತಿ ತರುವ ಸೂರ್ಯನಿಗಾಗಿ ಭಾರತ ತಪಸ್ವಿನಿಯು ಧ್ಯಾನಕ್ಕೆ ಅಣಿಯಾಗಿದ್ದಾಳೆ. ಇಂಥ ಚಿತ್ರ 'ಭಾರತ ತಪಸ್ವಿನಿ' ಕವಿತೆಯಲ್ಲಿ ಎದುರಾಗುತ್ತದೆ. ಪ್ರಗತಿಯ ಹೆಸರಿನಲ್ಲಿ ನಾಗರಿಕತೆಗಳು ಹೆಡೆ ಎತ್ತಿದ ನಾಗಿನಿಯಂತೆ, ಆಕರ್ಷಣೆಗಳಿಂದಲೇ ದೇಶೀಯ

ಅನನ್ಯತೆಗಳನ್ನು ನಾಶ ಮಾಡುತ್ತಿರುವ ನೆಲೆಗಳನ್ನು ಇಲ್ಲಿ ಕಾಣುತ್ತೇವೆ. 'ನಾಗರಿಕತೆ ನಾಗಿನಿಯು ಪ್ರಗತಿ ನಾಮಕ ಫಣೆಯ ಮೇಲೆತ್ತಿ ಚುಂಬಿಸಿಯೆ ಕೊಲ್ಲಲೆಳಸುತಿದೆ. ಹಿಂದಿನ ಬುತ್ತಿ ಸಮೆಯುತಿದೆ'. ಈ ಬಗೆಯ ಸಾಲುಗಳು ವಸಾಹತು ಸಂಸ್ಕೃತಿಯ ಆಕ್ರಮಣಗಳ ಅರ್ಥ ಪರಂಪರೆಗಳನ್ನೆ ಮಾರ್ಮಿಕವಾಗಿ ಧ್ವನಿಸುತ್ತದೆ. ಸರ್ಪ ಚುಂಬನದ ಆಕರ್ಷಣೀಯ ನೆಲೆ ಇಲ್ಲಿ ಪರಿಣಾಮಕಾರಿಯಾಗಿದೆ. ದೇಶೀಯ ಅನನ್ಯತೆಗಳ ಬುತ್ತಿ ನಾಗರೀಕತೆಯ ಆಕರ್ಷಣೆಗಳಲ್ಲಿ ಅವನತಿಗೊಳ್ಳುವ ಹಾದಿ ಹಿಡಿದಿದೆ. ಅಖಂಡ ಭಾರತದ ತಪಸ್ಸಿನ ಅಭೀಷ್ಟೆ, ಪ್ರೀತಿಯ ಮಹಿಮೆಯಿಂದಲೆ ಮುಂದಿನ ನವೋದಯದ ಉದ್ಧಾರಕ್ಕೆ ಸುಂದರ ಶಿವನನ್ನು ಎಳೆದು ತರುತ್ತದೆಂಬ ಆಶಯ ಈ ಕವಿತೆಯದು. ಆಗ ತಪಸ್ವಿನಿ ಭಾರತಿ ತನಗೊದಗಿದ ನೀಚ ಹೀನತೆಗಳಿಂದ ಮುಕ್ತಿ ಪಡೆದು ಸ್ವಾತಂತ್ರ್ಯ ಚಕ್ರವರ್ತಿನಿಯಾಗಿ ಮೆರೆಯುತ್ತಾಳೆಂಬ ಆಶಯವು ಈ ಕವಿತೆಯಲ್ಲಿ ಗಾಢವಾಗಿ ಪ್ರಕಟವಾಗುತ್ತದೆ.

'ಭರತಮಾತೆ'ಗೆ ಕವಿತೆಯಲ್ಲಿ, ಭರತಮಾತೆಯ ದುಸ್ಥಿತಿಗಳನ್ನು ಕಂಡ ಕವಿ, ಕಲ್ಕಿಯಾಗುವ ಆಶಯವಿರಿಸಿಕೊಂಡಿದ್ದಾನೆ. ಭರತಮಾತೆಯ ಸುಲಿಗೆಯ ಕಥೆ ಕವಿ ಸಂವೇದನೆಯನ್ನು ಅತ್ಯಂತ ದುಃಖಕ್ಕೆ ಈಡುಮಾಡಿದೆ. ಅಂಥ ದುಸ್ಥಿತಿಗೆ ಕಾರಣವಾದ ಎಲ್ಲ ಮಟ್ಟದ ನೆಲೆಗಳ ವಿರುದ್ಧ ಹೋರಾಡುವಂತೆ ಪ್ರೇರೇಪಿಸುತ್ತದೆ. ಭರತಮಾತೆಯ ಬಗೆಗಿನ ಪ್ರೀತಿ-ಆದರಗಳು 'ಕಲ್ಕಿಯ ಅವತಾರ'ವನ್ನು ತಾಳುವಂತೆ ಮಾಡುವ ನೆಲೆಗಳಲ್ಲಿ ಸ್ವಾತಂತ್ರ್ಯದ ಬಯಕೆಗಳು ಉತ್ಪನ್ನವಾಗುತ್ತವೆ.

'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?', 'ತರುಣರಿರ, ಎದ್ದೇಳಿ!', 'ಹೊಸಬಾಳಿನ ಗೀತೆ' ಕವಿತೆಗಳಲ್ಲಿ ಮಾನವೀಯ ಹಾಗೂ ವೈಜ್ಞಾನಿಕ ದೃಷ್ಟಿಯೊಂದಿಗೆ ಮೌಢ್ಯವನ್ನು ವಿಡಂಬಿಸುವ ನೆಲೆಗಳು ಮುಖ್ಯ ಆಯಾಮಗಳಾಗಿ ಚಿಂತನೆಗೊಳಗಾಗಿವೆ. ಪಾರಂಪರಿಕ ಮೌಢ್ಯತೆಗಳನ್ನು ಬಿತ್ತುವ ಎಲ್ಲ ರೀತಿಯ ಶಾಸ್ತ್ರಗಳ ನಿರಾಕರಣೆ ಇಂಥ ಕೃತಿಗಳಲ್ಲಿ ಕಾಣುತ್ತದೆ. ಅಂತೆಯೆ ಮಾನವೀಯ ನೆಲೆಗಳ ಹುಡುಕಾಟ ಇಲ್ಲಿ ಮುಖ್ಯವಾಗುತ್ತದೆ. ಸ್ಪೃಶ್ಯ-ಅಸ್ಪೃಶ್ಯದ ನೆಲೆಗಳನ್ನು ವಿಮರ್ಶೆಗೆ ಗುರಿಪಡಿಸುವುದರೊಂದಿಗೆ ಹೊಸ ವ್ಯಾಖ್ಯಾನ ಕಾಣ್ಕೆಗಳು ಈ ಕವಿತೆಗಳಲ್ಲಿ ಕಾಣುತ್ತೇವೆ. ವಿಜ್ಞಾನ ಮತ್ತು ವೈಜ್ಞಾನಿಕ ಸತ್ಯಗಳು ಭಾರತೀಯ ತರುಣರಲ್ಲಿ ಹೊಸಮತಿಯನ್ನು, ವೈಜ್ಞಾನಿಕ ಬುದ್ಧಿಯನ್ನು ಬಿತ್ತುವುದರೊಂದಿಗೆ, ದೇಶದ ಪ್ರಗತಿಗೆ ನೆರವಾಗಲೆಂಬ ವಿಚಾರಗಳು ಇಲ್ಲಿ ಮೈಪಡೆಯುತ್ತವೆ.

ಹಳೆಯ ಮತಗಳ ಸಹವಾಸಗಳಿಂದ ಮುಕ್ತಿಪಡೆದು 'ಮನುಜ ಮತ'ಕ್ಕೆ ಸೇರುವುದರೊಂದಿಗೆ, ವಿಶ್ವದ ಏಳ್ಗೆಗಾಗಿ ದುಡಿಯಿರೆಂದು ಇಂಥ ಕವಿತೆಗಳು ಯುವ ಜನತೆಗೆ ಕರೆಕೊಡುತ್ತವೆ. ಮತ ಹಾಗೂ ಸಾಮ್ರಾಜ್ಯಶಾಹಿಗಳು ಎಸಗುವ ತಂತ್ರಗಳಿಗೆ ಬಲಿಯಾಗದೆ, ಮರುಳಾಗದೆ ಹೊಸಬಾಳಿಗೆ ಅಣಿಯಾಗಬೇಕಾದ ಅನಿವಾರ್ಯತೆಯನ್ನು ಈ ಕವನಗಳು ಒತ್ತಿ ಹೇಳುತ್ತವೆ. ಅಭಿವೃದ್ಧಿಶೀಲ ರಾಷ್ಟ್ರಗಳ ಧ್ಯೇಯ-ಧೋರಣೆಗಳನ್ನು ವೈಜ್ಞಾನಿಕವಾಗಿ ಸ್ವೀಕರಿಸುವುದರೊಂದಿಗೆ ನಾಡನ್ನು ಕಟ್ಟುವ ಕೈಂಕರ್ಯಕ್ಕೆ ತರುಣರು ಸಿದ್ಧರಾಗಬೇಕೆಂಬ ಕರೆಯು ಇಲ್ಲಿ ಪ್ರಕಟವಾಗುತ್ತದೆ. "ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು" ಎಂಬ 'ಹೊಸಬಾಳಿನಗೀತೆ' ದಿಕ್ಕು ದೆಸೆಗಳು ಬಿರಿಯುವಂತೆ ಕೊರಳೆತ್ತಿ ಹಾಡುವುದರೊಂದಿಗೆ ಸರ್ವೋದಯಕ್ಕಾಗಿ, ಶ್ರೀ ಸಾಮಾನ್ಯನ ಉದ್ಧಾರಕ್ಕಾಗಿ, ಸ್ವಾತಂತ್ರ್ಯ ಸಂಪಾದನೆಗಾಗಿ ದುಡಿಯಬೇಕೆಂಬ ಆಶಯ ಇಲ್ಲಿಯದಾಗಿದೆ.

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ;

ಮತಿಯಿಂದ ದುಡಿಯಿರೈ ಲೋಕ ಹಿತಕೆ.

ಆ ಮತದ ಈ ಮತದ ಹಳೆಮತದ ಸಹವಾಸ

ಸಾಕಿನ್ನು ಸೇರಿರೈ ಮನುಜ ಮತಕೆ...

ಓ, ಬನ್ನಿ, ಸೋದರರೆ, ವಿಶ್ವಪಥಕೆ !

- - - - - - - - - - - - - - - - - - - - - -

ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ

ಹೊಟ್ಟೆಗನ್ನವ, ಮೈಗೆ ಬಟ್ಟೆ ನೀಡಿ,

ಇಂದು ನೋವಾದರೂ ಇಂದು ಸಾವಾದರೂ

ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ.

ಇಂದು ನೀವೇಳದಿರೆ ಕೆಚ್ಚದೆಯ ತಾಳದಿರೆ

ನಿಮ್ಮವರ ಬಾಳು ಎಂದೆಂದಿಗೂ ಹೇಡಿ!

"ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು !"

ಎಂದು ಸಾಹಸಕೇಳಿ, ಹಿಂಜರಿಯಬೇಡಿ![೧೨]

ಈ ಆಶಯಗಳಲ್ಲಿ ಎದುರಾಗುವ ಕುವೆಂಪು ಅವರ ವಸಾಹತುಶಾಹಿಯ ಬಗೆಗಿನ ಪ್ರತಿರೋಧ ಅತ್ಯಂತ ಸಂಕೀರ್ಣವಾದ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಮೌಢ್ಯತೆಯ ಬಗೆಗಿನ ತಿರಸ್ಕಾರ, ಸಾಮ್ರಾಜ್ಯಶಾಹಿಯ ಬಗೆಗಿನ ಆಕ್ರೋಶ, ವಿಜ್ಞಾನ ಮತ್ತು ವೈಜ್ಞಾನಿಕ ವಿಚಾರಗಳ ಬಗೆಗೆ ಕುತೂಹಲ- ಒಲವು ಇಂಥ ಕವಿತೆಗಳಲ್ಲಿ ಪ್ರಕಟವಾಗುತ್ತವೆ. ಅದರಲ್ಲೂ, ವಿಜ್ಞಾನ ತರುವ ಬದಲಾವಣೆಗಳ ಬಗೆಗೆ ಕುವೆಂಪು ಅವರು ತೋರುವ ಒಲವು ಈ ಕವಿತೆಗಳಲ್ಲಿ ಮುಖ್ಯ ಆಯಾಮವಾಗಿ ಮೈ ಪಡೆಯುತ್ತದೆ. ಸ್ವಾತಂತ್ರ್ಯ ಸಂಪಾದನೆ, ಸ್ವರಾಜ್ಯ ನಿರ್ಮಾಣ, ವ್ಯಕ್ತಿತ್ವ ವಿಕಾಸ ಹಾಗೂ ನಾಡಿನ ಪ್ರಗತಿಗೆ ವಿಜ್ಞಾನ ಅತ್ಯಗತ್ಯವೆಂಬ ಧೋರಣೆ ಇಂಥ ಕವಿತೆಗಳಲ್ಲಿ ಮುಖ್ಯ ಆಯಾಮವಾಗಿ ಕಾಣಿಸುತ್ತದೆ.

**೮. ಪ್ರಕೃತಿ ಕವಿತೆಗಳಲ್ಲಿ ಪ್ರತಿರೋಧ**

*ಸೊಬಗೆ ನನ್ನಿ ಎಂದು ಸಾರಿ;*
*ನನ್ನಿಯ ಸೊಬಗೆಂದು ತೋರಿ;*
*ಸೊಗದ ಸೊದೆಯ ತೆರೆಗೆ ಬೀರಿ,*

*- ಸುಗ್ಗಿ ಹಾಡು*

ಕುವೆಂಪು ಅವರ ಪರಿಸರವನ್ನು ಕುರಿತ ಕವನಗಳು ಮೇಲುನೋಟಕ್ಕೆ ಪ್ರಕೃತಿ ಆರಾಧನೆಯನ್ನು ಪ್ರಕಟಿಸಿದರೂ, ಅವುಗಳ ಆಳದಲ್ಲಿ ಅತ್ಯಂತ ಸಂಕೀರ್ಣವಾದ ಕಾಣ್ಕೆಯೇ ಪ್ರಧಾನ. ಇಂಥ ಕಾಣ್ಕೆ ಕುವೆಂಪು ಅವರ ಮುಖ್ಯ ಕಾವ್ಯಧ್ವನಿ. ಅಂದರೆ ಪ್ರಕೃತಿ ದರ್ಶನದ ಅವರ ಕೃತಿಗಳಲ್ಲಿ ಪ್ರಕಟವಾಗುವ ಸಾಂಪ್ರದಾಯಿಕ ಜಡಮೌಲ್ಯಗಳಿಗೆ ತೋರುವ ಪ್ರತಿರೋಧ ಮತ್ತು ಹೊಸ ಜೀವನ ಮೌಲ್ಯಗಳ ಶೋಧದ ಪ್ರತಿರೂಪಕಗಳಾವುದು ಈ ಬಗೆಯ ಕಾವ್ಯದ ವಿಶಿಷ್ಟತೆ. ದೇವರು, ಧರ್ಮ, ನಂಬಿಕೆ, ಸ್ವರ್ಗ-ನರಕ, ವೇದೋಪನಿಷತ್ತುಗಳು , ಜಾತೀಯತೆ, ಮೇಲು-ಕೀಳು, ಗಂಡು-ಹೆಣ್ಣು, ಪೂಜೆ-

ಪುನಸ್ಕಾರ ಮೊದಲಾದ ಸಂಗತಿಗಳಿಗೆ , ಸಾಂಪ್ರದಾಯಿಕ ಜಡಮೌಲ್ಯಗಳಿಗೆ ಪ್ರತಿರೋಧವನ್ನೊಡ್ಡುತ್ತಲೇ ಮಾನವೀಯ ಮೌಲ್ಯಗಳ ಶೋಧನೆ ವಸಾಹತೀಕರಣಕ್ಕೆ ತೋರುವ ಮಹತ್ವದ ಪ್ರತಿಕ್ರಿಯೆಯಾಗಿದೆ.

'ಗೊಲ್ಲನ ಬಿನ್ನಹ' ಕವಿತೆ ಕುವೆಂಪು ಅವರ ಸೃಷ್ಟಿಯ ವಿಭಿನ್ನ ನೆಲೆ, ಅನುಭವ ಸಾಮಾಗ್ರಿ, ತಾನು ಕಂಡ ಹಾಗೂ ಒಡನಾಡಿದ ಮಲೆನಾಡಿನ ಬದುಕು ಯಾವುದೆಂಬುದನ್ನು ಪ್ರಕಟಿಸುತ್ತದೆ. ಕಾಡು ಗೊಲ್ಲನ ಬಿನ್ನಹದ ಕಾಣ್ಕೆ ಅವರ ಕಾವ್ಯಸೃಷ್ಟಿಯ ಹಲವು ಮಜಲುಗಳನ್ನು ಕಾಣಿಸುತ್ತದೆ. ಹಾಗೆಯೇ ಮಲೆನಾಡು ಅನುಭವ ಸಾಮಾಗ್ರಿಯಾಗಿ ನಾಡಿನ ಜನ ಒಲಿದು ಆಲಿಸುವಂತೆ, ಕಾಡುಗೊಲ್ಲನ ಕೊಳಲು, ಸರ್ವವ್ಯಾಪಿಯಾಗುವಂತೆ ನುಡಿಯುತ್ತದೆ. ಈ ಬಿನ್ನಹ ಕುವೆಂಪು ಕಾವ್ಯ ಪ್ರವೇಶಕ್ಕೆ ಹಾಗೂ ಅದರ ಒಂದು ಗ್ರಹಿಕೆಗೆ ಪೀಠಿಕೆಯಂತಿದೆ.

'ನನ್ನ ಮನೆ', 'ಅಡವಿಯಲ್ಲಿ', 'ಸುಗ್ಗಿಹಾಡು', 'ತವರೂರು', 'ನನ್ನ ಬಯಕೆ' ಮೊದಲಾದ ಕವಿತೆಗಳಲ್ಲಿ ಬಾಲ್ಯದ ನೆನಪುಗಳನ್ನು ಅಭಿವ್ಯಕ್ತಿಗೆ ಗುರಿಯಾಗಿಸುವುದರೊಂದಿಗೆ ತನ್ನ ಸ್ಥಳೀಯ ಬದುಕಿನ ಅನನ್ಯತೆಗಳನ್ನ, ನೆನಪುಗಳನ್ನ ಮತ್ತೆ ಮತ್ತೆ ರೂಪಕಗಳಾಗಿಸುವ ಕ್ರಿಯೆಯ ಹಿಂದೆ ಸ್ಥಳೀಯತೆಯ ಪ್ರೀತಿ ಪ್ರೇಮಗಳು ಬರುತ್ತವೆ. ಈ ಬಗೆಯ ಪ್ರೀತಿ ಪ್ರೇಮಗಳು ನಗರ ಬದುಕಿಗೆ ಮುಖಾಮುಖಿಯಾಗುತ್ತ ಗ್ರಾಮ್ಯದ ಅನನ್ಯತೆಯನ್ನು ಶೋಧಿಸುತ್ತವೆ. ಈ ನೆಲೆ 'ನನ್ನ ಬಯಕೆ' ಯಂಥ ಕವಿತೆ ಸಮರ್ಥವಾಗಿ ಪ್ರಕಟಿಸುತ್ತದೆ.

ಸದ್ದಿರದ ಪಸುರೆಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ,
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿ ಬರುತಲಿರಲಿ
..............................................
ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು
ದಿನ ದಿನವು ಸವಿಯೂಟವಿಕ್ಕುತಿರಲೆನಗೆ.
..............................................
ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರಿಂತಿರಲಿ :
ಸಗ್ಗವಿವನೊಳಗೊಂಡಿರಲು ಸಗ್ಗವೆನಗಿರಲಿ ;
ನರಕವಿವನೊಳಗೊಂಡಿರಲು ನರಕವೆನಗಿರಲಿ![೧೩]

ಈ ಕವನ ಕವಿಯ ಬದುಕಿನ ತೀವ್ರತೆಯನ್ನು ಪ್ರಕಟಿಸುತ್ತದೆ. ಆದಿಕವಿ ಪಂಪನದು ಇಂಥದೇ ಬಯಕೆಯಾಗಿತ್ತು. ಮಲೆನಾಡಿನ ಸಮೃದ್ಧ ಬದುಕು, ಅದರಿಂದ ಒದಗುವ ಆನಂದ-ತನ್ಮಯತೆಗಳು, ಸ್ನೇಹ-ಸಂಬಂಧಗಳು ಯಾವ ಬಗೆಯದೆಂಬುದು ಇಲ್ಲಿ ಕಾಣಿಸುತ್ತದೆ. ತಾನಿಲ್ಲದ ಈ ಮಲೆನಾಡಿನ ಬನಗಳಲ್ಲಿ ಎದುರಾಗುವ ಬದುಕು ಅದು ಸ್ವರ್ಗವಾಗಲಿ - ನರಕವಾಗಲಿ ನಿರಂತರವಾಗಿ ತನ್ನದಾಗಲೆಂಬ ಬಯಕೆ ಗಾಢವಾಗಿ ಈ ಕವನದಲ್ಲಿ ಮೈ ಪಡೆದಿವೆ.

ಇಂಥ ತನ್ಮಯತೆಯ ನೆಲೆಗಳು ಹಾಗೂ ಪರಿಸರ ಪ್ರೀತಿಯ ಬಯಕೆಗಳು, ದೇವರು, ಪೂಜೆ, ಆಚಾರ ವಿಚಾರಗಳಿಗೆ ಎದುರಾಗುವ ಕ್ರಮ ಅತ್ಯಂತ ಮಾರ್ಮಿಕವಾದುದು. ಹಾಗೆಯೇ ಈ ಮೇಲಿನ ಸಾಂಪ್ರದಾಯಿಕ ನಂಬಿಕೆಗಳಿಗೆ ಹೊಸ ವಿಚಾರಗಳನ್ನು ಹುಟ್ಟುಹಾಕುವ ಕ್ರಮವೂ ವಿಶಿಷ್ಟವಾದುದು. ಭೋಗಿ-ಯೋಗಿಗಳ ಪರಂಪರೆಯ ನಂಬಿಕೆಗಳಿಗೆ ವಿರುದ್ಧವಾಗಿ 'ನೇಗಿಲಯೋಗಿ', 'ಸುಗ್ಗಿಹಾಡು', ಕವಿತೆಗಳಲ್ಲಿ ಹೊಸ ಅರ್ಥ ಪರಂಪರೆಯೊಂದನ್ನು ಕೀರ್ತಿ ಲಾಭಗಳಿಗೆ ಆಶಿಸದೆ ನಿರಂತರವಾಗಿ ದುಡಿಯುವ ರೈತನ ನಿಸ್ವಾರ್ಥ ಸೇವೆಯ ಚಿತ್ರ ಈ ಕವಿತೆಗಳ ಹಿನ್ನೆಲೆಗಿದೆ. 'ನೇಗಿಲಯೋಗಿ'ಯೆಂಬ ಕಲ್ಪನೆಯೇ ಸಾಂಪ್ರದಾಯಿಕ ಯೋಗಿಯ ಕಲ್ಪನೆಗೆ ಮುಖಾಮುಖಿಯಾಗುವುದರೊಂದಿಗೆ ಹೊಸಕಾಣ್ಕೆಯೊಂದನ್ನು ಧ್ವನಿಸುತ್ತದೆ. ರಾಜ್ಯ-ಸಾಮ್ರಾಜ್ಯಗಳು ಹುಟ್ಟಿ ಕಣ್ಮರೆಯಾದರೂ ನಿರಂತರವಾಗಿ ತನ್ನ ಕಾಯಕದಲ್ಲಿ ತೊಡಗಿ ಜಗತ್ತಿಗೆ ಅನ್ನವನ್ನು ನೀಡುವ ಅನ್ನದಾತನ ನಿಸ್ವಾರ್ಥ ದುಡಿಮೆಯನ್ನು ರೂಪಕವಾಗಿಸುವುದರೊಂದಿಗೆ ಹೊಸ ಅರ್ಥಪರಂಪರೆಯೊಂದು ಪ್ರಕಟವಾಗುತ್ತದೆ. ರೈತನ ದುಡಿಮೆಯ ಮೇಲೆಯೇ ನಾಗರಿಕತೆಗಳೂ ಬೆಳೆದದ್ದು. ರಾಜರು ದರ್ಪದಿಂದ ಆಳಿದ್ದು. ಕವಿಗಳು - ಶಿಲ್ಪಿಗಳು ಆಶ್ರಯಿಸಿ ಕಾವ್ಯ - ಕಲೆಗಳನ್ನು ರಚಿಸಿದ್ದು. ಹಾಗೂ ಧರ್ಮ-ಕರ್ಮಗಳೆಲ್ಲವೂ ನೇಗಿಲಯೋಗಿಯ ಶ್ರಮದ ಮೇಲೆಯೇ ನಿಂತಿದೆಯೆಂಬ ವಿಚಾರವನ್ನು ಪ್ರಕಟಿಸುವುದರೊಂದಿಗೆ ವ್ಯವಸ್ಥೆಯು ಕಡೆಗಣಿಸಿದ ರೈತನ ಶ್ರಮದ ಮಹತ್ವವನ್ನು ಈ ಕವಿತೆ ಮುಖ್ಯವಾಗಿ ಧ್ಯಾನಿಸುತ್ತದೆ.

ಬಿಸಿಲ ಬೇಗೆಗೆ ಬೆಂದು ಕಂದಿಹ
    ನಮ್ಮ ಎದೆ ಕೈಲಾಸವು!
ನಮ್ಮ ಬೆವರಿಳಿದಿಳೆಗೆ ಬೀಳುವ -
    ವರೆಗು ಗಂಗೆಯು ಬಿತ್ತಳು;
- - - - - - - - - - - -
ನಮ್ಮ ತೋಟವೆ ಸಾಂಖ್ಯವು - ಮೇ
    ಣೆಮ್ಮ ತಿಮ್ಮನೇ ಕಪಿಲನು!
ನಮ್ಮ ಗದ್ದೆಯೆ ಯೋಗವು- ಮೇ
    ಣೆಮ್ಮ ರಂಗ ಪತಂಜಲ!

ನಮ್ಮ ಬಾಳಿದು ಬಿಡುವೆ ಇಲ್ಲದ ಕಠಿಣ ಸಾಧನವು ;
ನಮ್ಮ ಸೇವೆಯೇ ಮಣ್ಣು ಬೋಧಿಸಿದೆಮ್ಮ ವೇದಾಂತ![೧೪]

ನೇಗಿಲ ಯೋಗಿಗಳ ಸುಗ್ಗಿ ಕುಣಿತದ ಈ ಹಾಡು ಕಲ್ಪವೃಕ್ಷ, ಕಾಮಧೇನು, ವೈಕುಂಠ, ಕೈಲಾಸ, ಗಂಗೆ, ಮಾಂಗಲ್ಯ, ಮೂಗುತಿ, ಜಪತಪ, ಗಾಯತ್ರಿ, ಯೋಗಗಳು, ವೇದಾಂತ, ಕಾಶಿ, ಗುಡಿಗೋಪುರಗಳು ಮೊದಲಾದ ಸಾಂಪ್ರದಾಯಿಕ ನಂಬಿಕೆ ಆಚಾರಗಳಿಗೆ ರೈತನ ದೈನಂದಿನ ಕ್ರಿಯೆಗಳನ್ನು ಮುಖಾಮುಖಿಯಾಗಿಸಿರುವುದರಿಂದ ಪುನರ್‌ವ್ಯಾಖ್ಯಾನವೊಂದು ಈ ಕವಿತೆಯಲ್ಲಿ ರೂಪಿತಗೊಂಡಿದೆ. ವೈದಿಕ ಸಂಸ್ಕೃತಿಗೆ ವಿಮುಖವಾದ ಈ ಬಗೆಯ ಚಿತ್ರಗಳು ಕುವೆಂಪು ಅವರ ಕಾವ್ಯದಲ್ಲಿ ನಿರಂತರವಾಗಿ ಮರುಹುಟ್ಟು ಪಡೆಯುವುದನ್ನೇ ಕಾಣುತ್ತೇವೆ. ಅಂದರೆ ಆಕ್ರಮಣಶೀಲ ವ್ಯವಸ್ಥೆ ಹೇರುವ

ಮೌಲ್ಯ-ಅರ್ಥಗಳಿಗೆ ಮರುಗಾಣ್ಕೆಗಳನ್ನು ಕುವೆಂಪು ಅವರ ಸಂವೇದನೆ ಈ ಬಗೆಯ ಕವಿತೆಗಳಲ್ಲಿ ನಿರಂತರವಾಗಿ ಶೋಧಿಸಲು ತೊಡಗುತ್ತದೆ. ರೈತನ ಗಾಯತ್ರಿಯಂತಿರುವ 'ಸುಗ್ಗಿಯ ಹಾಡು' ಅವನ ಶ್ರಮ ಮತ್ತು ದುಡಿಮೆಯ ಮಹತ್ವವನ್ನು ಒಮ್ಮೆಗೆ ಪ್ರಕಟಿಸುತ್ತದೆ. ವೈದಿಕ ಮಂತ್ರವಾದ 'ಗಾಯತ್ರಿ ಮಂತ್ರ'ಕ್ಕೆ ಪ್ರತಿರೋಧ ಒಡ್ಡುವ ನೆಲೆಯೂ ಇಲ್ಲಿದೆ. ಈ ಬಗೆಯ ಪ್ರತಿಕ್ರಿಯೆ ಮಾನವೀಯ ಮೌಲ್ಯಗಳ ಹುಡುಕಾಟ ದುಡಿಮೆಯ ಕ್ರಿಯಾಶೀಲತೆಯಲ್ಲಿ ಶೋಧಿಸಲ್ಪಡುವುದು ಈ ಕಾವ್ಯದ ಗಮನಾರ್ಹವಾದ ಅಂಶಗಳಲ್ಲೊಂದು. ಸೃಷ್ಟಿಯ ಸೊಬಗಿನಲ್ಲಿಯೇ ಶಿವನನ್ನು ಕಾಣಲು, ದುಡಿಮೆಯ ಬೆವರಿನಲ್ಲಿಯೇ ಪೂಜೆಗೈಯಲು ನೀಡುವ ಇಲ್ಲಿನ ಕರೆ ಸಾಂಪ್ರದಾಯಿಕ ದೈವ- ಪೂಜೆಗಳ ಕಲ್ಪನೆಗಳಿಗೆ ಹೊಸ ಅರ್ಥಗಳನ್ನು ಕಾಣಿಸುತ್ತದೆ. ಹಾಗೆಯೆ, ಎಲ್ಲೆಲ್ಲೂ ಯಾಂತ್ರಿಕ ಕ್ರಿಯಾಚರಣೆಗಳಲ್ಲಿ ಸ್ವರ್ಗವನ್ನು ಹುಡುಕುವ ವೈದಿಕ ನಂಬಿಕೆಗಳಿಗೆ 'ಸ್ವರ್ಗದ ಬಾಗಿಲು' ಕವಿತೆ ಮನುಷ್ಯನ ಶ್ರಮ ಮತ್ತು ನಿಸರ್ಗದ ಚೆಲುವಲ್ಲಿ ಸ್ವರ್ಗವನ್ನು ಕಾಣುವ ಪರಿಯನ್ನು ಮುಂದೊಡ್ಡುತ್ತದೆ. ಇಲ್ಲಿ ಪುರೋಹಿತನ ಯಾಂತ್ರಿಕ ಭಕ್ತಿಯ ಕ್ರಿಯಾಚರಣೆಗಳಲ್ಲಿ ಕಾಣದ ಸ್ವರ್ಗ ಹಕ್ಕಿಗಳ ಇಂಚರದಲ್ಲೂ ಹೂವಿನ ಬಣ್ಣಗಳಲ್ಲೂ ದುಡಿಯುವ ರೈತನ ನೇಗಿಲ ಗೆರೆಯೊಳಗೂ, ಕಡಿಯುವ ಕೂಲಿಯ ಕತ್ತಿಯೊಳಗೂ ಕಾಣುತ್ತದೆಂಬ ವಿಚಾರವು ಇಲ್ಲಿ ಪ್ರಕಟಗೊಂಡಿದೆ.

'ರೈತನದೃಷ್ಟಿ' ಕವಿತೆಯ ಮನೋಭಾವ ಈ ಧೋರಣೆಗಿಂತ ಭಿನ್ನವಾದ ನೆಲೆಗಳನ್ನು ವಿಶ್ಲೇಷಿಸುತ್ತದೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯು ರೈತನನ್ನು ನಿರಂತರವಾಗಿ ಶೋಷಿಸಿದ ಬಗೆಗಿನ ಎಚ್ಚರಗಳು ಈ ಕವಿತೆಯ ಸಂವೇದನೆಯಾಗಿದೆ. ಈ ಸಂವೇದನೆ ಪುರೋಹಿತ ವ್ಯವಸ್ಥೆಯ ಮೌಢ್ಯತೆಗಳನ್ನು ಸಾಮ್ರಾಜ್ಯಶಾಹಿಯ ನೆಲೆಗಳನ್ನೂ ಒಮ್ಮೆಗೆ ನಿರಾಕರಿಸುತ್ತದೆ. ಸಾಮ್ರಾಜ್ಯವೆಂಬ, ಕಾಮಧೇನು ಸೋಮಾರಿಗಳಿಗೆ, ಸುಖಿಗಳಿಗೆ, ರಸಿಕರಿಗೆ ಹೊರತು ತನಗಲ್ಲವೆಂಬ ಧೋರಣೆಯೊಂದಿಗೆ ಎಚ್ಚೆತ್ತ ರೈತನ ಪ್ರಜ್ಞೆ ಸಾಮ್ರಾಜ್ಯಶಾಹಿಯ ಆಕರ್ಷಣೆಯ ನೆಲೆಗಳಿಗೆ ಪ್ರತಿರೋಧ ಒಡ್ಡುತ್ತದೆ.

ಕರಿಯರದೊ ಬಿಳಿಯರದೊ ಯಾರದಾದರೆ ಏನು ?
    ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ !
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
    ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ !
ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದಹಾಕಿ ತಿವಿದರದು ಹೂವೆ?[೧೫]

ಈ ಕವಿತೆಯ ಧೋರಣೆಗಳಲ್ಲಿ, ಭಾರತ ಸ್ವತಂತ್ರವಾಗುವುದರ ಬಗೆಗೆ ರೈತ ತಾಳುವ ನಿಲುವುಗಳಲ್ಲಿ ವ್ಯಕ್ತವಾಗುವ ತಟಸ್ಥತೆಯು ಮಾರ್ಮಿಕವಾದುದು. ಈ ಬಗೆಯ ವಿಚಾರಧಾರೆಯಲ್ಲಿ, ಪ್ರಾಚ್ಯ ಮತ್ತು ಪೌರಾತ್ಯ ಸಂಸ್ಕೃತಿಗಳ ಸಂಘರ್ಷದಿಂದ ಶೋಧಿಸಿಕೊಂಡ ಮಾನವೀಯ ವಿಚಾರಧಾರೆಯೊಂದು ನಿರಂತರವಾಗಿ ಚಲನಶೀಲಗೊಳ್ಳುವುದನ್ನು ಅವರ ಕಾವ್ಯಾಧ್ಯಯನದಿಂದ ತಿಳಿಯಬಹುದು. ಹೀಗೆ ಶೋಧಿತಗೊಂಡ ಹೊಸಮೌಲ್ಯಗಳು ತರುವ ಚೈತನ್ಯ ಹಾಗೂ ಅಂಥ ಚೈತನ್ಯದಿಂದೊದಗುವ ಸಂಭ್ರಮ-ತನ್ಮಯತೆಗಳು ಪರಿಸರ ಕುರಿತ ಅವರ ಅಸಂಖ್ಯ ಕವನಗಳಲ್ಲಿ ಪ್ರಕಟವಾಗುತ್ತವೆ.

ಈ ಬಗೆಯ ಚೈತನ್ಯಯುಕ್ತ ಸಂವೇದನೆ ಸಾಂಪ್ರದಾಯಿಕ ವ್ಯವಸ್ಥೆ ಹುಟ್ಟು ಹಾಕಿದ ಮೇಲು-ಕೀಳು, ಸ್ಪೃಶ್ಯ- ಅಸ್ಪೃಶ್ಯ, ಪಾಪ-ಪುಣ್ಯ, ಸುಂದರ-ಅಸುಂದರ, ಹಿತ್ಯ-ಅಹಿತ್ಯ, ಜಡ-ಚೇತನ ಮೊದಲಾದ ನೆಲೆಗಳಿಗೆ ಪ್ರಕೃತಿಗೀತೆಗಳಲ್ಲಿ ಅಭಿವ್ಯಕ್ತಗೊಳ್ಳುವ ವ್ಯಾಖ್ಯಾನಗಳು, ಆ ಸಂಸ್ಕೃತಿಗೆ ತೋರಿದ ಪ್ರತಿರೋಧಗಳು ಗಮನಾರ್ಹವಾದವು. ಕುವೆಂಪು ಅವರ ನವಿಲು, ಕೊಳಲು, ಪಕ್ಷಿಕಾಶಿ, ಕೃತ್ತಿಕೆ ಮೊದಲಾದ ಕವನ ಸಂಕಲನಗಳಲ್ಲಿನ ಪ್ರಕೃತಿ ಗೀತೆಗಳ ಆಶಯಗಳು ಈ ಬಗೆಯ ಧೋರಣೆಯನ್ನು ಅಚಲವಾಗಿ ಹೊಂದಿವೆ. ಪ್ರಕೃತಿಯನ್ನು ದೈವವಾಗಿ ಪರಿವರ್ತಿಸುವ, ಹಾಗೆಯೇ ಪ್ರಕೃತಿಯನ್ನು ಪರಮಾರಾಧನೆಯನ್ನಾಗಿ ಮಾಡಿಕೊಳ್ಳುವ, ಪ್ರಕೃತಿಯ ಸೌಂದರ್ಯವೆಲ್ಲವೂ ದೇವರ ಸಾಕ್ಷಾತ್ಕಾರವಾಗಿ ಮಾಡಿಕೊಳ್ಳುವ ಕುವೆಂಪು ಅವರ ಈ ಪ್ರಜ್ಞೆ ಪರಂಪರೆಯ ಜಡಮೌಲ್ಯಗಳಿಗೆ ತೊರಿದ ಪ್ರತಿಕ್ರಿಯೆಯೇ ಆಗಿದೆ. ಹೊಸ ಸಂಸ್ಕೃತಿಯೊಂದರ ಸಂಸರ್ಗದಿಂದ ಎದುರಾದ ಚೈತನ್ಯವೊಂದು ಪ್ರಕೃತಿಗೀತೆಗಳ ಹಿಂದೆ ಕೆಲಸ ಮಾಡಿದಂತೆ ಕಾಣುತ್ತದೆ. ಇದಕ್ಕೆ ಕುವೆಂಪು ಪ್ರತಿಕ್ರಿಯೆ ಹೀಗಿದೆ :

ನಮ್ಮ ಕೈ ಬುಟ್ಟಿಯಲಿ
    ಸಿಡಿಲ ಗೂಡಿಹುದು !
ಹುಡುಕಿ ನೋಡಿದರಲ್ಲಿ
    ಸುಮದ ಬೀಡಿಹುದು !
ಬೈಗು ಬೆಳಗುಗಳಲ್ಲಿ ;
ಬೆಳ್ದಿಂಗಳಿಹುದಲ್ಲಿ ,
ಸಂಕ್ಷಿಪ್ತ ಬ್ರಹ್ಮವೈ
    ನಮ್ಮ ಕೈ ಬುಟ್ಟಿ !
ಕಲ್ಪ ಕಲ್ಪಗಳಲ್ಲಿ
    ಸಾಯುವುದು ಹುಟ್ಟಿ![೧೬]

ಈ ಕವಿಯ ಕೈ ಬುಟ್ಟಿಯಲ್ಲಿ ಸಿಡಿಲಗೂಡಿದ್ದಂತೆ ಸುಮದ ಬೀಡೂ ಇದೆ. ಹಾಗೆಯೆ ಬೈಗು-ಬೆಳಗುಗಳೂ ಬೆಳದಿಂಗಳಿದ್ದಂತೆ ರುದ್ರಾಗ್ನಿ ಜ್ವಾಲೆಗಳೂ ಇವೆ. ಇಲ್ಲಿನ ಬೈಗು-ಬೆಳಗುಗಳು ಸುಂದರವೂ ಹೌದು, ರೌದ್ರವೂ ಹೌದು, ಮನೋಹರವೂ ಹೌದು. ಅಂತೆಯೇ ಪರತಂತ್ರತೆಯನ್ನು ದಹಿಸುವ ಪಂಜಾಗ್ನಿಯೂ, ಸ್ವಾತಂತ್ರ್ಯದ ಆರಾಧನೆಗೆತ್ತಿದ ಕುಂಕುಮದ ಆರತಿಯಾಗಿಯೂ ಕಾಣುತ್ತದೆ.

ಪರತಂತ್ರತೆಯನು ದಹಿಸುವ ಮಸಣದ
    ಸೂಡಿನ ಕೇಸುರಿ ಈ ಬೈಗು ;
ಸ್ವಾತಂತ್ರ್ಯದ ಆರಾಧನೆಗೆತ್ತಿದ
    ಕುಂಕುಮದಾರತಿ ಈ ಬೈಗು !
ಸುಂದರ ಮಂಗಳವೀ ಬೈಗು !
ರುದ್ರ ಮನೋಹರವೀ ಬೈಗು![೧೭]

ನಾಕ-ನರಕಗಳೆಲ್ಲವನ್ನೂ ಈ ನೆಲದಲ್ಲಿಯೇ ಕಾಣುವ ನೆಲೆಯು ನಿಸರ್ಗದ ಕವಿತೆಗಳಲ್ಲಿನ ಮತ್ತೊಂದು ಮುಖ್ಯ ಆಶಯ.

ಸುಗ್ಗಿಯ ಸೊಬಗಲಿ ತಿಂಗಳ ಬೆಳಕಲಿ
ಸಗ್ಗವು ಬಿದ್ದಿರುವುದು ಅಲ್ಲಲ್ಲಿ !
ಕಬ್ಬಿಗನಿಂಚರ ಸೊದೆಯುಂಡು ಚೆಲ್ಲಿ
ಸಗ್ಗವ ಮಾಳ್ಪನು ಈ ಬುವಿಯಲ್ಲಿ ![೧೮]



ನಾಕ-ನರಕಗಳು ನೆಲದಾಚೆಗಿವೆಯೆಂಬ ನಂಬಿಕೆಗಳನ್ನು ಈ ಮೇಲಿನ ಕವಿತೆ ನಿರಾಕರಿಸುತ್ತದೆ. ಅಂತೆಯೆ ದೇವತೆಗಳು, ಅಪ್ಸರೆಯರು, ನಾವಲ್ಲದೆ, ನೆಲದಲ್ಲಿರುವವಲ್ಲದೆ ಮತ್ತಾರೂ ಅಲ್ಲವೆಂಬ ವಿಚಾರದೊಂದಿಗೆ 'ನಾಕವು ಈ ಧರೆ' ಎಂಬ ಧೋರಣೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ. ನಿಸರ್ಗದ ಕ್ರಿಯೆಗಳಲ್ಲಿಯೇ 'ನಾಕ'ವು ಅಡಗಿದೆಯೆಂಬ ಸತ್ಯದ ಮೂಲಕ ಪುರೋಹಿತಶಾಹಿಯ ನಿರಾಕರಣೆ ಹಾಗೂ ನೆಲದ ಅನನ್ಯತೆಯನ್ನು ಈ ಕವಿತೆ ಎತ್ತಿ ಹಿಡಿಯುತ್ತದೆ.

'ಮಿಂಚುಳ್ಳಿ', 'ಗೂಬೆ'ಗಳಂಥ ಕವಿತೆಗಳಲ್ಲಿ ಪಾರಂಪರಿಕ ಅರ್ಥಗಳಿಗೆ ಮರು ಅರ್ಥಗಳನ್ನು ನಿರ್ಮಿಸಲಾಗಿದೆ. ಗೂಬೆ ಮತ್ತು ಮಿಂಚುಳ್ಳಿ ಹಕ್ಕಿಗಳನ್ನು ಅಪಶಕುನ, ಅನಿಷ್ಟಕಾರಕವೆಂದು ಭಾವಿಸಲಾಗುತ್ತದೆ. ಆದರೆ ಕುವೆಂಪು ಸಂವೇದನೆ ಅದಕ್ಕೆ ವಿರುದ್ಧವಾದ ಪ್ರತಿಭಟನೆಯ ಧ್ವನಿಯನ್ನು ಬಿಂಬಿಸುತ್ತದೆ. ಈ ಮುಂದಿನ ಎರಡು ಸಾಲುಗಳಲ್ಲಿ ಅಂಥ ಧ್ವನಿ ಪ್ರಕಟವಾಗುವುದನ್ನು ಕಾಣಬಹುದು. ಅಂತೂ ನೀನೂ ಕೂಡ ಕವನ, ಎಲೆಗೂಬೆ; ಅಂತೂ ನೀನೂ ಕೂಡ ಗಾನ, ಎಲೆಗೂಬೇ! ಕನ್ನಡ ಕಾವ್ಯ ಪರಂಪರೆಯಲ್ಲಿ ಶುಕ ಪಿಕಾದಿಗಳಿಗೆ ಮನ್ನಣೆ ದೊರೆತಂತೆ 'ಗೂಬೆ'ಗೆ ದೊರೆತಿಲ್ಲ. 'ಗೂಬೆ'ಯ ಕೂಗನ್ನು ಅಶುಭ, ಅಪಸ್ವರ, ಕುಸ್ವರಗಳಾಗಿ ಆರೋಪಿಸಿದ ಪ್ರಜ್ಞೆಗೆ ಕವನದ ವಸ್ತುವಾಗಿ 'ಗೂಬೆ' ಮೈ ಪಡೆಯುವುದೇ ಪಾರಂಪರಿಕ ನಂಬಿಕೆಯೊಂದಕ್ಕೆ ತೋರಿದ ಪ್ರತಿಕ್ರಿಯೆಯಂತಿದೆ. 'ಗೊಬ್ಬರ' ಕವಿತೆಯ ವಸ್ತುಧ್ವನಿಯು ಈ ನೆಲೆಯಿಂದಲೇ ಹೊರಟದ್ದು. ಈ ಪ್ರಜ್ಞೆ ಹೊಸಮೌಲ್ಯಗಳ ಸಂಘರ್ಷದಿಂದ ಕಂಡುಕೊಂಡ ಪ್ರಕ್ರಿಯೆಯಾಗಿದೆ.

ಶೂದ್ರ ಮತ್ತು ಪುರೋಹಿತಶಾಹಿ ಸಂವೇದನೆಗಳ ಸಂಘರ್ಷ ಇಂಥ ಕವಿತೆಗಳ ಆಶಯವಾಗಿದೆ. ಈ ಆಶಯ ಗೊಬ್ಬರ ಕವಿತೆಯಲ್ಲಿ ನಾಟ್ಯೀಕರಣಗೊಳ್ಳುವ ಬಗೆ ಮಾರ್ಮಿಕವಾದುದು. ಇಂಥ ನಾಟ್ಯೀಕರಣದಿಂದ ಹುಟ್ಟುವ ವ್ಯಂಗ್ಯ ಕನ್ನಡ ಸಾಹಿತ್ಯ ಪರಂಪರೆಯ ಮುಖ್ಯ ಎಳೆಯಾಗಿಯೂ ಪ್ರಕಟವಾಗುತ್ತದೆ. ಕನಕದಾಸರ 'ರಾಮಧಾನ್ಯ ಚರಿತೆ'ಯ ತಂತ್ರ, ಧ್ವನಿ, ಧೋರಣೆಗಳು ಇಲ್ಲಿ ಹೊಸ ವಿನ್ಯಾಸ ಪಡೆದಿರುವುದನ್ನು ಕಾಣುತ್ತೇವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪೀಠಿಕಾ ಪದ್ಯ ಇಡೀ ತಾತ್ತ್ವಿಕತೆಯನ್ನು ಪ್ರತಿಪಾದಿಸುತ್ತದೆ.

ಇಲ್ಲಿ
  ಯಾರೂ ಮುಖ್ಯರಲ್ಲ;
    ಯಾರೂ ಅಮುಖ್ಯರಲ್ಲ;
      ಯಾವುದೂ ಯಃಕಶ್ಚಿತವಲ್ಲ!

ಇಲ್ಲಿ
    ಯಾವುದಕ್ಕೂ ಮೊದಲಿಲ್ಲ;
        ಯಾವುದಕ್ಕೂ ತುದಿಯಿಲ್ಲ;
            ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ;
                ಕೊನೆಮುಟ್ಟುವುದೂ ಇಲ್ಲ!
ಇಲ್ಲಿ
    ಅವಸರವೂ ಸಾಧನದ ಬೆನ್ನೇರಿದೆ!
ಇಲ್ಲಿ
    ಎಲ್ಲಕ್ಕೂ ಇದೆ ಅರ್ಥ;
        ಯಾವುದೂ ಅಲ್ಲ ವ್ಯರ್ಥ;
            ನೀರೆಲ್ಲ ಊ ತೀರ್ಥ![೧೯]

ಇಂಥ ಕವಿತೆಯಲ್ಲಿ ಮಾನ್ಯ-ಅಮಾನ್ಯ, ಮುಖ್ಯ-ಅಮುಖ್ಯ, ನಾಯಕ-ಸಾಮಾನ್ಯ, ಆದರ-ನಿರಾದರ ಈ ಬಗೆಯ ಸ್ತರಗಳನ್ನು ನಿರಾಕರಿಸುವುದನ್ನು ಕಾಣುತ್ತೇವೆ. ಅಂದರೆ, ನಾಯಕನಾಗುವ, ಆದರಣೆಗೆ ಒಳಗಾಗುವ, ದೈವತ್ವಕ್ಕೇರುವ ಎಲ್ಲ ಬಗೆಯ ನೆಲೆಗಳಿಗೆ ತಿರಸ್ಕಾರಗಳನ್ನು ಇಂಥ ಕೃತಿಗಳು ಪ್ರಕಟಿಸುತ್ತವೆ. 'ಮಲೆಗಳಲ್ಲಿ ಮದುಮಗಳು' ಮಹಾಕಾದಂಬರಿ ಇಂಥ ಜೀವಧಾತುಗಳ ಶೋಧನೆಯನ್ನೇ ಮುನ್ನೆಡೆಸಿದ ಕೃತಿಯಾಗಿದೆ. ಮುಖ್ಯ - ಅಮುಖ್ಯಗಳ ನಡುವಿನ ಅಂತರಗಳನ್ನು ವಿಮರ್ಶೆಗೆ ಗುರಿಪಡಿಸುವುದರೊಂದಿಗೆ ಅಭೇದತಾ ವ್ಯಾಖ್ಯೆಯೊಂದನ್ನು ಕಲ್ಪಿಸುತ್ತದೆ. ಈ ವ್ಯಾಖ್ಯೆ ನಿಸರ್ಗದ ಎಲ್ಲ ಬಗೆಯ ವಸ್ತು ಮತ್ತು ಜೀವಿಗಳ ನಡುವಿನ ಅಂತರಗಳಿಗೆ, ಶ್ರೇಣೀಕೃತ ವ್ಯವಸ್ಥೆಗೆ ಎದುರಾಗಿಸುವ ವ್ಯಾಖ್ಯೆಯಂತೆ ಕಾಣುವಲ್ಲಿ ಕುವೆಂಪು ಅವರ ಪ್ರತಿರೋಧಗಳ ಅನನ್ಯತೆಗಳು ಪ್ರಕಟವಾಗುತ್ತವೆ.

'ನಿಸರ್ಗ ಕವಿತೆ'ಗಳಲ್ಲಿ ಪಾರಂಪರಿಕ ಅಮಾನವೀಯ ಮೌಲ್ಯಗಳಿಗೆ ಇಂಥ ತಾತ್ತ್ವಿಕ ಚಿಂತನೆಯೊಂದು ಗಟ್ಟಿಯಾಗಿ ಹೊಳಹು ಹಾಕುವುದರೊಂದಿಗೆ ಈ ಬಗೆಯ ಕಾವ್ಯಕ್ಕೆ ಅನನ್ಯತೆಯು ಒದಗಿ ಬರುತ್ತದೆ. ಜಾತಿ, ಧರ್ಮ, ವರ್ಣ, ಮಠ, ಗುಡಿಗೋಪುರಗಳ ನೆಪಗಳಲ್ಲಿ ಮೌಢ್ಯತೆಯನ್ನು ಪೋಷಿಸುವ ಪುರೋಹಿತ ವ್ಯವಸ್ಥೆಗಳನ್ನು ನಿಸರ್ಗಾನುಭವಗಳ ನೆಲೆಯಲ್ಲಿ ಮುಖಾಮುಖಿಯಾಗಿಸುವ ಧೋರಣೆ ಕನ್ನಡ ನವೋದಯದ ಮುಖ್ಯ ಧೋರಣೆ. ಡಾ|| ಡಿ.ಆರ್ . ನಾಗರಾಜ್ ಅವರು ಕುವೆಂಪು ಅವರ ನಿಸರ್ಗಾನುಭವ ಕಾವ್ಯದ ವೈವಿಧ್ಯತೆಗಳನ್ನು, ಆ ಕಾವ್ಯ ಎದುರಾಗಿಸಿದ ಧಾರ್ಮಿಕ ಪ್ರತಿರೋಧಗಳ ನೆಲೆಗಳನ್ನು ಹೀಗೆ ಗುರುತಿಸುತ್ತಾರೆ.

> ಕುವೆಂಪು ಕನ್ನಡದ ಮೊದಲ ನಿಸರ್ಗಾನುಭವಿ ; ಕನ್ನಡ ಸಾಂಸ್ಕೃತಿಕ ಚರಿತ್ರೆಯಲ್ಲಿ ಕುವೆಂಪುವಿಗೆ ಅತ್ಯಂತ ಮಹತ್ವದ ಸ್ಥಾನವಿರುವುದು ಕೂಡಾ ಇದೇ ಕಾರಣಕ್ಕೆ. ಅನುಭಾವದ ವಿಶಿಷ್ಟ ರೂಪೊಂದನ್ನು ಕನ್ನಡ ಸಾಂಸ್ಕೃತಿಕ ಬದುಕಿನೊಳಗೆ ತರುವುದರ ಮೂಲಕ, ಕುವೆಂಪು ಕನ್ನಡ ಕಾವ್ಯದ ಅನುಭವದ ವೈವಿಧ್ಯತೆಯನ್ನು ಹೆಚ್ಚಿಸಿದ್ದಾರೆ. ಕುವೆಂಪು ಅವರ ಸಾಹಿತ್ಯ ಕೃತಿಯಲ್ಲಿ ಪ್ರಕಟವಾಗುವ ಎಲ್ಲ ಆಂತರಿಕ

ಸಮಸ್ಯೆಗಳಿಗೆ, ನಾವು ಉತ್ತರವನ್ನು ಕಾಣಬೇಕಾದ್ದು ಇಲ್ಲಿಯೇ. ಕುವೆಂಪು ಅವರ ಸೃಜನಶೀಲತೆಯ ಎಲ್ಲ ಸಮಸ್ಯೆಗಳಿಗೆ, ಸಾಧನೆಗಳಿಗೆ ಈ ನಿಸರ್ಗಾನುಭವವೇ ಮೂಲ ನಿಯಂತ್ರಕ ಶಕ್ತಿಯಾಗಿದೆ.

ಉನ್ಮತ್ತತೆ ಮತ್ತು ತನ್ಮಯತೆಗಳ ನಡುವೆ ಸಮೃದ್ಧವಾಗಿ ಬೆಳೆಯುವ ನಿಸರ್ಗಾನುಭವ ಅಂತಿಮಗುರಿ ಸಾಂಸ್ಥಿಕ ಧರ್ಮದ ನಿರಾಕರಣೆ. ಈ ಸಾಂಸ್ಥಿಕ ಧರ್ಮದ ನಿರಾಕರಣೆ ಕುವೆಂಪು ಅವರ ಅತ್ಯಂತ ಮುಖ್ಯ ವೈಚಾರಿಕ ನಿಲುವುಗಳಲ್ಲಿ ಒಂದು ಎಂಬುದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು. ಈ ನಿಸರ್ಗಾನುಭಾವ ಎಂದೂ ಧರ್ಮದ ಶ್ರೇಣೀಕರಣಗಳಿಗೆ, ಗುಡಿಗೆ, ಮಠಕ್ಕೆ, ನಿತ್ಯಾಚಾರದ ನೀರಸ ಪ್ರತಿಕ್ರಿಯೆಗಳಿಗೆ ಬೆಲೆ ಕೊಡುವುದಿಲ್ಲ. ಈ ಎಲ್ಲಾ ಸಂಗತಿಗಳು ಅಂತಿಮವಾಗಿ ಅನುಭಾವದ ತೀವ್ರತೆಗೆ, ಪಾವಿತ್ರ್ಯತೆಗೆ ಆಘಾತ ಮಾಡುವಂಥದ್ದೇ. ಆದ್ದರಿಂದ ಕುವೆಂಪು ಕಾವ್ಯದ ನಿಸರ್ಗಾನುಭವದಲ್ಲಿ ಸುಧಾರಕನೊಬ್ಬನ ತೀವ್ರರೊಚ್ಚಿನ ಆಯಾಮ ಕೂಡ ಮೂಡುತ್ತದೆ.[೨೦]

ಡಾ.ಡಿ.ಆರ್.ನಾಗರಾಜ್ ಅವರ ಮೇಲಿನ ಉದ್ಧರಣೆ ಕುವೆಂಪು ಕಾವ್ಯದ ಅನನ್ಯತೆಗಳನ್ನು ಗುರುತಿಸುವುದರೊಂದಿಗೆ, ಅಂಥ ಕಾವ್ಯಾಧ್ಯಯನಕ್ಕೆ ಓದುಗನನ್ನು ಸಿದ್ಧಗೊಳಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. 'ಕೆಂದಳಿರು', 'ಪ್ರಕೃತಿ ಉಪಾಸನೆ', 'ದೇವರು ರುಜುಮಾಡಿದನು', 'ಇಂದ್ರದಿಗಂತದಿ', 'ಬರಲಿ ಬಡತನಕ್ಕೆ ಜೀವ ದೈಸಿರಿ', ಹೋಗುವೆನು ನಾ', 'ರಸಾನುಭೂತಿ', 'ಹಿಮಮಣಿ', 'ಹೀರೆಯ ಹೂವು', 'ಇಬ್ಬನಿ', - ಹೀಗೆ ಅಸಂಖ್ಯ ಕವನಗಳಲ್ಲಿನ ನಿಸರ್ಗಾನುಭವದಲ್ಲಿ ಸುಧಾರಕನೊಬ್ಬನ ತೀವ್ರವಾದ ಪ್ರತಿರೋಧ ಅಭಿವ್ಯಕ್ತಗೊಂಡಿದೆ. ಈ ಪ್ರತಿರೋಧ ನಿಸರ್ಗಾನುಭವದಿಂದ ದತ್ತವಾಗುವ ಉನ್ಮತ್ತತೆ ಮತ್ತು ತನ್ಮಯತೆಯ ನೆಲೆಗಳಲ್ಲಿ ಪ್ರಕಟವಾಗುತ್ತದೆ. ಅಂಥ ತನ್ಮಯತೆಗೆ ಮಾತ್ರ ಸೂರ್ಯೋದಯ - ಚಂದ್ರೋದಯಗಳು ದೇವರ ದಯದಂತೆ ಕಾಣಲು ಸಾಧ್ಯ. ಈ ತನ್ಮಯಾವಸ್ಥೆಯ ಕವನಗಳಲ್ಲಿಯೇ ವಸಾಹತು ಸಂಸ್ಕೃತಿಯ ಆಗಮನದಿಂದ ಎದುರಾದ ದ್ವಂದ್ವಗಳಿಗೆ, ಸಾಂಪ್ರದಾಯಿಕ ವ್ಯವಸ್ಥೆಯ ಆಕ್ರಮಣಕಾರಿ ನೆಲೆಗಳಿಗೆ ನಿಸರ್ಗಾನುಭವಗಳನ್ನು ಮುಖಾಮುಖಿಯಾಗಿಸುವ ಪ್ರತಿರೋಧದ ನಿಲುವುಗಳು ದಟ್ಟವಾಗಿ ಕೆಲಸ ಮಾಡುತ್ತವೆ. ತನ್ಮಯಾವಸ್ಥೆಗಳಲ್ಲಿಯ ಚೈತನ್ಯ 'ಸಂಪ್ರದಾಯವನು ಮುರಿದು ನಡೆವ ನವೀನ ಯುಗವಲ್ತೆ ಈ ಕಾಲ?..' ಎಂಬ ಆಶಯದಿಂದಲೇ ಬಂದದ್ದು. 'ಜಡೆವೆಲ್ಲ ಚೈತನ್ಯದಗ್ನಿ ನದಿ' ಯಾಗಿ ಇಂಥ ಕಾವ್ಯದಲ್ಲಿ ಹರಿಯುತ್ತಿದೆ.

- ಆಃ

ಆಲಿಸದೊ, ನಾರಾಚವೇಗದಿಂ ಸುಯ್ಯೆಂದು
ಹಾರಿ ಬಂದಂಬುವಿಂಗೆರಗುತಿಹ ತಿಂತಿಣಿಯ
ಕೊಳರ್ವಕ್ಕಿಗಳ ರೆಕ್ಕೆಸದ್ದು ! ಅದೊ ಗೂಬೆದನಿ !
ಅದೂ ಕೂಡ, ಸನ್ನಿವೇಶದ ಮಹಿಮೆಯೆಂಬಂತೆ ,
ವಿಕೃತವಾಗಿಲ್ಲ ! ಮತ್ತಾಲಿಸದೊ ತೇನೆಯಲಿ !
ಮಡಿವಾಳನಿಂಚಿಳ್ಳು ! ಮಾಗಿಯಾರು ಕೂಡ,
ಕೇಳು ಕೂಗಿತದೊ ಕೋಗಿಲೆ! ಸಂಪ್ರದಾಯವನು
ಮುರಿದು ನಡೆವ ನವೀನ ಯುಗವೆತ್ತಿ ಈ ಕಾಲ? ....
- - - - - - - - - - - - - - -

......ಹೊರಗಾಗಿ ತೋರುನೀ ವಿಶ್ವಕ್ಕೆ
ತಳಹದಿಯದೊಂದೆ ಚೈತನ್ಯ; ಅದು ರಸದೃಷ್ಟಿ
ಸಂವೇದ್ಯ; ರಸಋಷಿಯ ಪ್ರತಿಭಾ ಸಮಾಧಿಗದು
ಪ್ರತ್ಯಕ್ಷ.[೨೧]

**೯. ಗ್ರಾಮ - ನಗರ : ಆಕರ್ಷಣೆ ವಿಕರ್ಷಣೆ**

ವಸಾಹತು ಸಂಸ್ಕೃತಿಯಿಂದ ಉಂಟಾದ ಪಲ್ಲಟದ ನಗರ ಬದುಕಿನ ದ್ವಂದಗಳಿಗೆ ಪರಿಹಾರಗಳನ್ನು ಹುಡುಕುವುದು ಕುವೆಂಪು ಅವರ ಕಾವ್ಯದ ಬಹುಮುಖ್ಯ ಧೋರಣೆಯಾಗಿ ಪ್ರಕಟವಾಗುತ್ತದೆ. ನಗರಗಳ ನಿರ್ಮಾಣದಿಂದ ಎದುರಾಗುವ ಭೋಗ, ಪದಾರ್ಥ ವ್ಯಾಮೋಹಗಳು, ಯಾಂತ್ರಿಕ ಮನುಷ್ಯ ಸಂಬಂಧಗಳಿಂದ ಎದುರಾಗುವ ವ್ಯಕ್ತಿ ಹಾಗೂ ಕೌಟುಂಬಿಕ ಸಮಸ್ಯೆಗಳು ತರುವ ಬೇಸರಗಗಳಿಂದ ಪ್ರಕೃತಿಯ ಮಡಿಲಿಗೆ ಹಿಂದಿರುಗಬೇಕೆಂಬ ಕಾತರಗಳು ಅಧಿಕಗೊಂಡಿವೆ. ಅಂದರೆ, ನಾಗರಿಕ ಪರಿಸರದಿಂದ ಉಂಟಾದ ಆತಂಕ ಹಾಗೂ ತಲ್ಲಣಗಳಿಂದ ಬೇಸೆತ್ತ ಸಂವೇದನೆ ತನ್ನ ಗತಕಾಲದ ನೆನಪುಗಳನ್ನು ಮತ್ತೆ ಮತ್ತೆ ಅಭಿವ್ಯಕ್ತಿಯ ನೆಲೆಗಳಲ್ಲಿ ಶೋಧನೆಗೆ ಗುರಿಪಡಿಸಿರುವುದನ್ನು 'ಹೋಗುವೆನು ನಾ' ಮತ್ತು 'ಪ್ರಕೃತಿ ಉಪಾಸನೆ' ಕವಿತೆಗಳು ಸ್ಪಷ್ಟಪಡಿಸುತ್ತವೆ. ನಗರಗಳು ಎದುರಾಗಿಸುವ ದ್ವಂದ್ವಗಳು ಪ್ರಬಲವಾದಂತೆಲ್ಲಾ ಗ್ರಾಮದ ನೆನಪುಗಳು ಗಾಢವಾಗಿ, ತಾನು ಬಿಟ್ಟು ಬಂದ ನಾಡಿಗೆ ಮರಳಬೇಕೆಂಬ ಕಾತರ ಅನುರಣನಗೊಳ್ಳುವುದು ಈ ಬಗೆಯ ಕಾವ್ಯದ ಬಹುಮುಖ್ಯ ಪ್ರವೃತ್ತಿಯಾಗಿದೆ.

ಎಲ್ಲಿ ಹಸುರನು ಚಿಮ್ಮಿ ಕಣ್ಣಿಗೆ ಪೈರುಪಚ್ಚೆಯ ಬೆಳೆವುದೋ,
ಎಲ್ಲಿ ಗದ್ದೆಯ ಕೋಗು ಪವನನ ಹತಿಗೆ ತೆರೆತೆರೆಯೊಲೆವುದೋ,
ಬಿಂಗಗಣ್ಣಳ ಮಲೆಯ ಹೆಣ್ಗಳ ದಿಟ್ಟಿಯೆಲ್ಲೆಡೆ ಸೆಳೆವುದೋ,
ಎಲ್ಲಿ ಕಾಲವು ತೇಲಿ ಸುಖದಲಿ ತಿಳಿಯದಂತೆಯೇ ಕಳೆವುದೋ,

ಅಲ್ಲಿಗೈವೆನಲ್ಲಿಗೈದುವೆನಿಲ್ಲಿ ಬೇಸರವಾಗಿದೆ;
ಕಾಡುಮಲೆಗಳನಲೆವ ಹುಚ್ಚಿನ ಕಿಚ್ಚು ಹೃದಯದಿ ರೇಗಿದೆ!
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ ;
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ![೨೨]

ನಗರಗಳ ನೀತಿ-ನಿಯಮಗಳು, ಶಾಸ್ತ್ರದ ವಿಧಿ-ವಿಧಾನಗಳು ಒಡ್ಡುವ ಗೊಂದಲಗಳಿಂದ ಬಿಡುಗಡೆ ಹೊಂದಿ, ತನ್ನೊಲುಮೆಯ ಗೂಡಿಗೆ - ಮಲೆನಾಡಿಗೆ ಹಿಂದಿರುಗಬೇಕೆಂಬ ಹಂಬಲ ಇಲ್ಲಿ ಉತ್ಕಟವಾಗಿದೆ. ಮಲೆನಾಡಿನ ಸಮಷ್ಟಿ ಬದುಕು ಈ ಕವಿತೆಯಲ್ಲಿ ಮೈ ಪಡೆಯುವುದರೊಂದಿಗೆ, ಬಯಲು ಸೀಮೆಯ ಅಥವಾ ನಗರ ಬದುಕಿನ ಯಾಂತ್ರಿಕತೆ ತರುವ ಬೇಸರಗಳು ಒಮ್ಮೆಗೇ ಪ್ರಕಟವಾಗುತ್ತವೆ. ಈ ಮೇಲೆ ಉದ್ಧೃತಗೊಂಡಿರುವ ಸಾಲುಗಳನ್ನು ನೋಡಿದರೂ ಸಾಕು, ಈ ಮಾತು ಸ್ಪಷ್ಟಗೊಳ್ಳುತ್ತದೆ. ತನ್ನ ಕಾವ್ಯ ಸೃಷ್ಟಿಯ ಅನುಭವಗಳ ಆಗರವಾದ, ಸ್ಫೂರ್ತಿಯ ಚಿಲುಮೆಯಾದ

ಮಲೆನಾಡಿಗೆ ಹಿಂದಿರುಗಬೇಕೆಂಬ ಕಾತರ ಇಲ್ಲಿ ಗಾಢವಾಗುತ್ತದೆ. ಆದರೆ ಮಲೆನಾಡಿಗೆ ಹಿಂದಿರುಗಬೇಕೆಂಬ ಅಭೀಪ್ಸೆ ತೀವ್ರವಾದರೂ, ಹಾಗೆ ಹಿಂದಿರುಗಲಾರದ ಗೊಂದಲಗಳು ಕುವೆಂಪು ಅಂಥಹ ಸಂವೇದನಾಶೀಲರನ್ನು ಬಿಡಲಿಲ್ಲವೆಂಬ ಸತ್ಯ ಎಲ್ಲರಿಗೂ ತಿಳಿದದ್ದೇ. ಆದರೂ ತಾನಿರುವ ನೆಲೆಯಿಂದಲೆ ತನ್ನ ನೆನಪುಗಳ ಸಂಸ್ಕಾರದಿಂದಲೆ ತನ್ನ ಅಭೀಪ್ಸೆಯ ಮಲೆನಾಡನ್ನು ಕಾಣುವ ಚಿತ್ರ 'ಪ್ರಕೃತಿ ಉಪಾಸನೆ'ಯಲ್ಲಿ ಮೈ ಪಡೆದಿದೆ. 'ಒಂಟಿಕೊಪ್ಪಲಿನ ಜಲಾಶಯದ ದಿಬ್ಬದಲ್ಲಿ' ನಿಂತು ಸೂರ್ಯೋದಯಕ್ಕೆ ಎದುರಾಗಿರುವ ಸಂವೇದನೆ 'ಯಾವ ಗುಡಿಸಲು ಮಿಗಿಲು? ಈ ಭುವನದೇವಾಲಯಕೆ?' ಎಂಬ ಪ್ರಶ್ನೆಯೊಂದಿಗೆ ನಗರ ಮತ್ತು ಪ್ರಕೃತಿ ಚಿತ್ರಗಳು ಅಭಿಮುಖಿಗೊಳ್ಳುವುದನ್ನು ಕಾಣಬಹುದು.

ನೋಡದೋ: ನನ್ನ ಪದತಲದಿ
ಎಂಬಂತೆ ನಗರ ನಾಗರಿಕತೆಯ ಜೀವನಂ
ಹಬ್ಬಿ ಬಿದ್ದಿದೆ, ತನ್ನ ನೂರೂರಾ ಬಾಯ್ಗಳಿಂ
ಕೈಗಳಿಂ ಮೈಗಳಿಂ, ಮೈಗಳಿಂ, ಕಾಲ್ಗಳಿಂ,
ನಕದಂಷ್ಟ್ರ ಭೀಷಣ ಪೆಡಂಭೂತವನು ಹೋಲಿ!
- - - - - - - - - - - - - - - - - -
ಇಂತು ಹಬ್ಬಿದೆ ಪಟ್ಟಣದ ಬೃಹಜ್ಜೀವನಂ
ಶತ ಶತ ಸಹಸ್ರಶತ ಶಾಖೋಪಶಾಖೆಯಿಂ
ಮರವೊಂದರಿಂದಾದ ಹೇರಡವಿಯೆಂಬಂತೆ![೨೩]

ನಗರ ಸಂಸ್ಕೃತಿಯ ಸಂಕೀರ್ಣಾವಸ್ಥೆಯ ಚಿತ್ರಗಳು, ಅಂಥ ಸಂಕೀರ್ಣಾವಸ್ಥೆಯಿಂದ ಪ್ರಕೃತಿ ಉಪಾಸನೆಗೆ ಎದುರಾಗಿರುವ ಹೃದಯದಾರಿದ್ರ್ಯದ ಸನ್ನಿವೇಶಗಳನ್ನು ಕಾಣುತ್ತೇವೆ. 'ಸತ್ಯ-ಶಿವ'ಗಳು ಪ್ರಕೃತಿ ಸೌಂದರ್ಯದಲ್ಲಿ ಲೀನವಾಗಿದ್ದು, ಅವುಗಳ ದರ್ಶನವನ್ನು-ನಿಸರ್ಗಾನುಭವವನ್ನು ಪಡೆದವನಿಗೆ ಹೃದಯ ದಾರಿದ್ರ್ಯ ಇಲ್ಲವಾಗಿ, ಜಡದಲ್ಲಿಯೂ ಚೇತನವನ್ನು ಕಾಣುವ, ಸೃಷ್ಟಿಕ್ರಿಯೆಗೆ ಎದುರಾಗುವ ಚೈತನ್ಯಯುಕ್ತ ಮನಸ್ಥಿತಿಯೊಂದು ಒದಗುತ್ತದೆಂಬ ವಿಚಾರ ಪ್ರಕಟವಾಗುತ್ತದೆ.

'ಮರದ ನೆಳಲು' ಕವಿತೆಯಲ್ಲಿ ನಿಯಮಾವಳಿಗಳಿಂದ ಸೃಷ್ಟಿಯಾಗುವ ಬಂಧನ-ದಾಸ್ಯದ ಸ್ಥಿತಿಗತಿಗಳು ವಿಶ್ಲೇಷಣೆಗಳೊಳಗಾಗಿವೆ. 'ಮರದ ನೆಳಲು' ಅಪಶಕುನ ರೂಪದಲ್ಲಿ ವ್ಯಕ್ತವಾಗುವುದರೊಂದಿಗೆ, ಸ್ವಾತಂತ್ರ್ಯವನ್ನು ಕಳೆದುಕೊಂಡ ಅವಸ್ಥೆಯನ್ನು ಎಚ್ಚರಿಸುತ್ತದೆ. ಬಯಲಿನಲ್ಲಿ ಬಿದ್ದ ಮರದ ನೆರಳು ವಿಕ್ರೀತ ದಾಸನಂತೆ ಬಿಡುಗಡೆಗಾಗಿ, ಹಾತೊರೆದು ಬಿದ್ದಿಹ ಸೆರೆಯಾಳಾಗಿದೆ. ಹೊಳೆವ ಬೆಂಕಿಗೆ ದಹಿಸುವ ದಾಸ್ಯ, ಬೀಸುವ ಗಾಳಿಗೆ ಚಲಿಸುವ ದಾಸ್ಯ, ನಿಂತ ನೀರಿಗೆ ದಡದ ವಸ್ತುಗಳ ಮರುಬಿಂಬಿಸುವ ದಾಸ್ಯ, ಇಡೀ ವಿಶ್ವವೆ ದಾಸ್ಯದಾಲಯವಾಗಿ ವಜ್ರಬಂಧನಕ್ಕೆ ಒಳಗಾಗಿದೆಯೆಂಬ ವಿಚಾರದೊಂದಿಗೆ, ಸ್ವಾತಂತ್ರ್ಯ ಸಂದರ್ಭದ ಬಂಧನದ ಸ್ಥಿತಿಗತಿಗಳನ್ನು ಈ ಕವಿತೆ ಧ್ವನಿಸುತ್ತದೆ. ಕರ್ತವ್ಯದಿಂದ ಒದಗುವ ದಾಸ್ಯದಿಂದ ಮುಕ್ತಿ ಹೊಂದಿ, ಸ್ವಾತಂತ್ರ್ಯ ಸ್ವಚ್ಛಂದಗಳ ಹುಚ್ಚಾಟದಿಂದ ಹುಟ್ಟಿದ ನಿಯಮಗಳ ಆಳ್ವಿಕೆ ಇಲ್ಲವಾಗಬೇಕೆಂಬ ಆಶಯ ಈ ಕವಿತೆಯದಾಗಿದೆ.

'ಮರದ ನೆಳಲ'ನ್ನು ಚಿತ್ತದ ದಾಸ್ಯವಾಗಿ ಕಂಡ ಸಂವೇದನೆ 'ತಣ್ಣೆಳಲು' ಕವಿತೆಯಲ್ಲಿ, 'ನೆಳಲು' ಸ್ವಾತಂತ್ರ್ಯಾನಂದಗಳ ಚೆಲುವಿನಂತೆ ಕಂಡಿದೆ. ಇಲ್ಲಿ 'ನೆಳಲು' ಆಶ್ರಯದ ಸಂಕೇತ. ಕರ್ತವ್ಯದಿಂದ ಒದಗುವ ದಾಸ್ಯ ನಿಷ್ಠೆಯಿಂದ ಕೂಡಿದುದೆಂದೂ, ನಿಷ್ಠೆಯಿಂದ ಒದಗುವ ದಾಸ್ಯ ದಾಸ್ಯವಲ್ಲವೆಂದೂ, ತನ್ನ ಹಿಂದಿನ ವ್ಯಾಖ್ಯಾನಕ್ಕೆ ಕ್ಷಮೆಯಾಚನೆಗಾಗಿ 'ಸವಿನೆಳಲೆ, ನನ್ನ ಆ ದರ್ಶನ ಮರೆತು ಬಿಡು, ನನ್ನ ಇಂದಿನ ದರ್ಶನಕೆ ಮನ್ನಣೆಯ ಮಾಡು!' ಎಂದು ಕವಿ ಸಂವೇದನೆ ಆಶಿಸುತ್ತದೆ.

'ರೌದ್ರತೆ' ಕುವೆಂಪು ಅವರ ಪ್ರಕೃತಿ ಕವನಗಳಲ್ಲಿ ಎದುರಾಗುವ ಮತ್ತೊಂದು ಮುಖ್ಯ ನೆಲೆ. 'ಮುಂಗಾರು' ಮತ್ತು 'ವರ್ಷಭೈರವ' ಕವಿತೆಗಳಲ್ಲಿ ಪ್ರಕೃತಿಯ ಉಗ್ರರೂಪ ಎದುರಾಗುತ್ತದೆ. ಮುಂಗಾರಸುರಿಯ ಆಗಮನದಿಂದ ಸಮಸ್ತ ಮಲೆನಾಡು ಭೀಕರ ಆತಂಕಕ್ಕೆ ಒಳಗಾಗಿದೆ. ಮಲೆನಾಡಿನ ಶಾಂತಿ ಅವಳ ಆಗಮನದಿಂದ ಕದಡಿದೆ. ಸಮಷ್ಟಿ ಬದುಕಿನ ವ್ಯವಸ್ಥೆಯೆ ಈ ಆರ್ಭಟಕ್ಕೆ ದಿಗಿಲುಗೊಂಡಿದೆ. ಈ ಕವನದಲ್ಲಿ ನಿರೂಪಿತವಾಗಿರುವ ಆತಂಕಗಳು ಮುಂಗಾರಿನ ಮಳೆಯ ಭೀಕರತೆ ತರುವ ಆತಂಕಗಳಾದರೂ, ಹೊಸ ಸಂಸ್ಕೃತಿಯೊಂದರ ಆಗಮನದಿಂದ ಉಂಟಾದ ತಲ್ಲಣಗಳನ್ನು ಧ್ವನಿಸುವಂತೆ ಕಾಣುತ್ತದೆ. ಆದರೆ, ಈ ತಲ್ಲಣಗಳು ಶಾಶ್ವತವಾಗದೆ, ಹೊಸ ಸಂಸ್ಕೃತಿಯೊಂದರ ಸಂಪರ್ಕದಿಂದ ಜಡಾವಸ್ಥೆಯ ನೆಲೆಗಳಲ್ಲಿ ಉಂಟಾದ ಚೈತನ್ಯವನ್ನು ಪ್ರಕಟಿಸುವಂತೆ ಧ್ವನಿಸುತ್ತದೆ.

'ವರ್ಷಭೈರವ' ಕವಿತೆಯ ಶಿವತಾಂಡವವು ಇಂತಹದೇ ಒಂದು ಅವಸ್ಥೆಯಿಂದ ಹೊರಟಂತೆ ಕಾಣುವುದು. 'ಮಳೆ ಎಂಬುದು ಬರಿ ಸುಳ್ಳಿದು ! ಮಳೆಯಲ್ಲಿದು ! ಮಳೆಯಿಲ್ಲದೆ ಪ್ರಳಯದ ಆವೇಶ!' ಎಂಬ 'ವರ್ಷಭೈರವ' ಕವಿತೆಯ ಈ ನುಡಿಗಳು ಮಲೆನಾಡಿನ ಮೌಢ್ಯತೆಗಳಿಗೆ ಎದುರಾದ ಪ್ರಲಯಸ್ವರೂಪಿಯಾದ ವೈಜ್ಞಾನಿಕ ಮತಿಯ ಆಗಮನದಂತೆ ಧ್ವನಿತವಾಗುವುದು. ಈ ಬಗೆಯ ಪ್ರಕೃತಿರೌದ್ರತೆ ಕವಿತೆಗಳ ಅನನ್ಯತೆಯಾಗಿದೆ.

ಪ್ರಕೃತಿ ಆಸ್ವಾದನೆಯ ತನ್ಮಯಾವಸ್ಥೆಗಳಲ್ಲಿ ಆಕ್ರಮಣಕಾರಿ ಸಂಸ್ಕೃತಿಗೆ ಪ್ರತಿರೋಧವನ್ನು ಕಂಡುಕೊಂಡ ಕುವೆಂಪು ಅವರ ಸಂವೇದನೆ, 'ಜಡವಾದಿ' ಕವಿತೆಯಲ್ಲಿ ಸಂಪೂರ್ಣವಾಗಿ ಅದಕ್ಕೆ ವಿರುದ್ಧವಾದ ದೃಷ್ಟಿಕೋನವನ್ನು ಮುಖಾಮುಖಿಯಗಿಸುತ್ತದೆ. 'ಆನಂದಮಯ ಈ ಜಗ ಹೃದಯ', 'ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ !' ಎಂದ ಸಂವೇದನೆಯೇ ಭೂತಾಯಿಯನ್ನು ನೋಡುವ ಪರಿಕಲ್ಪನೆ ಇಲ್ಲಿ ಬೇರೆಯದೆ ನೆಲೆಯನ್ನು ಪಡೆಯುತ್ತದೆ. ತನ್ನ ಅನನ್ಯತೆಗಳನ್ನು ನೆಲದ ಸೌಂದರ್ಯದಲ್ಲಿ ಕಾಣುತ್ತಿದ್ದ ಸಂವೇದನೆ, ಅಂಥ ಅನನ್ಯತೆಗಳಿಗೆ ಧಕ್ಕೆ ತಂದ ಭೂಮಿತಾಯಿಯ ದಾಸ್ಯದ ಪರಿಣಾಮವಾಗಿ 'ಎಲೆ ಧರಣೀ, ನಿಷ್ಕರುಣಿ ನೀನಲ್ತೆ' ಎಂಬ ಮಾತನ್ನಾಡಿಸಿದೆ. ನಿರಂತರವಾಗಿ ಪರಕೀಯರ ಆಕ್ರಮಣಕ್ಕೆ ಒಳಗಾದ ತಾಯಿಯ ಬಗೆಗಿನ ಸಿಟ್ಟು ಈ ಕವಿತೆಯ ಕೇಂದ್ರ ಆಶಯವಾಗಿದೆ. ಆಕ್ರಮಣಕಾರಿ ನೆಲೆಗಳಿಗೆ ಯಾವ ಪ್ರತಿರೋಧವನ್ನು ಒಡ್ಡದೆ, ನಿರಂತರವಾಗಿ ತನ್ನ ಕ್ರಿಯೆಯಲ್ಲಿ ತೊಡಗಿದ ತಾಯಿಯ ಉರುಳು ಆತಂಕಗಳನ್ನುಂಟು ಮಾಡಿದೆ. ಹಾಗೆಯೇ ಅದು ಉರುಲಾಗುವ ಅಥವಾ ಬಂಧನವಾಗುವ ಸ್ಥಿತಿಗತಿಗಳನ್ನು ಕಂಡ ಸಂವೇದನೆ ಈ ಕವನದ ಹಿಂದಿದೆ.

ಪರಕೀಯ ಆಕ್ರಮಣಗಳಿಗೆ ನಿರಂತರವಾಗಿ ತುತ್ತಾಗುವ ಈ ನೆಲ ತನ್ನ ಮಕ್ಕಳಿಗೆ ತಾಯಿಮಡಿಲೆಂಬುದು ಬರಿ ಭ್ರಮೆಯಾಗಿ ಕಾಣುತ್ತದೆ. ವಾಸ್ತವದಲ್ಲಿ ತಾಯಿ ಮಡಿಲೆಂಬುದು ಸುಡುಗಾಡೆಂಬ ಆಶಯ ಇಲ್ಲಿಯದಾಗಿದೆ. ಯುಗ ಯುಗಗಳ ಸಾಧನೆ, ಸಂಸ್ಕೃತಿ, ನಾಗರಿಕತೆಗಳನ್ನು, ಅವತಾರಪುರುಷರ ಕಾಣ್ಕೆಗಳನ್ನು ತನ್ನ ಬಲ್ಮೆಸಣದಲ್ಲಿ ಸಮಾಧಿಗೈದುದರ ಬಗೆಗೆ, 'ಜಡವಾದಿ' ಅವಳ ಅಕೃತ್ಯಗಳನ್ನು ದೂಷಿಸುತ್ತಾನೆ. ಜಡವಾದಿ, ಇಲ್ಲಿ ವಸಾಹತು ಸಂಸ್ಕೃತಿ ಎದುಗಾಗಿಸಿದ ಸಾಂಸ್ಕೃತಿಕ ಸಂಘರ್ಷದಿಂದ ಹುಟ್ಟಿಕೊಂಡ ಪ್ರಜ್ಞೆಯಂತೆ ಕಾಣುತ್ತಾನೆ. ದೇಶಕ್ಕೆ ಒದಗಿದ ದಾಸ್ಯದ ಸಂಕಟಗಳು ಜಡವಾದಿಯನ್ನು ಇಂಥ ಪ್ರಶ್ನೆಗಳೊಂದಿಗೆ ತಲ್ಲಣಗೊಳಿಸಿವೆ. ಕುವೆಂಪು ಅವರ ಪ್ರಕೃತಿ ಬಗೆಗಿನ ನಿಲುವುಗಳಲ್ಲಿ ಜಡಮೌಲ್ಯಗಳಿಗೆ ಮುಖಾಮುಖಿಯಾದ ಸಂವೇದನೆ ಅತ್ಯಂತ ತೀವ್ರವಾಗಿ ಪ್ರತಿಕ್ರಿಯಿಸಿದೆ. ಪ್ರಕೃತಿ ಚೈತನ್ಯಲೀಲೆಯಾಗಿ, ಪರಮಾರಾಧನೆಯಾಗಿ, ದೇವರ ದಯವಾಗಿ, ಶಿವ ಹಾಗೂ ಆನಂದಮಯವಾಗಿ ಕಾಣುತ್ತದೆ. ಈ ನೆಲ ಪುಣ್ಯದ ಆಲಯವಾಗಿ ಕಾಣುವಂತೆಯೇ, ಮುಡಿಗೆದರಿದ ಮುಂಗಾರಸುರಿಯಾಗಿ ಶಿವನ ಪ್ರಲಯಕಾಲದ ತಾಂಡವವಾಗಿ ಮೈ ಪಡೆಯುತ್ತಲೆ, ಜಡಸಂಸ್ಕೃತಿಯೊಂದಕ್ಕೆ ಪ್ರತಿಕ್ರಿಯಿಸುತ್ತಲೆ ಸೃಷ್ಟಿಕ್ರಿಯೆಯಲ್ಲಿ ತೊಡಗುವುದು ಕುವೆಂಪು ಅವರ ಕಾವ್ಯದ ವಿಶಿಷ್ಟ ಅಭಿವ್ಯಕ್ತಿಯಾಗಿದೆ. ಪರಕೀಯ ಸಂಸ್ಕೃತಿಯೊಂದರ ಆಕ್ರಮಣಶೀಲ ನೆಲೆಗಳಿಗೆ ಕನ್ನಡ ಸಂವೇದನೆಯೊಂದು ಸನಾತನ ಸಂದರ್ಭದ ವಿಮರ್ಶೆಯನ್ನು ಹೇಗೆ ಪ್ರಕಟಪಡಿಸುತ್ತದೆಂಬುದನ್ನು ಈ ಮೇಲಿನ ವಿಶ್ಲೇಷಣೆಯಲ್ಲಿ ಕಾಣಬಹುದಾಗಿದೆ.

ಕುವೆಂಪು ಅವರ 'ಮಹಾದರ್ಶನ'ವೆಂಬ ಎಂಟನೂರ ಐದು ಸಾಲುಗಳ ಖಂಡಕಾವ್ಯ (೨೯.೦೭.೧೯೨೮) ದಲ್ಲಿ ವಸಾಹತು ಸಂಸ್ಕೃತಿ ಭಾರತವನ್ನು ಪ್ರವೇಶಿಸಿದ ಚಿತ್ರಗಳು, ಅದು ಒಡ್ಡಿದ ತಂತ್ರ-ಕುತಂತ್ರಗಳು ವಿಶ್ಲೇಷಣೆಗೆ ಒಳಗಾಗಿವೆ. ವಸಾಹತು ಸಂಸ್ಕೃತಿಯು ತಂದ ತಲ್ಲಣಗಳ ಶೋಧ ಈ ಕೃತಿಯ ಹಿನ್ನೆಲೆ. ಆದರೂ ಅಂಥ ಸಂಸ್ಕೃತಿಯೊಂದು ಈ ದೇಶಕ್ಕೆ ಬಂದು ಮನೆಮಾಡಲು ಅವಕಾಶವಿತ್ತ ವೈದಿಕ ಸಂಸ್ಕೃತಿಯು ಬಿತ್ತಿದ ಮೌಢ್ಯತೆಯ ಬಗೆಗಿನ ವ್ಯಂಗ್ಯ ಈ ಕೃತಿಯಲ್ಲಿ ಪ್ರಮುಖವಾಗಿ ಮೈ ಪಡೆಯುತ್ತದೆ. ಸನಾತನ ಭಾರತದಲ್ಲಿ ಯುಗ ಯುಗಾಂತರಗಳಿಂದ ಹುಟ್ಟಿ ಬಂದ ತತ್ತ್ವಗಳು, ಮಹಾವ್ಯಕ್ತಿಗಳು, ಚಕ್ರವರ್ತಿಗಳು, ಕವಿವರ್ಯರು, ಯೋಗಿಗಳು ಕಾಣಿಸಿದ ದರ್ಶನಗಳನ್ನು ಮರೆಮಾಚಿ, ಜನತೆಯಲ್ಲಿ ಮೌಢ್ಯತೆಯನ್ನು ಬಿತ್ತಿ ತಮ್ಮ ಸ್ವಾರ್ಥವನ್ನು ಸಾಧಿಸಿದ ಪುರೋಹಿತ ವ್ಯವಸ್ಥೆಯ ಬಗೆಗಿನ ಆಕ್ರೋಶವು ಈ ಕೃತಿಯಲ್ಲಿ ಮುಖ್ಯ ನೆಲೆಯಾಗಿ ವಿಶ್ಲೇಷಣೆಗೆ ಒಳಗಾಗಿದೆ. ಅಂದರೆ ಪುರೋಹಿತಶಾಹಿ ವ್ಯವಸ್ಥೆ ಎಸಗಿದ ಅಕೃತ್ಯಗಳಿಂದ ಶತಶತಮಾನಗಳಿಂದ ಭರತಖಂಡಕ್ಕೆ ಒದಗಿದ ದುರ್ಗತಿಗಳಿಗೆ ಬೆಳಕು ಕಾಣಿಸಿ, ಅವುಗಳಿಂದ ಉಂಟಾದ ಅನರ್ಥಗಳನ್ನು ಇಲ್ಲವಾಗಿಸಿ, ಮತೀಯ ಮೌಢ್ಯತೆಗೆ ವೈಜ್ಞಾನಿಕ ಪ್ರಜ್ಞೆಯನ್ನು, ಆಧ್ಯಾತ್ಮಕತೆಯನ್ನು ಜನತೆಯಲ್ಲಿ ಬಿತ್ತಿ ಎಚ್ಚರಿಸಬೇಕೆಂಬ ಆಶಯ ಈ ಕೃತಿಯಲ್ಲಿ ಗಾಢವಾಗಿ ಚಿಂತಿತವಾಗುತ್ತದೆ. ಸನಾತನ ಭಾರತೀಯ ಸಂಸ್ಕೃತಿಗೆ ಒದಗಿದ ಕಳಂಕಗಳು ಇಲ್ಲವಾಗಿ, ಆ ಸಂಸ್ಕೃತಿಯು ನೂತನ ಸಂಸ್ಕಾರಗಳನ್ನು ಪಡೆದು ತಲೆಯೆತ್ತಬೇಕೆಂಬ ಆಶಯಗಳೂ ಇಲ್ಲಿವೆ.

ಸರ್ವಧರ್ಮಸಮನ್ವಾಚಾರ್ಯರೂ ಶ್ರೀ ರಾಮಕೃಷ್ಣಪರಮಹಂಸರ ಶಿಷ್ಯರೂ ವೀರಸನ್ಯಾಸಿಗಳೂ ಆದ ವಿವೇಕಾನಂದರ ಧ್ಯಾನಸ್ಥ ಸ್ಥಿತಿಯಲ್ಲಿ ಭರತಖಂಡದ ಸಮಷ್ಟಿ ಐತಿಹಾಸಿಕ ಚಿತ್ರಗಳು, ಭೂತ ಭವಿಷ್ಯದ್ವರ್ತಮಾನಗಳು

ದರ್ಶನಗೊಳ್ಳುವುದರೊಂದಿಗೆ ಭಾರತೀಯ ಸಂಸ್ಕೃತಿ ನಡೆದು ಬಂದ ಹಾಗೂ ಮುನ್ನಡೆಯಬೇಕಾದ ಮಾರ್ಗಗಳನ್ನು ಈ 'ಮಹಾದರ್ಶನ' ಕಾಣಿಸುತ್ತದೆ. ಇದನ್ನು ಮುನ್ನಡೆಸುವ ನಿರೂಪಣಾ ತಂತ್ರವು 'ಶ್ಮಶಾನ ಕುರುಕ್ಷೇತ್ರ' ರುದ್ರನಾಟಕದ ಕೊನೆಯ ದೃಶ್ಯಾಭಿನಯದ ನಿರೂಪಣೆಯನ್ನು ಹೋಲುತ್ತದೆ.

ಭಾರತೀಯ ಸಂಸ್ಕೃತಿ ಯುಗ ಯುಗಗಳಿಂದ ಕಂಡುಕೊಂಡ ದಿವ್ಯಾದರ್ಶಗಳನ್ನು ಪುರೋಹಿತ ವ್ಯವಸ್ಥೆ ಕುರೂಪಗೈದು, ಗೊಡ್ಡು ಪದ್ಧತಿಗಳನ್ನೇ ಜನತೆಗೆ ಬೋಧಿಸಿ, ಮನುಷ್ಯ - ಮನುಷ್ಯರ ನಡುವೆ ಅಂತರಗಳನ್ನು ಸೃಷ್ಟಿಸಿದ ವ್ಯವಸ್ಥೆಯ ಬಗೆಗಿನ ವಾಸ್ತವ ಚಿತ್ರ ಹಾಗೂ ಆಕ್ರೋಶವನ್ನು ಈ ಕೆಳಗಿನ ಸಾಲುಗಳು ಸ್ಪಷ್ಟಪಡಿಸುತ್ತವೆ.

ಮೆಲ್ಲ ಮೆಲ್ಲಗೆ ಬೆಳಕು ಕರಿಯ ಬಣ್ಣವ ತಾಳಿ ಬೈಗಿನಂತಾಗಿ
ಕಪ್ಪಾಯ್ತು! ಮಸಗಿದುದು ಭಾರತಿಯ, ಹಬ್ಬಿದುದು ಮೌಢ್ಯಾಂಧಕಾರ!
ಪರಮ ಋಷಿಗಳ ವಿದ್ಯೆ ಜೀವಕಾಂತಿಯನುಳಿದು ಸತ್ತ ಹೆಣವಾಗಿ
ಕೊಳೆತು ನಾರಿತು ಬರಿಯ ಯಜ್ಞಯಾಗಗಳಾಗಿ ಸತ್ಯಮಂ ನೀಗಿ !
ಬಾಡಿದವು ಭಾರತಿಯ ಮುಡಿಯಲಿ ಹೂವುಗಳು, ಮೇಣವಳ ಮೊಗವು
ತೇಜಮಂ ನೀಗಿದುದು ಕಳೆಗೆಟ್ಟು ಶೋಕದಲಿ ಹಾಳಾಗೆ ಸೊಗವು ;
ಮುಡಿಯ ಮುತ್ತುಗಳುದುರಿ, ತಲೆದೊಡವು ಬರಿದಾಯ್ತು ಕೇಶಗಳು ಕೆದರಿ.
ವಿಧವೆಯಾದಳು ಹಣೆಯ ಬಟ್ಟುದುರಿ, ಬಳೆಯೊಡೆದು ಮಾಂಗಲ್ಯವದುರಿ!
ನಡುಗಿದಳು ಮುಡಿಯಿಂದಲಡಿಯವರೆಗೆ, ಗೋಳಿಟ್ಟು ಕಣ್ಣೀರ ಕರೆದು
ಯುಗ ಯುಗದೊಳವತರಿಪ ಪರಮಾತ್ಮನಿಗೆ ನಿನ್ನ ಕೀಳ್ಗತಿಯನೊರೆದು![೨೪]

ಮಹಾಸಂತರು ಕಾಲಕಾಲಕ್ಕೆ ಬೋಧಿಸಿದ ತತ್ತ್ವಗಳನ್ನು ಪುರೋಹಿತಶಾಹಿ ವ್ಯವಸ್ಥೆ ನಿರಂತರವಾಗಿ ಅನರ್ಥಗಳಿಗೆ ಈಡುಮಾಡಿದ ಸಂಗತಿಗಳು ಮಹಾದರ್ಶನದ ಉದ್ದಕ್ಕೂ ಎದುರಾಗುತ್ತವೆ. ಬುದ್ಧ, ಬಸವಾದಿಗಳ ಬೋಧನೆಗಳನ್ನು, ಅವರು ಹೊತ್ತಿಸಿದ ಮಹಾಜ್ಯೋತಿಗಳನ್ನು ಆ ವ್ಯವಸ್ಥೆ ನಿರಂತರವಾಗಿ ನಂದಿಸಿ, ಸಾಮಾನ್ಯರಲ್ಲಿ ಮೌಢ್ಯಾಂಧಕಾರವನ್ನು ಬಿತ್ತಿದ್ದರಿಂದ ಎದುರಾದ ಪರಿಸ್ಥಿತಿಗಳು ಪರಕೀಯರಿಗೆ ನಿರಂತರವಾಗಿ ಅನುಕೂಲವಾಗಿ ಪರಿಣಮಿಸಿದ ವಾಸ್ತವ ಚಿತ್ರಗಳು ಇಲ್ಲಿ ಮೈ ಪಡೆಯುತ್ತವೆ. ಭಾರತೀಯ ಸಂಪತ್ತಿಗೆ ಆಶಿಸಿ ನಡೆಸಿದ ಮುಸ್ಲಮಾನರ ದಾಳಿಗಳಿಂದ ಎದುರಾದ ವೇದನೆ, ಹಾಗೆಯೇ ಹೊಸ ಸಂಸ್ಕೃತಿಯೊಂದರ ಸಂಪರ್ಕದಿಂದ ಸಾಂಸ್ಕೃತಿಕ ಬದುಕಿನಲ್ಲಿ ಉಂಟಾದ ಸಂಭ್ರಮಗಳು ಈ ಕೃತಿಯಲ್ಲಿ ದಾಖಲಾಗುತ್ತವೆ. ಸನಾತನ ಭಾರತದ ಮಾನವೀಯ ದರ್ಶನಗಳು ಒಣ ವೇದಾಂತಿಗಳ ಕೈಗೆ ಸಿಕ್ಕಿ ನುಗ್ಗಿನುರಿಯಾದುದರ ಬಗೆಗಿನ ಮರುಕವೂ ಇಲ್ಲಿದೆ.

ವಿಶಾಲವಾದ ಪಡುಗಡಲ ಅಲೆಗಳ ಮೇಲೆ ರಣಹದ್ದುಗಳಂತೆ, ಸುಖದ ಹಿಂದೆಯೇ ಬರುವ ದು:ಖದಂತೆ, ಬೆಳಗನ್ನು ಮುದ್ದಿಡಲೈತರುವ ಘೋರಾಂಧಕಾರದಂತೆ, ಪರಕೀಯರು ಭಾರತಕ್ಕೆ ಬರುತ್ತಾರೆಂಬ ಚಿತ್ರಗಳೂ ಈ ದರ್ಶನದಲ್ಲಿ ಎದುರಾಗುತ್ತವೆ. ಬ್ರಿಟಿಷರ ಆಗಮನ ಭಾರತೀಯ ಸಂಸ್ಕೃತಿಗೆ ಕೇವಲ ಘೋರಾಂಧಕಾರವನ್ನು

ತರುವುದಾಗಿರದೆ, ಸೌಭಾಗ್ಯ, ದೌರ್ಭಾಗ್ಯಗಳೆರಡೂ ಮೈಗೊಂಡು ಬಂದಂತಾಯಿತೆಂಬ ಆಶಯವೂ ಈ ದರ್ಶನದಲ್ಲಿ ಕಾಣುತ್ತದೆ. ಈ ಕೆಳಗಿನ ಸಾಲುಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಆಗಮನದ ಚಿತ್ರಗಳು ಕಂಡುಬರುತ್ತವೆ.

ಭಾರತಿಯ ಸೌಭಾಗ್ಯ ದೌರ್ಭಾಗ್ಯವೆರಡು ಮೈಗೊಂಡಿಳಿಯುವಂತೆ,
ಹೋಟ್ಟೆಗಿಲ್ಲದ ಹಸಿದ ತೋಳಗಳು ಹಿಂಡುಗಟ್ಟುತ ನುಗ್ಗುವಂತೆ,
ಪರರ ಚಿನ್ನವ ಕಂಡು ಕದಿಯಲೆಂದೈ ತರುವಧಮ ಲೋಭಿಯಂತೆ,
ಗಂಭೀರ ಗಮನದಲ್ಲಿ ಬಂದುವಾ ಪಾಶ್ಚಾತ್ಯ ನಾವೆಗಳ ಮಾಲೆ
ಮುತ್ತಿದವು ಪಡುಗಡಲ ಕರೆಯ, ಕಂಪಿಸುವಂತೆ ಕಲ್ಲಿಡಿದ ಮೇಲೆ!
ಬೇಹಾರನೆವದಿಂದ ಮೆಲ್ಲನೈ ತಂದು ಕೆಂಜಿರುವೆಗಳ ತೆರದಿ
ಮುತ್ತಿದರು ಭಾರತಿ. ಸಿರಿಮೈಯ್ಯ ಮಂಗಳದ ನೆತ್ತರವ ಹೀರಿ;
- - - - - - - - - - - - - - - - - - - - - - - - - - - -
ಭಾರತಾಂಬೆಯು ಬಳಲಿ ಹರಿಯುತಿರೆ ದೇಹವನು ನರಕದುರಿನಾಯಿ ;
ವ್ಯಾಪಾರಕ್ಕೆ ತಂದ ಪುಣ್ಯಾತ್ಮರಾದರೆಮಗಾಳರಸರಾಗಿ
ನಮ್ಮ ಮನೆಯೊಳಗಾವು ಸೆರೆಯೊದೆವವರ ಕೈ ಕೆಲಸದವರಾಗಿ !
ಬಿತ್ತರಿಸಿ ಕಟ್ಟಿದರು ರಾಜ್ಯವನು, ನಮ್ಮ ಜನಿವಾರದಲಿ ಬಿಗಿದು
*　*　*　*　*
ರಾಜಿಸಿತು ಕ್ರೈಸ್ತ ಚಕ್ರಾಧಿಪತ್ಯವು ಭಾರತಿಯ ಎದೆಯ ಮೇಲೆ !
ಕಡಲರಾಣಿಯ ಬಿಳಿಯ ಕೇತನವು ಕೆಂಪಾಗಿ ಮತ್ತೆ ಕಪ್ಪಾಗಿ
ಭರತಮಾತೆಯ ನೆತ್ತಿಯನು ಹತ್ತಿತೌದಾರ್ಯಶೀಲಗಳ ನೀಗಿ.[೨೫]

ಈ ಮೇಲಿನ ಕಾವ್ಯಭಾಗದಲ್ಲಿ ವಸಾಹತು ಸಂಸ್ಕೃತಿಯ ಆಗಮನದಿಂದ ನಿರ್ಮಾಣವಾದ ಭಾರತೀಯ ಬದುಕಿನ ವಾಸ್ತವ ಚಿತ್ರಗಳು, ಅದರ ಪರಿಣಾಮಗಳು, ವ್ಯಾಪಾರಕ್ಕೆಂದು ಬಂದ ಪುಣ್ಯಾತ್ಮರು ನಮ್ಮ ಮನೆಯೊಳಗೇ ನಮ್ಮನ್ನು ದಾಸರನ್ನಾಗಿ ಮಾಡಿದ, ರಾಜ್ಯವನ್ನು ವಿಸ್ತರಿಸಿದ ತಂತ್ರಗಳು ಇಲ್ಲಿವೆ. 'ನಮ್ಮ ಜನಿವಾರದಲಿ ಬಿಗಿದು ನಮ್ಮ ಕಟ್ಟಿದರೆಮ್ಮ ಕೈ ಹಿಡಿದು ಬಾಯಿಗಳ ಮುಚ್ಚಿದರು ಮುಂದೆ ಮಾರ್ನುಡಿಯದಂತೆ' ಈ ಉಪಮೆ ಪುರೋಹಿತ ವ್ಯವಸ್ಥೆಯಿಂದುಂಟಾದ ಪರಿಸರ ಬ್ರಿಟಿಷರಿಗೆ ತಮ್ಮ ನೆಲೆಯೂರಲು ಅನುಕೂಲವಾದ ಬಗೆಯನ್ನು ಮಾರ್ಮಿಕವಾಗಿ ಧ್ವನಿಸುತ್ತದೆ. ಒಂದು ಸಂಸ್ಕೃತಿಯ ಔದಾರ್ಯಶೀಲಗಳನ್ನು ಲೆಕ್ಕಿಸದೆ ನಡೆಸಿದ ಆಕ್ರಮಣದ ಚಿತ್ರವೂ ಇಲ್ಲಿದೆ. ಅಂತೆಯೇ ಪಾಶ್ಚಾತ್ಯ ಸಂಸ್ಕೃತಿಯ ಹೊಸ ವಿಚಾರಧಾರೆಗಳಿಂದ ಬಯಲಾದ ಕಳೆಗೆಟ್ಟ ಭಾರತೀಯ ಪೂರ್ವಾಚಾರದ ಕುತಂತ್ರಗಳು ಇಲ್ಲಿ ಚಿತ್ರಿತವಾಗಿದೆ. ಈ ಸಂಸ್ಕೃತಿ ಹೊತ್ತು ತಂದ ವಿಜ್ಞಾನ, ಸಾಹಿತ್ಯ, ಶಾಸ್ತ್ರಗಳು ಇಲ್ಲಿನ ಜನತೆಯ ಹೃದಯಗಳನ್ನು ಸೂರೆಗೈದು, ಜ್ಞಾನಜ್ಯೋತಿಯನ್ನು ಎಚ್ಚರಿಸುವಲ್ಲಿ ಸಹಕಾರಿಯಾದುವು. ಹೊಸ ಸಂಸ್ಕೃತಿಯ ಸಂಪರ್ಕದಿಂದ ದತ್ತವಾದ ವಿಜ್ಞಾನ, ಸಾಹಿತ್ಯ, ಶಾಸ್ತ್ರಗಳು ಹುಟ್ಟು ಹಾಕಿದ ವಿಚಾರಧಾರೆಗೆ ಭಾರತೀಯ ಸಂವೇದನೆ ಸಹಜವಾಗಿಯೆ ಆಕರ್ಷಣೆಗೆ ಒಳಗಾಯಿತು. ಅಂಥ ಸಂಸ್ಕೃತಿಯ ವಿಚಾರಧಾರೆಯನ್ನು ಕುರುಡು ಅನುಕರಣೆ ಮಾಡಿದುದರ ಬಗೆಯನ್ನು ಇಲ್ಲಿ ವಿಡಂಬಿಸಲಾಗಿದೆ. ಈ ಕೆಳಗಿನ ಸಾಲುಗಳಲ್ಲಿ ಅಂಥ ಮಾರ್ಮಿಕತೆ ಪ್ರಕಟಗೊಂಡಿದೆ.

ಪಾಶ್ಚಾತ್ಯ ವಿಜ್ಞಾನ ಸಾಹಿತ್ಯ ಶಾಸ್ತ್ರಗಳು ನುಗ್ಗಿದವು ಬಂದು
ಸೆರೆಗೈದವೆಮ್ಮವರ ಹೃದಯಗಳ, ನುಂಗಿದುವು, ನೆಲೆಯಾಗಿ ನಿಂದು;
ಅವರ ತಾಳಕೆ ನಾವು ನರ್ತನವ ಮಾಡಿದೆವು ನಮ್ಮದನು ಮರೆತು
ಅವರ ಸೊಗಸಿಗೆ ನಾವು ವೇಷಗಳ ಧರಿಸಿದೆವು ನಾಟ್ಯನಟರಂತೆ,
ಅವರಿತ್ತ ವಿಷಗಳನು ಹಾಲೆಂದು ನುಂಗಿದೆವು ಬಾಯ್ದೆರೆದು ತೆರೆದು
ಅವರ ಗುಣಗಳ ತೊರೆದು, ಹೀರಿದೆವು ದುರ್ಗುಣಗಳೆಲ್ಲವನು ಕರೆದು
ಭಾರತಾಂಬೆಗೆ ಕೆಲವರಾಂಗ್ಲೇಯರುಡಿಗೆಯಂ ತೊಡಿಸಲೆಸಗಿದರು
ಕೆಲವರಾಕೆಯು ಹಳೆಯ ಮುದುಕಿಯೆಂದವಳ ಜೀವವ ಹಿಂಡಿಕೊಂದು
ಪಡುಗಡಲಿನಾಚೆಯಿಂದಿನ್ನೊಂದು ಜೀವಮಂ ವಿಕ್ರಯಿಸಿತಂದು,
ತುಂಬಲೆಂದಳಸಿದರು. ಮತ್ತೆ ಕೆಲವರು ಹಳೆಯದೆಲ್ಲವದು ನಾಕ
ಹೊಸತೆಲ್ಲವದು ನರಕವೆಂದೆನುತಲಪ್ಪಿದರು ಗಾಢತರವಾಗಿ
ನೀತಿಯಿಲ್ಲದ ಜಾತಿ ಪದ್ಧತಿಯ, ಹೊಸಬೆಳಕು ಮ್ಲೇಚ್ಛವೆಂದೆನುತ ;
ಹಿಮಕರನ ಕಾಂತಿಯಂ ಸಹಿಸಲಾರದ ಕುರುಡುಗೂಬೆಗಳ ತೆರದಿ![೨೬]

ಈ ಮೇಲಿನ ಉದ್ಧರಣೆಯಲ್ಲಿ ಹೊಸ ಸಂಸ್ಕೃತಿಯೊಂದರ ಆಗಮನದಿಂದ ಎದುರಾದ ಸಂಕೀರ್ಣಾವಸ್ಥೆಯ ಸಾಮಾಜಿಕ ಚಿತ್ರ ಪ್ರಕಟವಾಗುತ್ತದೆ. ಪರಕೀಯ ಹಾಗೂ ದೇಶೀಯ ಸಂಸ್ಕೃತಿಗಳ ಆಕರ್ಷಣೆ-ವಿಕರ್ಷಣೆಗಳ, ಆದರ -ತಿರಸ್ಕಾರಗಳ ಬಗೆಗಿನ ಗೊಂದಲಗಳು ಕಾಣಿಸುತ್ತವೆ. ಪಾಶ್ಚಾತ್ಯರ ಕುರುಡು ಅನುಕರಣೆಯಿಂದ ಆಕರ್ಷಿತವಾದ ಜನತೆ ಭಾರತೀಯ ಸನಾತನ ಮಾನವೀಯ ಮೌಲ್ಯಗಳ ಬಗೆಗೆ ತೋರಿದ ನಿರ್ಲಕ್ಷ್ಯ ಹಾಗೂ ತಿರಸ್ಕಾರಗಳನ್ನು ಕುರಿತ ವಿಮರ್ಶೆ, ಅಂಥ ಮನಸ್ಥಿತಿಯಿಂದ ಭಾರತೀಯ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಪರಿಸರಕ್ಕೆ ಎದುರಾದ ವಿಷಮಾವಸ್ಥೆಯ ಬಗೆಗಿನ ಮರುಕ 'ಮಹಾದರ್ಶನ'ದ ಚಿತ್ರವಾಗಿ ಮೂಡುತ್ತದೆ. ವೈದಿಕ ವ್ಯವಸ್ಥೆ ಹುಟ್ಟು ಹಾಕಿದ ವರ್ಣಾವಸ್ಥೆಯ ಪರಿಣಾಮಗಳು, ಹಿಂದು-ಮುಸ್ಲಿಮರ ದ್ವೇಷಾಸೂಯೆಗಳು ಭಾರತೀಯ ಸಂಸ್ಕೃತಿಯ ಧಾರ್ಮಿಕ ಹಾಗೂ ಸಾಮಾಜಿಕ ಬದುಕಿನ ಒಡಕುಗಳಿಗೆ ಎಡೆಗೊಟ್ಟವು. ಇಂಥ ಸನ್ನಿವೇಶವನ್ನು ಮನಗಂಡ ಕ್ರೈಸ್ತ ಪ್ರಾದಿಗಳು ಹಿಂದೂ ಧರ್ಮದ ಲೋಪ-ದೋಷಗಳನ್ನು ಪ್ರಸಾರ ಮಾಡುವುದರೊಂದಿಗೆ, ಮತಾಂತರಕ್ಕೆ ಕೈ ಹಾಕಿದರು. ವಸಾಹತುಶಾಹಿ ವ್ಯವಸ್ಥೆ ಮುಖಾಮುಖಿಯಾಗಿಸಿದ ಈ ಬಗೆಯ ನೆಲೆಗಳಿಂದ ಭಾರತೀಯ ಮನಸ್ಸುಗಳ ದುರಾವಸ್ಥೆಗಳ ಹಾಗೂ ಅಂಥ ಗೊಂದಲಗಳಿಂದ ಒದಗಿ ಬಂದ ದುರ್ಗತಿಗಳ ಬಗೆಗಿನ ವಿಷಾದವು ಇಲ್ಲಿದೆ. ಇದೇ ಸಂದರ್ಭದಲ್ಲಿ ಭಾರತದಲ್ಲಿ ತಲೆದೋರಿದ ಭೀಕರ ಬರಗಾಲಗಳು, ಅವುಗಳಿಂದ ಎದುರಾದ ಹಸಿವು, ಬಡತನ, ಪ್ಲೇಗು ಮೊದಲಾದ ರೋಗರುಜಿನಗಳು ಇಡೀ ಭಾರತವನ್ನು ಮಸಣದ ವಾತಾವರಣಕ್ಕೆ ಗುರಿಯಾಗಿಸಿದವು. ಅಂದರೆ, ಇದರಿಂದ ಇಡೀ ಭಾರತ ಸೈತಾನರ ನರಕದಂತೆ ಮಾರ್ಪಟ್ಟಿತು.

ಭಾರತದ ಈ ಸ್ಥಿತಿಯನ್ನು ಕಂಡು ಕೈಲಾಸ-ವೈಕುಂಠಗಳಲ್ಲಿ ದೇವದೇವತೆಗಳೂ ಗಂಧರ್ವಕಿಂಪುರುಷ ಕಿನ್ನರರೂ ಒಂದಾಗಿ, ತಮ್ಮೆಲ್ಲ ಸುಖಗಳನ್ನು ಮರೆತು, 'ಭಾರತಿ'ಯನ್ನು ದುರಾವಸ್ಥೆಯಿಂದ ಮೇಲೆತ್ತಬೇಕೆಂಬ ಅಭೀಪ್ಸೆಗಳೂ

ಘೋಷಣೆಗಳೂ ಏಕವಾಗಿ ಮೊಳಗಲು, ಪರಮಹಂಸರು ನೆಲದಲ್ಲಿ ಅವತಾರಪುರುಷರಾಗಿ ಮೈವೆತ್ತರು. ಮಾನವೀಯ ಮೌಲ್ಯಗಳಿಗೆ ಅಂಟಿದ ಕಳಂಕಗಳನ್ನು ದೂರಮಾಡಿ, ಶಾಶ್ವತವಾದ ಸರ್ವಧರ್ಮಸಮನ್ವಯ ತತ್ತ್ವಗಳನ್ನು ಜನತೆಗೆ ಬೋಧಿಸಲು ಅವತಾರವೆತ್ತಿದ ಪರಮಹಂಸರ ಹಾಗೂ ವಿವೇಕಾನಂದರ ಚಿತ್ರಗಳು 'ಮಹಾದರ್ಶನ'ದ ಬಹುಮುಖ್ಯ ಆಯಾಮಗಳಾಗಿ ಮೈ ಪಡೆಯುತ್ತವೆ.

ಅವತಾರಪುರುಷ ಪರಮಹಂಸರು ಬಡತನದಲ್ಲಿ ಹುಟ್ಟಿ, ಯಾವ ಶಕ್ತಿ ಸಾಮರ್ಥ್ಯಗಳ ಪ್ರಭಾವವೂ ಇಲ್ಲದೆ ಪುರೋಹಿತಶಾಹಿ ಹುಟ್ಟುಹಾಕಿದ ಮತೀಯ ಮೌಢ್ಯತೆಗಳಿಗೆ ಜ್ಞಾನದ ಬೆಳಕನ್ನು ಬೋಧಿಸುವುದರ ಮುಖೇನ ಭಾರತಿಯ ದೀನದಲಿತರ ಉದ್ಧಾರಕ್ಕೆ , ಅವರ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಿದರು. ಅಲ್ಲದೆ, ವಿವೇಕಾನಂದರಂಥ ಸಿದ್ಧಿಪುರುಷರನ್ನು ಭಾರತಕ್ಕೆ ಕೊಡುಗೆಯಾಗಿ ನೀಡಿದರು. ಸರ್ವಧರ್ಮಸಮನ್ವಯದ ತತ್ತ್ವಗಳನ್ನು ಜಗಕೆಲ್ಲ ಸಾರಿ, ಭಾರತಾಂಬೆಗೆ ಒದಗಿದ ದುಃಖವನ್ನು ಪರಿಹರಿಸಿ ಉದ್ಧರಿಸಬೇಕೆಂಬ ಜವಾಬ್ದಾರಿಯನ್ನು ವಿವೇಕಾನಂದರಿಗೆ ವಹಿಸುವ ಚಿತ್ರದೊಂದಿಗೆ 'ಮಹಾದರ್ಶನ'ದ ಚಿತ್ರಪಟಲವು ಹಿಂದೆಸರಿಯುತ್ತದೆ. ಈ ಚಿತ್ರಪಟಲವನ್ನು ಪೀಠಿಕೆಯಲ್ಲಿನ ಶ್ರೀ ದೇ. ಜವರೇಗೌಡರ ಕೆಳಗಿನ ಮಾತುಗಳು ಇನ್ನೂ ಸ್ಪಷ್ಟಗೊಳಿಸುತ್ತವೆ.

> ಖಡ್ಗದಿಂದಲೇ ಅಧರ್ಮವನ್ನೆದುರಿಸಬೇಕಾಗಿಲ್ಲ, ಪ್ರೇಮದಿಂದಲೂ ಅದನ್ನು ನಿವಾರಿಸಬಹುದೆಂಬ ಪರಮಸತ್ಯದ ಪ್ರತಿಪಾದನೆಯಿಲ್ಲಿದೆ. ಎಲ್ಲ ಅವತಾರಗಳನ್ನೊಳಗೊಂಡ, ಎಲ್ಲ ಧರ್ಮಗಳ ಸಾರವೇ ಸಾಕಾರಗೊಂಡಂತಿದ್ದ ಪರಮಾವತಾರವನ್ನೂ ಪ್ರೇಮಾವತಾರವನ್ನೂ ಕವಿ ಪರಮಹಂಸರಲ್ಲಿ ಕಾಣುತ್ತಾರೆ. ಶ್ರೀ ರಾಮಕೃಷ್ಣರೊಡನೆ ಯಕ್ಷ ಗರುಡ ಸಿದ್ಧಕಿಂಪುರುಷಾದಿ ದೇವತೆಗಳೆಲ್ಲ ಉದಯಿಸಿದರೆಂಬ ಸುಳುಹೂ ಈ ಕೃತಿಯಲ್ಲಿ ಮೊಗದೋರುತ್ತದೆ. ಮೇಲಾಗಿ ನರನಾರಾಯಣರೇ ವಿವೇಕಾನಂದ ಪರಮಹಂಸರಾಗಿ ಜನಿಸಿದರೆಂಬ ಭಾವನೆಯೂ ಇಲ್ಲಿ ಸ್ಪಷ್ಟವಾಗಿ ಮೈದೋರಿದೆ. ಮುಸ್ಲಿಮಾಂಗ್ಲರು ಭಾರತಾಂಬೆಯ ದತ್ತುಪುತ್ರರೆಂಬ, ಹಾಗೂ ಭಾರತೀಯ ಸಂಸ್ಕೃತಿಯ ಒಡಲಿನಲ್ಲಿ ಅವೆರಡೂ ಸಂಸ್ಕೃತಿಗಳು ವಿಲಯನ ಹೊಂದಿವೆಯೆಂಬ ಭಾವುಕಾಭಿಪ್ರಾಯವೂ ಇಲ್ಲಿ ಅಭಿವ್ಯಕ್ತಗೊಂಡಿದೆ.[೨೭]

ಒಟ್ಟಾರೆ, ಈ ಕವಿತೆಯ ದರ್ಶನಗಳಲ್ಲಿ ಆಕ್ರಮಣಶೀಲ ಸಂಸ್ಕೃತಿಗಳು ಎಸಗುವ ಸ್ವಾರ್ಥ ಪರಂಪರೆಗಳ ಅನರ್ಥಗಳನ್ನು ಅವುಗಳಿಂದ ಒಂದು ಸಂಸ್ಕೃತಿಗೆ ಒದಗುವ ದುರ್ಗತಿಗಳನ್ನು ಕಾಣುತ್ತೇವೆ. ಅಂಥ ದುರ್ಗತಿಗಳಿಂದ ಲೋಕದಲ್ಲಿ ತಲೆದೋರುವ ಅನರ್ಥಗಳನ್ನು ತಿಳಿಹೇಳಿ, ಉದ್ಧಾರ ಮಾಡಲು ಅವತಾರ ಪುರುಷರು ಹುಟ್ಟುತ್ತಲೇ ಇರುತ್ತಾರೆ. ಹಾಗಿದ್ದರೂ, ಅವತಾರ ಪುರುಷರು ಹೊತ್ತಿಸುವ ಜ್ಞಾನಜ್ಯೋತಿಗಳನ್ನು ನಂದಿಸಿ, ಮೌಢ್ಯತೆಗಳನ್ನು ಬಿತ್ತುವ ಪುರೋಹಿತರು ನಿರಂತರವಾಗಿ ತಮ್ಮ ಕುಕೃತ್ಯಗಳನ್ನು ಎಸಗುತ್ತಲೇ ಬಂದಿರುವ ವಾಸ್ತವ ಚಿತ್ರಗಳು ಇಲ್ಲಿವೆ. ಮತ್ತೆ ಮತ್ತೆ ಅಂಧಕಾರದ ಕೂಪಕ್ಕೆ ಬೀಳುತ್ತಿರುವ ಜನತೆಯನ್ನು ಮೇಲೆತ್ತಿ, ಕತ್ತಲನ್ನು ಬೆಳಗಿಸಿ, ಭಾರತಕ್ಕೆ ಒದಗಿದ ವಿಪತ್ತುಗಳನ್ನು ಶಾಶ್ವತವಾಗಿ ಪರಿಹರಿಸಲು ಪರಮಹಂಸರ - ವಿವೇಕಾನಂದರ ಅವತಾರ ಅನಿವಾರ್ಯವೆಂಬುದು ಈ ಕಾವ್ಯದ ಮುಖ್ಯ ಆಶಯವಾಗಿದೆ. 'ಗೋಮಟೇಶ್ವರ' ಕವಿತೆಯ ಶೋಧನೆಯಲ್ಲಿಯೂ ಇಂಥ ವಿಚಾರಧಾರೆ ಹರಿಯುವುದನ್ನು ಕಾಣುತ್ತೇವೆ.

ಭಾರತದ ಮಹಾದರ್ಶನವನ್ನು ಕಂಡ ಸಾಕ್ಷಿಪ್ರಜ್ಞೆ ಎಂಬಂತೆ ಗೊಮ್ಮಟೇಶ್ವರನನ್ನು ಅದೇ ಹೆಸರಿನ ಕವಿತೆಯಲ್ಲಿ ಚಿತ್ರಿಸಲಾಗಿದೆ. ಗೊಮ್ಮಟೇಶ್ವರನ ಶತಮಾನಗಳ ಮೌನ ಮತ್ತು ಅವನ ಮಂದಸ್ಮಿತವು ಏಕೆಂಬ ಪ್ರಶ್ನೆಗಳೊಂದಿಗೆ ಭಾರತಾಂಬೆಯ ಚಾರಿತ್ರಿಕ ಘಟನೆಗಳನ್ನು ಕವಿ ಸಂವೇದನೆ ಮುಂದು ಮಾಡುತ್ತದೆ. ಭೂಮಿ ಮತ್ತು ಆಕಾಶಗಳ ಮಧ್ಯೆ ನಡೆದ ನಿತ್ಯ ಸತ್ಯಗಳಿಗೆ ಸಾಕ್ಷಿಯಂತಿರುವ ಗೊಮ್ಮಟೇಶ್ವರನಿಗೆ, ಆತನ ಮಂದಹಾಸದ ಅರ್ಥಗಳೇನು? ಅಥವಾ ನೆಲದ ಬದುಕಿನ ಅವಿವೇಕವನ್ನು ಕಂಡ ಕರುಣೆಯ ಪರಿಹಾಸವೋ ಅವನ ನಗೆ? ಎಂಬ ಪ್ರಶ್ನಿಸುತ್ತಾರೆ. ಅಂಥ ಪ್ರಶ್ನೆಗಳೊಂದಿಗೆ, ಪರಕೀಯರ ಆಗಮನದಿಂದಾದ ತಲ್ಲಣಗಳಿಗೆ ಒಳಗಾದ ಸಂವೇದನೆಯು, ಆತನ ಶತಮಾನಗಳ ಅಚಲತೆಯಲ್ಲಿ ಸ್ವಲ್ಪವನ್ನಾದರೂ ನೀಡೆಂದು ಅವನನ್ನು ಪ್ರಾರ್ಥಿಸುತ್ತದೆ. ಚಕ್ರಾಧಿಪತ್ಯಗಳ ಮಾತ್ಸರ್ಯದಿಂದ ಸಾಮ್ರಾಜ್ಯಗಳು ಅವನತಿ ಹೊಂದಿ, ಶಾಂತಿಯ ವಾಣಿಗಳೆಲ್ಲ ಮರೆಯಾಗಿ ಲೋಕವೆಲ್ಲ ಕೋಲಾಹಲದಲ್ಲಿ ತುಂಬಿದ ಬಗೆಯನ್ನು ಮೌನದಿಂದ ವೀಕ್ಷಿಸುತ್ತಿರುವ ಗೊಮ್ಮಟವನ್ನು ನೀನಾರು ಮೌನಿವರ್ಯ? ಎಂಬ ಪ್ರಶ್ನೆಯನ್ನು ಕೇಳುವ ಮೂಲಕ ಚಾರಿತ್ರಿಕ ಸತ್ಯಗಳಿಗೆ ಕನ್ನಡಿ ಹಿಡಿಯಲಾಗಿದೆ.

ಭಾರತಿಗೆ ಪರಕೀಯರೆಸಗಿದನ್ಯಾಯಮಂ
  ಕಣ್ಣಾರ ಕಂಡ ನೀಂ ನಿತ್ಯಸಾಕ್ಷಿ
ಆಕೆಯಾಭರಣಮಂ ಮೋಸದಿಂ ಸುಲಿದುದಕೆ
  ಬ್ರಹ್ಮನಾಸ್ಥಾನದೊಳು ನೀನೆ ಸಾಕ್ಷಿ
ಬಲಗೈಯ ಖಡ್ಗದಿಂದೆಡಗೈ ಕೊರಾನಿನಿಂ
  ಭಾರತೀಯ ಪೀಡಿಸಿದ ಮುಸಲದಳಮಂ,
ಮೇಲೆ ಕ್ರಿಸ್ತನಿರಿಸಿಯೊಳಗೆ ಸೈತಾನಂ
  ಮರೆಮಾಡಿ ಹೇಮಾಭಿಲಾಷೆಯಿಂದ
ವಾರಿಧಿಯು ದಾಂಟಿ ಬೇಹಾರಕೈತಂದರಂ
ಕ್ರಿಸ್ತವೇಷವನಾಂತ ಸೈತಾನನಾಚರದಿಂ
ಭಾರತೀಯ ಪಣೆಯಿಂದ ಪದಕಿಳಿದ ಶೋಣಿತಮುಮಂ
ನೋಡಿರುವೆಯದರಿಂದ ಭಾರತಿಗೆ ನೀನೆ ಸಾಕ್ಷಿ![೨೮]

ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಖುರಾನನ್ನು ಹಿಡಿದು ಬಂದ ಮುಸ್ಲಿಮರು ಭಾರತಿಯನ್ನು ಶೋಷಿಸಿದ ಕಥೆಗೆ ಎಂತೊ, ಅಂತೆಯೇ ಕ್ರಿಸ್ತನನ್ನು ಮುಂದೆ ಮಾಡಿ, ಒಳಗೆ ಪೈಶಾಚಿಕ ಕೃತ್ಯಗಳಿಂದ ಈ ದೇಶದ ಸಂಪತ್ತೆಲ್ಲವನ್ನೂ ಕೊಳ್ಳೆ ಹೊಡೆದ ಭಾರತಾಂಬೆಯ ಎಲ್ಲ ಮಟ್ಟದ ಶೋಷಣೆಗಳನ್ನು ನೋಡಿರುವ ಗೊಮ್ಮಟನು ಇದಕ್ಕೆಲ್ಲ ಸಾಕ್ಷಿ. ಸಾಮ್ರಾಜ್ಯಶಾಹಿ ಸಂಸ್ಕೃತಿಗಳ ತಂತ್ರಗಾರಿಕೆಗಳು ಯಾವ ಬಗೆಯವೆಂಬುದನ್ನು ಮೇಲಿನ ಕವಿತೆಯ ಉದ್ಧರಣೆಯ ಸಾಲುಗಳು ಪ್ರಕಟಿಸುತ್ತವೆ.

ಈ ನೆಲದ ಬಗೆಗಿನ ಮೋಹ ಮತ್ತು ಧಾರ್ಮಿಕತೆಯ, ಯಾಂತ್ರಿಕ ಕ್ರಿಯಾಚರಣೆಗಳಿಗೆ ಬೇಸತ್ತು ವೈರಾಗ್ಯ ತಾಳಿ,

ತಪಸ್ಸಿಗೆ ತೊಡಗಿರುವ ಗೊಮ್ಮಟನು, ತನ್ನ ಭಕ್ತರ ಮಹಾಮಸ್ತಕಾಭಿಷೇಕದಂಥ ಕ್ರಿಯಾಚರಣೆಕಂಡು ಪರಿಹಾಸ್ಯದಿಂದ ನಗುತ್ತಿದ್ದೀಯೊ? ಎಂದು ಪ್ರಶ್ನಿಸುತ್ತಾರೆ. ಅಂಥ ಪ್ರಶ್ನೆ ಮೌಢ್ಯತೆಗೆ ತೋರಿದ ಪ್ರತಿಕ್ರಿಯೆಯಂತಿದೆ. ಎಲ್ಲ ಥರದ ಆಕ್ರಮಣ, ಶೋಷಣೆ, ವಂಚನೆಗಳನ್ನು ಕಣ್ಣಾರೆ ಕಂಡವನಾಗಿಯೂ ತಲ್ಲಣಗೊಳ್ಳದಿರುವ ತನ್ನ ದಿವ್ಯನಿರ್ಲಕ್ಷತೆಯನ್ನು ನಮಗೆಲ್ಲ ನೀಡೆಂದು ಕವಿ ಸಂವೇದನೆ ಪ್ರಾರ್ಥಿಸುತ್ತದೆ, ಸ್ವಾತಂತ್ರ್ಯ ಸಂಗ್ರಾಮದ ತಲ್ಲಣಗಳಿಗೆ ಅಗತ್ಯವಾದ ಮನಸ್ಥಿತಿಯೊಂದರ ಹುಡುಕಾಟದ ನೆಲೆಗಳನ್ನು ಈ ಕವಿತೆ ತೀವ್ರವಾಗಿ ಕಟ್ಟಿಕೊಡುತ್ತದೆ.

### ೧೦. ನಾಡು - ನುಡಿಗಳ ಚಿಂತನೆ

ನವೋದಯ ಸಾಹಿತ್ಯ ಸಂದರ್ಭದಲ್ಲಿ ನಾಡು-ನುಡಿಗಳ ಬಗೆಗಿನ ಚಿಂತನೆ ಕುವೆಂಪು ಕೃತಿಗಳಲ್ಲಿ ಮುಖ್ಯ ಧೋರಣೆಯಾಗಿ ಅಭಿವ್ಯಕ್ತಿಗೆ ಒಳಗಾಗಿದೆ. ಈ ಧೋರಣೆ ಅವರ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳಗಾಗಿ ಚಿಂತಿತವಾದ ಮುಖ್ಯ ನೆಲೆಗಳನ್ನು ಗುರುತಿಸಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ. ವ್ಯಕ್ತಿ ಹಾಗೂ ಒಂದು ಸಂಸ್ಕೃತಿಯ ಬೆಳವಣಿಗೆಯಲ್ಲಿ ಭಾಷೆ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆಂಬುದು ಕುವೆಂಪು ಅವರ ಅಚಲವಾದ ನಂಬಿಕೆ. ಅಂದರೆ ಭಾಷೆ, ಒಂದು ಸಂಸ್ಕೃತಿ, ಸಮುದಾಯದ ಸಮೃದ್ಧತೆಯ ಸಂಕೇತ. ಭಾಷೆಯೆಂಬುದು ಒಂದು ಸಮುದಾಯದ ಆಗುಹೋಗುಗಳನ್ನು ನಿರ್ಣಯಿಸುವ, ಪ್ರತಿನಿಧಿಸುವ ಶಕ್ತಿ. ಆಯಾಕಾಲದ ಸಂಸ್ಕೃತಿಯ ಅನನ್ಯತೆಗಳನ್ನು ಕಾಲದಿಂದ ಕಾಲಕ್ಕೆ ಕೊಂಡೊಯ್ಯುವ ವಾಹಕವಾಗಿಯೂ ತನ್ನ ಕಾರ್ಯ ನಿರ್ವಹಿಸುತ್ತದೆ. ಹಾಗೆಯೇ ಭಾಷೆ ಅತ್ಯಂತ ಪ್ರಬಲವಾದ ದ್ರವ್ಯ ಎಂಬುದು ಕುವೆಂಪು ಕಾವ್ಯದ ನಿಲುವು. ಭಾಷೆಯೆಂದರೆ ಕೇವಲ ಶಬ್ದಗಳಲ್ಲ, ಅಕ್ಷರಗಳ-ಪದಗಳ ಮಂದೆಯಲ್ಲ. ಅದು ಒಂದು ಜೀವಂತ ಸಮುದಾಯದ ಚೇತನ್ಯ. ಆ ಬದುಕಿನ ಅನನ್ಯತೆಗಳನ್ನು ಅಭಿವ್ಯಕ್ತಿಗೆ ಗುರಿಮಾಡಿ, ಸೃಷ್ಟಿಕ್ರಿಯೆಗೆ ಒಳಪಡಿಸುವ ಶಕ್ತಿ ಭಾಷೆಗಿರುತ್ತದೆ. ಮೊದಲೆ ಹೇಳಿದಂತೆ, ತನ್ನಲ್ಲಿ ಅಭಿವ್ಯಕ್ತಗೊಳ್ಳುವ 'ಸಾಹಿತ್ಯ' ಜನಜೀವನವನ್ನು ನಿರಂತರವಾಗಿ ಎಚ್ಚರಿಸುವ ತೂರ್ಯಧ್ವನಿಯಾಗಿ, ಜನತೆಯಲ್ಲಿ ಕ್ರಾಂತಿಯ ಕಿಡಿಗಳನ್ನು ಹೊತ್ತಿಸುವ ಅಸ್ತ್ರವಾಗಿ, ಜ್ಞಾನವನ್ನು ನೀಡುವ ದೀವಿಗೆಯಾಗಿ ಪಾತ್ರವಹಿಸುತ್ತದೆ. ಈ ಎಲ್ಲ ಶಕ್ತಿ ಭಾಷೆಗಿರುವುದರಿಂದಲೇ ಕುವೆಂಪು ಅವರಲ್ಲಿ ನುಡಿಯನ್ನು ಕುರಿತ ಜಿಜ್ಞಾಸೆ ಬಹುಮುಖ್ಯ ನೆಲೆಯಾಗಿ ಚಿಂತಿತವಾದಂತೆ ಕಾಣುತ್ತದೆ.

ಸಂಸ್ಕೃತ, ಇಂಗ್ಲಿಷ್ ಅಂಥ ಭಾಷೆಗಳು ದೇಶೀಯ ಭಾಷೆಗಳ ಮೇಲೆ ನಿರಂತರವಾಗಿ ನಡೆಸಿದ ಆಕ್ರಮಣಶೀಲ ನೆಲೆಗಳನ್ನೂ, ಅನ್ಯ ಭಾಷೆಗಳಿಂದ ದೇಶೀಯ ಭಾಷೆಗಳು ಪಡೆದುಕೊಂಡ ಅನನ್ಯತೆಗಳನ್ನೂ ಕುವೆಂಪು ಅವರ ನಾಡು -ನುಡಿಗಳ ಕುರಿತ ಕೃತಿಗಳಲ್ಲಿ ಜಿಜ್ಞಾಸೆಗೊಳಪಡಿಸಲಾಗಿದೆ. ಒಂದು ಭಾಷೆ ಮತ್ತೊಂದು ಭಾಷಾ ಸಮುದಾಯದ ಅನನ್ಯತೆಗಳನ್ನು ವೃದ್ಧಿಸುವಂತೆ ಮಾಡುವುದಾದರೆ ಅವರಲ್ಲಿ ಆ ಭಾಷೆಗೆ ಸ್ವಾಗತವಿದೆ. ಹಾಗೆಯೇ ಪರಭಾಷೆ ಒಂದು ಸಂಸ್ಕೃತಿಯ ಚೈತನ್ಯಗಳನ್ನು ಉಡುಗಿಸುವ ಪ್ರತಿಗಾಮಿ ಶಕ್ತಿಯಾಗುವುದಾದರೆ ತ್ರಿಕರಣ ಪೂರಕವಾಗಿ ತಮ್ಮ ಪ್ರತಿರೋಧವನ್ನು ಒಡ್ಡುತ್ತಾರೆ. ಈ ಮಾದರಿಯ ಚಿಂತನೆಯಧಾರೆ ಅವರ ಕಾವ್ಯ, ಕಾದಂಬರಿ, ಗದ್ಯ, ವಿಮರ್ಶೆಗಳಲ್ಲಿ ಪ್ರಖರವಾಗಿ ಮೈ ಪಡೆಯುತ್ತದೆ.

ಭಾಷೆಯ ಬಗೆಗಿನ ಒಲವು ಮತ್ತು ಪ್ರತಿರೋಧದ ನೆಲೆಗಳನ್ನು ಕುರಿತು ಕುವೆಂಪು ಸಾಹಿತ್ಯ ನಿರಂತರವಾಗಿ ಪ್ರತಿಕ್ರಿಯಿಸುತ್ತಬಂದಿದೆ. ಈ ಕುರಿತ ಜಿಜ್ಞಾಸೆ ಕನ್ನಡ ಸಾಹಿತ್ಯದಲ್ಲಿ ನಡೆದಿರುವುದನ್ನು ಕನ್ನಡ ವಿಮರ್ಶೆ ಸ್ವಲ್ಪಮಟ್ಟಿಗೆ ಗುರುತಿಸಿದೆ. ನಾಡು-ನುಡಿಗಳ ಚಿಂತನೆಗಳಲ್ಲಿ ವ್ಯಕ್ತವಾಗುವ ದ್ವಂದ್ವಗಳನ್ನು ಕನ್ನಡ ವಿಮರ್ಶೆ ವಿಶ್ಲೇಷಣೆಗೆ ಗುರಿಪಡಿಸಿರುವುದನ್ನು ಕಾಣುತ್ತೇವೆ. ಆದರೆ, ಕುವೆಂಪು ಅವರ ಸಾಹಿತ್ಯ ಅಂಥ ದ್ವಂದ್ವಗಳಿಗೆ ಪರಿಹಾರಾರ್ಥವಾಗಿ ಆಕರ ಸಾಮಾಗ್ರಿಯನ್ನು ಒದಗಿಸುತ್ತದೆ. ಆಳವಾದ ಅಧ್ಯಯನದಿಂದ ಈ ಬಗೆಯ ದ್ವಂದ್ವಗಳನ್ನು ಸ್ಪಷ್ಟಪಡಿಸಿಕೊಳ್ಳಲು ಸಾಧ್ಯವಿದೆ. ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಬಗೆಗೆ ಕುವೆಂಪು ಅವರು ತೋರುವ ಒಲವು ಮತ್ತು ವಿರೋಧಗಳು ಅತ್ಯಂತ ಪ್ರಜ್ಞಾಪೂರ್ವಕವಾದುವು. ಆ ಭಾಷೆಗಳಿಂದ ಒದಗಿ ಬರುವ ಜ್ಞಾನದಾಹಕ್ಕೆ ಮೈದೆರೆಯುವ ಕುವೆಂಪು ಅವರ ಸಂವೇದನೆ, ಅದೇ ಭಾಷೆಗಳು ತಮ್ಮ ಭಾಷೆಯ ಮೇಲೆ ಯಾಜಮಾನ್ಯವನ್ನು ಸ್ಥಾಪಿಸಲು ಎದುರಾದಾಗ ಪ್ರಜ್ಞಾಪೂರ್ವಕವಾಗಿಯೇ ಪ್ರತಿರೋಧವನ್ನೊಡ್ಡುತ್ತಾರೆ. ಇಂಥ ಪ್ರತಿಕ್ರಿಯೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಮನಶಾಸ್ತ್ರೀಯ ನೆಲೆಗಳಲ್ಲಿ ಅಭಿವ್ಯಕ್ತಗೊಳ್ಳುವುದು ಗಮನಾರ್ಹವಾದುದು. ಪರಕೀಯ ಭಾಷೆಗಳ ಬಗೆಗಿನ ಗೊಂದಲಗಳು ಗಾಂಧೀಜಿಯವರ 'ಹಿಂದ್‌ಸ್ವರಾಜ್' ಕೃತಿಯಲ್ಲಿ ಮೊದಲು ಬಹುಮುಖ್ಯ ಆಯಾಮವಾಗಿ ಚಿಂತಿತವಾಗುತ್ತದೆ. ಅವರ ಈ ಕೃತಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಕುರಿತು ಮುಖಾಮುಖಿಯಾಗಿಸುವ ವಾಗ್ವಾದಗಳು ಅಂದಿನಿಂದ ಇಂದಿನವರೆಗೂ ಪ್ರಜ್ಞಾವಂತರನ್ನು ಒಂದಲ್ಲ ಒಂದು ರೀತಿಯಲ್ಲಿ ಚಿಂತನೆಗೆ ಎಡೆಮಾಡಿಗೊಟ್ಟಿವೆ. 'ಹಿಂದ್ ಸ್ವರಾಜ್'ದ ಚಿಂತನೆಯನ್ನು ಇಲ್ಲಿ ಉದ್ಧರಿಸುವುದರೊಂದಿಗೆ ಇಂಥ ಸಮಸ್ಯೆಗಳ ಹಿಂದಿರುವ ತಾತ್ತ್ವಿಕತೆಯನ್ನು ಕಂಡುಕೊಳ್ಳಬಹುದು.

> ಓದುಗ : ಸ್ವರಾಜ್ಯ ಪ್ರಾಪ್ತಿಗೆ ಇಂಗ್ಲಿಷ್ ಶಿಕ್ಷಣ ಅಗತ್ಯವಿಲ್ಲ ಎಂದು ನಿಮ್ಮ ಅಭಿಪ್ರಾಯವೆ? ಸಂಪಾದಕ : ಹೌದು-ಅಲ್ಲ-ಎರಡೂ ಉತ್ತರ ನನ್ನದು. ಕೋಟಿಗಟ್ಟಲೆ ಜನರಿಗೆ ಇಂಗ್ಲಿಷು ಕಲಿಸುವುದು ಅವರನ್ನು ಗುಲಾಮರಾಗಿ ಮಾಡಿದಂತೆ. ಮೆಕಾಲೇ ಹಾಕಿದ ಶಿಕ್ಷಣದ ತಳಹದಿ ನಮ್ಮನ್ನು ಗುಲಾಮಗಿರಿಗೆ ನೂಕಿದೆ..... ಸ್ವರಾಜ್ಯವನ್ನು ಕುರಿತು ನಾವು ಪರಭಾಷೆಯಲ್ಲಿ ಮಾತನಾಡಬೇಕಾಗಿದೆ. ಇದೇ ಸಾಲದೆ ನಮ್ಮ ದುರ್ದೆಶೆಗೆ ಸಾಕ್ಷಿ? ..... ಈ ಇಂಗ್ಲಿಷ್ ಶಿಕ್ಷಣ ಪಡೆದು ನಾವು ದೇಶವನ್ನು ಗುಲಾಮತನಕ್ಕೆ ಈಡುಮಾಡಿದೇವೆಂಬುದು ಗಮನಿಸಬೇಕಾದ ಮಾತು. ತಾಯಿನುಡಿಯಲ್ಲಿ ಹೇಳಿದುದನ್ನು ಯಾರೋ ಭಾಷಾಂತರ ಮಾಡಬೇಕು. ಇದಕ್ಕಿಂತ ಮೂರ್ಖತನವೆ? ಇದು ಗುಲಾಮಗಿರಿಯ ಗುರುತಲ್ಲವೆ? ಇದಕ್ಕಾಗಿ ಇಂಗ್ಲಿಷರನ್ನು ಬೈಯಬೇಕೊ, ನನ್ನನ್ನೋ? ನಿಜವಾಗಿ, ಇಂಗ್ಲಿಷ್ ಕಲಿತ ನಾವೇ ಹಿಂದೂಸ್ಥಾನಕ್ಕೆ ಗುಲಾಮಗಿರಿಯ ಸಂಕೋಲೆ ತೊಡಿಸಿದವರು. ರಾಷ್ಟ್ರದ ಶಾಪ ಇಂಗ್ಲಿಷರಿಗಲ್ಲ-ನಮಗೇ ..... ಆದರೆ ಇಂಗ್ಲಿಷ್ ನಮಗೆ ಅಗತ್ಯವಾಗಬಾರದೆಂಬುದು ನಮ್ಮ ಗುರಿ. ಅದನ್ನು ಕಲಿತು ಹಣಗಳಿಸುವ ಉದ್ದೇಶವನ್ನು ಬಿಡಬೇಕು. ಇಷ್ಟು ಮಿತವಾಗಿ ಇಂಗ್ಲಿಷನ್ನು ಕಲಿತರೂ ಏನು ಕಲಿಯಬೇಕು, ಇಂಗ್ಲಿಷಿನಲ್ಲಿ, ಏನು ಕಲಿಯಬಾರದು ಎಂಬುದನ್ನು ಯೋಚಿಸಬೇಕು.[೨೯]

ಗಾಂಧೀಜಿಯವರ ಈ ಮೇಲಿನ ಮಾತುಗಳು ಪರಭಾಷೆಯೊಂದರ ಸ್ವೀಕರಣೆ ಮತ್ತು ನಿರಾಕರಣೆಯ ಎರಡೂ ನೆಲೆಗಳನ್ನು ಒಳಗೊಂಡಿದೆ. ಪರಭಾಷೆಯೊಂದು ಎಸಗುವ ಅಕೃತ್ಯಗಳು, ಪ್ರಭಾವ ಪರಿಣಾಮಗಳು ಮೇಲಿನ ಉದ್ಧರಣೆಯಲ್ಲಿ ಪ್ರಕಟವಾಗುತ್ತವೆ. ಅಂತೆಯೇ ಅದು ದೇಶೀಯರಿಗೆ ಶಾಪವಾಗಿ ಪರಿಣಮಿಸುವ ಚಿತ್ರಗಳು ಇಲ್ಲಿವೆ.

ಪರಭಾಷೆಯೊಂದನ್ನು ಅಸ್ತ್ರವೆಂಬಂತೆ ಬಳಸಿ ಸಾಮಾನ್ಯರನ್ನು ಶೋಷಿಸುವ ನೆಲೆಗಳು, ಸಾಮಾನ್ಯರ ವ್ಯಕ್ತಿತ್ವ ವಿಕಾಸಕ್ಕೆ ಅದು ತರುವ ಅಡ್ಡಿ - ಆತಂಕಗಳ ವಿಚಾರಗಳು ಈ ಮೇಲಿನ ಭಾಗದಲ್ಲಿ ಪ್ರಕಟವಾಗುತ್ತವೆ. ಗಾಂಧಿಯವರಿಗೆ ಇಂಗ್ಲಿಷನ್ನು ಕಡ್ಡಾಯ ಮಾಡುವುದು ಗುಲಾಮತನದ ಸಂಕೇತ. ಅಂದರೆ ಬಲವಂತದಿಂದ ಭಾಷೆಯನ್ನು ಹೇರುವುದು ಒಂದು ಸಂಸ್ಕೃತಿಯ ಜನತೆಯನ್ನು ಬಲವಂತದಿಂದ ಗುಲಾಮರನ್ನಾಗಿಸಿದಂತೆ. ಹಾಗೆ ಒದಗುವ ದಾಸ್ಯ ಒಂದು ಸಂಸ್ಕೃತಿಯ; ಒಂದು ದೇಶದ ದುರಂತವಲ್ಲದೆ ಬೇರೆ ಅಲ್ಲ. ಗಾಂಧೀಜಿಯವರ ಈ ವಿಚಾರಧಾರೆಯ ಪ್ರಭಾವ ಕುವೆಂಪು ಅವರ ಕೃತಿಗಳಲ್ಲಿ ಗಾಢವಾಗಿ ಚಿಂತನೆಗೆ ಗುರಿಯಾಗಿದೆ. ಆಕ್ರಮಣಶೀಲ ಭಾಷೆಯೊಂದು ಎಸಗುವ ಅನರ್ಥಗಳು ಯಾವ ಬಗೆಯವೆಂಬ ವಿಚಾರ ಸಮಷ್ಟಿ ಭಾರತದ ಸಾಂಸ್ಕೃತಿಕ ಪರಿಸರವನ್ನು ವಿಶ್ಲೇಷಿಸಿದ ಯಾರಿಗಾದರೂ ಗ್ರಹಿಕೆಗೆ ಬರುತ್ತದೆ.

ವಸಾಹತುಶಾಹಿ ಒಡ್ಡಿದ ಪ್ರಬಲ ಅಸ್ತ್ರಗಳಲ್ಲಿ ಇಂಗ್ಲಿಷ್ ಶಿಕ್ಷಣ ಅತ್ಯಂತ ಆಕರ್ಷಣೀಯ ಹಾಗೂ ಶಕ್ತಿಯುತವಾದುದೆಂಬ ವಿಚಾರ ಇಂದಿಗೂ ವೇದ್ಯವಾಗುತ್ತಿರುವ ಸಂಗತಿಯಾಗಿದೆ. ಮೆಕಾಲೇ ಭಾರತಕ್ಕೆ ತಂದ ಇಂಗ್ಲಿಷ್ ಶಾಲೆ ಒಟ್ಟು ಭಾರತೀಯ ಸಂಸ್ಕೃತಿಯ ಮನಸ್ಥಿತಿಯನ್ನು ಆಕರ್ಷಿಸುವುದರೊಂದಿಗೆ ಮೇಲುವರ್ಗದ ಹಾಗೂ ಶೂದ್ರವರ್ಗದ ಜನರಿಗೆ ಬೇರೆ ಬೇರೆ ನೆಲೆಗಳಲ್ಲಿ ವರವಾಗಿ ಪರಿಣಮಿಸಿತು. ಇಂಗ್ಲಿಷರ ಆಡಳಿತದಲ್ಲಿ ಮೇಲುವರ್ಗದ ಜನ ಸರಕಾರಿ ಹುದ್ದೆಗಳನ್ನು ಗಿಟ್ಟಿಸುವುದರೊಂದಿಗೆ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಲು ಸಹಾಯಕವಾಯಿತು. ಇಂಗ್ಲಿಷ್ ಭಾಷೆ ಹೊತ್ತು ತಂದ ವಿಚಾರಧಾರೆ ಕುವೆಂಪು ಅವರಂಥ ಶೂದ್ರವರ್ಗಕ್ಕೆ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಮತ್ತು ಪುರೋಹಿತಶಾಹಿಯ ಹಿಡಿತದಿಂದ ಪಾರಾಗಲು ನೆರವಾಯಿತು. ಕುವೆಂಪು ಅವರ ಆತ್ಮಚರಿತ್ರೆಯಾದ 'ನೆನಪಿನ ದೋಣಿ' ಹಾಗೂ ಇವರ ಕೃತಿಗಳಲ್ಲಿ ಪರಭಾಷೆಯಾದ ಇಂಗ್ಲಿಷ್ ಬಗೆಗಿನ ಆಕರ್ಷಣೆ-ವಿಕರ್ಷಣೆಗಳು ಕುರಿತ ವಿವರಗಳು ದಟ್ಟವಾಗಿ ಕಾಣುತ್ತವೆ.

ಕುವೆಂಪು ಅವರ ಭಾಷೆಯ ಬಗೆಗಿನ ಚಿಂತನೆಗಳಲ್ಲಿ ಇಂಗ್ಲಿಷ್ ಭಾಷೆ ಹೊತ್ತು ತರುವ ವಿಚಾರಧಾರೆಯ ಬಗೆಗೆ ನಿರಂತರವಾಗಿ ಒಲವಿರುವುದು ಅವರ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಹಾಗೆಯೇ ಶಿಕ್ಷಣದ ಮಾಧ್ಯಮವಾಗಿ ದೇಶೀಯ ಸಂಸ್ಕೃತಿಯ ಮೇಲೆ ಇಂಗ್ಲೀಷ್ ಭಾಷೆ ಎಸಗುವ ಅನರ್ಥಗಳನ್ನು, ದುಷ್ಪರಿಣಾಮಗಳನ್ನು ಕಂಡಾಗ ಅವರ ಕಾವ್ಯ ಪ್ರತಿರೋಧದ ಮೊನಚನ್ನು ಪಡೆಯುತ್ತದೆ.

ಪರಕೀಯರ ಭಾಷೆ ಮಗುವಿನ ಕಲಿಕೆಯಲ್ಲಿ ಬೌದ್ಧಿಕ ಚಟುವಟಿಕೆಯಾಗುತ್ತದೆಯೇ ಹೊರತು, ಕಲಿಯುವ ಅನುಭವ ಸಾಮಾಗ್ರಿಯೊಂದಿಗೆ ಭಾವನಾತ್ಮಕವಾಗಿ ಸ್ಪಂದಿಸುವ ವ್ಯಕ್ತಿತ್ವವನ್ನು ಅದು ಎಂದಿಗೂ ತಂದುಕೊಡಲಾರದು. ಕಲಿಕೆಯ ಸಾಮಾಗ್ರಿ ಯಾವಾಗ ಭಾವನಾತ್ಮಕವಾಗಿ ಅನುಭವ ಸಾಮಾಗ್ರಿಯಾಗಿ ಮಾರ್ಪಾಡುವುದಿಲ್ಲವೋ ಆಗ ಮಗುವಿನ ವ್ಯಕ್ತಿತ್ವ ಟೊಳ್ಳಾಗುವ ಸಂಭವಗಳು ಹೆಚ್ಚಾಗುತ್ತವೆ. ಈ ಬಗೆಯ ಪರಭಾಷೆಯ ಕಲಿಕೆ ಮಗುವಿನ ದೇಹ ಮತ್ತು ಮನಸ್ಸುಗಳಲ್ಲಿ ಬಿರುಕುಗಳನ್ನು ಉಂಟುಮಾಡುವುದಲ್ಲದೆ ನಿರ್ವೀರ್ಯಗೊಳಿಸುತ್ತದೆ. ಈ ಎಲ್ಲ ಕಾರಣಗಳಿಂದ ಇಂಗ್ಲಿಷ್ ಭಾಷೆ ನಮಗೆ ಏಕೆ? ಹೇಗೆ? ಯಾರಿಗೆ? ಎಷ್ಟು? ಬೇಕೆಂಬ ವಿಚಾರಗಳನ್ನು ಕುವೆಂಪು ಅವರು ಅತ್ಯಂತ ಪ್ರಜ್ಞಾಪೂರ್ವಕವಾಗಿ

ಮಂಡಿಸುತ್ತಾರೆ. ಬಲತ್ಕಾರದಿಂದ ಹೇರುವ ಭಾಷೆಗಳ ಹೊರೆಯಿಂದ ಮಗುವಿನ ಮೇಲೆ ಬೀರುವ ದುಷ್ಪರಿಣಾಮಗಳನ್ನು, ಅದರಿಂದ ಒಂದು ಸಂಸ್ಕೃತಿಗೆ ಒದಗುವ ಲಾಭ-ನಷ್ಟಗಳನ್ನು ಅವರ ಕವಿತೆಗಳು ಚಿಂತಿಸುತ್ತವೆ. ಸ್ವಾತಂತ್ರ್ಯನಂತರ ಸಾಮ್ರಾಜ್ಯಶಾಹಿ ಧೋರಣೆಯ ಶಕ್ತಿಗಳು (ಸ್ಥಳೀಯ) ಸರಕಾರಗಳು ವಸಾಹತುಶಾಹಿ ಸಂಸ್ಕೃತಿಯ ಕುರುಡು ಅನುಕರಣೆಗಳಿಂದ ಮಕ್ಕಳ ಮೇಲೆ ಹೇರಿದ ಭಾಷಾನೀತಿಗಳ ಬಗೆಗೆ ತಾಳುವ ನಿಲುವುಗಳು ಅವರ ಈ ಬಗೆಯ ಕವಿತೆಗಳಲ್ಲಿ ಮುಖ್ಯ ಧಾತುವಾಗಿ ಮೈಪಡೆಯುತ್ತವೆ. ತಮಗೊದಗುವ ದುರಾವಸ್ಥೆಗಳಿಂದ ತಮ್ಮನ್ನು ತಾವೇ ರಕ್ಷಿಸಿಕೊಂಡು ಪಾರಾಗಲು ಕನ್ನಡದ ಕಂದರಿಗೆ ಈ ಮೂಲಕ ಕರೆ ಕೊಡುತ್ತಾರೆ.

> ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ ,
> ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ!
> - - - - - - - - - - - - - - - - - - - -
> ಕೂಗಿಕೊಳ್ಳಲು ಕೂಡ ಬಲವಿಲ್ಲ : ಮಕ್ಕಳೇ
> ಬಾಯ್ಮುಚ್ಚಿ ಹಿಡಿದಿಹರು ಕೆಲವರು ನುಗ್ಗಿ !
> - - - - - - - - - - - - - - - - - - - -
> ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿ ಸಾಕ್ಷಿ ;
> - - - - - - - - - - - - - - - - - - - -
> ಉತ್ತರದ ಕಾಶಿಯಲಿ ಕತ್ತೆ ಮಿಂದ್ಯೆತರಲು
> ದಕ್ಷಿಣದ ದೇಶಕದು ಕುದುರೆಯಹುದೆ?
> ತಾಯಿತ್ತ ಮೊಲೆ ಹಾಲೆ ನಿಮ್ಮ ಮೈಗಾಗದಿರೆ
> ಹೊತ್ತ ಹೊರೆ ಬಲಕಾರಿ ನೆತ್ತರಹುದೆ?
> ಕಣ್ದೆರೆಯಿರೇಳಿ, ಓ ಕನ್ನಡದ ಮಕ್ಕಳಿರ,
> ಗರ್ಜಿಸುವುದು ಕಲಿತು ಸಿಂಹವಾಗಿ !
> ನಖದಂಷ್ಟ್ರಕೇಸರಂಗಳ ಬೆಳಸಿ ಹುರಿಗೊಂಡು
> ಶಿರವೆತ್ತಿ ನಿಂತು, ಕುರಿತನವ ನೀಗಿ.[೩೦]

ಸ್ವಾತಂತ್ರ್ಯಾನಂತರ ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳು ಆಡಳಿತ ಮತ್ತು ಶಿಕ್ಷಣ ಮಾಧ್ಯಮವಾಗಬೇಕೆಂದು ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ. ಆದರೆ, ದೇಶದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿಶಕ್ತಿಗಳು ಅದಕ್ಕೆ ಅಡ್ಡಿ-ಆತಂಕಗಳನ್ನು ಒಡ್ಡಿ, ಇಂಗ್ಲಿಷ್ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಎದುರಾಗಿಸಿದ ವ್ಯವಸ್ಥೆಯ ಬಗೆಗೆ ಕುವೆಂಪುರವರ ಸಂವೇದನೆ ನಿರಂತರವಾಗಿ ವಿರೋಧಿಸುತ್ತದೆ. ಹಾಗೆಯೇ ಪರಭಾಷೆಯ ಮಾಧ್ಯಮಗಳಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮಗಳು, ಅದರಿಂದ ದೇಶದ ಪ್ರಗತಿಗೆ ಮಾರಕವಾಗುವ ಪರಿಣಾಮಗಳ ಬಗೆಗೆ ಯುವ ಜನತೆ ಎಚ್ಚರಗೊಂಡು ಕಣ್ದೆರೆಯಬೇಕೆಂಬ ಆಶಯವು ಅವರ ಕಾವ್ಯದಲ್ಲಿ ಅಭಿವ್ಯಕ್ತವಾಗಿದೆ. ರಾಜನುಡಿ (ಆಡಳಿತ ಭಾಷೆ ಇಂಗ್ಲೀಷ್ ), ರಾಷ್ಟ್ರನುಡಿ (ಹಿಂದಿ), ದೇವನುಡಿ (ಸಂಸ್ಕೃತ ) ಗಳೆಂಬ

ನೆಪಗಳಿಂದ ಮಕ್ಕಳ ಮೇಲೆ ಅನ್ಯಭಾಷೆಗಳ ಹೊರೆ ಹೇರಿದ ಅಮಾನವೀಯತೆಯ ಬಗೆಗಿನ ಆಕ್ರೋಶವೂ ಇಲ್ಲಿದೆ. ತ್ರಿಭಾಷಾ ಸೂತ್ರ ಮಗುವಿನ ಬೌದ್ಧಿಕ ಶಕ್ತಿಯ ಮೇಲೆ ಎಸಗುವ ಪರಿಣಾಮಗಳನ್ನು ಕನ್ನಡದ ಕಂದರಿಗೆ ಮನವರಿಕೆ ಮಾಡುತ್ತಲೇ ಅದರ ಬಗೆಗೆ ಎಚ್ಚರಗೊಳ್ಳಬೇಕಾದ ಅಗತ್ಯವನ್ನು ಇಲ್ಲಿ ಒತ್ತಿಹೇಳುತ್ತಾರೆ.

'ಬಾವೈಕ್ಯತೆ' ಕೇಂದ್ರ ಸರಕಾರದ ತ್ರಿಭಾಷಾ ಸೂತ್ರವನ್ನು ಅತ್ಯಂತ ಮಾರ್ಮಿಕವಾಗಿ ವಿಡಂಬಿಸುವ ಕವಿತೆಯಾಗಿದೆ. ಪ್ರಾದೇಶಿಕ ಭಾಷೆಯ ಅನನ್ಯತೆಗಳನ್ನು ಭಾವೈಕ್ಯತೆಯ ನೆಪದಲ್ಲಿ ಅಳಿಸಿ ಹಾಕುವ ಹುನ್ನಾರಗಳ ಬಗೆಯನ್ನು ತೋಳ ಮತ್ತು ಕುರಿಮರಿಯ ಕಥೆಯೊಂದನ್ನು ನೆನಪಿಸುವ ಉಲ್ಲೇಖದೊಂದಿಗೆ ವ್ಯಂಗಕ್ಕೆ ಗುರಿಪಡಿಸುವ ಕವನವಿದು. ತೋಳ-ಕುರಿಮರಿಯ ಸಂಭಾಷಣೆಯಿಂದಲೇ ಬೆಳೆಯುತ್ತಾ ಹೋಗುವ ಈ ಕವಿತೆ ಪರಂಪರೆಯ ಭಾಷಾ ಕೌರ್ಯದ ಸಂಘರ್ಷಗಳನ್ನು ಪ್ರಕಟಿಸುತ್ತದೆ. ದೇಶಭಾಷಾ ಪ್ರತ್ಯೇಕತಾ ಪರಿಯನ್ನು ಒಪ್ಪದ ಕುರಿಮರಿಯನ್ನು ಕಬಳಿಸಲು ಹೊಂಚುಹಾಕುವ ತಂತ್ರವನ್ನು ಈ ಕವಿತೆ ಪರಿಣಾಮಕಾರಿಯಾಗಿ ಪ್ರಕಟಿಸುತ್ತದೆ.

> ನಿನಗೆ ಏಕೆ ಬೇರೆ ಭಾಷೆ?
> 'ಮೆಹೆಹೆ! ಮೆಹೆಹೆ! ಮಹೆಹೆ! ಮೆಹೆಹೆ!'
>
> ಬರಿಯ ಗುಡ್ಡಗಾಡು ಭಾಷೆ !
> ನನ್ನದೊ ಅದು ವಿಶ್ವ ಭಾಷೆ !
> ಪ್ರಪಂಚಕೇ ರಾಷ್ಟ್ರಭಾಷೆ !
> ನಾನು ಬೇರೆ ಎಂಬ ಭ್ರಾಂತಿ
> ಅದೇ ಮೂಲ ಜಗಕ್ಕ ಶಾಂತಿ![೩೧]

ಈ ಮೇಲಿನ ಸಾಲುಗಳಲ್ಲಿ ದೇಶಭಾಷೆಯನ್ನು ಕುರಿತ ಅಣಕದ ಜೊತೆಗೆ ವಿಶ್ವಭಾಷೆಯ ಅಹಂಕಾರವು ಇದೆ. ಈ ಅಹಂಕಾರವು ರಾಜಕೀಯ ದುರುದ್ದೇಶದಿಂದ ಹುಟ್ಟಿದ್ದು. ಭಾವೈಕ್ಯತೆಯ ನೆಪದಲ್ಲಿ ಒಡ್ಡುವ ತ್ರಿಭಾಷಾ ಸೂತ್ರ ಕನ್ನಡದ ಅನನ್ಯತೆಗೆ ತರುವ ಅಪಾಯದ ವ್ಯಂಗವೂ ಆಗಿ ಇಲ್ಲಿ ಪ್ರಕಟವಾಗುತ್ತದೆ. ಒಟ್ಟು ಕವಿತೆಯ ಸಂದರ್ಭದಲ್ಲಿ ಉತ್ಪನ್ನವಾಗುವ ದುಷ್ಪವ್ಯಾಘ್ರನ ಭಾವೈಕ್ಯತೆಯ ಸಂಚಿಗೆ ಬೀಳದೆ ಎಚ್ಚರದಿಂದಿರಬೇಕೆಂಬ ಆಶಯ ತ್ರಿಭಾಷಾ ಸೂತ್ರಕ್ಕೆ ಕುವೆಂಪು ಎದುರಾಗಿಸಿದ ವಿಚಾರವಾಗಿದೆ.

ಭಾರತದ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮೂರನೆಯ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲಿಷನ್ನು ಕಲಿಸಬೇಕೆಂಬ ನಿರ್ಧಾರವನ್ನು ಕೈಗೊಂಡ ಸಂದರ್ಭದಲ್ಲಿ ರಚಿಸಿದ 'ಪ್ರಾರ್ಥಿಸಿ, ಓ ಮಕ್ಕಳಿರಾ', 'ಸಾಕು ಈ ಈ ಬಲತ್ಕಾರ' ಮೊದಲಾದ ಕವಿತೆಗಳಲ್ಲಿ ಮಕ್ಕಳನ್ನು ಬಲತ್ಕಾರದಿಂದ ವರ್ಷ ವರ್ಷ ಪರೀಕ್ಷೆ ಎಂಬ ಗಿಲೋಟಿನ್ ಯಂತ್ರಕ್ಕೆ ಸಿಲುಕಿಸಿದ ಬಗೆಗಿನ ಮರುಕ- ಆಕ್ರೋಶಗಳು ಮೈ ಪಡೆದಿವೆ. ಅವರ ಈ ಕೆಳಗಿನ ಮಾತುಗಳಲ್ಲಿಯೆ ಈ ವಿಚಾರ ಮತ್ತಷ್ಟು ಸ್ಪಷ್ಟಗೊಳ್ಳುತ್ತದೆ.

ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿ ಶಕ್ತಿಗಳು ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವಳನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ ಇಂಗ್ಲೀಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಜಿಲೋಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಣಾಮವನ್ನು ಊಹಿಸಲೂ ಸಾಧ್ಯವಿಲ್ಲ. ಬಹುಶಃ ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಹುದೇನೊ!

ಇಂಗ್ಲಿಷ್ ಭಾಷೆ ಬಲತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರಬೇಕಾಗುತ್ತದೆ. ಅಲ್ಲದೆ ಮತ್ತೂ ಒಂದನ್ನು ಕಂಡಂತೆ ಹೇಳುತ್ತೇನೆ ತಮಗೆ; ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಅಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾಮಾಡಿ, ಹಲವು ಪಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲ ಇಂಗ್ಲಿಷ್ ಸ್ಟ್ಯಾಂಡರ್ಡ್‌ನ್ನು ಉತ್ತಮಗೊಳಿಸುವುದಕ್ಕಾಗಿಯೇ ವೆಚ್ಚ ಮಾಡಿದರೂ , ಇನ್ನು ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ, ಸಂಖ್ಯೆಯೂ ವಿಸ್ತಾರವೂ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಈಗಿರುವ ಮಟ್ಟವೂ ಇಳಿದು ದುರ್ಗತಿ ಹೊಂದುವುದರಲ್ಲಿ ಸಂದೇಹವಿಲ್ಲ.

ಆಹಾರ ಸಮಸ್ಯೆಗಿಂತಲೂ ಚೀಣೀಯರ ಸಮಸ್ಯೆಗಳಿಗಿಂತಲೂ ಗುರುತರವಾದ ಸಮಸ್ಯೆ ಇದು. ಈ ಬಲತ್ಕಾರದ ಇಂಗ್ಲಿಷ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲೀ ಹಾನಿಯಲ್ಲಾಗಲೀ, ಸರಿದೂಗುವ, ಭ್ರಷ್ಟಾಚಾರ ಮತ್ತೊಂದಿಲ್ಲ. ಆದರೆ ಅದು ಪ್ರಚ್ಛನ್ನವಾದ್ದರಿಂದಲೂ, ಅದರ ದುಷ್ಪರಿಣಾಮ ದೃಗ್ಗೋಚರವಾದ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದಲೂ, ನಾವು ಹುಸಿ ನೆಮ್ಮದಿಯ ಭಾವದಲ್ಲಿ ಎಚ್ಚರಗೊಳ್ಳದೇ ತಟಸ್ಥರಾಗಿದ್ದರೆ, ಮುಂದೆ ಮಹಾ ಪಶ್ಚಾತ್ತಾಪಕ್ಕೆ ಒಳಗಾಗಬೇಕಾಗುತ್ತದೆ.[೩೨]

ಕುವೆಂಪು ಅವರ ಈ ದೀರ್ಘವಾದ ಉದ್ಧರಣೆ ಮಾತೃಭಾಷಾ ಶಿಕ್ಷಣ ಮಾಧ್ಯಮದ ಅಗತ್ಯಗಳನ್ನು ಸ್ಪಷ್ಟಪಡಿಸುತ್ತದೆ. ಹಾಗೆಯೇ ಬಲತ್ಕಾರದ ಭಾಷೆಗಳಿಂದ ರಾಜ್ಯ ಹಾಗೂ ರಾಷ್ಟ್ರಗಳಿಗೆ ಒದಗಬಹುದಾದ ಆರ್ಥಿಕ, ರಾಜಕೀಯ ಸಮಸ್ಯೆಗಳ ಬಗೆಗೆ ಮನದಟ್ಟು ಮಾಡುತ್ತದೆ. ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯ ಮಂತ್ರಗಳು ಸಾರ್ಥಕಗೊಳ್ಳಬೇಕಾದರೆ ದೇಶಭಾಷೆಯ ಮಾಧ್ಯಮವೇ ಅದಕ್ಕೆ ಸಾಧನವೆಂಬ ವಿಚಾರವು ಇಂಥ ಕವಿತೆಗಳಲ್ಲಿ ವ್ಯಕ್ತವಾಗುತ್ತದೆ. ಕನ್ನಡಿಗರ ಅಭ್ಯುದಯ ಮತ್ತು ಶ್ರೇಯಸ್ಸುಗಳಿಗೆ ಹಿಡಿದ ಶನಿ ತೊಲಗಬೇಕಾದರೆ ಕನ್ನಡ ಭಾಷಾಮಾಧ್ಯಮದಿಂದ ಮಾತ್ರ ಸಾಧ್ಯವೆಂಬ ವಿಚಾರಗಳು ಇಂಥ ಬರಹಗಳ ಹಿನ್ನೆಲೆಗಿವೆ. ಪರಭಾಷೆ ಎಸಗುವ ಯಾಜಮಾನ್ಯದ ಕೇಡುಗಳು ಯಾವ ಬಗೆಯವೆಂಬುದನ್ನು ಆಫ್ರಿಕನ್ ಚಿಂತಕ ಗೂಗಿ ವಾ ಥಿಯಾಂಗೊ ಅವರ ಈ ಕೆಳಗಿನ ಮಾತುಗಳು ಪರಿಣಾಮಕಾರಿಯಾಗಿ ತಿಳಿಸಬಲ್ಲವು.

> ವಸಾಹತುಶಾಹಿಯು ನಿಜವಾಗಿಯೂ ಆಳುವ ಕ್ಷೇತ್ರವೆಂದರೆ, ಶೋತವರ ಮನೋಲೋಕ ....... ಈ ಕೆಲಸವನ್ನು ವಸಾಹತುಶಾಹಿಯು ಎರಡು ಬಗೆಗಳಲ್ಲಿ ಮಾಡುತ್ತದೆ. ಮೊದಲನೆಯದಾಗಿ ಜನತೆಯ ಸಂಸ್ಕೃತಿಯನ್ನು ನಾಶಮಾಡುವುದು, ಇಲ್ಲವೆ ಅವನ್ನು ಉದ್ದೇಶಪೂರ್ವಕವಾಗಿ ಅಪಮೌಲ್ಯಗೊಳಿಸುವುದು. ಜನತೆಯ ಕಲೆಗಳು, ನೃತ್ಯಗಳು, ಧರ್ಮಗಳು, ಚರಿತ್ರೆ, ಭೂಗೋಳ, ಶಿಕ್ಷಣ , ಸಾಹಿತ್ಯ, ಜಾನಪದ ಎಲ್ಲವನ್ನೂ ಹೀನಾಯಗೊಳಿಸುವುದು, ಎರಡನೆಯದಾಗಿ, ತನ್ನ ಭಾಷೆಯನ್ನು ಶ್ರೇಷ್ಠವೆಂದು ವ್ಯವಸ್ಥಿತವಾಗಿ ಪ್ರತಿಷ್ಠಾಪಿಸುವುದು. ವಸಾಹತೀಕರಣಕ್ಕೆ ಒಳಗಾದ ಜನರ ಮನೋಲೋಕವನ್ನ ಆಳಬೇಕಾದರೆ, ಜನಭಾಷೆಗಳ ಮೇಲೆ ವಸಾಹತುಶಾಹಿ ಭಾಷೆಗಳ ಯಜಮಾನಿಕೆಯು ತುಂಬ ನಿರ್ಣಾಯಕ ಪಾತ್ರ ವಹಿಸುತ್ತದೆ.[೩೩]

ಈ ಮೇಲಿನ ಉದ್ಧರಣೆ ವಸಾಹತು ಸಂಸ್ಕೃತಿಯಂಥ ಆಕ್ರಮಣಶಾಲಿ ಭಾಷೆ ಎಸಗುವ ನಿರಂತರ ಪ್ರಭಾವ ಪರಿಣಾಮಗಳನ್ನು ಸೂಚಿಸುತ್ತದೆ. ಆಫ್ರಿಕಾದ ಸಂದರ್ಭದಲ್ಲಿ ಗೂಗಿ ವಾ ಥಿಯಾಂಗೊ ಭಾಷೆಯ ಬಗೆಗಿನ ಈ ಮಾತುಗಳು ನಮ್ಮ ಸಂದರ್ಭದಲ್ಲಿ ಸಂಪೂರ್ಣವಾಗಿ ಅನ್ವಯಿಸುತ್ತವೆಂಬ ಮಾತನ್ನು ಇಂಥ ಅಧ್ಯಯನದಿಂದ ಸ್ಪಷ್ಟವಾಗುವ ಸಂಗತಿಯಾಗಿದೆ. ವಸಾಹತು ಸಂಸ್ಕೃತಿಯು ರಾಜಕೀಯವಾಗಿ ಬೌದ್ಧಿಕವಾಗಿ ಈ ದೇಶದಿಂದ ಉಚ್ಚಾಟಿಸಲ್ಪಟ್ಟರೂ, ಆ ಸಂಸ್ಕೃತಿಯು ಹೇರಿದ ಮಾನಸಿಕ ಪರಿಣಾಮಗಳಿಂದ ಭಾರತ ಇನ್ನೂ ಹೊರಬರಲಾರದೆ ತತ್ತರಿಸುತ್ತಿರುವುದು ಜಾಗತಿಕ ಸತ್ಯ. ಭಾವಜಲಮೂಲವನ್ನು ಹೀರಿ ದೇಶೀಯ ಅನನ್ಯತೆಗಳನ್ನು, ಒಂದು ಸಂಸ್ಕೃತಿಯ ಸಂವೇದನೆಯನ್ನು ಮರುಭೂಮಿಯಾಗಿಸುವ ವಸಾಹತುಶಾಹಿಯ ಯಾಜಮಾನ್ಯತೆಗೆ ಕುವೆಂಪು ಸಂವೇದನೆ ದಿಕ್ಕಾರ ಹಾಕುತ್ತಲೇ ಸಮಕಾಲೀನ ಸಮಸ್ಯೆಗಳಿಗೆ ಪ್ರತಿಕ್ರಿಯಿಸುತ್ತದೆ.

### ೧೧. ನಗರ - ಗ್ರಾಮ : ಸಂಘರ್ಷಗಳ ಸಂಕೀರ್ಣಾವಸ್ಥೆ

ಗೋಲ್ಡ್ ಸ್ಮಿತ್‌ನ 'ದ ಡೆಸೆರ್ಟೆಡ್ ವಿಲೇಜ್' ಕವನವನ್ನು ಹೋಲುವ ಕುವೆಂಪುರವರ 'ಹಾಳೂರು' (೧೯೨೬) ಎಂಬ ಖಂಡಕಾವ್ಯದಲ್ಲಿಯೂ ಗ್ರಾಮ-ನಗರಗಳ ಸಂಘರ್ಷದ ಸಂಕೀರ್ಣಾವಸ್ಥೆಗೆ ತೋರಿದ ಪ್ರತಿಕ್ರಿಯೆಯನ್ನು ಕಾಣುತ್ತೇವೆ. ಗೋಲ್ಡ್ ಸ್ಮಿತ್‌ನ ಕವನದ ರೂಪಾಂತರವೋ ಪ್ರೇರಣೆಯೋ ಆಗಿ ಮೈ ಪಡೆದಿರುವ ಈ ಕಾವ್ಯ ಪ್ರಕಟಿಸುವ ವಿಚಾರಧಾರೆ ಈ ಶತಮಾನದ ಮೂರ್ನಾಲ್ಕು ದಶಕಗಳ ಭಾರತೀಯ ನವೋದಯದ ಬಹುಮುಖ್ಯ ಪ್ರವೃತ್ತಿಯನ್ನೆ ಕುರಿತದ್ದಾಗಿದೆ. ವಸಾಹತುಶಾಹಿ ಒಡ್ಡಿದ ಆಕರ್ಷಣೆಗಳಿಗೆ ಬಲಿಯಾದ ಗ್ರಾಮಸಂಸ್ಕೃತಿಯ ದುರಂತ ವಾಸ್ತವಗಳ ಚಿತ್ರ ಇಲ್ಲಿದೆ. ಅಂಥ ಸಂಸ್ಕೃತಿಯ ಆಮಿಷಗಳಿಗೆ ಒಳಗಾದ ಹಳ್ಳಿಗಳ ನ್ಯಾಯಪದ್ಧತಿ, ಭಾಷೆ ಮತ್ತು ಜನಪದ ಸಾಹಿತ್ಯ, ಗೃಹಕೈಗಾರಿಕೆಗಳು ಹಾಗೂ ರೈತಾಪಿ ಕಸುಬುಗಳು ನಗರಸಂಸ್ಕೃತಿಗೆ ಆಕರ್ಷಿತವಾಗಿ ಅವನತಿಗೊಳ್ಳುವ ಚಿತ್ರಗಳು ಈ ಕವಿತೆಯ ಉದ್ದಕ್ಕೂ ಎದುರಾಗುತ್ತವೆ. ಗಾಂಧೀಜಿಯವರ 'ಹಿಂದ್ ಸ್ವರಾಜ್' ಕೃತಿಯ ದಟ್ಟ ಪ್ರೇರಣೆ ಹಾಗೂ ಆ ಕೃತಿಯ ಮೌಲ್ಯಪ್ರತಿಪಾದನೆಗಳು ಈ ಬಗೆಯ ಕೃತಿಗಳಲ್ಲಿ ವಿಶಿಷ್ಟವಾದ ಅಂಶವಾಗಿ ಕಾಣುತ್ತವೆ.

ವಸಾಹತುಸಂಸ್ಕೃತಿಯು ನೆಲೆಗೊಳಿಸಿದ ಪಾಶ್ಚಾತ್ಯ ನ್ಯಾಯಪದ್ಧತಿ, ವೈದ್ಯಕೀಯ, ಶಿಕ್ಷಣ, ಯಂತ್ರ, ಕಾರ್ಖಾನೆಗಳು

ಗ್ರಾಮದ ಬದುಕನ್ನು ಆಕರ್ಷಿಸುವುದರೊಂದಿಗೆ, ಗ್ರಾಮಗಳ ಶೋಷಣೆಯನ್ನು ವ್ಯವಸ್ಥಿತವಾಗಿ ಮಾಡುವುದರೊಂದಿಗೆ, ಹಳ್ಳಿಗಳ ಅವನತಿಗೈದುದರ ಬಗೆಗೆ 'ಹಾಳೂರು' ಕವಿತೆಯ ನಿರೂಪಕನ ನಿವೇದನೆಯಲ್ಲಿ ವಿಷಾದದ ನೆಲೆಗಳು ತೀವ್ರವಾಗಿ ಪ್ರಕಟವಾಗಿವೆ. ಆ ನಿರೂಪಕನ ವಿಷಾದ ನೆಲೆಗಳ ಹಿಂದೆ ಗ್ರಾಮದ ಬದುಕಿನ ಅನನ್ಯತೆಗಳು ವಿನಾಶದ ಕಡೆಗೆ ಚಲಿಸುತ್ತಿರುವುದರ ಆತಂಕವಿದೆ.

'ಹಾಳೂರು' ಕವಿತೆಯ ನಿರೂಪಕ ಆ ಕಾಲಮಾನದ ಸಾಕ್ಷಿಪ್ರಜ್ಞೆಯಂತೆ ಎದುರಾಗುತ್ತಾನೆ. ವಸಾಹತು ಸಂಸ್ಕೃತಿಯು ಆಕ್ರಮಣಶೀಲ ನೆಲೆಗಳಿಂದ ಹಳ್ಳಿಯ ಅನನ್ಯತೆಗಳನ್ನು ನಾಶಗೈದು ತನ್ನ ಹಿಡಿತವನ್ನು ಸಾಧಿಸುವ ವ್ಯವಸ್ಥೆಯ ಬಗೆಗೆ ಈ ಪ್ರಜ್ಞೆ ನಿರಂತರವಾಗಿ ಎಚ್ಚರಗೊಳ್ಳುತ್ತದೆ. ಅಂತೆಯೇ ವಿಷಾದಪಡುತ್ತದೆ. ಆ ವಿಷಾದದ ಹಿಂದೆ ಗ್ರಾಮಜೀವನದ ದುರಂತಗಳಿಗೆ ಕಾರಣವಾದ ವ್ಯವಸ್ಥೆಯ ಬಗೆಗೆ ಆಕ್ರೋಶವೂ ಇದೆ. ಅಂಥ ಆಕ್ರೋಶ ಅಸಂಖ್ಯ ಪ್ರಶ್ನೆಗಳಲ್ಲಿ ಕಾಣಿಸಿಕೊಂಡಿದೆ.

ನಿನ್ನ ಕೈಗಾರಿಕೆಗಳೀಗೆಲ್ಲಿ? ಎಲ್ಲಿ?
ಮಾಯವಾದುವೆ ಎಲ್ಲಿ , ಎಲೆ ಮುದ್ದು ಹಳ್ಳಿ?
ಅಕ್ಕಸಾಲಿಗರೆಲ್ಲಿ? ಕಮ್ಮಾರರೆಲ್ಲಿ?
ನಿನಗೆ ವಸನವನಿತ್ತ ನೆಯ್ಗೆಯವರೆಲ್ಲಿ?
ನಿನ್ನ ಅಂದಿನ ಕುಶಲ ಕಲೆಗಳೀಗೆಲ್ಲಿ?
ಪರರ ಕೈ ಹಾರೈಸದಾ ಸುಖವದೆಲ್ಲಿ ?
ದೇಶವೆಲ್ಲವ ತುಂಬೆಯತಿಭೋಗ ರೋಗ
ಕುಶಲ ಕಲೆಗಳು ಮಾಯವಾದುವೈ ಬೇಗ
*   *   *   *   *
ಹಾಲೆಂದು ನಿನಗೆ ವಿಷವೂಡಿದವರಾರು?
ವ್ಯಾಪಾರ ನೆವದಿಂದ ಬಂದಿಲ್ಲಿ ನಿನ್ನ
ಸರ್ವಸ್ವವನು ಸುಲಿದು, ನಿನ್ನೊಳಿಹ ಚಿನ್ನ
ಧನ ಧಾನ್ಯಗಳನ್ನೆಲ್ಲ ಪಾಪಿಗಳು ತಮ್ಮ
ದೇಶಕೆಳೆದರು, ದೇವಿ, ಭಾರತಿಯೆ ಅಮ್ಮ!
ಪರಕೀಯರಿಂದು ನಿನ್ನನು ಸುಲಿಯುತಿರಲು,
ನೋವಿನಲಿ ನೀನು ಗೋಳಾಡಿ ಅಳುತಿರಲು,
ನಿನ್ನವರು ತಮ್ಮ ತಮ್ಮೊಳೆ ಕದನವಾಡಿ,
'ಜಾತಿ ಜಾತಿ' ಎಂದು ಬರಿದೆ ಹೋರಾಡಿ ,
ಸೋದರರ ಕೊಂದರಾ ಪರಕೀಯರನು ಕರೆದು;[೩೪]

ನಗರಗಳ ಆಕ್ರಮಣಶೀಲ ಆಕರ್ಷಣೆಗಳಿಂದ ಅವನತಿಗೊಂಡ ಗ್ರಾಮ್ಯದ ಅನನ್ಯತೆಗಳ ದುರಂತಕ್ಕೆ ಕಾರಣರೆಂಬ

ಪ್ರಶ್ನೆಗಳು ಈ ಕಾವ್ಯಭಾಗದಲ್ಲಿ ಪುನರಣಿತವಾಗುತ್ತದೆ. ಅಂತೆಯೇ ವ್ಯಾಪಾರದ ನೆಪದಿಂದ ಭಾರತಕ್ಕೆ ಆಗಮಿಸಿದ ಬ್ರಿಟಿಷ್ ವಸಾಹತುಶಾಹಿ ಸಂಸ್ಕೃತಿ ಇಲ್ಲಿನ ಸ್ಥಳೀಯ ಸಂಪತ್ತನ್ನು ದೋಚಿದ ಚಿತ್ರವೂ ಅಂಥ ಪರಕೀಯ ವ್ಯವಸ್ಥೆ ತನ್ನ ಕಾಲೂರಲು ಅನುಕೂಲವಾಗಿ ಒದಗಿ ಬಂದ ದೇಶೀಯ ಸಂದರ್ಭಗಳ ಚಿತ್ರವೂ ಇಲ್ಲಿದೆ. ಜಾತಿಪದ್ಧತಿಯಿಂಥ ಅನಿಷ್ಟ ವ್ಯವಸ್ಥೆ ಎದುರಾಗಿಸಿದ ಸಾಮಾಜಿಕ ಹಾಗೂ ಪುರೋಹಿತ ವ್ಯವಸ್ಥೆಯ ಬಗೆಗಿನ ವ್ಯಂಗ್ಯವೂ ಇಲ್ಲಿ ಮೈಪಡೆಯುತ್ತದೆ. ನಗರ ನಿರ್ಮಾಣದಿಂದ ಹುಟ್ಟಿಕೊಂಡ ನವಶೋಕಗಳು ಅಧಿಕವಾಗಿ, ಪಟ್ಟಣದ ಮಾರಿಗೆ ಹಳ್ಳಿಗಳು ಬಲಿಯಾಗಿ ಹಾಳಾಗದಂತೆ ಕಾಪಾಡಬೇಕೆಂಬ ನಿವೇದನೆ ಈ ಕವಿತೆಯ ಮುಖ್ಯ ಆಶಯವಾಗಿದೆ.

### ೧೨. ದೇವರ ಪರಿಕಲ್ಪನೆ

ದೇವರನ್ನು ಕುರಿತ ಸಾಂಪ್ರದಾಯಿಕ ನಂಬಿಕೆಗಳಿಗೆ ವಿರುದ್ಧವಾದ ವ್ಯಾಖ್ಯೆಗಳನೊಡ್ಡುವುದು ಕುವೆಂಪು ಕಾವ್ಯದ ಪ್ರಮುಖನೆಲೆ. 'ದೇವರು ಸೆರೆಯಾಳ್', 'ಹೂವು -ದೇವರು' ಮತ್ತು 'ಪೂಜೆ' ಇಂಥ ಕವನಗಳ ಪುನರ್ ವ್ಯಾಖ್ಯಾನಗಳಲ್ಲಿ ಈ ನೆಲೆ ಮೈ ಪಡೆಯುತ್ತದೆ. ಪೂಜಾ ಕ್ರಿಯೆಗಳು ಯಾಂತ್ರಿಕ ಕ್ರಿಯಾಚರಣೆಗಳಾಗಿ ಜನತೆಯ ಮೌಢ್ಯತೆಗೆ ಕಾರಣವಾಗುವ ಇಂಥ ನೆಲೆಗಳಲ್ಲಿ ಗುಡಿ ಗೋಪುರಗಳ ಅಗತ್ಯತೆಯನ್ನು ಪ್ರಶ್ನಿಸುವ ಬಗೆಯಿದೆ. 'ದೇವರು ಸೆರೆಯಾಳ್, ದೇಗುಲ ಸೆರೆಮನೆ, ಕಾವಲು ಪೂಜಾರಿ', (ದೇವರು ಸೆರೆಯಾಳ್ ) 'ಚೆಲುವೇ ದೇವರು, ಒಲವೇ ಪೂಜೆ; ಎಂಬುದೆ ರಸಜೀವನ ದೋಜೆ. ಕಲೆಯನು ಮೀರುವ ಸಾಧನೆಯಿಲ್ಲ; ಕಲೆಯೊಳಗೆ ಪುರುಷಾರ್ಥಗಳೆಲ್ಲ ; ಕಲೆಯಿರದೆದೆಗೆ - ಏನಿಲ್ಲ!' (ಹೂವು-ದೇವರು) ಎಂಬ ಕಲ್ಪನೆಗಳನ್ನು ಮುಖಾಮುಖಿಯಾಗಿಸುವುದರೊಂದಿಗೆ ದೇವರ ಕುರಿತ ಹೊಸ ಕಾಣ್ಕೆಯೊಂದು ಹೊಳಹು ಹಾಕುತ್ತದೆ. ಇಂಥ ಹೊಳಹುಗಳಲ್ಲಿ, ಯಾಂತ್ರಿಕ ಪೂಜೆಯ ನಿರಾಕರಣೆಯೊಂದಿಗೆ ಕಲಾಸಾಧನೆಯಲ್ಲಿಯೆ ಪುರುಷಾರ್ಥಗಳು ಅಡಗಿವೆಯೆಂಬ ಸೂಚನೆಯಿದೆ. ಪೂಜೆಗೆ ಹೂವನ್ನು ಕೊಯ್ಯುವ ಪೂಜಾರಿಯನ್ನು 'ಹಕ್ಕಿಯ ಮರಿಗಳ ಕುತ್ತಿಗೆ ಮುರಿಯುವ ಬೇಡ'ನ ಪ್ರಕ್ರಿಯೆಗೆ ಮುಖಾಮುಖಿಯಾಗಿಸುವಲ್ಲಿ ಇಂಥ ಪ್ರತಿರೋಧಗಳ ಪರಂಪರೆ ಪ್ರಕಟವಾಗುತ್ತದೆ.

ಓ ಪೂಜಾರಿ
ಕೋಮಲ ಸುಮಗಳ ಕತ್ತನು ಕೊಯ್ದು
ಕಗ್ಗಲ್ಲಿನ ಕಗ್ಗತ್ತಲೆಗೊಯ್ದು
ಗುಡಿಯೂ ಕಲ್ಲಿಗೆ ಬಲಿಕೊಡದಿದ್ದರೆ
ಪರಮಾತ್ಮಗೆ ತೃಪ್ತಿಯೆ ಇಲ್ಲೇನು?
ಈ ಗಿಡದೊಳೆ ರಾರಾಜಿಸುತ್ತಿದ್ದರೆ
ಶಿವಪೂಜೆಯು ಸಲ್ಲುವುದಿಲ್ಲವೇನು?[೩೫]

ಈ ಮೇಲಿನ ಉದ್ಧರಣೆಯೊಂದಿಗೆ ಅನೇಕ ಪ್ರಶ್ನೆಗಳು ಯಾಂತ್ರಿಕ ಕ್ರಿಯಾಚರಣೆಗಳಿಗೆ ಮುಖಾಮುಖಿಯಾಗುತ್ತದೆ. ಇಂತ ಪ್ರತಿರೋಧದ ನೆಲೆಗಳನ್ನು ಡಾ. ಡಿ.ಆರ್.ನಾಗರಾಜ್, 'ಕುವೆಂಪು ಅವರ ಸಾಂಸ್ಥಿಕ ಧರ್ಮದ ವಿರೋಧಿ ನಿಲುವುಗಳು ಈ ಬಗೆಯವು' ಎಂದು ಗುರುತಿಸಿದ್ದಾರೆ.

## ೧೩. ಯಂತ್ರ ಸಂಸ್ಕೃತಿ : ಆಕರ್ಷಣೆ ಮತ್ತು ವಿಕರ್ಷಣೆ

ಹೊಸ ಸಂಸ್ಕೃತಿಯೊಂದರ ಪ್ರವೇಶದಿಂದಾಗುವ ಎಲ್ಲ ಮಟ್ಟದ ನೋವುಗಳು ವಸಾಹತು ಸಂಸ್ಕೃತಿಯ ಲಕ್ಷಣಗಳನ್ನೆ ಸೂಚಿಸುತ್ತವೆ. ಯಂತ್ರ ಸಂಸ್ಕೃತಿ ಭಾರತದಂಥ ರಾಷ್ಟ್ರಗಳಿಗೆ ಪ್ರವೇಶಿಸಿದ ಸಂದರ್ಭಗಳಲ್ಲಿ ಎದುರಾದ ಆತಂಕಗಳಿಗೆ ದೇಶೀಯ ಸಾಂಸ್ಕೃತಿಕ ಚರಿತ್ರೆ ಪ್ರತಿಕ್ರಿಯಿಸಿದೆ. ಕುವೆಂಪು ಅವರ 'ರೈಲು ರಸ್ತೆ' ಮತ್ತು 'ರೈಲು ಗಾಡಿಯ ಕಿಟಕಿ' ಕವನಗಳಲ್ಲಿ ಇಂಥ ಪ್ರಕ್ರಿಯೆ ಪ್ರಕಟವಾಗುತ್ತದೆ. ವೈಜ್ಞಾನಿಕ ಜ್ಞಾನದ ಬಗೆಗಿನ ಒಲವು ಮತ್ತು ಅದರ ತಾಂತ್ರಿಕತೆ ಎಸಗುವ ಕ್ರೌರ್ಯಗಳ ಬಗೆಗಿನ ಪ್ರತಿರೋಧಗಳು ಕುತೂಹಲ ಮೂಡಿಸುತ್ತದೆ. ಅಂಥ ಪ್ರತಿರೋಧ ನೆಲೆಗಳ ಮಾದರಿಗಳನ್ನು ಯಂತ್ರದ ದಯೆಯ ಮೃಗದ ನಿಷ್ಕರುಣೆಗಿಂತಲೂ ಕ್ರೂರ ತರವಾದುದ್ದೆ ಎಂಬ ಸಾಲು ಧ್ವನಿಪೂರ್ಣವಾಗಿ ಹೊಮ್ಮಿದೆ.

ನೂತ್ನನಾಗರಿಕತೆಯ ಯಂತ್ರಾಸ್ಥಿಪಂಜರದಿ
ಕಬ್ಬಿಣದ ಹೃದಯಕ್ಕೆ ಹೊತ್ತು ರಕ್ತವ ಭರದಿ
ಪ್ರವಹಿಸುವ ಲೌಹರೇಖಾ ನಾಳಗಳ ಹೋಲಿ;
ಕರ್ಕಶದ ಕಟುನೀಲ ಕಾಂತಿಯನು ಕಣ್ಗೆಕಾರಿ
ಹರಿಯುತಿದೆ ಕಂಬಿ ಕಾರಿ![೩೬]

ಸಂಸ್ಕೃತಿಯ ನೆಮ್ಮದಿಗಳಿಗೆ ನವನಾಗರಿಕತೆ ತಂದ ಆತಂಕದ ನೆಲೆಗಳನ್ನು ಇಲ್ಲಿ ಕಾಣುತ್ತೇವೆ. ಹೊಸ ವಸ್ತು ಪ್ರಪಂಚದಿಂದ ಎದುರಾಗಿರುವ ವಿಸ್ಮಯಗಳು, ಅಂಥ ವಿಸ್ಮಯಗಳು ಒಂದು ಸಂಸ್ಕೃತಿಯ ಅನನ್ಯತೆಗಳಿಗೆ ಮಾರಕವಾಗುವ ಬಗೆಯನ್ನು ಪ್ರಕಟಿಸುತ್ತದೆ ಈ ಕವನ. ರೈಲು ಈ ನಾಡಿನ ಬದುಕನ್ನು ಪ್ರವೇಶಿಸುತ್ತಿರುವ ಕ್ರೌರ್ಯವನ್ನು ಈ ಕೆಳಗಿನ ಸಾಲುಗಳು ಸೂಚಿಸುತ್ತವೆ.

ಬಡಕಲಾಗಿರುವ ಹಸುವು ಬರಿಬಯಲು ಮೇಯುತಿದೆ;
ತನ್ನ ನೆಳಲೂ ತನಗೆ ಕಾವಾಗಿ ಸಾಯುತಿದೆ!
- - - - - - - - - - - - - - - - -
ಯಾವುದನು ಲೆಕ್ಕಿಸದೆ ಕಂಬಿದಾರಿ
ಬಿಸಿಲ ಝಳದಲಿ ಇಮಿತು ಕಂಪನವ ತೋರಿ,
ಕರ್ಕಶದ ಕಟುನೀಲ ಕಾಂತಿಯನು ಕಣ್ಗೆ ಕಾರಿ,
ಹರಿಯುತಿದೆ ರೈಲುದಾರಿ![೩೭]

ಪ್ರಾದೇಶಿಕ ಬದುಕಿನ ವಲಯಗಳಿಗೆ ಪ್ರವೇಶಿಸುತ್ತಿರುವ ಯಂತ್ರಸಂಸ್ಕೃತಿ, ಇಲ್ಲಿನ ಭೌತ ಮತ್ತು ಜೀವ ಜಗತ್ತುಗಳ ವಿಸ್ಮಯಕ್ಕೆ ಕಾರಣವಾಗುತ್ತಿರುವಂತೆಯೇ, ಅದು ತರುವ ಮಾನಸಿಕವಾದ ಯಾತನೆ ಈ ಮೇಲಿನ ಸಾಲುಗಳಲ್ಲಿ ಪ್ರಕಟವಾಗುತ್ತದೆ. ರೈಲಿನ ಆಗಮನ ಹಸುವಿನಂಥ ಪ್ರಾಣಿಯ ಗಮನವನ್ನು ಸೆಳೆಯುವುದರೊಂದಿಗೆ ತನ್ನ ಆಕಾರ, ಆರ್ಭಟಗಳಿಂದ ತನ್ನೆಡೆಗೆ ಎಲ್ಲರ ಗಮನ ಸೆಳೆಯುತ್ತಲೇ, ಯಾರ, ಯಾವುದರ ಚಿಂತೆಯೂ ತನಗಿಲ್ಲದಂತೆ, ರೈಲು ಓಡುವ ಕ್ರಿಯೆಯಲ್ಲಿ ಸಾಮ್ರಾಜ್ಯಶಾಹಿಯ ತಟಸ್ಥತೆಯನ್ನು ಧ್ವನಿಸುತ್ತದೆ.

ಬಯಲ ನಿದ್ದೆಯು ಕಂಡ ಕೆಟ್ಟ ಕನಸಾಯ್ತು!
ಹಾ! ಕತ್ತರಿಸಿದೊಂದು ನರವೆ ಸಾಕು
ನೆತ್ತರನು ಶೋಷಿಸಲು! ಇನ್ನೇನು ಬೇಕು?
ಈ ಕಬ್ಬಿಣದ ಕಂಬಿದಾರಿ
ಅಲ್ಲಿ ಮೇಯುವ ದನದ ರಕ್ತವನು ದಿನದಿನವು ಹೀರಿ
ಕೊಂಡೊಯ್ಯು ನಾಗರಿಕತೆಯ ನಾಡಿ,
ಎನಲು ಎಂಬುವರಾರು? ಆದರೂ ನಂಬದಿರಬೇಡಿ![೩೮]

ಹೊಸ ವಸ್ತುವಿನ ಪ್ರವೇಶ ಹೊಸದೊಂದು ಮನಸ್ಥಿತಿಯ ಹೇರುವಿಕೆಯಂತೆ ಶೋಷಣೆಯ ಸಂಕೇತವೂ ಆಗಿ, ಇಲ್ಲಿ ರೈಲು ಓಡುವ ಕ್ರಿಯೆಯಲ್ಲಿ ಪ್ರಕಟವಾಗುತ್ತದೆ. ಶೋಷಣೆಯ ಮುಖಗಳು ಹೇಗಿರುತ್ತವೆಂಬುದನ್ನು "ಹಾ! ಕತ್ತರಿಸಿದೊಂದು ನರವೆ ಸಾಕು ನೆತ್ತರನು ಶೋಷಿಸಲು" ಎನ್ನುವ ಪ್ರತಿಮೆ ಅತ್ಯಂತ ಮಾರ್ಮಿಕವಾಗಿ ಅದರ ಪರಿಣಾಮವನ್ನು ಪ್ರಕಟಿಸುತ್ತದೆ. ಒಂದು ಸಣ್ಣ ಅಂಶವೂ ಹೇಗೆ ಶೋಷಣೆಗೆ ಗುರಿಪಡಿಸುತ್ತದೆಂಬುದನ್ನು ಧ್ವನಿಸುತ್ತದೆ. ರೈಲು ಪ್ರಾದೇಶಿಕ ಸಂಪತ್ತನ್ನು ಬರಿದು ಮಾಡುವ, ವಸಾಹತು ಸಂಸ್ಕೃತಿಯನ್ನ ಭಾರತದಲ್ಲಿ ವ್ಯಾಪಿಸುವಂತೆ ಮಾಡುವ ತಂತ್ರಗಾರಿಕೆಯಾಗಿ ಮೈಪಡೆಯುವುದು ತಲ್ಲಣಗಳಿಗೆ ಗುರಿಮಾಡುತ್ತದೆ.

'ರೈಲ್ ಗಾಡಿಯ ಕಿಟಕಿ' ಕವಿತೆಯಲ್ಲಿ, ರೈಲು ಕಿಟಕಿಯ ಮೂಲಕ ಲೋಕವನ್ನು ನೋಡುತ್ತಿರುವ ನಿರೂಪಕ ಕಾಣಿಸಿಕೊಳ್ಳುತ್ತಾನೆ. ವಸಾಹತು ಸಂಸ್ಕೃತಿಯು ನಮ್ಮ ಭಾಗವಾಗಿ ಹೋಗಿರುವ, ಭಾಗವಾಗುತ್ತಿರುವ, ಅಂಥ ಸಂಸ್ಕೃತಿಯ ಸಂಘರ್ಷದಿಂದಲೆ ಎದುರಾಗಿರುವ ಒಳನೋಟಗಳ ಮಾದರಿಯನ್ನು ಈ ಕವಿತೆ ಧ್ವನಿಸುತ್ತದೆ. ಯಂತ್ರ ನಾಗರಿಕತೆಯಾಗಲಿ, ರಷ್ಯಾ ಕ್ರಾಂತಿಯಾಗಲಿ ರೈತನ ಬಡತನ ಹೋಗಲಾಡಿಸಲು ನೆರವಾಗಲಿಲ್ಲವೆಂಬ ಆಶಯವನ್ನು ಪ್ರಕಟಿಸುತ್ತದೆ ಈ ಕವಿತೆ. ಅಂತೆಯೆ 'ನವ ನಾಗರಿಕತೆಯ ಉಪಮಾನದಂತಿರುವ ರೈಲು ಕೂಡ ಅವನ ಶೋಷಣೆಯ ನೆಲೆಯಾಗುವ ಧ್ವನಿ ಇಲ್ಲಿಯದಾಗಿದೆ.

## ಅಡಿಟಿಪ್ಪಣಿ

೧. ಸುಬ್ಬಣ್ಣ ಕೆ.ವಿ. : *ಕುವೆಂಪುಗೆ ಪುಟ್ಟ ಕನ್ನಡಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫, ಪುಟ-೧೭

೨. ಶಂಕರ ಮೊಕಾಶಿ ಪುಣೇಕರ : *ಸಾಹಿತ್ಯ ಮತ್ತು ಅಭಿರುಚಿ*, ಮಿತ್ರ ಪ್ರಕಾಶನ, ಮೈಸೂರು, ೧೯೮೧, ಪುಟ-೧೦

೩. ಕುವೆಂಪು : *ಕೃತ್ತಿಕೆ*, ಉದಯರವಿ ಪ್ರಕಾಶನ, ಮೈಸೂರು, ೧೯೭೧, ಪುಟ-೬೩

೪. ಕುವೆಂಪು : *ಸಾಹಿತ್ಯ ಪ್ರಚಾರ*, ಉದಯರವಿ ಪ್ರಕಾಶನ, ಮೈಸೂರು, ೧೯೭೨, ಪುಟ-೧೩

೫. ಅದೇ : *ಕೃತ್ತಿಕೆ*, ಪುಟ-೩೫

೬. ಕುವೆಂಪು : *ಪಾಂಚಜನ್ಯ*, ಕಾವ್ಯಾಲಯ ಮೈಸೂರು, ೧೯೯೪, ಪುಟ-೩೭

೭. ಕುವೆಂಪು : *ಕೃತ್ತಿಕೆ*, ಉದಯರವಿ ಪ್ರಕಾಶನ, ಮೈಸೂರು, ೧೯೭೧, ಪುಟ-೫೬

೮. ಕುವೆಂಪು : *ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ*, ಉದಯರವಿ ಪ್ರಕಾಶನ,ಮೈಸೂರು, ೧೯೫೪, ಪುಟ-೧೩,೧೪

೯. ಕುವೆಂಪು : *ಸಾಹಿತ್ಯ ಪ್ರಚಾರ*, ಉದಯ ರವಿ ಪ್ರಕಾಶನ, ೧೯೭೨, ಪುಟ-೫೩

೧೦. ಕುವೆಂಪು : *ಪಾಂಚಜನ್ಯ*, ಕಾವ್ಯಾಲಯ, ಮೈಸೂರು ೧೯೯೪, ಪುಟ-೮

೧೧. ಅದೇ ಪುಟ-೪೪

೧೨. ಕುವೆಂಪು : *ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ*, ಉದಯರವಿ ಪ್ರಕಾಶನ, ಮೈಸೂರು, ಪುಟ-೨೮-೩೦

೧೩. ಕುವೆಂಪು: *ಕೊಳಲು* ಉದಯರವಿ ಪ್ರಕಾಶನ, ಮೈಸೂರು, ೧೯೭೦, ಪುಟ-೪೩

೧೪. ಅದೆ ಪುಟ-೨೯-೩೦

೧೫. ಕುವೆಂಪು : *ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ*, ಉದಯರವಿ ಪ್ರಕಾಶನ, ಮೈಸೂರು, ಪುಟ-೧೫

೧೬. ಕುವೆಂಪು : *ನವಿಲು*, ಉದಯರವಿ ಪ್ರಕಾಶನ, ಮೈಸೂರು, ೧೯೯೫, ಪುಟ-೬

೧೭. ಅದೇ, ಪುಟ--೧೮

೧೮. ಅದೇ, ಪುಟ-೪೭

೧೯. ಕುವೆಂಪು : *ಮಲೆಗಳಲ್ಲಿ ಮದುಮಗಳು* (ಓದುಗರಿಗೆ), ಉದಯರವಿ ಪ್ರಕಾಶನ. ಮೈಸೂರು, ೧೯೯೨

೨೦. ನಾಗರಾಜ, ಡಿ.ಆರ್. :*ಶಕ್ತಿ-ಶಾರದೆಯ ಮೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೩,ಪುಟ-೬೮

೨೧. ಕುವೆಂಪು : *ಪಕ್ಷಿಕಾಶಿ* ಉದಯರವಿ ಪ್ರಕಾಶನ, ಮೈಸೂರು,೧೯೭೦, ಪುಟ-೫೬- ೫೭

೨೨. ಅದೇ, ಪುಟ-೪೭

೨೩. ಅದೇ, ಪುಟ-೨೨

೨೪. ಕುವೆಂಪು : *ಮಹಾದರ್ಶನ ಮತ್ತು ಪ್ರಾಯಶ್ಚಿತ್ತ*, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೫, ಪುಟ-೨೫

೨೫. ಅದೇ, ಪುಟ-೩೪-೩೫

೨೬. ಅದೇ, ಪುಟ-೩೫-೩೬

೨೭. ಜವರೇಗೌಡ. ದೇ. : ಅದೇ, ಪುಟ-೯

೨೮. ಕುವೆಂಪು: *ಕೊಳಲು* ಉದಯರವಿ ಪ್ರಕಾಶನ, ಮೈಸೂರು, ೧೯೭೦, ಪುಟ-೩೯

೨೯. ಗಾಂಧೀ,ಮೋ.ಕ.: *ಆತ್ಮ ಕಥೆ (ಸಂಕ್ಷಿಪ್ತ) ಮತ್ತು ಹಿಂದ್ ಸ್ವರಾಜ್ಯ*, (ಅನು) ಸಿದ್ದವನಹಳ್ಳಿ ಕೃಷ್ಣಶರ್ಮ, ಗಾಂಧೀ ಸ್ಮಾರಕ ನಿಧಿ, ೧೯೫೮, ಪುಟ-೧-೭೩

೩೦. ಕುವೆಂಪು,: *ಕನ್ನಡ ಡಿಂಡಿಮ*, ಸುರುಚಿ ಪ್ರಕಾಶನ, ಮೈಸೂರು, ೧೯೭೦, ಪುಟ-೩೦-೩೧

೩೧. ಅದೇ, ಪುಟ-೫೩

೩೨. ಅದೇ, ಪುಟ-೧೦-೧೧

೩೩. ಗೂಗಿ ವಾ ಥಿಯಾಂಗೊ: *ವಸಾಹತು ಪ್ರಜ್ಞೆ ಮತ್ತು ವಿವೇಚನೆ* (ಅನು) ರಹಮತ್ ತರೀಕೆರೆ, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ೧೯೯೬,ಪುಟ-೩೧

೩೪. ಕುವೆಂಪು, *ಹಾಳೂರು*, ಉದಯರವಿ ಪ್ರಕಾಶನ, ಮೈಸೂರು, ೧೯೬೨, ಪುಟ-೧೮,೧೯

೩೫. ಕುವೆಂಪು, *ಕೋಗಿಲೆ ಮತ್ತು ಸೋವಿಯತ್ ರಷ್ಯಾ*, ಉದಯರವಿ ಪ್ರಕಾಶನ, ಮೈಸೂರು, ೧೯೬೪, ಪುಟ-೭೮

೩೬. ಅದೇ, ಪುಟ-೫೩

೩೭. ಅದೇ, ಪುಟ-೫೩

೩೮. ಅದೇ, ಪುಟ-೫೫

## ಅಧ್ಯಾಯ : ಆರು

## ಅಡಿಗರ ಕಾವ್ಯ : ಸಮಕಾಲೀನ ರಾಜಕೀಯದ ನೆಲೆಗಳು

ಬೇಂದ್ರೆ ಮತ್ತು ಕುವೆಂಪು ಅವರ ಅನಂತರ ಮಹತ್ವದ ಕವಿಗಳಲ್ಲಿ ಗೋಪಾಲಕೃಷ್ಣ ಅಡಿಗರು ಪ್ರಮುಖರು. ನವ್ಯ ಸಾಹಿತ್ಯದ ಸಂದರ್ಭದಲ್ಲಿ ಸಾರ್ಥಕಕಾವ್ಯವನ್ನು ಬರೆದ ಕವಿಗಳಲ್ಲಿ ಅಡಿಗರ ಕಾವ್ಯಕ್ಕೆ ವಿಶೇಷ ಮಹತ್ವವಿದೆ. ಸ್ವಾತಂತ್ರ್ಯಪೂರ್ವ ಮತ್ತು ಅನಂತರದ ಭಾರತೀಯ ಬದುಕಿನ ದುರಂತ, ವಿಘಟನೆ, ತಳಮಳ, ದ್ವಂದ್ವಗಳನ್ನು ಅಡಿಗರ ಕಾವ್ಯ ಅಭಿವ್ಯಕ್ತಿಸಿದೆ. ವ್ಯಕ್ತಿ ಮತ್ತು ಸಮವೃಷ್ಟಿಯ ನೆಲೆಗಳ ಬದುಕಿನ ಸಂಕೀರ್ಣತೆ ಅವರ ಕಾವ್ಯದಲ್ಲಿ ಪರಿಶೀಲನೆಗೆ ಒಳಗಾಗಿದೆ. ಅಂದರೆ ನವವಸಾಹತುಶಾಹಿ ಸಂಸ್ಕೃತಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳು ನಿರ್ಮಿಸಿದ ಕ್ರೌರ್ಯ, ತಲ್ಲಣಗಳು ಅಡಿಗರ ಕಾವ್ಯದ ಉದ್ದಕ್ಕೂ ಮತ್ತೆ ಮತ್ತೆ ಚಿಂತಿತವಾಗುತ್ತದೆ. ಸ್ವಾತಂತ್ರ್ಯಾನಂತರ ದೇಶದ ರಾಜಕಾರಣದಿಂದ ಸಾಮಾಜಿಕ ನೆಲೆಗಳನ್ನು ಭಗ್ನಗೊಳಿಸುತ್ತಿರುವುದರ ಬಗೆಗೆ ಅಡಿಗರ ಕಾವ್ಯ ತೀವ್ರವಾದ ವಿರೋಧ ಹಾಗೂ ವ್ಯಂಗ್ಯಗಳಿಂದ ಮುಖಾಮುಖಿಯಾಗುತ್ತದೆ. ಹಾಗಾಗಿಯೂ ಅತ್ಯಂತ ಆಪ್ತವಾದ ವೈಯಕ್ತಿಕವಾದ ಬದುಕಿನ ಅನುಭವ, ದುಃಖ - ದುಮ್ಮಾನಗಳು ಸಾರ್ವಕಾಲಿಕವಾಗುವುದು ಅವರ ಕಾವ್ಯದ ವೈಶಿಷ್ಟ್ಯ. ಮನುಷ್ಯನ ಅತ್ಯಂತ ಖಾಸಗಿ ಹಾಗೂ ಮೂಲಭೂತ ಸಮಸ್ಯೆಗಳನ್ನು ಅವರ ಕಾವ್ಯ ನಿರಂತರವಾಗಿ ಅನ್ವೇಷಿಸುತ್ತದೆ. ಈ ಚಿಂತನೆ ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತ, ವಿಮರ್ಶೆ- ವಿಚಕ್ಷಣತೆಗಳಿಗೆ ಗುರಿಯಾಗುತ್ತ ಬೆಳೆಯುತ್ತದೆ. ''ಭಾವತರಂಗ'', ''ಕಟ್ಟುವೆವು ನಾವು'' ಸಂಕಲನಗಳ ಉತ್ಸಾಹ, ಸಂಭ್ರಮ, ವಿಷಾದಗಳು ಮತ್ತೂ ಬೇರೆಯದೇ ಆದ ಆಯಾಮಗಳಲ್ಲಿ ಅನಂತರದ ಕಾವ್ಯದಲ್ಲಿ ಅಭಿವ್ಯಕ್ತಗೊಂಡಿದೆ.

ಅಡಿಗರ ಕಾವ್ಯವು ಸಮಕಾಲೀನ ರಾಜಕೀಯ ಧೋರಣೆಗಳಿಗೆ ನೇರವಾಗಿ ಪ್ರತಿಕ್ರಿಯಿಸುತ್ತ ಬೆಳೆದ ಕಾವ್ಯ. ಹೀಗಾಗಿ ಅವರ ಕಾವ್ಯ ಒಂದು ಬಗೆಯಲ್ಲಿ ಸಾಂಸ್ಕೃತಿಕ ವ್ಯಾಖ್ಯೆ. ಸಮಕಾಲೀನ ರಾಜಕೀಯ ಹಾಗೂ ಸಾಂಸ್ಕೃತಿಕ ರಾಜಕಾರಣದ

ವಿಮರ್ಶೆಗೆ ಅವರ ಕಾವ್ಯ ಎದುರಾಗುವುದರಿಂದ ಹಲವು ವಾದ-ವಿವಾದಗಳಿಗೆ ಕಾರಣವಾಗುತ್ತ ಸ್ವಾತಂತ್ರ್ಯಾನಂತರದ ಸಮಷ್ಟಿ ಬದುಕಿನ ತಲ್ಲಣಗಳನ್ನು ನಿರಂತರವಾಗಿ ಹಿಡಿದಿಡುತ್ತದೆ. ಸ್ವಾತಂತ್ರ್ಯಾನಂತರದ ರಾಜಕಾರಣದ ಸ್ವೇಚ್ಛೆಯ ಧೋರಣೆಗಳು ಹಾಗೂ ನವವಸಾಹತುಶಾಹಿಯ ಕಾಣದ ಕೈಗಳ ಆಕ್ರಮಣಶೀಲತೆಯನ್ನು ಅಡಿಗರ ಸಂವೇದನೆ ಕಾವ್ಯಕ್ಕೆ ಸಾಮಗ್ರಿಯಾಗಿಸಿಕೊಳ್ಳುವುದರಿಂದ ಭಾರತದಂಥ ತೃತಿಯ ಜಗತ್ತಿನ ರಾಷ್ಟ್ರಗಳ ಸ್ಥಿತಿ-ಗತಿಗಳ ಚಿಂತನೆ ಇಲ್ಲಿ ಕ್ರೀಯಾಶೀಲವಾಗುತ್ತದೆ. ನವವಸಾಹತುಶಾಹಿ ಸಂಸ್ಕೃತಿಯು ನಮ್ಮಂಥ ರಾಷ್ಟ್ರಗಳ ಮೇಲೆ ಎಸಗಿದ ಆಕ್ರಮಣಗಳಿಗೆ, ಅದರ ಕರಾಳ ಅಮೂರ್ತ ನೆಲೆಗಳಿಗೆ ಮೂರ್ತ ರೂಪುರೇಷೆಯೊಂದನ್ನು ಕಟ್ಟಿಕೊಡಲು ಪ್ರಯತ್ನಿಸುತ್ತದೆ.

ಆಧುನಿಕ ರಾಜಕೀಯ ವ್ಯವಸ್ಥೆಗಳ, ಅಂದರೆ ಸಮಾಜವಾದಿ, ಕಮ್ಯೂನಿಸ್ಟ್ ಹಾಗೂ ಪ್ರಜಾಪ್ರಭುತ್ವದಂಥ ವ್ಯವಸ್ಥೆಗಳೊಳಗಿನ ದಮನಕಾರಿ ನೆಲೆಗಳನ್ನು ಅಡಿಗರ ಕಾವ್ಯ ಒಮ್ಮೆಗೆ ವ್ಯಂಗ್ಯ- ವಿಡಂಬನೆಗಳಿಗೆ ಗುರಿಪಡಿಸುತ್ತದೆ. ಅಂಥ ವ್ಯವಸ್ಥೆಯ ಆಕ್ರಮಣಕಾರಿ ನೆಲೆಗಳಿಗೆ ಜೊತೆ ಜೊತೆಯಲ್ಲಿಯೇ ಪ್ರತಿರೋಧವನ್ನು ಒಡ್ಡುವುದು ಅಡಿಗರ ಕಾವ್ಯದ ಲಕ್ಷಣವೆನ್ನಬಹುದು. ಹಾಗೆಯೇ ಇವರ ಕಾವ್ಯ ಭೂತ ಹಾಗೂ ವರ್ತಮಾನಗಳ, ಅಥವಾ ಪರಂಪರೆ ಮತ್ತು ಸಮಕಾಲೀನ ಪ್ರಶ್ನೆಗಳ ಸಂಕೀರ್ಣತೆಗಳನ್ನು ವಿಶ್ಲೇಷಿಸುವುದರೊಂದಿಗೆ ಸಾಂಸ್ಕೃತಿಕ ಚರಿತ್ರೆಯ ಗತಿಶೀಲತೆಯನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ. ಇಂಥ ಸಾಂಸ್ಕೃತಿಕ ಚರಿತ್ರೆಯ ದಾಖಲೆಗಳಲ್ಲಿಯೆ ನವಸಂಸ್ಕೃತಿಗೆ ಅಡಿಗರ ಸಂವೇದನೆ ತೋರಿದ ಪ್ರತಿಕ್ರಿಯೆ ಹಾಗೂ ನಡೆಸಿದ ಅನುಸಂಧಾನಗಳನ್ನು ಶೋಧಿಸಿಕೊಳ್ಳುವುದು ಈ ಪ್ರಬಂಧದ ಮುಖ್ಯ ಉದ್ದೇಶ.

ನವವಸಾಹತು ಸಂಸ್ಕೃತಿಯು ಭಾರತದಲ್ಲಿ ನಿರ್ಮಾಣ ಮಾಡಿದ ಸಾಂಸ್ಕೃತಿಕ ದ್ವಂದ್ವ ಹಾಗೂ ಸಮಸ್ಯೆಗಳನ್ನು ಅಡಿಗರ ಕಾವ್ಯ ವಿಶ್ಲೇಷಿಸುವ ಪ್ರಕ್ರಿಯೆಗಳಲ್ಲಿ ಆ ಸಂಸ್ಕೃತಿಯ ನೆಲೆಗಳ ಬಗೆಗೆ ಅವರ ಕಾವ್ಯ ತೋರಿದ ಪ್ರತಿಕ್ರಿಯೆ ಯಾವ ಬಗೆಯದೆಂಬುದನ್ನು ಗುರುತಿಸಿಕೊಳ್ಳಬಹುದು. ಅನ್ಯ ಸಂಸ್ಕೃತಿಯ ಪ್ರಭಾವ - ಪರಿಣಾಮಗಳನ್ನು ಭಾರತೀಯ ಸಂಸ್ಕೃತಿ ಅನುಕರಿಸಿದ, ಅನುಸರಿಸಿದ ಬಗೆಯನ್ನು ಅಡಿಗರ ಕಾವ್ಯ ವ್ಯಂಗ್ಯಾತ್ಮಕ ಧೋರಣೆಯಿಂದ ನೋಡುತ್ತದೆ. ಸ್ಥಳೀಯ ಸಂಸ್ಕೃತಿಯು ಪರಕೀಯ ಸಂಸ್ಕೃತಿಯನ್ನು ತನ್ನದಾಗಿಸಿಕೊಳ್ಳಲು ಹೆಣಗಿದ ದ್ವಂದ್ವ ಸಂದಿಗ್ಧತೆಗಳು ಹಾಗೂ ಅಂಥ ಸಂಧಿಗ್ಧತೆಗಳನ್ನು ಇಲ್ಲಿನ ಬದುಕು ಅತಂತ್ರವಾದ ಸ್ಥಿತಿಗತಿಗಳನ್ನು ಪ್ರಕಟಿಸುತ್ತ ವಸಾಹತು ಸಂಸ್ಕೃತಿಯ ಬಗೆಗೆ ಅವರು ತಳೆದ ಧೋರಣೆ ಯಾವ ಬಗೆಯದೆಂಬುದನ್ನು ಕಾಣಿಸುತ್ತದೆ. ಅನ್ಯ ಸಂಸ್ಕೃತಿಯೊಂದನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಸಂದರ್ಭಗಳಲ್ಲಿ ಪರಕೀಯ ಸಂಸ್ಕೃತಿಯು ಉಂಟುಮಾಡಿದ ಸಂಕಟ, ನೋವು, ಆಘಾತ ಹಾಗೂ ತಲ್ಲಣಗಳನ್ನು ವಿಷಾದದ ನೆಲೆಗಳಲ್ಲಿ ಹಿಡಿದಿಡುತ್ತದೆ. ಈ ಬಗೆಗಿನ ಭಾರತೀಯ ಮನಸ್ಸನ್ನು ' ಇಂದು ನಮ್ಮೀ ನಾಡು' 'ಬತ್ತಲಾರದ ಗಂಗೆ' ಮೊದಲಾದ ಕವನಗಳಲ್ಲಿ ವಿಡಂಬನೆಗೆ ಗುರಿಪಡಿಸುವುದರ ಮೂಲಕ ಗಂಭೀರವಾಗಿ ಸ್ಥಳೀಯ ಸಂಸ್ಕೃತಿಯ ಅನುಕರಣೆಯ ನೆಲೆಗಳನ್ನು ಅಡಿಗರ ಕಾವ್ಯ ಗಂಭೀರವಾಗಿ ವಿಮರ್ಶಿಸುತ್ತದೆ.

ಅಡಿಗರ ಸ್ವಾತಂತ್ರ್ಯಪೂರ್ವದ ಕಾವ್ಯ ಬೇಂದ್ರೆಯವರ ಮಾತಿನಲ್ಲಿ ಹೇಳುವುದಾದರೆ '.... ಅನುಕೂಲ ಪ್ರತಿಕೂಲಗಳ ಬಂಡೆಗಳೊಳಗಿಂದ ಹಾಯ್ದು ಶ್ರೀ ಅಡಿಗರ ಭಾವತರಂಗಿಣೆ ಕನ್ನಡದ ಹೃದಯಸಮುದ್ರದತ್ತ ಹೊರಟಿದೆ....... ವಿಧಿಗೆ ಇದಿರಾಗುವ ಅನಿರ್ವಿಣ್ಣ ಉತ್ಸಾಹವಿದೆ. ಹೊಸಬಾಳಿನ ಅನಂತ ಕ್ಷಿತಿಜ ಅವರ ಕಣ್ಣಿನ ಕದಿರಿಗೆ ದುರ್ಬೀನಿನ ಹರಿತವನ್ನು ಕೊಟ್ಟಿದೆ. ಅದರಿಂದ ಅವರ ಏಳು ಬೀಳಿನ

ತೇಂಕಾಟ ಇಂದಿನ ಜೀವನದ ಛಂದವಾಗಿ ಅಂದವಾಗಿ ಸಹೃದಯರಿಗೆ ಉತ್ಸುಕತೆಯನ್ನೂ ಉತ್ಸಾಹವನ್ನೂ ಸಮಾನವಾಗಿ ತಂದುಕೊಡುವುದು' ಬೇಂದ್ರೆಯವರ ಈ ಮಾತುಗಳು "ಭಾವತರಂಗ"ದ ಮನೋಸ್ಥಿತಿಯನ್ನು ಸಮರ್ಥವಾಗಿ ತೆರೆದಿಡುತ್ತವೆ. ವೈಯಕ್ತಿಕ ಮತ್ತು ಸಾಮಾಜಿಕ ಬಂಧನಗಳಿಂದ ಬಿಡುಗಡೆ ಪಡೆದು ತನ್ನ ಅಸ್ತಿತ್ವವನ್ನು ಹುಡುಕಿಕೊಳ್ಳುವ ಪ್ರಜ್ಞೆಯೊಂದು ಸ್ವಾತಂತ್ರ್ಯಪೂರ್ವದ ಕವನಗಳಲ್ಲಿ ಮೂಡುತ್ತಿರುವುದು ಅವರ ಕಾವ್ಯಾಧ್ಯಯನದಿಂದ ತಿಳಿದು ಬರುವ ವಿಶಿಷ್ಟ ಸಂಗತಿಯಾಗಿದೆ.

## ೧. ತನ್ನತನದ ಹುಡುಕಾಟ

"ಭಾವತರಂಗ"ದ 'ನನ್ನನುಡಿ', 'ಒಡಲೆಳಸುತಿಹುದು ಜೀವ', ನಿನಗೆ ನೀನೆ !' , 'ಒಳತೋಟಿ' ಯಂಥ ಕವಿತೆಗಳಲ್ಲಿ ತನ್ನ "ಮೀಸಲು ನಿನದ?"ವನ್ನು ಕಂಡುಕೊಳ್ಳಲು ತುಡಿಯುತ್ತಿರುವ ಪ್ರಜ್ಞೆ ಅನಂತರದಲ್ಲಿ ಮತ್ತೂ ಗಾಢವಾಗಿ ಬೆಳೆಯುತ್ತದೆ.

ಅನ್ಯರೊರೆದುದನೆ , ಬರೆದುದನೆ ನಾ ಬರೆಬರೆದು
ಬಿನ್ನಗಾಗಿದೆ ಮನವು ; ಬಗೆಯೊಳಗನೇ ತೆರೆದು
ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ
ಪನ್ನತಿಕೆ ಬರುವನಕ ನನ್ನ ಬಾಳಿದು ನರಕ[೧]

ಈ ಮೇಲಿನ 'ನನ್ನ ನುಡಿ' ಕವಿತೆಯ ಸಾಲುಗಳಲ್ಲಿ ಪರಂಪರೆಯ ನೆರಳು, ಪ್ರೇರಣೆ, ಪ್ರಭಾವ, ಅನುಕರಣೆಗಳಿಂದ ಬಿಡುಗಡೆ ಹೊಂದಿ, ತನ್ನತನವೊಂದನ್ನು ಕಟ್ಟಿಕೊಳ್ಳಲು ಎಚ್ಚೆತ್ತ ಪ್ರಜ್ಞೆಯೊಂದು ರೂಹುಪಡೆಯುತ್ತಿರುವುದರ ಸೂಚನೆಗಳು ಗಾಢವಾಗಿಯೇ ಕಾಣಿಸುತ್ತವೆ. ಇಂಥ ತನ್ನತನವೊಂದನ್ನು ಕಂಡುಕೊಳ್ಳಲು ಹೆಣಗುತ್ತಿರುವ ಪ್ರಜ್ಞೆಗೆ ಅಡ್ಡಿ - ಆತಂಕಗಳನ್ನು ಎಸಗುವ ವಿಧಿಗೆ ಸವಾಲೊಡ್ಡುತ್ತಲೆ ಈ ಪ್ರಜ್ಞೆ ಮೈ ಪಡೆಯುತ್ತದೆ. ಬಾಳುವೆಯ ಹೊಂಗನಸುಗಳನ್ನು ತನ್ನ ದಾಳಿಯಿಂದ ಹಾಳುಮಾಡಿದ ವಿಧಿಗೆ ಈ ಪ್ರಜ್ಞೆ ಹೋರಾಟಕ್ಕೆ ಆಹ್ವಾನಿಸುತ್ತದೆ.

ಎಲೆಲೆ ವಿಧಿ ! ನೋಡಿಲ್ಲಿ ನಿಂತಿರುವೆನೆದೆಸೆಟೆದು ;
ನಿನಗೆ ಧುರವೀಳ್ಯವಂ ಕೊಡುವೆನಿದೆಕೋ ;
ಸೆಣಸು, ಹೋರಾಡೆನ್ನ ಕುನಿಸು ; ತೊತ್ತಳದುಳಿದು
ಕೊನೆಗಲ್ಪತನುವಿದಂ ನೀಂ ಕಳಚಿಕೋ![೨]

ಈ ಬಗೆಯ ಹೋರಾಟದಿಂದಲೆ ತನ್ನ ಅಲ್ಪತ್ವವನ್ನು ಕಳಚಿಕೊಳ್ಳುವ ಕಡೆಗೆ ಹೊಸಪ್ರಜ್ಞೆಯೊಂದು ತುಡಿಯುತ್ತದೆ. ಇಂಥ ತುಡಿತ ಹೊಸಹಾದಿಯನ್ನು, ಹೊಸಬಾಳನ್ನು ಕಂಡುಕೊಳ್ಳಲು ಯಾವುದೇ ಹಿಂಜರಿಕೆಯಿಲ್ಲದೆ ಮುಂದೆ ಸಾಗುವ ಆಶಯಗಳನ್ನು ಅಡಿಗರ ಸ್ವಾತಂತ್ರ್ಯಪೂರ್ವದ ಕವನಗಳಲ್ಲಿ ಕಾಣುತ್ತೇವೆ. 'ಕಲ್ಲಾಗು, ಕಲ್ಲಾಗು!' 'ನಿನಗೆ ನೀನೇ' 'ಒಡಲೆಳಸುತಿಹುದು ಜೀವ', ಜಗವೆಲ್ಲ ಸುಳ್ಳು', - ಇಂಥ ಕವಿತೆಗಳಲ್ಲಿ ಹೊಸಪ್ರಜ್ಞೆಯೊಂದು ವ್ಯಕ್ತಿವಿಶಿಷ್ಟತೆಯೊಂದನ್ನು

ಗಟ್ಟಿಗೊಳಿಸಿಕೊಳ್ಳುವ ಕಡೆಗೆ ತುಡಿಯುವ ಸೂಚನೆಗಳು ದಟ್ಟವಾಗಿವೆ. ಬದುಕಿಗೆ ಎದುರಾಗುವ ಎಲ್ಲ ಬಗೆಯ ಆಸೆ-ಆಮಿಷಗಳಿಗೆ, ವಿಧಿಯ ಮೋಹ, ಮಾಯೆ, ಆಘಾತಗಳಿಗೆ ಶರಣಾಗದೆ ನಿಲ್ಲುವ ಶಕ್ತಿಯನ್ನು ವೃದ್ಧಿಸಿಕೊಳ್ಳಬೇಕೆಂಬ ಆಶಯ 'ಕಲ್ಲಾಗು, ಕಲ್ಲಾಗು !' ಕವನದ್ದಾಗಿದೆ.

ಮೆಲುಪು ತಣುಪುಗಳ ಸುಖಸಂಭ್ರಮದ ಬಾಳುವೆಯ
ಬಯಕೆಯನು ಬಿಸುಡಯ್ಯ ನೀನು ದೂರ!

ಹುಲ್ಲುಗಿಡಗಳಿಗಿಲ್ಲ ಇಲ್ಲಿ ತಾಣ ;
ಬಳ್ಳಿ ಹೂಗಳ ಬಾಳಿಗಿಲ್ಲ ಮಾನ ;
ಕಲ್ಲಿಗೊಂದೇ ಇಲ್ಲಿ ಸ್ಥಾನ ಮಾನ!
- - - - - - - - - - - - - - -
ತನುಮನವನುಕ್ಕಾಗಿ ಕಾಯಿಸುವ ದುರ್ದಮ್ಯ
ಶಕ್ತಿ; ಬಯಲಾಸೆಗಳ ಗುಣಿತವಲ್ಲ !
ಅದಕಾಗಿ ಕಲ್ಲಾಗು - ಕಠಿನ, ಕಠಿನ !
ಮಿದುವಾಗಬೇಡ; ಹಾ! ಜತನ, ಜತನ![೩]

ಆಕ್ರಮಣಶಾಲಿ ಶಕ್ತಿಗಳ ಮುಂದೆ ಹೂಬಳ್ಳಿಗಳಂಥ ಸೌಮ್ಯ ಹಾಗೂ ಕೋಮಲತೆಗಳಿಗೆ ಸೆಟೆದು ನಿಲ್ಲುವ ಶಕ್ತಯಿರುವುದಿಲ್ಲ. ಹಾಗಾಗಿ ಅಂಥ ಶಕ್ತಿಗಳಿಗೆ ಎದುರಾಗುವ ಕಲ್ಲಿಗೊಂದೇ ಇಲ್ಲಿ ಸ್ಥಾನ ಮತ್ತು ಮಾನ. ಎಲ್ಲ ಬಗೆಯ ಆತಂಕಗಳಿಗೂ ಹೆದರದೆ ಕೊನೆಯವರೆಗೂ ನಿಲ್ಲಬೇಕಾದರೆ ಕಾಠಿಣ್ಯಗೊಳ್ಳಬೇಕೆಂಬ ಕಾಣ್ಕೆ ಇಲ್ಲಿಯದಾಗಿದೆ. ವಿಧಿಯ ನಿಷ್ಠುರವಾದ ರಾಜ್ಯಭಾರದಲ್ಲಿ ಮೃದುತೆ, ಬಲಹೀನತೆಗೆ ಜಾಗವಿಲ್ಲ. ಅಂದರೆ ವ್ಯಕ್ತಿಯ ವೈಯಕ್ತಿಕ ವಿಕಸನಕ್ಕೆ ಆತಂಕಕಾರಿಯಾಗುವ ಶಕ್ತಿಗಳಿಗೆ ಮುಖಾಮುಖಿಯಾಗಲು ಕಲ್ಲಾಗಬೇಕೆಂಬ ಕಾಣ್ಕೆಯನ್ನು ಇಲ್ಲಿ ಕಾಣಿಸಿದೆ. 'ಹುಲ್ಲಿಗಿಲ್ಲ, ಕಳ್ಳಿಗಿಲ್ಲ, ಹೂವಿಗೇಕೆ ಸೌಸವ ಎಂದು ಹಿಸುಕಬೇಡ ಅದನು' ಎನ್ನುವ 'ಸಮಾಜದ ಭೈರವ' ಕವಿತೆಯಲ್ಲಿನ ಧೋರಣೆ ಮತ್ತೂ ಬೇರೆಯದೇ ಆಗಿದೆ. ವ್ಯಕ್ತಿ ವಿಶಿಷ್ಟತೆಯ, ತನ್ನತನದ ಶೋಧದ ನೆಲೆಗಳು ಇಲ್ಲಿ ಮೈ ಪಡೆಯುತ್ತವೆ.

ಮರೆತುಬಿಡೆಲೊ ಮಗುವೆ, ನಿನ್ನ ಒಲವಿನಂಗಭಂಗವ ;
ತೆರೆಯೊ ಅಂತರಂಗವ
ಅಲ್ಲಿ ಹುಡುಕು ಕಳಚಿ ಬಿದ್ದ ನಿನ್ನ ಜೀವರತ್ನವ,
ತನ್ನತನದ ಸತ್ವವ!
ಸಿಕ್ಕಬಹುದು, ಸಿಕ್ಕದಿದ್ದರೇನು ? ಹುಡುಕಾಟವೇ,
ಅದರ ದಿವ್ಯಪಾಠವೇ
ಎದೆಗೆ ಬಲವ, ಮತಿಗೆ ಧೃತಿಯ, ಬಾಳಿಗೊಂದು ಶಾಂತಿಯ
ನೀಡಬಹುದು ಕಾಂತಿಯ

ಅಂತೆಯೇನೊ ಬಂದಿತೇನೊ ಇಂದು ನಿನ್ನ ಬಿಡುಗಡೆ ,
ಹಾಡು ಹಾಡು, ದಣಿಯದೆ ;
ಇಂದು ನನ್ನ ಬಿಡುಗಡೆ ![೪]

ಈ ಮೇಲಿನ 'ಬಿಡುಗಡೆಯ ಹಾಡು' ಕವಿತೆ ಒಲುಮೆ ಹಾಗೂ ತನ್ನತನಗಳಿಗೆ ಹೊಸತೊಂದು ವ್ಯಾಖ್ಯೆಯನ್ನು ಎದುರಾಗಿಸುತ್ತದೆ. ಒಲವಿನ ಭ್ರಮಾಲೋಕದಿಂದ ಬಿಡುಗಡೆ ಹೊಂದಿ, ತನ್ನ ಅಂತರಂಗದ ಸತ್ವ ಹಾಗೂ ಜೀವರತ್ನಗಳನ್ನು ನಿರಂತರವಾಗಿ ಹುಡುಕುವುದರಲ್ಲಿಯೆ ಬಿಡುಗಡೆಯನ್ನು ಕಾಣುವ ಪ್ರಜ್ಞೆ ಇಲ್ಲಿಯದು.

ಇಂಥದ್ದೆ ಧೋರಣೆ 'ಓಡಲೆಳಸತಿಹುದು ಜೀವ' ಕವಿತೆಯಲ್ಲಿಯೂ ಪ್ರಕಟವಾಗುತ್ತದೆ. 'ತನ್ನ ತನದ ರತ್ನವನ್ನು ಎಂತಾದರು ಪಡೆಯಬೇಕು' ಎಂಬ ಮಹದಾಸೆಯಿಂದ ನೆಲ-ಮುಗಿಲುಗಳ, ಕಾಡು- ಕಡಲುಗಳ ವಿಸ್ತಾರಕ್ಕೆ ಓಡಲೆಳಸುತಿರುವ ಪ್ರಜ್ಞೆ ಈ ಕವಿತೆಯದಾಗಿದೆ. ತನ್ನತನದ ಕೋಟೆಗೆ ಮುಕ್ಕಾಗಿಸುವ ಸ್ನೇಹ, ಮೋಹ, ನಗು, ಅಳು, ಕಲಹ, ಕಪಟ ಒಲವು, ಪ್ರೀತಿ - ಇವುಗಳಿಗೆ ತರ್ಪಣಗೈಯ್ಯಲು ಇಲ್ಲಿನ ಜೀವ ಪ್ರಯತ್ನಿಸುತ್ತಿದೆ. ತನ್ನ ಬಾಳ ಹೂವು ಬಾಡದಿರಲು ಹಾಗೂ ಮನದ ಆಸೆ, ಕನಸುಗಳು ತುಸುವಾದರೂ ನನಸಾಗಿ, ತನ್ನ ಮನದ ಗುಹಾಂತರಾಳದಲ್ಲಿರುವ ತನ್ನತನದ ರತ್ನಗಳನ್ನು ಪಡೆಯಬೇಕಾದರೆ ಎಲ್ಲ ಆಮಿಷಗಳಿಂದ, ಮೋಹಗಳಿಂದ ಅನಿವಾರ್ಯವಾಗಿ ದೂರಸರಿಯಬೇಕೆಂಬ ವಿಚಾರ ಇಲ್ಲಿಯದಾಗಿದೆ. ಡಾ.ಡಿ.ಆರ್.ನಾಗರಾಜ್ ಅವರು ಹೇಳುವಂತೆ 'ನಿನಗೆ ನೀನೇ!' ಕವನದ 'ಯಾವ ಬಾಹ್ಯಮೌಲ್ಯಗಳಿಗೂ ತಗುಲಿಕೊಳ್ಳದ ವ್ಯಕ್ತಿವಿಶಿಷ್ಟತೆ'ಯಲ್ಲಿಯೂ ಇದೇ ಬಗೆಯ ಆಶಯಗಳು ಮೈಪಡೆಯುತ್ತಿರುವುದನ್ನು ಕಾಣುತ್ತೇವೆ. ಅವರಿವರ ನಂಬಿಕೆಯ ಮಳಲರಾಶಿಯ ಮೇಲೆ ಬದುಕಿನ ಮನೆಯನ್ನು ಮುಗಿಲಿಗೆ ಎತ್ತರಿಸುವುದು ಹೇಗೆ ಅಸಾಧ್ಯ ಹಾಗೂ ದುರಂತ ಎಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತಲೆ, ತನ್ನತನವೊಂದನ್ನು ಕಟ್ಟಿಕೊಳ್ಳುವುದರೊಂದಿಗೆ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಬೇಕೆಂಬ ಆಶಯ ಈ ಕವಿತೆಯದಾಗಿದೆ.

ಕವಲುದಾರಿಯ ಮುಂದೆ ನೀ ಬಂದು ನಿಂದು
ಗುರಿ ಯಾವುದೆಂದು ಮುಂಗಾಣದಿರೆ ನೊಂದು
ಮನದ ಪೊರೆಪೊರೆಯೊಳುರಿಯೆದ್ದು ಭುಗಿಲಿಡಲು
ನಿನಗೆ ನೀನೇ, ಗೆಳೆಯ, ನಿನೆಗೆ ನೀನೇ !
- - - - - - - - - - - - - -
ಬಾಳ ಕಾಳೆಗದಲ್ಲಿ ಏಕಾಂಗಿ ವೀರ !
ನೇಹನಲುಮೆಗಳೆದೆಗೆ ಬರಿಯ ಆಹಾರ !
ನಿನ್ನ ಅಂತಃಸತ್ವಸಾರ ಆಧಾರ !
ಉಳಿದೆಲ್ಲವೂ ಬೆಸಕೆ ಬರದ ಸಿಂಗಾರ !
ನಿನ್ನಾತ್ಮದಿದಿರು ನೀ ನಿಂತಿರುವ ವೇಳೆ,
ಆತ್ಮಸಾಕ್ಷಿಗೆ ಸಾಕ್ಷಿಗುಡುತಲಿರೆ ಬಾಳೆ;

ಮೃತ್ಯುವಿನ ಹಿಡಿತ ಬಿಗಿಯಾಗುತಿರೆ, ಮೇಲೆ
ಕಿರುತಾರೆಗಯದೊಂದು ಓರಗೆಯ ಕೋರೆ,
ನಿನಗೆ ನೀನೇ, ಗೆಳೆಯ, ನಿನಗೆ ನೀನೇ ![೫೯]

ಅನ್ಯರಿಂದ ತನ್ನ ಬದುಕು ಹಸನಾಗುತ್ತದೆಂಬ ನಂಬಿಕೆಯನ್ನು ಈ ಕವಿತೆ ನಿರಾಕರಿಸುತ್ತದೆ. ಅತ್ಯಂತ ಖಾಸಗಿ ದುಃಖ ದುಮ್ಮಾನಗಳಿಗೆ ಮತ್ತೊಬ್ಬರ ಸಹಾಯ ಹಸ್ತವು ಎಲ್ಲ ಮಟ್ಟಗಳಲ್ಲಿ ಪರುಹಾರ ನೀಡಲಾರದೆಂಬ ಧೋರಣೆ ಇಲ್ಲಿಯದಾಗಿದೆ. ಪ್ರತಿಯೊಬ್ಬನೂ ತನ್ನ ಬಾಳಿನ ಸಂಗ್ರಾಮದಲ್ಲಿ ಏಕಾಂಗಿ ವೀರನಾಗಿ ಹೋರಾಡಬೇಕಾಗುವುದು ಅನಿವಾರ್ಯವೆಂಬ ವಾಸ್ತವವನ್ನು ಈ ಕವಿತೆ ಸೂಚಿಸುತ್ತದೆ. ಅದೇ ಬದುಕಿನ ಸಾಧನೆ, ಮತ್ತು ಬಾಳಿನ ಒಸಗೆಯೆಂಬ ಆಶಯವನ್ನು ಪ್ರಕಟಿಸುತ್ತದೆ. ಹಾಗೆಯೇ ಅಂಥ ಬದುಕು ಸಾಧ್ಯವೆಂಬ ವಿಚಾರವೂ ಈ ಕವಿತೆಯಲ್ಲಿದೆ. ಪರಕೀಯ ಹಾಗೂ ಸ್ಥಳೀಯ ಸಾಮ್ರಾಜ್ಯಶಾಹಿ ಶಕ್ತಿಗಳು ವ್ಯಕ್ತಿಯ ಮೇಲೆ ಮಾಡುವ ಆಕ್ರಮಣಗಳಿಗೆ ಇಂಥ ಕವಿತೆಗಳಲ್ಲಿ ಹೊಸಕಾಣ್ಕೆಯೊಂದನ್ನು ಅಡಿಗರು ಹುಟ್ಟುಹಾಕುತ್ತಿರುವುದರ ಸೂಚನೆಗಳು ಗಾಢವಾಗಿ ಕಾಣಿಸುತ್ತವೆ. 'ಒಳತೋಟಿ', 'ಕೂಪಮಂಡೂಕ', 'ಚಿಂತಾಮಣಿಯಲ್ಲಿ ಕಂಡ ಮುಖ'ದಂಥ ಕವಿತೆಗಳಲ್ಲಿ ಈ ಪ್ರಜ್ಞೆ ಮತ್ತೂ ವಿಭಿನ್ನ ಆಯಾಮಗಳಲ್ಲಿ ರೂಪುಗೊಳ್ಳುವುದನ್ನು ಕಾಣಬಹುದಾಗಿದೆ.

ಅಡಿಗರ 'ಒಳತೋಟಿ', ಕವನ ಹಲವು ಕಾರಣಗಳಿಂದ ಬೇಂದ್ರೆಯವರ 'ಸಖಿಗೀತ'ವನ್ನು ನೆನಪಿಸುತ್ತದೆ. ಬೇಂದ್ರೆಯವರ ದಾಂಪತ್ಯದ ಹಲವು ಮಜಲುಗಳನ್ನು ಪ್ರಕಟಿಸುತ್ತಲೆ ಆತ್ಮನಿವೇದನೆಯಂತೆ ಬೆಳೆಯುವ 'ಸಖಿಗೀತ' ಕವನವು ಸಾಂಸ್ಕೃತಿಕ ಚರಿತ್ರೆಯಾಗಿ ಮೈಪಡೆಯುತ್ತದೆ. ಅದರಂತೆಯೆ 'ಒಳತೋಟಿ' ಕವನವು ಅಡಿಗರ ಸುಮಾರು ಮೂವತ್ತು ವರ್ಷಗಳ ಮನಸ್ಸಿನ ಹೊಯ್ದಾಟವನ್ನು ಹಿಡಿದಿಡುವುದರೊಂದಿಗೆ ಸಾಂಸ್ಕೃತಿಕ ದಾಖಲೆಯಾಗಿ ಮಹತ್ವ ಪಡೆಯುತ್ತದೆ. ಹೀಗಾಗಿ ಒಂದು ಕಾಲಮಾನದ ಅನೇಕ ರಾಜಕೀಯ ಹಾಗೂ ಸಾಮಾಜಿಕ ಘಟನೆಗಳನ್ನು, ವ್ಯಕ್ತಿ ಮತ್ತು ಸಾಮಾಜಿಕ ನೆಲೆಗಳಲ್ಲುಂಟಾದ ಗೊಂದಲಗಳನ್ನು 'ಒಳತೋಟಿ' ಕವಿತೆಯಲ್ಲಿ ಕಾಣುತ್ತೇವೆ.

ನಿಮಿಷ ನಿಮಿಷಕ್ಕೊಂದು ವ್ಯೂಹಾಂತರವ ತಂದು
ದಾಳಿಮಾಡುವ ಸಮವಿಷಮಭಾವಗಳಲಿ
ಹೋಳಾಗುತಿರೆ ಬಾಳು ಗೋಳಿಡುತಿರುವ ಮಧುರ
ನೊಳತೋಟಿ ಹಾಡಾಗಿ ಹರಿವುದಿಲ್ಲ;[೬]

'ಒಳತೋಟಿ' ಕವನದ ಈ ಆರಂಭಿಕ ಸಾಲುಗಳಲ್ಲಿ ಕವನದ ನಾಯಕ ಮಧುರನ ಹುಟ್ಟು, ಬಾಲ್ಯ, ಅಲ್ಲಿನ ಪರಿಸರ, ಅಂಥ ಪರಿಸರದ ಬಗೆಗಿನ ಆಕರ್ಷಣೆ, ವಿಸ್ಮಯಗಳು ಎದುರಾಗುತ್ತವೆ. ಅಂತೆಯೇ ಅಂಥ ಸಮೃದ್ಧ ಪರಿಸರದಲ್ಲಿಯೇ ಎದುರಾಗುವ ಬಂಧನದ ನೆಲೆಗಳನ್ನು ಈ ಕವಿತೆ ದಾಖಲಿಸುತ್ತದೆ.

ಹೊಸ ಹಾದಿಯನು ಹಿಡಿದು ನಡೆವ ವಿಫಲಾಕಾಂಕ್ಷೆ
ಯುಗ ಯುಗಗಳಿಂದದೆಯ ಮಿಡಿಯುತಿರಲು.
- - - - - - - - - - - - - -
ಇಂತಿರಲು ಬಂದಸಹಕಾರ ವಿಪ್ಲವದ ಧುನಿ
ಅವನ ಬಗೆದೋಣಿಯನು ಬಡಿದು ಬಡಿದು
ದೇಶಭಕ್ತಿಯ ಸುಧೆಯನದರೊಳಗೆ ತುಂಬಿದುದು
ಅವನ ಮುಗ್ಧಾತ್ಮವನು ಮಿಡಿದು, ಮಿಡಿದು.[೭]

ಈ ಮೇಲಿನ ಸಾಲುಗಳ ಕಡಲಿನ ಪ್ರತಿಮೆ ಹೊಸಹಾದಿಯನ್ನು ಹಿಡಿದು ನಡೆಯಲು ಮುಂದಾಗುವ ಮಧುರನ ಬಂಧನ ಮತ್ತು ವಿಫಲಾಕಾಂಕ್ಷೆಗಳನ್ನು ಧ್ವನಿಸುತ್ತದೆ. ಅಂಥ ವಿಫಲಾಕಾಂಕ್ಷೆಗಳ ಮಧ್ಯೆ ಮಧುರನು ಪಡುಗಡಲತಡಿಯ ಭೂನಂದನದಲ್ಲಿ ಬೆಳೆಯುವ ಚಿತ್ರವನ್ನು ಕವನದ ಮೊದಲ ಭಾಗದಲ್ಲಿ ಕಾಣುತ್ತೇವೆ. ಮಧುರನು ಕಾವ್ಯ ಮತ್ತು ಸ್ವಾತಂತ್ರ್ಯ ಹೋರಾಟದ ಆಕರ್ಷಣೆಗೆ ಒಳಗಾಗುವ ಚಿತ್ರಗಳು ಮತ್ತು ಆದರ್ಶ ಜೀವನದ ಕಡೆಗೆ ಆಕರ್ಷಿತವಾಗುವ ವಿವರಗಳಿವೆ. ನಗರದ ಬದುಕು ಮಧುರನ ಜೀವನವನ್ನು ದುರ್ಬಲ ಹಾಗೂ ವಿಕಲಗೊಳಿಸಿದ ಬಗೆಗಿನ ಚಿತ್ರಗಳು, ಹಾಗೂ ಅವನ ಆಸೆ ಆಕಾಂಕ್ಷೆಗಳು ಭಗ್ನವಾಗುವುದರ ಬಗೆಗಿನ ಸಂಗತಿಗಳು ಎರಡನೆಯ ಭಾಗದಲ್ಲಿವೆ. ಹಾಗಾಗಿ, ವಿದ್ಯೆಯನ್ನು ಪಡೆದು ಮನಸ್ಸಿನ ಮಧುರನು 'ಶಾಂತಿ ರಾಜ್ಯದ ಬಹಿಷ್ಕೃತ ನಾಗರಿಕನಂತೆ' ತನ್ನ ಹುಟ್ಟೂರನ್ನು ನೋಡುವ ಆಸೆಯಿಂದ ಮರಳುತ್ತಾನೆ. ಆದರೆ ಹರೆಯದ ಮಧುರನಿಗೆ ತನ್ನ ಬಾಲ್ಯದ ಎಲ್ಲ ಸಂಭ್ರಮ, ವಿಸ್ಮಯಗಳು ಕಣ್ಮರೆಯಾಗುವ ಸ್ಥಿತಿ ಇಲ್ಲಿದೆ. ಹರೆಯವು ತರುವ ತನು-ಮನ ವಿಕಾರಗಳಿಂದ ತಲ್ಲಣಗಳಿಗೆ ಗುರಿಯಾಗುವ ಮಧುರನ ಹೊಯ್ದಾಟ ಮೂರನೆಯ ಭಾಗದ್ದು.

ಬದುಕಿನ ಗೊಂದಲಗಳನ್ನು ಸಮಸೂತ್ರದಿಂದ ಎದುರಿಸುವಲ್ಲಿ ಮಧುರನು ವಿಫಲವಾಗುವ ಸ್ಥಿತಿಯನ್ನು ಈ ಮೇಲಿನ ಸಾಲುಗಳಲ್ಲಿ ಕಾಣುತ್ತೇವೆ. ತನ್ನ ದಾರಿಯನ್ನು ತಾನು ಕಂಡುಕೊಳ್ಳಲಾರದ ಸಂಕಟಕ್ಕೆ ಎದುರಾಗುತ್ತ, ನೆಲದ ಬದುಕಿನ ಹೊಯ್ದಾಟಕ್ಕೆ ಒಳಗಾಗಿ ಆಕಾಶದ ಕಡೆಗೆ ಮುಖಮಾಡುವುದರೊಂದಿಗೆ ವ್ಯಕ್ತಿಯು ಸಮಾಜದಲ್ಲಿ ತನ್ನತನವೊಂದನ್ನು ಕಟ್ಟಿಕೊಳ್ಳಲು ವಿಫಲವಾಗುವ ಸ್ಥಿತಿಯನ್ನು ಈ ಕವನ ಕಾಣಿಸುತ್ತದೆ.

ವ್ಯಕ್ತಿ ವಿಶಿಷ್ಟತೆಯನ್ನು ಕಂಡುಕೊಳ್ಳಲು ವಿಫಲನಾಗುತ್ತಿರುವ ಮಧುರನ ತೊಯ್ದಾಟ 'ಒಳತೋಟಿ' ಕವನದ ಮುಖ್ಯ ಭಿತ್ತಿಯಾಗಿದೆ. ತನು-ಮನಗಳೆರಡನ್ನೂ ಸಮಸೂತ್ರದಲ್ಲಿ ಹಿಡಿದಿಡಲಾರದ ತಳಮಳ ಅಡಿಗರ ಮುಂದಿನ ಸಂಗ್ರಹಗಳಲ್ಲಿ ಮುಖ್ಯ ನೆಲೆಯಾಗಿ ವಿಸ್ತಾರಗೊಳ್ಳುವುದನ್ನು ಅವರ ಕಾವ್ಯಾಧ್ಯಯನದಿಂದ ತಿಳಿಯಬಹುದಾಗಿದೆ.

**೨. ಸ್ವಾತಂತ್ರ್ಯದ ಕನಸು: ಸಾಮ್ರಾಜ್ಯಶಾಹಿ ಧೋರಣೆಗಳಿಗೆ ಮುಖಾಮುಖಿ**

'ಯುದ್ಧ ಮುಗಿಯಿತು' ಕವಿತೆ ಸಾಮ್ರಾಜ್ಯಶಾಹಿ ಶಕ್ತಿಗಳು ಎಸಗುವ ಯುದ್ಧದ ಭೀಕರ ಪರಿಣಾಮಗಳನ್ನು ಕುರಿತ ವ್ಯಂಗ್ಯವನ್ನು ಹೇಳುತ್ತದೆ. ಈ ಕವನದ ಶೀರ್ಷಿಕೆಯೆ ಯುದ್ಧದ ನಿರಂತರತೆಯನ್ನು ಧ್ವನಿಸುವುದಾಗಿದೆ. ಸಾಮ್ರಾಜ್ಯಶಾಹಿ

ಶಕ್ತಿಗಳು ಯುದ್ಧಾನಂತರ ಘೋಷಿಸುವ ಶಾಂತಿ ಒಪ್ಪಂದಗಳ ಕಟುವಿಮರ್ಶೆ ಇಲ್ಲಿದೆ. ಇಂಥ ಒಪ್ಪಂದಗಳು ಮಾಯಾರಾಕ್ಷಸನ ಕುತಂತ್ರದಂತೆ ನಟನೆ ಮಾತ್ರ. ಅಂತೆಯೇ ಶಾಂತಿ ಸಂಧಾನಗಳ ಕಾಲ ಕಾಳೋಗರದ ವಿಷಸಂಗ್ರಹಕೆ ಮೀಸಲಾದ ಸಮಯವೆಂದೂ ಇಂಥ ಒಪ್ಪಂದಗಳನ್ನು ಅರ್ಥಹೀನವೆಂದೂ ಇಲ್ಲಿ ಟೀಕೆಗೆ ಗುರಿಯಾಗಿದೆ. ಯುದ್ಧದಿಂದ ಸಂಸ್ಕೃತಿಗಳು ನಿರಂತರವಾಗಿ ಭಗ್ನವಾಗುತ್ತಿರುವುದನ್ನು ಕುರಿತ ಆತಂಕ ಇಲ್ಲಿ ಕಾಣುತ್ತದೆ. ಹಾಗೆಯೇ ಭಾರತದಂಥ ರಾಷ್ಟ್ರಗಳನ್ನು ಮಹಾಯುದ್ಧಗಳಿಗೆ ದುಡಿಸಿಕೊಂಡ ಸಾಮ್ರಾಜ್ಯಶಾಹಿ ಶಕ್ತಿಗಳ ಬಗೆಗಿನ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತದೆ.

ಇಂಥ ಆತಂಕಗಳ ನಡುವೆಯೇ ಭಾರತದ ಸ್ವಾತಂತ್ರ್ಯ ಸಮರ ಆರಂಭವಾಗುತ್ತಿರುವುದನ್ನು ಹಾಗೂ ಹೋರಾಟಗಳು ಗಟ್ಟಿಗೊಳ್ಳುತ್ತಿರುವುದನ್ನು ಈ ಕವಿತೆಯಲ್ಲಿ ಕಾಣುತ್ತೇವೆ. 'ನೆನೆ,ನೆನೆ, ಆದಿನವ ( ೧೯೪೨ ಆಗಸ್ಟ್ ೯ ಮಾಡು ಇಲ್ಲವೆ ಮಡಿ ಆಂದೋಲನ -ಗಾಂಧೀಕರೆ ) ಕವಿತೆ ಭಾರತ ಸ್ವಾತಂತ್ರ್ಯ ಸಮರದ ಮಹತ್ವದ ಗಳಿಗೆಗಳನ್ನೇ ನೆನಪಿಸುತ್ತದೆ. ಇಡೀ ಕವಿತೆ ಸಾಮ್ರಾಜ್ಯಶಾಹಿ ಶಕ್ತಿಗಳ ಹಾಗೂ ಪರಕೀಯರ ವಿರುದ್ಧವಾಗಿ ಭಾರತೀಯ ಜನತೆ ಹೋರಾಟಕ್ಕೆ ತೊಡಗಿದ್ದನ್ನು ದಾಖಲಿಸುತ್ತದೆ.

> ತೊಲಗು ತೊಲಗು ತೊಲಗಾಚೆ ತೊಲಗು, ಬಿಳಿದೊಗಲ ಸುಲಿಗೆಗಾರ !
> ನಾವಲ್ಲ ತೊತ್ತು, ನಿನಗಲ್ಲ ತುತ್ತು ನಮ್ಮಾಸೆ, ನುಡಿ, ವಿಚಾರ;
> ಇಂದು ನಾವು ಮನಸಾ ಸ್ವತಂತ್ರರೋ ; .......'[೮]

ಈ ಮೇಲಿನ ಸಾಲುಗಳು ವಸಾಹತುಸಂಸ್ಕೃತಿಯ ಬಗೆಗೆ ಭಾರತೀಯ ಜನತೆ ಎಚ್ಚೆತ್ತ ಹಾಗೂ ಎದುರಾಗಿಸಿದ ಪ್ರತಿರೋಧಗಳನ್ನು ಪ್ರಕಟಿಸುತ್ತವೆ. ಬಿಳಿದೊಗಲ ಸುಲಿಗೆಗಾರರ ದಾಸ್ಯದಿಂದ ಮುಕ್ತಿಪಡೆದು ಹೊಸ ಸಂಭ್ರಮ, ಉತ್ಸಾಹ, ಹೊಸ ವಿಚಾರಗಳಿಂದ ಸ್ವತಂತ್ರವನ್ನು ಪಡೆಯಬೇಕೆಂಬ ಅಭೀಪ್ಸೆ ಇಲ್ಲಿಯದಾಗಿದೆ. ಇಂಥ ಅಭೀಪ್ಸೆ "ಕಟ್ಟುವೆವು ನಾವು" ಸಂಕಲನದಲ್ಲಿ ಮತ್ತೂ ಗಾಢವಾಗಿ ಮೈ ಪಡೆಯುತ್ತದೆ.

ಸ್ಥಳೀಯ ಪುರೋಹಿತಶಾಹಿ ಹಾಗೂ ಪರಕೀಯ ಸಂಸ್ಕೃತಿಗಳಿಂದ ನಿರ್ಮಾಣವಾಗಿದ್ದ ಒಡಕು-ತೊಡಕುಗಳನ್ನು ಬಿಡಿಸಿಕೊಳ್ಳುವುದರೊಂದಿಗೆ ಹೊಸನಾಡೊಂದನ್ನು ಕಟ್ಟಬೇಕೆಂಬ ಸಂಭ್ರಮ ಈ ಸಂಕಲನದುದ್ದಕ್ಕೂ ಕಾಣಿಸುತ್ತದೆ. ಹಾಗೆಯೇ ಇಂಥ ಪ್ರತಿಗಾಮಿ ಶಕ್ತಿಗಳಿಂದ ಅವನತಿಗೆ ಗುರಿಯಾದ ಸಂಸ್ಕೃತಿ, ಮನುಷ್ಯನ ಖಾಸಗಿ ಬದುಕು ಹಾಗೂ ಸಾಮಾನ್ಯನ ಆಸೆ ಆಕಾಂಕ್ಷೆಗಳನ್ನು ಅಂಥ ಶಕ್ತಿಗಳಿಂದ ಮುಕ್ತಿಗೊಳಿಸಬೇಕೆಂಬ ಆಶಯವು ಇಲ್ಲಿಯದಾಗಿದೆ. ಆಶಯಗಳ ಈಡೇರಿಕೆಗೆ ಅಡ್ಡಿಯಾಗುವ ಎಲ್ಲ ಶಕ್ತಿಗಳನ್ನು ತೊಡೆದು ಹಾಕಲು ಬೇಕಾದ ಹೋರಾಟದ ಬಯಕೆಯು ಈ ಕವನಗಳ ಮುಖ್ಯಭಿತ್ತಿ. ಜಾತಿ, ಮತ, ಕುಲಗಳೆಂಬ ಪಾರಂಪರಿಕ ಅಡ್ಡಗೋಡೆಗಳನ್ನು ಕೆಡಹಿ, ಹೊಸಬಾಳಿನ ಹೊಸಸಮತೆಯ ಸಮರಸದ ಬದುಕನ್ನು ಕಟ್ಟಬೇಕೆಂಬ ತುಡಿತ ಪ್ರತಿಗಾಮಿಶಕ್ತಿಳಿಗೆ ಮುಖಾಮುಖಿಯಾಗುತ್ತದೆ. ಸಮಾಜದ ಪಾರಂಪರಿಕ ಎಲ್ಲೆಕಟ್ಟುಗಳೆಲ್ಲವನ್ನು ಮೀರುತ್ತಲೇ 'ಎಲ್ಲ ಒಂದೇ'ಯೆಂಬ ಯುದ್ಧದ ಘೋಷಣದಿಂದ ಹೊಸ ನಾಡೊಂದನ್ನು ಕಟ್ಟಲು

ಎಲ್ಲ ಯುವಜನತೆಗೆ ಆಹ್ವಾನವೀಯುತ್ತದೆ. ಕುವೆಂಪು ಅವರ 'ತರುಣರಿರ ಎದ್ದೇಳಿ', 'ಶ್ರೀ ಸಾಮಾನ್ಯರ ದೀಕ್ಷಾಗೀತೆ'ಯಂಥ ಕವಿತೆಗಳ ಆಶಯಗಳು ಇಲ್ಲಿ ನೆನಪಾಗುತ್ತವೆ. ವಿಜಯನಗರ ಸಾಮ್ರಾಜ್ಯದ ಉನ್ನತಿಯ ಹಾಗೂ ಅವನತಿಯ ಚಿತ್ರಗಳನ್ನು ಯುವಜನತೆಗೆ ನೆನಪಿಸುವುದರೊಂದಿಗೆ ಸ್ವಾತಂತ್ರ್ಯ ಹೋರಾಟಕ್ಕೆ ಅಗತ್ಯವಾದ ಶಕ್ತಿಯನ್ನು ಸಂಘಟಿಸಲು ಮುಂದಾಗುವುದನ್ನು 'ವಿಜಯನಗರದ ನೆನಪು' ಕವಿತೆಯಲ್ಲಿ ಕಾಣುತ್ತೇವೆ.

ಒಮ್ಮೆ ಭಾರತದ ಧರ್ಮಜ್ಯೋತಿ ನಂದುತಿರೆ
ನಮ್ಮ ರಕ್ತದ ತೈಲವೆರೆದು ಬೆಳಗಿಸಿದ
ಹೆಮ್ಮೆ ನಮಗುಂಟು; ಭಾರತದ ಸಂಸ್ಕೃತಿಗೆ ಕುಡಿ
ಹೊಮ್ಮಿಸಿದ ಬಲುಹುಂಟು ಸಿರಿಗೆ ಕನ್ನಡದ.

- - - - - - - - - - - - - - - -

ಕಾಡ ಹೊನಲಿದಿರು ಮಳಲೊಟ್ಟಿಲಂತರಿಯ
ದಬ್ಬಾಳಿಕೆಗೆ ಭಾರತದ ಕೋಟಿಕೋಟಿಗಳು
ಬೀಳುತಿರೆ ನೆಲೆಗಟ್ಟು, ಪೌರುಷದ ಬಗೆಗೆಟ್ಟು
ಮೇಲೆದ್ದು ಬಂದ ಗಿರಿಯಿದು ವಿಜಯನಗರಿ![೯]

ಈ ಮೇಲಿನ ಸಾಲುಗಳು, ಪರಕೀಯರ ಆಕ್ರಮಣಗಳಿಂದ ಭಾರತೀಯ ಸಂಸ್ಕೃತಿ ಸಂಪೂರ್ಣವಾಗಿ ಅವನತಿಗೊಳಗಾಗುತ್ತಿದ್ದ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯ ಅಂಥ ಸಂಸ್ಕೃತಿಯ ಉಳಿವಿಗಾಗಿ ತಲೆಯೆತ್ತಿದ ಚಾರಿತ್ರಿಕ ಘಟನೆಯನ್ನು ನೆನಪಿಸುತ್ತವೆ. ಅನ್ಯಾಕ್ರಮಣಗಳಿಂದ ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ನೆಲೆಗಟ್ಟುಗಳು ದಿಕ್ಕೆಟ್ಟ ಸಂದರ್ಭದಲ್ಲಿ ಈ ಹಿಂದೆ ಪೌರುಷದಿಂದ ವಿಜಯನಗರ ಸಾಮ್ರಾಜ್ಯ ಆ ಅನ್ಯಾಕ್ರಮಣಗಳಿಗೆ ಒಡ್ಡಿದ ಪ್ರತಿರೋಧವನ್ನು ಸಮಕಾಲೀನ ಸಂದರ್ಭದ ಕ್ರಿಯೆಯೊಂದಿಗೆ ಮತ್ತೆ ನೆನಪಿಗೆ ತಂದುಕೊಳ್ಳುತ್ತದೆ.

ಪರಕೀಯ ಹಾಗೂ ಸ್ಥಳೀಯ ಶಕ್ತಿಗಳು ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ನಡೆಸಿದ ಸುಲಿಗೆಯ ಬಗೆಗೆ ಸಂಘರ್ಷವನ್ನು ಒಡ್ಡುವುದು ಅಡಿಗರ ಕಾವ್ಯದ ವೈಶಿಷ್ಟ್ಯವಾಗಿದೆ. ಈ ನೆಲೆ ಸ್ವಾತಂತ್ರ್ಯಾ ನಂತರದ ಅವರ ಕಾವ್ಯದಲ್ಲಿ ಬೇರೆಯದೆ ಆದ ವಿನ್ಯಾಸ ಪಡೆಯುವುದನ್ನು ಮುಂದೆ ಚರ್ಚಿಸಲಾಗುವುದು. 'ಸುಲಿಗೆಯೆಂಬ ಯಾಗ' ಕವಿತೆಯಲ್ಲಿ ಶ್ರೀ ಸಾಮಾನ್ಯನನ್ನು ನಿರಂತರವಾಗಿ ಶೋಷಿಸಿದ ಸಾಮಾಜಿಕ ಶಕ್ತಿಗಳನ್ನು ಅಡಿಗರು ವಿಮರ್ಶೆಗೆ ಗುರಿಪಡಿಸುತ್ತಾರೆ. ಈ ಕವಿತೆಯಲ್ಲಿ ಕಾವ್ಯ, ಶಾಸ್ತ್ರ,ಧರ್ಮ, ತತ್ತ್ವ, ರಾಜ್ಯ ಮೊದಲಾದವುಗಳ ತೆರೆಮರೆಯಲ್ಲಿ ಶ್ರೀಸಾಮಾನ್ಯನನ್ನು ಸುಲಿಗೆ ಮಾಡಿದ, ಅವನನ್ನು ಅಜ್ಞಾನಕ್ಕೆ ತಳ್ಳಿದ ಸ್ಥಿತಿಗತಿಗಳ ಹಾಗೂ ಅದಕ್ಕೆ ಕಾರಣವಾದ ಎಲ್ಲ ಬೌದ್ಧಿಕ ಶಕ್ತಿಗಳ ಬಗೆಗೆ ಖಂಡನೆಯಿದೆ. ಪುರೋಹಿತಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆಗಳ ವಂಚನೆಯನ್ನು ಅಡಿಗರ ಸಂವೇದನೆ ಈ ಬಗೆಯ ಕವಿತೆಗಳಲ್ಲಿ ತೀವ್ರವಾಗಿ ವಿರೋಧಿಸುವುದನ್ನು ಕಾಣುತ್ತೇವೆ. ನಿರಂತರವಾಗಿ ಇಂಥ ಶಕ್ತಿಗಳು ಮಾಡಿದ ಸುಲಿಗೆಯ ಯಾಗ ಇನ್ನು ಸಾಕೆಂಬ ಕೂಗು ಒಕ್ಕೊರಲಿನ ಹೋರಾಟದ ಧ್ವನಿಯಾಗಬೇಕೆಂಬ ಆಶಯ ಇಲ್ಲಿ ಗಾಢವಾಗಿದೆ.

ಭಾರತದೊಳಿಂದು ಜಾಡ್ಯದ ಮಂಜು ಮುಸುಕಿಹುದು;
ಪಾರತಂತ್ರ್ಯದ ಘೋರ ತಿಮಿರ ಘೂರ್ಣಿಸುತಿಹುದು ;
ಬಾರ, ಕರ್ತವ್ಯಶಕ್ತಿ ಜ್ಯೋತಿ ಧಾರಿ;
ಬಾರ, ಪರತಂತ್ರ ಬಂಧನ ಮುಕ್ತಿಕಾರಿ!

ಭಾರತದ ನಾಡಿನಾಡಿಯ ಧಮನಿಧಮನಿಯಲಿ
ಸೇರುತಂಗಾಂಗಗಳ ರಕ್ತಕಣಕಣಗಳಲಿ
ಮೊರೆಮೊರೆದು ಭೋರ್ಗೆರೆದು ಬೇಗ ಬಳಿಸಾರ;
ತೆರೆನೊರೆಯನುಕ್ಕಿಸುತ ಸಾಹಸವೆ ಬಾರಾ![೧೦]

ಈ ಮೇಲಿನ 'ಸಾಹಸ' ಕವಿತೆಯ ಸಾಲುಗಳಲ್ಲಿ , ಭಾರತಕ್ಕೆ ವಸಾಹತು ಸಂಸ್ಕೃತಿಯಿಂದ ಉಂಟಾದ ಬಂಧನದಿಂದ ಬಿಡುಗಡೆ ಪಡೆಯಲು ಅಗತ್ಯವಾದ 'ಸಾಹಸ'ವೆಂಬ ದೂತನನ್ನು ಕವಿ ಸಂವೇದನೆ ಆಹ್ವಾನಿಸುತ್ತದೆ. ವಸಾಹತು ಸಂಸ್ಕೃತಿಯು ಹರಡಿದ ಎಲ್ಲ ಮಟ್ಟದ ದಾಸ್ಯದಿಂದ ಮುಕ್ತಿಪಡೆಯಲು ಶಕ್ತಿಶಾಲಿಯಾದ 'ಭಾಗ್ಯೋದಯದ ಹರಿಕಾರ'ನಾದ 'ಸಾಹಸ'ನನ್ನು ಆಹ್ವಾನಿಸುತ್ತಿರುವ ಆಶಯಗಳಲ್ಲಿ ಅಂಥ ಸಂಸ್ಕೃತಿಯ ಬಗೆಗಿನ ವಿರೋಧಗಳು ಅಭಿವ್ಯಕ್ತಗೊಳ್ಳುತ್ತದೆ.

ಒಂದು ಕಡೆ ಬಡತನದ ಘೋರಾಗ್ನಿ ಕುಂಡವಿದೆ
ಮುಂದುವರಿವವರ ಸುಟ್ಟು ಸೂರೆಗೊಳಲು ;
ಒಂದು ಕಡೆಯಲಿ ದಾಸ್ಯದುರ್ಲಲಿತ ಲಾಸ್ಯವಿದೆ
ಮಂದಿಗಳ ಮನುಜತೆಯ ಮರೆಗೊಳಿಸಲು

ನಿರಭಿಮಾನದ ದಾಸ್ಯಜೀವನದ ಈ ವನದ
ಸೆರಗಿನಲಿ ಮರೆಯಾಗಿ ನಿಖಿಲ ಜನತೆ
ವಿರುಪ ರವಿಕಿರಣಗಳ ಸರಣಿಯನು ಕಾಣದಿದೊ
ಮುರುಟುತಿದೆ ನಿದ್ದೆಯಲಿ ಕನವರಿಸುತೆ![೧೧]

ಅಂದಿನ ಸಾಮಾಜಿಕ ಬದುಕಿನ ವಾಸ್ತವ ಚಿತ್ರವನ್ನು 'ನೊಂದ ನುಡಿ' ಕವಿತೆಯ ಈ ಮೇಲಿನ ಸಾಲುಗಳಲ್ಲಿ ಕಾಣುತ್ತೇವೆ. ಬಡತನ, ದಾಸ್ಯ, ಜನತೆಯಲ್ಲಿ ಕುಂದಿರುವ ನಾಡಿನ ಅಭಿಮಾನ, ಇಂಥವುಗಳಿಂದ ಎದುರಾಗಿರುವ ಸಾಮಾಜಿಕ ದುಸ್ಥಿತಿಯನ್ನು ಕಂಡ ಕವಿ ಸಂವೇದನೆ ಮರುಕಗೊಂಡಿದೆ. ಸ್ಥಳೀಯ ಮೌಢ್ಯಗಳಿಂದ ಎದುರಾದ ಈ ದುಸ್ಥಿತಿಗೆ ಹೊಸ ಸಂಸ್ಕೃತಿಯ ಸಂಪರ್ಕದಿಂದ ಪರಿಹಾರ ಕಾಣದಿರುವುದರ ಬಗೆಗೆ ವಿಷಾದವಿದೆ. ಜಾತಿ-ಮತಗಳ , ವ್ಯಕ್ತಿ- ವ್ಯಕ್ತಿಗಳ ಮಧ್ಯೆ ತಲೆದೋರಿರುವ ಕಲಹಗಳೆ ಭರತಮಾತೆಯ ದುಸ್ಥಿತಿಗೂ ಕಾರಣವೆಂಬ ಸೂಚನೆಯು ಇಲ್ಲಿ ಪ್ರಕಟವಾಗುತ್ತದೆ. ಅಂತೆಯೇ ಪಾಶ್ಚಾತ್ಯ ಸಂಸ್ಕೃತಿಯ ಸಂಸರ್ಗದಿಂದ ಸ್ಥಳೀಯ ದುರಂತ - ದುಸ್ಥಿತಿಗಳಿಗೆ ಪರಿಹಾರಗಳನ್ನು

ಕಂಡುಕೊಳ್ಳಬೇಕೆಂಬ ಆಶಯ ಈ ಕವಿತೆಯದಾಗಿದೆ. ಅಂಥ ಆಶಯಗಳಿಗೆ ತೊಡಕಾಗುವ ಶಕ್ತಿಗಳ ವಿಡಂಬನೆಯು ಇಲ್ಲಿದೆ. 'ಹಳೆತರೊಳು ಹೊಸತನವನಳವಡಿಸಿ' ತನ್ನ ಸಂಸ್ಕೃತಿಯ ಅಸ್ತಿತ್ವವನ್ನು ಉಳಿಸಿಕೊಳ್ಳುವುದರೊಂದಿಗೆ ಬದುಕನ್ನು ಹಸನುಗೊಳಿಸುವ ಸಂಭ್ರಮಕ್ಕೆ ಕವಿ ಸಂವೇದನೆ ಸಿದ್ಧವಾಗುತ್ತದೆ. ಈ ಬಗೆಯ ಆಶಯಗಳ ಹಿಂದೆ ಸಾಮಾಜಿಕ ಅಸಮಾನತೆಗಳಿಗೆ ಕಾರಣವಾಗುವ ಶಕ್ತಿಗಳ ಬಗೆಗಿನ ಪ್ರತಿರೋಧ ತೀವ್ರವಾಗಿ ಮೈಪಡೆಯುವುದನ್ನು ಕಾಣುತ್ತೇವೆ.

ಹೊಸನಾಡೊಂದನ್ನು ಕಟ್ಟಲು ಉನ್ನತಾದರ್ಶಗಳಿಂದ ಹೊರಟ ಕವಿ ಸಂವೇದನೆಗೆ ಹೊಸ ಪ್ರಜ್ಞೆಯೊಂದು 'ಇದು ಮೊದಲು' ಕವಿತೆಯಲ್ಲಿ ಮುಖಾಮುಖಿಯಾಗುತ್ತದೆ. ಅಂದರೆ ಆದರ್ಶಗಳಿಂದ ನಾಡನ್ನು ಕಟ್ಟಲು ಹೊರಟ ರಮ್ಯ ಪ್ರಜ್ಞೆಗೆ ವಾಸ್ತವದ ಪ್ರಜ್ಞೆಯನ್ನು ಅಡಿಗರ ಸಂವೇದನೆ ಈ ಕವಿತೆಯಲ್ಲಿ ಎದುರಾಗಿಸುತ್ತದೆ. 'ಕಟ್ಟುವೆವು ನಾವು' ಸಂಭ್ರಮದ ಹೋರಾಟಕ್ಕೆ ಸ್ವಾತಂತ್ರ್ಯಾನಂತರ ಎದುರಾಗುತ್ತಿರುವ ಹೊಸ ಸಮಸ್ಯೆಗಳ ಸುಳಿವುಗಳನ್ನು 'ಇದು ಮೊದಲು' ಕವಿತೆ ಮಾರ್ಮಿಕವಾಗಿ ದಾಖಲಿಸುತ್ತದೆ.

ಬರುವ ಕಾಲವೆ ಬೇರೆ ನೋಡು ಹೊರಗೆ;
ಜೇಡನನ್ನು ನೋಣವ ಅತಿ ಪ್ರಚಂಡ,
ಕಾಣದೇ ಅಲ್ಲಿ ಆ ತಂಡ, ತಂಡ?

ಒಡೆಯುತಿರೆ ಹಣತೆ ಹೊಸ ಬತ್ತಿ ಹೊಸೆಯುವೆ; ಬತ್ತಿ
ಹೋಗುತಿರೆ ಸೆಲೆ ಕಣ್ಣ ನೀರ ಕರವೆ![೨]

ತನ್ನ ಹೋರಾಟಕ್ಕೆ ಪ್ರತಿಗಾಮಿ ಶಕ್ತಿಗಳು ಹೂಡುತ್ತಿರುವ ಹೊಸ ತಂತ್ರಗಳ ಬಗೆಗಿನ ಎಚ್ಚರದ ವಿವರಗಳು ಇಲ್ಲಿ ಪ್ರಕಟಗೊಂಡಿವೆ. ಹಾಗೆಯೇ ವ್ಯವಸ್ಥೆಯ ಸಾಂಸ್ಕೃತಿಕ ಆದರ್ಶಗಳಿಂದ ವಂಚಿಸುವುದರ ಬಗೆಗೆ ಶ್ರೀ ಸಾಮಾನ್ಯನು ಎಚ್ಚೆತ್ತದ್ದನ್ನು ಇಲ್ಲಿ ಕಾಣುತ್ತೇವೆ. 'ಏಳುವುದೆಂದೀ ಜನಪದ ?' ಕವಿತೆಯಲ್ಲಿ ಇಂಥ ಎಚ್ಚೆತ್ತ ಪ್ರಜ್ಞೆ ಮೈ ಪಡೆಯುತ್ತದೆ.

ರಾಷ್ಟ್ರೀಯ ಹಾಗೂ ಸಾಮಾಜಿಕ ಸ್ವಾತಂತ್ರ್ಯದ ಬಗೆಗೆ ಗಾಢವಾಗಿ ಚಿಂತಿಸುತ್ತಿದ್ದ ಅಡಿಗರ ಸಂವೇದನೆ 'ಸಮಾಜ ಭೈರವ'ದಂಥ ಕವಿತೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ಚಿಂತಿಸಲು ತೊಡಗುತ್ತದೆ. ಸ್ವಾತಂತ್ರ್ಯಾನಂತರ ಸ್ವೀಕರಿಸಿದ ಹೊಸ ರಾಜಕೀಯ ವ್ಯವಸ್ಥೆಯಿಂದ ಪ್ರಜಾಪ್ರಭುತ್ವ ಹಾಗೂ ನೆಹರು ಅಂತಹ ಆಡಳಿತ ಶಕ್ತಿಗಳು ಗಾಢವಾಗಿ ಪ್ರೀತಿಸಿದ ಸಮಾಜವಾದದ ವೈರುಧ್ಯಗಳ ನಡುವೆ ವ್ಯಕ್ತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬಹುದಾದುದರ ಬಗೆಗಿನ ಆತಂಕಗಳು ಮೈಪಡೆಯುತ್ತವೆ. ಅಂದರೆ ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ನಡುವೆ ಮನುಷ್ಯ ತನತನ್ನವನ್ನು ಕಳೆದುಕೊಳ್ಳಬಹುದೆಂಬ ಭಯ ಈ ಕವಿತೆಯ ಹಿನ್ನೆಲೆಗಿದೆ. ಇಂಥ ಆತಂಕಗಳಿಂದ ಉತ್ಪನ್ನವಾಗುವ ಅಡಿಗರ ನಿಲುವುಗಳು ಇಲ್ಲಿಂದಾಚೆಗೆ ಬದಲಾಗುತ್ತಾ ಹೋಗುತ್ತವೆ. ವ್ಯಕ್ತಿ ವಿಶಿಷ್ಟತೆಯ ಆರಾಧನೆ ಮತ್ತು ಸರ್ವಾಧಿಕಾರತ್ವದ ವಿರೋಧ ಎರಡೂ ಅಡಿಗರಲ್ಲಿ ಒಂದೇ ಅನುಭವವಾಗಿ ಬರುತ್ತದೆ ಎಂದು ಡಾ.ಡಿ.ಆರ್ .ನಾಗರಾಜ್ ಅವರು ಸ್ವಾತಂತ್ರ್ಯಾನಂತರದ ಅಡಿಗರ ಕಾವ್ಯದ ಮುಖ್ಯ ನೆಲೆಗಳನ್ನು ಗುರುತಿಸಿದ್ದಾರೆ.

ಸಮಾಜ ಭೈರವನಾಗಿ ವ್ಯಕ್ತಿಯ ಅನನ್ಯತೆಗಳನ್ನು ಭಗ್ನಗೊಳಿಸುವುದರ ಬಗೆಗಿನ ಭಯವೆ 'ಸಮಾಜ ಭೈರವ' ಕವಿತೆಯ ವಸ್ತು. ಇಲ್ಲಿ ಸಮಾಜ-ವ್ಯಕ್ತಿ, ವ್ಯಕ್ತಿ-ವ್ಯಕ್ತಿಗಳ ನಡುವಿನ ವಿಶಿಷ್ಟತೆಗಳನ್ನು ಸಮಾಜ ಭೈರವ ತನ್ನ ಪದಾಘಾತದಿಂದ ಒಡೆದು ಹಾಕುವುದನ್ನು ಪ್ರಶ್ನಿಸಲಾಗಿದೆ. ಸ್ವಾತಂತ್ರ್ಯಾನಂತರ ಸ್ವೀಕರಿಸಿದ ಹೊಸ ರಾಜಕೀಯ ವ್ಯವಸ್ಥೆಗಳ ಬಗೆಗಿನ ಆತಂಕಗಳು ಇಂಥ ಕವಿತೆಯ ಹಿಂದಿವೆ. ಆಡಳಿತರೂಢದ ಸಮಾಜವಾದದ ಮೋಹಗಳ ಬಗೆಗಿನ ಆತಂಕಗಳಿಗೆ ಅಡಿಗರ ಸಂವೇದನೆ ತೀವ್ರವಾಗಿ ಪ್ರತಿಕ್ರಿಯಿಸಿದೆ.

> ಸಮಾಜವಾದ ಮುಖ್ಯವಾಗಿ ಸಂಪತ್ತಿನ ಹಂಚಿಕೆಗೆ ಸಂಬಂಧಪಟ್ಟದ್ದು. ಸಾಮಾಜಿಕ ನ್ಯಾಯದ ದೃಷ್ಟಿ ಅದರ ಸ್ಫೂರ್ತಿ. ಬಲಿಷ್ಠನಾದವನು ದುರ್ಬಲನ ಸುಲಿಗೆ ನಡೆಸಬಾರದು ಎಂಬ ಆತಂಕದಿಂದ ಅದು ಹುಟ್ಟಿದ್ದು. ಆದರೆ ಕೇವಲ ಧನಬಲವುಳ್ಳವನೊಬ್ಬನ ಬಡವರನ್ನು ಸುಲಿಯುವುದಕ್ಕಿಂತ ನೂರು ಪಾಲು ಮಿಗಿಲಾಗಿ ದೇಶದ ರಾಜಕೀಯ, ಆರ್ಥಿಕ, ಸೈನಿಕ ಮುಂತಾದ ಎಲ್ಲ ಅಧಿಕಾರವನ್ನೂ ಸರಕಾರ ಸಮಾಜವಾದದ ಹೆಸರಿನಲ್ಲಿ ಜನರನ್ನು ಸುಲಿಯಬಲ್ಲುದು ಎಂಬುದನ್ನು ನಾವು ಮರೆಯುತ್ತೇವೆ.[೧೩]

ಅಡಿಗರ ಈ ಮಾತುಗಳು ವ್ಯಕ್ತಿ ಸ್ವಾತಂತ್ರ್ಯ ವಿಕಾಸಕ್ಕೆ ಧಕ್ಕೆ ತರುವ ತೊಯ್ದಾಟವನ್ನೆ ಸೂಚಿಸುತ್ತವೆ. ಬಲ ಮತ್ತು ಎಡಪಂಥೀಯರ ಸರ್ವಾಧಿಕಾರತ್ವವನ್ನು ಇಲ್ಲಿ ಪ್ರಶ್ನಿಸಲಾಗುತ್ತದೆ. ಬಲ ಮತ್ತು ಎಡಪಂಥೀಯರ ಸರ್ವಾಧಿಕಾರ ಧೋರಣೆಗಳ ಬಗೆಗಿನ ಆತಂಕಗಳೆ ಇವರ ಕಾವ್ಯದ ಮುಖ್ಯಭಿತ್ತಿಯಾಗಿ ಅಭಿವ್ಯಕ್ತಗೊಳ್ಳುತ್ತವೆ.

ಸ್ವಾತಂತ್ರ್ಯಾನಂತರದ ರಾಜಕಾರಣದಲ್ಲಿ ಬೆಳೆದ ಸರ್ವಾಧಿಕಾರ ಪ್ರವೃತ್ತಿಯನ್ನು ಅಡಿಗರ ಕಾವ್ಯ ಗಂಭೀರವಾಗಿ ವಿಶ್ಲೇಷಿಸಲು ಮುಂದಾಗುತ್ತವೆ. ಸ್ವಾತಂತ್ರ್ಯಪೂರ್ವದಲ್ಲಿ ಕಟ್ಟಿಕೊಂಡ ಕನಸುಗಳ ಭ್ರಮನಿರಸನದಿಂದ ಪರಿಸ್ಥಿತಿ ತೀವ್ರವಾಗುತ್ತದೆ. ಇಂಥ ವಿಷಾದಗಳ ನೆಲೆಯಿಂದ ಅಡಿಗರ ಕಾವ್ಯ ವಿಡಂಬನೆ ವಿಮರ್ಶೆಯ ಕಡೆಗೆ ಚಲಿಸುತ್ತದೆ. 'ರಾಜ್ಯ ಬಂದರೇನು?' 'ಇಂಡಿಯನ್ ರಿಪಬ್ಲಿಕ್', 'ಇಂದು ನಮ್ಮೀ ನಾಡು ಕವನಗಳಲ್ಲಿ ಅಂಥ ವಿಡಂಬನೆ ತೀವ್ರವಾಗಿದೆ. ಸ್ವಾತಂತ್ರ್ಯಪೂರ್ವದ ಸಂಭ್ರಮಗಳು ಸ್ವಾತಂತ್ರ್ಯೋತ್ತರದಲ್ಲಿ ಸಂಪೂರ್ಣವಾಗಿ ಗೊಂದಲಕ್ಕೆ ಗುರಿಯಾಗಿದೆ.

ರಾಜ್ಯ ಬಂದರೇನು, ರಾಜ್ಯ ಹೋದರೇನು? ಎಲ್ಲ ಒಂದೆ, ಪರಕೀಯರ ದಬ್ಬಾಳಿಕೆ,
ನಮ್ಮವರೆದೆಯುಬ್ಬಾಳಿಕೆ,
ಮಬ್ಬಾಳಿಕೆ, ಗಬ್ಬಾಳಿಕೆ -
ಎಲ್ಲ ಒಂದೆ, ಒಂದೆ ![೧೪]

ಪರಕೀಯರೊಡ್ಡಿದ ದಾಸ್ಯದಿಂದ ಬಿಡುಗಡೆ ಬಯಸಿದ ಸಂವೇದನೆ ತಾನಾಗಿಯೇ ಹೊನ್ನಸಂಕೋಲೆಯನ್ನು ತೊಟ್ಟುಕೊಂಡ ದುರಂತ ಈ ಕವಿತೆಯಲ್ಲಿದೆ. ಸರ್ವಾಧಿಕಾರತ್ವವು ಸ್ವಾತಂತ್ರ್ಯಾನಂತರ ಭಾರತದ ಸಾಮಾಜಿಕ, ರಾಜಕೀಯ ಹಾಗೂ ವೈಯಕ್ತಿಕ ನೆಲೆಗಳಲ್ಲಿ ಉಂಟುಮಾಡಿದ ಆಘಾತಗಳ ಹಲವು ಮುಖಗಳನ್ನು ಇದು ಪರಿಚಯಿಸುತ್ತದೆ. ಭೂತ, ವರ್ತಮಾನಗಳ ಕ್ರಿಯಾಶೀಲತೆ ಸ್ಥಗಿತಗೊಂಡ ದುರಂತ ಇಂಥ ಕವಿತೆಗಳಲ್ಲಿ ಎದುರಾಗುತ್ತದೆ. ಸ್ವಾತಂತ್ರ್ಯಪೂರ್ವದ

ಹೋರಾಟ ಆನಂತರ ತನ್ನೆಲ್ಲ ಶಕ್ತಿಯನ್ನು ಕಳೆದುಕೊಂಡ ಪ್ರಕ್ರಿಯೆ 'ಇಂಡಿಯನ್ ರಿಪಬ್ಲಿಕ್ ' ಕವಿತೆಯಲ್ಲಿ ವಿಷಾದಕ್ಕೆ ಗುರಿಯಾಗುತ್ತದೆ.

ಆಸೆ ಮಲ್ಲಿಗೆ ಕನಸುಬಳ್ಳಿಗೆ
　ಇಲ್ಲಿ ಇಲ್ಲವೋ ಆಸರೆ;
ಉರಿವ ಬಾಣಲೆ ದೇಶ; ಹುರಿದಿವೆ
　ಹೂವು ಮಿಡಿ ಕುಡಿ ಚಿಗುರೆಲೆ

- - - - - - - - - - - - - - -

ದಾಸ್ಯ ದುರ್ದಿನದಲ್ಲಿ ದುಡುಕಿದ
　ಧುಮುಕುಬೆಳಕೂ ಬತ್ತಿದೆ,
ಮಳೆಯ ಬಿಲ್ಗಳ ಹಡೆದ ನಭಮನ
　ಬಂಜರಾಗಿದೆ, ಬಿಳಿಚಿದೆ [೧೫]

'ಇಂಡಿಯನ್ ರಿಪಬ್ಲಿಕ್ ' ಕವಿತೆ ಸ್ವಾತಂತ್ರ್ಯಾನಂತರದ ರಾಜಕೀಯ ಹಾಗೂ ಸಾಮಾಜಿಕ ಬದುಕು ಭ್ರಷ್ಟಗೊಳ್ಳುತ್ತಿರುವುದರ ಬಗೆಗಿನ ಚಿತ್ರಣವೆ ಆಗಿದೆ. ಸರ್ವಾಧಿಕಾರವು ವ್ಯಕ್ತಿವಿಶಿಷ್ಟತೆಗೆ ಮಾರಕವಾಗುವ ವಾಸ್ತವವನ್ನ ಈ ಮೇಲಿನ ಕವಿತೆಯ ಸಾಲುಗಳು ಧ್ವನಿಸುತ್ತವೆ. ಇಂಥ ಕವಿತೆಗಳಲ್ಲಿ ನವವಸಾಹತುಶಾಹಿಯ ಧೋರಣೆಗಳು ಮೈ ಪಡೆದು ಬದುಕನ್ನು ಗೊಂದಲಗೊಳಿಸುತ್ತಿರುವುದರ ಸುಳಿವುಗಳು ಎದುರಾಗುತ್ತವೆ. ಹಾಗೆಯೇ ಇವು ಬಂಡವಾಳಶಾಹಿ ಶಕ್ತಿಗಳಿಂದ ಭಾರತದಂಥ ರಾಷ್ಟ್ರಗಳು ಎಡವಿದ ಚಾರಿತ್ರಿಕ ಹೆಜ್ಜೆಗಳನ್ನು ದಾಖಲಿಸುತ್ತವೆ. ಡಾ.ಡಿ.ಆರ್. ನಾಗರಾಜ್ ಅವರ ಈ ಕೆಳಗಿನ ಮಾತುಗಳು ಬಂಡವಾಳಶಾಹಿ ರಾಷ್ಟ್ರಗಳು ಮೆರೆಯುವ ನವವಸಾಹುಶಾಹಿ ಸಂಸ್ಕೃತಿಗಳ ತಂತ್ರಗಳನ್ನು ಸೂಚಿಸುತ್ತವೆ.

> ........ಇಪ್ಪತ್ತನೆಯ ಶತಮಾನದ ಕೇಂದ್ರ ಪ್ರಶ್ನೆ ಎಂದರೆ ಸರ್ವಾಧಿಕಾರತ್ವ. ಆಧುನೀಕರಣದ ಜೊತೆಗೆ ಅನಿವಾರ್ಯವಾಗಿ ಈ ಸರ್ವಾಧಿಕಾರತ್ವ ಬರುತ್ತದೆ ಎಂಬುದು ಈಗ ಚಾರಿತ್ರಿಕ ಸತ್ಯವಾಗಿ ಹೋಗಿದೆ. ಅದರಲ್ಲೂ ಬಂಡವಾಳಶಾಹೀ ಸಮಾಜಗಳು ಒಂದಲ್ಲ ಒಂದು ಘಟ್ಟದಲ್ಲಿ ಸರ್ವಾಧಿಕಾರತ್ವವನ್ನು ತಮ್ಮ ಅಧಿಕೃತ ರೂಪ ಎಂದೇ ಘೋಷಿಸುತ್ತವೆ. ಬಂಡವಾಳಶಾಹೀ ನಾಗರಿಕತೆಯ ಗರ್ಭದಲ್ಲಿಯೇ ಸರ್ವಾಧಿಕಾರತ್ವ ಅಡಗಿರುತ್ತದೆ. ಆದರೆ ಸರ್ವಾಧಿಕಾರತ್ವ ಬರಿ ಬಲ ಪಂಥೀಯ ರೂಪದಲ್ಲೇ ಬರಬೇಕೆಂದಿಲ್ಲ, ವಾಮ ಪಂಥೀಯ ರೂಪದಲ್ಲೂ ಅದು ಕಾಣಿಸಿಕೊಳ್ಳಬಹುದು.[೧೬]

ಸ್ವಾತಂತ್ರ್ಯಾನಂತರ ವ್ಯಕ್ತಿವಿಶಿಷ್ಟತೆಗೆ ಮಾರಕವಾಗುತ್ತ ಬಂದ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಈ ಮೇಲಿನ ಸಾಲುಗಳಲ್ಲಿ ಕಾಣುತ್ತೇವೆ. ಸ್ಥಳೀಯ ರಾಜಕಾರಣ ತನ್ನೆಲ್ಲ ಹಿಂದಿನ ಆದರ್ಶಗಳಿಗೆ ತರ್ಪಣಗೈದು, ಸಾರ್ವಜನಿಕ ಸಂಪತ್ತನ್ನು ಸ್ವಾರ್ಥ, ಹಿತಾಸಕ್ತಿಗಳಿಗೆ ದೋಚುತ್ತಿರುವ ವಿಡಂಬನೆ 'ಇಂಡಿಯನ್ ರಿಪಬ್ಲಿಕ್ ' ಕವಿತೆಯ ಮುಖ್ಯ ಧಾತು.

ಲಾಭ ಲೋಭಗಳ ಕಾಳನಾಗುವ ಮನಗಳು, ಹೊಲ ಮೇಯುವ ಬೇಲಿಗಳು, ತೋಳನೇ ಕುರುಬನಾಗುವ ಪ್ರಕ್ರಿಯೆಗಳು, ಹಸುಮೊಗದ ಹುಲಿಗಳು ದೇಶದ ಎಲ್ಲೆಲ್ಲೂ ತುಂಬಿರುವ ಹಲವು ವಿವರಗಳೂ ಈ ಕವಿತೆಯ ಉದ್ದಕ್ಕು ಎದುರಾಗುತ್ತವೆ.

ಬಿಳಿದೊಗಲ ಹುಲಿ ಇನ್ನು ಸುಳಿಯದು ;
ಕರಿದೊಗಲ ನರಭಕ್ಷಕ
ನಿಮ್ಮ ಬಣ್ಣದ ಅಣ್ಣ ತಮ್ಮನು
ನಿಮಗವನೆ ಸಂರಕ್ಷಕ ![೧೭]

'ತೊಲಗು ತೊಲಗು ತೊಲಗಾಚೆ ತೊಲಗು, ಬಿಳಿದೊಗಲ ಸುಲಿಗೆಗಾರ!' ಎಂಬ ಭಯ ಇಲ್ಲಿಲ್ಲ. ಇಲ್ಲಿ ಕರಿದೊಗಲ ನರಭಕ್ಷಕ ಭಯವೇ ಅಧಿಕವಾಗಿದೆ. ಸ್ವಾತಂತ್ರ್ಯಾನಂತರದ ಇಲ್ಲಿನ ರಾಜಕೀಯ ಶಕ್ತಿಗಳ ಶೋಷಣೆಯ ವಾಸ್ತವ ಚಿತ್ರವನ್ನು ಈ ಮೇಲಿನ ಸಾಲುಗಳಲ್ಲಿ ಕಾಣುತ್ತೇವೆ. ಅಂಥ ಶಕ್ತಿಗಳ ಸರ್ವಾಧಿಕಾರಿ ಧೋರಣೆಗಳಿಂದ ಸ್ವಾತಂತ್ರ್ಯಪೂರ್ವದ ಸಂಭ್ರಮ-ಉತ್ಸಾಹಗಳೂ ಭಗ್ನಗೊಂಡು ದಿಕ್ಕೆಟ್ಟ ಸ್ಥಿತಿಯನ್ನು ನವವಸಾಹತು ಸಂಸ್ಕೃತಿಯ ಪ್ರಕ್ರಿಯೆಯೆಂದೇ ಭಾವಿಸಬಹುದು.

ನವವಸಾಹತುಶಾಹಿ ಸಂಸ್ಕೃತಿಯ ಸಂದರ್ಭದ ಗೊಂದಲಗಳು ಶ್ರೀ ಸಾಮಾನ್ಯನ ಚೈತನ್ಯವನ್ನು ದಿಕ್ಕು ತಪ್ಪಿಸಿದುದರ ಬಗೆಗಿನ ವಿಡಂಬನೆ 'ಇಂದು ನಮ್ಮೀ ನಾಡು' ಕವಿತೆಗಳಲ್ಲಿ ಹರಳುಗಟ್ಟುತ್ತವೆ. ಹೊಸತು - ಹಳತು, ಭೂತ-ವರ್ತಮಾನಗಳ ಬಗೆಗೆ ಜನತೆ ತಳೆದ ನಿಲುವುಗಳ ವಿಡಂಬನೆಯೆ ಇಲ್ಲಿ ಪ್ರಧಾನವಾಗಿದೆ. ಪರಂಪರೆಯನ್ನು ನೆಚ್ಚಿಕೂತ ಪ್ರಜ್ಞೆಯನ್ನು ಅಡಿಗರು ಈ ಕವನಗಳಲ್ಲಿ ಟೀಕೆಗೆ ಗುರಿಪಡೆಸಿದ್ದಾರೆ.

ಸ್ವಾತಂತ್ರ್ಯಾನಂತರ ಹಳೆಯ ಹಾಗೂ ಹೊಸ ಮೌಲ್ಯಗಳನ್ನು ಸಮನ್ವಯಗೊಳಿಸಿಕೊಳ್ಳಲಾರದ ಕ್ರಿಯಾಶೀಲತೆಯನ್ನು ಈ ಕವನಗಳಲ್ಲಿ ಪ್ರಶ್ನಿಸಲಾಗಿದೆ. ಆಚರಣೆಯಾಗಿ ಮಾತ್ರ ಚಲನಶೀಲವಾಗುವ ಪರಂಪರೆಯ ಬಗೆಗೆ ಮೂರೂ ಕವಿತೆಗಳಲ್ಲಿ ಅಡಿಗರು ತೀವ್ರವಾಗಿಯೆ ಖಂಡಿಸುತ್ತಾರೆ. ಸ್ವಾತಂತ್ರ್ಯವೆಂಬ ಜಾತ್ರೆ ಮುಗಿದು ನಾಡೆಲ್ಲ ಈಗ ನರಕದ ಕಡೆ ಮುಖ ಮಾಡಿದೆ. ಮನುಷ್ಯನ ಅಂತರಂಗ ಕರಡಿ ಗುಹೆಯಂತಿದೆ. ಈ ನಾಡು ಶೋಷಕ ಶಕ್ತಿಗಳ ನಾಟ್ಯರಂಗವಾಗಿದೆ. ಹೊಸ ನಾಡನ್ನು ಕಟ್ಟುವ ಆದರ್ಶದ ಕನಸುಗಳು ಮಾಯವಾಗಿ ಸಮಾಜದಲ್ಲುಂಟಾದ ನೈತಿಕ ಅಧಃಪತನ, ಭ್ರಷ್ಟತೆ, ತೋರಿಕೆಯ ಬದುಕು, ಗತಕಾಲದ ವೈಭವದ ಬಗೆಗಿನ ಅಂಧಪ್ರೀತಿಯನ್ನು ಈ ಮೂರೂ ಕವಿತೆಗಳಲ್ಲಿ ಅಡಿಗರು ವಿಡಂಬನೆಗೆ ಗುರಿಪಡಿಸಿದ್ದಾರೆ. ಒಂದು ಸಂಸ್ಕೃತಿಯು ಅವನತಿಯ ಕಡೆಗೆ ಮುಖ ಮಾಡಿರುವುದನ್ನು ಈ ಕವಿತೆಗಳು ಧ್ವನಿಸುತ್ತವೆ.

ಸ್ವಾತಂತ್ರ್ಯದ ಬಗ್ಗೆ ಹೋರಾಟ ನಡೆಸುತ್ತಿದ್ದ ಕಾಲದಲ್ಲಿ ಗಾಂಧೀಜಿಯಂಥವರ ಮುಂದಾಳುತನಕ್ಕೆ ಕಟ್ಟುಬಿದ್ದು, ಆಶೆಗಳನ್ನೆಲ್ಲ ಹತ್ತಿಕ್ಕಿಕೊಂಡು ಅಸಹಜವಾದ ಸ್ಥಿತಿಯಲ್ಲಿ ಅನೇಕ ವರ್ಷಗಳನ್ನು ಕಳೆದ ನಮ್ಮ ದೇಶಭಕ್ತ ವೀರಾಧಿವೀರರು ಸ್ವಾತಂತ್ರ್ಯ ದೊರೆತ ತತ್ಕ್ಷಣ ಅನೇಕ ದಿನಗಳವರೆಗೆ ಬಲವಂತ

ಉಪವಾಸ ವ್ರತ ಕೈಗೊಂಡ ಮನುಷ್ಯ ಆಹಾರವನ್ನು ಕಂಡ ಕೂಡಲೇ ಹುಚ್ಚು ಹರಿಯುವಂತೆ ಕೈಗೆ ಸಿಕ್ಕಿದ ಭೋಗಸಾಮಾಗ್ರಿಗಳನ್ನೆಲ್ಲ ನಿರ್ಲಜ್ಜವಾಗಿ ದೋಚಿಕೊಳ್ಳತೊಡಗಿದ ದೃಶ್ಯ ......[೧೮]

ಅಡಿಗರ ಈ ಮೇಲಿನ ಉದ್ಧರಣೆ ಸ್ವಾತಂತ್ರ್ಯಾನಂತರದ ಭಾರತದ ಸಾರ್ವಜನಿಕ ಮನಸ್ಥಿತಿಯನ್ನು ಪ್ರಕಟಿಸುತ್ತದೆ. 'ಇಂದು ನಮ್ಮೀ ನಾಡು' ಕವಿತೆಗಳಲ್ಲಿ ಈ ಬಗೆಯ ವಿಚಾರಧಾರೆಯನ್ನೆ 'ಜಾತ್ರೆ', 'ಉತ್ಸವ', 'ಬೇರು ಸತ್ತ ಮರ' ದಂಥ ಪ್ರತಿಮೆಗಳಿಂದ ಅಭಿವ್ಯಕ್ತಿಸಲಾಗಿದೆ. ಗತಕಾಲದ ವೈಭವವನ್ನೇ ಜಪ ಮಾಡುತ್ತ ವಾಸ್ತವವನ್ನು ಮರೆತ ವ್ಯವಸ್ಥೆಯನ್ನು ಇಲ್ಲಿ ಗೇಲಿಮಾಡಲಾಗಿದೆ. ಪರಂಪರೆಯ ವೈಭವಗಳ ಆತ್ಮರತಿಯಲ್ಲಿ ಮಗ್ನವಾದ ಮನಸ್ಥಿತಿಯನ್ನು ಪ್ರಶ್ನಿಸುವಂತೆಯೇ ಪಶ್ಚಿಮದ ಕುರುಡು ಅನುಕರಣೆಯನ್ನು ಅಡಿಗರು ವಿರೋಧಿಸುತ್ತಾರೆ.

ಪಡುವಲದ ಗಾಳಿ ಆಡಿದರೆ ತೂಗುವುದಟ್ಟೆ -
ಎಂಥ ಮಾರ್ದನಿ, ಎಂಥ ನಕಲು ಕುಣಿತ !
ನೆಲದ ಕೊಳೆನೀರನೊಲ್ಲದು ನಮ್ಮ ದಿವ್ಯತರು ,
ಕುಡಿದು ಬೆಳೆವುದು ಸ್ವಪ್ನಲೋಕದಮೃತ ! [೧೯]

ಭಾರತೀಯ ಸಂವೇದನೆಯು ಅನ್ಯ ಸಂಸ್ಕೃತಿಗಳ ಬಗೆಗೆ ತಳೆದ ನಿಲುವುಗಳನ್ನು ಇಲ್ಲಿ ವಿಡಂಬನೆಗೆ ಗುರಿಪಡಿಸಲಾಗಿದೆ. ಪಶ್ಚಿಮ ಸಂಸ್ಕೃತಿಯನ್ನು ನಮ್ಮ ಸಂವೇದನೆ ಸ್ವೀಕರಿಸಿದ ಮನಸ್ಥಿತಿಯನ್ನೆ 'ಮಾರ್ದನಿ' 'ನಕಲು ಕುಣಿತ'ಗಳೆಂದು ಸೂಚಿಸಲಾಗಿದೆ. ಅನುಸಂಧಾನದಿಂದ ಅಥವಾ ಸಂಘರ್ಷನಾತ್ಮಕವಾಗಿ ಪರಕೀಯ ಸಂಸ್ಕೃತಿಯನ್ನು ಎದುರಿಸಲಾರದ ಮನಸ್ಥಿತಿಗಳ ಬಗೆಗೆ ತೊರಿದ ಪ್ರತಿರೋಧಗಳಲ್ಲಿ ಇದೂ ಒಂದು ಬಗೆಯದು. ರಾಜಕೀಯ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳ ಸಂದರ್ಭದಲ್ಲಿ ಭಾರತೀಯ ಸಂವೇದನೆ ಪಾಶ್ಚಾತ್ಯ ಸಂಸ್ಕೃತಿಯ ಕುರುಡು ಅನುಕರಣೆಯಲ್ಲಿ ಸ್ವಂತಿಕೆಯನ್ನು ಮರೆತು, ತನ್ನ ಸಂಸ್ಕೃತಿಯ ಅನನ್ಯತೆಗಳ ಕಡೆಗೆ ತೋರಿದ ಅಸಡ್ಡೆಯನ್ನು ಈ ಮೇಲಿನ ಸಾಲುಗಳು ಪ್ರಶ್ನಿಸುತ್ತವೆ. ಅನ್ಯ ಸಂಸ್ಕೃತಿಯ ಸ್ವೀಕರಣೆ ಮತ್ತು ನಿರಾಕರಣೆಗಳ ಅನುಸಂಧಾನದ ಸಂದರ್ಭಗಳಲ್ಲಿ ಎದುರಾಗುವ ಗೊಂದಲಗಳನ್ನು ಇಂಥ ಕವಿತೆಗಳಲ್ಲಿ ಅಡಿಗರು ಮುಖಾಮುಖಿಯಾಗಿಸುತ್ತಾರೆ.

ಹೊಸ ಸಂಸ್ಕೃತಿಗಳ ಸಂಪರ್ಕ-ಸಂಘರ್ಷಗಳಿಂದಲೂ ತನ್ನ ಕೊಳಕನ್ನು ಹಸನುಗೊಳಿಸಿಕೊಳ್ಳಲಾರದ ಸ್ಥಿತಿಯನ್ನು 'ಬತ್ತಲಾರದ ಗಂಗೆ' ಕವಿತೆಯಲ್ಲಿ ವಿಡಂಬಿಸುತ್ತಾರೆ. ಕಂಬಾರರ 'ಗಂಗಾಮಾಯಿ' ಕವಿತೆಯು ಇದೇ ಬಗೆಯ ಸಂಘರ್ಷವನ್ನುಳ್ಳದ್ದು. ಭಾರತೀಯ ಸಂಸ್ಕೃತಿ ಹಲವು ಸಂಸ್ಕೃತಿಗಳ ಸಂಪರ್ಕಕ್ಕೆ ಸಿಕ್ಕಿದರೂ ತನ್ನ ಅರ್ಥರಹಿತ ಆಚಾರ ವಿಚಾರಗಳಿಂದ ಸ್ಥಗಿತಗೊಂಡ ಸ್ಥಿತಿಗತಿಗಳನ್ನು ಇಲ್ಲಿ ವ್ಯಂಗಕ್ಕೆ ಗುರಿಪಡಿಸಲಾಗಿದೆ.

ಹೊಸ ನೀರು ಬಂದರೂ ಅದೇ ಪುರಾತನದಮಲು
* * * * * * *
ಹಿಮಾಲಯವೆ ಕರಗಿ ಕೆಳಗಿಳಿವ ವರ್ಷದ ತೊಡಕು,

ಅಮೃತಜಲ ಮೃತ್ತಿಕೆಗಳ ಸಮ ಜೋಡಿ ;
ನಿಂತು ಕೊಳೆಯುವ ಮಡುಗಳಲ್ಲಿ ಮಡಗಿಯೆ ಇದೆ
ಹಳೆ ಕೊಳೆಯ ದುರ್ನಾತ ಕೆಸರು ರಾಡಿ

* * * * * * *

ಬತ್ತಿ ಹೋಗಲಿ ಗಂಗೆಯೊಂದು ಸಲ ತಳ ಬಿರಿದು
ಕುರಕ್ಷೇತ್ರ ಜಪಮಾಲೆ ನುಚ್ಚುನೂರ್ರು;
ಕತ್ತು ಕತ್ತರಿಸಲಿಕ್ಕಿಲ್ಲ ಆ ಇನ್ನೊಬ್ಬನಿರುವುದು, ಎರಡು
ನದಿಗಳೊಂದಾಗಿ ಮುಂದಕೆ ಸಾಗಲು.[೨೦]

ಪಾರಂಪರಿಕ ಮೌಲ್ಯಗಳ ಮುಖವಾಡಗಳು ಅದಲು ಬದಲಾದ ಸ್ಥಿತಿ, ಅಂಥ ಅದಲು ಬದಲುಗಳಿಂದ ನಿರ್ಮಾಣವಾಗಿರುವ ಕ್ರೌರ್ಯವನ್ನು ಇಲ್ಲಿ ಪರಿಹಾಸ್ಯಕ್ಕೊಳಪಡಿಸಲಾಗಿದೆ. ಯುಗಪುರುಷರ ವಿಚಾರಧಾರೆಗಳು ಕೇವಲ ಪುಸ್ತಕಗಳಲ್ಲಿ, ಭಜನೆ ಭಜಂತ್ರಿಗಳಲ್ಲಿ ಮಾತ್ರ ಅಡಗಿರುವ ಸ್ಥಿತಿಯನ್ನು ಅಡಿಗರು ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಪಾಶವೀ ಮೌಲ್ಯಗಳು ಮಾನವೀಯಗೊಳ್ಳಬೇಕೆಂಬ ಆಶಯ ಇಲ್ಲಿಯದಾಗಿದೆ. 'ಬತ್ತಿ ಹೋಗಲಿ ಗಂಗೆಯೊಂದು ಸಲ ತಳ ಬಿರಿದು' ಎನ್ನವೆಡೆ ಅಮಾನವೀಯತೆ ಇಲ್ಲವಾಗಲು ಇದು ಅನಿವಾರ್ಯವೆಂಬ, ಅನ್ಯ ಸಂಸ್ಕೃತಿಗಳ ಸಂಪರ್ಕದಿಂದ ತನ್ನ ಅನನ್ಯತೆಗಳನ್ನು ಕಳೆದುಕೊಳ್ಳದೆ ಎರಡು ನದಿಗಳು ಒಂದಾಗಿ ಮುಂದಕ್ಕೆ ಸಾಗಬೇಕೆಂಬ ಆಶಯ ಅಡಿಗರದಾಗಿದೆ. ಹೊಸ ಸಂಸ್ಕೃತಿಗಳ ಸಂಸರ್ಗದಿಂದ ಪರಂಪರೆಯ ಜಡಗೊಂಡ ಮೌಲ್ಯಗಳು ಸಂಸ್ಕರಣಗೊಂಡು ಮರುಹುಟ್ಟು ಪಡೆಯಬೇಕೆಂಬ ತೀವ್ರವಾದ ಅಭೀಪ್ಸೆ ಇಂಥ ಕವಿತೆಗಳಲ್ಲಿ ವ್ಯಕ್ತವಾಗುತ್ತದೆ.

ರಕ್ತನಾಳಗಳಲ್ಲಿ ರೋಗಾಣುಗಳ ವಿಷ
ತುಂಬುತ್ತಲೇ ಇರುತ್ತದೆ. ಮಿತಿ ಮೀರದಂತೆ ಬಿಳಿ ರಕ್ತಕಣಗಳ ದಳ
ಸದಾ ಯುದ್ಧ ಸನ್ನದ್ಧ:
\- - - - - - - - - - - - - - - - -
ಸ್ವಸ್ಥತೆಯ ಮರೆತ ಅಸ್ವಸ್ಥ ಮಂದಿಯ ಕೂಳೆ
ಕಳೆಗದ್ದೆಗಳ ತುಂಬ. ಕೆಸರಿನಲ್ಲುಸುರು ಕಟ್ಟಿದೆ ಸಂಸ್ಕೃತಿಯ ನಾಳ.
ಶಸ್ತ್ರಕ್ರಿಯೆಗೆ ಬಂತು ತಕ್ಕ ಕಾಲ.
ಪರುಶರಾಮರ ಕೊಡಲಿ ಎಲ್ಲಿ, ಎಲ್ಲಿ?[೨೧]

'ಇಂದೂ ನಮ್ಮೀ ನಾಡು', 'ಶ್ರೀ ರಾಮನವಮಿಯ ದ್ಹಿವಸ', 'ಅಜ್ಜ ನೆಟ್ಟ ಆಲ', 'ಹಳೆಯ ದೇವರುಗಳೆಲ್ಲ ಸತ್ತು', 'ಕೆಸರು ತೆಗೆಯುವುದು', 'ಬತ್ತಲಾರದ ಗಂಗೆ', ಯಂಥ ಕವಿತೆಗಳಲ್ಲಿ ಈ ಬಗೆಯ ಪರಕೀಯ ಮತ್ತು ಸ್ಥಳೀಯ ಸಂಸ್ಕೃತಿಗಳ ಸಂಘರ್ಷ ಒಂದು ಮುಖ್ಯ ಭಿತ್ತಿಯಾಗಿ ಮೈ ಪಡೆಯುವುದನ್ನು ಕಾಣಬಹುದು.

ವಸಾಹತು ಸಂಸ್ಕೃತಿಯು ಸ್ವಾತಂತ್ರ್ಯಾನಂತರ ಭಾರತೀಯ ಬದುಕಿನ ಮೇಲೆ ಸಾಧಿಸಿದ ಹಿಡಿತ ಮತ್ತು ಅದರೊಂದಿಗೆ ಭಾರತೀಯ ಸಂಸ್ಕೃತಿ ಸಂಘರ್ಷಿಸಿದ ಸಂಘರ್ಷಣಾ ನೆಲೆಗಳನ್ನು ಅಡಿಗರ ಕಾವ್ಯ ಪ್ರಧಾನವಾಗಿ ಅಭಿವ್ಯಕ್ತಿಗೆ ಗುರಿಪಡಿಸುತ್ತದೆ. ಸ್ವಾತಂತ್ರ್ಯಾನಂತರದಲ್ಲಿ ನವವಸಾಹತುಶಾಹಿ ಸಂಸ್ಕೃತಿಯು ನಮ್ಮ ಭೌತಿಕ ಹಾಗೂ ಮಾನಸಿಕ ಜಗತ್ತಿನ ಮೇಲೆ ಉಂಟು ಮಾಡಿದ ಪರಿಣಾಮಗಳನ್ನು ಹಾಗೂ ರಾಜಕೀಯ, ಸಾಮಾಜಿಕ ಸಂಕೀರ್ಣತೆಗಳನ್ನು ಅಡಿಗರ ಕಾವ್ಯ ವಿಶ್ಲೇಷಣೆಗೆ ಗುರಿಪಡಿಸಿದೆ.

> ಈಗ ಈ ಲೋಕ ಅಸ್ತವ್ಯಸ್ತ : ಗಡಿಯಾರ
> ಬಿಚ್ಚಿ ಯಂತ್ರೋಪಕರಣಗಳ ಚೆಲ್ಲಾಪಿಲ್ಲಿ
> ಚೆಲ್ಲಿ, ಕೈಕಟ್ಟಿ ಕುಳಿತ ರಿಪೇರಿಯವನಂತೆ
> ಯಾವ ತಿರುಗಣೆ ಮೊಳೆಯನಲ್ಲಿ ಹಾಕಲಿ ? ಮತ್ತೆ ಈ
> ಸುರುಳಿ ತಂತಿಯನ್ನೆಲ್ಲಿ ತುರುಕಲಿ ?
> ಗಡಿಯಾರವಿದೆ, ಯಂತ್ರವಿದೆ, ಎಲ್ಲ ಇವೆ. ಇಲ್ಲ
> ಸಾವಯವ ಶಿಲ್ಪದ ಸಮಗ್ರೀಕರಣಬಲ.[೨೨]

'ಶರದ್ಗೀತ'ದ ಈ ಸಾಲುಗಳು ಅಂಥ ಸಂಕೀರ್ಣಾವಸ್ಥೆಗಳಿಗೆ ವ್ಯಾಖ್ಯೆಯಂತಿವೆ. ಎರಡು ಸಂಸ್ಕೃತಿಗಳ ಮುಖಾಮುಖಿಯಿಂದ ಆಗುವ ಸ್ಥಿತ್ಯಂತರಗಳ ಪ್ರಶ್ನೆಗಳನ್ನು ಅಡಿಗರ ಕಾವ್ಯ ಮುಖ್ಯ ವಾಗ್ವಾದವನ್ನಾಗಿಯೂ ಮಾಡಿಕೊಂಡಿದೆ. ಅದು ಸಮಕಾಲೀನ ರಾಜಕೀಯ ಧೋರಣೆಗಳನ್ನು ಸಾಂಸ್ಕೃತಿಕ ಪ್ರಶ್ನೆಗಳೊಂದಿಗೆ ವಿಶ್ಲೇಷಿಸಲು ತೊಡಗುತ್ತದೆ. ಅಂಥ ಪ್ರಶ್ನೆಗಳು ವ್ಯಕ್ತಿ, ಪರಂಪರೆ, ಸಮಾಜ ವ್ಯವಸ್ಥೆಗಳನ್ನು ಆವರಿಸಿಕೊಳ್ಳುತ್ತ ಹೊಸ ವಿಚಾರಧಾರೆಯೊಂದನ್ನು ಶೋಧಿಸಲು ಮುಂದಾಗುವುದು ಅಡಿಗರ ಕಾವ್ಯದ ವೈಶಿಷ್ಟ್ಯವಾಗಿದೆ.

### ೩. ಸಮಕಾಲೀನ ರಾಜಕೀಯ ಧೋರಣೆಗಳು : ವ್ಯಕ್ತಿ ಸ್ವಾತಂತ್ರ್ಯಕ್ಕೆ ಒದಗಿದ ದಕ್ಕೆ

'ನೆಹರೂ ನಿವೃತ್ತರಾಗುವುದಿಲ್ಲ', 'ಬರುತ್ತಾರೆ', 'ಎಡ-ಬಲ' 'ಗಜೇಂದ್ರ ಮೋಕ್ಷ'ದಂಥ ಕವಿತೆಗಳಲ್ಲಿ ಸಮಕಾಲೀನ ರಾಜಕೀಯ ವ್ಯವಸ್ಥೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೊದಗಿದ ಧಕ್ಕೆಯನ್ನು ಸರ್ವಾಧಿಕಾರಿ, ಧೋರಣೆಗಳನ್ನು ವಿಶ್ಲೇಷಿಸಲಾಗಿದೆ. 'ನೆಹರೂ ನಿವೃತ್ತರಾಗುವುದಿಲ್ಲ' ಕವಿತೆ ಪ್ರಜಾಪ್ರಭುತ್ವದಲ್ಲಿಯೂ ಸರ್ವಾಧಿಕಾರಿ ಧೋರಣೆಗಳನ್ನು ತಳೆದ ವ್ಯಕ್ತಿತ್ವವನ್ನು ಪ್ರಶ್ನಿಸುವುದಾಗಿದೆ. ಅಧಿಕಾರಲಾಲಸೆಯ ನೆಹರೂ ವ್ಯಕ್ತಿತ್ವ ಹಾಗೂ ಸ್ವಾತಂತ್ರ್ಯಾನಂತರ ರಾಷ್ಟ್ರಕ್ಕೆ ನೀಡಿದ ಪೊಳ್ಳು ಆಶ್ವಾಸನೆಗಳ ವಿಡಂಬನೆಯೂ ಇಲ್ಲಿ ಮುಖ್ಯ ಭಿತ್ತಿಯಾಗಿದೆ. 'ಎರಡು ದೋಣಿಗೆ ಕಾಲನಿಟ್ಟು.... ಇಲ್ಲದ ತೃತೀಯ ಕ್ರಮಕ್ಕೆ' ದಾರಿಯನ್ನು ಹುಡುಕುವ ನೆಹರೂ ರಾಜಕೀಯ ಧೋರಣೆಗಳು ಕಟುವ್ಯಂಗಕ್ಕೆ ಗುರಿಯಾಗಿವೆ. ಇಂಥ ಧೋರಣೆಗಳ ಎಲ್ಲ ಮಟ್ಟದ ರಾಜಕೀಯ ವ್ಯಕ್ತಿತ್ವಗಳನ್ನು ಈ ಕವಿತೆ ಪ್ರಶ್ನಿಸುವುದರೊಂದಿಗೆ ಮಹತ್ವವನ್ನು ಪಡೆಯುತ್ತದೆ. ಹಾಗೆಯೆ ನೆಹರೂ ವ್ಯಕ್ತಿತ್ವ ಮತ್ತು ನೆಹರೂ ಅವರ ಭಾರತದ ಸ್ವಾತಂತ್ರ್ಯ ಕಲ್ಪನೆಯ ಇಬ್ಬಂದಿತನವನ್ನು ಈ ಕವಿತೆ ಮಾರ್ಮಿಕವಾಗಿ ಪ್ರಕಟಿಸುತ್ತದೆ. ಗಾಂಧೀಜಿಯವರ ಸ್ವಾತಂತ್ರ್ಯ ಪೂರ್ವದ ವಿಕೇಂದ್ರಕರಣ, ತನ್ನ ಕನಸಿನ

ಭಾರತದ ಎಲ್ಲ ಆಶಯಗಳನ್ನು ನೆಹರೂ ಅವರ ಕೈಗಾರೀಕರಣ, ಪಾಶ್ಚಾತೀಕರಣ, ಕೇಂದ್ರೀಕರಣ ಧೋರಣೆಗಳು ಸಂಪೂರ್ಣವಾಗಿ ತದ್ವಿರುದ್ಧ ಹಾದಿಯನ್ನು ಹಿಡಿಯುತ್ತವೆ. ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಕಟ್ಟಿಕೊಂಡಿದ್ದ ಕನಸುಗಳು ಆದರ್ಶಗಳು ಮತ್ತೊಂದು ದಾರಿ ಹಿಡಿದದ್ದು ಬ್ರಿಟಿಷ್ ಮಾದರಿಯ ಸರಕಾರ ಭಾರತದಲ್ಲಿ ಮುಂದುವರೆದುದರ ಸಂಕೀರ್ಣಾವಸ್ಥೆಗಳನ್ನು ಅಡಿಗರ ಸಂವೇದನೆ ತೀವ್ರವಾಗಿ ವಿರೋಧಿಸುತ್ತದೆ.

'ಬರುತ್ತಾರೆ' ಕವಿತೆ ಇದೆ ಬಗೆಯ ರಾಜಕೀಯ ಆಡಂಬರಗಳನ್ನು ಗೇಲಿಮಾಡುವುದಾಗಿದೆ. ಕೇವಲ ಅಧಿಕಾರಕ್ಕಾಗಿ 'ವೋಟು' ಗಳಿಕೆಗಾಗಿ ಗಾಂಧೀ ವೇಷ ಧರಿಸಿ ಬರುವ, ಯಾವ ರಾಜಕೀಯ ಸಿದ್ಧಾಂತದ ಬಗೆಗೂ ನಿಷ್ಠೆಯಿಲ್ಲದ ರಾಜಕೀಯ ಪ್ರಜ್ಞೆಯನ್ನು ಇಲ್ಲಿ ಟೀಕೆಗೊಳಪಡಿಸಲಾಗಿದೆ.

ಉಪವಾಸದಿಸಮ್ಮ ಹಿಡಿದು ತೃಪ್ತತೇಗ ಬರಿಸುವವರು,
ಸಾಲಮಾಡಿ ತುಪ್ಪ ತಿಂದು ನಮ್ಮ ಮೂತಿಗೊರಸಿದವರು
ಯೋಜನೆಗಳ ಯಜ್ಞದಲ್ಲಿ ವಪೆಯ ರುಚಿಯನರಿತವರು,
ಕಾನೂನಿನ ಗಾಣದಿಂದ ಮರಳಿನೆಣ್ಣೆ ತೆಗೆಯುವವರು
ಕತ್ತೆ ಕುದುರೆಯಾಗುವಂತೆ, ನಾಯಿಬಾಲ ನಿಗುರುವಂತೆ
ಮಾಡಬಲ್ಲ ದೊಂಬರು.[೨೩]

ಈ ಮೇಲಿನ ಸಾಲುಗಳು ರಾಜಕೀಯ ವೇಷಧಾರಿಗಳ ವ್ಯಕ್ತಿತ್ವವನ್ನೇ ವಿಮರ್ಶೆಗೆ ಗುರಿಪಡಿಸುತ್ತವೆ. ಸ್ವಾತಂತ್ರ್ಯಾನಂತರ ಉನ್ನತಾದರ್ಶಗಳು ಮೂಲೆ ಗುಂಪಾಗಿ ಭ್ರಷ್ಟಗೊಳ್ಳುತ್ತಿರುವ ಸೂಚನೆಗಳು ಇಲ್ಲಿ ಪ್ರಕಟಗೊಳ್ಳುತ್ತವೆ. ರಾಜಕೀಯ ವೇಷಧಾರಿಗಳ ಬಗೆಗೆ ಎಚ್ಚರವಿರಬೇಕೆಂಬ ಸಂದೇಶ ಇಂಥ ಕವಿತೆಗಳದಾಗಿದೆ. ಭಾರತದ ಸಂದರ್ಭದಲ್ಲಿ ಎಡ ಮತ್ತು ಬಲಪಂಥೀಯ ಧೋರಣೆಗಳಿಂದ ಶ್ರೀ ಸಾಮಾನ್ಯನ ಬದುಕು ಗೊಂದಲಗೊಂಡ ಸ್ಥಿತಿಯನ್ನು 'ಎಡ-ಬಲ', 'ಗಜೇಂದ್ರ ಮೋಕ್ಷ' ದಂಥ ಕವಿತೆಗಳು ಚಿಂತಿಸುತ್ತವೆ. 'ಎಡ-ಬಲ'ಗಳ ಕವಾತು ನಡೆಸುವ ಇಂಥ ರಾಜಕೀಯ ಧೋರಣೆಗಳ ಅಪ್ರಬುದ್ಧ ಬುದ್ಧಿಗೆ ಬೆಂಕಿಯಿಕ್ಕಬೇಕೆಂಬುದು ಇಲ್ಲಿನ ನಿಲುವು. 'ಗಜೇಂದ್ರ ಮೋಕ್ಷ' ಕವಿತೆಯ 'ನಮ್ಮ ಶತ್ರು ಯಾರು?' ಎಂಬ ಪ್ರಶ್ನೆಯೇ ಮಾರ್ಮಿಕವಾದುದು. ಅಪ್ರಬುದ್ಧ ಹಾಗೂ ಸರ್ವಾಧಿಕಾರಿ ರಾಜಕೀಯ ಧೋರಣೆಗಳಿಂದ ದಿಕ್ಕಟ್ಟ ಭಾರತದ ಕಥನವನ್ನೆ ಈ ಕವಿತೆ ಇಂಥ ಪ್ರಶ್ನೆಗಳಾದ ವಿಡಂಬಿಸುತ್ತದೆ. ಇಂಥ ವಿಡಂಬನೆ 'ಗಾಂಧಿರಾಜ್ಯ','ಗಾಂಧಿ:೧೯೮೫','ಸ್ವಾತಂತ್ರ್ಯೋತ್ಸವ:೧೯೭೭','ಬಹುಮತ' ಮೊದಲಾದ ಕವಿತೆಗಳಲ್ಲಿ ಮುಂದುವರೆಯುತ್ತದೆ. 'ನೆಹರೂ ನಿವೃತ್ತರಾಗುವುದಿಲ್ಲ' ವೆಂಬುದರ ಧ್ವನಿ 'ಗಾಂಧಿ ರಾಜ್ಯ', 'ಗಾಂಧಿ : ೧೯೮೫' ಕವಿತೆಗಳಲ್ಲಿ ಮಾರ್ದನಿಸುತ್ತದೆ.

ರಾಮರಾಜ್ಯ ಬರಲಿಲ್ಲ ; ಬಂದದ್ದು ಗಾಂಧೀ ರಾಜ್ಯ,
ಯಾವ ಗಾಂಧೀಯದು ? ಕೇಳುವುದೇ ಕುಚೋದ್ಯ
ಗಾಂಧಿ ಎಂದರೆ ಇಂದಿರಾಗಾಂಧಿ ಎಂಬುದೇ ತ್ರಿಭುವನಕು ವೇದ್ಯ.[೨೪]
- - - - - - - - - - - - - - - - - - - - -

ಆದರ್ಶರಾಜ್ಯಕ್ಕೆ ತಾನೆ ಮೈಯಾಗ ಬಯಸಿ ಬಂದಿಳಿದವನು
ಮಹಾತ್ಮ ಗಾಂಧಿ ಕನ್ನಡಿಯಾಚೆ ಎಂಥ ಗಂಟು !
ಕಲ್ಲು ಹೊಡೆ ಹೊಡೆದು ಕನ್ನಡಿಯನಷ್ಟೂ ಚೂರು
ಚೂರು ಮಾಡಿದೆವಯ್ಯ ಕಷ್ಟಪಟ್ಟು [೨೫]

ಇಂಥ ಸಾಲುಗಳಲ್ಲಿ ಗಾಂಧೀಜಿಯ ಆದರ್ಶ ಕನಸುಗಳು ಭಗ್ನಗೊಳ್ಳುತ್ತಿರುವುದರ ಬಗೆಗಿನ ವಿಷಾದಗಳು, ಸಾಮ್ರಾಜ್ಯಶಾಹಿ ಬಗೆಗಿನ ವಿರೋಧಗಳು, ಅಧಿಕಾರ ಲಾಲಸೆಯ ವಿಡಂಬನೆ, ಭ್ರಷ್ಟರಾಜಕಾರಣದ ದೃಢವಾಸ್ತವಗಳು ಅಷ್ಟೇ ಏಕೆ ಸಮಕಾಲೀನ ಭಾರತದ ದುರಂತ ಪರಂಪರೆಗಳೇ ಎದುರಾಗುತ್ತವೆ. ಅಡಿಗರ ಈ ಬಗೆಯ ಧೋರಣೆಗಳಲ್ಲಿ ಅವರ ಕಾವ್ಯದ ಆಶಯಗಳನ್ನು ಕಾಣಬಹುದಾಗಿದೆ.

ನಿನ್ನ ಗದ್ದೆಗೆ ನೀರು ತರುವ ನಾಲೆಗಳೆಲ್ಲ
ಬಂದು, ಬೇಕಾದದ್ದು ಬೆಳೆದುಕೋ ಬಂಧು :
ಕಲೆ ಧರ್ಮ ನ್ಯಾಯ, ಕಾನೂನು ಸ್ವಾತಂತ್ರ್ಯ ಇತ್ಯಾದಿ ಮೂಲವ್ಯಾಧಿ,
ನನ್ನ ಕುರ್ಚಿಗೆ ತಕ್ಕ ಗಾದಿ
ಮುಖ್ಯವಾದ ಮಾತೆಂದರೆ ಓ ಭಾರತ ಸಂಸ್ಕೃತಿಯ ಮುಖ್ಯ ಪ್ರಾಣ,
ಬಾಲವಾಡಿಸಬಾರದು, ಹಲ್ಲು ಕಿರಿಯಬಾರದು,
ಹುಬ್ಬೇರಿಸುವುದಂತೂ ಬಹಳ ದೊಡ್ಡ ಗುನ್ಹೆ ,
ಹಿಂದಿನ ಪಾಷಂಡನ, ಇಂದಿನ ಫ್ಯಾಸಿಸ್ಟನ ಚಿಹ್ನೆ ;
ತಾಳ ಲಯಕ್ಕೆ ಸರಿಲಾಗ ಹಾಕುವುದೆ ಲಗಾಯ್ತಿನ ಹಿರಿಮೆ
- - - - - - - - - - - - - - - - - - - -

ಹೀಗೆ ಮನೆಯಿಂದ ಮನೆಗೆ ಜಿಗಿದಾಡುವುದು
ಭಾರತೀಯತೆಯ ಬಹುಮುಖ್ಯ ಲಕ್ಷಣ. ಇಲ್ಲಿ ಸ್ಥಿತಿಯೇ
ಶ್ಲೇಷೆಯಿಂದ ಬದಲಾವಣೆ, ಅದ್ವೈತ, ದ್ವೈತ,
ವಿಶಿಷ್ಟಾದ್ವೈತ, ಜೈನ, ಬೌದ್ಧ ಇತ್ಯಾದಿ ಒಂದೊಂದು
ಪಂಚೆಯುಟ್ಟು ಬಿಸುಟಂತೆ ಕಿತ್ತೆಸೆದು ಬಂದದ್ದೇನು ಕಡಿಮೆ ಸಾಹಸವೆ?
ಅನಂತರ ಪ್ರಜಾ
ತಂತ್ರ : ಮಿಲ್ಟನ್, ಮಿಲ್, ಲಿಂಕನ್ ಇತ್ಯಾದಿ ಸೂಟುಗಳಲ್ಲಿ ಚಿಂತನೆಗೆ
ಸೂಟಿ ಕೊಟ್ಟಾಡಿದ್ದೇನು ಕಡಿಮೆಯೇ? ಗಾಂಧೀ ಟೋಪಿಯಾಟ,
ಅಹಹಾ, ಚಂದ
ಇಂದಿಗೂ, ಇತ್ತೀಚೆ ಮಾರ್ಕ್ಸ್, ಲೆನಿನ್, ಮಾವೊ ಈ ಹೊಸ ಹೊಸಾ
ಸಮಚಿಪ್ಪು ಧರಿಸಿ ನಿಂತರನನ್ಯ ಧನ್ಯಭಾವಕ್ಕೇನು
ಕೊರತೆಯಿದೆ ಹೇಳಿ, [೨೬]

ಸಮಕಾಲೀನ ರಾಜಕೀಯ ಧೋರಣೆಗಳ ಬಗೆಗಿನ ವಿಡಂಬನೆಯ ಇಂಥ ಪದ್ಯ ಭಾಗಗಳು ಅಡಿಗರ ಕಾವ್ಯದಲ್ಲಿ ಮತ್ತೆ ಮತ್ತೆ ಎದುರಾಗುತ್ತವೆ. ಅಪ್ರಮಾಣಿಕ, ಯಾವುದೊಂದು ಸಿದ್ಧಾಂತಕ್ಕೂ ನಿಷ್ಠೆಯಿಂದಿರದ ಸಮಕಾಲೀನ ರಾಜಕೀಯ ಧೋರಣೆಯನ್ನು ಕುರಿತ ಅಡಿಗರ ಕಾವ್ಯದ ಧೋರಣೆಗಳ ಬಗೆಗೆ ಇನ್ನೂ ಹೆಚ್ಚಿನ ಚರ್ಚೆ ಸಾಧ್ಯವಿದೆ.

**೪. ಗೊಂದಲಪುರ : ಸಮಕಾಲೀನ ಭಾರತದ ಸಂದರ್ಭ**

'ಚಂಡೆ ಮದ್ದಳೆ', 'ಗೊಂದಲಪುರ', 'ದೆಹಲಿಯಲ್ಲಿ' ಯಂಥ ಕವಿತೆಗಳು ನಗರ ನಾಗರಿಕರ ಬದುಕು ಹಾಗೂ ನವ ವಸಾಹತು ಶಾಹಿಯ ಸಂದರ್ಭದ ಕ್ರೌರ್ಯಾವಸ್ಥೆಗಳನ್ನೆ ಪ್ರಕಟಿಸುತ್ತವೆ. ನಗರಗಳ ಬೆಳವಣಿಗೆಗಳಿಂದ ಏರ್ಪಟ್ಟಿರುವ ಗೊಂದಲಗಳ, ಸರ್ಕಾರಿ ಹಾಗೂ ಸಾರ್ವಜನಿಕ ಬದುಕುಗಳು ಭ್ರಷ್ಟಗೊಳ್ಳುತ್ತಿರುವ ಸುಳಿವುಗಳ ದೊಡ್ಡ ಪಟ್ಟಿಯೇ ಇಂಥ ಕವಿತೆಗಳಲ್ಲಿ ದೊರಕುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಆದರ್ಶಕನಸುಗಳನ್ನು ಕಟ್ಟಿಕೊಂಡ 'ಮಧುರನ' ಸಂವೇದನೆ ಸ್ವಾತಂತ್ರ್ಯಾನಂತರ ಭ್ರಮರನಿರಸನಗೊಳ್ಳುವ ಚಿತ್ರಗಳನ್ನು ಈ ಕವಿತೆಗಳು ಅತ್ಯಂತ ಮಾರ್ಮಿಕವಾಗಿ ಧ್ವನಿಸುತ್ತವೆ. ಇಂಥ ಚಿತ್ರಗಳಿಂದ ಉತ್ಪನ್ನವಾಗುವ ವಿಚಾರಧಾರೆ ಮಧುರನ ಹೊಯ್ದಾಟವನ್ನು ವಿವರಿಸುತ್ತದೆ. ನವ ವಸಾಹತುಶಾಹಿ ಸಂಸ್ಕೃತಿಯ ಪರಿಣಾಮವಾಗಿ, ಸಮಕಾಲೀನ ರಾಜಕೀಯ ಧೋರಣೆಗಳ ಫಲವಾಗಿ ಅವನ ಸಂವೇದನೆ ಕಂಗೆಟ್ಟಂತಾಗಿದೆ. ಅಂದರೆ ಮಧುರನ ಮಧುರ ಕನಸುಗಳಲ್ಲೆವೂ ಛಿದ್ರಗೊಂಡಿವೆ. ಗೊಂದಲಾಸುರನ ಗೊಂದಲಪುರದ ಕಾಮಾಲೆ ಕತ್ತಲಲ್ಲಿ ದಿಕ್ಕೆಟ್ಟಂತಾಗಿದೆ. ಈ ರೂಪಕ ಇಡೀ ಸಮಕಾಲೀನ ಭಾರತದ ಸಂಕೀರ್ಣತೆಗಳನ್ನು ಒಮ್ಮೆಗೆ ಧ್ವನಿಸುತ್ತದೆ. ಹೀಗೆ ಸ್ವಾತಂತ್ರ್ಯಪೂರ್ವದ ಶ್ರೀ ಸಾಮಾನ್ಯರ ಕನಸುಗಳ ಮೇಲೆ ಸಮಕಾಲೀನ ರಾಜಕೀಯ ಧೋರಣೆಗಳ ಕಬಂಧ ಕೈಯ ಹಿಡಿತ ಮೇಲುಗೈ ಸಾಧಿಸುವ ಕ್ರೌರ್ಯಾವಸ್ಥೆಗಳನ್ನು ಅಡಿಗರ ಸಂವೇದನೆ ತೀವ್ರವಾಗಿಯೆ ಕಾವ್ಯಾಭಿವ್ಯಕ್ತಿಯ ಮೂಲಕ ಪ್ರತಿಭಟಿಸುತ್ತದೆ.

**೫. ವಿಶ್ವವಿಶಾಲ ಭಾವ : ಅತಂತ್ರತೆ ತನ್ನತನದ ಶೋಧ**

ವಸಾಹತುಶಾಹಿ ಸಂಸ್ಕೃತಿಯ ಪರಿಣಾಮವಾಗಿ ಭಾರತೀಯ ಬದುಕು ಅತಂತ್ರಗೊಳ್ಳುವ ಹಾಗೂ ತನ್ನ ತನವನ್ನು ಕಳೆದುಕೊಳ್ಳುವುದರ ಬಗೆಗಿನ ವಾಗ್ವಾದ ಅಡಿಗರ ಕಾವ್ಯದ ಬಹುಮುಖ್ಯ ನೆಲೆಗಳಲ್ಲಿ ಒಂದು. ಈ ವಾಗ್ವಾದ ಸ್ವಾತಂತ್ರ್ಯಪೂರ್ವಕ್ಕಿಂತ ಸ್ವಾತಂತ್ರ್ಯಾನಂತರದಲ್ಲಿ ಮತ್ತಷ್ಟು ಪ್ರಖರವಾಗಿ ಮೈ ಪಡೆಯುತ್ತದೆ. ಇದು ಪೂರ್ವ ಮತ್ತು ಪಶ್ಚಿಮಗಳ ಆಕರ್ಷಣೆ ಮತ್ತು ವಿಕರ್ಷಣೆಗಳ ತಳಮಳಗಳಲ್ಲಿ ಭಾರತೀಯ ಬದುಕು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದರ ಕಡೆ ಮುಖಮಾಡಿದ ಬಗೆಗೆ ಚಿಂತಿಸುತ್ತದೆ. 'ಸ್ವಾತಂತ್ರ್ಯ : ೧೯೫೮ ರ ಪಾಠ' ಕವಿತೆ ಈ ಎಲ್ಲ ವಿಚಾರಗಳನ್ನು ಒಳಗೊಂಡದ್ದಾಗಿದೆ. ಪುರೋಹಿತರ ನೆಚ್ಚಿ ಪಶ್ಚಿಮಬುದ್ಧಿಯಾದ ಫಲವಾಗಿ ಏರ್ಪಟ್ಟ ಬದುಕೇ ಇಂಥ ಕವನಗಳ ವಸ್ತು. ಸ್ವಾತಂತ್ರ್ಯಾನಂತರದ ರಾಜಕೀಯ 'ವಿಶ್ವ ವಿಶಾಲ ಭಾವ'ದಿಂದ ತಲೆದೋರಿದ ಸಮಸ್ಯೆಗಳಿಂದ ಎದುರಾದ ಬದುಕು ಇಲ್ಲಿ ಮೇಳೈಸಿದೆ.

ಸಾಕು ಮಕ್ಕಳೆ ಸಾಕು ಎಂದ ನಾಲ್ಕು ಮಕ್ಕಳ ತಂದೆ
ದತ್ತು. ತಂದೆ ? ಹೋಗೊ ಬಾಗಿಲೊಳಕ್ಕೆ
ನುಸುಳಿ ಡವಗುಟ್ಟುವೆದೆ ನಾಲ್ಕು ನಿಂತುವು ಮೊಳಕೆ ಮೂಲೆಯೊಳಗೆ[೨೭]

'ಸಾಕು ಮಕ್ಕಳೆ ಸಾಕು ಎಂದ ನಾಲ್ಕು ಮಕ್ಕಳ ತಂದೆ', 'ವಿಶ್ವ ವಿಶಾಲ ಭಾವ'ದ ಫಲವಾಗಿ 'ದತ್ತು ತಂದೆ' ಯಾಗುವುದರೊಂದಿಗೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡ ದುರಂತ ಇದಾಗಿದೆ. ಸ್ವಾತಂತ್ರ್ಯಾನಂತರ ಸಾಮ್ರಾಜ್ಯಶಾಹಿ ಹಾಗೂ ಪ್ರಗತಿಪರ ರಾಷ್ಟ್ರಗಳ ನಡುವಣ ಸಂಬಂಧಗಳಿಂದ ಏರ್ಪಟ್ಟ ದುರಂತವನ್ನು ಅತ್ಯಂತ ಮಾರ್ಮಿಕವಾಗಿ ಈ ಕವಿತೆ ಪ್ರಕಟಿಸುತ್ತದೆ. ಹೊಸದಾಗಿ ಸ್ವತಂತ್ರಗೊಂಡ ಭಾರತದಂಥ ವಸಾಹತುಗಳನ್ನು ಶೋಷಿಸುವ ಸಾಮ್ರಾಜ್ಯಶಾಹಿ ನೀತಿಗಳ ತಂತ್ರಗಳನ್ನು ಹಾಗೂ ಅದರ ಫಲಗಳನ್ನು ಈ ಕವಿತೆ ದಾಖಲಿಸುತ್ತದೆ. ಅಭಿವೃದ್ಧಿಯ ನೆಪದಲ್ಲಿ ವಸಾಹತುಶಾಹಿಯ ನಂತರ ನವವಸಾಹತುಶಾಹಿ ಸಂಸ್ಕೃತಿಯ ಸುಧಾರಣಾ ಧೋರಣೆಗಳು ಹಾಗೂ ಕೈಗಾರಿಕಾ, ಆರ್ಥಿಕ ಸಹಾಯ ಹಸ್ತಗಳು ಭಾರತದಂಥ ರಾಷ್ಟ್ರಗಳನ್ನು 'ದತ್ತು'ಗಳನ್ನಾಗಿ ಮಾಡಿದ, ಮಾರ್ಮಿಕತೆಯನ್ನು ಅದರ ಅಹಂಕಾರವನ್ನು ಧ್ವನಿಸುತ್ತದೆ. ನವ- ವಸಾಹತುಶಾಹಿಯ ಪರಿಣಾಮವಾಗಿ ಭಾರತೀದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚೈತನ್ಯ - ಸಂವೇದನೆಗಳು ಅನುಭವಿಸಿದ ಕೀಳರಿಮೆಗಳನ್ನು, ಅವಮಾನಗಳನ್ನು, ಭೌತಿಕ ಹಾಗೂ ಮಾನಸಿಕ ಹಿಂಸೆಗಳನ್ನು ಈ ಕೆಳಗಿನ ಸಾಲುಗಳು ಪ್ರಕಟಿಸುತ್ತವೆ.

ಏಕೊ ಮುಜುಗರ ನನಗೆ. ಬಿಳಿದೊಗಲ ಚಿಣ್ಣರ ಕಂಡು
ಕರಿದೊಗಲವನು ನಾಚಿದೆ, ಪರದೇಶಿ ನಗೆಯ ಕೋಲಾಹಲದ
ಶಾಖೋಪಶಾಖೆಗಳ ಹೆಣಿಗೆ- ಮನೆಯೊಳಗೆ, ಹೊರಗೆ.
ನನ್ನ ಮಲಗುವ ಕೋಣೆಗೂ ಬಿತ್ತು ತುರಿನೆರಳು
ಕತ್ತಿಯಾಡದ ಹಳುವದಲ್ಲಿ ತೊಳಲಿದ ಹಾಗೆ ;
ಹೊಸ ಬಣ್ಣ ಬಳಿದ ಮನೆಯಲ್ಲಿ ಘುರುಟಿದ ಹಾಗೆ,
ಶತಮಾನಗಳ ಶ್ರುತಿ ಸ್ಮೃತಿಯ ಪಂಚಾಯತನ
ಪೀಠದೊಳಗೂ ಹೊಕ್ಕ ಬೇರ ಬಿಗಿತ
ಬಂದಳಿಕೆ ಬಿಗಿದಿರಲು ಸಾಕಿದ ತಂದೆ
ನಾನಾದೆ ಖಂಡಿತಾ ದತ್ತು ತಂದೆ
ಔರಸದ ಕಟ್ಟೆಯೊಳಗಿಲ್ಲ ತುಳಸಿಯ ಮೊಳಕೆ;
ಕಾಡುಗಿಡಗಳ ಕಳಪೆಕಳೆಯ ಕೋಲಾಹಲವು ತೋಟದೊಳಗೆ [೨೮]

ಪರಕೀಯ ಮೌಲ್ಯಗಳ ಮೇಲಾಟದಿಂದ ದೇಶೀಯ ಮೌಲ್ಯಗಳು ಅಪವಿತ್ರಗೊಳ್ಳುವ, ಮುಜುಗರಕ್ಕೆ ಒಳಗಾಗುವ ಸ್ಥಿತಿಗತಿಗಳು ಅತ್ಯಂತ ನೋವಿನವು. ಅನ್ಯಸಂಸ್ಕೃತಿಯ ಮೌಲ್ಯಗಳ ಮೇಲಾಟದಿಂದ ಎದುರಾಗುವ ಪರಕೀಯತೆಯು ನಿಷ್ಕ್ರಿಯಶೀಲಗೊಳಿಸುವ ಬಗೆಯನ್ನು ಈ ಕವಿತೆ ವಿಶ್ಲೇಷಿಸುತ್ತದೆ. ಮನೆಯ ಹೊರ ಮತ್ತು ಒಳಗೂ ಪರಕೀಯ

ಸಂಸ್ಕೃತಿಯು ತನ್ನ ದಾಳಿಯನ್ನು ಮಾಡಿದೆ. ಅನ್ಯ ಸಂಸ್ಕೃತಿಯ ಸಹಾಯ ಹಸ್ತಗಳ 'ಶಾಖೋಪಶಾಖೆಗಳ ಹೆಣಿಗೆ' ಮತ್ತು 'ತುರಿನೆರಳು' ಸಹಿಸಲಾರದಂಥ ಸ್ಥಿತಿಯನ್ನೆ ಉಂಟು ಮಾಡಿದೆ. 'ಕತ್ತಿಯಾಡದ ಹಳು', 'ಹೊಸಬಣ್ಣ ಬಳಿದ ಮನೆ'ಯ ಚಿತ್ರಗಳು ಈ ಬಗೆಯ ಗೊಂದಲಗಳನ್ನೆ ಧ್ವನಿಸುತ್ತವೆ. ಖಾಸಗಿ ಬದುಕು ಹಾಗೂ ಗಾಢನಂಬಿಕೆಗಳ ಒಳಗೂ ಪರ ಸಂಸ್ಕೃತಿಯು ತನ್ನ ಆಕ್ರಮಣವನ್ನು ವಿಸ್ತರಿಸಿದೆ. ಸಾಕು ತಂದೆ ದತ್ತು ತಂದೆಯಾಗುವ, ತೋಟದೊಳಗೆ ಕಾಡುಗಿಡಗಳ ಕಳಪೆಕಳೆಯ ಕೋಲಾಹಲದ ಸ್ಥಿತಿ ಎದುರಾಗಿದೆ.

> ನೋಡೀ ನುಗ್ಗೆ ;
> ನಿಲ್ಲಲೊಂದಿಷ್ಟು ಲಂಗೋಟಿಯಗಲದ ಜಾಗ,
> ಆಕಾರತಳೆದ ಆಭೋಗ. ಉಳಿದದ್ದೆಲ್ಲ
> ಪರದೇಶ. ಗೊಡ್ಡು ಗಾಳಿಯ ಕಾಮಕೇಳಿ ಫಲ.[೨೯]

ಈ ಮೇಲಿನ ಸಾಲುಗಳು ನವ ವಸಾಹತುಶಾಹಿ ಸಂಸ್ಕೃತಿಯ ನುಸುಳಿವಿಕೆಯ ಹಾಗೂ ಆ ಸಂಸ್ಕೃತಿಯು ವಿಸ್ತರಗೊಳ್ಳುವ ತಂತ್ರಗಳನ್ನು ಸೂಚಿಸುತ್ತವೆ. ಈ ಕೆಳಗಿನ ಕಿ.ರಂ.ನಾಗರಾಜರ ಮಾತುಗಳು ಈ ಕವಿತೆಯ ಹಲವು ಮಜಲುಗಳನ್ನು ಪ್ರಕಟಿಸುತ್ತವೆ.

> ಇಲ್ಲಿ ರಾಜಕೀಯ, ವ್ಯಕ್ತಿ,ಸಮಾಜ,ಪರಂಪರೆ,ಸಂಸ್ಕೃತಿ ಇವನ್ನೆಲ್ಲ ಒಂದು ಸಂಘಟಿತ ರೂಪಕವನ್ನಾಗಿಸುವ ಪ್ರಯತ್ನವಿದೆ .... ಸಂಸ್ಕೃತಿಯ ಸಾತತ್ಯಕ್ಕಾಗಿ ವ್ಯಕ್ತಿ ಹಾಗೂ ಕುಟುಂಬದ ನಿಷ್ಠೆಯನ್ನು ಹೇಳುತ್ತಲೆ ಈ ಕವಿತೆ ವ್ಯಾಪಕವಾಗಿ ಹಬ್ಬಿದ ರಾಜಕೀಯ ಪ್ರಭಾವಗಳಿಗೆ ಎದುರಾಗುತ್ತದೆ. ತನ್ನ ಪರಿಸ್ಥಿತಿಯ ಬಗೆಗೆ ಘರ್ಷಿಸುತ್ತಿರುವ ಇಲ್ಲಿನ ನಿರೂಪಕ ತನ್ನ ಸಂಸ್ಕೃತಿಯ ಎಲ್ಲ ಆತಂಕಗಳನ್ನು ಒಂದು ಸಮಗ್ರತೆಯಲ್ಲಿ ಎದುರಾಗುವುದು ಈ ಕವಿತೆಯ ಮುಖ್ಯ ಕೇಂದ್ರ.[೩೦]

ಒಟ್ಟಿನಲ್ಲಿ ಸಾಮ್ರಾಜ್ಯಶಾಹಿಗಳ ಆಕ್ರಮಣ ಹಾಗೂ ಅಂಥ ಆಕ್ರಮಣಗಳಿಂದ ಎದುರಾಗುವ ಪ್ರತಿಕೂಲ ಪರಿಣಾಮಗಳಿಂದ ಉಂಟಾಗುವ ಎಲ್ಲ ಬಗೆಯ ಅತಂತ್ರಸ್ಥಿತಿಗಳನ್ನು ಅಡಿಗರ ಸಂವೇದನೆ ಈ ಕವಿತೆಯ ಮೂಲಕ ಪ್ರತಿರೋಧಿಸುತ್ತದೆ.

ಭಾರತದ ಸಾಂಪ್ರದಾಯಿಕ ಸಂಸ್ಕೃತಿ ಮೌಲ್ಯಗಳ ಮತ್ತು ಪಾಶ್ಚಾತ್ಯ ಸಂಸ್ಕೃತಿ ಮೌಲ್ಯಗಳ ನಡುವಿನ ಗೊಂದಲಗಳ ಬಗೆಗಿನ ಅಡಿಗರ ನಿಲುವುಗಳು ಯಾವ ಬಗೆಯವೆಂಬುದು 'ಆಗಬೋಟಿ' ಕವನದಲ್ಲಿ ಸ್ಪಷ್ಟವಾಗುತ್ತದೆ..

> ಯಾನಕ್ಕೆ ಕರೆ ಮತ್ತೆ ಬಂದಿದೆ ಅನೇಕ ಶತ
> ಮಾನಗಳ ಬಳಿಕ. ನೀರಿಗಂಜಿ ತೀರದಲ್ಲಿ ದಿಣ್ಣೆಯ ಮೇಲೆ
> ಒಣಗುವುದು ಸಲ್ಲ.
> - - - - - - - - - - - - - - - -

ಹಳ ಹಲಗೆಗಳ ಹಿಡಿದು ಮಿಡಿದು ಬಡಿದು ನೋಡುವಗತ್ಯ
ಮತ್ತೆ ಬಂದಿದೆ. ಪುರಾತನದ ಹಡಗುವಿದ್ಯೆಗಳನ್ನು ಇಂದಿನ ಪರಿಗೆ
ಜೋಡಿಸುವ ಕೆಲಸ; ಹೊಸ ಮರ, ಹೊಸ ಕಬ್ಬಿಣ, ಹೊಸ
ತಂತ್ರ ಯಂತ್ರಗಳ
ಬೆಸೆವಾಧುನಿಕ ಬೋಟಿ, ಹೊಸ ಲಂಗರು.
ಯಾನ ನಡೆಯಲಿ ತಂಗಿ ತಂಗಿ ಬಂದರಿನಲ್ಲಿ
ನವಖಂಡಗಳ ಸೋಸಿ ಪಾತಾಳದೆಡೆಗೆ
ಶಿಖರಗಳನ್ನಾಕ್ರಮಿಸಿ ಆಕಾಶದೆಡೆಗೆ.
ಚಲನವೇ ಬದುಕು, ನಿಶ್ಚಲವೆ ಮರಣ.[೩೧]

ಈ ಮೇಲಿನ ಸಾಲುಗಳಲ್ಲಿ ಪೌರಾತ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಬಗೆಗಿನ ಅಡಿಗರ ನಿಲುವುಗಳು ಮೇಳೈಸಿವೆ. 'ಪುರಾತನ ಹಡಗು ವಿದ್ಯೆಗಳನ್ನು ಇಂದಿನ ಪರಿಗೆ ಜೋಡಿಸುವ ಕೆಲಸ' ಹಾಗೂ ಅದನ್ನು ವಿಮರ್ಶೆ - ವಿಚಕ್ಷಣತೆಗಳಿಂದ ನೋಡುವ ಅಗತ್ಯವನ್ನು ಅಡಿಗರು ಸೂಚಿಸುತ್ತಾರೆ. 'ಕೊಳೆಯತೊಡಗಿದರೆ ಒಳ್ಳೇದು ಕೆಟ್ಟದ್ದು ಎರಡೂ ಒಂದೇ' ಎಂಬ ದರ್ಶನದೊಂದಿಗೆ ಭಿನ್ನ ಸಂಸ್ಕೃತಿಗಳ, ಸಿದ್ಧಾಂತಗಳ ಜಡಾವಸ್ಥೆಗಳನ್ನೇ ಪ್ರಶ್ನಿಸುತ್ತಾರೆ. ಸಾಂಸ್ಕೃತಿಕ ಸಂಘರ್ಷಗಳಿಂದ ಸ್ಥಗಿತಗೊಂಡ ಬದುಕು ಚಲನಶೀಲಗೊಳ್ಳಬೇಕೆಂಬ ಆಶಯವನ್ನು ಹಾಗೂ ಅದರ ತುರ್ತನ್ನು 'ಆಗಬೋಟಿ' ಕವನದ ಮೂಲಕ ಪ್ರಕಟಿಸುತ್ತಾರೆ. ಕವಿತೆಯ 'ಚಲನವೇ ಬದುಕು, ನಿಶ್ಚಲವೇ ಮರಣ' ಎಂಬ ನಿಲುವು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಬಸವಣ್ಣನವರ ದರ್ಶನವು ಮರುಹುಟ್ಟು ಪಡೆದಿದೆ. ಶತಮಾನಗಳ ಬಳಿಕ ಬಂದ ಸಂಸ್ಕೃತಿಯೊಂದರ ಕರೆಗೆ ಓಗೊಟ್ಟು ಚಲನಶೀಲಗೊಳ್ಳಬೇಕೆಂಬ ಕಾಣ್ಕೆಯನ್ನು ಈ ಕವಿತೆ ಎದುರಾಗಿಸುತ್ತದೆ. ಅಡಿಗರ ಒಟ್ಟು ಕಾವ್ಯ ಧೋರಣೆಯೇ ಈ ಬಗೆಯದು.

ಅಡಿಗರ ಕಾವ್ಯದಿಂದ ಉತ್ಪನ್ನವಾಗುವ ಸಮಕಾಲೀನ ಸಮಸ್ಯೆಗಳ ಚಿಂತನೆಯಲ್ಲಿಯೇ ನವ ವಸಾಹತುಶಾಹಿ ಸಂಸ್ಕೃತಿಯ ಆಕ್ರಮಣಶೀಲ ನೆಲೆಗಳು ಪ್ರಕಟಗೊಳ್ಳುತ್ತವೆ. ಸ್ವಾತಂತ್ರ್ಯಾನಂತರ ಪೂರ್ವ - ಪಶ್ಚಿಮಗಳ ಆಕರ್ಷಣೆ ಮತ್ತು ವಿಕರ್ಷಣೆಗಳು ಬೇರ್ಪಡಿಸಲಾರದಷ್ಟು ಸಂಕೀರ್ಣಗೊಂಡಿದೆ. ಪರಂಪರೆಯ ಬಗೆಗಿನ ಅಂಧಶ್ರದ್ಧೆ, ಹಾಗೆಯೇ ಪಶ್ಚಿಮದ ಎಲ್ಲ ಬಗೆಯ ಅನುಕರಣೆಗಳ ಕುರಿತು ತೋರುವ ಮೋಹ ಹಾಗೂ ಅದರ ಬಗೆಗಿನ ಒಲವು, ಆಸ್ಥೆಗಳನ್ನು ಅಡಿಗರ ಕಾವ್ಯ ಮುಖ್ಯ ಭಿತ್ತಿಯನ್ನಾಗಿ ಹೊಂದಿದೆ. ರಾಜಕೀಯ ಹಾಗೂ ಸಾಮಾಜಿಕ ಸ್ಥಿತ್ಯಂತರಗಳಿಂದ ಎದುರಾದ ಸಂಕೀರ್ಣತೆ ಸಾಮಾನ್ಯರನ್ನು ಅತಂತ್ರಗೊಳಿಸಿದ ಬಗೆಗೆ ಅವರ ಕಾವ್ಯ ತೀವ್ರವಾಗಿ ಪ್ರತಿಭಟಿಸುತ್ತದೆ. ಅಧಿಕಾರ, ಭಾಷೆ, ತಾತ್ವಿಕತೆ ಮೊದಲಾದ ಎಲ್ಲ ಮಟ್ಟಗಳಿಂದ ಎದುರಾಗುವ ಶೋಷಣೆಯನ್ನು ಅಡಿಗರ ಕಾವ್ಯ ಪ್ರತಿರೋಧಿಸುವ ನೆಲೆಗಳಲ್ಲಿಯೆ ನವ ವಸಾಹತುಶಾಹಿ ಸಂದರ್ಭಗಳಿಗೆ ಒಡ್ಡಿದ ಪ್ರತಿರೋಧಗಳನ್ನು ಗುರುತಿಸಿಕೊಳ್ಳಬಹುದಾಗಿದೆ. 'ಗೊಂದಲಪುರ', 'ಹಿಮಗಿರಿ ಕಂದರ'ದಂಥ ಕವನಗಳಲ್ಲಿನ ಬದುಕು ಈ ಬಗೆಯದೇ ಆಗಿದೆ. ನಗರಗಳ ನಿರ್ಮಾಣದಿಂದ ಏರ್ಪಟ್ಟ ದ್ವಂದ್ವಗಳ ಚಿಂತನೆ ಕವಿತೆಗಳ ಹಿಂದಿದೆ.

ಪಾಶ್ಚಾತ್ಯ ಮೌಲ್ಯಗಳು ಭಾರತದಂಥ ತೃತೀಯ ಜಗತ್ತಿನ ಮೇಲೆ ಹೇರುವ ಒತ್ತಡಗಳನ್ನೂ ಅವುಗಳಿಂದ ಅಂಥ ರಾಷ್ಟ್ರಗಳು ಕೀಳರಿಮೆಯಿಂದ ನರಳುವ ಮನಸ್ಥಿತಿಗಳನ್ನೂ ಇವರ ಕಾವ್ಯ ವಿಶ್ಲೇಷಿಸುತ್ತದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಭಾಷೆ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನಗಳ ಮೂಲಕ ಮಾಡುವ ಮೇಲಾಟವನ್ನು ಅಡಿಗರ ಕಾವ್ಯ ವಿರೋಧಿಸುತ್ತದೆ. ಇಂಥ ಮೇಲಾಟಗಳಿಂದ ಎದುರಾಗುವ ದೈಹಿಕ ಹಾಗೂ ಮಾನಸಿಕ ಒತ್ತಡಗಳನ್ನು ಅಡಿಗರು ಕಾವ್ಯಾಭಿವ್ಯಕ್ತಿಯನ್ನಾಗಿ ಸ್ವೀಕರಿಸುತ್ತಾರೆ. ಈ ನೆಲೆಗಳಲ್ಲಿಯೇ ನವ ವಸಾಹತುಶಾಹಿಯ ಪ್ರಭಾವ - ಪರಿಣಾಮಗಳನ್ನು ಕಾಣಬಹುದಾಗಿದೆ. ಪರಕೀಯ ಸಂಸ್ಕೃತಿ ಅತ್ಯಂತ ಖಾಸಗಿ ಬದುಕಿನಲ್ಲಿಯೂ ಪ್ರವೇಶಿಸಿ, ದೇಶೀಯ ಅನನ್ಯತೆಗಳನ್ನು ಮತ್ತು ವ್ಯಕ್ತಿಯ ವಿಶಿಷ್ಟತೆಗಳನ್ನು ವಿರೂಪಗೊಳಿಸಿ ದುರಂತಕ್ಕೀಡುಮಾಡುವ ಸ್ಥಿತಿಗತಿಗಳನ್ನು 'ಸ್ವಾತಂತ್ರ್ಯ : ೧೯೪೭ರ ಪಾಠ' ದಂಥ ಕವಿತೆಗಳಲ್ಲಿ ಅಡಿಗರ ಸಂವೇದನೆ ತೀವ್ರವಾಗಿ ವಿರೋಧಿಸುತ್ತಾದೆ. ಸ್ವಾತಂತ್ರ್ಯಾನಂತರ ರಾಜಕೀಯ ಶಕ್ತಿಗಳು ಅನುಸರಿಸಿದ ಕೈಗಾರೀಕರಣ ಮತ್ತು ಆರ್ಥಿಕ ಉದಾರೀಕರಣಗಳಿಂದ ದೇಶದ ಅನನ್ಯತೆಗಳಿಗೆ ಧಕ್ಕೆಯೊದಗಿದ ಚಿತ್ರಗಳನ್ನೂ, ಸ್ಥಳೀಯ ಶ್ರಮ , ಸಂಪತ್ತುಗಳನ್ನು ಮತ್ತೆ ಪರಕೀಯ ಶಕ್ತಿಗಳು ಕಬಳಿಸುವ ತಂತ್ರಗಳನ್ನು ಪ್ರಕಟಪಡಿಸುವುದು ಇವರ ಕಾವ್ಯದ ಮುಖ್ಯ ನೆಲೆಯಾಗಿದೆ. ಕೇವಲ ಬಂಡವಾಳವನ್ನು ಹೂಡುವುದರಿಂದಲೆ ನವ ವಸಾಹತುಶಾಹಿ ಸಂಸ್ಕೃತಿಯು ನಮ್ಮಂಥ ರಾಷ್ಟ್ರಗಳ ಮೇಲೆ ಹಿಡಿತ ಸಾಧಿಸುತ್ತಿರುವುದರ ಬಗೆಗೂ ಇವರ ಕಾವ್ಯ ಪ್ರತಿರೋಧವನ್ನು ಒಡ್ಡುತ್ತದೆ.

ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ ಕ್ಷೇತ್ರಗಳ ಮೇಲೂ ತನ್ನ ಯಜಮಾನಿಕೆಯನ್ನು ಹೇರುವುದನ್ನು ಅಡಿಗರ ಸಂವೇದನೆ ವಿರೋಧಿಸುತ್ತದೆ. ಅಭಿವೃದ್ಧಿ ಹಾಗೂ ಸಹಾಯ ಹಸ್ತಗಳ ನೆಪಗಳಲ್ಲಿ ತನ್ನ ಯಾಜಮಾನ್ಯವನ್ನು ಸ್ಥಾಪಿಸುವುದು ನವ ವಸಾಹತುಶಾಹಿಯ ಬಹುಮುಖ್ಯ ಆಶಯ. ಇಂಥ ಆಶಯಗಳಿಗೆ ಅನಿವಾರ್ಯ ಸಂದರ್ಭ - ಸನ್ನಿವೇಶಗಳನ್ನು ಸೃಷ್ಟಿಸುವುದೂ ಆ ಸಂಸ್ಕೃತಿಯ ತಂತ್ರವೇ ಆಗಿದೆ. ಈ ಬಗೆಯ ಹತ್ತು ಹಲವು ವಸಾಹತು ಸಂಸ್ಕೃತಿಯ ತಂತ್ರಗಳನ್ನು, ಅದರಿಂದ ಎದುರಾದ ಗೊಂದಲಗಳನ್ನು ಅಡಿಗರ ಕಾವ್ಯ ಶೋಧಿಸಿಕೊಳ್ಳುತ್ತದೆ. ಇಂಥ ಶೋಧನೆಗಳಿಂದ ಒಂದು ಸಾಮಾಜಿಕ ಎಚ್ಚರವನ್ನು ಉಂಟುಮಾಡುವುದರೊಂದಿಗೆ ಅವರ ಕಾವ್ಯ ಮಹತ್ವವನ್ನು ಪಡೆಯುತ್ತವೆ.

ನವವಸಾಹತು ಶಾಹಿಯ ಆಕ್ರಮಣಗಳಿಗೆ ಹಾದಿ ಮಾಡಿಕೊಟ್ಟ ಭಾರತದ ರಾಜಕೀಯ ನಿಲುವುಗಳನ್ನು, ಅದಕ್ಕೆ ಕಾರಣವಾದ ಶಕ್ತಿಗಳನ್ನು ಟೀಕೆಗೆ ಗುರಿಪಡಿಸುವುದು ಅಡಿಗರ ಕಾವ್ಯದ ನೆಲೆಯೇ ಆಗಿದೆ. ತಮ್ಮ ತಮ್ಮ ಹಿತಾಸಕ್ತಿ ಮತ್ತು ಅಧಿಕಾರಗಳ ವ್ಯಾಮೋಹದಿಂದ ಒಂದು ದೇಶದ ಅನನ್ಯತೆಗಳಿಗೆ ಒದಗುವ ಮಾರಕಗಳ ಬಗೆಗೆ ತಾಳುವ ತಟಸ್ಥತೆಯನ್ನು ಅಡಿಗರ ಸಂವೇದನೆ ತೀವ್ರವಾಗಿ ಗೇಲಿ ಮಾಡುತ್ತದೆ. ವಸಾಹತುಶಾಹಿ ಸಂದರ್ಭದ ಅನ್ಯಾಕ್ರಮಣಗಳನ್ನು ವಿರೋಧಿಸುತ್ತ ಬಂದ ಅಡಿಗರ ಸಂವೇದನೆ ಅದಕ್ಕಿಂತ ಕ್ರೂರವಾದ ಸ್ವಾತಂತ್ರ್ಯಾ ನಂತರದ ನವ ವಸಾಹತುಶಾಹಿ ತಂತ್ರಗಳಿಂದ ಪಾರಾಗಲು ಚಿಂತಿಸುತ್ತದೆ. ಪುರೋಹಿತರನ್ನು ನಂಬಿ ಪಶ್ಚಿಮ ಬುದ್ಧಿಯಿಂದ ಹೊರಬಂದು ತನ್ನ ಅನನ್ಯತೆಗಳನ್ನು ಶೋಧಿಸಿಕೊಳ್ಳಬೇಕೆಂಬ ಆಶಯಗಳಲ್ಲಿ ಅಡಿಗರ ಕಾವ್ಯದ ವಸಾಹತುಶಾಹಿ ಬಗೆಗಿನ ಪ್ರತಿರೋಧದ ನೆಲೆಗಳನ್ನು ಗುರುತಿಸಿಕೊಳ್ಳಬಹುದು.

ಪಾಶ್ಚಾತ್ಯ ಮತ್ತು ಪೌರಾತ್ಯ ಸಂಸ್ಕೃತಿಗಳ ಬಗೆಗಿನ ಗೊಂದಲಗಳು, ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ಸರ್ವಾಧಿಕಾರಿ ಧೋರಣೆಗಳ ಬಗೆಗಿನ ವಿರೋಧಗಳು, ಗಾಂಧೀವಾದದ ಬಗೆಗಿನ ಒಲವು ಹಾಗೂ ವ್ಯಕ್ತಿ ವಿಶಿಷ್ಟತೆ ಮತ್ತು ವ್ಯಕ್ತಿ ಸ್ವಾತಂತ್ರ್ಯಗಳ ಶೋಧ,- ಇವು ಅಡಿಗರ ಕಾವ್ಯದ ಮೂಲ ಕಾಳಜಿಗಳಾಗಿವೆ. 'ಇಲ್ಲದಿದ್ದರೂ ಸರಿಯೆ ಮನೆಗೆ ತೊಗಲಿನ ರಕ್ಷೆ; ತರಬೇಡ ದತ್ತುಗಳ ಜಿಗಣೆಯೊಲುಮೆ', 'ಕತ್ತು ಕತ್ತರಿಸಲಿಕ್ಕಲ್ಲ ಆ ಇನ್ನೊಬ್ಬನಿರುವುದು, ಎರಡು ನದಿಗಳೊಂದಾಗಿ ಮುಂದಕೆ ಸಾಗಲು', 'ಪುರಾತನ ಹಡಗು ವಿದ್ಯೆಗಳನ್ನು ಇಂದಿನ ಪರಿಗೆ ಜೋಡಿಸುವ ಕೆಲಸ'- ಇಂಥ ಮಹತ್ವಾಕಾಂಕ್ಷೆಗಳಿಂದ ಕನ್ನಡ ಪರಿಸರದಲ್ಲಿ ಮೇಳೈಸುವ ಅಡಿಗರ ಕಾವ್ಯ ತನ್ನ ಅನನ್ಯತೆಗಳಿಗೆ ಧಕ್ಕೆಯಾಗುವ ಎಲ್ಲ ಮಟ್ಟದ ಧಮನಿಕಾರಿ ನೆಲೆಗಳಿಗೂ ಮುಖಾಮುಖಿಯಾಗುತ್ತ ಕ್ರಿಯಾಶೀಲವಾಗುತ್ತದೆ.

**ಅಡಿಟಿಪ್ಪಣಿ**

೧. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಕಾವ್ಯ*, ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೭, ಪುಟ-೩

೨. ಅದೇ ಪುಟ-೧೦

೩. ಅದೇ ಪುಟ-೨೮,೩೦

೪. ಅದೇ ಪುಟ-೫೨

೫. ಅದೇ ಪುಟ-೩೪,೩೫

೬. ಅದೇ ಪುಟ-೬೦

೭. ಅದೇ ಪುಟ-೬೦,೬೨

೮. ಅದೇ ಪುಟ-೫೮

೯. ಅದೇ ಪುಟ-೮೨

೧೦. ಅದೇ ಪುಟ-೯೫

೧೧. ಅದೇ ಪುಟ-೯೭

೧೨. ಅದೇ ಪುಟ-೧೧೩

೧೩. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಗದ್ಯ ಸಂಪುಟ ೧*, ಸಾಕ್ಷಿ ಪ್ರಾಕಾಶನ, ಬೆಂಗಳೂರು, ೧೯೭೭ ಪುಟ-೧೪೪

೧೪. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಕಾವ್ಯ*, ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೭, ಪುಟ-೨೧೩

೧೫. ಅದೇ ಪುಟ-೨೨೦

೧೬. ನಾಗರಾಜ್ ಡಿ.ಆರ್., *ಶಕ್ತಿ ಶಾರದೆಯ ಮೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೩, ಪುಟ-೨೭೮

೧೭. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಕಾವ್ಯ*, ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೭, ಪುಟ-೨೨೨

೧೮. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಗದ್ಯ ಸಂಪುಟ ೧*, ಸಾಕ್ಷಿ ಪ್ರಾಕಾಶನ, ಬೆಂಗಳೂರು, ೧೯೭೭, ಪುಟ-೩೨೯

೧೯. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಕಾವ್ಯ*, ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೭, ಪುಟ-೨೪೧

೨೦. ಅದೇ ಪುಟ-೪೩೩,೪೩೪

೨೧. ಅದೇ ಪುಟ-೪೧೪,೪೧೫

೨೨. ಅದೇ ಪುಟ-೩೧೪

೨೩. ಅದೇ ಪುಟ-೩೨೩

೨೪. ಅದೇ ಪುಟ-೪೪೮

೨೫. ಅದೇ ಪುಟ-೪೯೮

೨೬. ಅದೇ ಪುಟ-೩೯೦,೩೯೮

೨೭. ಅದೇ ಪುಟ-೩೦೫

೨೮. ಅದೇ ಪುಟ-೩೦೫

೨೯. ಅದೇ ಪುಟ-೩೦೬

೩೦. ನಾಗರಾಜ ಕಿ.ರಂ., *ಅಡಿಗರ ಕಾವ್ಯ*, (ಅಪ್ರಕಟಿತ ಲೇಖನ)

೩೧. ಗೋಪಾಲಕೃಷ್ಣ ಅಡಿಗ ಎಂ., *ಸಮಗ್ರಕಾವ್ಯ*, ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೭, ಪುಟ-೩೮೦, ೩೮೧

# ಅಧ್ಯಾಯ : ಏಳು

# ಕಂಬಾರರ ಕಾವ್ಯ : ಪರಿಸರ, ಸಾಮ್ರಾಜ್ಯಶಾಹಿ, ಸಮಕಾಲೀನ ರಾಜಕಾರಣ

ನವೋದಯ ಕಾವ್ಯದ ಅನಂತರದ ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ಕಂಬಾರರ ಕಾವ್ಯ ವಿಶಿಷ್ಟ ಅಭಿವ್ಯಕ್ತಿಯಾಗಿದೆ. ಸ್ಥಳೀಯತೆಯ ಸತ್ತ್ವಗಳನ್ನು ಕೇಂದ್ರಪ್ರಜ್ಞೆಯನ್ನಾಗಿಸಿಕೊಂಡ ಕಂಬಾರರ ಕಾವ್ಯ ಸ್ವಾತಂತ್ರ್ಯಾನಂತರದ ನೆಲೆಯಲ್ಲಿ ನಿಂತು ವಸಾಹತುಶಾಹಿಯ ಪ್ರಭಾವ ಪರಿಣಾಮಗಳು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಬೇರೂರಿದ ನೆಲೆಗಳನ್ನು ಕೇಂದ್ರವನ್ನಾಗಿಸಿಕೊಂಡು ಕಾವ್ಯದ ಮೂಲಕ ವಿವೇಚಿಸಿತು. ಅವರ ಕಾವ್ಯ ವಸಾಹತು ಹಾಗೂ ವಸಾಹತು ಆಳ್ವಿಕೆಯ ಅನಂತರದ ಸಂಕೀರ್ಣತೆಯ ಸಂದರ್ಭವನ್ನು ಗಂಭೀರವಾಗಿ ಜಿಜ್ಞಾಸೆಗೆ ಒಳಪಡಿಸುವ ಕಾವ್ಯಾಭಿವ್ಯಕ್ತಿಯಾಗಿದೆ.

ಕಂಬಾರರ 'ಹೇಳತೇನ ಕೇಳ' ಕವಿತೆ ವಸಾಹತು ಸಂಸ್ಕೃತಿಯಿಂದ ಎದುರಾದ ಎಲ್ಲ ಮಟ್ಟದ ದ್ವಂದ್ವಗಳಿಗೆ, ಸಂಕೀರ್ಣತೆಗಳಿಗೆ ಒಡ್ಡಿದ ಒಂದು ರೂಪಕ. ಈ ರೂಪಕ ಜನಪದ ಪುರಾಣ ಕಥೆಯೊಂದರ ಮೂಲಕ ಹುಟ್ಟಿಕೊಂಡದ್ದು. 'ಹೇಳತೇನ ಕೇಳ' ರೂಪಕ ಧ್ವನಿಸುವ ಅರ್ಥವಿಶೇಷಗಳು ಅವರ ಎಲ್ಲ ಕೃತಿಗಳಲ್ಲಿ ಮೈ ಪಡೆಯುತ್ತಲೆ ವಸಾಹತುಶಾಹಿಯ ಮೂರ್ತ ಅಮೂರ್ತ ನೆಲೆಗಳಿಗೂ ಆಕಾರಗಳಿಗೂ ಅದರ ಕರಾಳ ಮುಖಗಳಿಗೂ ಅಭಿವ್ಯಕ್ತಿಯ ಮುಖೇನ ಪ್ರತಿರೋಧವನ್ನು ಪ್ರಕಟಿಸುತ್ತದೆ. ಈ ಕವನ ಅವರ ಒಟ್ಟು ಕೃತಿ ಸಮೂಹದಲ್ಲಿ ಮೈಪಡೆಯುವ ಕ್ರಮವು ಕುತೂಹಲ ಹಾಗೂ ಅಧ್ಯಯನಕ್ಕೆ ಒಳಗು ಮಾಡುವಂತಹುದು. ಅಂದರೆ ಕಂಬಾರರ ಬಹುಪಾಲು ಕೃತಿಗಳು 'ಹೇಳತೇನ ಕೇಳ' ಕವನದ ನವಪುರಾಣ ಕಥೆಯಿಂದಲೇ ಹುಟ್ಟಿಕೊಳ್ಳುತ್ತವೆ. ಈ ಮಾತನ್ನು ಅವರ ನಾಟಕ, ಕಾದಂಬರಿ, ಮಹಾಕಾವ್ಯಗಳ ಸಂದರ್ಭದಲ್ಲಿಯೂ ಹೇಳಬಹುದು. ಹೀಗೆ ನಿರಂತರವಾಗಿ ಬೆಳೆಯುವ ಕಂಬಾರರ ಮೂಲಭೂತ ಪುರಾಣವಾದ 'ಹೇಳತೇನ ಕೇಳ' ಕವನ ಬೇಂದ್ರೆಯವರ 'ಜೋಗಿ' ಕವನದಂತೆ ಅಪರಿಪೂರ್ಣತೆಯಿಂದ ಪೂರ್ಣತೆಯ ಕಡೆಗೆ ಚಲಿಸುತ್ತದೆ. ಅಂಥ, ಅಪೂರ್ಣತೆಯೇ ಅನಂತರ ಬೇರೆ ಬೇರೆ ನೆಲೆಗಳಲ್ಲಿ ಶೋಧಿತಗೊಂಡು ಹತ್ತು ಹಲವಾರು ಕೃತಿಗಳಲ್ಲಿ ಅಖಂಡವಾಗುವುದರ ಕಡೆಗೆ ಈ ಕವನದ ಪುರಾಣ ಮತ್ತೆ ಮತ್ತೆ ಮರುಹುಟ್ಟು ಪಡೆಯುತ್ತದೆ. ಈ

ಹಿನ್ನೆಲೆಯಿಂದ ಕಂಬಾರರ ಸಮಗ್ರಕೃತಿಗಳನ್ನು ಗಮನಿಸಿದಾಗ **"ಈವರೆಗಿನ ಹೇಳತೇನ ಕೇಳ"** ಎಂದು ಕಂಬಾರರು ತಮ್ಮ ಸಮಗ್ರ ಕಾವ್ಯವನ್ನು ಕರೆದಿರುವುದು ಅರ್ಥಪೂರ್ಣವಾಗಿದೆ.

**೧. ಹೇಳತೇನ ಕೇಳ : ಶಿವಾಪುರ**

ಸುಮಾರು ೧೯೬೩ರಲ್ಲಿ ಹುಟ್ಟಿಕೊಂಡ 'ಹೇಳತೇನ ಕೇಳ'ದ ರೂಪಕ ಟಿಸಿಲೊಡೆದು ರೆಂಬೆಕೊಂಬೆಗಳಾಗಿ ಮಹಾವೃಕ್ಷವಾಗುವುದರ ಕಡೆಗೆ ಹೊರಟಿದೆ. ಒಂದು ಪ್ರತಿಭಾವಂತ ಸಂವೇದನೆ ಏನೆಲ್ಲಾ ಬಗೆಯಬಹುದೋ ಅದೆಲ್ಲವನ್ನೂ 'ಹೇಳತೇನ ಕೇಳ' ಪ್ರತಿಮೆ ತನ್ನಲ್ಲಿರಿಸಿಕೊಂಡಿರುವುದರಿಂದಲೇ ಆಗಲೇ ಹೇಳಿದಂತೆ ಕಂಬಾರರು ಮತ್ತೆ ಮತ್ತೆ ಅಲ್ಲಿಂದಲ್ಲೆ ಪುರಾಣಗಳನ್ನು ಹೆಕ್ಕಿ ಮರುಸೃಷ್ಟಿಗೆ ತೊಡಗುತ್ತಾರೆ. ಈ ಪುರಾಣ ಹಲವು ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡರೂ ಅದು ಆಧುನಿಕ ಜಗತ್ತಿನ ನೆಲೆಗಳನ್ನು, ಮರೆಯಾಗಿ ಹೋಗುತ್ತಿರುವ ತನ್ನ ಸ್ಥಳೀಯ ಬದುಕಿನ ದ್ವಂದ್ವಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಿರುವುದು ಕಂಬಾರರ ಕೃತಿಗಳ ವೈಶಿಷ್ಟ್ಯವಾಗಿದೆ. ಇಂತಹ ವೈಶಿಷ್ಟ್ಯಗಳಿಂದ ಕೂಡಿರುವ ಈ ಕವಿತೆಯ ಭಾಷೆ, ಲಯ, ಚಿತ್ರ ಸಂಪತ್ತು ಅಷ್ಟೇ ಸಮರ್ಥವಾಗಿ ಮೂಡಿಬಂದಿರುವುದು ವಿಶೇಷವೆಂದೇ ಹೇಳಬಹುದು. ಅತ್ಯಂತ ಅಮೂರ್ತವಾದ ವಸಾಹತು ಸಂಸ್ಕೃತಿ ತಂದ ಸಂಕೀರ್ಣವಾದ ಬದುಕಿನ ನೋವುಗಳನ್ನು ಕಂಬಾರರು ಗಟ್ಟಿದನಿಯಲ್ಲಿ ಹಾಡುವ ಜನಪದ ಲಾವಣಿಯ ಮಾಧ್ಯಮವನ್ನು ಅಭಿವ್ಯಕ್ತಿಗೆ ಶೋಧಿಸಿಕೊಂಡಿರುವುದು (ಆರಿಸಿಕೊಂಡಿರುವುದು) ಕವಿತೆ ಹೊರಡಿಸುವ ಒಟ್ಟು ಧ್ವನಿ ಪರಂಪರೆಗೆ ಅನನ್ಯತೆಯನ್ನು ಒದಗಿಸಿಕೊಟ್ಟಿದೆ. ಈ ಕವಿತೆ ಪ್ರಕಟಗೊಂಡಾಗಲಿಂದ ಈವರೆಗೆ ಹಲವು ವಿಶ್ಲೇಷಣೆಗಳಿಗೊಳಪಟ್ಟಿರುವುದನ್ನು ಗಮನಿಸಿದರೆ ಅದರ ಮಹತ್ವ ವೇದ್ಯವಾಗುತ್ತದೆ.

ಎಂ. ಗೋಪಾಲಕೃಷ್ಣ ಅಡಿಗ, ರಾಮದಾಸ್, ಕುರ್ತಕೋಟಿ, ಎನ್.ಎಸ್.ಲಕ್ಷ್ಮಿನಾರಾಯಣಭಟ್ಟ, ಡಿ.ಆರ್.ನಾಗರಾಜ್, ಲಂಕೇಶ್, ಟಿ.ಪಿ. ಅಶೋಕ ರಂಥ ವಿಮರ್ಶಕರು ಈ ಕವಿತೆಯನ್ನು ಕುರಿತು ಈಗಾಗಲೇ ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಅಧ್ಯಯನವನ್ನು ನಡೆಸಿದ್ದಾರೆ.

> ...... ಒಂದು ಜನಪದ ಕಥೆಯ ಮೂಲಕ ಆಧುನಿಕ ಜೀವನಕ್ಕೊಂದು ಪ್ರತಿಮೆಯನ್ನು ಹುಡುಕುತ್ತಿದ್ದಾರೆ...[೧]" ......ಭಾರತದ ಬದುಕಿನಲ್ಲಿ ನಿಧಾನವಾಗಿ ಮರೆಯಾಗಿ ಹೋಗುತ್ತಿರುವ ಆಂತರಿಕ ಸಮಷ್ಟಿ ಮನಸ್ಸು ಕ್ರಿಯಾಶೀಲವಾಗಿರುವ ಜಗತ್ತು[೨]. ......ಕಣ್ಮರೆಯಾದ ಒಂದು ಸ್ಥಿರ ಜಗತ್ತನ್ನು, ಸಂಬಂಧಗಳನ್ನು ತೋರುತ್ತದೆ. ಆಧುನಿಕ ಚಟುವಟಿಕೆಗಳಿಂದಾಗಿ ಕದಡಿ ಹೋದ ಸುಂದರಲೋಕವೊಂದನ್ನು ನೆನೆಸುತ್ತದೆ [೩].

ಈ ಮೇಲಿನ ಉದ್ಧರಣೆಗಳು ಕಂಬಾರರ 'ಹೇಳತೇನ ಕೇಳ' ಕವಿತೆಯ ಕೇಂದ್ರ ಆಶಯವನ್ನು ಪ್ರಕಟಿಸುತ್ತವೆ.

ಹೇಳತೇನ ಕೇಳ ಕವನದ ಕಥೆ ಕಂಬಾರರ ಕನಸಿನ ಆದರ್ಶದ ಸಮೃದ್ಧ ಬದುಕಿನ ಶಿವಪುರದಲ್ಲಿ ನಡೆಯುತ್ತವೆ. ಕವನದ ಆರಂಭವು ಶಿವಪುರದ ಸಮೃದ್ಧತೆಯನ್ನು ಕಟ್ಟಿಕೊಡುತ್ತಲೇ ಬೆಳೆಯುತ್ತದೆ.

ಜಂಬೂದ್ವೀಪದ ಪೈಕಿ ಮ್ಯಾಗಡೆ ಮಲೆನಾಡ
ಸೂಸಿ ಹರಿದಾಳಲ್ಲಿ ಘಟಪ್ರಭಾ.
ಆ ದಂಡಿ ಅರ್ಧ್ಯಾಣ, ಈ ದಂಡಿ ಶಿವಪೂರ,
ಕೆಂಪು ಹಂಚಿನ ಊರು ಬಲು ಶೋಭಾ.

ಗೌಡ ಶ್ರೀ ಭರತೇಶ, ಗೌಡ್ತಿ ಲಕ್ಷ್ಮೀದೇವಿ
ಎಳಕ ವಯಾದೊಬ್ಬ ಗಂಡ ಮಗಾ
ತೂಗು ತೊಟ್ಟಿಲವಾಗಿ, ಬೆಳ್ಳಿ ಬಟ್ಟಲವಾಗಿ,
ಕೈ ಕಾಲು ಮುರದ ಬಿದ್ದ ಲಕ್ಷ್ಮೀಜಾಗ."

ಘಟಪ್ರಭಾ ನದಿಯ ದಡದ ಮ್ಯಾಲಿನ ಶಿವಪುರ ಅತ್ಯಂತ ಸಮೃದ್ಧವಾದುದು. ಲಕ್ಷ್ಮಿ ಕೈಕಾಲು ಮುರಿದುಕೊಂಡು ಬಿದ್ದಜಾಗ. ಶಿವಪುರ ಎಂದ ಮೇಲೆ ಅದರ ಶ್ರೀಮಂತಿಕೆಯನ್ನು ಹೇಳುವ ಹಾಗೆಯೇ ಇಲ್ಲ. ಈ ಕಾರಣದಿಂದಲೇ ನಿರೂಪಕನಿಗೆ ಶಿವಪುರ ಅತ್ಯಂತ ಸುಂದರವಾಗಿ ಕಂಡಿದೆ. ಮಳೆಯಾದ ಏರಿಯೊಳಗೆ ಬೆಳೆದ ಕರಕಿಯ ಹಾಗೆ ಊರು ಹಬ್ಬಿದೆ.

ಕವನದ ಎರಡನೆಯ ಭಾಗದಲ್ಲಿ ಶಿವಾಪುರದ ನೆಮ್ಮದಿಯ ಹಾಗೂ ಸಮೃದ್ಧಿಯ ಬದುಕನ್ನು ಕಾಣುತ್ತೇವೆ. ಇಲ್ಲಿನ ಹಸಿರು ಸಮೃದ್ಧತೆಯನ್ನು ಸಂಕೇತಿಸುವುದರೊಂದಿಗೆ ಅದು ಇಡೀ ಬದುಕನ್ನೆ ಆವರಿಸಿದೆ. ಇಲ್ಲಿ ಬರುವ ಆಲದ ಮರ ಅಂಥ ಸಮೃದ್ಧಿಯ ಬದುಕಿಗೆ ನೆರಳು, ಆಶ್ರಯ ಕೊಡುವ ಸಂಕೇತವಾಗುತ್ತದೆ. ಈ ನೆರಳು ಪರಂಪರೆಯಿಂದ ಬಂದದ್ದು. ಆಧುನಿಕತೆಯ ಸೋಂಕಿಲ್ಲದ ತಂಪುಗಾಳಿ ನೆರಳನ್ನು ನೀಡುವ ಪ್ರತೀಕವಾಗಿದೆ. ಇದೇ ನೆರಳಲ್ಲೆ ಪರಂಪರೆಯ ಬೋಧನೆ, ವೇದ ಬೆಳದದ್ದು. ಕೊನೆಗೆ ಬುದ್ಧನ ಉಗಮವೂ ಇಲ್ಲಿಯದೆ. 'ಕೊನೆ ಕೊನೆಗೆ ಬುದ್ಧ ಏನಾದ?' ಎನ್ನುವ ಪ್ರಶ್ನೆ ಕವಿತೆಯ ಒಟ್ಟಂದದಲ್ಲಿ ಬೇರೆಯದೆ ಆದ ಧ್ವನಿಯನ್ನು ಹೊರಡಿಸುತ್ತದೆ. ಇಂಥ ಸಮೃದ್ಧಿಯ ಬದುಕನ್ನು ಆಳುವವಳು ಆಲದ ಮರದ ನೆರಳಲ್ಲಿರುವ ಕರಿಮಾಯಿ. ಕರಿಮಾಯಿಯು ಈ ಪರಂಪರೆಯ ಚೈತನ್ಯವೂ ಆಗಿದ್ದಾಳೆ.

ಇಲ್ಲಿಯವರೆಗೂ ಹುರುಪಿನಿಂದ ಹಾಡುವ ಕವಿ 'ಇನ್ನ ಮುಂದಿನ ಕತಿ ಹ್ಯಾಂಗಾರೆ ಹೇಳಲಿ?' ಎನ್ನುವ ಪ್ರಶ್ನೆಯೊಂದಿಗೆ ಕಸಿವಿಸಿಗೊಳ್ಳುತ್ತಾನೆ. ಪ್ರಬಲವಾದ ಶಕ್ತಿಯೊಂದು ಪರಂಪರೆಯ ಬದುಕಿನೊಳಗೆ ಪ್ರವೇಶಿಸಿದ ಆತಂಕ ಅದಕ್ಕೆ ಕಾರಣವಾಗಿದೆ. 'ದನ ತಿಂದು' ಎನ್ನುವ ಮಾತು ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ಅನ್ಯಸಂಸ್ಕೃತಿಯೊಂದು ಪ್ರವೇಶಿಸಿರುವ ಸುದ್ದಿಯನ್ನು ಸಾರುತ್ತದೆ. ಗ್ರಾಮದ ಸುಖ-ಸಮೃದ್ಧಿಗಳನ್ನು ಇಂಥ ಹೊರಗಿನ ಸಂಸ್ಕೃತಿ ವೇಷಮರೆಸಿ ಸೇರುವುದರೊಂದಿಗೆ ತನ್ನ ಹಿಡಿತವನ್ನು ಸಾಧಿಸುತ್ತದೆ. ಪರಕೀಯ ಸಂಸ್ಕೃತಿಗೆ ಎದುರಾದ ಗೌಡನ ಶಕ್ತಿ ಮೋಸಕ್ಕೆ ಬಲಿಯಾಗುತ್ತದೆ. ಇಡೀ ಊರಿನ ಪ್ರಾರ್ಥನೆಯು ಗೌಡನ ಸಹಾಯಕ್ಕೆ ಬರಲಾರದು. ಡಾ|| ಡಿ.ಆರ್.ನಾಗರಾಜ್‌ರವರ ಈ ಕೆಳಗಿನ ಮಾತುಗಳು ಈ ಮೇಲಿನ ವಿಚಾರವನ್ನು ಸಮರ್ಥಿಸುತ್ತವೆ.

'ಕನಸಿನ ಕರಿಯ ಚೋರನ ಹಾಂಗ' ಈ ಗೌಡನ ರೂಪದಲ್ಲಿಯ ರಾಕ್ಷಸ ಬಂದ. ಪರಕೀಯ ಶಕ್ತಿಯೊಂದು ಪರಕೀಯವಾಗಿಯೇ ಬಂದರೆ ನಾಗರಿಕತೆಯೊಂದು ಅದನ್ನು ತಡೆಗಟ್ಟುತ್ತದೆ. ಹೋರಾಡುವ ಶಕ್ತಿಯನ್ನು ರೂಢಿಸಿಕೊಳ್ಳುತ್ತದೆ. ಆದರೆ ಚರಿತ್ರೆಯ ವ್ಯಂಗ್ಯವೆಂದರೆ, ಪರಕೀಯ ರಾಕ್ಷಸತೆ ಸ್ಥಳೀಯ ಉಡುಪು, ವಿವರಗಳಲ್ಲಿಯೇ ಪ್ರಕಟವಾಗಿ ಮೂಲ ಬದುಕಿನ ರೂಪವನ್ನು ಬದಲಾಯಿಸುತ್ತದೆ. ಇಲ್ಲಿ ಆದದ್ದು ಹೀಗೆಯೇ [೫].

ಡಾ. ಡಿ.ಆರ್. ನಾಗರಾಜ ಅವರ ಈ ಮೇಲಿನ ಮಾತುಗಳು ವಸಾಹತುಶಾಹಿ ಸಂಸ್ಕೃತಿಯು ಸ್ಥಳೀಯವೇಷ ಧರಿಸಿ ಬಂದು, ದೇಸೀಯ ಬದುಕನ್ನು ದಿಕ್ಕುಗೆಡಿಸಿದ್ದನ್ನು ಸಮರ್ಪಕವಾಗಿ ವಿಶ್ಲೇಷಿಸುತ್ತವೆ.

ಹೊಳಿ| ಯಾಗ ತೆರಿಗಳಿರಲಿಲ್ಲ
   ಆ| ಲSದ ಗಿಡಕ ತಂಪಿಲ್ಲ
ಓ| ಣ್ಯಾಗ ಎಲ್ಲ ಬಣ ಬಣಾ
   ಸುಡ| ಗಾಡಧಾಂಗ ರಣ ರಣಾ [೬]

ಈ ಹಿಂದೆ ಇದ್ದ ಸಮೃದ್ಧಿಯ ನೆರಳು, ಹಸಿರು, ನದಿಗಳ ತೆರೆಗಳು ಇಲ್ಲವಾಗಿ ಒಂದು ರೀತಿಯ ಧಾವಂತ ಬದುಕು ಎದುರಾಗಿದೆ. ಈ ಮೇಲಿನ ಕವಿತೆಯ ಉದ್ಧರಣೆ ಈ ಮಾತನ್ನು ದೃಢಪಡಿಸುತ್ತದೆ. ಅನ್ಯಾಕ್ರಮಣದ ಸಂಸ್ಕೃತಿ ಎಲ್ಲೆಲ್ಲೂ ತನ್ನ ಮೇಲುಗೈ ಸಾಧಿಸುವುದರೊಂದಿಗೆ ಸಮೃದ್ಧ ಗ್ರಾಮದ ಬದುಕನ್ನು ನಿಷ್ಕ್ರಿಯೆಗೊಳಿಸುವ, ಬೂದಿ ಮಾಡುವ ಕ್ರಿಯೆಯನ್ನು 'ಗುಡ್ಡದ ಕಡ್ಡಕ ಬೆಂಕಿ ಹಚ್ಚಿದರಾರೊ, ಹೊಗೆ ತುಂಬಿ ನೋಡ್ಯಾರು ಎಲ್ಲಾ ಜನಾ' ಎಂಬ ಸಾಲು ಧ್ವನಿಸುತ್ತದೆ.

ಐದನೆಯ ಭಾಗದ ಚಿತ್ರಗಳು ಅತ್ಯಂತ ಭಯಾನಕವಾಗಿ ಎದುರಾಗುತ್ತವೆ. ಆನಂತರದ ಗಳಿಗೆಗಳು ಅತ್ಯಂತ ಭೀಕರವಾದವುಗಳು. ಇಲ್ಲಿನ ಸೂರ್ಯಾಸ್ತಮದ ಚಿತ್ರ ಇಂತಹ ಕ್ರೌರ್ಯವನ್ನೇ ಪ್ರತಿಮಿಸುತ್ತದೆ. ಹಗಲು ಮತ್ತು ರಾತ್ರಿಗಳ 'ಸಂಧಿ ಪ್ರಕಾಶದ ಸಂಧಿಯೊಳಗ' ಹೊರಗಿನ ಶಕ್ತಿಗಳು ವೇಷ ಮರೆಸಿ ಬರುವುದನ್ನು ಕಾಣುತ್ತೇವೆ. ಹೊರಗಿನ ಶಕ್ತಿಯೊಂದು ಚೋರನ ಹಾಗೆ ಕತ್ತಲೆಯಲ್ಲಿ ಪ್ರವೇಶಿಸುತ್ತದೆ. ಅಂತಹ ಪ್ರವೇಶ ಊರಿನ ಭಯ-ಆತಂಕಗಳಿಗೆ ಮುನ್ಸೂಚನೆಯಾಗಿದೆ. ಸತ್ಯ ಮರೆಯಾಗಿ ಸುಳ್ಳುಗಳು ಮೈ ಪಡೆಯುತ್ತವೆ. ಹೊರಗಿನ ಸಂಸ್ಕೃತಿಯೊಂದು ಮನೆಯ ಖಾಸಗೀ ಕೋಣೆಗೂ ಪ್ರವೇಶಿಸುತ್ತದೆ ಹಾಗೂ ತನ್ನ ಅಧಿಕಾರದ ಹಿಡಿತವನ್ನು ಪ್ರಶ್ನಿಸುವುದನ್ನು ಸಹಿಸಲಾರದೆ ಹೋಗುತ್ತದೆ. ಇದನ್ನೇ ಈ ಮುಂದಿನ ಸಾಲುಗಳು ಸೂಚಿಸುತ್ತವೆ.

ಹಣಕಿ| ಹಾಕಬಾರ್ದು ಯಾರ್ಯಾರಾ
   ಹಾ| ಕಿದರ ಗೋರಿ ತಯ್ಯಾರಾ
ಊ| ರಾಗ ಹೊಡಸ ಡಂಗೂರಾ
   ಯಾ| ವತ್ತೂ ಇರಲಿ ಖಬರಾ [೭]

ವಸಾಹತು ಸಂಸ್ಕೃತಿ ತನ್ನ ಆಕ್ರಮಣಶೀಲತೆಯನ್ನು, ತನ್ನ ಅಧಿಕಾರವನ್ನು ಗಟ್ಟಿಯಾಗಿಯೇ ತಳವೂರುವ ಸೂಚನೆಗಳು ಈ ಮೇಲಿನ ಸಾಲುಗಳಲ್ಲಿ ಕಾಣುತ್ತೇವೆ. ಅದು ಹಾಗೆಯೇ ತನ್ನ ಆಕ್ರಮಣಶೀಲತೆಯನ್ನು ಪ್ರಶ್ನಿಸುವುದರ ಬಗೆಗೆ ಎಚ್ಚರವನ್ನೂ ವಿಧಿಸುತ್ತದೆ.

ಊರಿನ ಹಿರಿಯ ಕರಿಯಜ್ಜ ಗ್ರಾಮದ ಪರಂಪರೆಯ ನಂಬಿಕೆಗಳ ಸಂಕೇತ. ಎಣ್ಣೆಯಿಲ್ಲದೆ ಉರಿದ ತನ್ನ ಹಾಗೂ ಪರಂಪರೆಯ ದಿನಮಾನಗಳ ಕಥೆಯನ್ನೂ ಬಲ್ಲವನು. ಅವನು ಹಾಕಿದ ಗೆರೆಗಳನ್ನು ಶಿವಾಪುರದ ಸುತ್ತಲಿನ ಹದಿನಾಲ್ಕು ಹಳ್ಳಿಗಳಲ್ಲಿ ದಾಟಿದವರಿಲ್ಲ. ಅವನ ಸಲಹೆ, ಪರಿಹಾರಗಳು ಗ್ರಾಮದ ಜನತೆಗೆ ಅತ್ಯಂತ ಅವಶ್ಯಕ. ಈ ಬಗೆಯ ಪರಿಸರದೊಳಗೆ ಒಂದು ಭಯಾನಕ ಶಕ್ತಿಯೊಂದು ಪ್ರವೇಶಿಸಿದ್ದರಿಂದ ಊರಿನ ಜನತೆಯಲ್ಲಿ ಭಯ-ಆತಂಕಗಳು ಆವರಿಸಿದ್ದನ್ನೂ ಕರ್‍ರೆವ್ವನ ಮೊರೆಹೋದದ್ದನ್ನೂ ಕವಿತೆಯ ಆರನೆಯ ಭಾಗದಲ್ಲಿ ಅನೇಕ ಚಿತ್ರಗಳು ಪ್ರಕಟಿಸುತ್ತವೆ.

ಹೋರೀಯ ಕೊಂಬಿನ್ಹಾಂಗ ಮಕಮೀಸಿ ಮೂಡ್ಯಾವ
    ಎಳಕ ಯೌವ್ವನ ಬಂದು ರಾಮಗೊಂಡಗ.
ಹಿಂಡ ದನಗೋಳೊಳಗ ದ್ಯಾಮವ್ವ ಕ್ವಾಣದಾಂಗ
    ಅವನಿದ್ದ ವಾರಿಗಿಯವರೊಳಗ
- - - - - - - - - - - - - - -
ಅವನ ಕೆನ್ನಿಯ ಒಳಗೆ ಸೂರ್ಯದೇವ ಹೊಳದಾನು
    ಕಣ್ಣಾಗ ಹುಣ್ಣೀಮಿ ಚಂದ್ರಾಮರ
ಒಗರೇನು, ಹೊಗರೇನು, ಹರೆಯ ಗರುವಿಕಿಯೇನು
    ಬಾಯ ಬಾಯ ಬಿಡತಾವ ಹುಡಗೇರಾ[೬].

ಈ ಮೇಲಿನ ಕವಿತೆಯ ಸಾಲುಗಳಲ್ಲಿ ಊರಗೌಡನ ಮಗ ರಾಮಗೊಂಡನ ವ್ಯಕ್ತಿ ಚಿತ್ರಣವಿದೆ. ರಾಮಗೊಂಡನ ಯೌವ್ವನದ ಶಕ್ತಿ-ಸಾಮರ್ಥ್ಯಗಳು ಇಲ್ಲಿ ಪ್ರಕಟಗೊಂಡಿವೆ. ಊರ ಹೆಣ್ಣುಗಳು ಅವನ ಸ್ನೇಹಕ್ಕೆ ಹಾತೊರೆದರೆ ಮಾಯಾವಿಗೌಡ ಅವನ ಶಕ್ತಿ-ಸಾಮರ್ಥ್ಯಗಳ ಬಗೆಗೆ ಅಸಹನೆಯನ್ನು ಸೂಚಿಸುತ್ತಾನೆ.

ಊರೀನ ಹುಡಗೋರು ದೊಡ್ಡಾಟ ಬಿಟಕೊಟ್ಟು
    ನಾಟಕವಾಡ್ಯಾರು ಪಟ್ಟೆಪೈಲೇಕ,
ಹೇಸಿ ಹೆಣ್ಣಿನ್ಹಾಂಗ ಪುಗ್ಗಾ ತಗದ ಕುಣಿತಾವ;
    ನೋಡಲಿಲ್ಲ ರಾಮಗೊಂಡ, ಕರಿಮುದಕ.[೭]

ಪರಂಪರೆಯ ಸಂಕೇತವಾದ ದೊಡ್ಡಾಟದ ಜಾಗಕ್ಕೆ ಆಧುನಿಕತೆ ಹೆಜ್ಜೆಯಿಟ್ಟು ನಾಟಕ ಊರಿನ ತರುಣರನ್ನು ಆಕರ್ಷಿಸಿದೆ. ಊರಿನ ಹುಡುಗರ ಹೆಣ್ಣಿಗತನಕ್ಕೆ ರಾಮಗೊಂಡ ಮತ್ತು ಕರಿಮುದುಕರು ನಾಚುತ್ತಾರೆ. 'ನೋಡಲಿಲ್ಲ ರಾಮಗೊಂಡ, ಕರಿಮುದಕ' ಎನ್ನುವಲ್ಲಿ ಹೊರಗಿನ ಶಕ್ತಿಯ ಪ್ರಭಾವಕ್ಕೆ ಇವರಿಬ್ಬರೂ ಒಳಗಾಗಲಿಲ್ಲ ಎಂಬ ವಿಚಾರವಿದ್ದರೂ, ಅವರಿಬ್ಬರೂ ಹೇಗೆ ಪರಕೀಯ ಪ್ರಭಾವದಿಂದ ಹೊರಗಿದ್ದರೆಂಬ ಅನುಮಾನ ಇಲ್ಲಿ ಬರದಿರಲಾರದು.

ಏಕೆಂದರೆ ವಸಾಹತು ಸಂಸ್ಕೃತಿ ತನ್ನ ಮಾಯಾಶಕ್ತಿಯಿಂದ ಊರು, ಮನೆ-ಮನಗಳನ್ನು ಆವರಿಸಿಬಿಡುವಂತಹುದು.

ನಾಟಕದ ಹುಡಗೋರು ಕೆಟ್ಟ ಚಾಳಿಗೆ ಬಿದ್ದು,
  ಹುಳಮೇದ ಬಣಧಾಂಗ ಒಣಗ ಹತ್ತ್ಯಾವ.
ಲುಟುಲುಟು ಕಾಲ ಬಡದ ದಂಡ್ಯಾಗ ಈಸ್ಯಾವ;
ಶೀರ ದನಿಯ ನಮನಿ ಸೊರಗಹತ್ಯಾವ.

ತಲಿಯೇನ ತಗದಾವ, ಹಲ್ಲೇನ ಕಿಸಿದಾವ,
  ಸಿಳ್ಳೆ ಹಾಕಿ ತರಗತಾವ ಫರಸೀನಾಯಿ;
ನೀರ ತರುವ ದಾರ್‍ಯಾಗ, ಹಾರೂರ ಕೇರ್‍ಯಾಗ
  ಸುತ್ತತಾವ ತೊಟಗೊಂಡ ಬಿಳಿಚಾಯಿ.[೧೦]

ನಾಟಕದ ಬೆನ್ನು ಹತ್ತಿದ ಹುಡುಗರು ಕೆಟ್ಟ ಚಾಳಿಗೆ ಬಿದ್ದು ನಿರ್ವೀರ್ಯರೂ ಅಶಕ್ತರೂ ಆಗಿದ್ದಾರೆ. ತೋಳು-ತೊಡೆಗಳಲ್ಲಿ ಶಕ್ತಿ ಇಲ್ಲದೆ ಸೊರಗುವುದರೊಂದಿಗೆ ಗ್ರಾಮದ ಶಕ್ತಿಯೂ ಸೊರಗಿಹೋಗಿದೆ, ವೇಷಭೂಷಣಗಳು ಬೀದಿನಾಯಿಗಳಂತೆ ಬದಲಾಗಿವೆ. ಹಾರುವರ ಹುಡುಗಿಯರು ನೀರು ತರುವ ದಾರಿಗಳಲ್ಲಿ ತಮ್ಮ ಕರ್ತವ್ಯವನ್ನು ಮರೆತು ಅಲೆಯುವ ಚಟಗಳಿಗೆ ಗುರಿಯಾಗಿದ್ದಾರೆ.

ಬಡ್ಡಿಗೆ ಹಣಕೊಟ್ಟು ತನ್ನ ಸ್ವಾರ್ಥವನ್ನು ಬಲಿಷ್ಠಗೊಳಿಸುವ ಮಾಯಾವಿಗೌಡನ ಕ್ರಿಯೆಗಳು ಇಲ್ಲಿ ಆರಂಭಗೊಂಡಿವೆ. ಆ ಮಾದರಿಯ ಆಮಿಷಗಳು ಗ್ರಾಮದ ಜನತೆಯನ್ನು ಆಕರ್ಷಿಸಿರುವ ಚಿತ್ರ ಹೀಗಿದೆ:

ಹೊತ್ತೇರಿ ಎದ್ದ ಗೌಡ ಬಡ್ಡೀಗಿ ಹಣ ಕೊಟ್ಟು
  ಕೂಡ್ಸ್ಯಾನ ಚಾವಡ್ಯಾಗ ದೊಡ್ಡ ಸಭಾ,
ಹಸಮಕ್ಳ ಸಲುವಾಗಿ ಗರಡೀಯ ಮನಿ ಕೆಡವಿ
  ಹೊಸ ಸಾಲಿ ಕಟ್ಟಿಸೋಣ,-ಬಲೆ ಶೋಭಾ.[೧೧]

ಹೊಸ ಆಮಿಷಗಳಿಗೆ ಆಕರ್ಷಿತರಾದ ಜನತೆ ಪರಕೀಯ ಹಾಗೂ ನಗರ ಸಂಸ್ಕೃತಿಯ ಯುಕ್ತಿಗೆ ಬಲಿಯಾದ ಚಿತ್ರ ಇಲ್ಲಿದೆ. ಹಳ್ಳಿಯ ಮಕ್ಕಳ ದೈಹಿಕ ಶಕ್ತಿಯು ಸೊರಗಿ, ಗರಡಿ ಮನೆ ತನ್ನ ಆಕರ್ಷಣೆಯನ್ನು, ಅವಶ್ಯಕತೆಯನ್ನು ಕಳೆದುಕೊಂಡು ಬೌದ್ಧಿಕತೆಗೆ ಸಂಕೇತವಾದ ವಸಾಹತುಶಾಹಿ ನಿರ್ಮಿತ ಶಾಲೆ ಆಕರ್ಷಕವಾಗಿದೆ. ತೋರಿಕೆಯ ವಿದ್ಯೆ ಶೋಭೆಯಾಗುವ ಸೂಚನೆಗಳು ಇಲ್ಲಿವೆ. ಗೌಡನು ತನ್ನ ಸ್ವಾರ್ಥಕ್ಕೆ ಹಳ್ಳಿಯ ಜನಗಳನ್ನೇ ದುಡಿಸಿಕೊಳ್ಳುವ ಕ್ರಿಯೆಯೂ ಮಾರ್ಮಿಕವಾದುದು. ಹೊಸಶಾಲೆಯ ಆಗಮನದಿಂದ ಶಕ್ತಿಗೆ ಸಂಕೇತವಾದ ಪರಂಪರಾಗತ ಗರಡಿ ಮನೆಯ ಬಗೆಗಿನ ನಿರ್ಲಜ್ಜತೆ, ಆಲದ ಮರದ ನಿರ್ನಾಮ, ಪರಂಪರೆಯ ಪ್ರತಿನಿಧಿಯಾದ ಕರಿಯಜ್ಜನ ಸಾವಿನ ಮೂಲಕ ಇಡೀ ಗ್ರಾಮವೇ ದುರಂತದ ಕಡೆಗೆ ಹೊರಡುತ್ತದೆ. ಈಗಾಗಲೆ ವಿಮರ್ಶಕರು ಗುರುತಿಸಿರುವಂತೆ ಶಾಲೆ ಹೊಸ ನಾಗರಿಕತೆಯ ದೂತ-ಸಂಕೇತ. ಹೊಸ ದೂತನ ಪ್ರಭಾವ ಪರಿಣಾಮಗಳು ತನ್ನ ಆಕರ್ಷಣೆಯಿಂದಲೇ ಗ್ರಾಮ ಬದುಕನ್ನು

ಟೊಳ್ಳಾಗಿಸುವುದರೊಂದಿಗೆ ತನ್ನ ಹಿಡಿತವನ್ನು ಸಾಧಿಸಿದೆ. ಕೈಲಾಸಂ ಅವರ 'ಟೊಳ್ಳುಗಟ್ಟಿ' ನಾಟಕ ಈ ಶತಮಾನದ ಆರಂಭದ ದಶಕಗಳಲ್ಲಿಯೆ ಇಂಥ ಪ್ರಶ್ನೆಗಳನ್ನು, ವಿಮರ್ಶೆಯನ್ನು ಪ್ರಕಟಿಸಿದ್ದನ್ನು ಕಾಣುತ್ತೇವೆ. ಅತ್ಯಂತ ಕುರುಡು ಅನುಕರಣೆ ಈ ರೀತಿಯ ಟೊಳ್ಳಾಗುವ ಸಂಕೇತಕ್ಕೆ ಕಾರಣವೂ ಆಗುತ್ತದೆ. ಇಂಥ ದುರಂತದ ಪರಂಪರೆಗಳು ಆನಂತರ ತಮ್ಮ ಬಾಹುಗಳನ್ನು ಚಾಚುವ ಪ್ರಕ್ರಿಯೆಯು ಅತ್ಯಂತ ಭಯಾನಕವಾದುದು. ಈ ಮಾದರಿಯ ಜಿಜ್ಞಾಸೆಯನ್ನು ಕಂಬಾರರ ಋಷ್ಯಶೃಂಗ, ಹುಲಿಯ ನೆರಳು, ಕರಿಮಾಯಿ ಕೃತಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿಶ್ಲೇಷಣೆಗೆ ಗುರಿಯಾಗುತ್ತದೆ. ಇಂಥ ದುರಂತಗಳು ಕರಿಯಜ್ಜ ಮತ್ತು ಯುವಕ ರಾಮಗೊಂಡನನ್ನು ದುಃಖಕ್ಕೆ ಈಡುಮಾಡುತ್ತವೆ. ಪರಂಪರೆಯ ಸಂಕೇತಗಳಾದ ಗರಡಿಮನೆ ಮತ್ತು ಆಲದ ಮರದ ನಿರ್ನಾಮ, ಕರಿಯಜ್ಜನ ಸಾವು, ಶಾಲೆಯು ತಲೆಯೆತ್ತುವುದರ ಮೂಲಕ ಮಾಯಾವಿಗೌಡನು ಪ್ರಬಲನಾಗುವ ಸೂಚನೆಗಳು ಗಟ್ಟಿಯಾಗುತ್ತವೆ. ಈ ಎಲ್ಲ ಕ್ರಿಯೆಗಳೂ ರಾಮಗೊಂಡನನ್ನು ದಿಕ್ಕು ತಪ್ಪಿಸಿವೆ, ಅವನ ಆತಂಕಗಳಿಗೆ ಹೊಸ ಅರ್ಥಗಳು-ಸಂಶಯಗಳು ಹುಟ್ಟಿಕೊಂಡಿವೆ. ಊರಿನ ಜನತೆಗೆ ಅವನ ದ್ವಂದ್ವಗಳು ಅವನನ್ನು ಹುಚ್ಚನಂತೆ ಕಾಣಿಸಿವೆ.

> ಬಾಗಿಲು ಹಾಕ್ಯಾನು, ಅಗಳೀಯ ಜಡದಾನು,
> ಕಳಕೊಂಡು ಹುಡಕ್ಯಾನು ಒಳಹೊರಗ.
> ಉಗುರು ತಾಕಿದ ಹೇನಿನಂತೆ ಅಡಗುವ ಹೆಣ್ಣು
> ಮರ ಮರಾ ಮರಿಗ್ಯಾನ ಮನದೊಳಗ [೨]

ರಾಮಗೊಂಡನ ಆತಂಕಗಳನ್ನು ಈ ಮೇಲಿನ ಸಾಲುಗಳು ಅತ್ಯಂತ ಪ್ರತಿಮಾತ್ಮಕವಾಗಿ ಹಿಡಿದುಕೊಡುತ್ತವೆ. ಕಳಕೊಂಡದ್ದನ್ನ ತನ್ನ ಒಳ-ಹೊರಗೆ ಹುಡುಕುವ ಕ್ರಿಯೆಗೆ ರಾಮಗೊಂಡ ತೊಡಗಿದ್ದಾನೆ. ತನ್ನ ಆತ್ಮವನ್ನೆ ಕಳೆದುಕೊಂಡ ದುರಂತ ಇವನದು. ಉಗುರು ತಾಕಿದ ಹೇನಿನಂತೆ ಒಳಗೊಳಗೆ ಮರಗುವ ಸ್ಥಿತಿಗೆ ಒಳಗಾಗಿದ್ದಾನೆ. ರಾಮಗೊಂಡನ ಈ ಸಾಂಕೇತಿಕ ಪಾತ್ರದ ನಿಟ್ಟುಸುರು, ದುಃಖ, ಕಂಬಾರರ ಕಾವ್ಯದ ಪರಂಪರೆಯಲ್ಲಿಯೂ ಕೇಂದ್ರವಾಗುತ್ತವೆ. ತನ್ನ ಊರಲ್ಲೆ ತನಗೆ ನೆಲೆಯಿಲ್ಲದಂತಾಗಿ ಬೇರೆಡೆಗೆ ಹೋಗುವ ತಯ್ಯಾರಿ ನಡೆಸಿದ್ದಾನೆ. ಮಾಯಾವಿ ತಂದೆಯು ಅದನ್ನು ಅಡ್ಡಪಡಿಸಲಾರ. ಆದರೆ ಹಡೆದವ್ವನ ಪ್ರೀತಿ-ಮಮತೆಯ ಗೆರೆಗಳು ಬಿಟ್ಟುಕೊಡಲಾರವು. ಇಂಥ ದಿಕ್ಕು ತಪ್ಪಿದ ಸಮಯದಲ್ಲಿ ಹಡೆದಾಕೆಯ ಬಳಿಗೆ ಬಂದು ತನ್ನ ದುಃಖವನ್ನು ತೋಡಿಕೊಂಡಾಗ ಆಗುವ ದುರಂತವೆ ಅತ್ಯಂತ ಅನೈತಿಕವಾದುದು. ಮಗನ ದುಃಖ-ದುಮ್ಮಾನಗಳನ್ನು ಕೂಡಾ ಕೇಳಲಾರದ ಹಡೆದಾಕೆ ತನ್ನ ಬಸುರಿನ ಬೆಂಕಿಯನ್ನ ತಣಿಸಿಕೊಳ್ಳುವುದರ ಕಡೆಗೆ ತೊಡಗಿಬಿಡುತ್ತಾಳೆ. ತಾಯಿಯ ಈ ಅನೈತಿಕ ಬಯಕೆಗಳು ರಾಮಗೊಂಡನನ್ನು ನಿಷ್ಕ್ರಿಯನನ್ನಾಗಿ ಮಾಡುತ್ತವೆ. ಅವಳ ಬಯಕೆಯ ಬಸುರಿನ ಸುದ್ದಿ ನಗೆಪಾಟಲಿಗೆ ಗುರಿಯಾಗುತ್ತದೆ. ತಾಯಿಯ ಬಯಕೆಗಳು ತನ್ನ ರೀತಿ-ನಡತೆಗಳನ್ನೆ ಮರೆಯುವಂತೆ ಮಾಡುತ್ತವೆ. ತನ್ನ ಮಗನಲ್ಲೆ ಕುಂದುಗಳನ್ನು ಹುಡುಕುವ ಛಾತಿ ತಾಯಿಯದಾಗುತ್ತದೆ. ಇಂಥ ಅನ್ಯವಾಗುವ ಸ್ಥಿತಿ ರಾಮಗೊಂಡನ ಅಸ್ತಿತ್ವವನ್ನು ಹುದುಗಿಸಿಬಿಡುತ್ತದೆ. ಪಾರಂಬಿ, ಕರ್ರೆವ್ವ ಮಾತ್ರ ಈಗ ಅವನಿಗೆ ಉಳಿದಿರುವ ಏಕೈಕ ಆಸರೆ. ತಾಯಿಯ ಬಯಕೆಗಳ ಈಡೇರಿಕೆಗೆ ನಡೆಸುವ ಅವನ ಪಯಣ ಮುಂದೆ ನಡೆಯುವ ದುರಂತಗಳನ್ನೆ ಪ್ರಕಟಿಸುತ್ತದೆ.

ರಾಕ್ಷಸ ಶಕ್ತಿಯ ಬಯಕೆಗಳು ಗ್ರಾಮ ಜೀವನದ ಪ್ರಾಮುಖ್ಯತೆಗೆ ಧಕ್ಕೆ ತರಲು ಹಿಂದು-ಮುಂದು ನೋಡಲಾರವು. ಇದನ್ನೇ ಡಾ|| ಡಿ.ಆರ್.ನಾಗರಾಜ್ ಅವರು ಪರಕೀಯ ಜೀವನ ಕ್ರಮವು ದೇಸೀಯ ಬದುಕನ್ನು ಕಲುಷಿತಗೊಳಿಸುವ, ವಿಕೃತಗೊಳಿಸುವ ಬಗೆಯನ್ನು ಈ ಕೆಳಕಂಡಂತೆ ಗುರುತಿಸಿದ್ದಾರೆ.

> "ಆಧುನಿಕ ಪರಕೀಯ ಜೀವನ ಕ್ರಮ ಬಂದಾಗ ಕಾಮ ಕೂಡಾ ಕಲುಷಿತವಾಗುತ್ತದೆ. ತನ್ನ ಆರೋಗ್ಯಕರ ಸೃಜನಶೀಲ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಸೃಷ್ಟಿಸುವ, ಬೆಳೆಸುವ, ಜೀವೋಲ್ಲಾಸದ ಅನುಭವವಾಗುವ ಬದಲು ಹಿಂಸ್ರಕ ಕಾಮವಾಗುತ್ತದೆ. ವಿಕೃತವಾಗುತ್ತದೆ. ಗೌಡತಿಯ ಹಿಂಸ್ರಕ ಕಾಮ ತನ್ನ ಆರೋಗ್ಯಕರ ನೆಲೆಗಳನ್ನು ಕಳೆದುಕೊಂಡಿದೆ. ಮೊದಲಿಗೆ ಆರೋಗ್ಯಕರ ಕಾಮದ ವ್ಯಕ್ತಿತ್ವವಿದ್ದ ರಾಮಗೊಂಡ ಕ್ರಮಕ್ರಮೇಣ ತನ್ನ ಮೊದಲಿನ ಶಕ್ತಿಯನ್ನು ಕಳೆದುಕೊಂಡ. ಆದ್ದರಿಂದಲೇ ಬದುಕಿನಲ್ಲಿ ಆದ ಪರಿವರ್ತನೆಯ ಕಾಮ ವಿಕೃತವಾದದ್ದು.[೧೩]"

ಹೀಗೆ ರಾಕ್ಷಸ ಶಕ್ತಿಯ ಸಂಪರ್ಕದಿಂದ ಕೆರಳುವ ಗೌಡತಿಯ ಬಯಕೆಗಳು ವಸಾಹತು ಸಂಸ್ಕೃತಿಯ ಕಾಮುಕ ದುರಾಸೆಗಳನ್ನೆ ಧ್ವನಿಸುತ್ತವೆ. ಹುಲಿಯ ಹಾಲು, ಹೃದಯ, ಕಣ್ಣುಗುಡ್ಡೆ, ನಾಲಗೆ, ಮೈದೊಗಲುಗಳನ್ನು ಬಯಸುವ ಗೌಡತಿಯ ಬಯಕೆಯು ವಸಾಹತು ಸಂಸ್ಕೃತಿಯ ಕ್ರೌರ್ಯ ಹಾಗೂ ಆಕ್ರಮಣಶೀಲತೆಯ ಲಕ್ಷಣಗಳನ್ನು ಪ್ರಕಟಿಸುತ್ತದೆ. ಮನುಷ್ಯ ಸಂಬಂಧಗಳನ್ನು ಅನೈತಿಕಗೊಳಿಸುವ ಕ್ರಿಯೆಯು ಪಶ್ಚಿಮದ ಬದುಕಿನ ಬಗೆಯನ್ನು ಧ್ವನಿಸುತ್ತದೆ. ಗಾಂಧಾರಿಯ ಸಂತಾನ ವಸಾಹತು ಸಂಸ್ಕೃತಿಯ ಮುಂದಿನ ಹಲವು ಅನರ್ಥಗಳನ್ನು, ಅದರ ಹಲವು ಮುಖಗಳನ್ನು ಕಾಣಿಸುತ್ತದೆ. ಇದು ಅಕ್ರಮ ಸಂತಾನವೂ ಹೌದು, ಆತುರದ ಸಂತಾನವೂ ಹೌದು.

ಬರ | ಲಿಲ್ಲ ಏಟು ಕಕಲಾತಿ
ಮರ| ತಾಳ ರೀತಿ ಮತ್ತು ನಡತಿ
*    *    *    *    *

ಎರಡು ತಿಂಗಳಿಗೆ ಎರಡೇನು ಬಯಸ್ಯಾಳ?
    ತಿನ್ನಲು ಕೊಡು ನಿನ್ನ ಹೃದಯವನಾ!
*    *    *    *    *

ನಾಕಂಬು ತಿಂಗಳಿಗೆ ಅಂಡ್ಯಾಳ ಆಡುದಕ
    ಕಣ್ಣಗುಡ್ಡಿ ಬಯಸ್ಯಾಳ ಕೊಡ ಲಗುಟಾ
*    *    *    *    *

ಏಳಂಬು ತಿಂಗಳಿಗೆ ಸಾಕಂಬುತನ ಬೇಕ
    ತೊಗಲ ಹೆಚ್ಚಿರಿ ಪಚಡಿ ಮಾಡುದಕ!
ಎಂಟಂಬು ತಿಂಗಳಿಗೆ ಹೊಟ್ಟೀಯ ಹೊಸದಾಳ
    ಗಾಂಧಾರಿ ಹಡದಾಳ ಗಂಡ ಮಗಾ[೧೪]!

ತಾಯಿಯ ಬಯಕೆಗಳಿಗೆ ಬಲಿಯಾದ ರಾಮಗೊಂಡ ಸಂಪೂರ್ಣವಾಗಿ ದಿಕ್ಕು ತೋಚದಾಗಿದ್ದಾನೆ. ತಂದೆ ಹೇಳಿದ ಮೂಡಣ ದಿಕ್ಕಿನ ಸಾಧು ಕೊಡುವ ಮಂತ್ರಿಸಿದ ನೀರಿಗೆ ಕಾಯುವುದೊಂದೇ ರಾಮಗೊಂಡನಿಗೆ ಉಳಿದಿರುವ ದಾರಿ. ಈಗ ಪಶ್ಚಿಮದ ರಾಕ್ಷಸನಿಗೆ ಪೂರ್ವದ ಸಾಧು ಎದುರಾಗಬೇಕಾದದ್ದು ಅನಿವಾರ್ಯ. ಗಾಂಧಿ, ಠಾಕೂರ್, ಅರವಿಂದ, ಬೇಂದ್ರೆ, ಕುವೆಂಪು ಅವರ ಸಂವೇದನೆಯ ಅಭೀಪ್ಸೆಯೂ ಇದೇ ಬಗೆಯದೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪಶ್ಚಿಮದ ರಾಕ್ಷಸನಿಂದ ಎದುರಾದ ದುರಂತಗಳ ಪರಿಹಾರಕ್ಕೆ ಮೂಡಣ ದಿಕ್ಕಿನ ಸಾಧುವಿಗಾಗಿ ಕಾಯಬೇಕು. ಹೀಗೆ ಪೂರ್ವ-ಪಶ್ಚಿಮಗಳ ಸಂಘರ್ಷವನ್ನು ಕಂಬಾರರು ಯಾವ ಅಬ್ಬರವೂ ಇಲ್ಲದೆ ಮುಖಾಮುಖಿಯಾಗಿಸಿದ್ದಾರೆ. ತನ್ನ ಕಳೆದು ಹೋದ ನೆಮ್ಮದಿಯ ಹಾಗೂ ತನ್ನ ಅಸ್ತಿತ್ವದ ನೆಲೆಗಳನ್ನು ಮತ್ತೊಮ್ಮೆ ಪಡೆದುಕೊಳ್ಳಲು ರಾಮಗೊಂಡನ ಕಾಯುವಿಕೆ ಸಂಕೇತವಾಗುತ್ತದೆ. ಅವನ ಅಸ್ತಿತ್ವದ ಹುಡುಕಾಟ ವಸಾಹತು ಸಂಸ್ಕೃತಿ ಎಸಗಿದ ಕ್ರೌರ್ಯಕ್ಕೆ ಇಡೀ ಭಾರತೀಯ ಸಂಸ್ಕೃತಿ ಕಳೆದುಕೊಂಡ ತನ್ನತನವನ್ನು ಹುಡುಕುವ ನಿರಂತರ ದುರಂತವನ್ನೆ 'ಹೇಳತೇನ ಕೇಳ' ಪುರಾಣ ಪ್ರಕಟಿಸುವುದರಲ್ಲಿ ತನ್ನ ಅನನ್ಯತೆಯನ್ನು ಪಡೆದುಕೊಂಡಿದೆ.

ಮೂರು ದಶಕಗಳಿಗೂ ಹಿಂದೆ ಪ್ರಕಟವಾದ ಈ ಕವಿತೆ ಹೀಗೆ ಹಲವು ಅರ್ಥ ಪರಂಪರೆಗಳನ್ನು ಹೊರಡಿಸುವ ಶಕ್ತಿಯನ್ನ ಪಡೆದಿರುವುದರಿಂದಲೆ ಕಂಬಾರರ ಪ್ರತಿಭೆ ಮತ್ತೆ ಮತ್ತೆ ಅದೇ ಪುರಾಣಕ್ಕೆ ಕೈ ಹಾಕುತ್ತದೆ. ಮೊದಲೆ ಹೇಳಿದಂತೆ ಋಷ್ಯಶೃಂಗ, ಹುಲಿಯ ನೆರಳು ನಾಟಕಗಳಲ್ಲೂ, ಕರಿಮಾಯಿ ಕಾದಂಬರಿಯಲ್ಲಿಯೂ ಇದೇ ಪುರಾಣ ಮತ್ತೂ ಬೇರೆಯದೇ ಆದ ಆಯಾಮಗಳಲ್ಲಿ ವಿಶ್ಲೇಷಣೆಗೆ ಒಳಗಾಗಿದೆ. ವಸಾಹತು ಸಂಸ್ಕೃತಿಯ ಹುಲಿಯ ನೆರಳು ಮನೆ-ಮನಗಳಲ್ಲಿ ಹೊಕ್ಕು ಬೇರುಬಿಗಿದ ಕರುಳುಕಲಕುವ ದ್ವಂದ್ವವನ್ನೆ ಸ್ಥಿರೀಕರಿಸಿರುವ ನೆಲೆಗಳನ್ನು ಈ ನಾಟಕಗಳಲ್ಲಿ ಕಾಣುತ್ತೇವೆ. ಹುಲಿಯ ನೆರಳು ನಾಟಕ ವಸಾಹತುಶಾಹಿಯ ಕ್ರೌರ್ಯವನ್ನು ಪ್ರಧಾನವಾಗಿ ಶೋಧಿಸುತ್ತದೆ.

"ಸಾವಿರದ ನೆರಳು" ಸಂಕಲನದ ಅನೇಕ ಕವನಗಳಲ್ಲಿ 'ನೆರಳು' ಮತ್ತು 'ಕಾಮ' ಮೂಲ ಪ್ರತಿಮೆಗಳಾಗಿ ಮೈ ಪಡೆಯುತ್ತವೆ. ಈ ಸಂಕಲನದ ಶೀರ್ಷಿಕೆಯಾದ 'ಸಾವಿರದ ನೆರಳು' ಒಡ್ಡುವ ಆತಂಕಗಳು ಕಂಬಾರರನ್ನು ನಿರಂತರವಾಗಿ ಕಾಡಿದ ಸೂಚನೆಗಳು ಇಲ್ಲಿನ ಹಲವು ಕವನಗಳಲ್ಲಿ ಎದುರಾಗುತ್ತವೆ. ನೆರಳಿನ ಜೊತೆ ನಡೆಯುವ ಆತ್ಮರತಿ ಮನುಷ್ಯನನ್ನು ಬಲಿತೆಗೆದುಕೊಂಡ ದುರಂತವನ್ನು 'ನೆರಳಿನ ಜೋಡಿ ಹಾದರ ಮಾಡಿ' ಕವಿತೆ ಎದುರಾಗಿಸುತ್ತದೆ. ತನ್ನ ನೆರಳೆ ತನ್ನನ್ನು ಸಾವಿಗೀಡು ಮಾಡುವ ಸ್ಥಿತಿ ಭಯಾನಕವಾದುದು. ಈ ಭಯಾನಕತೆ ಆತ್ಮರತಿಯು ತರುವ ದುರಂತವೂ ಆಗಿದೆ. ಇಂಥ ಆತ್ಮರತಿಗೆ ಒಳಗಾಗಿ 'ಹೋರಿ' ಕವನದ ಉನ್ಮತ್ತ ನಾಯಕ ದುರಂತದ ಕಡೆಗೆ ಹೊರಟಿರುವುದನ್ನು ಕಾಣುತ್ತೇವೆ. ಎಲ್ಲ ಕಡೆಗೂ ರತಿಗೆ ಆಹ್ವಾನವನ್ನು ನೀಡುತ್ತಿದ್ದ ಹೋರಿಯ ನಾಯಕ ಇಲ್ಲಿ ತನ್ನ ನೆರಳನ್ನು ಕಾಮಿಸುವುದರೊಂದಿಗೆ ದುರಂತಕ್ಕೆ ಗುರಿಯಾಗುವ ಕ್ರಿಯೆ ಮಾರ್ಮಿಕವಾದುದು. ತನ್ನ ಮೈಗೆ ಎದುರಾದ ಇನ್ನೊಂದು ನೆರಳು ಜೀವವನ್ನೆ ಹತ್ಯೆಗೈಯುತ್ತದೆ. ಈ ಹತ್ಯೆ ತನಿಖೆಗೂ ಸಿಗದೆ ಹೋಗುತ್ತದೆ. ನೆರಳಿನ ಜೊತೆಗೆ ಹಾದರ ಮಾಡುವುದರೊಂದಿಗೆ ಅವನ ವ್ಯಕ್ತಿತ್ವ ಛಿದ್ರವಾಗುವ ಬಗೆ ಈ ಕವನದಲ್ಲಿ ಮೈ ಪಡೆದಿದೆ. ವಸಾಹತು ಸಂಸ್ಕೃತಿ ಒಡ್ಡುವ ಸಾವು ಇರದ ನೆರಳಿನ ಕ್ರೌರ್ಯವೂ ಹೀಗೆ ಯಾವುದೆ ಶೋಧನೆಗೂ ತನಿಖೆಗೂ ಸಿಗಲಾರದಂತಹದು. ಈ ಮಾದರಿಯ ಕ್ರೌರ್ಯ ನಿಗೂಢವಾಗಿಯೆ ಉಳಿಯುವ ವಿಚಾರ ಇಂಥ ಕವನಗಳಲ್ಲಿದೆ.

'ನೆರಳು' ಮತ್ತು 'ಕಾಮ' ಮೊದಲೆ ಹೇಳಿದಂತೆ ಕಂಬಾರರ ಕಾವ್ಯದಲ್ಲಿ ಉದ್ದಕ್ಕೂ ಹರಳುಗಟ್ಟುತ್ತ, ಪ್ರತಿಮೆಗಳಾಗಿ ಬೆಳೆಯುತ್ತ ಹಲವು ಅರ್ಥಗಳನ್ನು ಧ್ವನಿಸುತ್ತವೆ. ಇಲ್ಲಿ 'ನೆರಳು' ಆಶ್ರಯದ ಹಾಗೂ ಏನ್ನನ್ನೂ ಬೆಳೆಯಗೊಡದ ಸೃಜನವಲ್ಲದ ಸಂಕೇತವಾಗುತ್ತದೆ. 'ಕಾಮ' ಶಕ್ತಿಯ, ಹಾಗೂ ಶಕ್ತದೇಹವನ್ನು ನಿರ್ವೀರ್ಯಗೊಳಿಸುವಂಥದ್ದು. ಡಾ||ಡಿ.ಆರ್. ನಾಗರಾಜ್ ಅವರು ಹೇಳುವಂತೆ, 'ಇಂಥ ದುಸ್ಥಿತಿ ಕಾಮವನ್ನು ಅಪವಿತ್ರ, ಭ್ರಷ್ಟಗೊಳಿಸಿದ್ದರಿಂದ ಏರ್ಪಟ್ಟದ್ದು.'

ಹೊಸ ಸಂಸ್ಕೃತಿಯೊಂದು ದೇಸೀ ಸಂಸ್ಕೃತಿಯ ಮೇಲೆ ನಡೆಸಿದ ಅನೈತಿಕ ದಾಳಿಯಿಂದ ದೇಸೀ ಪರಿಸರ ಬರುಡಾಗುವ ಬಗೆಯನ್ನು ಕಂಬಾರರ ಕಾವ್ಯ ಚಿಂತನೆಗೆ ಗುರಿಪಡಿಸುತ್ತದೆ. ಹಾಗೆ ಚಿಂತನೆಗೆ ಗುರಿಪಡಿಸುವುದರೊಂದಿಗೆ ದೇಸೀ ಸಂಸ್ಕೃತಿಯ ಅಸ್ತಿತ್ವದ ಶೋಧನೆಯನ್ನು ನಡೆಸುತ್ತದೆ. ಅಂಥ ಶೋಧನೆ ಪೂರ್ವ-ಪಶ್ಚಿಮಗಳ ಮುಖಾಮುಖಿ ಹಾಗೂ ನಗರ-ಗ್ರಾಮಗಳ ಸಂಘರ್ಷದ ನೆಲೆಗಳಲ್ಲಿ ಅಭಿವ್ಯಕ್ತವಾಗುವುದು ಕುತೂಹಲಕಾರಿಯಾಗುತ್ತದೆ. ಅಂದರೆ, ಪ್ರಬಲ ಸಂಸ್ಕೃತಿಯೊಂದು ದೇಸೀ ಸಂಸ್ಕೃತಿಗೆ ಮಾರಕವಾಗುವ ಬಗೆಗೆ ಅವರ ಕೃತಿಗಳು ನೆರಳಿನ ಪ್ರತಿಮೆಗಳ ಮುಖೇನ ಎದುರಾಗುತ್ತವೆ. ಕಂಬಾರರ ಸಂವೇದನೆ ಹೊಸ ಸಂಸ್ಕೃತಿಯ ಪ್ರವೇಶವನ್ನು ಅನೈತಿಕ ಸಂಬಂಧವೆಂದೆ ಗ್ರಹಿಸಿದೆ. ಹಾಗೆಯೇ ಒಂದು ಸಂಸ್ಕೃತಿಯ ಅಖಂಡ ಆತ್ಮದಲ್ಲಿ ಬಿರುಕುಂಟು ಮಾಡುವ ಭೂತವೆಂದೂ, ಒಂದು ಸಂಸ್ಕೃತಿಯ ಅನನ್ಯತೆಗಳಿಗೆ ಮೈಲಿಗೆಯನ್ನುಂಟು ಮಾಡುವ ನೆರಳೆಂದೂ ತಿಳಿಯುತ್ತದೆ. ಇಂಥ 'ನೆರಳು' ತರುವ ನೋವು, ಗೊಂದಲಗಳು ಅವರ ಕಾವ್ಯದಲ್ಲಿ ಮುಖ್ಯ ಭಿತ್ತಿಯಾಗಿ ಬೆಳೆಯುತ್ತವೆ. ಅಂಥ ಭಿತ್ತಿ ಎದುರಾಗಿಸುವ ನೋವುಗಳು 'ಏಕಕಾಲಕ್ಕೆ ಇಬ್ಬರಿಗೆ ಮಗ ಆಗುವ' ದುರಂತಗಳ ಪರಂಪರೆಯನ್ನೆ ಪ್ರಕಟಿಸುತ್ತದೆ. ಇಬ್ಬರಿಗೆ ಮಗನಾಗಿ ಬದುಕುವ ಕಷ್ಟಗಳ ಪರಂಪರೆಯು ಆಕ್ರಮಣಶೀಲ ಸಂಸ್ಕೃತಿಯ ಆಗಮನದಿಂದ ಎದುರಾಯಿತೆಂಬುದು ಕಂಬಾರರ ಕೃತಿಗಳ ಹಿಂದಿರುವ ತಾತ್ವಿಕ ಚಿಂತನೆಯಾಗಿದೆ. ಅನೈತಿಕ ಸಂತಾನಗಳಿಂದ ಎದುರಾಗುವ ಆತಂಕಗಳನ್ನು ಕಂಬಾರರ ಕಾವ್ಯ ಆತಂಕದಿಂದಲೆ ವಿಶ್ಲೇಷಿಸುತ್ತದೆ. ಇಂಥ ಆತಂಕಗಳು ಪಶ್ಚಿಮದ ಸಂಸ್ಕೃತಿಯ ಸಹವಾಸದ ಫಲವಾಗಿ ಬದುಕಿನ ಎಲ್ಲ ಮಟ್ಟದ ಸಂದರ್ಭಗಳಲ್ಲಿ ಉಂಟಾದ ಅಧಃಪತನಗಳನ್ನು ಕಂಬಾರರ ಕಾವ್ಯ ವಿಶ್ಲೇಷಣೆಗೆ ಗುರುಪಡಿಸುತ್ತದೆ. ಅಂಥ ವಿಶ್ಲೇಷಣೆ "ಸಾವಿರದ ನೆರಳು", "ಬೆಳ್ಳಿಮೀನು", "ಅಕ್ಕಕ್ಕು ಹಾಡುಗಳೆ" ಕವನ ಸಂಕಲನಗಳಲ್ಲಿಯು ಬೆಳೆಯುತ್ತದೆ.

**೨. ಗ್ರಾಮ - ನಗರಗಳ ಸಂಘರ್ಷ**

ನಗರ ಸಂಸ್ಕೃತಿಯು ಗ್ರಾಮಗಳ ಮೇಲೆ ಎಸಗುವ ಆಕ್ರಮಣ, ಬೀರುವ ಆಕರ್ಷಣೆ ಹಾಗೂ ನಗರ ಎದುರಾಗಿಸುವ ತಲ್ಲಣಗಳಿಂದ ಕಂಗೆಟ್ಟ ಗ್ರಾಮ ಬದುಕಿನ ಛಿದ್ರಾವಸ್ಥೆಗಳನ್ನು ಕಂಬಾರರ ಕಾವ್ಯ ದಾಖಲಿಸುತ್ತದೆ. ಅಂಥ ಛಿದ್ರಾವಸ್ಥೆಗಳಿಂದ ಬಿಡುಗಡೆ ಹೊಂದಲು ಇವರ ಕಾವ್ಯ ಹಲವು ತಂತ್ರಗಳನ್ನು ಹುಡುಕುತ್ತದೆ. ಹಾಗೆಯೇ ಡಾ||ಡಿ.ಆರ್.ನಾಗರಾಜ್ ಅವರು ಹೇಳುವಂತೆ "ವಸಾಹತೀಕರಣದ ಹದ್ದಿನಿಂದ ಕನ್ನಡ ಕಾವ್ಯವನ್ನು ಕಾಪಾಡಲು" ಹಲವು ಪ್ರತಿಮೆ, ರೂಪಕಗಳನ್ನು ಕಂಬಾರರ ಸಂವೇದನೆ ಶೋಧಿಸಿಸುತ್ತದೆ'.

'ಗುಡು ಗುಡು ಗುಮ್ಮ' ಕವನದ ವಸ್ತು ಪಶ್ಚಿಮ ಸಂಸ್ಕೃತಿಯ ಸಂಬಂಧದಿಂದ ಎದುರಾದ ಅಧಃಪತನ. ಕಂಬಾರರೇ ಸೂಚಿಸುವಂತೆ 'ಪಶ್ಚಿಮ, ಅದರ ಸಹವಾಸದ ಫಲದ ವಾಣಿಜ್ಯ ಸಂಸ್ಕೃತಿ, ಅದಕ್ಕೆ ಮನೆ, ಮಠ ಕೆಡವಿ ಮಾಡಿದ ರಸ್ತೆ. ಅದರ ಪರಿಣಾಮ ರಾಜ್ಯ, ವೃತ್ತಿ, ಸಮಾಜ, ಸಂಸ್ಕೃತಿ, ಕುಟುಂಬ ಸಂಬಂಧಗಳ ಅಧಃಪತನ ಇದರ ವಸ್ತು. ತಂದೆ ಮಗುವಿಗೆ ಹೇಳುವ ಅಜ್ಜಿಯ ಕಥೆಯಂತೆ ಬೆಳೆಯುವ ಈ ಕವನ ಪರಕೀಯ ಸಂಸ್ಕೃತಿಯೊಂದು ಸ್ಥಳೀಯ ಸಂಸ್ಕೃತಿಯ ವೈವಿಧ್ಯತೆಗಳನ್ನು; ಅನನ್ಯತೆಗಳನ್ನು ಭಗ್ನಗೊಳಿಸುವ ಕ್ರೌರ್ಯವನ್ನು ಅನೇಕ ಚಿತ್ರಗಳ ಮೂಲಕ ವಿಶ್ಲೇಷಿಸುತ್ತದೆ. ಗುಡು ಗುಡು ಗುಮ್ಮನ ವ್ಯಕ್ತಿತ್ವ ಇಡೀ ವ್ಯವಸ್ಥೆಯನ್ನೇ ನಾಶಗೈಯ್ಯುವುದರ ಕಡೆಗೆ ಹೊರಟದ್ದು. ಪಶ್ಚಿಮ ಸಂಸ್ಕೃತಿಯ ಕೂಸಾದ 'ಗುಡು ಗುಡುಗುಮ್ಮ' ಅಜ್ಜೀ ಕಥೆಯ ರಾಕ್ಷಸನಂತೆ ನೆಲಮುಗಿಲುಗಳಿಗೆ ಏಕವಾಗಿ ಬೆಳೆದು, ಮನೆಯ ಹೊರಗೆ ಮತ್ತು ಒಳಗೂ ಪ್ರವೇಶಿಸುವುದರೊಂದಿಗೆ ಎಲ್ಲವನ್ನೂ ದಮನಗೈದು ದುರಂತಕ್ಕೆ ತಳ್ಳುವ ಕ್ರಿಯೆ ಈ ಕವನದ ಮುಖ್ಯ ಭಿತ್ತಿಯಾಗಿದೆ.

> ಕಿಟಕಿಯ ಗಾಜು ಒಡೆಯುತ್ತಿವೆ, ಮುರಿಯುತ್ತಿವೆ
> ಬಾಗಿಲು, ಗೋಡೆ ಬಿರಿಯುತ್ತಿವೆ ಬರುತ್ತಿದೆ
> ಮನೆಯಲ್ಲೇ ನಮ್ಮ ಸದರಿನಲ್ಲೇ ಗುಮ್ಮ
> ನುಗ್ಗುತ್ತಿದೆ! ಮನೆಯಲ್ಲೇ ಹಾಯುತ್ತಿದೆ
> ಮನೆಯನ್ನೆಲ್ಲ ರಸ್ತೆ ಮಾಡುತ್ತದೆ, ಹೆಮ್ಮೆ ಪಡುತ್ತದೆ.
> * * * * *
> ನಾನು?
> ಕಸದ ಗುಂಡಿಯಲ್ಲಿ ಕಳಕೊಂಡ ವಿಳಾಸದ
> ಚೀಟಿ ಹುಡುಕುತ್ತ
> ಹುಡುಕುತ್ತ
> ಹುಡುಕುತ್ತಾ ಅಲೆದಾಡುತ್ತೇನೆ."

ಈ ಮೇಲಿನ ಉದ್ಧರಣೆಗಳಲ್ಲಿ ಗುಡು ಗುಡು ಗುಮ್ಮನ ದಮನಕಾರೀ ಶಕ್ತಿಯ ಪರಿಣಾಮದ ಚಿತ್ರಗಳನ್ನು ಕಾಣುತ್ತೇವೆ. ಮನೆಯನ್ನೆ ರಸ್ತೆ ಮಾಡುವ, ಮನೆಯವರನ್ನು ಬೀದಿಪಾಲು ಮಾಡುವ ಕ್ರಿಯೆ 'ಗುಡು ಗುಡು ಗಮ್ಮ'ನ ವಿನಾಶಕಾರಿ ಪ್ರವೃತಿಯನ್ನು ಸೂಚಿಸುತ್ತದೆ. ತಾನು ಕಳಕೊಂಡ ವಿಳಾಸವನ್ನು ಕಸದ ಗುಂಡಿಯಲ್ಲಿ ಹುಡುಕುವ, ಹುಡುಕುತ್ತಾ ಅಲೆದಾಡುವ ದುರಂತ ಹೊರಗಿನ ಸಂಸ್ಕೃತಿಯೊಂದು ಉಂಟುಮಾಡಿದ ಕ್ರೌರ್ಯವನ್ನು, ಆತಂಕಕಾರಿ ನೆಲೆಗಳನ್ನು ಪ್ರಕಟಿಸುತ್ತದೆ. ತನ್ನ ಅಸ್ತಿತ್ವವನ್ನೇ ಕಳೆದುಕೊಂಡ ಸ್ಥಿತಿ. ಹಾಗೂ ನಾಗರೀಕತೆಯ ಬೆನ್ನು ಹತ್ತಿದ ಮನುಷ್ಯ ಎದುರಾಗಿಸಿಕೊಂಡ ದುರಂತವೂ ಇದಾಗಿದೆ. ನಗರ ಸಂಸ್ಕೃತಿಯ ಆಗಮನದಿಂದ ಎದುರಾಗುವ ಪಲ್ಲಟಗಳು ಪ್ರಗತಿಯ ನೆಪದಲ್ಲಿ ಗ್ರಾಮ ಸಂಸ್ಕೃತಿಯಲ್ಲಿ ಹರಡುವುದರ ಮೂಲಕ ಅಲ್ಲಿನ ಸಮೃದ್ಧತೆಯ ಛಿದ್ರಾವಸ್ಥೆಗಳಿಗೆ ಕಾರಣವಾಗುವುದರ ಬಗೆಗೆ ಕಂಬಾರರ ಕಾವ್ಯ ತೋರುವ ಪ್ರತಿರೋಧ ಮಾರ್ಮಿಕವಾದುದು. ಡಾ|| ಡಿ.ಆರ್.ನಾಗರಾಜ್ ಅವರ ಈ ಕೆಳಗಿನ ಮಾತುಗಳು ಇಂಥ ಸನ್ನಿವೇಶವನ್ನು ಮತ್ತಷ್ಟು ಸಮರ್ಥವಾಗಿ ದಾಖಲಿಸುತ್ತವೆ.

ಇದು ಎಲ್ಲ ಐಕ್ಯಗಳೂ ಚಿಂದಿ ಚೂರಾಗುವ ಸನ್ನಿವೇಶ. ಯಾವುದೇ ಹಂತದಲ್ಲಿ ಸಂಭ್ರಮ ಅಸಾಧ್ಯವಾಗಿರುವ ಸನ್ನಿವೇಶ. ದೊಡ್ಡ ಲೋಕದ ಒತ್ತಡ, ವೈಷಮ್ಯಗಳು ಚಿಕ್ಕ ಶಯ್ಯಾಗೃಹಕ್ಕೂ ಬಂದು ನುಗ್ಗುವ ಯುಗ ಇದು. ಇಂಥ ದಿಗ್ಭ್ರಮೆಯಿದ್ದೂ ಅದರಾಚೆಗೆ ಹಂಬಲಿಸುವ ಶಕ್ತಿ ಕಂಬಾರರ ಕಾವ್ಯಕ್ಕೆ ಇದೆ ಎಂದೇ ನಾನು ಅದನ್ನು ಗಮನಕೊಟ್ಟು ಓದುತ್ತೇನೆ. ನಗರದ ಗಲ್ಲಿಗಟಾರಗಳಲ್ಲಿ ಕೊಚ್ಚಿ ಹೋಗುತ್ತಿರುವ ಜೀವ ಚೈತನ್ಯವನ್ನು ಹಿಡಿಯಲು ಯತ್ನಿಸುವ ಕವಿ ಕಂಬಾರ[೬].

ಸ್ವಾತಂತ್ರ್ಯಾನಂತರದ ವಸಾಹತುಶಾಹಿ ಸಂಸ್ಕೃತಿಯು ದೇಶೀಯ ನೆಲೆಗಳ ಮೇಲೆ ಎಸಗಿದ ಕ್ರೌರ್ಯಗಳನ್ನು 'ಬೆಳ್ಳಿಮೀನು', 'ಅಕ್ಕಕ್ಕು ಹಾಡುಗಳೇ' ಕವನ ಸಂಕಲನಗಳಲ್ಲಿ ಕಂಬಾರರ ಸಂವೇದನೆ ಧ್ಯಾನಿಸುತ್ತಿರುವ ಸೂಚನೆಗಳು ಗಾಢವಾಗಿ ಮೈಪಡೆದಿವೆ. ವಸಾಹತುಸಂಸ್ಕೃತಿಯ ಪ್ರಭಾವ, ಪರಿಣಾಮಗಳನ್ನು ನಿಖರವಾಗಿ ಇಂತಿಷ್ಟೇ ಎಂದು ಗುರುತಿಸುವುದು ಕಷ್ಟ. ಸ್ವಾತಂತ್ರ್ಯಾನಂತರದ ಬದುಕು ಮತ್ತೂ ಬೇರೆಯದೇ ಆದ ದ್ವಂದ್ವಗಳಿಗೆ ಗುರಿಯಾಗಿದೆ. ಹೀಗಾಗಿ ಗ್ರಾಮೀಣ ಜೀವನದ ಸಮೃದ್ಧತೆಯನ್ನು ವಿಘಟನೆಗೊಳಿಸುವ ನವ ವಸಾಹತುಶಾಹಿ ಸಂಸ್ಕೃತಿಯು ಎದುರಾಗಿಸಿದ ಕ್ರೌರ್ಯಾವಸ್ಥೆಗಳಿಗೆ ಕಂಬಾರರ ಕಾವ್ಯ ಮರುರೂಪಕಗಳನ್ನು ಈ ಸಂಕಲನಗಳಲ್ಲಿ ಶೋಧಿಸಿಕೊಳ್ಳುತ್ತದೆ. ತೃತೀಯ ಜಗತ್ತಿನ ರಾಷ್ಟ್ರಗಳು ಆಧುನಿಕ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಂದ ಆತಂಕಗೊಳ್ಳುತ್ತಲೇ, ಪರ್ಯಾಯ ಅಸ್ತಿತ್ವವೊಂದನ್ನು ಹುಡುಕುವ ಕಡೆಗೆ ಕಂಬಾರರ ಸಂವೇದನೆ ಕ್ರಿಯಾಶೀಲಗೊಂಡಿರುವುದನ್ನು ಈ ಸಂಕಲನಗಳಲ್ಲಿ ಕಾಣುತ್ತೇವೆ. ನಗರ ಸಂಸ್ಕೃತಿ ಗ್ರಾಮದಬದುಕಿಗೆ ಎಸಗುವ ಆಕ್ರಮಣಗಳ ಬಗೆಗಿನ ವಿಷಾದವು ಇಂಥ ಕಾವ್ಯದಲ್ಲಿ ಹರಳುಗಟ್ಟುತ್ತದೆ. 'ದಿಲ್ಲಿಯೆಂಬ ಕ್ಯಾಬರಿ', 'ಇಟ್ಟಿಗೆಯ ಪಟ್ಟಣ', 'ನಾಡು-ಕಾಡು', 'ಸೈನಿಕರ ಕೋವಿಯ ಹಾಡು', 'ಸೈನಿಕ ಸಿಟಿ ಬಗೆಗಿನ ಹಾಡು', 'ಶಿವಾಪುರದ ಹಾಡು', 'ಭಾರತಿ', 'ಕೇಳೆನ್ನ ದೇಶವೆ' ಮೊದಲಾದ ಕವಿತೆಗಳಲ್ಲಿ ನಗರ ಮತ್ತು ಗ್ರಾಮ ಸಂಸ್ಕೃತಿಗಳ ಸಂಘರ್ಷ ಮೈಪಡೆಯುತ್ತದೆ.

ವಸಾಹತು ಸಂಸ್ಕೃತಿಯ ಸಂತತಿಗಳಾದ ನಗರಗಳ ನಿರ್ಮಾಣ, ಅದು ಹೊತ್ತು ತರುವ ಅತಿಭೋಗದ ಆಸೆಗಳು ಗ್ರಾಮ ಸಂಸ್ಕೃತಿಯ ಸಂಭ್ರಮ ಮತ್ತು ಸಮೃದ್ಧತೆಗಳನ್ನು ಕಬಳಿಸುವ ಪ್ರಕ್ರಿಯೆಯ ಬಗೆಗಿನ ವಿಷಾದವು ಈ ಕವಿತೆಗಳಲ್ಲಿ ಮುಖ್ಯವಾಗಿದೆ. ಇಲ್ಲಿ, ಕಳೆದುಹೋದ ಮತ್ತು ಮರೆಯಾಗುತ್ತಿರುವ ಶಿವಾಪುರದ ಸಂಭ್ರಮ-ಸಮೃದ್ಧಿಗಳ ಹುಡುಕಾಟವನ್ನು ಕಂಬಾರರು ನಡೆಸಿದ್ದಾರೆ. ಅಂತೆಯೇ ಮಾಯಾನಗರಗಳ ಅತಿ ಆಸೆಯ ರೋಗದಿಂದ ಶಿವಾಪುರದ ಬದುಕು ಆಘಾತಕ್ಕೆ ಗುರಿಯಾಗುತ್ತಿರುವುದರ ಬಗೆಗೆ ನೋವು, ವಿಷಾದಗಳು ಈ ಕವಿತೆಗಳಲ್ಲಿ ಮುಖ್ಯ ಭಿತ್ತಿಯಾಗಿವೆ. ಇಂಥ ವಿಷಾದಗಳ ನಡುವೆಯೇ ಸಂಭ್ರಮ-ಸಮೃದ್ಧತೆಗಳನ್ನು ಆಕ್ರಮಣಶೀಲ ನೆಲೆಗಳಿಗೆ ಮುಖಾಮುಖಿಯಾಗಿಸುವ ಕ್ರಮ ಕಂಬಾರರ ಕಾವ್ಯದಲ್ಲಿ ತೀವ್ರವಾಗಿದೆ.

ಬದುಕಿನ ಈ ಖುಷಿಗೆ ಕುರುಡಾದ ಮಂದಿಗೆ
ಕಿಲುಬಿದ ಮನಸಿಗೆ ಏನೆನ್ನಲೇ||
ಸೈತಾನನ ಒಕ್ಕಲಾಗಿ ಕೆಟ್ಟಾಸೆಗಳ ಬಿತ್ತಿ
ನರಕಗಳ ಬೆಳೆವವರಿಗೇನೆನ್ನಲೆ||

ಕಷ್ಟ ಸಾವಿರವಿರಲಿ ದುಃಖ ಸಾವಿರವಿರಲಿ
ಈ ಬದುಕು ನನಗಿರಲಿ ಶಿವದೇವನೇ
ಸಾವಿರ ಮುಳ್ಳಿರಲಿ ಆದರು ಅದರಲ್ಲಿ
ಒಂದಾರೆ ಅರಳಿದ ಹೂವಿರಲಿ ಶಿವನೇ[೧೭]

ನಗರವೆಂಬ ಸೈತಾನನ ಆಮಿಷಗಳಿಗೆ ಬಲಿಯಾಗಿ, ಕೆಟ್ಟಾಸೆಗಳಿಂದ ನರಕವನ್ನು ಬೆಳೆಯುವ ಭೀಕರತೆಗಳ ನಡುವೆಯೂ ಬದುಕಿನ ಬಗೆಗೆ ಕಂಬಾರರ ಸಂವೇದನೆ ತಳೆಯುವ ಶ್ರದ್ಧೆ, ಪ್ರೀತಿ ತನ್ಮಯತೆಗಳಿಂದ, ತನ್ನ ಪರಿಸರದ ಮೇಲೆ ಎರಗುವ ಶಕ್ತಿಗಳ ವಿರುದ್ಧ ಸಿಡಿದೇಳುತ್ತದೆ. ಆ ಸಂವೇದನೆ ಹುಡುಕುವ ಶಿವಾಪುರವಾದರೂ ಎಂತಹದೆಂದರೆ:

ಕಾಯ್ದ ಕಂಗಳ ಕೂಲು ಮಾಡುವ
ಹುಲ್ಲು ಎಲ್ಲಿದೆ ಹೇಳಿರಿ.
ತೆರೆಯ ಚಿಮುಕಿಸಿ ಕರಿಯ ಪಾಪವ
ತೊಳೆವ ತೊರೆಯನು ತೋರಿರಿ.

ಅರಳಿ ಕತ್ತಲ ದೂರ ಮಾಡುವ
ಸೂರ್ಯಕಾಂತಿಯ ತೋರಿರಿ.
ಉಗುರು ಬೆಚ್ಚನೆ ಪ್ರೀತಿ ಎಲ್ಲಿದೆ
ಅಲ್ಲಿ ಶಿವಪುರ ಎನ್ನಿರಿ.[೧೮]

ಆಧುನಿಕ ಬದುಕಿನ ತಲ್ಲಣಗಳಿಗೆ ಆಶ್ರಯವನ್ನು ಹುಡುಕುವ ಹಾಗೂ ಅಂಥ ಬದುಕಿನ ಕ್ರೌರ್ಯದಿಂದ ಬಿಡುಗಡೆ ಹೊಂದುವ ಆಶಯಗಳು ಶಿವಾಪುರದ ಕಲ್ಪನೆಯ ಹಿಂದೆ ಕ್ರಿಯಾಶೀಲಗೊಳ್ಳುವುದನ್ನು ಕಾಣುತ್ತೇವೆ. ಇಂಥ ಸಮೃದ್ಧ ಮತ್ತು ಸಂಭ್ರಮಗಳ ಜಗತ್ತಿಗೆ ಎದುರಾಗುವ ಎಲ್ಲ ರೀತಿಯ ಶಕ್ತಿಗಳ ವಿರುದ್ಧ ಕಂಬಾರರ ಕಾವ್ಯ ಪ್ರತಿರೋಧ ಒಡ್ಡುತ್ತಲೇ ಮೈ ಪಡೆಯುತ್ತದೆ. 'ಸಿಟಿಯ ಕಗ್ಗತ್ತಲೆಯಿಂದ ಪಾರಾಗಲು ಯತ್ನಿಸಿದವರ ಹಾಡು' ಕವಿತೆಯಲ್ಲಿ ಆತ್ಮವಿಲ್ಲದ ನಗರಗಳ ಬದುಕಿನಿಂದ ಬಿಡುಗಡೆ ಹೊಂದಬೇಕೆಂಬ ಆಶಯವಿದೆ. ಕೊಳೆ, ಚರಂಡಿ, ಕೊಚ್ಚೆ, ಕತ್ತಲೆಗಳಿಂದ ಮುಕ್ತಿಪಡೆದು, ಬಿಸಿಲು ಬೆಳಗುಗಳನ್ನು ಬೆಳೆವ ಹಸಿರನಾಡನ್ನು ಮುಟ್ಟಬೇಕೆಂಬ ಆಕಾಂಕ್ಷೆಯು ಇಲ್ಲಿ ತೀವ್ರವಾಗಿದೆ. ಇಂಥ ನಗರದ ಉಸಿರುಗಟ್ಟಿಸುವ ವಾತಾವರಣವನ್ನು 'ಸೈನಿಕರ ಸಿಟಿ ಬಗೆಗಿನ ಹಾಡು' ಕವಿತೆ ಇನ್ನೂ ಮಾರ್ಮಿಕವಾಗಿ ಹಿಡಿದಿಡುತ್ತದೆ.

ವಾಹನಗಳ ತುಟಿ ತುಟಿಯಲಿ ತುಳುಕಿದೆ ನವಗೀತ
ತಂಬೆಲರಿನ ತುಂಬಾ ಇದೆ ಪೆಟ್ರೋಲಿನ ನಾತ
ಮಿಲ್ಲಿನ ಹೊಗೆ ದಟ್ಟೈಸಿದೆ ಬಾನ್ನೀಲಿಯ ತುಂಬ
ಸೈರನ್ನಿನ ದನಿ ತುಂಬಿದೆ ಕಿವಿಕಿವಿಗಳ ತುಂಬ
ಲಾಲ್‌ಬಾಗಿನ ತರುಲತೆಗಳ ಮೈಮುಖಗಳ ನೋವು

ಕಪ್ಪಾಗಿವೆ ಕುಂಡದ ಗಿಡಬಳ್ಳಿಯ ಎಲೆ ಹೂವು
ಕೊಳಗೇರಿಯ ಕೊಚ್ಚೆಯಲ್ಲಿ ತೇಲಾಡಿವೆ ಮಕ್ಕಳು
ಆಲದೆಲೆಯ ಮೇಲಾಡುವ ಕ್ಯಾಲೆಂಡರ ಕೃಷ್ಣರು
ಯಾಕಾದರು ಹಾರುತ್ತಿದೆ ಮುಗಿಲಿನಲ್ಲಿ ಹದ್ದು
ಬದುಕಬೇಕೆ? ಮುಚ್ಚುಕದ ಮಾಡಬೇಡ ಸದ್ದು[೧೯]

ಕಂಬಾರರ ಆದರ್ಶ ಜಗತ್ತು ಹಾಗು ಕನಸಿನ ಶಿವಾಪುರಕ್ಕೆ ಸಂಪೂರ್ಣ ವಿರುದ್ಧವಾದ ಪರಿಸರ ಈ ಕವಿತೆಯಲ್ಲಿ ತೆರೆದುಕೊಳ್ಳುತ್ತದೆ.ಇಡೀ ಕವಿತೆಯು ಮಾಲಿನ್ಯಗೊಂಡ ನಗರಗಳ ವಾಸ್ತವ ಚಿತ್ರವನ್ನೆ ಮುಂದಿಡುತ್ತದೆ. ಸಮೃದ್ಧವಲ್ಲದ ನಡುವೆಯೂ ಸಮೃದ್ಧತೆಯನ್ನು ಕಾಣಬೇಕೆಂಬ ಆಶಯದಿಂದ ವಾಸ್ತವ ನಾಗರಿಕಲೋಕದ ಬದುಕನ್ನು ಅಭಿವ್ಯಕ್ತಿಗೆ ಗುರಿಪಡಿಸಿ, ಅದರ ಪ್ರಭಾವ, ಪರಿಣಾಮಗಳನ್ನು ವಿರೋಧಿಸುವುದು ಇಂಥ ಕಾವ್ಯಗಳ ಮುಖ್ಯ ಗುರಿಯಾಗಿದ್ದಂತೆ ಕಂಡುಬರುತ್ತದೆ. 'ಬದುಕಬೇಕೆ? ಮುಚ್ಚುಕದವ ಮಾಡಬೇಡ ಸದ್ದು' ಈ ಮಾತು ನವಸಾಮ್ರಾಜ್ಯಶಾಹಿ ಶಕ್ತಿಗಳು ತರುವ ಅಘಾತಗಳಿಗೆ ಒಡ್ಡಿದ ವ್ಯಾಖ್ಯೆಯಂತೆ ಕಾಣುತ್ತದೆ. ಕಂಬಾರರ ಸಂವೇದನೆ ಸಿಟಿ ಕವನಗಳಲ್ಲಿ ನಾಗರೀಕ ಬದುಕಿನ ವೈರುಧ್ಯಗಳನ್ನು ಮುಖ್ಯವಾಗಿ ವಿಶ್ಲೇಷಿಸತೊಡಗುತ್ತದೆ. ಇಂಥ ವೈರುಧ್ಯಗಳಿಗೆ ಕಾರಣವಾದ ಭಾರತದ ಪರಿಸರವನ್ನು ಟಿ.ಪಿ.ಅಶೋಕರ ಈ ಕೆಳಗಿನ ಮಾತುಗಳು ಸಮರ್ಥವಾಗಿ ಹಿಡಿದಿಡುತ್ತವೆ.

> ಕಂಬಾರರ ಕಾವ್ಯ ಆಧುನಿಕ ಜಗತ್ತಿಗೊಂದು ಪ್ರಕ್ರಿಯೆಯಾಗಿ, ಶಿವಪುರದ ಮುಗ್ಧ ಸುಂದರಲೋಕದ ಆರಾಧನೆಯಾಗಿ ಮೂಡಿಬರುತ್ತದಷ್ಟೆ. ಈ ಶಿವಪುರ ನಿಸ್ಸಂದೇಹವಾಗಿ ತೃತೀಯ ಜಗತ್ತಿನ ರೂಪಕ. ......ಶಿವಪುರದ ಸ್ಥಿತ್ಯಂತರಗಳು ತೃತೀಯ ಜಗತ್ತಿನ ಒಟ್ಟಾರೆ ಸ್ಥಿತ್ಯಂತರಗಳೂ ಹೌದು. ವಸಾಹತುಶಾಹೀ ಆಳ್ವಿಕೆಯ ಫಲವಾಗಿ ಪ್ರವೇಶವಾದ ಆಧುನಿಕ ಮೌಲ್ಯ ವ್ಯವಸ್ಥೆ ತೃತೀಯ ಜಗತ್ತಿಗೆ ಮಾಡಿದ ಆಘಾತ ಮತ್ತು ಈ ಆಘಾತದ ಸ್ಥಿತಿಯಲ್ಲಿ ತೃತೀಯ ಜಗತ್ತು ತನ್ನ ಸಾಂಸ್ಕೃತಿಕ ಅಸ್ತಿತ್ವಕ್ಕಾಗಿ ನಡೆಸುತ್ತಿರುವ ಹುಡುಕಾಟದ ವಿನ್ಯಾಸಗಳೇ ಕಂಬಾರರ ಕೃತಿಗಳನ್ನು ಕಟ್ಟಿವೆ.[೨೦]

ವಸಾಹತುಶಾಹಿ ಸಂಸ್ಕೃತಿಯ ಆಕ್ರಮಣಶೀಲ ನೆಲೆಗಳಿಂದ ಪ್ರಾದೇಶಿಕ ಗ್ರಾಮೀಣ ಸಂಸ್ಕೃತಿಗಳು ಅವನತಿಗೊಳ್ಳುತ್ತಿರುವುದರ ಬಗೆಗೆ, ಹಾಗೂ ನಾಗರಿಕ ಬದುಕು ನರಕವಾಗುತ್ತಿರುವುದರ ಬಗೆಗಿನ ವಿಷಾದಗಳು ಕಂಬಾರರ ಕಾವ್ಯದ ಇವತ್ತಿನ ಬಹುಮುಖ್ಯ ಕಾಳಜಿಗಳಾಗಿವೆ. ಇಂಥ ಅವನತಿಗಳಿಗೆ ನೆಲೆಯಾಗುತ್ತಿರುವ 'ಭಾರತಿ'ಯನ್ನು ಕುರಿತ ಕಟುವಿಮರ್ಶೆಯು ಇವರ ಕಾವ್ಯದಲ್ಲಿ ಮುಖ್ಯ ಆಯಾಮವಾಗಿ ಮೈ ಪಡೆಯುತ್ತದೆ. ಮೊದಲೇ ಹೇಳಿದಂತೆ, ಸಿಟಿಯೆಂಬ ಸೈತಾನನ ಬೆನ್ನು ಹತ್ತಿದ ಮನುಷ್ಯ ತಲುಪಿರುವ ದುರಂತಗಳ ಬಗೆಗೆ ವಿಷಾದವನ್ನು ಸೂಚಿಸುತ್ತಲೇ, ಅಂಥ ವಿಷಮತೆಗಳ ನಡುವೆಯೂ ಸಂಭ್ರಮ-ಜೀವನೋತ್ಸಾಹಗಳನ್ನು ಕಾಣಬೇಕೆಂಬ ಅಭೀಪ್ಸೆ ಕಂಬಾರರ ಸಂವೇದನೆಯ ಶೋಧನೆಯಾಗಿದೆ. ಅಂಥ ಶೋಧ ಅವರ ಕನಸಿನ, ಆದರ್ಶ ಶಿವಾಪುರ ಲೋಕದ ತನ್ಮಯತೆ-ಸಂಭ್ರಮಗಳಲ್ಲಿ ಮೈ ಪಡೆಯುತ್ತದೆ. ಹೀಗೆ ಹರಳುಗಟ್ಟುವ ಸಂಭ್ರಮ-ಜೀವನೋತ್ಸಾಹಗಳ ಹುಡುಕಾಟಗಳೇ ಆಕ್ರಮಣಶಾಲಿ ನೆಲೆಗಳಿಗೆ ಮುಖಾಮುಖಿಯಾಗುವುದು ಅವರ ಕಾವ್ಯದ ಬಹುಮುಖ್ಯ ಆಯಾಮವಾಗಿದೆ.

## ೨. ಪುರೋಹಿತ-ಸಾಮ್ರಾಜ್ಯಶಾಹಿಯ 'ಸಾವಿರದ ನೆರಳು'

ಸ್ಥಳೀಯ ಪುರೋಹಿತ ವ್ಯವಸ್ಥೆ ಮತ್ತು ಕಮ್ಯೂನಿಸ್ಟ್ ವಿರೋಧಿ ನಿಲುವುಗಳು ಕಂಬಾರರ 'ತಕರಾರಿನವರು' ಮತ್ತು 'ಸಾವಿರದ ನೆರಳು' ಸಂಕಲನಗಳ ಹಲವು ಕವನಗಳಲ್ಲಿ ಮುಖ್ಯ ಭಿತ್ತಿಯಾಗಿ ಮೈ ಪಡೆಯುತ್ತವೆ. ಒಳ ಮತ್ತು ಹೊರಗಿನ ಆಕ್ರಮಣಶೀಲ ಶಕ್ತಿಗಳ ಬಗೆಗೆ ಕಂಬಾರರು ನಿರಂತರವಾಗಿ ತಕರಾರುಗಳನ್ನ ಒಡ್ಡುತ್ತಲೇ ಮುನ್ನಡೆಯುವುದನ್ನು 'ಗಂಗಾಮಾಯಿ', 'ಮಾವೊತ್ಸೆ ತುಂಗನಿಗೆ', 'ಹಳದಿ ಆಶೀರ್ವಾದ' ಕವಿತೆಗಳಲ್ಲಿ ಕಾಣುತ್ತೇವೆ. 'ಮಾವೊತ್ಸೆ ತುಂಗನಿಗೆ' ಕವಿತೆಯಲ್ಲಿ ಭಾರತಾಂಬೆಯ ಚಿತ್ರವನ್ನೆ ವ್ಯಂಗ್ಯಕ್ಕೆ ಗುರಿಪಡಿಸುತ್ತ, ಮಾವೋನ ಕಮ್ಯೂನಿಸ್ಟ್ ಧೋರಣೆಗಳ ಬಗೆಗೆ ಕಂಬಾರರ ಚಿಂತನೆ ಹೀಗೆ ಅಭಿವ್ಯಕ್ತಗೊಂಡಿದೆ.

ನಮ್ಮ ಭಾರತಾಂಬಿ, ರೂಪಾಯಗಲ ಕುಂಕುಮದಾಕಿ
ಕೈತುಂಬ ಹಸಿರುಬಳೆ ಕುಪ್ಪಸದಾಕಿ,
ಒಬ್ಬರ ಕೈಬೆರಳಿಗೆ ಗುರಿಯಾಗದೆ ಮಾರ್ಯಾದೆಯೊಳಗೆ ಬಾಳಿದಾಕಿ
ಮುಖದಗಲ ಪುರಾಣಗರತಿಯ ಸೆರಗು ತೂಗಿ ಕಣ್ಣು ಕಾಣಿಸದಾಕಿ[೨೧]

ಈ ಮೇಲಿನ ಸಾಲುಗಳಲ್ಲಿ ಭಾರತಾಂಬೆಯ ಭಾವುಕಚಿತ್ರವನ್ನು ಪ್ರಕಟಿಸುತ್ತಲೆ, ಅವಳ ನಂಬಿಕೆ, ಕಲ್ಪನೆಗಳನ್ನು ವಿಡಂಬನೆಗೆ ಗುರಿಪಡಿಸಲಾಗಿದೆ. ಹಾಗೆಯೇ ಹೊರಗಿನ ಅಥವಾ ನೆರೆರಾಷ್ಟ್ರಗಳ ದಾಳಿಗೆ ಪ್ರತಿರೋಧವನ್ನು ವ್ಯಕ್ತಪಡಿಸಲಾಗಿದೆ. ದೇಶವನ್ನು ಆಕ್ರಮಿಸ ಹೊರಟ ಮಾವೊತ್ಸೆತುಂಗನ ಭಂಡತನಕ್ಕೆ, ಬೆಂಕಿಯ ಖಾಸಪುತ್ರಿಯಾದ ಭಾರತಾಂಬೆಯ ಮೇಲೆ ಕಣ್ಣು ಹಾಕಿದೆಯೋ ಕೀಚಕನ ಗತಿಯೇ ನಿನಗೆಂದು ಕಟ್ಟೆಚ್ಚರವನ್ನು ಪುರಾಣಪ್ರತಿಮೆಯ ಮೂಲಕ ಮುಖಾಮುಖಿಯಾಗಿಸುವ ನೆಲೆ ಈ ಕವನದ ಹಿಂದಿದೆ.

ನಿನ್ನ ನಾಮದ ಬಲದಿಂದಲೇ ತಗ್ಗು ದಿನ್ನೆಗಳ ಪಿಡಬ್ಲ್ಯುಡಿ ಮಾಡಿ
ಹಾಲು ಹರಿಸಿ ಸಮನಾಗಿಸೇವೆಂಬ ನಂಬಿಕೆಯವರು
ಸಮನಾದರೆ ಬರುವ ಮಳೆ ಬಂದಾವು ಹೆಂಗ?
ಹಸಿರು ಬೆಳೆದಾವು ಹೆಂಗ?
ಸರ್ಕಾರಿ ಕೋಗಿಲೆ ಹಾಡ್ಯಾವು ಹೆಂಗ?
ಈ ಹೆಂಗದ ಹಂಗಿರಲಯ್ಯ-
ಛತ್ತೀಸಕೋಟಿ ದೇವು ತಿಣುಕಿ ಬಾರದ ಬಲ ನಿನ್ನ
ನಾಮಕ್ಕಿದೆಯೇ?..........
.......ಮಿಸಳಬಾಜಿ
ಈಗಾದರು ತಿಳಿಯಿತಿಲ್ಲೋ ಏ,
ಹಳಸಿದ ಮಿಸಳಿಗೆ ಮೂಗಮುರಿಯುವ ಚೆದುರಾ
ನನ್ನ ಹೆಸರಲ್ಲಿರುವ ನಿನ್ನ
ಹೆಸರಿನಕ್ಷರ ಗುರುತಿಸದ ನಿರಕ್ಷರಾ[೨೨]

ಮಾವೋನ ಕಮ್ಯೂನಿಸ್ಟ್ ಧೋರಣೆಗಳು ಮತ್ತು ಆ ಧೋರಣೆಗಳ ಅನುಕರಣೆಯ ಬಗೆಗಿನ ವಿಡಂಬನೆ ಈ ಮೇಲಿನ ಸಾಲುಗಳಲ್ಲಿ ತೀವ್ರವಾಗಿದೆ. ಛತ್ತೀಸಕೋಟಿ ದೇವರುಗಳ ಸತತ ಪ್ರಯತ್ನದಿಂದಲೂ ಸರಿಪಡಿಸಲಾಗದ ಇಲ್ಲಿನ ಸಾಮಾಜಿಕ ಅಸಮತೋಲನ, ಕೇವಲ ತನ್ನ ನಾಮದ ಬಲದಿಂದ ನೆರವೇರುತ್ತದೆಂಬ ವಾದ ಹುಂಬತನದ್ದೆಂದು ಕಂಬಾರರು ಗೇಲಿ ಮಾಡುತ್ತಾರೆ. 'ಏಕಕ್ಕೆ ಅನೇಕ ಅನೇಕಕ್ಕೆ ಏಕ' ಎಂಬಂತೆ ವೈವಿಧ್ಯತೆಯಲ್ಲೂ ಭಾವೈಕ್ಯವನ್ನು ಸಾಧಿಸಿರುವ ಈ ರಾಷ್ಟ್ರಕ್ಕೆ ಅವನ ಧೋರಣೆಗಳು ಸರಿಹೊಂದಲಾರವೆಂಬ ಪ್ರತಿರೋಧವನ್ನು ಒಡ್ಡುತ್ತದೆ.

ಭಾರತದ ಮೇಲಿನ ಮಾವೋನ ಅಘೋಷಿತ ಯುದ್ಧದ ಧೋರಣೆಗಳನ್ನು ಕವನದ ನಾಲ್ಕನೆಯ ಭಾಗದಲ್ಲಿ ಕಾಣುತ್ತೇವೆ. ಯುದ್ಧವನ್ನು ಘೋಷಿಸದೆ ದೇಶದ ಮೇಲೆ ಆಕ್ರಮಣ ಮಾಡಿದ ಮಾವೋನ ಹೇಡಿತನವನ್ನು ಇಲ್ಲಿ ಪ್ರಶ್ನಿಸಲಾಗಿದೆ. 'ಕಲಿಕಾಲ, ಅಜ್ಞಾತವಾಸದ ಅವಧಿ'ಎನ್ನುವಲ್ಲಿ, ಈ ಕವಿತೆ ಭಾರತದ ಆಗಿನ ರಾಜಕೀಯ ವ್ಯವಸ್ಥೆಯನ್ನು ಪಾಂಡವರ ಅಜ್ಞಾತವಾಸದ ಪುರಾಣಪ್ರತಿಮೆಯೊಂದಿಗೆ ಮೈತೆರೆದುಕೊಳ್ಳುತ್ತದೆ. ಲಂಕೇಶರು ಹೇಳುವಂತೆ, 'ಈ ದೇಶವನ್ನು ಗೆದ್ದು ಮಾನಗೆಡಿಸಿದ್ದರ ಇತಿಹಾಸವನ್ನು ಸೂಚಿಸುತ್ತ ಈ ದೇಶದ ಬಗೆಗಿನ ಭಾವೋದ್ವೇಗಗಳ ಗ್ರಹಿಕೆಯನ್ನು ಕೂಡ ಒಟ್ಟಿಗೇ ಕೊಡುತ್ತ ಹೋಗಿ ದಟ್ಟತನವನ್ನು ಸಾಧಿಸದೆ ಈ ರಾಷ್ಟ್ರ ಕುರಿತ ಕಾವ್ಯಾತ್ಮಕ ವಿಮರ್ಶೆಕೊಡುವುದು ಈ ಪದ್ಯದ ಸಾಧನೆ[೨೨]' ಈ ಬಗೆಯ ಮಾರ್ಕ್ಸ್‌ವಾದಿ ಧೋರಣೆಯ, ದೇಶೀಯ ಅನನ್ಯತೆಯ ವಿಮರ್ಶೆ, ವಿಶ್ಲೇಷಣೆ 'ಮರತೇನಂದರ ಮರೆಯಲಿ ಹೆಂಗಾ', 'ಹಳದಿ ಆಶೀರ್ವಾದ' ಕವನಗಳಲ್ಲಿಯೂ ಮುಂದುವರೆಯುತ್ತದೆ.

'ಮರತೇನಂದರ ಮರೆಯಲಿ ಹೆಂಗಾ' ಕವಿತೆ ಮಾವೋನ ಮಹತ್ವಾಕಾಂಕ್ಷೆಯ 'ನೆಗೆತ' ಅಥವಾ 'ಸಿದ್ಧಿ'ಯನ್ನು ಮತ್ತು ಅವನ ಅವನತಿಯನ್ನು ಒಮ್ಮೆಗೆ ಸೂಚಿಸುತ್ತದೆ. ಎಲ್ಲವನ್ನೂ ಅನುಮಾನಿಸುವ, ಎಲ್ಲೆಲ್ಲೂ ಹೊಸದನ್ನೆ ಕಾಣಬೇಕೆನ್ನುವ, ಶೂನ್ಯಕ್ಕೂ ಆಕಾರವನ್ನು ಕೊಡಬೇಕೆನ್ನುವ, ಬಯಲಿಗೆ ಗೋಡೆ ಕಟ್ಟಲು ಬೇಕಾದ ಬೇರೊಬ್ಬ ಸೂರ್ಯನನ್ನು ತರುತ್ತೇನೆನ್ನುವ ಮಹತ್ವಾಕಾಂಕ್ಷೆಯುಳ್ಳ ಮಾವೋನಂಥ ನಾಯಕನನ್ನು ಮರೆಯುವುದು ಹೇಗೆಂಬ ವಿಷಾದ ಕವನದ ಉದ್ದಕ್ಕೂ ಹರಳುಗಟ್ಟಿದೆ. ಬೇರೊಬ್ಬ ಸೂರ್ಯನ ತರುತೇನೆಂದ ಮಾವೊ ಸ್ವಯಂ ಸೂರ್ಯನಾಗಿ ಸರ್ವಾಧಿಕಾರಿಯಾಗಿ ಮೆರೆದ ಕ್ರೌರ್ಯವನ್ನು ಇಲ್ಲಿ ಕಂಬಾರರ ಸಂವೇದನೆ ವಿಶ್ಲೇಷಣೆಗೆ ಗುರಿಪಡಿಸಿದೆ. 'ಸ್ವಯಂ ಸೂರ್ಯ ನಾ' ಎನ್ನುವ ಹುಂಬತನವನ್ನು ಇಲ್ಲಿ ಗೇಲಿ ಮಾಡಲಾಗಿದೆ. ಹಲವು ಕುದುರೆಗಳನ್ನೇರಿ ನಿಯಂತ್ರಣ ತಪ್ಪಿದ ಮಾವೋನ ಒಟ್ಟು ಹೋರಾಟದ ಬಗೆಗಿನ ವ್ಯಂಗ್ಯವೂ ಇಲ್ಲಿ ಮೈಪಡೆಯುತ್ತದೆ.

ಬೆಂಕಿ ಹಚ್ಚಿದಿ ಬೇಲ್ಯಾಗ ನಿಂತಿ
ಸಿದ್ಧ ಪ್ರಸಿದ್ಧರ ಗುದ್ದ ಹೊಗಿಸಿದಿ
ಹಂಗ ಬಿಟ್ಟ ಹಂಗಾಮದ ಬೆದಿಗಿ
ಕೈಯ ಬೀಸಿ ಕೈಲಾಸವ ಕರದಿ
ಹಳದಿ ಬಿತ್ತಿದಿ ಹಳದಿಯ ಬೆಳದಿ
ಮುಳ್ಳ ಬೇಲಿಗೂ ಹೂವಿನ ಹಳದಿ
ಬಣ್ಣದ ಹೆಸರು ಬದಲು ಮಾಡಿದಿ

ಕಣ್ಣ ಕಾಮಾಲೆ ತಿಳಿಯದೆ ಹೋದಿ|
ಮರತೇನಂದರ ಮರೆಯಲಿ ಹೆಂಗಾ||[೨೪]

'ಊರು ಸುಟ್ಟರೂ ಹನುಮಪ್ಪ ಹೊರಗೆ' ಎಂಬ ಗಾದೆಯಂತಿರುವ ಮಾವೋನ ಯುದ್ಧನೀತಿಗಳನ್ನು ಕಂಬಾರರ ಸಂವೇದನೆ ಈ ಮೇಲಿನ ಭಾಗದಲ್ಲಿ ವಿಶ್ಲೇಷಣೆಗೆ ಗುರಿಯಾಗಿಸಿದೆ. ಇಡೀ ರಾಷ್ಟ್ರವನ್ನು ಕ್ರಾಂತಿಯ ಕಿಚ್ಚಿನ ಅಮಲಿಗೆ ನೂಕಿದ ಸರ್ವಾಧಿಕಾರಿ ಧೋರಣೆಯನ್ನೆ 'ಬೆಂಕಿ ಹಚ್ಚಿದಿ ಬೇಲ್ಯಾಗ ನಿಂತಿ' ಚಿತ್ರ ಮಾರ್ಮಿಕವಾಗಿ ಧ್ವನಿಸುತ್ತದೆ. 'ಹಂಗ ಬಿಟ್ಟ ಹಂಗಾಮದ ಬೆದಿಗಿ' ಎಂಬ ಸಾಲು ಅಕಾಲಿಕ ಸೃಷ್ಟಿಯ ಮಾವೋನ ಧೋರಣೆಯನ್ನು ವಿಡಂಬಿಸುತ್ತದೆ. 'ಗೋಬೆಲ್ಸ' ಮಾದರಿಯ ಸರ್ವಾಧಿಕಾರೀ ಮನೋಧರ್ಮದ ನೆಲೆಗಳನ್ನು, ಮಾರ್ಕ್ಸ್‌ವಾದಿಯ ಕಾಮಾಲೆ ರೋಗದ ದೃಷ್ಟಿಕೋನವನ್ನು ಈ ಕವಿತಾ ಭಾಗ ದಾಖಲಿಸುತ್ತದೆ.ಎಲ್ಲವನ್ನೂ ಹಳದಿ ಎಂದು ಒಪ್ಪಿಸುವ, ನಂಬಿಸುವ, ಆಜ್ಞಾಪಿಸುವ ಮಾವೊ ತನ್ನ ಕಣ್ಣ ಕಾಮಾಲೆಯನ್ನು ಅರಿಯದೆ ಹೋದ ವಾಸ್ತವ ದುರಂತವನ್ನು ಇಲ್ಲಿ ಪ್ರಶ್ನಿಸಲಾಗಿದೆ. ಈ ಬಗೆಯಲ್ಲಿ ಮಾವೋನ ದುಷ್ಟತನ ಮತ್ತು ದುರಂತಗಳನ್ನು ಈ ಕವಿತೆ ವಿಶ್ಲೇಷಿಸುತ್ತಲೇ ಅವನ ಚಾರಿತ್ರಿಕ ಔನ್ನತ್ಯ ಹಾಗೂ ಸಾಧನೆಗಳನ್ನು ವರ್ಣಿಸುತ್ತದೆ. ಮಾವೋನ ದ್ವಂದ್ವಾತ್ಮಕ ಧೋರಣೆಗಳೆ ಈ ಕವಿತೆಯ ಮುಖ್ಯ ಆಯಾಮವಾಗಿ ಮೈ ಪಡೆಯುತ್ತವೆ. ಇದೇ ರೀತಿ 'ಹಳದಿ ಆಶೀರ್ವಾದ' ಕವಿತೆಯಲ್ಲಿಯೂ 'ಕಮ್ಯೂನಿಸಂ'ಅನ್ನು, ಅದರ ಆಕ್ರಮಣಶೀಲ ನೆಲೆಗಳನ್ನು ಶೋಧಿಸಲಾಗಿದೆ. ಮಾರ್ಕ್ಸ್‌ವಾದದ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಸರ್ವಾಧಿಕಾರಿಗಳಾಗಿ ಮೆರೆದ ಮಾವೋನಂಥ ನಾಯಕರ ಆಡಳಿತ ಕ್ರಮಗಳನ್ನು ಇಲ್ಲೂ ಪ್ರಶ್ನಿಸಲಾಗಿದೆ. ಮಾವೋನ ಆಶೀರ್ವಾದಕ್ಕಾಗಿ ಹೊರಟ ನಿರೂಪಕನ ವರದಿಯಂತೆ ಬೆಳೆಯುತ್ತಾ ಹೋಗುವ 'ಹಳದಿ ಆಶೀರ್ವಾದ' ಕವಿತೆ ಮಾರ್ಕ್ಸ್-ಮಾವೋವಾದದ ಕ್ರೌರ್ಯವನ್ನು ಹಲವು ಚಿತ್ರಗಳಲ್ಲಿ ಎದುರಾಗಿಸುವುದರ ಮೂಲಕ ವ್ಯಂಗ್ಯಕ್ಕೆ ಗುರಿಪಡಿಸಿದೆ. ಈ ಕವಿತೆ ಕುವೆಂಪು ಅವರ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವನವನ್ನು ಮತ್ತೆ ಮತ್ತೆ ನೆನಪಿಸುತ್ತದೆ. ಕುವೆಂಪು ಸಂವೇದನೆ ಸೋವಿಯಟ್ ವೈಷ್ಣವರ ಮಾರ್ಕ್ಸ್-ಲೆನಿನ್ ವಾದಿ ನಿಲುವುಗಳನ್ನು ವಿಡಂಬಿಸಿದರೆ, ಕಂಬಾರರ ಸಂವೇದನೆ ಚೀನಾದ ಹಳದಿ ವೈಷ್ಣವ ಮಾವೋವಾದಿ ನಿಲುವುಗಳನ್ನು ವಿಡಂಬಿಸುತ್ತದೆ.

ತಲೆ ತುರಿಸಿ ಕಾಲಿಂದ ನೆಲ ಗೀಚಿ ಕೆಮ್ಮಿದೆನು
ಮೈಯೆಲ್ಲ ಕೈಯಾಗಿ ಮುಗಿದು ನಿಂತೆ.
ಏನ ಏವಚವೇದ ಗಾಂಧಿ ಸಂಸ್ಕೃತಿ ಅಂತ
ಭಾರತದ ಹರಿಕಥೆಯ ಹಾಡಿಬಿಟ್ಟೆ.[೨೫]

ದೇಶೀಯ ಚಿಂತನೆಗಳು ಪರಕೀಯ ಸಿದ್ಧಾಂತಗಳೆದುರು ಅಣಕಕ್ಕೆ ಗುರಿಯಾದ ಸ್ಥಿತಿಗತಿಗಳನ್ನು ಮೇಲಿನ ಸಾಲುಗಳು ಸೂಚಿಸುತ್ತವೆ. ದೇಶೀಯ ಚಿಂತನೆಗಳಿಗೆ ಒದಗಿದ ದೀನಾವಸ್ಥೆಗಳನ್ನು ಕಂಬಾರರ ಸಂವೇದನೆ ಇಲ್ಲಿ ದಾಖಲಿಸುತ್ತದೆ.

ಪಾರಿವಾಳದ ಮೈಯ ತಟ್ಟಿ ನಕ್ಕರು ಸ್ವಾಮಿ
ಹಿಕ್ಕೆ ಹಾಕಿತು ಒಂದು ಎರಡು ಮೂರು.

ಇತ್ತ ಎಸೆದರು, ಸ್ವಾಮಿ ಹೃಷ್ಕೆ ಹಸಾದವೆಂ-
ದುಡಿಯೊಡ್ಡಿ ಹಿಡಕೊಂಡೆ; ಹಿಕ್ಕೆಯೂ ಹಳದಿ![೨೬]
- - - - - - - - - - - - - - - - -
ಮೊಟ್ಟೆಯಿಂದುದ್ಭವಿಸಿದುದು ಕೋಗಿಲೆಯ ಕಂಡನಲ್ಲ:
(ಸಾಮ್ಯವಾದದ ಮಹಿಮೆ! ಮೇಣದರ ಬೋಧೆ!
ಸಂತಾನ ಪರಿಣಾಮವನು ಕಂಡು ಬೆರಗಾಗಿ ಹೋದೆ!)
ಮೊಟ್ಟೆಯಿಂದ್ಯೆ ತಂದುದೇನು? ಪಿಕಶಿಶುವಲ್ಲ!-
ಮೂಡಿಬಂದೆನ್ನ ಹಿಡಿದನು ಸೋವಿಯಟ್ಟೊಬ್ಬ ಗೂಢಚಾರ!
ಕೋಗಿಲೆಯ ಮೊಟ್ಟೆಯೊಳಗೂ ಕೂಡ ಸಾಮ್ಯವಾದ ಪ್ರಚಾರ![೨೭]

'ಕಮ್ಯೂನಿಸಂ' ಅನ್ನು ಪ್ರಪಂಚದಾದ್ಯಂತ ಬಲಗೊಳಿಸಬೇಕೆಂಬ ಧೋರಣೆಗಳನ್ನೂ ಕಮ್ಯೂನಿಸಂನ ಪ್ರಬಲ ಪ್ರಚಾರ ಮಾಧ್ಯಮಗಳನ್ನೂ ದೇಶೀಯರು ಅನ್ಯದೇಶೀಯ ಕಮ್ಯೂನಿಸಂ ಸಿದ್ಧಾಂತಗಳಿಗೆ ಮೊರೆ ಹೋದ ಅವಸ್ಥೆಗಳನ್ನೂ, ಕಮ್ಯೂನಿಸಂನ ಕ್ರೌರ್ಯವನ್ನೂ ಈ ಕವಿಗಳಿಬ್ಬರ ಈ ಮೇಲಿನ ಪದ್ಯಗಳು ಮಾರ್ಮಿಕವಾಗಿ ವಿಡಂಬಿಸುತ್ತವೆ. ಕಂಬಾರರ ಮತ್ತು ಕುವೆಂಪು ಅವರ ಸಂವೇದನೆ ಇಂಥ ಕವಿತೆಗಳಲ್ಲಿ ಸಾಮ್ಯವಾದವು ವಿರೂಪಗೊಂಡು ಸರ್ವಾಧಿಕಾರವಾದವಾಗಿ ಮೈಪಡೆಯುವ ನೆಲೆಗಳನ್ನು ವಿಡಂಬಿಸುವುದರೊಂದಿಗೆ, ಇಂಥ ಆಕ್ರಮಣಕಾರಿ ನೆಲೆಗಳಿಗೆ ಪ್ರತಿರೋಧವನ್ನು ಒಡ್ಡುತ್ತವೆ. ಇಂಥ ಕವಿತೆಗಳಲ್ಲಿ ಪರಕೀಯ ಆಕ್ರಮಣಶೀಲ ನೆಲೆಗಳ ಜಡಾವಸ್ಥೆಗಳನ್ನು ಕುರಿತ ವಿಶ್ಲೇಷಣೆಯಿದ್ದರೆ, 'ಗಂಗಾಮಾಯಿ' ಕವಿತೆ ಸ್ಥಳೀಯ ಸಾಂಪ್ರದಾಯಿಕ ಸಂಸ್ಕೃತಿಗಳ ಜಡಾವಸ್ಥೆಗಳನ್ನು ವಿಡಂಬಿಸುತ್ತದೆ.

**೪. ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ಕಲುಷಿತಗೊಂಡ ಸ್ಥಿತಿ**

'ಗಂಗಾಮಾಯಿ' ಊರ ಕೆರೆಯ ಹೆಸರು. 'ಕೆರೆ', ಈ ಪ್ರತಿಮೆಯೇ ಜಡಾವಸ್ಥೆಗಳನ್ನು ಧ್ವನಿಸುವಂಥದ್ದು. ಇದು ಹರಿಯಬೇಕಾದ ನೀರು, ಕೆರೆಯಾಗಿ ಸ್ಥಗಿತಗೊಂಡ ಸ್ಥಿತಿಯನ್ನು ಸಂಕೇತಿಸುತ್ತದೆ. ಕವನದ ಮೊದಲಭಾಗ 'ಗಂಗಾಮಾಯಿ' ಕೆರೆಯ ಬಹುಮುಖತೆಯ ನೆಲೆಯನ್ನು ಎದುರಾಗಿಸುತ್ತದೆ. ಜೀವಂತಿಕೆಯನ್ನು ಕಳೆದುಕೊಂಡ ನಮ್ಮ ಪರಂಪರೆ, ವಿಕೃತಿಗಳಿಗೆ ಆಶ್ರಯವಾದದ್ದನ್ನು ಕೆರೆ ಪ್ರತಿಮೆ ಪ್ರಕಟಿಸುತ್ತದೆ. ಪಾಪಗಳನ್ನು ತೊಳೆಯುವ ಗಂಗೆ ಹರಿಯಲಾಗದೆ ಮಡುಗೊಂಡು ಪಾಪಗಳ ಆಗರವಾದ ಸ್ಥಿತಿಯನ್ನು ಈ ಕವಿತೆ ಕಟ್ಟಿಕೊಡುತ್ತದೆ. ಗಂಗೆಯ ಒಡಲಿನಲ್ಲಿ ನಡೆಯುವ ದೈನಂದಿನ ಕ್ರಿಯೆಗಳು, ಅನ್ಯಾಯಗಳು, ಪಾಪಕರ ಘಟನೆಗಳಿಂದ, ಕೃತ್ಯಗಳಿಂದ ಗಂಗೆಯೂ ಮಲಿನಗೊಂಡ ಸ್ಥಿತಿಯನ್ನು ಪ್ರಕಟಿಸುತ್ತ, ಸ್ಥಳೀಯ ಸಂಸ್ಕೃತಿಯ ಮಲಿನಾವಸ್ಥೆಗಳನ್ನು ಎದುರಾಗಿಸುವುದು 'ಗಂಗಾಮಾಯಿ' ಕವಿತೆಯ ಅನನ್ಯತೆಯಾಗಿದೆ. ಎಲ್ಲ ಬಗೆಯ ಕೊಳೆ, ಪಾಪಗಳನ್ನು ತೊಳೆದು ಶುಭ್ರಗೊಳಿಸಬೇಕಾದ ಗಂಗೆ ಅಶುಚಿಯಾಗಿ, ಅಶುಭ್ರಳಾಗಿ ಕೊಳೆತು ಹೀನಾವಸ್ಥೆಗೆ ಒಳಗಾದುದರ ಬಗೆಗೆ ಇಲ್ಲಿ ಒಮ್ಮೆಗೆ ವಿಷಾದ ಮತ್ತು ವ್ಯಂಗ್ಯ ಪ್ರಕಟವಾಗುತ್ತದೆ. ಮಡುಗಟ್ಟಿದ ಪರಂಪರೆಯ ಮೌಲ್ಯಗಳನ್ನು ಹಿಡಿದಿಡಲು ಕಂಬಾರರ ಸಂವೇದನೆ ಸೃಷ್ಟಿಸುವ ರೂಪಕ ಪ್ರತಿಮೆಗಳು ಓದುಗನನ್ನು ಒಮ್ಮೆಗೆ ದಂಗು ಬಡಿಸುತ್ತವೆ.

ಮೂಡಣದ ಮುದಿಕುರುವೊಡೆದು ನೆತ್ತರು ಕೀವು ಸೋರಿತೋ,-
ಸುರುವಾಯ್ತಿಲ್ಲಿ ಚಲನೆ: ತೆರೆಯ ಮಿಡಿನಾಗರಗಳೆದ್ದು
ಮುರಿದಾಡಿ, ಮಣಿದು, ಹೊಡಮರಳಿ, ತಳಕು ಬಿದ್ದಾಡಿ ಮೂಡಿದ್ದ
ಬಾವಲಿಹಿಂಡು ಗೆರೆಗೆರೆಯಾಗಿ ಹಂಚಿ, ಹಲವಾರಾಗಿ, ಸುಕ್ಕುಗಟ್ಟಿ
ಸುತ್ತುವವು. ರಾಡಿ ಗಿಜಗಿಜಿ ಕೆಸರು ನೀರಿನಲ್ಲಿ ಅಂಗಾತಾಗಿ
ತೇಲುವ ಚಿಳಿಮಿಳಿ ಮೀನ ಹೆಕ್ಕಿ ತಿನ್ನುತ್ತ ತಿರುಗುವವು
ಒಂಟಿಗಾಲಿನ ನೂರೆಂಟು ಬಕ.[೨೮]

ಸಾಂಸ್ಕೃತಿಕ ಅಂತರಂಗ-ಬಹಿರಂಗಗಳೆರಡೂ ಕಲುಷಿತಗೊಂಡ ಸ್ಥಿತಿಗಳನ್ನ ಮುದಿಕುರು, ನೆತ್ತರು, ಕೀವು, ಬಾವಲಿ ಹಿಂಡು, ಒಂಟಿಕಾಲಿನ ಬಕ ಮೊದಲಾದ ಚಿತ್ರಗಳು ಸೂಚಿಸುತ್ತವೆ. ಇಂಥ ಚಿತ್ರಗಳಿಂದ ಎದುರಾಗುವ ಭಯಾನಕ, ಅಸಹ್ಯ ಹಾಗೂ ಕ್ರೌರ್ಯಗಳನ್ನು ಇಲ್ಲಿ ಕಾಣುತ್ತೇವೆ. ಚಿಳಿಮಿಳಿ ಮೀನುಗಳಿಗೆ ಒಂಟಿಕಾಲಿನ ಬಕಗಳು ಬೇಟೆಗಾಗಿ ಕಾದ ಚಿತ್ರ ಪಾರಂಪರಿಕ ವ್ಯವಸ್ಥೆಯ ಶೋಷಣೆಯನ್ನು ಸೂಚಿಸುತ್ತದೆ. ಸಕಲ ಚರಾಚರಗಳ ಅದಕ್ಕೂ ಇದಕ್ಕೂ ಎದಕ್ಕೂ ಬಳಕೆಯಾದ ಕೆರೆಯ ನೀರು ಬಚ್ಚಲ ಇಳಿಜಾರಿನಲ್ಲಿ ಹರಿದು ಮತ್ತೆ ಕೆರೆ ಸೇರುವ ದೈನಂದಿನ ವ್ಯವಹಾರಿಕ ಚಮತ್ಕಾರವು ಮಡುಗೊಂಡ ಕೆರೆಯಾಗಿದೆ.

ಅಂತೆಯೇ ಬರುವಾಗ ಉಡಿತುಂಬ ತಂದಳು ತಾಯಿ: ಆ
ಸೀಮೆಯ ಪವಿತ್ರ ಕೆಸರುಸುಕು ರೋಗಾಣು,
ಹಗ್ಗಕ್ಕೆ ಹಾವೆಂಬ ಭಯ,
ಕಾಂಬ ಕಣ್ಣಿಗೆ ಮಾಯದ ಕನ್ನಡಿಯ.
ಘನಮಹಿಮಳು ತಾಯಿ,- ತಾಮ್ರದ ದುಡ್ಡನದ್ದಿದ ತಕ್ಷಣವೆ
ಕಿಲುಬಿಸುವಾಕೆ; ಬೆಳಗಿದರೆ ಬಂಗಾರ ಇಲ್ಲವೆ ಅಂಥ ಭ್ರಮೆಯ
ಹುಟ್ಟಿಸುವಾಕೆ. ಬಂಗಾಲದ ಜಾದುಗಾರರಿಗೆ ಬಾಣಂತಿಯ ಕೈ
ಒದಗಿಸಿದಾಕೆ; ಮೂರೇ ಗುಟುಕಿಗೆ ಬಂಜೆಯರ ಗರ್ಭ ಗಟ್ಟಿಗೊಳಿಸಿದಾಕೆ.[೨೯]

ಸಾಂಸ್ಕೃತಿಕ ಪರಿಚಲನೆಗಳು ಅಥವಾ ಚಲನಶೀಲತೆ ಮಡುಗೊಂಡ ಸ್ಥಿತಿಗಳನ್ನು, ಅಂಥ ಚಲನಶೀಲತೆಯಲ್ಲಿಯೇ ವಿಕೃತಿಯನ್ನು ಉಡಿತುಂಬ ತಂದ ಗಂಗಾಮಾಯಿಯ ಅವಸ್ಥೆಯನ್ನು ಇಲ್ಲಿ ಕಾಣುತ್ತೇವೆ.

ಈ ಮಾತಿಗೆ ಭಟ್ಟರ ಪುಸ್ತಕದಲ್ಲಿ, ಕುರುಬರ ಹಾಡಿನಲ್ಲಿ
ಆಧಾರವಿಲ್ಲ ಹೌದು; ಆದರೆ ಭಟ್ಟರು ತೋಂಡಿಯಲ್ಲಿ
ಹೀಗೆಂದು ಅಪ್ಪಣೆ ಕೊಡಿಸಿದ್ದುಂಟು.[೩೦]

ಗಂಗಾಮಾಯಿ ಬಗೆಗಿನ ನಂಬಿಕೆಗಳನ್ನು ಅರಗಿಸಿಕೊಳ್ಳಲಾರದ ಸಾಮಾನ್ಯರ ಪಾಡು, ಹಾಗೂ ಅಸ್ತಿತ್ವ-ಅಭಿಮಾನಗಳನ್ನು ಕಳೆದುಕೊಂಡು ಹೇಗಾದರೂ ಬದುಕಿದರಾಯಿತು ಎಂಬ ಅವಸ್ಥೆಗಳನ್ನು ಈ ಕವಿತೆ ದಾಖಲಿಸುತ್ತದೆ. ಇಲ್ಲಿ ಗಂಗಾಮಾಯಿ ಅನೈತಿಕ, ಸಮಾಜಬಾಹಿರ ಕ್ರಿಯೆಗಳಿಗೆ ಆಶ್ರಯ ತಾಣ. ಅನೈತಿಕ ಸಂಬಂಧದಿಂದ ಹುಟ್ಟಿದ ಕರ್ಣನಂಥ ಕೂಸುಗಳನ್ನು ಒಪ್ಪದ ಜನರಿಗೆ ಎಂತೊ ಅಂತೆ ದಿಕ್ಕಿಲ್ಲದವರಿಗೂ ಇವಳಲ್ಲಿ ಆಶ್ರಯವಿದೆ. ಹೀಗೆ

ಗಂಗಾಮಾಯಿಯ ಆಶ್ರಯವನ್ನು ಪಡೆದ ದೇಹಗಳು ಜಲಚರಗಳಿಗೆ ಆಹಾರವಾಗುತ್ತಲೇ ಆತ್ಮ ಗಿಡಗಳಿಗೇರಿ ಗಂಗವ್ವನ ಖಾಸಾ ಪೋಲಿಸಾಗುವ ವಿಚಾರವು ದಾಖಲಾಗದಿದ್ದರೂ ಭಟ್ಟರೂ ತೋಂಡಿಯ ಅಪ್ಪಣೆ 'ಅಲಿಖಿತ ಶಾಸನ'ವಾಗಿ ಮೈಪಡೆದು ಸಾಂಸ್ಕೃತಿಕ ಮಹತ್ವವನ್ನು ಪಡೆಯುವ ಕ್ರಿಯೆ ಅತ್ಯಂತ ಮಾರ್ಮಿಕವಾಗಿ ಪ್ರಕಟಗೊಳ್ಳುತ್ತದೆ. ಓ.ಎಲ್. ನಾಗಭೂಷಣ ಸ್ವಾಮಿಯವರ ಈ ಕೆಳಗಿನ ಸಾಲುಗಳು 'ಗಂಗಾಮಾಯಿ'ಯ ಅರ್ಥಪರಂಪರೆಯನ್ನು ಮತ್ತಷ್ಟು ಹಿಗ್ಗಿಸುತ್ತವೆ.

> ಜಡತೆಯ ನಡುವೆಯೂ ನಿರಂತರವಾಗಿ ಬದುಕು ಸಾಗಿದೆ. ಹಾಗೆ ಸಾಗುತ್ತಾ ಪರಸ್ಪರ ವಿರುದ್ಧವೆಂಬಂತೆ ತೋರುವ ಸಂಗತಿಗಳನ್ನೆಲ್ಲ ತನ್ನೊಳಗೆ ಒಳಗೊಳ್ಳುತ್ತಿದೆ. ಬದುಕಿನಲ್ಲಿ ಯಾವುದರ ನಿರಾಕರಣೆಯೂ ಇಲ್ಲ. ಗಂಗೆ-ಮಾಯಿ, ಅವಳು ನಿರಾಕರಿಸುವುದಿಲ್ಲ. ಒಪ್ಪುತ್ತಾಳೆ. ಅದನ್ನು ಗ್ರಹಿಸುತ್ತಿರುವ ಕವಿಗೆ ಅಸಹ್ಯ ಇದೆ, ವಿಷಾದ ಇದೆ. ಇವೆರಡರಿಂದ ಹುಟ್ಟಿದ ವ್ಯಂಗ್ಯ ತನ್ನತ್ತಲೇ ತಿರುಗಿ ಆಗುವ ಬೆರಗು ಇದೆ. ಈ ಬೆರಗಿಗೆ ಕಾರಣವೆಂದರೆ ಬದುಕು ಹೀಗೇ ಇದೆಯಲ್ಲ, ಜಡವಾಗಿ; ಇದು ಚಲನಶೀಲವಾಗುವುದೇ ಇಲ್ಲವೇ? ಎಂಬ ಕವನದಲ್ಲಿ ಅನುಕ್ತವಾಗಿದ್ದು ಕೇಳಿಸುವ ಪ್ರಶ್ನೆ[೧೧]

ಒಟ್ಟಿನಲ್ಲಿ, 'ಗಂಗಾಮಾಯಿ' ಕವಿತೆ ಪಾರಂಪರಿಕ ಸಾಂಪ್ರದಾಯಿಕ ಮೌಲ್ಯಗಳಿಗೆ ಮರುವ್ಯಾಖ್ಯಾನಗಳನ್ನು ಒಡ್ಡುವ ಪ್ರತಿಮೆಯಾಗಿ, ಅಂಥ ವ್ಯವಸ್ಥೆಯ ನಡುವೆ ನಿರಂತರವಾಗಿ ಬದುಕು ಸಾಗಿಸುವ, ಸಂಘರ್ಷಕ್ಕೆ ಎದುರಾಗುವ ನೆಲೆಗಳನ್ನು ಮುಖಾಮುಖಿಯಾಗಿಸುತ್ತದೆ. ಇಂಥ ಕವನಗಳ ಮುಖೇನ ಕಂಬಾರರ ಸಂವೇದನೆ ಜಡಮೌಲ್ಯಗಳಿಗೆ ಎದುರಾಗಬೇಕಾದ ಅನಿವಾರ್ಯದ ನೆಲೆಗಳನ್ನು ಶೋಧಿಸಿಕೊಳ್ಳುತ್ತದೆ.

**೫. ಚಕೋರಿ : ಪರಿಸರ, ಸಮಕಾಲೀನ ಅಗತ್ಯಗಳ ಚಿಂತನೆ**

ದೇಸೀಯ ಮೂಲ ಸೆಲೆಗಳ ಜೀವಂತಿಕೆಯೇ ಕಂಬಾರರ ಕಾವ್ಯದ ಪ್ರಾಣ ಕೇಂದ್ರ. ಅವರ ಕೃತಿಗಳ ವಸ್ತು, ತಂತ್ರ, ಸನ್ನಿವೇಶ, ಪ್ರತಿಮೆ ಹಾಗೂ ರೂಪಕಗಳ ಪ್ರಪಂಚದ ಈ ನೆಲೆಯೇ ಪ್ರಧಾನ ಭೂಮಿಕೆ. ಈ ಅನನ್ಯತೆಯ ಎಚ್ಚರ ಸಮಕಾಲೀನ ರಾಜಕೀಯ, ಸಾಂಸ್ಕೃತಿಕ ವಿಚಾರಧಾರೆಯನ್ನು ಅಭಿವ್ಯಕ್ತಿಗೆ ಒಳಪಡಿಸುವುದು ಅವರ ಪ್ರತಿಭೆಯ ವೈಶಿಷ್ಟ್ಯವಾಗಿದೆ. ಕಂಬಾರರ ಕೃತಿಗಳಲ್ಲಿ ಪ್ರಕಟವಾಗುವ ಚಿಂತನೆಗಳು ವಸಾಹತು ಸಂಸ್ಕೃತಿಯ ವಿಚಾರಧಾರೆಗಳೊಡನೆ ನಿರಂತರವಾದ ಸಂಘರ್ಷವು ಅಧ್ಯಯನ ಯೋಗ್ಯವಾದುದು. ವಸಾಹತು ಸಂಸ್ಕೃತಿಯ ಆಘಾತಗಳನ್ನು, ಅಂಥ ಸಂಸ್ಕೃತಿಯ ಪ್ರಭಾವ ಪರಿಣಾಮಗಳನ್ನು ವಿಶ್ಲೇಷಣೆಗೆ ಗುರಿಪಡಿಸಲು ವಾಸ್ತವವಾದಿ ಮಾರ್ಗವನ್ನು ಕಂಬಾರರು ಪ್ರಜ್ಞಾಪೂರ್ವಕವಾಗಿಯೇ ಕೈ ಬಿಟ್ಟು ಜನಪದ, ಪುರಾಣ, ಅತಿಮಾನುಷ ವಸ್ತು ತಂತ್ರಗಳನ್ನು ಶೋಧಿಸಿಕೊಳ್ಳುತ್ತಾರೆ. ಇಂಥ ಶೋಧ 'ಹೇಳತೇನ ಕೇಳ' 'ಋಷ್ಯಶೃಂಗ' 'ಹುಲಿಯ ನೆರಳು' ಕೃತಿಗಳಲ್ಲಿ ನಡೆದಿದೆ. ಈಚಿನ ಕೃತಿಗಳಾದ 'ಸಿರಿಸಂಪಿಗೆ' 'ಚಕೋರಿ'ಗಳಲ್ಲಿ ಈ ಶೋಧ ಅತ್ಯಂತ ಪರಿಣಾಮಕಾರಿಯಾಗಿ ಮೈದಾಳುವ ಕ್ರಮ ವಿಶಿಷ್ಟ ಬಗೆಯದು.

ಚಕೋರಿಯನ್ನು ಓದುತ್ತಾ ಹೋದಂತೆ ಕೃತಿಯಲ್ಲಿ ಅಭಿವ್ಯಕ್ತಗೊಂಡಿರುವ ಜೀವನಾನುಭವ, ದೇಸೀ ಸಂಸ್ಕೃತಿಯ ನಂಬಿಕೆ-ಆಚರಣೆ, ಮಾಟ-ಮಂತ್ರ, ಕನಸು-ಕಲ್ಪನೆ, ತಂತ್ರ-ಭಾಷಿಕ ನೆಲೆಗಳು ಓದುಗನನ್ನು ಬೆಚ್ಚಿಬೀಳಿಸುತ್ತವೆ.

ಆದಿಮಕಾಲದ ಕೃಷಿ, ಕುಟುಂಬ, ವಿದ್ಯೆ, ಕಲೆ, ಸಾಂಸ್ಕೃತಿಕ ರಾಜಕೀಯ ಜಿಜ್ಞಾಸೆಗಳು ಚಕೋರಿಯಲ್ಲಿ ಮುಖ್ಯವಾಗಿವೆ. ಹಾಗೆಯೇ ಚಕೋರಿಯು ಜೀವವಿಕಾಸದ ವಿಭಿನ್ನ ಘಟ್ಟಗಳನ್ನು, ಜೀವವಿಕಾಸದ ತಲೆತಲಾಂತರದ ನಂಬಿಕೆಯ ಕಥೆಗಳನ್ನು ಹೇಳುತ್ತಾ, ಸೃಷ್ಟಿ ಮತ್ತು ಅವನತಿಯ ಮೂರ್ತ-ಅಮೂರ್ತ ವಿಚಾರಗಳನ್ನು ವಿಶ್ಲೇಷಿಸುತ್ತದೆ. ವಿಶ್ವಸೃಷ್ಟಿಯ ಮೂಲ, ಮನುಷ್ಯ, ದೈವ, ರಾಕ್ಷಸ, ಖೇಚರ, ದೇಹ-ಆತ್ಮ, ಹಗಲು-ರಾತ್ರಿ, ಸೂರ್ಯ-ಚಂದ್ರ, ಬಿಂಬ-ಪ್ರತಿಬಿಂಬ, ನೆಲ-ಮುಗಿಲು, ಸತ್ಯ-ಅಸತ್ಯ, ಕಲೆ-ವಿದ್ಯೆ, ಮನುಷ್ಯನ ಒಳಮನೋವ್ಯಾಪಾರದ ಅಸಂಖ್ಯ ಮೂಲಭೂತ ಸಮಸ್ಯೆಗಳನ್ನು ಅತ್ಯಂತ ಶ್ರದ್ಧೆಯಿಂದ ಅಭಿವ್ಯಕ್ತಿಗೆ ಗುರಿಪಡಿಸುತ್ತದೆ. ಹಾಗೂ ಪರಿಸರದ ಮೇಲೆ ನಾಗರಿಕತೆಯು ಎಸಗಿದ ಆಕ್ರಮಣಶೀಲತೆಯಿಂದಾದ ಕ್ರೌರ್ಯ-ಆತಂಕಗಳು, ಅಂಥ ಆತಂಕಗಳಿಗೆ ಕಲೆಯು ಮುಖಾಮುಖಿಯಾಗುವುದರ ಮೂಲಕ ಹೊಸ ಸಂಘರ್ಷವೊಂದನ್ನು ಚಕೋರಿ ಚಿಂತಿಸುತ್ತದೆ. ಇಂಥ ಸಂಘರ್ಷ ಈ ಕೃತಿಯ ಉದ್ದಕ್ಕೂ ಸಂಕೀರ್ಣವಾಗಿ, ಗುಪ್ತಗಾಮಿನಿಯಾಗಿ ಪ್ರವಹಿಸುತ್ತದೆ. ಸಂಕೀರ್ಣ ವಿಚಾರಧಾರೆಯೊಂದನ್ನು ಅಭಿವ್ಯಕ್ತಿಗೆ ಒಳಪಡಿಸುವ ಕ್ರಮ, ಕಥನ ಕ್ರಮ, ಸಂಭಾಷಣೆ, ವಾಕ್ಯಗಳು ಕನ್ನಡ ಕಾವ್ಯ ಪರಂಪರೆಯನ್ನು ನೆನಪಿಸುವ ಭಾಷಿಕ ರಚನೆಗಳು, ಭಾಷಿಕ ರಚನೆಗಳು ಕಟ್ಟಿಕೊಡುವ ವಿವರಗಳೊಳಗಿನ ವಿವರಗಳಿಂದ ಪ್ರಕಟಗೊಳ್ಳುವ ಧ್ವನಿ, ಅರ್ಥ ಪರಂಪರೆಗಳು ಅನನ್ಯವಾದುವು. ಚಕೋರಿಯು ಹಲವು ಸಾಹಿತ್ಯ ಪ್ರಕಾರಗಳನ್ನು ದುಡಿಸಿಕೊಳ್ಳುತ್ತಲೇ, ವಿಶಿಷ್ಟ ಮಾದರಿಯೊಂದನ್ನು ಅನ್ವೇಷಿಸುತ್ತದೆ. ಕನ್ನಡ ಕಾವ್ಯ ಪರಂಪರೆ ಇದುವರೆಗೂ ಕಂಡು ಅರಿಯದ ಒಂದು ಪರಿಪಕ್ವ ದೇಸೀ ನೆಲೆಯೊಂದನ್ನು ಚಕೋರಿಯಲ್ಲಿ ಕಾಣಬಹುದಾಗಿದೆ. ಈ ಎಲ್ಲ ಗುಣಗಳನ್ನೊಳಗೊಂಡಿರುವ ಕಂಬಾರರ ಚಕೋರಿಯು ಹೊಸ ಪರಂಪರೆಯ ಪೀಠಿಕೆಯಂತಿದ್ದು, ಆ ಮೂಲಕ ಅವರ ಸಂವೇದನೆ ಹೊಸದೊಂದು ಕಾವ್ಯ ಪ್ರಕಾರವನ್ನೇ ಹುಟ್ಟು ಹಾಕಿತೆನ್ನಬಹುದು.

ಸೀಳಿಕೊಳ್ಳುವುದರಿಂದ ಎದುರಾಗುವ ಬದುಕಿನ ವೈರುಧ್ಯಗಳು, ಪ್ರಶ್ನೆಗಳು ಕಂಬಾರರ ಕೃತಿಗಳಲ್ಲಿ ಮುಖ್ಯ ಭಿತ್ತಿಯಾಗಿವೆ. ಈ ಹಿಂದಿನ ಕೃತಿಗಳಲ್ಲಿ ನೆಲದ ನೆಲೆಯಲ್ಲಿ ವ್ಯಕ್ತವಾಗುತ್ತಿದ್ದ ಈ ಪ್ರಶ್ನೆಗಳು 'ಸಿರಿಸಂಪಿಗೆ' 'ಚಕೋರಿ' ಹಾಗೂ ಇತ್ತೀಚಿನ ಕೆಲವು ಕವನಗಳಲ್ಲಿ ಅಂಥ ನೆಲೆಯನ್ನು ಮೀರಿ ಶೋಧನೆಗೆ ತೊಡಗುತ್ತವೆ. ಹೋಳು ಮಾಡುವುದೆಂದರೆ ತನ್ನನ್ನೇ ಬಲಿತೆತ್ತು ಕೊಳ್ಳುವ ಸತ್ಯವಾಗಿ ಎದುರಾಗುವ ಕ್ರಿಯೆ ಸಿರಿಸಂಪಿಗೆಯದು. 'ನಮ್ಮ ಮಗ ಸೀಳಿಕೊಳ್ಳದ ಹಾಗೆ ನೋಡಿಕೊ' ಎಂಬುದು ಅವರ ಕಾವ್ಯ ಧೋರಣೆಗಳಲ್ಲೊಂದು. ಸಿರಿಸಂಪಿಗೆ ನಾಟಕದಲ್ಲಿ ಸೀಳಿಕೊಂಡದ್ದರಿಂದ ಶಿವನಾಗದೇವ ಕಂಡುಕೊಂಡ ಸತ್ಯ ಇದು. ಕೊರತೆಯಿಲ್ಲದ ಹೆಣ್ಣನ್ನು ಪಡೆಯಲು ನಿರಂತರವಾಗಿ ಹಂಬಲಿಸಿದ ಶಿವನಾಗದೇವ ತನ್ನನ್ನೇ ಹೋಳು ಮಾಡಿಕೊಳ್ಳುವುದರ ಮೂಲಕ ದೇಹ-ಆತ್ಮಗಳ ಸಾಮರಸ್ಯವನ್ನು ಪಡೆಯಲು ಯತ್ನಿಸಿ, ದೇಹ-ಆತ್ಮಗಳ ದ್ವಂದ್ವದ ಸತ್ಯಗಳನ್ನು ಕಾಣುವುದರಲ್ಲಿ ಸೋಲುತ್ತಾನೆ. ಇಂತಹ ನೆಲೆ ಚಕೋರಿಯಲ್ಲಿ ವಿಭಿನ್ನ ನೆಲೆಯಲ್ಲಿ ಶೋಧನೆಗೆ ಒಳಪಡುತ್ತಿದ್ದರೂ ಈ ಮಾದರಿಯ ಪ್ರಶ್ನೆಗಳು (ದ್ವಂದ್ವಗಳು) ಕಂಬಾರರನ್ನು ಗಾಢವಾಗಿ ಕಾಡುವ ಪರಿ ಈ ಎರಡೂ ಕೃತಿಗಳ ಅಧ್ಯಯನದಿಂದ ತಿಳಿದು ಬರುತ್ತದೆ. 'ಸಿರಿಸಂಪಿಗೆ' ನಾಟಕದಲ್ಲಿ ಮನುಷ್ಯನಲ್ಲಿಯೇ ಅಂತರ್ಗತವಾಗಿರುವ ಮನುಷ್ಯ ಹಾಗೂ ಮೃಗೀಯ ಶಕ್ತಿಯನ್ನು ಶಿವನಾಗದೇವ ಮತ್ತು ಕಾಳಿಂಗ ಪಾತ್ರಗಳು ರೂಪಕವಾಗಿ ಮೈ ತಳೆಯುತ್ತವೆ.

ಚಕೋರಿಯಲ್ಲಿ ಚಿನ್ನಮುತ್ತ, ಚಂದಮುತ್ತನ ಪಾತ್ರಗಳ ಮುಖೇನ ಸೋದರ ಸಂಬಂಧಿ ಆದಿಮದ ಸೇಡು, ಈರ್ಷೆ, ಅಸೂಯೆಯ ಪ್ರಶ್ನೆಗಳನ್ನು ವ್ಯಷ್ಟಿ ಹಾಗೂ ಸಮಷ್ಟಿಗಳಲ್ಲಿ ಅಂತರ್ಗತವಾಗಿರುವ ಸತ್ಯವು ಇಲ್ಲಿ ವಿಸ್ಮೃತಿ ಚರಿತ್ರೆಯೊಂದರ ಪುನರ್‌ಸೃಷ್ಟಿಯ ಮೂಲಕ ರೂಪಕಗಳಾಗುತ್ತವೆ. ಅಂತೆಯೇ ಏಕ ವ್ಯಕ್ತಿಯಲ್ಲಿಯೆ ಅಂತರ್ಗತವಾಗಿರುವ ವೈರುಧ್ಯಗಳು ಈ ಎರಡೂ ಪಾತ್ರಗಳ ವ್ಯಕ್ತಿತ್ವಗಳಲ್ಲಿ ಕಾಣಿಸಿಕೊಂಡಿದೆ. 'ಸಿರಿಸಂಪಿಗೆ'ಯಲ್ಲಿ ಮನುಷ್ಯ-ಪ್ರಾಣಿ ಭಾಗಗಳ ಪ್ರಶ್ನೆಗಳು ಮುಖ್ಯವಾದರೆ, ಚಕೋರಿಯಲ್ಲಿ ಆಸ್ತಿ, ಒಡೆತನ, ಪಾಲುಗಾರಿಕೆ. ಕಾನೂನು-ನ್ಯಾಯ ವ್ಯವಸ್ಥೆ, ರಾಜಕೀಯ ಪ್ರಶ್ನೆಗಳು, ಸಾಧನೆಯ ಪ್ರಶ್ನೆಗಳು ಮುಖ್ಯವಾಗುತ್ತವೆ. ಆಖಂಡತೆಯನ್ನು ಒಡೆದರೆ ಎದರಾಗುವ ಅನಾಹುತಗಳನ್ನು ಚಕೋರಿ ಧ್ವನಿಸುತ್ತಾ, ಅಂಥ ಅನಾಹುತಗಳನ್ನು ದಾಟಿ ಪ್ರತಿಬಿಂಬಗಳೆಲ್ಲವೂ ಬಿಂಬಗಳಲ್ಲಿ ಐಕ್ಯವಾಗುವ, ಬಯಲು ನಿರ್ವಯಲಾಗುವುದರ ಕಡೆಗೆ ಚಕೋರಿಯ ಶೋಧ ನಡೆಯುತ್ತದೆ.

> ಚಂದ್ರಾಮನಂಬೂವ ಕನ್ನಡಿ ಮಾಡಿ
> ನನ್ನ ಕನ್ನಡಿ ಮಾಡಿ ಅದರ ಎದುರಿಟ್ಟಿ
> ಪ್ರತಿಬಿಂಬ ನೆರೆದಾವು ಬಿಂಬದ ಜೋಡಿ ||ಬಯಲು||
> ಬಯಲಾಗ ಸೇರ್‍ಯಾವು ನಿರ್ವಯಲಾಗಿ
> ಜೋ ಜೋ ಎನ್ನ ಜ್ಯೋತಿಯ ಕಂದಾ ಜೋ ಜೋ ||[೨೨]

ಬಿಂಬ-ಪ್ರತಿಬಿಂಬಗಳ ಪ್ರಶ್ನೆಗಳ ಶೋಧ ಲೌಕಿಕ ಅಲೌಕಿಕ ಸಂಬಂಧಗಳ ನೆಲೆಯಲ್ಲಿ ಕ್ರಿಯಾಶೀಲವಾಗಿ ಶೋಧಿಸಲ್ಪಡುವುದು ಚಕೋರಿಯ ವಿಶಿಷ್ಟತೆಗಳಲ್ಲೊಂದು. ಶಿವ ತನ್ನ ವಾಮಾಂಗವನ್ನು ಕಿತ್ತು ಆದಿಮಾಯೆಯನ್ನು ಸೃಷ್ಟಿಸುವುದು, ಕತ್ತಲೆ ಆವರಿಸಿದ ಶಿವಲೋಕವನ್ನು ಸೀಳಿ ಕೆಳಕ್ಕೆ ತಳ್ಳುವುದು, ತನ್ನ ಹಣೆಗಣ್ಣಿನಿಂದ ಹುಟ್ಟಿಕೊಂಡ ಸೂರ್ಯ, ತನ್ನ ಹಣೆಯ ಬೆವರಿನಿಂದ ಹುಟ್ಟಿಕೊಳ್ಳುವ ನರಮಾನವ, ಬೆಟ್ಟದ ಮಾಯಗಾರ್ತಿ ಹಾಗೂ ಸೈತಾನ ಸರ್ಪಗಳಿಂದ ಹೋಳಾಗುವ ನರಮಾನವ,-ಹೀಗೆ ಚಕೋರಿಯ ಉದ್ದಕ್ಕೂ ಹೋಳಾಗುವ ವಿವರಗಳು ಮತ್ತೆ ಮತ್ತೆ ಕಾಣಿಸುತ್ತವೆ. ಮೊದಲೇ ಪ್ರಸ್ತಾಪಿಸಿದಂತೆ ಚಕೋರಿ ಕೃತಿಯು ಸೀಳಿಕೊಳ್ಳುವುದರ ಮೂಲಕ ಎದುರಾಗುವ ಬದುಕಿನ ದ್ವಂದ್ವಗಳನ್ನು ವಿಭಿನ್ನ ನೆಲೆಗಳಲ್ಲಿ ಶೋಧಿಸುತ್ತಲೇ ಇಡಿಯಾಗುವುದರ ಹಾಗೂ ಅಖಂಡತೆಯ ಮಹತ್ವದ ಆಶಯಗಳ ಕಡೆಗೂ ಚಲಿಸುತ್ತದೆ. ಇಂಥ ವಿಚಾರಧಾರೆಯು ಪ್ರಸ್ತಾವನೆಯ ಕಥೆಯಿಂದ ಶುರುವಾಗಿ, ಚಕೋರಿ ಚಕೋರ ಪಕ್ಷಿಯಾಗಿ ಚಂದ್ರನನ್ನು ನುಂಗಿ ಚಂದ್ರ ಚಕೋರಿಯಾಗಿ ಬಯಲು ನಿರ್ವಯಲಾಗಿ ಬೆಳಗಾಗುವ ಕ್ರಿಯೆಯವರೆಗೂ ವಿಭಿನ್ನ ನೆಲೆಗಳಲ್ಲಿ ಮೈದಾಳುತ್ತದೆ. ಈ ನೆಲೆಗಳು ಪ್ರಸ್ತಾವನೆಯ ಕಥೆಯಲ್ಲಿಯೇ ಮೈಪಡೆಯುತ್ತಾ, ಆಕಾರ ತಾಳುವುದನ್ನು ಗುರುತಿಸಬಹುದಾಗಿದೆ.

ಶಿವ ತನ್ನ ವಾಮಾಂಗವನ್ನು ಕಿತ್ತು ಆದಿ ಮಾಯೆಯನ್ನು ಸೃಷ್ಟಿಸುವುದು. ಕತ್ತಲು ತುಂಬಿದ ಶಿವಲೋಕದ ಭಾಗವನ್ನು ಸೀಳಿ ಕೆಳಕ್ಕೆ ತಳ್ಳುವುದು, ಸೈತಾನ ಸರ್ಪ ಮತ್ತು ಮಾಯಕಾರ್ತಿಯಿಂದ ನರಮಾನವ ಹೋಳಾಗುವುದು ಇಂಥ ಹೋಳಾಗುವ ಚಿತ್ರಗಳು ಚಕೋರಿಯ ಉದ್ದಕ್ಕೂ ಇವೆ. ಹೋಳಾಗುವುದರಿಂದ ಎದುರಾಗುವ ದ್ವಂದ್ವಗಳನ್ನು 'ಚಕೋರಿ' ಮುಖ್ಯವಾಗಿ ಚಿಂತನೆಗೆ ಒಳಪಡಿಸುತ್ತದೆ. ಚಂದ್ರನ ಕಲಾವಂತಿಕೆ ಮತ್ತು ಸೂರ್ಯನ ವಿದ್ಯಗಳಿಂದ ಉಂಟಾಗುವ

ಯುದ್ಧಗಳು, ಅಂಥ ಯುದ್ಧಗಳಿಂದ ನಿರ್ಮಾಣವಾಗುವ ಕ್ರೌರ್ಯಗಳು ಚಕೋರಿಯ ಮುಖ್ಯ ಜಿಜ್ಞಾಸೆಗಳಲ್ಲಿ ಒಂದಾಗಿವೆ. ಶಕ್ತಿಶಾಲಿ ವಿದ್ಯೆಗಳ ಧಾಳಿಗೆ ಚಂದ್ರಲೋಕದ ಕಲೆಗಳು ಆಘಾತಕ್ಕೆ ಒಳಗಾಗುವ, ಮರುಹುಟ್ಟು ಪಡೆಯುವ ಧ್ವನಿಯಲ್ಲಿಯೂ ಹೋಳಾಗುವುದರಿಂದ ಉಂಟಾಗುವ ಸಂಕೀರ್ಣಾವಸ್ಥೆಗಳನ್ನು ಈ ಕೃತಿ ಕಟ್ಟಿಕೊಡುತ್ತದೆ.

ಆಸಂಖ್ಯ ಲೋಕಗಳು, ಆದಿಮಾಯಿ, ಪುಣ್ಯಕೋಟಿ, ನಂದಿಯ ಅವತಾರ, ಭೌತಿಕ ಜಗತ್ತು, ಚೌರ್ಯಾಂಸಿ ತಿರ್ಯಕ್ ಜಂತು ಜಾಲಗಳ ಪ್ರಾಣಿ ಜಗತ್ತು, ನರಮಾನವನ ಸೃಷ್ಟಿ, ನರಮಾನವನ ಸಂಸಾರ ದಂದುಗ, ಉಡುಗೆಯ ಶೋಧ, ಹಗಲು-ರಾತ್ರಿಗಳ ಕಲ್ಪನೆ, ಕುಟುಂಬದಿಂದ ಎದುರಾಗುವ ಸೋದರ ಸಂಬಂಧಿ ಸಮಸ್ಯೆಗಳು, ಮಾತೃ-ಪಿತೃ ಪ್ರಧಾನ ಕುಟುಂಬಗಳ ಪ್ರಶ್ನೆಗಳು, ಒಡೆತನ, ಆಸ್ತಿಯ ಬಗೆಗಿನ ಮೋಹ, ಅದರ ವಿಭಜನೆ, ಕೃಷಿಯ ಆರಂಭ, ಅಸಂಖ್ಯ ವಿದ್ಯೆಗಳು, ಸಂಗೀತ-ಸಾಹಿತ್ಯದಂಥ ಕಲೆಗಳ ಮಹತ್ವ, ವಿದ್ಯೆ ಹಾಗೂ ಕಲೆಗಳ ನಡುವಣ ಸಂಘರ್ಷ, ಅವುಗಳಿಂದ ದೊರೆಯುವ ಕೀರ್ತಿಗಾಗಿ ನಡೆಯುವ ನಿರಂತರ ಸ್ಪರ್ಧೆ-ಘರ್ಷಣೆಗಳು, ಹಿಂಸೆ-ಅಹಿಂಸೆ, ತ್ಯಾಗದ ಜಿಜ್ಞಾಸೆಯ ಪ್ರಶ್ನೆ ಮುಂದಿನ ಕಥೆಯಲ್ಲಿ ಮೈದಾಳುವ ಕ್ರಿಯೆ ಅನನ್ಯವಾದುದು. ಚಂದಮುತ್ತ-ಚಿನ್ನಮುತ್ತನ ಬದುಕಿನ ವಿವರಗಳಲ್ಲಿ ಪ್ರಸ್ತಾವನೆಯ ಎಲ್ಲ ಆಶಯಗಳು, ವೈರುಧ್ಯಗಳು ಆಕಾರಗೊಳ್ಳುತ್ತಾ, ವಿದ್ಯೆಗಳ ಕ್ರೌರ್ಯ ಹಾಗೂ ಕಲೆಗಳ ಮಹತ್ವ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತವೆ.

ಸಂಸ್ಕೃತಿ- (ನವ)ನಾಗರಿಕತೆಗಳ ಸೃಷ್ಟಿ, ಬೆಳವಣಿಗೆ, ಅವನತಿಗಳನ್ನು ಚಂದಮುತ್ತ-ಚಿನ್ನಮುತ್ತನ ಸಾಂಕೇತಿಕ ಪಾತ್ರಗಳ ಬದುಕಿನ ಸುತ್ತ ಅತ್ಯಂತ ಸೂಕ್ಷ್ಮವಾಗಿ, ಗಾಢ ವಿವರಗಳ ಮುಖಾಂತರ ಕಂಬಾರರ ಕಾವ್ಯ ಸೃಷ್ಟಿಕ್ರಿಯೆಗೆ ಒಳಪಡಿಸಿದೆ. ಅಂತೆಯೇ ಆದಿಮ ನಾಗರಿಕತೆಯ ವೈರುಧ್ಯಗಳಾದ ಎಡ-ಬಲ ಪಂಥೀಯರ ಘರ್ಷಣೆ, ಜಾತಿ-ಜಾತಿಗಳ ನಡುವಣ ವೈರತ್ವ, ಧರ್ಮ-ಧರ್ಮಗಳ ನಡುವಣ ಈರ್ಷ್ಯೆಗಳು ಪ್ರಸ್ತಾವನೆಯ ಭಾಗದಲ್ಲಿ ಬೀಜರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಈ ವಿಚಾರಧಾರೆ ಕೃತಿಯಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ಅರ್ಥ ಪರಂಪರೆಗಳನ್ನು ಉಂಟುಮಾಡುತ್ತದೆ. ಚಂದಮುತ್ತ ಯಕ್ಷಿಗೆ ಆಕರ್ಷಿತವಾಗುವುದು, ಕೊಳಲವಿದ್ಯೆಯ ಸಾಧನೆಗೆ ತೊಡಗುವುದು, ಅದಕ್ಕೆ ಚಿನ್ನಮುತ್ತನಿಂದ ಎದುರಾಗುವ ಘರ್ಷಣೆ, ಸ್ಪರ್ಧೆ, ಮಾಟ, ಮಂತ್ರ, ಕರಿವಿದ್ಯೆ, ಸೇಡಿನ ವಲಯಗಳು, ಪಶ್ಚಾತ್ತಾಪ ಮೊದಲಾದ ಘಟನೆ, ಸನ್ನಿವೇಶಗಳಲ್ಲಿ ಇಂಥ ಅರ್ಥವಲಯಗಳನ್ನು ಗುರುತಿಸಬಹುದಾಗಿದೆ. ಅಂದರೆ ಮನುಷ್ಯ ಪ್ರಪಂಚದ ಸಾಂಸ್ಕೃತಿಕ ರಾಜಕೀಯ ಪ್ರಶ್ನೆಗಳು ಹೆಣ್ಣಿನ ಘರ್ಷಣೆ ನೆಲೆಯಿಂದ ಆರಂಭವಾಗಿ ದೇವರು, ಧರ್ಮ, ಭಾಷೆ, ವರ್ಣ, ವಿದ್ಯೆ, ಶಕ್ತಿಗಳ ಕಡೆ ಚಲಿಸುತ್ತವೆ. ಅವು ಸಮಷ್ಟಿ ಬದುಕಿಗೆ ಮಾರಕವಾಗುವುದರ ಕಡೆಗೆ ಮನುಕುಲ ಹೊರಟಿರುವ ದುರಂತತೆಯು ಸೂರ್ಯಮುತ್ತ, ಚಿನ್ನಮುತ್ತ ಮಹಾನುಭಾವರು ಎಸಗುವ ಕೃತ್ಯಗಳಲ್ಲಿ, ತೊಡಗುವ ಕ್ರಿಯೆಗಳಲ್ಲಿ ಹಾಗೂ ಪಶ್ಚಾತ್ತಾಪದ ಘಟನೆಗಳಲ್ಲಿ ಅತ್ಯಂತ ಮಾರ್ಮಿಕವಾದ ವ್ಯಂಗ್ಯ ಹೊರಹೊಮ್ಮಿದೆ.

ಜಗತ್ತಿನ ಸೃಷ್ಟಿ, ವಿದ್ಯೆ, ಕಲೆಗಳ ವಿಕಾಸದ ಪ್ರಶ್ನೆಗಳನ್ನು ಮುಖಾಮುಖಿಯಾಗಿಸುತ್ತಲೇ ವಿದ್ಯೆಗಳ ಬೆನ್ನು ಹತ್ತಿದ ಮನುಷ್ಯ ನಾಗರಿಕತೆ ಹಾಗೂ ವೈಜ್ಞಾನಿಕ ಸಾಧನೆಯ ನೆಪದಲ್ಲಿ ಪರಿಸರವನ್ನು ಭಗ್ನಗೊಳಿಸುವ ತನ್ನ ಸ್ವಾರ್ಥಕ್ಕಾಗಿ, ಭೋಗಕ್ಕಾಗಿ ಪದಾರ್ಥಗಳ್ನಾಗಿ ಮಾರ್ಪಡಿಸಿ ಪರಿಸರದ ಮೇಲೆ ನಡೆಸುವ ಕೌರ್ಯವು ಇಲ್ಲಿ ಬಹುಮುಖ್ಯ ಭಿತ್ತಿಯಾಗಿದೆ.

ಮನುಷ್ಯನ ಕ್ರೌರ್ಯ ಹಾಗೂ ಆಕ್ರಮಣಶಾಲಿ ನೆಲೆಗೆ ವಿಸ್ಮೃತಿ ಚರಿತ್ರೆ ಹಾಗೂ ನೆನಪುಗಳ ಕತೆಯನ್ನು ಕಂಬಾರರ ಕಾವ್ಯ ಪುನರ್‌ಸೃಷ್ಟಿಸುವ ಕ್ರಿಯೆಯು ಅನನ್ಯವಾದುದಾಗಿದೆ.

ಚಿನ್ನಮುತ್ತನು ಭೋಗಿಸುವ ವಸ್ತುಪ್ರಪಂಚದ ಬಗೆಗಿನ ವ್ಯಾಮೋಹದ ಪ್ರತಿನಿಧಿಯಂತೆ ಕಾಣುತ್ತಾನೆ. ಆದರೆ ಚಂದಮುತ್ತ ಅಂಥ ಪ್ರಪಂಚದಿಂದ ಭಿನ್ನವಾದ ಕಲೆಯ ಸಾಧನೆಯ ಮೂಲಕ ವಿಜ್ಞಾನ, ನಾಗರಿಕತೆಗಳ ಅಭಿವೃದ್ಧಿಗಳ ಹೆಸರಿನಲ್ಲಿ ಪರಿಸರಕ್ಕೆ ಒದಗಿದ ಆಘಾತಗಳನ್ನು ಇಲ್ಲವಾಗಿಸಿ ಸಮೃದ್ಧಿಯನ್ನು ತಂದುಕೊಡುತ್ತಾನೆ. ಪರಿಸರದ ಸಮೃದ್ಧಿಗೆ ಅತ್ಯಾವಶ್ಯಕವಾದ ಮಳೆಯನ್ನು ನಾಡಿಗೆ ಎಳೆದು ತರುವ ತಿಂಗಳುರಾಗದ ಸಾಧನೆಗೆ ತನ್ನನ್ನೇ ತೆತ್ತುಕೊಳ್ಳುವ ಪ್ರತಿನಿಧಿಯಾಗುತ್ತಾನೆ.

ಬಿಸಿಲಗುದರೆಯನೇರಿ ಹೋದಾ
ಕೈ ಮೀರಿದ ಚಂದಿರನ ಬೇಟೆಗೆ ಹೋದಾ ||ಪ||

ಅಂಬರದಾಚೆಯ ರಂಭೇರ ನಾಡಿಂದ
ಬಾಡದ ನಗೆ ತರುವೆನೆಂದ
ಚಕ್ಕಂದವಾಡುವ ಚಿಕ್ಕೆತಾರೆಗಳನ್ನು
ಉಡಿತುಂಬ ತರುತೇನೆ ಅಂದ
ಸೊಕ್ಕಿನ ಚಂದ್ರನ ಸಭ್ಯನ ಮಾಡುವೆ
ಪಳಗಿಸುವೆ ದೇವರನೆಂದಾ ||ಹೋದಾ||[೩೩]

ಕಣ್ಣಿಗೆ ಬಣ್ಣಗಳನ್ನು ಹೊತ್ತುಕೊಂಡು ಬಿಸಿಲುಗುದುರೆಯನ್ನೇರಿ ಚಂದಮುತ್ತ ಬೆಳ್ಳಿಯ ಚಂದ್ರನನ್ನು ಅರಸುತ್ತಾ ಹೋಗುತ್ತಾನೆ. ಅಂಬರದಾಚೆಗಿನ ಸಂಬಂಧಗಳನ್ನು ಬೆಸೆಯಲು ಕೊಂಡಿಯಾಗುತ್ತಾನೆ. ನೆಲ-ಬಾನುಗಳ ಕರುಳು ಬಳ್ಳಿಯ ಸಂಬಂಧಗಳನ್ನು ಬೆಸೆಯಲು ಯಕ್ಷಿಗಾಗಿ ತಿಂಗಳುರಾಗದ ಸಾಧನೆಯಲ್ಲಿ ಸಾರ್ಥಕತೆಯನ್ನು ಪಡೆಯುತ್ತಾನೆ. ಬಾಹ್ಯಕ್ಕೆ ಶಿಲೆಯಾದರೂ, ಚಕೋರ ಪಕ್ಷಿಯಲ್ಲಿ ತನ್ನ ಆತ್ಮ ಅಂತರ್ಗತವಾಗುವುದರ ಮೂಲಕ ಎಲ್ಲೆಲ್ಲೂ ಸೇರಿ ಹೋಗುತ್ತಾನೆ. ಕಲೆ ಹಾಗೂ ಕಲಾಕಾರನಾದ ಬೆಳಕಿನ ಅವಧೂತದ ಕತೆ ಹೀಗೆ ಮಹತ್ವವನ್ನು ಪಡೆಯುತ್ತದೆ.

ಚಂದ್ರಮುತ್ತನ ಪಾತ್ರದ ಸುತ್ತ ಹೆಣೆದಿರುವ ಈ ಕತೆ ಕಲೆ ಹಾಗೂ ಕಲಾವಿದನ ಸಂಬಂಧಗಳ ಜಿಜ್ಞಾಸೆಯನ್ನು ವಿಶ್ಲೇಷಣೆಗೆ ಗುರಿಪಡಿಸುತ್ತದೆ. ಕಲಾವಿದನೊಬ್ಬ ಕಲಾಸಾಧನೆಯ ಮೆಟ್ಟಿಲುಗಳನ್ನು ಏರುವ, ಕಲೆಯನ್ನು ತನ್ನದಾಗಿಸಿಕೊಳ್ಳಲು ಎದುರಾಗುವ ಕಷ್ಟ ಪರಂಪರೆ, ದುಃಖ-ದುಮ್ಮಾನ, ದುರಂತಗಳು ಇಲ್ಲಿವೆ. ಕಲಾಸಾಧಕ ತನ್ನಲ್ಲಿರುವ ಅಸೂಯೆ, ಈರ್ಷ್ಯೆಗಳನ್ನು ಕಳಚಿಕೊಳ್ಳುತ್ತಲೇ ಅತ್ಯಂತ ಶ್ರದ್ಧಾಮುಖಿಯಾಗಿ ಬಲಿದಾನದಿಂದ ಕಲೆಯನ್ನು ಒಲಿಸಿಕೊಳ್ಳಬೇಕೆಂಬ ಧ್ವನಿ ಮತ್ತು ಆಶಯಗಳನ್ನು ಚಕೋರಿಯು ತನ್ನ ಕಥಾ ಹಂದರದಲ್ಲಿ ಇರಿಸಿಕೊಂಡಿದೆ.

ಕಲಾವಿದನಂತೆ ಕಲೆಯು ಹುಡುಕುತ್ತದೆ.
ತಕ್ಕವನನ್ನು

ಹಾಗೆ ಪರಸ್ಪರ ಹುಡುಕಿ ಪಡಕೊಂಡವರು
ನಾವು ನಿನ್ನನ್ನು
ನೀನು ನಮ್ಮನ್ನ''[೬೪]
ಕಲಿತುಕೋಬೇಕಪ್ಪ ಖಾಲಿಯಾಗುವುದನ್ನ
ಹಾಗೆಯೇ ಬೇರೊಂದು ಬೆಳಕು ನುಗ್ಗಿದಾಗ
ತುಂಬಿಕೊಳ್ಳೋದನ್ನ''[೬೫]

ದೇಸಿ ಪ್ರಜ್ಞೆ ಹಾಗೂ ಶಿಷ್ಟ ಪ್ರಜ್ಞೆ ಇವುಗಳ ಮುಖಾಮುಖಿಯ ಚಿಂತನೆ 'ಚಕೋರಿ'ಯ ಮೂಲನೆಲೆಯಾಗಿ ಪ್ರವೃತ್ತವಾಗಿದೆ. ಖಾಲಿಯಾಗುವುದು, ತುಂಬಿಕೊಳ್ಳುವುದು ದೇಸಿ ಮತ್ತು ಶಿಷ್ಟಗಳ ಬಗೆಗಿನ ಪ್ರಕ್ರಿಯೆಯನ್ನು ದಾಖಲಿಸಿದೆ.

ಚಕೋರಿಯಲ್ಲಿ ಕಲೆಯನ್ನು ಕುರಿತ ವಿಶ್ಲೇಷಣೆ ಕೃತಿಯ ಉದ್ದಕ್ಕೂ ನಡೆದಿದೆ. ಚಕೋರಿ ಕೃತಿಯ ಮುಖ್ಯ ಕಾಂಕ್ಷೆ ಅಂತಹ ರಾಗ-ರಚನೆಯ ಉದ್ದೇಶವು 'ಬರುವ ಜನ ಬಾಳಲೆಂದು ಬದುಕಲೆಂದು' ಎಂಬುದೇ ಆಗಿದೆ. ಇದೇ ವಿಚಾರಧಾರೆಯು ಚಕೋರಿಯ ಕೇಂದ್ರ ಆಶಯವೂ ಜಿಜ್ಞಾಸೆಯೂ ಆಗಿದೆ. ಕಲೆಯ ಬಗೆಗಿನ ಕನಸು, ಕಲಾಸಾಧಕನ ಬದುಕೂ ಸಹ ಕೃತಿಯ ಕೊನೆಯಲ್ಲಿ ಅಂಥ ಉದ್ದೇಶಕ್ಕೆ ಅರ್ಪಿತವಾಗುತ್ತದೆ. ಈ ಮುಖೇನ ದೇವರು, ಸೃಷ್ಟಿ, ಮನುಷ್ಯ, ಪ್ರಾಣಿ ಸಂಬಂಧದ ಅಂತರಗಳನ್ನು ತೊಡೆದು ಹಾಕುವ ಧ್ವನಿಯನ್ನೂ ಹೊರಡಿಸುತ್ತದೆ. ಲೋಕದ ಮೈಲಿಗೆಯನ್ನು ತೊಡೆದು ಬೆಳಕು ಮೂಡಿಸಿದ ಚಂದ್ರಶೇಖರನಾದ ಚಂದಮುತ್ತ ಕೊನೆಗೆ ಯಕ್ಷಿಯಲ್ಲಿಯೇ ಐಕ್ಯವಾಗುವುದರೊಂದಿಗೆ ನೆಲ-ಬಾನುಗಳ ಅಂತರವನ್ನೇ ಇಲ್ಲವಾಗಿಸುತ್ತಾನೆ. ಚಂದ್ರಮುತ್ತ ತಿಂಗಳುರಾಗವನ್ನು ಹಾಡುವುದರ ಮೂಲಕ ಯಕ್ಷಿಗೆ ಚೈತನ್ಯವನ್ನು ದೊರಕಿಸಿಕೊಡುತ್ತಾನೆ. ಕೃತಿಯಲ್ಲಿ ಈ ಸನ್ನಿವೇಶ ಅತ್ಯಂತ ಧ್ವನಿಪೂರ್ಣವಾದ, ಸಾಂಕೇತಿಕ ಭಾಗವೂ ಆಗಿದೆ. ಚಕೋರಿ ಚಕೋರಪಕ್ಷಿಯಾಗಿ ಆನಂದವು ಬೆಳೆವ ಶಿವ ಜಡೆಯಲ್ಲಿನ ಚಂದ್ರನ ಗುರಿಯಂತೆ ಹರಿಯುತ್ತ ಬಯಲು ನಿರ್ವಲಾಗುವ ಕ್ರಿಯೆ ಕಲೆ-ಕಲಾವಿದನ ಶಾಶ್ವತತೆಯನ್ನು, ಸಾರ್ಥಕತೆಯನ್ನೂ ಧ್ವನಿಸುತ್ತದೆ.

ನಮ್ಮ ರಾಜಕೀಯ, ಸಾಂಸ್ಕೃತಿಕ ಬದುಕು ಪಶ್ಚಿಮದ ಅನುಕರಣೆಗೆ ಮುಖಮಾಡಿರುವ ಈ ಸಂದರ್ಭದಲ್ಲಿ 'ಚಕೋರಿ'ಯಂಥ ಕೃತಿ ರಚನೆಗೆ ಕಂಬಾರ ಸಂವೇದನೆ ತೊಡಗಿರುವುದೇ ಒಂದು ವಿಸ್ಮಯ. ವಿಸ್ಮೃತಿಯ ಚರಿತ್ರೆಯೊಂದನ್ನು ಪುನರ್ ಸೃಷ್ಟಿಗೆ ಒಳಪಡಿಸುತ್ತಿರುವುದೇ, ಅಂಥ ಸಂಸ್ಕೃತಿಗೆ ಕಂಬಾರರು ತೋರಿದ ಬಹುದೊಡ್ಡ ಪ್ರತಿರೋಧ ಎನ್ನಬಹುದು. ಕೃತಿಯ ಆಶಯ, ವಸ್ತು, ತಂತ್ರಗಳ ಆಯ್ಕೆಯೇ ಪಶ್ಚಿಮದ ಅನುಕರಣ ಸಂಸ್ಕೃತಿಗೆ ಈ ಸಂವೇದನೆ ತೋರಿದ ಪ್ರತಿಕ್ರಿಯೆಯನ್ನು ಸ್ಪಷ್ಟಪಡಿಸುತ್ತದೆ.

ನಾಳೆ ಪಶ್ಚಿಮದಿಂದ ಬರುವ ಕಲಿಯುಗಕ್ಕೆ
ತಕ್ಕಡಿಯಲ್ಲಿ ತೂಗಿ ಈ ಸಂಗೀತ
ಮಾರಿಕೋ''[೬೬]

ಹೀಗಾಗಿ ಇಡೀ ಕೃತಿಯೇ ವಸಾಹತು ಸಂಸ್ಕೃತಿಗೆ ಪ್ರತಿರೋಧವಾಗಿ ಮೈದಾಳುತ್ತದೆ. ಆದ್ದರಿಂದ ಚಕೋರಿಯು ಪ್ರಿಯವಾಗಲು ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಈ ಕೃತಿ ಸಮಕಾಲೀನ ಸಮಸ್ಯೆಗಳಿಗೆ ಎದುರಾಗಿಸುವ ಪ್ರಕ್ರಿಯೆಯನ್ನು ಎಚ್.ಎಸ್.ಶಿವಪ್ರಕಾಶ್ ಅವರು ಸಮರ್ಥವಾಗಿ ಗುರುತಿಸಿದ್ದಾರೆ. ಅವರ ಮಾತುಗಳನ್ನು ಇಲ್ಲಿ ಉದ್ಧರಿಸುವುದು ಸೂಕ್ತ.

> ಸಮಕಾಲೀನ ಪ್ರಸ್ತುತತೆಯ ಸೋಗು ಅಥವಾ ಸ್ಲೋಗನ್ನುಗಳನ್ನು ಹಾಕದೆ ಕಂಬಾರರ 'ಚಕೋರಿ' ಒಂದು ದೊಡ್ಡ ಸಮಕಾಲೀನ ಅಗತ್ಯವನ್ನು ಪೂರೈಸುತ್ತದೆ. 'ಬಲ' ಬಲತ್ಕಾರದ ಸಂಸ್ಕೃತಿಯ ವಿರುದ್ಧ ಶಕ್ತಿ ಸಂಸ್ಕೃತಿಯ ಸಾರ್ಥಕತೆಯನ್ನು ಸರ್ವರ ಮನಸ್ಸು ಮುಟ್ಟುವ ಹಾಗೆ ಸ್ವಾರಸ್ಯವಾಗಿ ಅಭಿವ್ಯಕ್ತಿಸಿದೆ. ಈ ಅಭಿವ್ಯಕ್ತಿಯನ್ನು ಸಾಧಿಸಿರುವುದು ಸಮಕಾಲೀನ ಜಗತ್ತಿನಲ್ಲಾಗಲೀ ಅಥವಾ ಸಮಕಾಲೀನ ಜಗತ್ತಿನ ನಿರ್ಮಾತೃ ಪ್ರತಿನಿರ್ಮಾತೃಗಳು ತಯಾರಿಸಿರುವ ಭವಿಷ್ಯದ ನೀಲನಕಾಶೆಗಳಲ್ಲಿ ಇಲ್ಲದ 'ಅಂದಿಂಗೆ ಹಳೆಯ'ವಾದರೂ 'ಇಂದಿಂಗೆ ಎಳೆಯ'ವಾಗಿರುವ ಕನಸಿನ ಮೂಲಕ.... ವ್ಯಕ್ತಿಗಳ ಮತ್ತು ಸಮಾಜಗಳ ಕಾರ್ಪಣ್ಯಗಳು ವ್ಯವಸ್ಥೆಯಿಂದ ಮಾತ್ರ ಹೇರಲ್ಪಟ್ಟವಲ್ಲ. ಜೀವಗಳ ಜಾತಕದಲ್ಲೇ ಅವು ಅಂತರ್ಗತ. ಅವು ಆದಿಮೂಲ ಜೀವಿಯಾದ ಶಿವನಿಂದಲೇ ಶುರುವಾಗುವಂಥವು..... ಈ ಎಲ್ಲ ಕಾರ್ಪಣ್ಯಗಳ ಮಧ್ಯೆ ದ್ವಂದ್ವಗಳನ್ನು ಬಾಳುತ್ತಲೇ ಅಖಂಡತ್ವವನ್ನು ಕಲೆಯ ಮೂಲಕ ಅನುಭವಿಸಬಹುದೆನ್ನುವುದನ್ನು 'ಚಕೋರಿ'ಯ ಕಥಾನಾಯಕ ತನ್ನ ಬದುಕು ಮತ್ತು ಸಾವುಗಳಲ್ಲಿ ತೋರುತ್ತಾನೆ.[೬೭]

ಈ ಮೇಲಿನ ಉದ್ಧರಣೆಯು ಬಲತ್ಕಾರದ ಬಗೆಗೆ ಹೊಸ ವ್ಯಾಖ್ಯೆಯನ್ನೇ ಮುಂದಿಡುತ್ತದೆ. ಆಕ್ರಮಣಶೀಲ ಸಂಸ್ಕೃತಿಯ ಹಲವು ಮುಖಗಳು ಇಲ್ಲಿ ದಾಖಲಾಗಿವೆ.

> ಇದು ಜಗದ ಖಾಲಿಗಳನ್ನು ಹಾಡುಗಳಿಂದ
> ತುಂಬಿದವನ ಕಥೆ,
> ಸ್ಮಶಾನದಲ್ಲಿ ಮೈಮರೆತು ಕುಂತಿದ್ದ ಶಿವ
> ಮರೆತ ಹೆಜ್ಜೆಯ ಹಾಕಿ ಮತ್ತೆ ಕುಣಿಯುವಂತೆ
> ಮಾಡಿದವನ ಕಥೆ,
> ಕಿವಿಗಳ ಕಿಲುಬು ತೊಳೆದು
> ಹೃದಯದ ಯಾವುದಾದರು ಮೂಲೆಯಲ್ಲಿ
> ಒಂದೆರಡು ಕನಸು ಮಲಗಿದ್ದರೆ ಎಚ್ಚರಿಸಿರಯ್ಯಾ
> ನಮ್ಮ ಹಾಡು ಕೇಳುವುದಕ್ಕೆ[೬೮]

ಮನುಷ್ಯನ ಕನಸು, ಕನಸಿನಿಂದ ಕಟ್ಟಿಕೊಳ್ಳುವ ಜವಾಬ್ದಾರಿಗಳು, ಅವುಗಳ ಅಧಃಪತನಗಳ ಕಾಣ್ಕೆಯನ್ನು ಅತ್ಯಂತ ಆಳ ಮತ್ತು ವಿಶಾಲವಾದ ಭಿತ್ತಿಯಲ್ಲಿ ಕನಸುಗಳು ಇಲ್ಲಿ ಕಥೆ ಹೇಳುತ್ತವೆ. ಕನಸುಗಳೇ ಕಥೆ ಹೇಳುವ ಚಕೋರಿಯ ತಂತ್ರ ಸಂಕೀರ್ಣ ವಿಚಾರಧಾರೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಕಟಪಡಿಸಲು ಸಹಾಯಕವಾಗಿದೆ. ಕಂಬಾರರ ಸಂವೇದನೆ ಕಂಡುಕೊಂಡಿರುವ ಈ ತಂತ್ರ ಕನ್ನಡ ಕಾವ್ಯ ಜಗತ್ತಿಗೆ ವಿಶಿಷ್ಟ ಮಾದರಿಯಾಗಿದೆ. ಕಾಲ, ದೇಶ, ವಯಸ್ಸು, ಮನಸ್ಸುಗಳ ಅಂತರಗಳನ್ನು ಮೀರಿ, ಆದಿಮಕಾಲದಿಂದ ಉಳಿದು ಬಂದಿರುವ ಕನಸುಗಳು ಚಕೋರಿಯ ಎಲ್ಲ ಪಾತ್ರ,

ಸನ್ನಿವೇಶಗಳ ಒಳ-ಹೊರ ಪ್ರಪಂಚವನ್ನು ಓದುಗನಿಗೆ ಪರಿಚಯಿಸುವ ಸ್ನೇಹಿತನಂತೆ ಆತ್ಮೀಯವಾಗಿವೆ. ಆ ಮೂಲಕ ಲೋಕ-ಲೋಕಾಂತರಗಳ ಬದುಕನ್ನೇ ನಮಗೆ ಪರಿಚಯಸುತ್ತವೆ. ಹಾಗೆಯೇ ನಾಟಕದಲ್ಲಿನ ಸೂತ್ರಧಾರನಂತೆ ಮತ್ತೆ ಮತ್ತೆ ಕನಸುಗಳು ಪಾತ್ರಗಳಾಗಿ ಮೈದಾಳುವ ಕ್ರಿಯೆ ಅನನ್ಯವಾದುದು. ಈ ಎಲ್ಲಾ ಗುಣಗಳನ್ನು ಒಳಗೊಂಡಿರುವ ಚಕೋರಿ ಆಧುನಿಕ ಮಾನವನ ಕಲ್ಪನೆ, ವಿಚಾರಗಳನ್ನೇ ಮೂಲಭೂತವಾಗಿ ಪ್ರಶ್ನಿಸುವ, ಬದಲಾಯಿಸುವ ಶಕ್ತಿಯನ್ನು ತನ್ನಲ್ಲಿರಿಸಿಕೊಂಡಿದೆ.

## ಅಡಿಟಿಪ್ಪಣಿ

೧. ಗೋಪಾಲಕೃಷ್ಣ ಅಡಿಗ, *ಕಂಬಾರರ ಕಾವ್ಯ: ಕೆಲವು ಅಧ್ಯಯನಗಳು*, (ಸಂ) ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೪, ಪುಟ-೨

೨. ಡಿ.ಆರ್. ನಾಗರಾಜ್, *ಶಕ್ತಿ-ಶಾರದೆಯ ಮೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೩, ಪುಟ-೨೩೭

೩. ಪಿ.ಲಂಕೇಶ, *ಕಂಬಾರರ ಕಾವ್ಯ: ಕೆಲವು ಅಧ್ಯಯನಗಳು*, (ಸಂ) ಟಿ.ಪಿ.ಅಶೋಕ,ಕರ್ನಾಟಕ ಸಂಘ,ಪುತ್ತೂರು, ೧೯೯೪, ಪುಟ-೬೩

೪. ಚಂದ್ರಶೇಖರ ಕಂಬಾರ, *ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೬೮, ಪುಟ-೨೭,೨೮

೫. ಡಿ.ಆರ್. ನಾಗರಾಜ್, *ಕಂಬಾರರ ಕಾವ್ಯ: ಕೆಲವು ಅಧ್ಯಯನಗಳು*, (ಸಂ) ಟಿ.ಪಿ. ಅಶೋಕ್, ಕರ್ನಾಟಕ ಸಂಘ, ಪುತ್ತೂರು-೫೭೪೨೦೧, ದ|| ಕನ್ನಡ, ಮೊದಲ ಮುದ್ರಣ ೧೯೯೪, ಪುಟ-೭೬

೬. ಚಂದ್ರಶೇಖರ ಕಂಬಾರ, *ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೬೮, ಪುಟ-೩೪

೭. ಅದೇ ಪುಟ-೩೬

೮. ಅದೇ ಪುಟ-೩೯

೯. ಅದೇ ಪುಟ-೪೦

೧೦. ಅದೇ ಪುಟ-೪೧

೧೧. ಅದೇ ಪುಟ-೪೧

೧೨. ಅದೇ ಪುಟ-೪೫

೧೩. ಡಿ.ಆರ್.ನಾಗರಾಜ್, *ಶಕ್ತಿ ಶಾರದೆಯ ಮೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೩, ಪುಟ-೨೪೦

೧೪. ಚಂದ್ರಶೇಖರ ಕಂಬಾರ, *ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೬೮, ಪುಟ-೬೬, ೬೭

೧೫. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೧೯

೧೬. ಡಿ.ಆರ್.ನಾಗರಾಜ, *ಕಂಬಾರರ ಕಾವ್ಯ: ಕೆಲವು ಅಧ್ಯಯನಗಳು*,(ಸಂ)ಟಿ.ಪಿ.ಅಶೋಕ,ಕರ್ನಾಟಕ ಸಂಘ,ಪುತ್ತೂರು,೧೯೯೪, ಪುಟ-೧೧೪

೧೭. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೧೦

೧೮. ಚಂದ್ರಶೇಖರ ಕಂಬಾರ, *ಬೆಪ್ಪು ತಕ್ಕಡಿ ಬೋಳೇ ಶಂಕರ*(ನಾಟಕ), ಅಕ್ಷರ ಪ್ರಕಾಶನ, ಸಾಗರ, ೧೯೯೨, ಪುಟ-೪.

೧೯. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೯೭

೨೦. ಟಿ.ಪಿ. ಅಶೋಕ, *ಕಂಬಾರರ ಕಾವ್ಯ ಕೆಲವು ಅಧ್ಯಯನಗಳು*, ಕರ್ನಾಟಕ ಸಂಘ, ಪುತ್ತೂರು, ೧೯೯೪, ಪುಟ-೧೨೦

೨೧. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೮೦

೨೨. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೮೧

೨೩. ಪಿ.ಲಂಕೇಶ, *ಕಂಬಾರರ ಕಾವ್ಯ: ಕೆಲವು ಅಧ್ಯಯನಗಳು*,(ಸಂ)ಟಿ.ಪಿ.ಅಶೋಕ,ಕರ್ನಾಟಕ ಸಂಘ, ಪುತ್ತೂರು,೧೯೯೪,ಪುಟ-೬೦.

೨೪. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೨೦

೨೫. ಅದೇ ಪುಟ-೧೨೬

೨೬. ಅದೇ ಪುಟ-೧೨೬, ೧೨೭

೨೭. ಕುವೆಂಪು, *ಕೋಗಿಲೆ ಮತ್ತು ಸೋವಿಯಟ್ ರಷ್ಯಾ*, ಉದಯರವಿ ಪ್ರಕಾಶನ, ೧೯೫೪, ಪುಟ-೫

೨೮. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೮೫

೨೯. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೮೬

೩೦. ಚಂದ್ರಶೇಖರ ಕಂಬಾರ, *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪, ಪುಟ-೧೮೬, ೧೮೭

೩೧. ಓ.ಎಲ್. ನಾಗಭೂಷಣ ಸ್ವಾಮಿ, *ಕಂಬಾರರ ಕಾವ್ಯ: ಕೆಲವು ಅಧ್ಯಯನಗಳು*, ಪುಟ-೧೩೭-೧೩೮

೩೨. ಚಂದ್ರಶೇಖರ ಕಂಬಾರ, *ಚಕೋರಿ*, ಅಕ್ಷರ ಪ್ರಕಾಶನ, ಸಾಗರ, ೧೯೯೬, ಪುಟ-೧೭೧

೩೩. ಅದೇ ಪುಟ-೧೪೯

೩೪. ಅದೇ ಪುಟ-೮೧

೩೫. ಅದೇ ಪುಟ-೫೭

೩೬. ಅದೇ ಪುಟ-೫೧

೩೭. ಎಚ್.ಎಸ್. ಶಿವಪ್ರಕಾಶ, ಅದೇ, ಮುನ್ನುಡಿ

೩೮. ಚಂದ್ರಶೇಖರ ಕಂಬಾರ, *ಚಕೋರಿ*, ಅಕ್ಷರ ಪ್ರಕಾಶನ, ಸಾಗರ, ೧೯೯೬, ಪುಟ-೧೪೫

# ಸಮಾರೋಪ

‘ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ’ ಎಂಬ ವಿಷಯವನ್ನು ಕವಿಗಳಾದ ಬೇಂದ್ರೆ, ಕುವೆಂಪು, ಎಂ. ಗೋಪಾಲಕೃಷ್ಣ ಅಡಿಗ ಮತ್ತು ಕಂಬಾರರ ಕಾವ್ಯವನ್ನು ಕೇಂದ್ರವಾಗಿಸಿಕೊಂಡು ಮುಖ್ಯವಾಗಿ ಇಲ್ಲಿ ವಿಶ್ಲೇಷಣೆಗೆ ತೊಡಗಿಸಿಕೊಳ್ಳಲಾಗಿದೆ. ಕನ್ನಡ ವಿಮರ್ಶಾಕ್ಷೇತ್ರದಲ್ಲಿ ವಸಾಹತುಸಂಸ್ಕೃತಿಯನ್ನು ಕುರಿತ ಚರ್ಚೆ ಈಗಾಗಲೇ ಹಲವು ದಿಕ್ಕುಗಳಲ್ಲಿ ನಡೆದಿದೆಯಾದರೂ ಇದೇ ಕೇಂದ್ರವಾಗಿ ಹೆಚ್ಚು ಚರ್ಚೆ ನಡೆದಿಲ್ಲ. ಈ ಪ್ರಬಂಧದಲ್ಲಿ ನಾಲ್ವರು ಆಧುನಿಕ ಕನ್ನಡ ಕವಿಗಳ ಕಾವ್ಯ ಹಾಗೂ ನವೋದಯ ಪೂರ್ವದ ಕಾವ್ಯವು ವಸಾಹತು ಸಂಸ್ಕೃತಿಗೆ ಮುಖಾಮುಖಿಯಾದ ಬಗೆಯನ್ನು ವಿವೇಚನೆಗೆ ಗುರಿಪಡಿಸಲಾಗಿದೆ. ಹೀಗಾಗಿ ಈ ಅಧ್ಯಯನ ಹೊಸಚಿಂತನೆಯಿಂದ ಕೂಡಿದೆ ಎಂದು ಭಾವಿಸಲಾಗಿದೆ.

ಬೇಂದ್ರೆ, ಕುವೆಂಪು, ಗೋಪಾಲಕೃಷ್ಣ ಅಡಿಗ ಮತ್ತು ಚಂದ್ರಶೇಖರ ಕಂಬಾರ ಇವರುಗಳ ಕಾವ್ಯದ ಮೇಲೆ ಈ ವಿಷಯವನ್ನು ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಸಾಧ್ಯವಿದೆ. ಈ ಕವಿಗಳ ಕಾವ್ಯವನ್ನು ಅಧ್ಯಯನ ಮಾಡುತ್ತ ಹೋದಂತೆಲ್ಲ ಅವರ ಕಾವ್ಯದಲ್ಲಿ ಈ ವಸ್ತುವಿನ ವಿಭಿನ್ನ ಸಾಧ್ಯತೆಗಳ ನೆಲೆಗಳು ಎದುರಾದವು. ಆದ್ದರಿಂದ ಮೇಲೆ ಹೇಳಿದ ಕವಿಗಳ ನಿರ್ದಿಷ್ಟ ಕೃತಿಗಳನ್ನು ಮಾತ್ರ ಈ ಮಹಾಪ್ರಬಂಧದಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ. ಇದೇ ಅಧ್ಯಯನದ ನೆಲೆಯನ್ನು ಕನ್ನಡದ ಇನ್ನಿತರ ಕವಿಗಳ ಕಾವ್ಯ ಸಮುದಾಯದ ಅಧ್ಯಯನಕ್ಕೂ ವಿಸ್ತರಿಸಬಹುದಾಗಿದೆ.

ಕನ್ನಡ ಕಾವ್ಯವು ಪರಕೀಯ ಸಂಸ್ಕೃತಿಯೊಂದಿಗೆ ಸಂಘರ್ಷಿಸುತ್ತಲೇ ಅದರ ಉನ್ನತ ಸತ್ವಗಳನ್ನು ತನ್ನದಾಗಿಸಿಕೊಳ್ಳುತ್ತ ತನ್ನ ಜೀವಂತಿಕೆಯನ್ನು, ಅಸ್ಮಿತೆಯನ್ನು ಅಭಿವ್ಯಕ್ತಿಸುತ್ತ ಬಂದಿರುವುದು ನಮ್ಮ ಸಾಹಿತ್ಯಕ ಸಂಸ್ಕೃತಿಯ ವಿಶಿಷ್ಟತೆಯಾಗಿದೆ. ಪರಕೀಯ ಸಂಸ್ಕೃತಿಯ ದಮನಕಾರಿ ನೆಲೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ ಅಂಶ ಕನ್ನಡ

ಕಾವ್ಯದ ಮಹತ್ವದ ಅಂಶವಾಗಿದೆ. ಇದರಲ್ಲಿ ಪ್ರತಿಭಟನೆ, ಅನುಸಂಧಾನ, ಅಂತರ್‌ಸಂಬಂಧವೇ ಮೊದಲಾದ ನೆಲೆಗಳಿವೆ. ಸಂಸ್ಕೃತಿಯ ಅಸ್ತಿತ್ವಕ್ಕೆ, ಅದರ ಅನನ್ಯತೆಗೆ ಅನ್ಯಸಂಸ್ಕೃತಿಯೊಂದು ಧಕ್ಕೆ ತಂದ ಸಂದರ್ಭಗಳಲ್ಲಿ ಉಂಟಾಗುವ ವಿಭಿನ್ನ ಬಗೆಯ ಪ್ರತಿರೋಧಗಳು ಈ ಕವಿಗಳ ಕಾವ್ಯದಲ್ಲಿ ಪಡೆದುಕೊಂಡ ಹಲವು ಆಯಾಮಗಳ ಸ್ವರೂಪವನ್ನು ಕುರಿತು ಇಲ್ಲಿ ಚಿಂತಿಸಲಾಗಿದೆ.

ವಸಾಹತು ಸಂಸ್ಕೃತಿಯು ಭಾರತೀಯ ಸಂದರ್ಭದಲ್ಲಿ ಅನೇಕ ಸಂಕೀರ್ಣ ಅವಸ್ಥೆಗಳನ್ನು ಹುಟ್ಟು ಹಾಕಿತು. ಅದಕ್ಕೆ ಭಾರತೀಯ ಸಂವೇದನೆಯು ತೋರಿದ ಪ್ರತಿಕ್ರಿಯೆಗಳನ್ನು ಕುರಿತು ಆರಂಭದ ಅಧ್ಯಾಯಗಳಲ್ಲಿ ಪರಾಮರ್ಶಿಸಲಾಗಿದೆ. ಆ ಕಾಲಮಾನದಲ್ಲಿ ಪರಕೀಯ ಸಂಸ್ಕೃತಿಯೊಂದಿಗೆ ನಮ್ಮ ಸಂಸ್ಕೃತಿಯು ರಾಷ್ಟ್ರಮಟ್ಟದಲ್ಲಿ ನಡೆಸಿದ ತಾತ್ತ್ವಿಕ ವಾಗ್ವಾದಗಳು ಹಾಗೂ ಪ್ರಶ್ನೆಗಳು ಯಾವ ಬಗೆಯವು ಎಂಬುದನ್ನು ಅಲ್ಲಿ ಗಮನಿಸಲಾಗಿದೆ.

ನವೋದಯ ಪೂರ್ವ ಕನ್ನಡ ಸಂದರ್ಭದಲ್ಲಿ ಹೊಸಸಂಸ್ಕೃತಿಯೊಂದರ ಆಗಮನದಿಂದ ಏರ್ಪಟ್ಟ ದ್ವಂದ್ವಗಳು, ಆತಂಕಗಳೂ ಅನೇಕ. ಅಂಥ ಆತಂಕಗಳಿಂದ ನಿರ್ಮಾಣವಾದ ಪರಿಸರವನ್ನು ಕನ್ನಡ ರಾಜಕೀಯ ಹಾಗೂ ಸಾಂಸ್ಕೃತಿಕ ಪರಿಸರ ಅನುಭವಿಸಿದ ಬಗೆಯನ್ನು ಕುರಿತು ಆ ಕಾಲಮಾನದಲ್ಲಿ ಸೃಷ್ಟಿಯಾಗಿರುವ ಮೌಖಿಕ ಹಾಗೂ ಲಿಖಿತ ಬರಹಗಳು ಗಂಭೀರವಾದ ತಾತ್ತ್ವಿಕತೆಯನ್ನೇ ಸೃಷ್ಟಿಸಿತು. ಈ ತಾತ್ತ್ವಿಕತೆಯ ನೆಲೆಗಳೂ ಈ ಹೊತ್ತಿನ ಸಂದರ್ಭದ ನಮ್ಮ ಅನೇಕ ಪ್ರಶ್ನೆಗಳಿಗೆ ತಕ್ಕ ಗಂಭೀರ ನೆಲೆಯನ್ನು ಸೃಷ್ಟಿಸಿಕೊಡುತ್ತಿದೆ ಕೂಡಾ. ಕನ್ನಡ ನವೋದಯದ ಸಂದರ್ಭದಲ್ಲಿ ಮತ್ತು ಆನಂತರ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಿರುವ ರವೀಂದ್ರನಾಥ ಠಾಕೂರ್, ಬಂಕಿಮಚಂದ್ರ, ಶರಶ್ಚಂದ್ರರಂಥ ಮಹಾನ್ ಲೇಖಕರ ಕೃತಿಗಳ ಅಧ್ಯಯನ ಹಾಗೂ ನಮ್ಮ ಸಾಹಿತ್ಯ ಸೃಷ್ಟಿ ಇವುಗಳ ಅಧ್ಯಯನ ಈ ದಿಶೆಯಲ್ಲಿ ಹೊಸ ಬೆಳಕನ್ನು ಚೆಲ್ಲುತ್ತದೆ. ರಾಷ್ಟ್ರವ್ಯಾಪಿ ವಸಾಹತು ಸಂಸ್ಕೃತಿಯೊಂದಿಗೆ ಅನುಸಂಧಾನಗೈದ ದೇಶೀ ಸಂಸ್ಕೃತಿಯ ಪ್ರಭಾವ-ಪರಿಣಾಮಗಳ ನೆಲೆ ನಿರ್ದಿಷ್ಟ ಭಾಷಾ ಸಂಸ್ಕೃತಿಯ ಸಂದರ್ಭದಲ್ಲಿ ತಳೆದ ವಿಶಿಷ್ಟತೆಯನ್ನು ಕುರಿತ ಅಧ್ಯಯನ ಕೂಡ ಈ ಪ್ರಬಂಧದ ರಚನೆಯಲ್ಲಿ ಮೈಗೂಡಿದೆ.

ಬೇಂದ್ರೆ ಮತ್ತು ಕುವೆಂಪು ಅವರ ಕಾವ್ಯ ಏಕಕಾಲಕ್ಕೆ ಪುರೋಹಿತ ಹಾಗೂ ವಸಾಹತುಶಾಹಿ ಸಂಸ್ಕೃತಿಯ ಅಮಾನವೀಯ ನೆಲೆಗಳನ್ನು ವಿಮರ್ಶಿಸುತ್ತವೆ. ಹೊಸ ಸಂಸ್ಕೃತಿಯೊಂದರ ಜೊತೆ ಸಂಘರ್ಷದಿಂದ ಎದುರಾದ ಎಲ್ಲ ಮಟ್ಟದ ಪ್ರೇರಣೆ, ಪ್ರಭಾವ, ಅನುಸಂಧಾನ, ಅಭಿವ್ಯಕ್ತಿ ಈ ಎಲ್ಲ ನೆಲೆಗಳಲ್ಲಿ ಇವರ ಕಾವ್ಯ ಸೃಷ್ಟಿಯು ಪ್ರಕಟಗೊಳ್ಳುತ್ತದೆ. ರಾಷ್ಟ್ರೀಯತೆ, ಕರ್ನಾಟಕತ್ವದ ಕಲ್ಪನೆ, ಕನ್ನಡದ ಅನನ್ಯತೆಯ ಪ್ರಶ್ನೆಗಳು, ಪಾರಂಪರಿಕ ನಂಬಿಕೆಗಳಿಗೆ ಎದುರಾದ ಬಗೆ, ಹಸಿವು-ಅನ್ನ, ಬಡವ-ಬಲ್ಲಿದ, ನೆಲ-ಮನುಷ್ಯನ ಸಂಬಂಧಗಳು, ಗಂಡು-ಹೆಣ್ಣುಗಳ ಪ್ರೀತಿ, ಪ್ರೇಮ, ರಾಜಕಾರಣ, ಧರ್ಮ-ಹೀಗೆ ಹಲವು ಹತ್ತು ನೆಲೆಗಳಲ್ಲಿ ಹೊಸ ಸಂಸ್ಕೃತಿಯೊಂದರ ಸಂಘರ್ಷದ ಅಯಾಮಗಳು ಪ್ರಕಟವಾಗುತ್ತವೆ. ಇಂಥ ಪ್ರತಿರೋಧದ ಆಯಾಮಗಳು ಬೇಂದ್ರೆ, ಕುವೆಂಪು ಅವರಲ್ಲಿ ಹೇಗೆ ಭಿನ್ನ ಅಭಿವ್ಯಕ್ತಿ ಸ್ವರೂಪವನ್ನು ಪಡೆಯುತ್ತವೆಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಎಚ್ಚರಗೊಳಿಸುವ ಹಾಗೂ ಸಮಕಾಲೀನ ಹೋರಾಟಗಳಿಗೆ ಮೈಗೊಡುವ ಜವಾಬ್ದಾರಿಯು ಕನ್ನಡ ಸಂವೇದನೆಯ ಮುಖ್ಯ ಆಶಯವಾಗಿತ್ತೆಂಬುದನ್ನು ಇವರ ಕಾವ್ಯಾಧ್ಯಯನದಿಂದ ಗ್ರಹಿಸಬಹುದಾಗಿದೆ. ಯುದ್ಧಗಳು ನಿರ್ಮಾಣ ಮಾಡಿದ ಕ್ರೌರ್ಯವನ್ನು ಎಂದಿನಿಂದಲೂ ಕನ್ನಡಕಾವ್ಯ ವಿರೋಧಿಸಿದೆ. ಅಂಥ ವಿರೋಧ ಸ್ವಾತಂತ್ರ್ಯ ಪೂರ್ವ ಮತ್ತು ಆನಂತರದ ಕಾವ್ಯದಲ್ಲಿಯೂ ಮುಖ್ಯ ನೆಲೆಯಾಗಿ ಚಿಂತಿತವಾಗಿದೆ. ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯವು ಇಂಥ ಯುದ್ಧದ ಕ್ರೌರ್ಯಗಳನ್ನು ಕುರಿತು ಗಾಢವಾಗಿಯೆ ಚಿಂತಿಸುತ್ತದೆ.

ವಸಾಹತುಸಂಸ್ಕೃತಿಯ ಆಗಮನದಿಂದ ತಲೆಯೆತ್ತಿದ ನಗರ-ಗ್ರಾಮ ಸಂಸ್ಕೃತಿಗಳ ಪ್ರಶ್ನೆ ಈ ಕವಿಗಳಲ್ಲಿ ವಿಭಿನ್ನ ಬಗೆಗಳಲ್ಲಿ ಜಿಜ್ಞಾಸೆಗೊಳಗಾಗುತ್ತದೆ. ಗಾಂಧೀಜಿಯವರ ವಿಚಾರಧಾರೆಗಳು ಇವರ ಕಾವ್ಯದ ಮೇಲೆ ಗಾಢವಾಗಿದ್ದರೂ, ಅವರು ತಾವು ಕಂಡುಂಡ ನಗರದ ಬವಣೆಗಳನ್ನು, ಅಲ್ಲಿ ಹುಟ್ಟಿದ ಅನಾಥಪ್ರಜ್ಞೆಯನ್ನು ಸಂಸ್ಕೃತಿ ವಿಶಿಷ್ಟ ನೆಲೆಯಲ್ಲಿ ಪರಿಶೀಲಿಸಿದ್ದಾರೆ.

ಸ್ವಾತಂತ್ರ್ಯ ನಂತರದಲ್ಲಿ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳು ಅಪಮೌಲ್ಯಗೊಂಡದ್ದರ ಬಗೆಗೆ ಅಡಿಗರ ಕಾವ್ಯ ತೀವ್ರವಾಗಿ ಪ್ರತಿಭಟಿಸುತ್ತದೆ. ಅಂತೆಯೆ ಭೂತ-ವರ್ತಮಾನಗಳ ತಾಕಲಾಟವು ಇವರ ಕಾವ್ಯದ ಬಹುಮುಖ್ಯ ನೆಲೆಯಾಗಿದೆ. ಪರಂಪರಾಗತ ಅರ್ಥರಹಿತ ಮೌಲ್ಯಗಳಿಗೆ ಅಡಿಗರ ಕಾವ್ಯ ಗಂಭೀರವಾಗಿ ವಿಶ್ಲೇಷಿಸುತ್ತದೆ. ಹಾಗೆಯೇ ನವವಸಾಹಾತುಸಂಸ್ಕೃತಿಯ ಪ್ರಭಾವದಿಂದ ಗೊಂದಲಗೊಂಡ ಬದುಕನ್ನು ಅಡಿಗರ ಕಾವ್ಯ ಬಹುಮುಖ್ಯ ಆಯಾಮವಾಗಿ ಚಿಂತಿಸಿದ ಬಗೆಯನ್ನು ಈ ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಕನ್ನಡ ವಿಮರ್ಶೆಯಲ್ಲಿ ಇಂಥ ವಸ್ತುವನ್ನು ಕುರಿತು ಅಲ್ಲಲ್ಲಿ ಟಿಪ್ಪಣಿಗಳು ಪ್ರಕಟವಾಗಿದ್ದರೂ ಒಂದು ತಾತ್ತ್ವಿಕತೆಯ ಹಿನ್ನೆಲೆಯಲ್ಲಿ ಇಲ್ಲಿ ಚರ್ಚೆಯನ್ನು ಮಂಡಿಸಲು ಪ್ರಯತ್ನಿಸಲಾಗಿದೆ. ಅಡಿಗರ ಸಮಕಾಲೀನ ರಾಜಕೀಯ ಜಿಜ್ಞಾಸೆಯನ್ನು ಇಂಥ ತಾತ್ತ್ವಿಕ ಚರ್ಚೆಯ ಮೂಲಕ ಗುರುತಿಸಬಹುದಾಗಿದೆ.

ಕಂಬಾರರ ಕಾವ್ಯ ಸಮಕಾಲೀನ ಸಾಂಸ್ಕೃತಿಕ ಒತ್ತಡಗಳನ್ನು ಸಾಕಾರಗೊಳಿಸುವ ಬಗೆ ಹಾಗೂ ವಸಾಹತು ಸಂಸ್ಕೃತಿಯ ಪರಿಣಾಮವಾಗಿ ಗ್ರಾಮಜೀವನದ ವಿಘಟನೆಯಿಂದ ಉಂಟಾದ ದುರ್ದಸೆಗಳನ್ನು ಅಭಿವ್ಯಕ್ತಿಗೆ ಗುರಿಪಡಿಸುವ ಕಾವ್ಯವಾಗಿದೆ. 'ಶಿವಾಪುರ'ದ ನವ ಪುರಾಣಪ್ರತಿಮೆಯ ಕಲ್ಪನೆಯೊಂದಿಗೆ ಭಾರತದ ಎಲ್ಲ ಗ್ರಾಮಗಳ ವಿಘಟನಾತ್ಮಕ ತಳಮಳಗಳನ್ನು ಶೋಧಿಸಿಕೊಳ್ಳಲು ಹವಣಿಸುವ ಕಾವ್ಯ ಕಂಬಾರರದು. 'ಹೇಳತೇನ ಕೇಳ' ಎಂಬ ಲಾವಣಿಯಲ್ಲಿ ಕಲ್ಪನೆಗೊಂಡ 'ಶಿವಾಪುರ' ಅವರ ಇತ್ತೀಚಿನ ಮಹಾಕಾವ್ಯ 'ಚಕೋರಿ'ಯವರೆಗೂ ವಿಭಿನ್ನ ಮಟ್ಟಗಳಲ್ಲಿ ವಿಸ್ತರಿಸಿಸುತ್ತಲೆ ಮೈಪಡೆಯುತ್ತದೆ. ನಗರ ಸಂಸ್ಕೃತಿಯ ಆಗಮನದಿಂದ ಗ್ರಾಮೀಣಸಂಸ್ಕೃತಿ ಭಗ್ನಗೊಂಡ ಸ್ಥಿತಿಗತಿಗಳನ್ನು ದೇಸೀ ಸಂಸ್ಕೃತಿಯ ಪ್ರಾಣಸತ್ವಗಳನ್ನು ಕಂಬಾರರ ಕಾವ್ಯ ಅನ್ವೇಷಿಸತೊಡಗುತ್ತದೆ. ಇಂಥ ಅನ್ವೇಷಣೆಗಳಿಂದಲೆ, ಗ್ರಾಮಸಂಸ್ಕೃತಿಯ ಮೇಲಿನ ನಗರ ರಾಕ್ಷಸನ ಆಕ್ರಮಣಶೀಲತೆಯ ನೆಲೆಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ವಸಾಹತುಶಾಹಿ ಪರಿಣಾಮವನ್ನು ಸಾಹಿತ್ಯಕಸಂಸ್ಕೃತಿ ಗ್ರಹಿಸಿಕೊಂಡ ಕ್ರಮವನ್ನು ಹಾಗೂ ಅದಕ್ಕೆ ಪರ್ಯಾಯವಾಗಿ ಸ್ವಎಚ್ಚರವನ್ನು ಪ್ರತಿಪಾದಿಸಿದ ಅಭಿವ್ಯಕ್ತಿ ನೆಲೆಗಳನ್ನು ಕುರಿತು ವಿಶ್ಲೇಷಿಸುವ ಉದ್ದೇಶ ಈ ಪ್ರಬಂಧದ್ದಾಗಿದೆ. ಸ್ವಎಚ್ಚರದ ಕಲ್ಪನೆಯನ್ನು ಎರಡು ದಿಕ್ಕುಗಳಲ್ಲಿ ಪರಿಶೀಲಿಸಲಾಗಿದೆ. ನಮ್ಮ ಸಂಸ್ಕೃತಿಯ ಪರಂಪರೆಯ ನೆಲೆಗಳನ್ನು ವಸಾಹತುಶಾಹಿ ಸಂಸ್ಕೃತಿಯ ಭಗ್ನಗೊಳಿಸಿದ ಅಂಶವಾದರೆ ಇದೇ ಧಾತುಗಳನ್ನು ಕನ್ನಡ ಕವಿಗಳು ತಮ್ಮ ಕಾವ್ಯದಲ್ಲಿ ಪುನರ್‌ವ್ಯಾಖ್ಯಾನಕ್ಕೆ ಒಡ್ಡಿದರು ಎಂಬುದನ್ನು ಅವರ ಕೃತಿಗಳ ಮೂಲಕ ಪರಿಶೀಲಿಸುವುದು ಈ ಪ್ರಬಂಧದ ಮುಖ್ಯ ಆಶಯಗಳಲ್ಲಿ ಒಂದಾಗಿದೆ.

ಈ ಮಹಾಪ್ರಬಂಧದಲ್ಲಿ ಇಂಥ ಒಂದೇ ವಸ್ತುವನ್ನು ಬೇಂದ್ರೆ, ಕುವೆಂಪು, ಅಡಿಗ ಹಾಗೂ ಕಂಬಾರ ಇವರುಗಳು ನಿರ್ವಹಿಸುವ ಬಗೆಗಳನ್ನು ಚರ್ಚಿಸಲಾಗಿದೆ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕನ್ನಡ ಕಾವ್ಯದ ಮುಖ್ಯನೆಲೆಗಳು ಮೇಲಿಂದ ಮೇಲೆ ಹೊಸ ಸಾಧ್ಯತೆಗಳ ಮುಖೇನ ವಿಮರ್ಶೆ ವಿಶ್ಲೇಷಣೆಗೆ ಒಳಪಡಿಸುವುದರಿಂದ ಮಾತ್ರ ನಮ್ಮ ಸಮಕಾಲೀನ ಸಾಹಿತ್ಯ ಸಂಸ್ಕೃತಿಯ ಹೆಚ್ಚು ಖಚಿತವಾದ ಚರ್ಚೆ ಸಾಧ್ಯವಾಗುತ್ತದೆ. ಸಮಕಾಲೀನ ಪ್ರಶ್ನೆಗಳು ಕೇವಲ ಸಧ್ಯದ ಅಥವಾ ತತ್ಕಾಲೀನ ಪ್ರಶ್ನೆಗಳೇ ಆಗದೆ ನಮ್ಮ ಸಾಂಸ್ಕೃತಿಕ ಸಂದರ್ಭದ ಎಲ್ಲ ಕಾಲದ ಮುಖ್ಯ ಪ್ರಶ್ನೆಗಳಾಗಿರುವುದನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಬಹುದಾಗಿದೆ. ಅಧಿಕಾರಶಕ್ತಿಯ ಬಹುಮುಖಿನೆಲೆಗಳು ಹಾಗೂ ಅದರ ದಮನವನ್ನು ಮೀರುವ ಬಹುಮುಖಿನೆಲೆಗಳು ಇಡೀ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಕ್ರಿಯಾಶಾಲಿಯಾಗಿ ಅಭಿವ್ಯಕ್ತಗೊಳ್ಳುತ್ತ ಬಂದಿವೆ. ಅಧಿಕಾರ ಕೇಂದ್ರವನ್ನು ಒಂದು ಖಚಿತ ವಿಧಿಯೆಂದು ಕನ್ನಡ ಸಂಸ್ಕೃತಿ ಪರಿಭಾವಿಸಿಲ್ಲ.

ಪ್ರತಿರೋಧವನ್ನು ಅತ್ಯಂತ ಖಚಿತವಾದ ಮಟ್ಟದಲ್ಲಿ ಮಾತ್ರವೇ ಅಲ್ಲದೆ ವಿಭಿನ್ನ ಸೂಕ್ಷ್ಮಗಳೊಂದಿಗೆ ದಾಖಲಿಸುತ್ತ ಬಂದಿರುವುದು ಬಹುಮುಖ್ಯ ಸಂಗತಿಯಾಗಿದೆ. ಅಧಿಕಾರ ಕೇಂದ್ರವನ್ನು ಕನ್ನಡ ಸಂಸ್ಕೃತಿಯು ಏಕಪಕ್ಷೀಯವನ್ನಾಗಿ ತಿಳಿಯದೆ, ಅದಕ್ಕೆ ಅನೇಕ ಸವಾಲುಗಳನ್ನು ಕೂಡ ಒಡ್ಡುತ್ತ ಬಂದಿದೆ. ಇದು ಕನ್ನಡ ಸಂವೇದನೆಯ ಮಹತ್ವದ ಸಾಂಸ್ಕೃತಿಕ ರಾಜಕಾರಣದ ನೆಲೆಯಾಗಿದೆ. ಇದನ್ನು ಸಮರ್ಥಿಸಲು ಸಾಕಷ್ಟು ಸಾಮಗ್ರಿಯನ್ನು ನಾವು ಅಧ್ಯಯನ ಮಾಡಿರುವ ಕವಿಗಳ ಕೃತಿಗಳಿಂದ ಸಾಮಗ್ರಿಯನ್ನು ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

ಕಾವ್ಯವನ್ನು ಕೇಂದ್ರವನ್ನಾಗಿಸಿಕೊಂಡು ಈ ನಮ್ಮ ಅಧ್ಯಯನ ನಡೆದಿದೆಯಾದರೂ ಇದೇ ಚರ್ಚೆಯನ್ನು ಕನ್ನಡ ಸಾಹಿತ್ಯದ ಇನ್ನಿತರ ಪ್ರಕಾರಗಳಿಗೂ ಅನ್ವಯಿಸಿ ವಿವೇಚಿಸಬಹುದಾಗಿದೆ. ಅಲ್ಲದೆ ಇನ್ನಿತರ ಸಾಂಸ್ಕೃತಿಕ ಅಭಿವ್ಯಕ್ತಿಗಳ ಸಂದರ್ಭಕ್ಕೂ ಅನ್ವಯವಾಗಬಹುದೆಂಬುದು ನಮ್ಮ ನಮ್ರ ತಿಳುವಳಿಕೆ.

# ಅನುಬಂಧಗಳು

## ಅನುಬಂಧ ಒಂದು

# ಕುವೆಂಪು ಕಥಾಸಾಹಿತ್ಯ : ವಸಾಹತುಶಾಹಿ ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷ

ಹತ್ತೊಂಭತ್ತನೆಯ ಹಾಗೂ ಇಪ್ಪತ್ತನೆಯ ಶತಮಾನದ ಮೊದಲ ಭಾಗ ಭಾರತದ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸಂಧಿಕಾಲ. ಭಾರತೀಯ ಜೀವನವನ್ನು ಹೊರಗಿನ ಶಕ್ತಿಗಳು ಆಕ್ರಮಿಸಿದ ಕಾಲ. ಪರಕೀಯ ರಾಜಕೀಯ ಶಕ್ತಿಗಳು ನಮ್ಮ ಸಾಂಸ್ಕೃತಿಕ ಜೀವನವನ್ನು ಪ್ರವೇಶಿಸಿ ಅನೇಕ ಮಟ್ಟದ ವಿಲಕ್ಷಣ ಪ್ರಭಾವಗಳನ್ನು ಮೂಡಿಸಿ, ಒಂದು ತಲ್ಲಣವನ್ನೆ ಸೃಷ್ಟಿಸಿತು. ಜಾಗತಿಕವಾಗಿ ಏರ್ಪಡುತ್ತಿದ್ದ ಅನೇಕ ಸ್ಥಿತ್ಯಂತರಗಳು ಭಾರತವನ್ನು ನಿಧಾನವಾಗಿ ಪ್ರವೇಶಿಸುತ್ತಿದ್ದವು. ಪರಕೀಯ ಆಕ್ರಮಣದೊಂದಿಗೆ ಇಂಥ ಪರಿಸ್ಥಿತಿ ಹೆಚ್ಚು ವೇಗವನ್ನು ಪಡೆದುಕೊಳ್ಳಲು ಕಾರಣವಾಯಿತು. ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ, ವೈಯಕ್ತಿಕ, ತಾತ್ವಿಕ ಹಾಗೂ ಶೈಕ್ಷಣಿಕ ವಲಯಗಳಲ್ಲಿ ಹೊಸ ವಿಚಾರಗಳ, ಆಲೋಚನೆಗಳ ಗಾಳಿ ಬೀಸತೊಡಗಿತು. ಈ ಎಲ್ಲ ಬದಲಾವಣೆ ಹಾಗೂ ಪಲ್ಲಟಗಳಿಗೆ ಕಾರಣವಾದ ಈ ಕಾಲಮಾನವನ್ನು ತಿಳಿಯಲು, ನಮ್ಮ ಸಂದರ್ಭದಲ್ಲಿ ಸೃಷ್ಟಿಯಾದ ಸಾಹಿತ್ಯ ನಿರ್ಮಿತಿಯ ಮೂಲಕ ವಿಶ್ಲೇಷಿಸುವುದು ಈ ಅಧ್ಯಯನದ ಗುರಿಯಾಗಿದೆ.

ಈ ಕಾರಣಗಳಿಂದ ಒಟ್ಟು ಭಾರತೀಯ ಮನಸ್ಥಿತಿಯೇ (ಸೈಕಿ) ವಿಶಿಷ್ಟವಾದ ಗೊಂದಲ ಹಾಗೂ ದ್ವಂದ್ವಗಳಿಗೆ ಗುರಿಯಾಯಿತು. ನಮ್ಮ ಸಂದರ್ಭದಲ್ಲಿ ಮನೆ ಮಾಡಿಕೊಂಡಿದ್ದ ಪರಿಸ್ಥಿತಿಯೊಂದಿಗೆ ಪರಕೀಯ ಸಂಸ್ಕೃತಿಯ ಸೇರ್ಪಡೆ ಒಂದು ಹೊಸ ವಾತಾವರಣವನ್ನೇ ಸೃಷ್ಟಿಸಿತು. ಇದರ ಫಲವಾಗಿ ನಮ್ಮ ಸಾಂಸ್ಕೃತಿಕ ಸಂದರ್ಭ ಎಲ್ಲ ಮಟ್ಟದ ಅಪಮೌಲ್ಯಗಳನ್ನು ಎದುರಿಸುವುದು ಅನಿವಾರ್ಯವಾಯಿತು. ಬ್ರಿಟಿಷ್ ಶಿಕ್ಷಣ ಪದ್ಧತಿಯು ತನ್ನ ರಾಜಕೀಯ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳಲು ಪೂರಕವಾಗಿ ವಿಕಾಸಗೊಂಡಿತಾದರೂ, ಆ ಮೂಲಕ ಹೊಸ ಎಚ್ಚರದ ಬೀಜಗಳು ಸೃಷ್ಟಿಯಾಗಲು ಕಾರಣವಾಯಿತು.

ಇಂಗ್ಲಿಷ್ ವಿದ್ಯಾಭ್ಯಾಸ ಹೊಸ ವಿಚಾರಗಳನ್ನು ಹೆಚ್ಚು ತಾಂತ್ರಿಕವಾಗಿ ನಮ್ಮನ್ನು ಅವರಿಸಿತಾದರೂ ಆ ಕಾಲದ ಮಹತ್ವದ ವ್ಯಕ್ತಿಗಳು ಹಾಗೂ ಸಾಂಘಿಕ ಚಟುವಟಿಕೆಗಳು ಕೂಡ ಅದೇ ವಿಚಾರಧಾರೆಯಿಂದ ನಮ್ಮ ಸಾಂಸ್ಕೃತಿಕ ಜೀವನದ ವಿನ್ಯಾಸವನ್ನು ಪರಿಷ್ಕರಿಸಲು ಪ್ರಯತ್ನಿಸಿದ್ದನ್ನು ನಾವು ಗಮನಿಸುತ್ತೇವೆ. ಬ್ರಿಟಿಷರ ರಾಜಕೀಯ ಯಂತ್ರ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುವ ದಿಶೆಯಲ್ಲಿ ಅನೇಕ ಸುಧಾರಣವಾದಿ ಪ್ರಯತ್ನಗಳಿಗೆ ಕೈಹಾಕಿತು. ಇದರಿಂದಾಗಿ ಪಾರಂಪರಿಕ ಸಮಾಜ ವ್ಯವಸ್ಥೆಯ ಅನೇಕ ಅಸಾಂಗತ್ಯಗಳು ಮೂಲಭೂತವಾಗಿ ಅಲ್ಲದಿದ್ದರೂ ಮೇಲ್ಮಟ್ಟದ ಕೆಲವು ಬದಲಾವಣೆಗಳಿಗೆ ದಾರಿಮಾಡಿಕೊಟ್ಟಿತು.

ಬ್ರಿಟಿಷರು ಇಲ್ಲಿನ ಸಾಂಸ್ಕೃತಿಕ ಜೀವನದ ಮೇಲೆ ತಮ್ಮ ಯಾಜಮಾನ್ಯವನ್ನು ನೆಲೆಗೊಳಿಸಿದ ಕಾರಣದಿಂದ ಉಂಟಾದ ಸಂಘರ್ಷ ನಮ್ಮ ಸಮಷ್ಟಿ ಹಾಗೂ ವ್ಯಷ್ಟಿ ಜೀವನದ ಮೇಲೆ ಸರ್ವವ್ಯಾಪಿ ಪ್ರಭಾವ ಪರಿಣಾಮಗಳನ್ನು ಮೂಡಿಸಿತು. ನಮ್ಮ ಸಾಮಾಜಿಕ ಸಮಸ್ಯೆಗಳಾದ ಜಾತಿಪದ್ಧತಿ, ಬಾಲ್ಯವಿವಾಹ, ಸತೀಪದ್ಧತಿ, ಜೀತಪದ್ಧತಿ ಮುಂತಾದ ಸಮಸ್ಯೆಗಳನ್ನು ಕುರಿತು ವ್ಯಾಪಕವಾದ ಮರುಚಿಂತನೆ ಈ ಕಾಲದಲ್ಲಿ ಕಾಣಿಸಿಕೊಂಡಿತು. ಇಂಥ ಸಮಸ್ಯೆಗಳಿಗೂ ನಮ್ಮ ಸಂದರ್ಭದಲ್ಲಿ ಜಡಗೊಂಡು ಸವಕಲಾಗಿದ್ದ ಧಾರ್ಮಿಕ ವ್ಯವಸ್ಥೆಗೂ ಸಂಬಂಧ ಗಾಢವಾಗಿ ಬೆಸದುಕೊಂಡದ್ದಾಗಿತ್ತು. ಇಂಥ ಸಂಕೀರ್ಣ ಸಮಸ್ಯೆಗಳನ್ನು ಕನ್ನಡದ ಮಹತ್ವದ ಕಾದಂಬರಿಕಾರಿಂದ ಕುವೆಂಪು ಅವರ 'ಕಾನೂರು ಹೆಗ್ಗಡತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಪ್ರಮುಖ ಚಿಂತನೆಯಾಗಿ ಅಭಿವ್ಯಕ್ತಗೊಂಡಿರುವುದನ್ನು ಮುಂದೆ ಪರಿಶೀಲಿಸಲಾಗುತ್ತದೆ.

ವಸಾಹತುಶಾಹಿಯ ಮುಖ್ಯ ಆಕ್ರಮಣಕಾರಿ ನೆಲೆಗಳಲ್ಲಿ ಅದು ಹೊತ್ತು ತಂದಿದ್ದ ಕ್ರೈಸ್ತಧರ್ಮ ಪ್ರಮುಖವಾದದ್ದು. ಕ್ರೈಸ್ತಧರ್ಮ ಆಳುವ ವರ್ಗದ ಬೆಂಬಲದಿಂದ ಇಲ್ಲಿ ನೆಲೆಗೊಳಿಸಿದ್ದನ್ನು ಅನೇಕ ಮಟ್ಟಗಳಲ್ಲಿ ನಾವು ಕಾಣುತ್ತೇವೆ. ಮಲೆನಾಡಿನ ರೋಗಗ್ರಸ್ತ ವಾತಾವರಣದಲ್ಲಿ ಕ್ರೈಸ್ತಧರ್ಮದ ಪ್ರಭಾವವನ್ನು ಸೂಕ್ಷ್ಮವಾಗಿ ಹಬ್ಬಿಸಲು ನಡೆದ ಪ್ರಯತ್ನ ಹಾಗೂ ಅದಕ್ಕೆ ಒದಗಿ ಬಂದ ಸೂಕ್ಷ್ಮವಾದ ಪ್ರತಿಭಟನೆಯ ನೆಲೆಗಳನ್ನು ಕುವೆಂಪು ಅವರ ಕಥಾಸಾಹಿತ್ಯ ಅತ್ಯಂತ ನಿಚ್ಚಳವಾಗಿ ದಾಖಲಿಸುತ್ತದೆ. ಉದಾಹರಣೆಗಾಗಿ ಈ ಕೆಳಗಿನ ಭಾಗಗಳನ್ನು ಗಮನಕ್ಕೆ ತಂದುಕೊಳ್ಳಬಹುದು.

> ಅಗತಾನೆ ಹಳೆಯ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು, ಆಂಗ್ಲೇಯರ ಆಡಳಿತದ ರೀತಿಯೂ ಇಂಗ್ಲಿಷಿನ ಪ್ರಭಾವವೂ ಮೊಳೆದೋರುತ್ತಿದ್ದ ಸಂಧಿಸಮಯ. ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತ ಪಾದ್ರಿಗಳ ಕಾರ್ಯ ಗಣನೀಯವಾಗಿತ್ತು, ಶ್ಲಾಘನೀಯವಾಗಿತ್ತು. ತಮ್ಮ ಮತಕ್ಕೆ ಜನರನ್ನು ಸೇರಿಸಿಕೊಳ್ಳುವ ಧಾರ್ಮಿಕ ಪ್ರಯತ್ನಕ್ಕೆ ಪೀಠಿಕೆಯಾಗಿತ್ತು. ಈ ಲೌಕಿಕ ಸೇವಾ ಕರ್ಮ, ಸಾಮಾನ್ಯ ಜನ ಬಹುಕಾಲದಿಂದಲೂ ಹಿಂದೂಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಒಡ್ಡಿದ ಮೂಢ ಮತಾಚಾರಗಳ ಕೂಣಿಗೆ ಸಿಕ್ಕಿಬಿದ್ದಿದ್ದರು. ಅವರನ್ನು ಆ ಕೂಣಿಯಿಂದ ತಪ್ಪಿಸಿ ರಕ್ಷಿಸುವ ನೆವದಲ್ಲಿ ಕ್ರೈಸ್ತ ಪಾದ್ರಿಗಳು ತಮ್ಮ ಮತದ ಬಲೆಯನ್ನು ಬೀಸಿ ಅದರೊಳಕ್ಕೆ ಹಾರಿ ಬೀಳುವ ಪ್ರಾಣಿಗಳನ್ನು ಭಕ್ಷಿಸುವ ಅಥವಾ ಅವರ ರೀತಿಯಲ್ಲಿ ರಕ್ಷಿಸುವ ಅಭಿಸಂಧಿಯನ್ನಿಟ್ಟುಕೊಂಡಿದ್ದರು[೯]

ಮಲೆನಾಡಿನ ಜೀವನದಲ್ಲಿ ಹಳೆಯ ವಿದ್ಯಾಭ್ಯಾಸ ಪದ್ಧತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಬಂದು ಹೊಸ ಬಗೆಯ ಶಿಕ್ಷಣಕ್ರಮ ಒಂದು ವಿಧಾನವಾಗಿ ಆವರಿಸುತ್ತ ಬರುತ್ತಿರುವುದರ ಮಾರ್ಮಿಕ ಚಿತ್ರಣ ಇಲ್ಲಿದೆ. ಇದಕ್ಕೆ ಕಾರಣವಾದ ಕ್ರೈಸ್ತ ಪಾದ್ರಿಗಳ ಪ್ರಭಾವ ಕೂಡ ಇಲ್ಲಿ ಪ್ರತಿಬಿಂಬಿತವಾಗಿದೆ. ಧಾರ್ಮಿಕ ಪ್ರಯತ್ನ ಹಾಗೂ ಲೌಕಿಕ ಸೇವಾ ಕರ್ಮಗಳು ಒಂದರೊಡನೆ ಒಂದು ಹೊಂದಿಕೊಂಡು ಹಳ್ಳಿಗಾಡಿನ ಪರಿಸರದಲ್ಲಿ ವಂಚನೆಯ ಜಾಲವನ್ನೆ ನಿರ್ಮಾಣ ಮಾಡಿದ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಿಕ್ಷಣದ ಹೆಸರಿನಲ್ಲಿ ಕ್ರೌರ್ಯ ಹಾಗೂ ಸ್ವಾರ್ಥ ಸಾಧನೆಯು ಪ್ರವೇಶಿಸಿದ ಬಗೆ ಇಡೀ ಭಾರತೀಯ ಸಂದರ್ಭಕ್ಕೆ ಅನ್ವಯವಾಗುವಂತದ್ದಾಗಿದೆ.

> ....ದೀವದಾನೆ ಕಾಡಾನೆಯನ್ನು ಆಕರ್ಷಿಸಿ ಖೆಡ್ಡಾಕ್ಕೆ ಕೆಡಹಲು ಪ್ರಯತ್ನಿಸುವಂತೆ, ಪಾದ್ರಿ ಜೀವರತ್ನಯ್ಯ ಚಿನ್ನಪ್ಪನ ಕಾಲಡಿಯ ಕುರುಡು ಆಚಾರ ಮತ್ತು ಮೂಢನಂಬಿಕೆಗಳ ಭೂಮಿಯನ್ನು ಸಡಿಲಗೊಳಿಸಿ, ಅಗೆದು ತೆಗೆದು, ಕ್ರೈಸ್ತ ಮತದ ಖೆಡ್ಡಕಂದಕವನ್ನು ಮೆಲ್ಲಗೆ ನಿರ್ಮಿಸುತ್ತಿದ್ದನು.[೨]

ಮತ್ತೊಂದು ಹಂತದಲ್ಲಿ ಬ್ರಾಹ್ಮಣ ವಲಯ ಗ್ರಾಮೀಣ ಕೆಳವರ್ಗವನ್ನು ಮೂಢ ಮತಾಚಾರಗಳ ಬಲಿಗೆ ಸಿಲುಕಿಸಿದ ಸಂದರ್ಭವನ್ನು ಕ್ರೈಸ್ತ ಪಾದ್ರಿಗಳು ತಮ್ಮ ಪರವಾದ ತಂತ್ರಕ್ಕೆ ಗುರಿಪಡಿಸಿಕೊಂಡ ಕಾರ್ಯವನ್ನು ಕೂಡ ಇಲ್ಲಿ ಕಾಣುತ್ತೇವೆ. ಎಂದರೆ ಒಂದು ಧರ್ಮದ ಕ್ರೌರ್ಯಕ್ಕೆ ಸಿಲುಕಿದ್ದ ಕೆಳವರ್ಗ ಅಂತದ್ದೇ ಸ್ವಾರ್ಥಸಾಧನೆಯ ಆಶಯಗಳಿಂದ ಕೂಡಿದ ಮತ್ತೊಂದು ಧರ್ಮಕ್ಕೆ ಸೆಳೆದುಕೊಳ್ಳುವುದನ್ನು ಕುವೆಂಪು ತಮ್ಮ ಕಾದಂಬರಿಗಳಲ್ಲಿ ವಿವೇಚಿಸುತ್ತಾರೆ.

> ಅತ್ತ ಉತ್ತಾರಾರ್ಧಗೋಲದ ಬಹುದೂರ ಸಾಗರದಾಚೆಯೊಂದು ಆಧುನಿಕ ನಾಗರಿಕತೆಯ ಮತ್ತು ವೈಜ್ಞಾನಿಕ ಪ್ರಗತಿಯ ಶ್ರೀಮಂತ ದೇಶದಲ್ಲಿ ಪ್ರಪ್ರಾಚೀನ ಭಾರತ ಸಂಸ್ಕೃತಿಯ ಸರ್ವೋತ್ತಮ ಪ್ರತಿನಿಧಿಯೊಬ್ಬನು ವೇದಾಂತ ದರ್ಶನದ ಮೇಲೆ ನಿಂತಿರುವಸನಾತನ ಹಿಂಧೂಧರ್ಮದ ಸರ್ವೋತ್ಕೃಷ್ಟತೆಯನ್ನು ಅಧಿಕಾರವಾಣಿಯಿಂದ ಪ್ರಸಾರ ಮಾಡುತ್ತಿದ್ದಾಗಲೆ, ಅದನ್ನೆಲ್ಲ ಸದ್ದು ಗದ್ದಲವಿಲ್ಲದೆ ಮೂದಲಿಸುವಂತೆ ಯಃಕಶ್ಚಿತ್ ಪಾದ್ರಿಯೊಬ್ಬನು-ಅದರಲ್ಲಿಯೂ ನೇಟಿವ್ ಪಾದ್ರಿ-ಘೋರಾರಣ್ಯಮಯ ವಾದ ಸಹ್ಯಾದ್ರಿ ಶ್ರೇಣಿಯ ಮಲೆನಾಡಿನ ಕೊಂಪೆಯ ಅಜ್ಞ ಬೇಸಾಯ ಗಾರನೊಬ್ಬನಿಗೆ ಹಿಂದೂಧರ್ಮದ ಅನಾಚಾರ, ಅವಿವೇಕ, ಸಂಕುಚಿತ ಮನೋ ಭಾವ, ಜಾತಿ ಮತ ಪಕ್ಷಪಾತ, ಬ್ರಾಹ್ಮಣರ ತಿರಸ್ಕಾರ, ಶೂದ್ರರ ದೈನ್ಯ, ಅಧೋಗತಿ, ಕಲ್ಲು ಮಣ್ಣು ಮರ ದೆವ್ವಗಳ ಪೂಜೆ ಇತ್ಯಾದಿಗಳನ್ನು, ಯೇಸುಕ್ರಿಸ್ತನ ಮತ್ತು ಕ್ರೈಸ್ತಮತದ ಪರೋಪಕಾರ, ಪರಾನುಕಂಪನ ನೀತಿ, ತ್ಯಾಗ, ಭಕ್ತಿ, ಉದ್ಧಾರಕ ಸಾಮರ್ಥ್ಯ, ಇತ್ಯಾದಿಗಳನ್ನು-ಕುರಿತು ಮನಮುಟ್ಟುವಂತೆ ಉಪದೇಶ ಮಾಡುತ್ತಿದ್ದನು, ಗೌಡನ ಮನೆಯ ಚಾವಡಿಯಲ್ಲಿಯೇ ಕುಳಿತು,ಅವನ ಗದ್ದೆ, ತೋಟ, ಅಂಗಳದ ತೊಳಸಿಕಟ್ಟೆಯ ದೇವರು ಮತ್ತು ಎದುರಿಗೇ ಕಾಣುತ್ತಿದ್ದ ಭೂತದ ಬನ-ಇವುಗಳ ಇದಿರಿನಲ್ಲಿಯೆ![೩]

ಸಾಂಪ್ರದಾಯಿಕ ಧರ್ಮದ ಕುಸಿತದಲ್ಲಿ ಬಿದ್ದು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿದ್ದ ನಮ್ಮ ಗ್ರಾಮಜೀವನವು ಅಂಥದ್ದೇ ಕ್ರೂರವಾದ ಮತ್ತೊಂದು ವ್ಯವಸ್ಥೆಗೆ ಬಲಿ ಬೀಳುವ ಈ ಕ್ರೌರ್ಯ ಕುವೆಂಪು ಅವರ ಕಾದಂಬರಿಗಳು ಒಂದು ಮುಖ್ಯ ಶೋಧನಾವಲಯವನ್ನು ನಿರ್ಮಿಸಿವೆ. ಇಂಥ ಅನೇಕ ಭಾಗಗಳು ಎರಡೂ ಕಾದಂಬರಿಯ ಉದ್ದಕ್ಕೂ ವ್ಯಾಪಿಸಿಕೊಂಡಿರುವುದನ್ನು ನಾವು ಗುರುತಿಸುತ್ತೇವೆ.

ಒಂದು ಕಡೆ ಭಾರತೀಯ ಧಾರ್ಮಿಕ ಪರಂಪರೆ, ಪರಮಹಂಸ, ವಿವೇಕಾನಂದರ ಮೂಲಕ ಹೊಸ ನಿರ್ವಚನ ಹಾಗೂ ವಿಶ್ಲೇಷಣೆಗಳಿಗೆ ಗುರಿಯಾಗುತ್ತಿದ್ದರೆ ಮತ್ತೊಂದು ನೆಲೆಯಲ್ಲಿ ಮಾನವಸತ್ವಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಪ್ರಯತ್ನವಾಗಿ ವ್ಯಾಪಿಸುತ್ತಿದೆ. ಇಂಥ ಇಕ್ಕಟ್ಟುಗಳ ಪ್ರಶ್ನೆ ವಸಾಹತುಶಾಹಿ ಸಂದರ್ಭ ಹೇಗೆ ನಮ್ಮ ಅಂತಸ್ಸತ್ವಗಳ ಮೇಲೆ ದಾಳಿ ಮಾಡುತ್ತದೆ ಮತ್ತು ಅದರ ಪರಿಣಾಮಗಳ ಸೂಕ್ಷ್ಮ ವಲಯಗಳನ್ನು ಅನಾವರಣ ಮಾಡುತ್ತದೆಂಬುದನ್ನು ಈ ಮೂಲಕ ಪರಿಶೀಲಿಸಬಹುದಾಗಿದೆ.

'ಕಾನೂರು ಹೆಗ್ಗಡತಿ'ಯಾಗಲಿ, 'ಮಲೆಗಳಲ್ಲಿ ಮದುಮಗಳು' ಯಾಗಲೀ ನಮ್ಮ ಕಾಲದ ಶ್ರೇಷ್ಠ ಸಾಹಿತ್ಯ ಕೃತಿಗಳಾಗಿರುವಂತೆಯೇ, ಆ ಕೃತಿಗಳು ಅವಸ್ಥಾಂತರಗೊಳ್ಳುತ್ತಿರುವ ನಮ್ಮ ಸಾಂಸ್ಕೃತಿಕ ಗತಿಶೀಲ ಇತಿಹಾಸವೂ ಆಗುತ್ತವೆ. ಒಂದು ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ಸಾಮುದಾಯಿಕ ಬದುಕಿನ ಸಮಗ್ರ ವ್ಯಾಖ್ಯೆಯೊಂದನ್ನು ಈ ಕೃತಿಗಳು ನಮಗೆ ಒದಗಿಸಿಕೊಟ್ಟಿವೆ. ಸಾಹಿತ್ಯ ಕೃತಿಯ ಮೂಲಕ ಸಾಂಸ್ಕೃತಿಕ ಚಿಂತನೆ ಪ್ರದಾನಗೊಳ್ಳುವುದು ಈ ರೀತಿಯಲ್ಲಿಯೇ.

'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ನಮ್ಮ ಸ್ಥಿತ್ಯಂತರಗೊಳ್ಳುತ್ತಿರುವ ಗ್ರಾಮೀಣ ಸಮಾಜ ವ್ಯವಸ್ಥೆಯ ಎಲ್ಲ ಒಳವಿವರಗಳಿಂದ ಸಂವೃದ್ಧಿಗೊಂಡಿರುವ ಕೃತಿಗಳು. ನಮ್ಮ ಸಮಾಜ ವ್ಯವಸ್ಥೆ ಊಳಿಗಮಾನ್ಯ ಸಂದರ್ಭ ಹಾಗೂ ಕೆಳಸ್ತರದ ಕೂಲಿಕಾರ ಸಂಬಂಧಗಳ ಅಂತರ್ ಪ್ರಕ್ರಿಯೆಗಳನ್ನು ದಟ್ಟ ವಿವರಗಳೊಂದಿಗೆ ಪ್ರತಿಕ್ರಿಯಿಸುತ್ತದೆ. ನಮ್ಮ ಕೆಳಸ್ತರದ ಬದುಕಿನ ಆಂತರ್ಯದಲ್ಲಿಯೇ ಪ್ರಕಟಗೊಳ್ಳುವ ಸೂಕ್ಷ್ಮವಾದ ಆಂತರಿಕ ಸಂಘರ್ಷವನ್ನು ದಾಖಲು ಮಾಡುತ್ತವೆ. ಕೆಳವರ್ಗದ ಚೈತನ್ಯವನ್ನು, ಆ ಚೈತನ್ಯ ಗುಪ್ತಗಾಮಿನಿಯಾದ ನೆಲೆಗಳನ್ನು ಒಟ್ಟಾರೆ ಹಿಡಿಯುವುದು ಕುವೆಂಪು ಅವರ ಸೃಜನಶೀಲತೆಯ ಮುಖ್ಯ ಆಶಯವಾಗಿದೆ. ಈ ಸಂದರ್ಭದಲ್ಲಿ ಹುಟ್ಟುವ ಮನೋನೆಲೆಗಳನ್ನು ವಿಶ್ಲೇಷಿಸುವುದು ಕುವೆಂಪು ಅವರ ಕಾದಂಬರಿಯ ಓದಿನಿಂದ ನಾವು ತಿಳಿಯುತ್ತೇವೆ. ಸಂಸ್ಕೃತಿಯ ನೆನಪುಗಳನ್ನು ನಾಶಗೊಳಿಸಿ ಆ ಸ್ಥಾನದಲ್ಲಿ ಹೊಸ ಸಾಂಸ್ಕೃತಿಕ ರಚನೆಗಳನ್ನು ತಂದಿರಿಸಿವುದು ವಸಾಹತುಶಾಹಿ ಧೋರಣೆಯ ಮುಖ್ಯ ಗುರಿ. ಇಂಥ ಸೂಕ್ಷ್ಮ ಅವಸ್ಥಾಂತರಗಳು ಹೊಸ ವಸ್ತು-ವಿವರಗಳು ಮಲೆನಾಡಿನ ಜೀವನವನ್ನು ಹೇಗೆ ಪ್ರವೇಶಿಸುತ್ತಿದೆ ಎಂಬುದನ್ನು ಎರಡೂ ಕಾದಂಬರಿಗಳು ಅಭಿವ್ಯಕ್ತಿಸುತ್ತವೆ.

ಮಲೆನಾಡನ್ನು ಪ್ರವೇಶಿಸುತ್ತಿರುವ ಯಂತ್ರ, ಸಂಸ್ಕೃತಿ, ಮನುಷ್ಯ ಮನುಷ್ಯರ ನಡುವೆ ಅಗಾಧ ವಿಸ್ಮಯಕ್ಕೆ ಕಾರಣವಾಗುತ್ತಿರುವಂತೆಯೇ ಅವರ ಮಾನಸಿಕವಾದ ಯಾತನೆಯನ್ನು ಪ್ರತಿಬಿಂಬಿಸುತ್ತದೆ. ಹೊಸ ವಸ್ತುವಿನ ಪ್ರವೇಶವೆಂದರೆ ಅದೊಂದು ಹೊಸ ಮನಸ್ಥಿತಿಯ ಹೇರುವಿಕೆ ಎಂಬುದು ಇಲ್ಲಿ ಸೂಚಿತವಾಗುವ ಮುಖ್ಯ ಆಶಯವಾಗಿದೆ.

> ಯಂತ್ರ ನಾಗರಿಕತೆ, ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ'- ತಾನು ಎಂದೋ ಹಿಂದಕ್ಕಿ ಬಂದ ಆ ಪ್ರಗತಿಗಾಮಿಯಾದ ಪ್ರಪಂಚ ಮತ್ತೆ ಬಹು ದೂರದ ಮಲೆನಾಡಿನ ಕೊಂಪೆಯಲ್ಲಿ ತನಗೆ ಕ್ಷಣದರ್ಶನ ಕೊಟ್ಟಂತಾಯ್ತು. ನಿಲ್ಲದೆ ಮುಂಬರಿಯುತ್ತಿರುವ, ದಿನದಿನವೂ ಬದಲಾಯಿಸುತ್ತಿರುವ ಹೊರಗಣ ವಿಶಾಲ ಜಗತ್ತಿಗೆ ಪ್ರತಿಮೆಗಳಾದರು, ಆ ಬೈಸಿಕಲ್ ಮತ್ತು ಅದರ ಸವಾರ. ಹೂವಯ್ಯನ ಮನಸ್ಸು ಗವಾಕ್ಷದಿಂದೆಂಬಂತೆ ಕಾನೂರು ಮುತ್ತಳ್ಳಿಗಳ ಸಂಕುಚಿತ ಬದುಕಿನಿಂದ ಹೊರಲೋಕದ ಚಿತ್ರಕ್ಕೆ

> ಹಾರಿತು. ಪಟ್ಟಣದ ಸಂದಣಿಯಲ್ಲಿ ಗಮನಕ್ಕೂ ಬಾರದ ಬೈಸಿಕಲ್ಲು ಕಾಡು ಬೀಡಿನಲ್ಲಿ ವಿಶೇಷಾತಿಥಿಯಾಗಿ ತೋರಿತು. ಎಷ್ಟಾದರೂ ಆಕ್ರಮಣಶೀಲವಾದ ಆ ಚಂಚಲಮಾನ ನಾಗರಿಕ ಲೋಕವು ಮಲೆನಾಡಿನ ದಾಳಿಯಿಡುವ ಮೊದಲು ಮುನ್ನಟ್ಟಿದ ರಣ ಚಾರನಲ್ಲವೆ ಆ ಬೈಸಿಕಲ್ ಸವಾ![೪].
>
> ....ಮತ ಪ್ರಚಾರಕ್ಕೆ ಬೈಬಲ್ಲು ಯೇಸುಕ್ರಿಸ್ತರಿಗಿಂತಲೂ ಬೈಸಿಕಲ್ಲ ಹೆಚ್ಚು ಪ್ರಭಾವಶಾಲಿ![೫]
> ....ಸಂಪ್ರದಾಯ ನಿಷ್ಠೆಯ ವೀರಾನುಯಾಯಿಯಾಗಿದ್ದ ಶಂಕರಪ್ಪ ಹೆಗ್ಗಡೆಗೆ ಕಿಲಸ್ತರ ಪಾದ್ರಿಗಳನ್ನೆಲ್ಲ ಮನೆಗೆ ಸೇರಿಸಿ, ಅವರೊಡನೆ ಸಹಪಂಕ್ತಿ ಭೋಜನವನ್ನೂ ಮಾಡಿ, ಅವರು ಕೊಟ್ಟ ವಿಲಾಯಿತಿ ವಸ್ತುಗಳನ್ನೆಲ್ಲ ಲಾಟೀನು, ಬೈಸಿಕಲ್ಲು, ತೋಟಾ ಕೋವಿ, ಸೀಮೆ ಬಸ್ಕತ್ತು, ಕ್ರಾಪು, ಹ್ಯಾಟು, ಬೂಟ್ಸು ಇತ್ಯಾದಿ- .....ಕಂಡರೆ ತಿರಸ್ಕಾರ, ಜುಗುಪ್ಸೆ![೬]

ಮೇಲ್ಮಟ್ಟದಲ್ಲಿ ಯಂತ್ರ ಸಂಸ್ಕೃತಿ ಪ್ರಗತಿಗಾಮಿಯಾಗಿ ತೋರುತ್ತಿದ್ದರೂ ಅದು ಅಂತಸ್ಥವಾಗಿದ್ದ ಮಲೆನಾಡಿನ ಜೀವನ ಕ್ರಮವನ್ನೇ ಮೂಲಭೂತವಾಗಿ ಪಲ್ಲಟಗೊಳಿಸಿರುವುದನ್ನು ಇಂಥ ವಿವರಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಒಂದು ಕಡೆ ವ್ಯಕ್ತಿ ನಿರಪೇಕ್ಷವಾದ ಧಾರ್ಮಿಕ ಸಂದರ್ಭ ಮನುಷ್ಯನ ಬದುಕನ್ನು ತಲ್ಲಣಗೊಳಿಸಿದರೆ, ಮತ್ತೊಂದು ಕಡೆ ಐಹಿಕ ಸಾಧನಗಳಾದ ನವೀನ ವಸ್ತುಪ್ರಪಂಚ ಮನುಷ್ಯನ ಮೂಲಭೂತ ಸಂವೇದನೆಯನ್ನು ದಿಗ್ಭ್ರಮೆಗೆ ಈಡುಮಾಡುತ್ತದೆ. ಇದರಿಂದಾಗಿ ಇಡೀ ಸಾಂಸ್ಕೃತಿಕ ಬದುಕು ಹೇಗೆ ವಿಚ್ಛೇದನಕ್ಕೆ ಕಾರಣವಾಗಬಲ್ಲುದೆಂಬುದನ್ನು ಇಲ್ಲಿ ಉದಾಹರಿಸಿದ ಭಾಗಗಳಿಂದ ತಿಳಿಯಬಹುದಾಗಿದೆ.

ಹೀಗಾಗಿ ನಮ್ಮ ಪರಂಪರೆ ಹಾಗೂ ವಸಾಹತುಶಾಹಿ ಪ್ರಭಾವ ಇವೆರಡರ ಸಂಬಂಧ ಒಮ್ಮೆಯಾಗಿ ಒಂದುಗೂಡುವುದು ಸಾಧ್ಯವಾಗದೇ ಹೋಗುವುದನ್ನು ಕೂಡ ಈ ಎರಡು ಕಾದಂಬರಿಗಳು ಪ್ರಸ್ತುತಪಡಿಸುತ್ತವೆ. ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ನೆಲೆಗಳನ್ನು ರೂಪಿಸುವ ಪ್ರಭಾವಗಳನ್ನು ಒಂದಾದ ಐರೋಪ್ಯ ಸಾಹಿತ್ಯ ಅನೇಕ ಮಟ್ಟಗಳಲ್ಲಿ ನಮ್ಮ ಸಂಸ್ಕೃತಿಯ ಚಹರೆಗಳನ್ನು ಕಂಡುಕೊಳ್ಳುವುದಕ್ಕೆ ಹೇಗೆ ಸಹಾಯಕವಾಗಿದೆ ಎಂಬುದನ್ನು ಗ್ರಹಿಸಲು ಕುವೆಂಪು ಅವರ ಈ ಎರಡೂ ಕಾದಂಬರಿಗಳು ಮಹತ್ವದ ಪ್ರಮಾಣಗಳನ್ನೇ ಒದಗಿಸಿವೆ.

ವಸಾಹತುಶಾಹಿ ಎಂದರೆ ಹೊರ ಮತ್ತು ಒಳಗಿನ ಕಾರಣಗಳಿಂದ ಏರ್ಪಡುವ ದಮನಾವಸ್ಥೆ. ಯಾವುದೇ ರೀತಿಯ ದಬ್ಬಾಳಿಕೆ, ಶೋಷಿತ ಸ್ಥಿತಿಯನ್ನು ವಸಾಹತುಶಾಹಿ ಸಂಸ್ಕೃತಿಯೆಂದು ನಾವು ತಿಳಿಯುತ್ತೇವೆ. ರಾಷ್ಟ್ರ-ರಾಷ್ಟ್ರಗಳ, ವರ್ಣ-ವರ್ಗಗಳ, ಉಳ್ಳವ- ನಿರ್ಗತಿಕರ, ಗಂಡು-ಹೆಣ್ಣುಗಳ ಮಟ್ಟಗಳಲ್ಲಿ ಏರ್ಪಡುವ ಕ್ರೌರ್ಯ ಶೋಷಿತಾವಸ್ಥೆ, ಧಾರ್ಮಿಕ, ಆರ್ಥಿಕ ಬಲತ್ಕಾರವನ್ನು ವಸಾಹತುಶಾಹಿ ಸಂಸ್ಕೃತಿಯೆಂದು ಗುರುತಿಸಿಕೊಳ್ಳುವುದು ನಮ್ಮ ಈ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ.

ಕುವೆಂಪು ಅವರ ಒಟ್ಟು ಸಾಹಿತ್ಯ ಸೃಷ್ಟಿಯ ಒಂದು ಪ್ರಮುಖ ವಿಚಾರವೆಂದರೆ ಅದು ವಸಾಹತುಶಾಹಿ ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯೇ ಆಗಿದೆ. ಆದ್ದರಿಂದ ಕುವೆಂಪು ಅವರ ಸೃಷ್ಟಿಶೀಲತೆ ಕನ್ನಡ ಸಂಸ್ಕೃತಿಯಲ್ಲಿ ಉಂಟಾದ ಎಲ್ಲ

ಸಂಘರ್ಷಗಳನ್ನು ಅಭಿವ್ಯಕ್ತಿಸುತ್ತ, ಸಮಗ್ರ ಭಾರತೀಯ ಸಂವೇದನೆಯ ನೆಲೆಗೆ ತನ್ನ ಚಿಂತನೆಗಳನ್ನು ಸೇರಿಸಿವೆ. ಸಂಸ್ಕೃತಿಯ ಜೀವಧಾತುಗಳು ಮಠೀಯ ಹಾಗೂ ಮತೀಯ ರಾಜಕಾರಣದ ವಿಭಿನ್ನ ಸಂಘರ್ಷಗಳು ಸೃಜನಶೀಲ ಮನಸ್ಸಿನಲ್ಲಿ ಹೇಗೆ ವಿಶ್ಲೇಷಣೆ-ವಿಮರ್ಶೆಗಳಿಗೆ ಗುರಿಯಾಗುತ್ತದೆಂಬುದರ ಮಹತ್ವದ ವ್ಯಾಖ್ಯೆ ಕುವೆಂಪು ಅವರ ಕೃತಿಗಳಲ್ಲಿ ಕಾಣುತ್ತೇವೆ.ಕಾಲಮಾನದ ವಿವರಗಳು, ಕಾಲಮಾನದ ಆಲೋಚನೆಯ ಆದ್ಯಂತಿಕ ಗತಿ ತರ್ಕಗಳನ್ನು ಕ್ರಿಯಾಶೀಲವಾಗಿಸುವುದು 'ಹೆಗ್ಗಡತಿ' ಹಾಗೂ 'ಮದುಮಗಳು' ಕಾದಂಬರಿಗಳಲ್ಲಿ ಜೀವಂತಗೊಂಡಿದೆ. ಸಂಸ್ಕೃತಿ ಚರಿತ್ರೆಯ ಶುಷ್ಕ ಚಲನೆಗಳನ್ನು ಮೀರಿ ಮಾನವಿಕ ಕ್ರಿಯಾಚರಣೆಯ ಕ್ರಿಯಾ ಸಂಬಂಧಗಳು ಎಂಥ ವಲಯಗಳನ್ನು ಒಳಗೊಳ್ಳುತ್ತವೆ ಎಂಬುದನ್ನು ಕುವೆಂಪು ಕಥಾ ಸಾಹಿತ್ಯ ಎಲ್ಲ ಮಟ್ಟಗಳಲ್ಲಿಯೂ ಶೋಧಿಸುತ್ತದೆ; ಪ್ರಸ್ತುತಪಡಿಸುತ್ತದೆ.

ವಸಾಹತುಶಾಹಿಯ ಕಾರಣದಿಂದ ಉಂಟಾದ ಭೌತಿಕ ಬದಲಾವಣೆಗಳಿಗೂ, ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ಉಂಟಾದ ಅನೇಕ ಮಟ್ಟದ ಅವಸ್ಥಾಂತರಗಳಿಗೂ ಎಂಥ ಸಂಬಂಧಗಳು ಇರಬಹುದೆಂಬುದನ್ನು ಕುವೆಂಪು ಅವರ ಕಥಾಸಾಹಿತ್ಯ ಕೆಲವು ಸೂಕ್ಷ್ಮ ಒಳನೋಟಗಳನ್ನು ಕೊಡುತ್ತದೆ. ಇಡೀ ಸಂಸ್ಕೃತಿಯ ವಿಘಟನೆಯ ರೂಪಕವಾಗಿ ಕೂಡ ಹೆಗ್ಗಡತಿ ಕಾದಂಬರಿಯು ಕುಟುಂಬ ವಿಘಟನೆಯ ರೂಪಗಳು ಅಗಣಿತ ಸ್ವರೂಪದ್ದಾಗಿದ್ದು-ಸಮಾಜದ, ಕುಟುಂಬದ ವಿಘಟನೆ ಭಾರತದ ಮಟ್ಟದ ಸಾಂಸ್ಕೃತಿಕ ವಿಘಟನೆಗೆ ಒಂದು ಗಟ್ಟಿಯಾದ ಮಾದರಿಯನ್ನೇ ತೋರುವಂತದ್ದಾಗಿದೆ. ಗ್ರಾಮೀಣ ಜೀವನದ ನೆಲೆಯಲ್ಲಿ ವ್ಯಕ್ತಿಯ ವಿಘಟನೆಯ ನೆಲೆಗಳನ್ನು ಕಟ್ಟಿ ಕೊಡುತ್ತಲೇ ವ್ಯಕ್ತಿ ಬದುಕಿ ಬಾಳುವ ಇಡೀ ಪರಿಸರದ ವಿಘಟನೆಯ ಸಂದರ್ಭವನ್ನು ಹೆಗ್ಗಡಿತಿಯಂತಹ ಕಾದಂಬರಿಯಲ್ಲಿ ನಾವು ಕಾಣುತ್ತೇವೆ.

> ಹಿಂದಿನಿಂದಲೂ ನಾಡಿಗೊಂದು ಭೂಷಣವಾಗಿ ನಡೆದುಕೊಂಡು ಬಂದಿದ್ದ ದೊಡ್ಡ
> ಕುಟುಂಬ ಈಗ ಒಡೆಯುತ್ತದಂತೆ!........
> ಸುದ್ದಿ ಕೆಲವರಿಗಂತೂ ಕೃಷ್ಣಪ್ಪನ ಘೋರ ಮರಣಕ್ಕಿಂತಲೂ ಹೆಚ್ಚಾದ
> ಕಳವಳಕ್ಕೆ ಕಾರಣವಾಯಿತು. ಕಾನೂರು ಮತ್ತು ಅದರ ನೆರೆಯ ಹಳ್ಳಿ
> ಗಳಲ್ಲಂತೂ ಒಂದು ಸಣ್ಣ ಮರಿಕ್ರಾಂತಿಯೆ ಕಾಲಿಡುವಂತೆ ತೋರುತ್ತಿತ್ತು[೭]

ವ್ಯಕ್ತಿಗಳ ಮಾನಸಿಕ ತುಮುಲ, ಪರಿಸರದಲ್ಲಿಯೇ ಹುಟ್ಟುವ ಅಸಂಖ್ಯ ದ್ವಂದ್ವಗಳು, ಅಧಿಕಾರಾರೂಢ ವ್ಯವಸ್ಥೆಯ ಒಳಹೊರಗುಗಳ ಅನ್ವೇಷಣೆಯನ್ನು ವಿಭಿನ್ನ ನೆಲೆಗಳಲ್ಲಿ ಶೋಧನೆಗೆ ಒಳಪಡಿಸುತ್ತಿರುವ ಪ್ರಕ್ರಿಯೆಯನ್ನು ಈ ಹೊತ್ತಿನ ಓದುಗರಾದ ನಾವು ಗುರುತಿಸಿಕೊಳ್ಳುತ್ತೇವೆ. ಹೀಗಾಗಿ ಕುವೆಂಪು ಅವರ ಕಥಾಸಾಹಿತ್ಯ-ಸಾಹಿತ್ಯದ ಸಂದರ್ಭವೊಂದು ಸಂಸ್ಕೃತಿಯ ಘರ್ಷಣಾಲಯಗಳನ್ನು ಹೇಗೆ ಒಂದು ಸಮಗ್ರೀಕರಣದ ಮಹತ್ವದ ಕಲ್ಪನೆಯನ್ನಾಗಿಸಬಹುದು ಎಂಬುದಕ್ಕೆ ಒಂದು ಕ್ರಿಯಾಶೀಲ ಅಭಿವ್ಯಕ್ತಿಯಾಗಿದೆ.

'ಹೆಗ್ಗಡಿತಿ' ಕಾದಂಬರಿಯ ಅತ್ಯಂತ ಮಹತ್ವದ ಭಾಗವಾದ 'ವರ್ಡ್ಸ್‌ವರ್ತ್-ಮ್ಯಾಥ್ಯೂ ಅರ್ನಾಲ್ಡ್'(೩೯) ಭಾಗ ಅನೇಕ ಮಟ್ಟದ ವಾಸ್ತವಿಕತೆಗಳನ್ನು ಪ್ರತಿನಿಧೀಕರಣಗೊಳಿಸುವ ಭಾಗ. ಎರಡು ಪ್ರಪಂಚಗಳ ವ್ಯಾಖ್ಯಾನವನ್ನು ಏಕತ್ರವಾಗಿ ಸಂಯೋಜಿಸುವ ಭಾಗ ಇದಾಗಿದೆ. ವಸಾಹತುಶಾಹಿ ನೆಲೆಯ ವಿಭಿನ್ನ ವ್ಯಾಖ್ಯೆಗಳು ಹಾಗೂ ಸ್ಥಳೀಯ

ಸಂಸ್ಕೃತಿಯ ನೆಲೆಗಳಲ್ಲಿ ಅಂತಸ್ಥವಾಗಿರುವ ಜೀವಸತ್ವಗಳನ್ನು ಒಂದು ವಾಗ್ವಾದದ ಮೂಲಕ ಈ ಭಾಗ ವಿವೇಚಿಸುತ್ತದೆ. ಈ ಭಾಗದ ಎಲ್ಲ ವಿವರಗಳು ಒಂದಲ್ಲ ಒಂದು ರೀತಿಯಲ್ಲಿ ವಸಾಹತುಶಾಹಿ ಹಾಗೂ ಸ್ಥಳೀಯ ಸಂಸ್ಕೃತಿಗಳ ಸಂಘರ್ಷವನ್ನು, ಅದರ ಎಲ್ಲ ವಿವರಗಳೊಂದಿಗೆ ಕಟ್ಟಿಕೊಡುತ್ತದೆ.

> ಒಬ್ಬರ ಮನೆಗೆ ನೆಂಟರು ಬಂದರೆ ಇನ್ನೊಬ್ಬರು ಅವರನ್ನು ಪರಕೀಯರಂತೆ ಉದಾಸೀನದಿಂದ ನೋಡಿದರೆ ಎಂತಹ ಅವಲಕ್ಷಣವಾಗುತ್ತದೆ! ಒಬ್ಬರ ಮನೆಯಲ್ಲಿ ಅಡುಗೆಯಾಗುವುದು ತಡವಾದರೆ ಇನ್ನೊಬ್ಬರು ಅವರನ್ನು ಬಿಟ್ಟು ಹೇಗೆ ಊಟಕ್ಕೆ ಹೋಗುವುದು? ಒಂದೇ ಸ್ನಾನದ ಮನೆಯಲ್ಲಿ ಎರಡು ಕಡೆ ಒಲಿಗಳಾಗುತ್ತವೆ! ಒಂದೇ ಜಗಲಿಯಲ್ಲಿ ಎರಡು ಜಗಲಿಗಳಾಗಿ ಎರಡು ದೀಪಗಳು ಉರಿಯುತ್ತವೆ![೮]

ಈ ಅಭಿವ್ಯಕ್ತಿಯಲ್ಲಿ ತೋರುವ ವ್ಯಕ್ತ ಹಾಗೂ ಅವ್ಯಕ್ತ ಪ್ರಪಂಚಗಳ ಸೂಕ್ಷ್ಮ ಅವಲೋಕನ ನಾವು ಈ ಹಿಂದೆ ವಿವರಿಸಿದ ಸಾಂಸ್ಕೃತಿಕ ಪಲ್ಲಟದ ನೆಲೆಗಳನ್ನು ಹೆಚ್ಚು ಸೂಕ್ಷ್ಮ ಗ್ರಾಹಿಯನ್ನಾಗಿಸುತ್ತದೆ.

ಕಾನೂರನ್ನು ಪ್ರವೇಶಿಸುತ್ತಿರುವ ಹೊಸ ವಿಚಾರಗಳನ್ನು ಕಾದಂಬರಿಯ ಪಾತ್ರಗಳಲ್ಲಿ ಒಂದಾದ ಹೂವಯ್ಯ ಕುತೂಹಲದಿಂದ ಗ್ರಹಿಸುತ್ತಿದ್ದಾನೆ. ಕಾನೂರಿನ ಸಂಕಟಗಳೊಂದಿಗೆ, ಭಾರತೀಯರ ಸ್ವರಾಜ್ಯ ಸಂಪಾದನೆಯ ಪ್ರಯತ್ನದ ಸಂಕಟಗಳು, ರಾಷ್ಟ್ರನಾಯಕರ ಅಂದೋಲನಕಾರಕ ಉಪನ್ಯಾಸಗಳು, ಬ್ರಿಟಿಷರ ದಬ್ಬಾಳಿಕೆಯ ನಡತೆಗಳು, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮೇಲೆ ನಡೆಯುತ್ತಿದ್ದ ಅತ್ಯಾಚಾರಗಳು, ಮುಖಂಡರ ದಸ್ತಗಿರಿಗಳು-ಇವೆಲ್ಲವೂ ಹೂವಯ್ಯನ ಅಂತರಂಗ ಹಾಗೂ ಕಾನೂರಿನ ಅಂತರಂಗವನ್ನೇ ಕಲಕಿದ ಸಂದರ್ಭಗಳಾಗಿವೆ.

ಕಾನೂರಿನ ಸಂದರ್ಭದಲ್ಲಿ ನೆಲೆಗೊಂಡಿದ್ದ ಮನುಷ್ಯ ಪರಿಸರ ಸಂಬಂಧಗಳು ಮತ್ತು ಅಂಥ ಪರಿಸರದ ಮೇಲೆ ಆಕ್ರಮಣಶಾಲಿಯಾದ ವಸಾಹತುಶಾಹಿಗೂ ನಡುವೆ ಏರ್ಪಡುವ ವ್ಯಾಪಾರಗಳನ್ನು ಇಂಥ ಸಂದರ್ಭ ಒಂದು ವ್ಯಾಪಕ ಭಿತ್ತಿಯನ್ನೇ ನಿರ್ಮಿಸಿದೆ. ಕಾನೂರನ್ನು ಪ್ರವೇಶಿಸುತ್ತಿರುವ ಜಾಗತಿಕ ಸುದ್ದಿಗಳು ಪರಿಸರದಲ್ಲಿಯೇ ಮೊಳೆಯುತ್ತಿರುವ ಅಸಂಖ್ಯ ಅತಂಕ, ತಲ್ಲಣ ಹಾಗೂ ಹೊಸ ಸ್ಫೋಟಗಳನ್ನು ಅನುರಣಗೊಳಿಸುತ್ತದೆ.

ಕುವೆಂಪು ಅವರ ಸೃಜನಶೀಲತೆ- ಆರ್ಷೇಯ ಹಾಗೂ ಹೊಸ ಮೌಲ್ಯಗಳ ಸಂಪರ್ಕ ಹಾಗೂ ಸಂಘರ್ಷಗಳ ಮುಖ್ಯ ಚಿಂತನೆಗಳನ್ನು ವಿಶ್ಲೇಷಿಸುತ್ತದೆ. ಈ ಎರಡು ಸಂಬಂಧಗಳು ನಮ್ಮ ಪರಂಪರೆಯ ನೆಲೆಗಳೊಂದಿಗೆ ವಸಾಹತುಶಾಹಿ ಸಂಬಂಧಗಳನ್ನು ಸಮೀಕ್ಷಿಸುವುದಾಗಿದೆ. ಈ ಎರಡೂ ಸಂದರ್ಭಗಳಲ್ಲಿ ಪ್ರಕಟಗೊಳ್ಳುವ ಮಾನವೀಯ ಹಾಗೂ ಅಮಾನವೀಯ ಸಂಬಂಧಗಳನ್ನು ಎದುರುಗೊಳಿಸುವುದರ ಮೂಲಕ ಪ್ರಸ್ತುತ ಸಂದರ್ಭವನ್ನು ಹೆಚ್ಚು ಸೂಕ್ಷ್ಮವಾಗಿ ಪರಿಭಾವಿಸುವ ಗ್ರಹಿಕೆ ಓದುಗನ ಸಂದರ್ಭದಲ್ಲಿ ಸೃಷ್ಟಿಸುತ್ತದೆ.

ವಸಾಹಾತುಶಾಹಿ ಸಂದರ್ಭವನ್ನು ಪ್ರಶ್ನಿಸುವಂತೆಯೇ ಸಾಂಪ್ರದಾಯಿಕ ಗೊಡ್ಡು ನಂಬಿಕೆಗಳನ್ನು ಪ್ರಶ್ನಿಸುವ ಸಂವೇದನೆ, ಹಾಗೂ ಆ ನಂಬಿಕೆಗಳ ಪ್ರಪಂಚದಲ್ಲಿ ತೊಡಗಿರುವ ನೆಲೆಗಳನ್ನು ಕೂಡ ವಿಮರ್ಶಾತ್ಮಕವಾಗಿ ವಾಗ್ವಾದಕ್ಕೆ ಒಡ್ಡುತ್ತದೆ.

ಪರಕೀಯ ಪ್ರಭಾವ ಹಾಗೂ ನಮ್ಮ ಸಂಸ್ಕೃತಿಯಲ್ಲಿಯೇ ನೆಲೆಗೊಂಡಿರುವ ಅನೇಕ ಅಸಾಂಗತ್ಯಗಳ ವಿರುದ್ಧ ರೂಪುಗೊಂಡ ಪ್ರತಿಭಟನೆಯ ನೆಲೆಗಳನ್ನು ಕುವೆಂಪು ಕಥಾಸಾಹಿತ್ಯ ಒಂದು ಸಾಂಸ್ಕೃತಿಕ ವಾಗ್ವಾದವೆಂಬಂತೆ ಪ್ರಸ್ತುತಪಡಿಸುತ್ತದೆ. ನಮ್ಮ ಸಂಸ್ಕೃತಿಯ ಜೀವಂತ ಹಾಗೂ ಮೃತಾವಸ್ಥೆಯ ಸ್ವರೂಪವನ್ನು ತಮ್ಮ ಕಾದಂಬರಿಗಳಲ್ಲಿ ಒಂದು ಮಹತ್ವದ ಚರ್ಚೆಯಾಗಿಸುತ್ತಾರೆ. ದೈವ, ಸ್ವರ್ಗ, ನರಕ, ಧಾರ್ಮಿಕ ನಂಬಿಕೆಗಳಂಥ ನಮ್ಮ ಸಂಸ್ಕೃತಿಯಲ್ಲಿಯೇ ಪ್ರವೃತ್ತವಾಗಿದ್ದ ನೆಲೆಗಳು, ಅಂಥದೇ ಸಂದರ್ಭವೊಂದು ಅನ್ಯ ಸಂಸ್ಕೃತಿಯಿಂದ ಪ್ರದಾನವಾಗುವಂತಹ ನೆಲೆಗಳನ್ನು ವಸ್ತುನಿಷ್ಠ ವಿಮರ್ಶೆಗೆ ಗುರಿಪಡಿಸುತ್ತಾರೆ.

ಭಾರತದ ಆ ಕಾಲದ ಚಿಂತನಾ ಕೇಂದ್ರಗಳಾದ ಗಾಂಧಿವಾದ, ಮಾನವತಾವಾದ, ಸಮಾಜವಾದ, ವರ್ಗ-ವರ್ಣ-ಜಾತಿಗಳ ನೆಲೆಗಳನ್ನು ಒಂದು ನಿರ್ದಿಷ್ಟ ಸಂಸ್ಕೃತಿಯ ಸಂದರ್ಭದ ಪ್ರಕ್ರಿಯೆಯ ಭಾಗವಾಗಿ ಗುರುತಿಸುವ ಪ್ರಜ್ಞಾಪೂರ್ವಕವಾದ ದೃಷ್ಟಿಯೊಂದು ಅವರ ಕಥಾ ಸಾಹಿತ್ಯದ ಎಲ್ಲ ಹಂತಗಳಲ್ಲಿಯೂ ನಾವು ಗುರುತಿಸಬಹುದಾಗಿದೆ.

ಇದರೊಂದಿಗೆ ಕುವೆಂಪು ಕಥಾಸಾಹಿತ್ಯ ಮನುಷ್ಯ ಹಾಗೂ ಮನುಷ್ಯನ ಅನೇಕ ಆದ್ಯಂತಿಕ ಪ್ರಶ್ನೆಗಳನ್ನು ತನ್ನ ಕಕ್ಷೆಗೆ ಒಳಗುಪಡಿಸಿಕೊಂಡಿದೆ.

ಸಾಹಿತ್ಯಕೃತಿಯೊಂದು ಮನುಷ್ಯ ಪರಿಸರದ ಜಟಿಲ ಸಂಬಂಧಗಳನ್ನು ಅನ್ವೇಷಿಸುವ ಮೂಲಕ ಸಂಸ್ಕೃತಿಯ ಸರ್ವವ್ಯಾಪಿಯಾದ ವ್ಯಾಖ್ಯೆ ಹಾಗೂ ವಿಶ್ಲೇಷಣೆಯಾಗುವ ನೆಲೆಗಳನ್ನು ಹೇಗೆ ಒಂದು ಸಮಗ್ರ ರೂಪಕವಾಗಬಲ್ಲದೆಂಬುದಕ್ಕೆ ಕುವೆಂಪು ಸಾಹಿತ್ಯದ ನೆಲೆಗಳು ಒಂದು ಶ್ರೇಷ್ಠಮಟ್ಟದ ಅಭಿವ್ಯಕ್ತಿಯಾಗುತ್ತದೆಂಬುದನ್ನು ನಾವು ತಿಳಿಯುತ್ತೇವೆ.

**ಅಡಿಟಿಪ್ಪಣಿ**

೧. ಕುವೆಂಪು: *ಮಲೆಗಳಲ್ಲಿ ಮದುಮಗಳು*, ಉದಯರವಿ ಪ್ರಕಾಶನ, ಮೈಸೂರು, ೧೯೮೫, ಪುಟ-೩೦೯-೩೧೦.

೨. ಅದೇ, ಪುಟ-೨೧೭-೨೧೮

೩. ಅದೇ, ಪುಟ-೨೧೮

೪. ಕುವೆಂಪು: *ಕಾನೂರು ಹೆಗ್ಗಡತಿ*, ಉದಯರವಿ ಪ್ರಕಾಶನ, ಮೈಸೂರು, ೧೯೭೦, ಪುಟ-೩೦೯-೩೧೦

೫. ಕುವೆಂಪು: *ಮಲೆಗಳಲ್ಲಿ ಮದುಮಗಳು*, ಉದಯರವಿ ಪ್ರಕಾಶನ, ಮೈಸೂರು, ೧೯೮೫, ಪುಟ-೧೭೩.

೬. ಅದೇ, ಪುಟ-೪೬೭

೭. ಕುವೆಂಪು: *ಕಾನೂರು ಹೆಗ್ಗಡತಿ*, ಉದಯರವಿ ಪ್ರಕಾಶನ, ಮೈಸೂರು,೧೯೭೦, ಪುಟ-೩೨೧-೩೨೨.

೮. ಅದೇ, ಪುಟ-೩೨೭

ಅನುಬಂಧ ಎರಡು

# ಕುವೆಂಪು ನಾಟಕಗಳು :
# ಪುರೋಹಿತ - ವಸಾಹತುಶಾಹಿಗೆ ತೋರಿದ ಪ್ರತಿಕ್ರಿಯೆ

ವರ್ಣವ್ಯವಸ್ಥೆಯಂಥ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹುಟ್ಟಿ ಬೆಳೆದು ಶಿಕ್ಷಣವನ್ನು ಪಡೆದ ಕೆಲವರ್ಗದವರ ಗುರುತರವಾದ ಬಾಧ್ಯತೆಯೆಂದರೆ ಅಂತಹ ವ್ಯವಸ್ಥೆ ಹುಟ್ಟು ಹಾಕಿದ ಎಲ್ಲ ಪ್ರಮಾಣದ ಅಮಾನವೀಯತೆಯ ಬಗೆಗೆ ನಡೆಸುವ ಹೋರಾಟ. ವ್ಯರ್ಣವ್ಯವಸ್ಥೆ ಹುಟ್ಟುಹಾಕಿದ ಅಂತರಗಳನ್ನು, ಬದುಕಿನ ದಿಕ್ಕನ್ನು ತಿರುಚಿದ ನೆಲೆಗಳನ್ನು ಶೋಧಿಸುವುದು ಹಾಗೆ ಶೋಧಿಸುವುದರ ಮೂಲಕ ಅಂತಹ ವ್ಯವಸ್ಥೆಯನ್ನು ಪುನರ್ ರಚಿಸಬೇಕಾದ ಜವಾಬ್ದಾರಿ ಅವನದಾಗುತ್ತದೆ. ಆದರೆ ಇಂತಹ ಹೊಣೆ, ಜವಾಬ್ದಾರಿಯನ್ನು ಹೊರಲು ಎಲ್ಲರಿಗೂ ಸಾಧ್ಯವಿಲ್ಲವಾದರೂ ಅನೇಕರು ಅಂಥ ಹೊಣೆ ಹೊತ್ತಿದ್ದನ್ನು ಅನೇಕ ಸಾಂಸ್ಕೃತಿಕ ದಾಖಲೆಗಳ ನಿದರ್ಶನಗಳಿಂದ ವೇದ್ಯವಾಗುವ ಸಂಗತಿಯಾಗಿದೆ. ಕನ್ನಡದ ಸಂದರ್ಭದಲ್ಲಿ ಕುವೆಂಪು ಅವರ ಕೃತಿಗಳ ವಿಚಾರಧಾರೆ ಆ ಬಗೆಯ ಜವಾಬ್ದಾರಿಯನ್ನು ಹೊತ್ತಿರುವುದು ಕಂಡುಬರುತ್ತದೆ.

ವರ್ಣ ವ್ಯವಸ್ಥೆಯಲ್ಲಿಯೇ ಇದ್ದ ಮಾನವೀಯ ಮೂಲಸೆಲೆಗಳನ್ನು ಹುಡುಕುವುದರ ಮೂಲಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಹಾಗೂ ಮತೀಯ ನೆಲೆಗಳಲ್ಲಿ ಹಲವು ಬದಲಾವಣೆಗಳನ್ನು ಇಂದು ಕಾಣುತ್ತಿರುವುದಕ್ಕೆ ಅಂಥ ಜವಾಬ್ದಾರಿಯೇ ಕಾರಣವಾಗಿದೆ. ಆ ಮೂಲಕ ದೇಸಿಯ ಸತ್ವಗಳನ್ನು ಹೆಕ್ಕಿ ಹೊರತೆಗೆಯುವ ಕೆಲಸವೂ ನಡೆದಿದೆ. ಈ ಮಾದರಿಯ ಹೋರಾಟ ಗಾಂಧಿ, ಅಂಬೇಡ್ಕರ್‌ರವರಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಪ್ರಕಟಗೊಂಡರೆ, ಕುವೆಂಪು ಅಂತಹವರ ಸೃಷ್ಟಿಶೀಲ ಬರಹಗಳಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಾಣಿಸಿಕೊಳ್ಳುತ್ತದೆ. ಆ ಮುಖೇನ ಅದು ಸಾರ್ವತ್ರಿಕಗೊಳ್ಳುವ ಬಗೆಯೂ ಅತ್ಯಂತ ಪರಿಣಾಮಕಾರಿಯಾದುದು. ಹಾಗೂ

ಕೂತೂಹಲವಾದುದು. ಕುವೆಂಪು ಕೃತಿಗಳಲ್ಲಿ ಇಂತಹ ಹೋರಾಟ ಮುಖ್ಯ ಭಿತ್ತಿಯಾಗಿ, ನಿರಂತರವಾಗಿ ಚಲನಶೀಲವಾಗುವುದನ್ನು ಕಾಣುತ್ತೇವೆ. ಈ ಮಾದರಿಯ ಕೃತಿಗಳ ಓದು, ಅಧ್ಯಯನ, ಈ ಹೊತ್ತಿನ ನವ ವಸಾಹತುಶಾಹಿಯ ಹಿಡಿತಕ್ಕೆ ಸಿಕ್ಕ ಸನ್ನಿವೇಶದಲ್ಲಿ ಅಂದಿನ ಭಾರತೀಯನೊಬ್ಬನ ದ್ವಂದ್ವ ಬದುಕು, ವಿಚಾರಧಾರೆಯನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ.

ಕುವೆಂಪು ಅವರು ಭಾರತೀಯ ಹಾಗೂ ಪಾಶ್ಚಿಮಾತ್ಯ ಮೂಲ ವಿಚಾರಧಾರೆಗಳ ಬಗೆಗೆ ತೋರಿಸಿದ ಆಕರ್ಷಣೆ ಮತ್ತು ವಿಕರ್ಷಣೆಗಳು ಅತ್ಯಂತ ಸಂಕೀರ್ಣವಾದವು. ಆದ್ದರಿಂದಲೇ ಕುವೆಂಪು ಕೃತಿಗಳ ಆತುರದ ಓದುಗ ಹಲವು ದುಡುಕಿನ ನಿರ್ಧಾರಗಳಿಗೆ ಬಂದಿರುವುದನ್ನು ಕನ್ನಡ ವಿಮರ್ಶೆಯಲ್ಲಿ ಕಾಣಬಹುದು. ಮಾನವೀಯ ಬದುಕು ನಡೆಸಬೇಕೆಂಬುದು ಕುವೆಂಪು ಕೃತಿಗಳ ಆಶಯ. ಅಂತಹ ಆಶಯವನ್ನು ಎಲ್ಲೆಲ್ಲಿಯೂ ಕಾಣಲು ಬೇಕಾದ ವಾತಾವರಣವನ್ನು ಕಟ್ಟಿಕೊಡಲು ಅಭಿವ್ಯಕ್ತಿ ಮಾಧ್ಯಮದ ಮೂಲಕ ಅವರ ಸಂವೇದನೆ ಶೋಧಿಸ ತೊಡಗುತ್ತದೆ. ಈ ಕಾರಣವಾಗಿ ಅವರಿಗೆ ಪಾಶ್ಚಾತ್ಯ ಹಾಗೂ ಪುರೋಹಿತಶಾಹಿ ನೆಲೆಗಳಲ್ಲಿಯೇ ಇರುವ ಅಮಾನವೀಯ ಬದುಕಿನ ವಿಮರ್ಶೆ ಮಾನವೀಯ ಬದುಕಿನ ಶೋಧನೆಯನ್ನು ಭಾರತೀಯ ಸಂಸ್ಕೃತಿಯ ನೆಲೆಯಲ್ಲಿಯೆ ಶೋಧಿಸಿಕೊಳ್ಳಲು ತೊಡಗಿದ್ದು, ತೊಡಗಿರುವುದು ಅವರ ಕೃತಿಗಳಿಂದ ತಿಳಿದು ಬರುತ್ತದೆ. ರಾಮಾಯಣ, ಮಹಾಬಾರತ ಹಾಗು ಇನ್ನು ಹಲವು ಪುರಾಣಕೃತಿಗಳ ವಿಮರ್ಶೆ, ವಿಶ್ಲೇಷಣೆ ಮತ್ತು ಪುನರ್‌ವ್ಯಾಖ್ಯಾನಗಳ ಮೂಲಕ ಅವರ ಸಂವೇದನೆ ಕ್ರಿಯಾಶೀಲವಾಗುತ್ತದೆ. ಆ ಮುಖೇನ ಭಾರತೀಯ ಮನೋಭೂಮಿಕೆಯನ್ನು ಪ್ರವೇಶಿಸಿ, ಇದುವರೆಗೂ ಕಟ್ಟಿಕೊಂಡಿದ್ದ ನಂಬಿಕೆಯನ್ನು ಮುರಿಯಲು ಯತ್ನಿಸುತ್ತದೆ ಮತ್ತು ಅಂತಹ ನಂಬಿಕೆಗೆ ನಿತ್ಯಸತ್ಯಗಳನ್ನು ಎದುರಾಗಿಸುವ ಕ್ರಿಯೆಯನ್ನು ನಾಟಕಗಳಲ್ಲಿ ಬಹುಮುಖ್ಯವಾಗಿ ಕಾಣುತ್ತೇವೆ. ಹೀಗೆ ಒಂದು ಹೊಸ ರೀತಿಯ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಳವಳಿಯನ್ನು ಹುಟ್ಟು ಹಾಕುತ್ತದೆ. ಅಂತಹ ಚಳವಳಿಗೆ ಬೇಕಾದ ತಳಪಾಯವನ್ನು ಭದ್ರಪಡಿಸಿಕೊಳ್ಳಲು ವಿವೇಕಾನಂದ, ಪರಮಹಂಸ, ಗಾಂಧಿ, ಅಂಬೇಡ್ಕರರಂತಹವರ ವಿಚಾರಧಾರೆಗೆ ಸೃಷ್ಟಿಕ್ರಿಯೆ ಸ್ಪರ್ಶವನ್ನು ಕೊಡುವುದರ ಮೂಲಕ ಸಂಕೀರ್ಣ ಸಂಘರ್ಷವೊಂದನ್ನು ಕಟ್ಟಿಕೊಡುತ್ತದೆ. ಇಂತಹ ಸಂಘರ್ಷ 'ಜಲಗಾರ', 'ಶೂದ್ರ ತಪಸ್ವಿ' ಯಂತಹ ಕೃತಿಗಳಲ್ಲಿ ಪ್ರಖರವಾಗಿಯೂ 'ಶ್ರೀ ರಾಮಾಯಣದರ್ಶನಂ' ನಂತಹ ಕೃತಿಗಳಲ್ಲಿ ಗುಪ್ತಗಾಮಿನಿಯಾಗಿಯೂ ಪ್ರವಹಿಸುವುದನ್ನು ಅಧ್ಯಯನದಿಂದ ಕಂಡುಕೊಳ್ಳಬಹುದು. ಹೀಗೆ ಗುಪ್ತಗಾಮಿನಿಯಾಗಿ ಪ್ರವಹಿಸುವ ವಿಚಾರಧಾರೆಯನ್ನು ಬೇರ್ಪಡಿಸಿ ನೋಡುವುದು ಅಷ್ಟು ಸುಲಭವಲ್ಲ. ಪ್ರಾಚ್ಯ ಹಾಗೂ ಪಾಶ್ಚಾತ್ಯ ವಿಚಾರಧಾರೆ ಒಂದರೊಳಗೆ ಮತ್ತೊಂದು ಮುಪ್ಪುರಿಗೊಂಡಿದೆ. ಅಂತಹ ಹೆಣಿಗೆ ಕುವೆಂಪು ಕೃತಿಗಳಿಗೆ ಅನನ್ಯತೆಯನ್ನು, ಸಂಕೀರ್ಣತೆಯನ್ನೂ ತಂದುಕೊಟ್ಟಿದೆ. ಹಾಗಾಗಿ ವಿರಾಟ್ ವ್ಯಂಗ್ಯವೊಂದು ದತ್ತವಾಗಿದೆ. ಈ ಕಾರಣದಿಂದ ಇವರ ಒಟ್ಟು ಕೃತಿಗಳಿಂದ ಹೊರಡುವ ವ್ಯಂಗ್ಯ ಸುಲಭವಾಗಿ ದೊರೆಯದೆ ಹೋಗುವ ಸಂಭವವೂ ಇದೆ. ಬೇರೆ ಬೇರೆ ಸ್ತರಗಳಲ್ಲಿ ಇಂಥ ವ್ಯಂಗ್ಯ ಪ್ರಕಟವಾಗುವುದು ವಿಶಿಷ್ಟವಾಗಿದೆ. ಮತೀಯ ವಿಚಾರಗಳಲ್ಲದೆ ರಾಜಕೀಯ, ಸಾಮಾಜಿಕ, ಆಧ್ಯಾತ್ಮಿಕ ಹಾಗೂ ನೈತಿಕ ವಿಚಾರಗಳು ಈ ಮಾದರಿಯ ವ್ಯಂಗ್ಯಕ್ಕೆ ಗುರಿಯಾಗುವುದನ್ನು ಕಾಣಬಹುದು.

ನೇಗಿಲ ಗೆರೆಯೇ ತೋರುವುದೆನಗೆ
ಮುಕ್ತಿಯ ಹಾದಿಯನು;
ವೇದಗಳೆಲ್ಲಾ ನೆಗೆನಗೆದರಿಯದ
ಅಂತ್ಯದ ಆದಿಯನು
ನನ್ನಿಯನರಿಯುವೆ ಕರ್ಮದಲಿ!
ಸೊಗವನು ಕಾಣುವೆ ಧರ್ಮದಲಿ:[೨]

ಪರಂಪರೆಯಿಂದ ನಂಬಿಕೊಂಡು ಬಂದಿರುವ ಸಂಕೀರ್ಣವಾದ ವಿಚಾರಧಾರೆಯನ್ನು ಇಲ್ಲಿ ಅತ್ಯಂತ ಪರಿಣಾಮಕಾರಿಯಾಗಿಯೂ, ಸೂಕ್ಷ್ಮವಾಗಿ ಅಭಿವ್ಯಕ್ತಿಗೆ ಗುರಿಪಡಿಸಿರುವುದನ್ನು ಗಮನಿಸಬಹುದು. ಸಮಕಾಲೀನ ಭಾಷೆ, ವಸ್ತು, ತಂತ್ರಗಳನ್ನು ಉದ್ದೇಶಪೂರ್ವಕವಾಗಿಯೇ ನವೀಕರಿಸಿಕೊಳ್ಳುವುದನ್ನು ಕಾಣುತ್ತೇವೆ. ತಾನು ಪ್ರಕಟಪಡಿಸಬೇಕಾದ ಕಾಣ್ಕೆಯನ್ನು, ಸಾಧ್ಯತೆಗಳನ್ನು ಈ ಮಾದರಿಯ ಕೃತಿಗಳು ಹುಟ್ಟು ಹಾಕುತ್ತವೆ. ಶೂದ್ರ ಪ್ರಜ್ಞೆಯ ಕುವೆಂಪು ಸಂವೇದನೆ ಶಿಷ್ಟ ಭಾಷೆಯನ್ನು ತಮ್ಮ ಕೃತಿಗಳಿಗೆ ಅಳವಡಿಸಿಕೊಂಡಿದ್ದರ ಬಗ್ಗೆ ಕನ್ನಡ ವಿಮರ್ಶಾವಲಯದಲ್ಲಿ ದೊಡ್ಡದಾಗಿಯೇ ಟೀಕೆಗಳು ಬಂದಿವೆ. ಶಿಷ್ಟ ಭಾಷೆಯನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ರೂಪಿಸಿಕೊಂಡ ಪರಂಪರೆಯನ್ನು ಕೃತಿರೂಪಕ್ಕೆ ಇಳಿಸುವುದರ ಮುಖೇನ ವಿಶಿಷ್ಟ ಮಾದರಿಯ ತಂತ್ರವೊಂದು ಅವರ ಕೃತಿಗಳಿಗೆ ಪ್ರಾಪ್ತವಾಗುವುದನ್ನು ಇಂತಹ ಕಡೆ ಮರೆತಂತೆ ಕಾಣುತ್ತದೆ. ಹೀಗಾಗಿ ಕುವೆಂಪು ಇಂಥ ಮಾದರಿಯೊಂದರ ಶೋಧನೆಯ ಮೂಲಕವೇ ಪುರೋಹಿತಶಾಹಿ ಸಂಸ್ಕೃತಿಗೆ ತಮ್ಮ ಪ್ರತಿಕ್ರಿಯೆಯನ್ನು ತೋರಿದಂತೆ ಕಾಣುತ್ತದೆ.

ಕನ್ನಡ ನಾಟಕ ಸಾಹಿತ್ಯದಲ್ಲಿ ಕುವೆಂಪು ಅವರದು ವಿಶಿಷ್ಟವಾದ ಮಾರ್ಗವಾಗಿ ಕಾಣುವುದು ಪುರಾಣ ಪ್ರತಿಮೆಗಳನ್ನು ಸಮಕಾಲೀನ ಸಂದರ್ಭದಲ್ಲಿ ಮುಖಾಮುಖಿಯಾಗಿಸುವುದರಿಂದ. ಕುವೆಂಪು ಅವರು ಪ್ರತಿಮಾ ನಾಟಕ ವಿಧಾನವನ್ನು ಅನಿವಾರ್ಯವಾಗಿ ಹಾಗೂ ಉದ್ದೇಶಪೂರ್ವಕವಾಗಿಯೇ ಅವಲಂಬಿಸಬೇಕಾಗಿ ಬಂದಂತೆ ಕಾಣುತ್ತದೆ. ವಾಸ್ತವವಾದಿ ನಾಟಕಮಾರ್ಗ ಅಥವಾ ಪ್ರತಿಕೃತಿ ಮಾದರಿಯ ಬಗೆಗೆ ಅವರಿಗೆ ಒಲವಿಲ್ಲ. ಪುರೋಹಿತಶಾಹಿ ಸಂಸ್ಕೃತಿಗೆ ತಮ್ಮ ಪ್ರತಿಕ್ರಿಯೆಯನ್ನು ತೋರಲು ಶೂದ್ರ ಪ್ರಜ್ಞೆ ಅನಿವಾರ್ಯವಾಗಿ ಇಂಥ ಮಾರ್ಗವನ್ನು ಅನುಸರಿಸಬೇಕಾಗಿ ಬಂದುದು ನಮ್ಮ ಸಂಸ್ಕೃತಿಯ ದುರಂತವೂ ಹೌದು. ವೈದಿಕ ವರ್ಗದಿಂದ ಬಂದ ಕೈಲಾಸಂ , ಶ್ರೀರಂಗರು 'ವಾಸ್ತವವಾದಿ' ಮಾರ್ಗವನ್ನು ಅನುಸರಿಸಿ ಕೃತಿ ರಚನೆ ಮಾಡಿದಂತೆ, ಶೂದ್ರನೊಬ್ಬ ಹಾಗೆ ಬರೆಯುವ ಸಾಮಾಜಿಕ ಪರಿಸರ ಆಗ ನಿರ್ಮಾಣವಾಗಿರಲಿಲ್ಲ ಎಂಬುದು ಗಮನಾರ್ಹವಾದುದು . ಶೂದ್ರತಪಸ್ವಿ ಕೃತಿಯನ್ನು ಕುರಿತು ಮಾಸ್ತಿಯವರ ವಿಮರ್ಶೆಯನ್ನು, ಅದಕ್ಕೆ ಕುವೆಂಪು ಅವರ ಮಾರ್ನುಡಿಯನ್ನು ಇಲ್ಲಿ ಗಮನಿಸಬಹುದು.

> ಮಾಸ್ತಿ : ವಕ್ರದೃಷ್ಟಿ ಹಿಂದಿನ ಕಥೆಯನ್ನು ತಿದ್ದುವೆವೆಂದು ಹೋಗುವುದು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ, ಇಂದು ನಾವು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ, ಹೊಸಕಾಲದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ ಎಂದು ನಾನು ಶ್ರೀ ಪುಟ್ಟಪ್ಪನವರಿಗೆ ಸೂಚಿಸುತ್ತೇನೆ. ಪುಟ್ಟಪ್ಪ :

> ಈ ಟೀಕೆ ಮತ್ತು ಸೂಚನೆ ಅತ್ಯಂತ ಆಶ್ಚರ್ಯಕರವೂ ಹಾಸ್ಯಾಸ್ಪದವೂ ಆಗಿ ತೋರುತ್ತದೆ. ''ಅತ್ತ ಪುಲಿ ಇತ್ತ ದರಿ'' ಹೊಸಕಾಲದ ಹೊಸ ಧರ್ಮವನ್ನು ಹೇಳಲು ಹೊಸ ಕಥೆಯನ್ನು ಕಟ್ಟಿದರೆ ಸಜೀವವಾಗಿ ಜಾತಿ ವಿದ್ವೇಷದ ಉದ್ರೇಕ ಭೂತಗಳನ್ನು ಎಬ್ಬಿಸುತ್ತದೆ. ಆ ಸ್ಥಳದವರೂ, ಈ ಮಠದವರೂ ಆ ಜಾತಿಯವರು, ಆ ಕೋಮಿನವರು ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ. ಆ ರಗಳೆಯೆ ಬೇಡವೆಂದು ಹಳೆಯ ಕಥೆಗಳನ್ನು ಅಳವಡಿಸಿಕೊಂಡರೆ ವಿಮರ್ಶಕರು ನಮ್ಮ 'ಕ್ಷೇಮ'ದ ವಿಚಾರವಾಗಿ ಕಾತರರಾಗಿ ಸೂಚನೆ ಕೊಡ ಹೋಗುತ್ತಾರೆ.[೨]

ಇಂತಹ ಸಂಘರ್ಷ ಮಾಸ್ತಿಯ ನಂತರವೂ ಬೇರೊಂದು ನೆಲೆಗಳಲ್ಲಿ ಮುಂದುವರಿದಿರುವುದನ್ನು ಕಾಣಲು ಕನ್ನಡ ವಿಮರ್ಶೆಯಲ್ಲಿ ಹಲವು ಉದಾಹರಣೆಗಳು ದೊರೆಯುತ್ತವೆ. ಈ ಬಗೆಯ ಹಲವು ಟೀಕೆ-ವಿಮರ್ಶೆಗಳಿಗೆ ಅವರ ನಾಟಕಗಳು ನಿರಂತರವಾಗಿ ಎದುರಾಗುತ್ತಿರುವುದಕ್ಕೆ, ಅವರ ನಾಟಕಗಳು ಶೋಧಿಸುತ್ತಿರುವ ನೆಲೆಗಳೇ ಕಾರಣವೆಂದರೂ ಉತ್ಪ್ರೇಕ್ಷೆಯಾಗಲಾರದು. ಜಾತಿ ವ್ಯವಸ್ಥೆಯ ಕ್ರೌರ್ಯ, ಧರ್ಮ-ದೇವರು, ಸಾಮಾಜಿಕ, ರಾಜಕೀಯ ಅಸಮತೋಲನ, ಸಾಮ್ರಾಜ್ಯಶಾಹಿ ವ್ಯವಸ್ಥೆಯಿಂದ ಎದುರಾಗುವ ದುರಂತ, ಯುದ್ಧದ ಕ್ರೌರ್ಯ, ರಾಷ್ಟ್ರೀಯ ಚಿಂತನೆಗಳು, ಗಂಡು-ಹೆಣ್ಣು, ಶ್ರೀ ಸಾಮಾನ್ಯರ ಬದುಕಿನ ಬಗೆಗಿನ ಕಾಳಜಿಗಳು - ಹೀಗೆ ಕುವೆಂಪು ಅವರ ನಾಟಕಗಳ ಮುಖ್ಯ ನೆಲೆಗಳನ್ನು ಗುರುತಿಸಿಕೊಳ್ಳಬಹುದು.

ಲೋಕದ ಅಸಹ್ಯ ವರ್ಣವ್ಯವಸ್ಥೆಯನ್ನು ಕಸದಂತೆ ಗುಡಿಸಿ ಹಾಕುವ ಹಾಗೂ ಹೊಸದೊಂದು ವ್ಯವಸ್ಥೆಯನ್ನು ಕಟ್ಟ ಬಯಸುವ ಆಶಯವನ್ನು 'ಜಲಗಾರ' ನಾಟಕದಲ್ಲಿ ಕಾಣುತ್ತೇವೆ. ಜಲಗಾರನ ಗುಡಿಸುವ ಕ್ರಿಯೆ ಹಲವು ಅರ್ಥ ಪರಂಪರೆಗಳನ್ನು ಹೊರಡಿಸುತ್ತದೆ. ಗಾಂಧಿ, ಅಂಬೇಡ್ಕರರ ವಿಚಾರಧಾರೆಗೆ ವಚನಕಾರರ 'ಕಾಯಕ ತತ್ವ'ದ ವಿಚಾರಗಳು ಇಲ್ಲಿ ಮೈ ಪಡೆದಿವೆ. ಪೂಜೆ, ದೇವರು, ಧಾರ್ಮಿಕ ನೆಲೆಗಳಿಗೆ ಹಲವು ಅರ್ಥಪರಂಪರೆಗಳು ಎದುರಾಗುತ್ತವೆ.

> ಜಲಗಾರ : ಕರ್ಮವರಾಧನೆಯು, ಸೇವೆಯೇ ಪೂಜೆ,
> ನನ್ನ ಭಾಗಕ್ಕೆ ಪೊರಕೆಯಾರತಿಯ, ಗುಡಿಸುವುದೆ
> ನನ್ನ ದೇವರ ಪೂಜೆ!
> - - - - - - - - - - - - - - - -
> ನನ್ನೆದೆಯೆ ದೇಗುಲುವು; ನನ್ನೊಲ್ಮೆಯದು ಪೂಜೆ
> - - - - - - - - - - - - - - - -
> ತಿರುಕ : .....ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು
> ಪೂಜೆಯೊಂಬುದು ಧರ್ಮ ಬುದ್ಧಿಯನು ಜೋಗುಳದಿ
> ಮಲಗಿಸುವ ಕಾಳ ಮಂತ್ರವು, ದೇವ![೩]

ಇಂತಹ ಅನೇಕ ಸಂಭಾಷಣೆಗಳಲ್ಲಿ ದೇವರು, ದೇವಾಲಯ, ಪೂಜಾವಿಧಾನಗಳನ್ನು ವಿಮರ್ಶೆಗೆ ಗುರಿಪಡಿಸುತ್ತಾ, ತಮ್ಮದೇ ಆದ ಹೊಸ ವ್ಯಾಖ್ಯೆಯೊಂದನ್ನು ಕುವೆಂಪು ಇಲ್ಲಿ ಹೊರಡಿಸುತ್ತಾರೆ. ಜಾತಿ, ಧರ್ಮ, ಹೊಸ ವಿಚಾರಗಳ

ಸೋಗುಗಳನ್ನು ಹೊಂದಿದ ವ್ಯವಸ್ಥೆಯ ವಿಡಂಬನೆ ಈ ನಾಟಕದಲ್ಲಿ ಮೈ ಪಡೆದಿದೆ. ಪುರೋಹಿತಶಾಹಿ ವ್ಯವಸ್ಥೆ ಒಡ್ಡಿದ ಮತ್ತೊಂದು ಕ್ರೌರ್ಯವೆಂದರೆ ಶೂದ್ರನು ವಿದ್ಯೆ ಪಡೆಯುವುದು ಪಾತಕ ಮತ್ತು ಮಹಾಪಾಪ ಎಂಬ ವಿಚಾರ. ಇಂತಹ ವಿಚಾರವನ್ನು 'ಶೂದ್ರ ತಪಸ್ವಿ' 'ಬೆರಳ್ ಗೆ ಕೊರಳ್ ' ನಾಟಕಗಳಲ್ಲಿ ವಿಶ್ಲೇಷಿಸುತ್ತಾರೆ. 'ತಪಕ್ಕೆಣೆಯುಂಟೆ' 'ತಪಂ ಪೂಜ್ಯ ಕರ್ಮ' ಎಂಬ ನಿತ್ಯ ಸತ್ಯಗಳನ್ನು, ಆ ತತ್ತ್ವಗಳ ಅನನ್ಯತೆಯನ್ನು ಪುರೋಹಿತ ವ್ಯವಸ್ಥೆಗೆ ಮುಖಾಮುಖಿಯಾಗಿಸುವುದರ ಮೂಲಕ ಒಂದು ಹೊಸ ಸಂಘರ್ಷ ಈ ಕೃತಿಗಳಲ್ಲಿ ಎದುರಾಗುತ್ತದೆ. ಸಹಜ ಸಾಮರ್ಥ್ಯ, ಸ್ವಂತ ಪರಿಶ್ರಮ, ಪ್ರಯೋಗಶೀಲತೆ, ಕಲಿಯುವುದರ ಬಗೆಗಿರುವ ಶ್ರದ್ಧೆ, ಪರಿಸರ ಕಲಿಸುವ ಗಾಢ ಅನುಭವಗಳಿಂದ ಮೇಲೇರುವ ವ್ಯಕ್ತಿಯ ಹಾಗೂ 'ಪರಿಸರದ ವ್ಯವಸ್ಥಿತ ಶೋಷಣೆ'ಯ ವಿಮರ್ಶೆ ಈ ನಾಟಕಗಳ ವಸ್ತು. ಅಕ್ಷರ ಕಲಿಯದ, ಕ್ರಿಯಾಶೀಲರೂ ಸಹಜ ಚಿಂತಕರೂ, ಸಂವೇದನಾ ಶೀಲರೂ, ಜೀವನ ಪ್ರೀತಿಯುಳ್ಳ ಗ್ರಾಮ ಸಮುದಾಯದ ಶೋಷಣೆಯು ಈ ನಾಟಕಗಳ ಹಿನ್ನೆಲೆಗಿದೆ. ಅಕ್ಷರ ಕಲಿತು ನಾಗರೀಕರೆಂಬ ಸೋಗನ್ನು ತೊಟ್ಟಿರುವ ನವಪುರೋಹಿತ, ತನ್ನ ಸ್ವಾರ್ಥಪರ ವ್ಯವಸ್ಥೆಯ ಪೂರ್ವ ನಿಯೋಜಿತ ಕ್ರೌರ್ಯವನ್ನು, ಅದರಿಂದ ಉಂಟಾಗುವ ದುರಂತಗಳನ್ನು ಈ ನಾಟಕಗಳು ಇಂದಿನ ಸಂದರ್ಭದಲ್ಲಿ ಧ್ವನಿಸುತ್ತವೆ.

ಇಂಥ ಎರಡೂ ನಾಟಕಗಳು ಪ್ರಸಿದ್ಧ ಕಾವ್ಯ, ಮಹಾಭಾರತ ಹಾಗೂ ರಾಮಾಯಣಗಳಲ್ಲಿ ಆದಂತಹ ತಪ್ಪುಗಳನ್ನು ಮಾನವೀಯ ನೆಲೆಯಲ್ಲಿ ವಿಮರ್ಶೆ, ವಿಶ್ಲೇಷಣೆಗೆ ಒಳಗಾಗಿಸುತ್ತವೆ. 'ಬೆರಳ್ ಗೆ ಕೊರಳ್' ನಾಟಕದಲ್ಲಿ ಏಕಲವ್ಯ ಕೀಳು ಜಾತಿಯವನಾದ್ದರಿಂದ ಶಿಕ್ಷಣ ಪಡೆಯಲು ವಂಚಿತನಾದವನು. ಆದರೂ ಸ್ವಂತ ಪರಿಶ್ರಮದಿಂದ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದರಿಂದ ತನ್ನ ಬೆರಳನ್ನೆ ಕಳೆದುಕೊಳ್ಳಬೇಕಾದ ಸಾಮ್ರಾಜ್ಯಶಾಹಿ ಹಾಗೂ ಪುರೋಹಿತಶಾಹಿ ಸಂಸ್ಕೃತಿಯ ಕ್ರೌರ್ಯಕ್ಕೆ ತೋರಿದ ಪ್ರತಿಕ್ರಿಯೆಯನ್ನು ಇಲ್ಲಿ ಗಾಢವಾಗಿ ಕಾಣುತ್ತೇವೆ. ಬಿಲ್ ವಿದ್ಯೆಯ ಜೀವನಾಡಿಯಾದ ಹೆಬ್ಬೆರಳನ್ನು ಕಳೆದುಕೊಂಡ 'ಏಕಲವ್ಯ' ಕೆಳವರ್ಗದ ಶೋಷಿತ ಪ್ರತಿನಿಧಿಯಂತೆ ಕಾಣುತ್ತಾನೆ. ಇಂತಹ ತಪ್ಪುಗಳಿಗೆ ಕಾರಣವಾದ ವ್ಯವಸ್ಥೆ ತನ್ನ ಶಿರವನ್ನೆ ಬಲಿಗೊಡಬೇಕಾಗುತ್ತದೆಂಬ ಆಶಯ. 'ಆರ್ಗೊ ಬಲಿ ನನ್ನ ಕಂದನ ಬೆರಳ್ ಬಲಿಯಕ್ಕೆ ಆ ಪಾಪಿಯ ಕೊರಳ್' ಎಂಬ ಏಕಲವ್ಯನ ಅಬ್ಬೆ ಆಡುವ ಮಾತುಗಳಲ್ಲಿ ವ್ಯಕ್ತವಾಗಿದೆ. ನಾಗರಿಕ ಸಂಸ್ಕೃತಿಯೊಂದು ಒಡ್ಡುವ ಕ್ರೌರ್ಯದಿಂದ ಕಾಡು ಸಂಸ್ಕೃತಿಯು ದುರಂತಕ್ಕೆ ಒಳಗಾಗುವ ನೆಲೆ ಈ ಹೊತ್ತು ಮಹತ್ವದ ಧ್ವನಿಯನ್ನು ಪ್ರಕಟಿಸುತ್ತದೆ. ಹಾಗೆಯೇ ನಾಗರಿಕ ಮಾನವನ ಹಲವು ಪಾಪಗಳಿಗೆ ಸಮಷ್ಟಿ ಬದುಕು ಬಲಿಯಾದ ಪಶ್ಚಾತ್ತಾಪದ ಸಮಕಾಲೀನ ದ್ವಂದ್ವಗಳನ್ನು ಧ್ವನಿಸುತ್ತದೆ.

ಇದೇ ರೀತಿಯ ಮತ್ತೊಂದು ದುರಂತ ಕಥೆ ರಾಮಾಯಣದಲ್ಲಿ ಬರುವ ಶೂದ್ರ ಶಂಭೂಕನದು. ಶೂದ್ರನೊಬ್ಬ ತಪಸ್ಸು ಮಾಡುವುದು, ಅಂದರೆ ಶಿಕ್ಷಣ ಪಡೆಯುವುದು ಅಪರಾಧ ಎಂಬ ಕಾರಣಕ್ಕೆ ಏಕಲವ್ಯ ಬೆರಳು ಕಳೆದುಕೊಂಡರೆ ಇಲ್ಲಿ ಶಂಭೂಕ ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ. ಇಂತಹ ಕಥೆಯನ್ನು ರಾಮಾಯಣದಂತಹ ಕಾವ್ಯದಲ್ಲಿ ಪ್ರಕ್ಷಿಪ್ತವಾಗಿ ಸೇರಿಸುವ ಮನೋಧರ್ಮದ ಬಗೆಗೆ ತಮ್ಮದೇ ಆದ ವಿಚಾರಧಾರೆಯಿಂದ 'ಶೂದ್ರ ತಪಸ್ವಿ' ಯಲ್ಲಿ ಕುವೆಂಪು ಅವರ ಸಂವೇದನೆ ಪ್ರತಿಕ್ರಿಯಿಸುತ್ತದೆ.

ಅವರ ಈ ನಾಟಕದಲ್ಲಿ, ಪುರಾಣದಲ್ಲಾದ ತಪ್ಪನ್ನು ತಿದ್ದಿ ಅವಿವೇಕಿ ಬ್ರಾಹ್ಮಣನಲ್ಲಿ ವಿವೇಕವನ್ನು ಉಂಟುಮಾಡುವ ಮಾನವೀಯ ನೆಲೆ ಶೋಧನೆಗೆ ತೊಡಗಿರುವುದು ಗಮನಾರ್ಹ. ಇಂತಹ ಪ್ರತಿಕ್ರಿಯೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಪೂರ್ವಗ್ರಹ ಹಾಗೂ ಪಕ್ಷಪಾತ ವಿಮರ್ಶೆಗಳಿಗೆ ಕಾರಣವಾಗಿ, ಈ ಹಿಂದೆ ಪ್ರಸ್ತಾಪಿಸಿದಂತೆ ಮತ್ತೊಂದು ಮುಜುಗರದ ನೆಲೆಯನ್ನು ತಲುಪಿದ ಕಾಲ ಇತಿಹಾಸದಲ್ಲಿ ದಾಖಲಾಗಿದೆ. ಇಂಥ ನಾಟಕಗಳಲ್ಲಿ ಆರ್ಷೇಯ ಹಾಗೂ ಹೊಸ ಜೀವನ ಮೌಲ್ಯಗಳ ಸಂಪರ್ಕ ಹಾಗೂ ಸಂಘರ್ಷಗಳ ವಿಚಾರಧಾರೆ ಮರುಹುಟ್ಟು ಪಡೆಯುವುದು ಈ ನಾಟಕಗಳ ಅನನ್ಯತೆಯಾಗಿದೆ. ಸಾಂಪ್ರದಾಯಿಕ ಗೊಡ್ಡು ನಂಬಿಕೆ, ಆಚಾರ-ವಿಚಾರಗಳನ್ನು ವಿಮರ್ಶೆಗೆ ಗುರಿಪಡಿಸುತ್ತಲೇ ಮಾನವೀಯ ನೆಲೆಯಲ್ಲಿ ಒಂದು ರೀತಿಯ ವಾಗ್ವಾದವನ್ನು ಒಡ್ಡುವ ನಾಟಕಗಳು ಇವು. ಅಂದರೆ ನಮ್ಮ ಸಂಸ್ಕೃತಿಯ ಜೀವಂತ ಹಾಗೂ ಮೃತಾವಸ್ಥೆಯ ಸ್ವರೂಪವನ್ನು ಈ ಎರಡೂ ನಾಟಕಗಳಲ್ಲಿ ಮುಖಾಮುಖಿಯಾಗಿದೆ. ಈ ನಾಟಕಗಳ ಹಿಂದೆ ಆಧುನಿಕ ಚಿಂತನೆಗಳಾದ ಗಾಂಧಿ ವಿಚಾರಗಳು, ಮಾನವತಾವಾದ, ಹಾಗೂ ಸಮಾಜವಾದದ ಚಿಂತನೆಗಳನ್ನು ನಮ್ಮ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗಿಸುವ ಹಾಗೂ ಚಿಂತನೆಗೆ ಗುರಿಪಡಿಸುವ ಮನೋಧರ್ಮ ಇಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ.

ಮನುಷ್ಯನ ಸ್ವಾರ್ಥ ಹಾಗೂ ಅಹಂಕಾರದಿಂದ ಉಂಟಾಗುವ ಅನರ್ಥಗಳನ್ನು ಅದರಿಂದ ಆಧುನಿಕ ಬದುಕಿನಲ್ಲಿ ಸಂಭವಿಸಬಹುದಾದ ಶ್ಮಶಾನ ಬದುಕನ್ನು ಪುರಾಣ ಪ್ರತಿಮೆ, ಪಾತ್ರಗಳ ಮೂಲಕ ಕುವೆಂಪು ಸಂವೇದನೆ ಅತ್ಯಂತ ಮಾರ್ಮಿಕವಾಗಿ 'ಶ್ಮಶಾನ ಕುರುಕ್ಷೇತ್ರ' ನಾಟಕದಲ್ಲಿ ಚಿತ್ರಿಸಿದೆ. ಎರಡು ಯುಗಗಳ ಸಂಧಿಕಾಲದಲ್ಲಿ ಈ ನಾಟಕ ನಡೆಯುತ್ತದೆ. ಒಂದು ಯುಗದ ಸಾಧನೆಗಳೆಲ್ಲವೂ ಶ್ಮಶಾನ ರುದ್ರನ ಮೈಗೆ ಭಸ್ಮಲೇಪನವಾದರೆ, ಇನ್ನೊಂದು ಯುಗ ಸ್ಮಶಾನದಲ್ಲಿನ ಭಸ್ಮದಲ್ಲಿಯೇ ಫೀನಿಕ್ಸ್ ನಂತೆ ಮೈ ಪಡೆಯುವ ಆಶಯವನ್ನು ಈ ನಾಟಕ ಹೊಂದಿದೆ. ಸ್ಮಶಾನ ಕುರುಕ್ಷೇತ್ರ ಸಾಮ್ರಾಜ್ಯಶಾಹಿ ಹಾಗೂ ಅಧಿಕಾರಿಶಾಹಿ ಶ್ರೀ ಸಾಮಾನ್ಯನನ್ನು ಹೇಗೆ ಅಮಾನವೀಯ ದುರಂತಕ್ಕೆ ತಳ್ಳುತ್ತವೆ ಎಂಬ ಯುಗ ಯುಗಗಳ ಸತ್ಯವನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ಸಾಮ್ರಾಜ್ಯಶಾಹಿತ್ವದ ಭೀಕರತೆಯ ಪರಿಣಾಮ, ಒಂದು ಯುಗದ ಎಲ್ಲ ರೀತಿಯ ಸಾಧನೆ, ಶ್ರೇಯಸ್ಸುಗಳು ಸ್ಮಶಾನದಲ್ಲಿ ಅವಸಾನಗೊಳ್ಳಬೇಕಾದ, ಲೀನವಾಗಬೇಕಾದ ಅನಿವಾರ್ಯತೆಯೂ ಈ ಕೃತಿಯಿಂದ ಹೊರಡುವ ತೀವ್ರವಾದ ವ್ಯಂಗ್ಯವಾಗಿದೆ. ಒಂದೇ ಕುಟುಂಬದ ಅಥವಾ ಸಾಮ್ರಾಜ್ಯ ವಿಸ್ತರಣೆಯ ದಾಹದ ಮನಸ್ಸುಗಳು ನಿರ್ಮಿಸುವ ಬಲೆಯಲ್ಲಿ ಇಡೀ ಮನುಷ್ಯ ಕುಲ, ಪರಿಸರದ ಬದುಕು ದುರಂತಕ್ಕೆ ಒಳಗಾಗುವ ಸತ್ಯವನ್ನು, ಅಂಥ ಸತ್ಯ ಎಲ್ಲ ಮಟ್ಟದ ಪಾತ್ರಗಳಲ್ಲಿ ಕಾಣಿಸುವ ಪಶ್ಚಾತ್ತಾಪದ ನೆಲೆ ಮಾರ್ಮಿಕವಾದುದು. ಅಸಮಾನ್ಯರಿಗಾಗಿ ಸಾಮಾನ್ಯರ ಬಲಿ ಎಂಬ ಧೋರಣೆಯನ್ನು ಮೂಲಭೂತವಾಗಿ ಇಲ್ಲಿ ವಿಶ್ಲೇಷಣೆಗೆ ಗುರಿಪಡಿಸಲಾಗಿದೆ. ಇಂತಹ ಕಡೆಗಳಲ್ಲಿ ಕುವೆಂಪು ಅವರ ನಾಟಕಗಳು ಶೋಧಿಸುವುದು ಮಾನವೀಯತೆಯನ್ನೇ. ಮಾನವೀಯತೆ ಯಾವುದೇ ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಯಲ್ಲಿ ಸಾಮಾನ್ಯನ್ನು ಮುಟ್ಟಲಾರದೆಂಬ ಸತ್ಯವನ್ನು ಈ ಮುಖೇನ ಕಾಣಿಸಲಾಗಿದೆ ಹಾಗೂ ಸಾಮ್ರಾಜ್ಯಶಾಹಿ ಅಕೃತ್ಯಗಳ ಪರಂಪರೆಯನ್ನು ಕೆಳಗಿನ ಉದ್ಧರಣೆಯಲ್ಲಿ ಕಾಣಬಹುದು.

ಕಾಳೆಗದ ನೆಲಗಳೆನೆ ಬಿತ್ತರದ ಮಸಣಗಳ್!

ಕಾಳೆಗವೂ ಬಿತ್ತರದ ಕೊಲೆಗೆಯ್ಮೆ! ಗೆಲವೆಂದರೇನ್?

ಸೋಲ್ವರ ಸಂತಾಪಂ; ವಿಜಯಿಗಳ ಪೆರ್ಮೆ-

- - - - - - - - - - - - - - - -

ಏನ್ ರೌದ್ರಮೇನ್ ಕ್ರೂರಮೇನ್ ದುಃಖಮಯ ದೃಶ್ಯಂ!

ದಿಟ್ಟಿ ಪರಿವನ್ನೆವರಂ ಎತ್ತನೋಡಿದೊಡತ್ತ

ನಾಶಮೇ ನಗುತಿಹುದು ವಿಕಟಾಟ್ಟಹಾಸದಿಂ!"

ಇಂಥ ಮಾತುಗಳಲ್ಲಿ ಯುದ್ಧದ ದುರಂತದ ಬಗೆಗಿನ ಮರುಕ, ಪ್ರಾಯಶ್ಚಿತ್ತಗಳು ನಾಟಕದ ಉದ್ದಕ್ಕೂ ಕಾಣಿಸುತ್ತದೆ. ~~ಇಂಥ ದುರಂತ ಬಗೆಗಿನ ಮರುಕ, ಪ್ರಾಯಶ್ಚಿತ್ತಗಳು ನಾಟಕದುದ್ದಕ್ಕೂ ಕಾಣಿಸಿಕೊಳ್ಳುತ್ತವೆ.~~ ಈ ಬಗೆಯ ದುರಂತ ಮರಳುಗಳು, ಕಂದ, ಮುದುಕಿ, ಭೀಮ, ದುರ್ಯೋಧನ ಹೀಗೆ ಮೇಲು ಕೀಳೆನ್ನದೆ ಯುದ್ಧದ ಪರಿಣಾಮ ಎಲ್ಲರನ್ನೂ ಮುಟ್ಟಿ, ಜೀವ ಸಮುದಾಯದ ಬಗೆಗೆ ಅನುಕಂಪವನ್ನು ಅಸಹಾಯಕತೆಯನ್ನು ಉಂಟುಮಾಡುತ್ತದೆ. ದ್ವಾಪರನು ಒಂದು ಯುಗದ ಸಂಸ್ಕೃತಿ ನಾಶವಾಗಿ, ಸ್ಮಶಾನ ವಾತಾವರಣವನ್ನು ಕಂಡು ದುಃಖಕ್ಕೆ ಒಳಗಾಗಿರುವ ಸಂದರ್ಭದಲ್ಲಿ ಕಲಿಪುರುಷ ಎದುರಾಗುತ್ತಾನೆ. ಸ್ಮಶಾನದಲ್ಲಿಯೆ ಪಟ್ಟಾಭಿಷೇಕ ಧರಿಸಿಕೊಳ್ಳಬೇಕಾದ ಕಲಿಪುರುಷನ ದುರಂತವನ್ನು ಕಂಡು ದ್ವಾಪರನು ಆಡುವ ಈ ಕೆಳಗಿನ ಮಾತುಗಳು ಪರಂಪರೆಯ ಹಾಗೂ ಆಧುನಿಕ ಪರಿಸರ ವಿಜ್ಞಾನ ಕಂಡುಕೊಂಡ ಸತ್ಯವನ್ನು ನೆನಪಿಗೆ ತರುತ್ತವೆ.

.... ರಸಪೂರ್ಣ ಶೂನ್ಯದಿಂದೊಗೆ ತಂದುದೀ ವಿಶ್ವಂ;

ಅದರೊಳೆ ವಿಲೀನಮಾಗಡಗುವುದು ತಾನ್,

ಆದೊಡೇನ್? ಮರಳಿ ಬೇರೊಂದಾ ಕೃತಿಯ ತಳೆದು

ಬೇರೊಂದು ಕಟ್ಟಳೆಗೆ ತಲೆಬಾಗಿ, ಬೇರೊಂದು

ಕಾಲದಲಿ ಮೂಡುವುದು, ಲೀಲೆಯೆಂಬುದೆಲ್ಲ

ಮೂಡುವುದು ಮುಳುಗುವುದರಲ್ಲಿಹುದು"

ಮನುಷ್ಯ ತನ್ನ ಅಹಂಕಾರದಿಂದ ಪರಿಸರವನ್ನು ಬಗ್ಗು ಬಡಿಯಲು ನಡೆಸುತ್ತಿರುವ ವಿನಾಶ, ಕ್ರೌರ್ಯಗಳಿಗೆ ಪ್ರತಿರೋಧವಾಗಿ ಬದಲಿಸಿಕೊಳ್ಳಬಲ್ಲದೆಂಬ ವೈಜ್ಞಾನಿಕ ಸತ್ಯವನ್ನು ಈ ಮಾತುಗಳು ಸೂಚಿಸುತ್ತವೆ. ಅಂತೆಯೇ ಮನುಷ್ಯನ ನವನಾಗರಿಕತೆ ಹಾಗೂ ಪ್ರಗತಿಯ ಹೆಸರಿನಲ್ಲಿ ಚಲಿಸುತ್ತಿರುವ ದಾರಿ ಕೂಡ ದುರಂತವೆಂಬ ಆಶಯವೂ ಈ ನಾಟಕದಲ್ಲಿ ಗುಪ್ತಗಾಮಿನಿಯಾಗಿ ಹರಡಿಕೊಂಡಿದೆ. ದೇಶಾಭಿಮಾನ, ದೇವರು - ಧರ್ಮ, ಜಾತಿ, ಭಾಷೆ, ಪಂಥ ಮೊದಲಾದ ಹೆಸರುಗಳ ನೆಪದಲ್ಲಿ ಶ್ರೀ ಸಾಮಾನ್ಯನನ್ನು ವಂಚಿಸುತ್ತಿರುವ ದ್ವಂದ್ವ ಹಾಗೂ ದುರಂತಕ್ಕೆ ತಳ್ಳುತ್ತಿರುವ ಚಿತ್ರಣ ಇಲ್ಲಿದೆ. ಆಕ್ರಮಣಶೀಲ ಶಕ್ತಿಗಳು ಒಡ್ಡುವ ಮಹಾಯುದ್ಧಗಳಿಂದ ಆಗಬಹುದಾದ ಸಾವು-ನೋವು, ಲಾಭ-ನಷ್ಟಗಳನ್ನು ಪ್ರತ್ಯಕ್ಷ ಕಂಡು ಅನುಭವಿಸಿದ ಸಂವೇದನೆ ಇಂಥ ದೃಶ್ಯಗಳಲ್ಲಿ ಅಭಿವ್ಯಕ್ತಿಗೆ ಗುರಿಪಡಿಸುವುದರ ಮೂಲಕ ಯುದ್ಧವಿರೋಧಿ ನಿಲುವುಗಳ ಕಾಣ್ಕೆಯೊಂದನ್ನು ನಿರ್ಮಿಸುತ್ತದೆ.

**ಅಡಿಟಿಪ್ಪಣಿ**

೧. ಕುವೆಂಪು, *ಜಲಗಾರ,* ಉದಯರವಿ ಪ್ರಕಾಶನ, ಮೈಸೂರು, ೧೯೮೯, ಪುಟ-೮

೨. ಕುವೆಂಪು, *ಶೂದ್ರತಪಸ್ವಿ*, ಉದಯರವಿ ಪ್ರಕಾಶನ, ಮೈಸೂರು, ೧೯೮೭, ಪುಟ-೪೫

೩. ಕುವೆಂಪು, *ಜಲಗಾರ,* ಉದಯರವಿ ಪ್ರಕಾಶನ, ಮೈಸೂರು, ೧೯೮೯, ಪುಟ-೧೦,೧೬

೪. ಕುವೆಂಪು, *ಶ್ಮಶಾನ ಕುರುಕ್ಷೇತ್ರಂ*, ಉದಯಕವಿ ಪ್ರಕಾಶನ, ಮೈಸೂರು, ೧೯೭೨, ಪುಟ-೭,೮

೫. ಅದೇ ಪುಟ-೧೦

## ಅನುಬಂಧ ಮೂರು

# ತತ್ತ್ವಪದ, ಲಾವಣಿ, ಕೀರ್ತನೆ, ದೇಶೀ ದುಂದುಮೆ ಪದಗಳು

ಭಾಗ ಒಂದು

'ಬರಕೊ ಪದಾ ಬರಕೋ'
ಶಿಶುನಾಳ ಶರೀಫ
(ಸಂ) ಶಿವಾನಂದ ಗುಬ್ಬಣ್ಣವರ
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೧೯೮೧

### ಭೂಪಾರದೊಳಗೆ ಮದೀನ ಶಹರದೊಳು

ಭೂಪಾರದೊಳಗೆ ಮದೀನ ಶಹರದೊಳು
ವ್ಯಾಪಾರ ಮಾಡುವಾಗೀನ ಗಾಡಿಯೋ

ಕೂಪದೊಳು ಹರಿದಾಡುತಿಹ ಜಲ
ವ್ಯಾಪಿಸಿತು ಮದ್ದಿನ ಸಲಾಕಿಯು
ರೂಪ ಬೆಂಕಿಯ ಪುಟವಗೊಳ್ಳುತ
ತಾಪದಿಂ ಸರಿಸ್ಯಾಡುತಿಹುದೋ

ಸಧ್ಯಕ್ಕೆ ಕಾಶೀಮಸಾಹೇಬರ ಸಮರದಿ
ಮದ್ದು ಹೇರಿಸುವ ಆಗೀನ ಗಾಡಿಯೋ
ಜೋದ್ಯವಾಯಿತು ಚಮತ್ಕಾರದಿ
ಎದ್ದು ತಾನೇ ತಾನೆ ಬರುವುದು
ಗದ್ದಲದಿ ಸಾಗುವದು ಅದರೊಳು
ಇದ್ದಲಿಯ ಮಸಿಬಿದ್ದು ಬಯಲದಿ

ಅಬ್ಬರದಿಂದ ಮಕಾನದ ಹೊಲಕೆಲ್ಲ
ಗೊಬ್ಬರ ಹೇರುವ ಆಗೀನ ಗಾಡಿಯೇ
ಸಬ್ಬಯಲಿನೊಳು ಸರಸಿ ಬರುವಾಗ
ನಿಬ್ಬಯಲ ನಿಜತತ್ವ ಮಾರ್ಗದಿ
ಕೊಬ್ಬಿಕೊಂಡಿಹ ಕಮಲ ಚಕ್ರದಿ
ಗಬ್ಬಿನೊಳು ಗಮಕದಿ ಬರುವದೋ

### ಗಿರಣಿ ವಿಸ್ತಾರ ನೋಡಮ್ಮಾ

ಗಿರಣಿ ವಿಸ್ತಾರ ನೋಡಮ್ಮಾ
ಶರಣೆ ಕೂಡಮ್ಮ
ಧರಣೆಪತಿಯು ರಾಣ
ಕರುಣಾಕ ರಾಜ್ಯಕೆ
ತರಿಸಿದ ಘನಚ್ಯೋದ್ಯವೋ ಚೀನಾದ ವಿದ್ಯವೋ

ಜಲ ಅಗ್ನಿ ವಾಯು ಒಂದಾಗಿ
ಕಲಿತು ಚಂದಾಗಿ
ಜರ ಅಗ್ನಿ ವಾಯು ಒಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆಸೆವುದು
ಚಲುವ ಚನ್ನಿಗವಾದ ಕಂಭವೋ, ಹೊಗಿಯ ಬಿಂಬವೋ

ಕರ್ಬಲದೊಳಗೆಲ್ಲ ಕಟಗಿ ಹೊತ್ತು ಹಾಕಿ
ಉಬ್ಬೇರಿ ಬರುವ ಆಗೀನ ಗಾಡಿಯೋ
ಅರ್ಭಟಿಸಿ ಜಲವಾಯು ಸೂಸುತ
ಪೆರ್ಬುಲಿಯ ತೆರದಿಂದ ಒದರುತ

### ರಾಜನೀತಿಯಲ್ಲಿ ಜಯವೋ

ರಾಜನೀತಿಯಲ್ಲಿ ಜಯವೋ
ಬಂತೋ ಇಂಗ್ಲಂಡ ದೇಶಕ್ಕೆ ಬೆಂಕಿಯ ಮಳಿಯೋ

ರಾಣಿರಾಜರ ವೈಭವಕೆ
ಪ್ರಾಣಹಾನಿಗಳಾದವು ಎಣಿ ಇಲ್ಲ ಇದಕೆ
ಜಾಣ ಕಲಿಗಳ ಸೈನ್ಯ ಹೊಕ್ಕಿತೋ
ಯುರೋಪ ಖಂಡಕೆಲ್ಲ ಮುಸುಕಿತೋ
ಕಾಣದಂಥಾ ಐದು ವ್ಯಕ್ತಿ
ಕ್ಷೋಣಿ ಗದಗದ ನಡುಗಿ ಹೋದಿತು.

ಹಿಂದುಸ್ಥಾನಕ ಬಂತು ಶೋಕ
ಮಂದಿ ಕುಂಡ್ಲಾಕ ನರಬೈಲಿ ಹೋತೋ ಕೈಲಾಕ
ಹಣದ ತೆರಿಗೆಯ ತೆಲಿಗೆ ಏಳು
ಎಣಿಸಿ ಹಡಗವ ತುಂಬಿ ಹೂರಣವ
ಹವಳ ದೇಶಕೆಲ್ಲ ಇದು
ಕುಣಿದು ಕುಣಿದು ದಣಿವು ಆದಿತು

ಬರದೆ ಬಾರದೆ ಸುಜ್ಞಾನ
ಗುರು ಶಿಶುನಾಳಧೀಶನ ಕುರುವಿನ ವಚನ
ಸತ್ಯ ಜಗಕೆಲ್ಲ ಇದು
ಬಿದ್ದಿತೋ ಜಗಳದ ಬೀಜ
ಮತ್ತೆ ಅಣ್ಣಿಗೇರಿ ಈಶನ
ಚಿತ್ರಗುಪ್ತರು ಕಾಣದೆ.

**ಜಿಟ್ಟಿ ಹುಳಗಳೂ ಎದ್ದಾವು ನೋಡು**

ಜಿಟ್ಟಿ ಹುಳಗಳು ಎದ್ದಾವು ಇದು ನೋಡು
ಸೃಷ್ಟಿಪತಿ ಅರಸರಿಗೆಲ್ಲಾ ಕೇಡೋ
ಅಷ್ಟದಳ ಮಧ್ಯದಲಿ ಒಪ್ಪುವ ನೆಟ್ಟನಾದಿಭೂಮಿ ದಿಲ್ಲಿಗೆ
ಶ್ರೇಷ್ಟ ಕ್ರಿಸ್ತನ ಬಾದಶಹ ಪಟ್ಟಗಟ್ಟಲು ಕಂಡು

ವಸುಮತಿಪತಿ ವರದಿಂ ಕುಮಾರ
ಈಶಾನ್ಯೆಂಬುವ ಪರಮನವತಾರಾ
ರೋಸ ಬಾದಶಾ ಇಂಗ್ಲೀಷ ಮತವನುದ್ಧರಿಸಲು
ಬಹುಧ್ಯಾನ ಸಂವತ್ಸರಕೆ ಉತ್ತಮ ಬೇಸಿಗೆ ಬರಹವ ಕೇಳಿ

ಕ್ಷೋಣಿಗೆ ಅಧಿಕಾರ ಕೊಟ್ಟು ಕಂಪನಿಗೆ
ರಾಣಿ ದೊರೆ ತಾನು ಕಟ್ಟಾಕಾನೂನಿಗೆ
ಜಾಣತನದಲಿ ಇಳಿಯನಾಳುತ ತಾನೇ ತಾನೇ ಆಗಿ ಕಲಿಯುಗ
ಪ್ರಾಣ ನಿರ್ಮಲ ಪಾದದಲಿ ಭೂ ಅಣಿದು ತಲ್ಲಣಿಸಕೆ

ಮಾಜದಲಿ ವೇಳುವೆ ಮೌಜಿನ ಮಾತು
ಮೂಜಗದೊಳು ಅತಿ ಕೌತುಕವಾತು
ರಾಜ್ಯದಲಿ ಯಾವತ್ತು ದೇಶದ ಪಾಳ್ಯಾಗಾರರು ಪರಮಡಿಸಿ
-ಮಹಾ
ರಾಜ್ಯ ಕೋರ್ಟಿಗೆ ಒಯ್ದರೆಂಬುವ ಸುದ್ದಿ ಕೇಳಿ.

## ಭಾಗ ಎರಡು

ಫ್ಲೀಟರು ಸಂಗ್ರಹಿಸಿದ ಲಾವಣಿಗಳು
ಕ್ಯಾತನ ಹಳ್ಳಿ, ರಾಮಣ್ಣ (ಸಂ),
ಮೈಸೂರು ವಿಶ್ವವಿದ್ಯಾಲಯ,ಮೈಸೂರು ೧೯೯೧.

## ಆದಾಯ ತೆರಿಗೆ (ಗುರುಸಿದ್ಧಾಂಕಿತ)

ಏನ ಹೇಳಲಿ ಜನ್ಮದ ಗೋಳಾ
ಇಂಗ್ರಜಿ ಉಪದರ್ ಆದೀತ ಬಾಳಾ
ಬಡವರ ಅಳತಾರೊ ಗಳಗಳಾ
ಮಾಡತಾರ ಚಿಂತಿ
* * *
ಆಗ ಹಾಕಿದಾರ ಕೇಳ ಕಷ್ಟ ಪಟ್ಟಿ
ಕಠಿಣ ಬಡವರದ ತುಂಬುದು ಹೊಟ್ಟಿ
ಮಾರಿ ಕೊಟ್ಟಾರೊ ನೂಲುವ ರಾಟಿ
ದುಡ್ಡಿನ್ ಆಸೆ ಹತ್ತಿತ ಸರಕಾರಕ
ಚೌಕಾಶಿ ಬಾಳಾತ ದಿನದಿನಕ
ಸಗಣಿ ಗುಟ್ಟ ಮಾಡ್ಯಾರ ಆ ಕ್ಷಣಕ.
* * *
ಸರಕಾರಕ ದೊರಿತ ಮಸಲತ್ತಾ
ಕರಪಟ್ಟಿ ಹಾಕ್ಯಾರ ತುರತಾ-ತುರತಾ
ರೈತರ ದುಡ್ಡ ಎಳುವ ಹಿಕಮತ್ತಾ
ಮಾಡಿದಾರ ಹೀಂಗ
* * *
ಸರಕಾರ ಆತ ಬಲಜೋರಿ
ಲೋಟಿಸ ಕೊಟ್ಟ ವಾಯಿತೆ ಮಾಡಾರಿ
ಕೊಡಲಿದ್ರ ದೆಸಕ ಜೋರಿ
ನಡಸರಿ ಅಂಜಿಕಿಲದ್ಹಾಂಗೆ
* * *
ಹಲಗಿ ಕುಂಟೀ ರೆಸಮಿ-ಪಟ್ಟಿ
ಬಾಂಡೆ-ಸಾಮಾನಾ ಜುಮಾನು-ತಾಟಿ
ಲಿಲಾವ ಮಾಡಸ್ಯಾರು ಕಿಮ್ಮತ ಕಟ್ಟಿ

ಬಾಳ ಕೆಟ್ಟರ್ ಆಣ್ಣಾ ಸರಕಾರಾ
ಬಡವರ ತಂದಾರ ಕಣ್ಣೀರಾ
ಹೆಂತಾ ಯಾಳೇ ತಂದೀ ಈಶ್ವರಾ
ನಮಗ್ಯಾರದಿಲ್ಲ ಆಧಾರಾ.
* * *

ಬಡವರ ನಿಂತಾರ ಮಾರಿ-ಮಾರಿಗಿ
ನಿಂತ ಬೇಡಿಕೊಂಡಾರೊ ದೊರಿಗೆ
ಕೊಟ್ಟಂತ ಪಟ್ಟಿ ಕೊಡಿಸಿದಾನ ತಿರಿಗಿ
ಸಾಯೇಬ ಪುಣವಾನಾ

**ಲಾವಣಿ ಪದಾ**

ದೇಶದೇಶದೊಳು ಯಲ್ಲಿ ಕುಂಪಣಿಯವರು
ಹುಕುಮು ಮಾಡಿದರೂ ||
ದೊಡ್ಡ ದೊಡ್ಡ ಕಿಲ್ಲೀಗಳನ ಕೆಡಹಿದರು |
ಮೀರಿದ ಧೊರೆಗಳ ಸೆರೆ ಹಾಕಿದರು
* * *
ಮದ್ದು ಗುಂಡು ಸೋರುಪ್ಪು ಗಂಧಕ
ಯಿದ್ದಡಗಿಸಿಕೊಂಡವರು |
ಭಾರಿ ಶೀಕ್ಷಕಕೆ ವಳಗಾಗುವರು |
ಕುಂಪಣಿಯವರು ಸಾರಿ ಹೇಳಿದರು |
* * *

**ಬಾದಾಮೀ ಕಿಲೆ ಕೆಡವಿದ ಪದ**

ಭಾದೂರ ಕಟ್ಟಿಸಿದ ಬಾದಮಿ ಕಿಲೇಕ
ಬಂತೊ ಪ್ರಳಯ ಕಾಲಾ |
ಸುತ್ತ ರಾಜ್ಯದೊಳು ಮೇಲಾದ ಕಿಲೆಯ
ಆಯಿತೊ ನೆಲದ ಪಾಲಾ
* * *
ಕರ್ನಾಟಕ ಪ್ರಾಂತಕೆ ಆಧಾರ ಇತ್ತು ಈಗಡಾ ಈಗಾಡಾ
ಬಡಕೊಂಡು ಹೋದರ ಕೇಳವರ್‍ಯಾರಿಲ್ಲ ನಾಡಾ ಕೇಳ ನಾಡಾ
ಎಂತ ಹೊತ್ತು ತಂದ್ಯೊ ಪರಮೇಶ್ವರ ಕಿಲೆಯಕ ಕೇಡಾ ಭಲ ಕೇಡಾ
ಕೆಡುವಾಗ ಶಿಡಲಿನಂತ ಸಪ್ಪಳಾಯಿತೊ ಧಡಧಡಾ ಧಡಧಡಾ
ಧುಳ ಮುಸಕಿ ಸೂರ್ಯಗೆ ಬಂದ್ಹಾಂಗಾಯಿತು
ನೋಡು ಮೂಡ ನೋಡ ಮೂಡಾ.
* * *

**ಇಂಗ್ರೆಜಿ ಸಂಸ್ಥಾನದ ಮೇಲಿನ ಪದ**

ಮಚಲಿ ಬಂಗಾಲ ದೇಶ ತಗದ್ರ ಹಾಡಿಕಿ
ನಿಜಾಮದಿಲ್ಲಿಯೆ ಶಗ್ಗಚ್ಚಿದಕ್ಕಿ
ಸಾಷ್ಟಿಗಡ್ಡಿ ಕನಡ ಕರ್ನಾಟ
ಬುಂದೆಲ ಖಂಡ ದೇಶ
ತೊಗೊಂಡ್ರ ಪೀಶ್ವನ ದುಡಿಕಿ
ಕಟಕ ದಿಲ್ಲಿ ಕಾನದೇಶ ಸುಖಿ

ತೊಗೊಂಡ್ರ ಹೋಳಕರನ ಕಡದ ಹಾಕಿ
ಅಜಮೀರ ಮರಾಷ್ಟ ಪುಣೆ
ಅಸ್ಮ ಅರಕಾನನ ಬ್ರಂಮ್ಹ ದೇಶ
ಗೆದ್ರ ಟಾಟೆ ಹಾಕಿ
* * *
ನೆತ್ರ ಧರಣಿಗೆ ಕೆಡವಿಟ್ಟರ ಜಗ
ಕರ್ತರಂತ ಅನಸುವರು ಭುವನಕ
* * *
ಹುಕುಮ ಸರಕಾರಕಾ ಇದೆ ಬಂದು ಬಸ್ತಾ |
ಯರ್ಡು ಹೊತ್ತು ನಡಸುರು ಕಾವಾತಾ |
ಗುಂಡು ಮದ್ದು ಹಿಂಬಲ ಸಾಹಿತ
ರಣ ಪೈರಾಗಿ ಯೇಳುದು ತಂಬುನುಡತಾ
ತಡಪಡ ಅವಾಜ ಗುಂಡಿಂದ ಇಲ್ಲಿ ಗಣತಾ
ಬರದರ ಮಳಿಯ ಬಡದ್ಹಾಂಗ ವಿಪರೀತ.
ಬಿದ್ದ ತೊಟ್ಟ ವೈರಿಗಳ ಯಲ್ಲಾ |
ವಬ್ಬ್ರ ವುಳಿಲಿಲ್ಲಾ |
ಪುಂಣಿದ ಬಲ | ಕಂಮ ಅವರಲ್ಲಿ |
ಹಾಂಗಂತ ಇರಲಿಲ್ಲ ಲೋಕದಲಿ
ಇವರೇಕ ಛತ್ರಪತಿಯಾಗಿ
ನಿಂತರ ಧರಣಿಗಿ
* * *

ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ
ಗುಬ್ಬಣ್ಣವರ, ಶಿವಾನಂದ (ಸಂ)
ಅಕ್ಷಯ ಪ್ರಕಾಶನ, ಧಾರವಾಡ, ೧೯೯೧.

ಕರ್ತೃ: ಹುಲಕುಂದ ಭೀಮ ಕವಿ (ಬಸಪ್ಪ ಸಂಗಪ್ಪ ಚೆಟಗೇರಿ)

ಹಿಂದುಸ್ಥಾನ ಖಜಾನಿ ಖಾಲಿ ಮಾಡಿ
ಇಂಗ್ಲಂಡಕ ಒಯ್ಯತಾರ ಓಡೋಡಿ
ಬ್ರಿಟಿಷ್ ಪಾರ್ಲಿಮೆಂಟಿನೊಳು ಕೂಡಿ
ಕಾಯ್ದೆ ತಗಿತಾರ ಬಹಳ ಅಡ್ನಾಡಿ.
* * *
ಮೊದಲಿಗೆ ಅಂಜತಿದ್ರು ಜನರು
ಜೇಲ ಅಂದ್ರ ಅಪಮಾನ ಅಂತಿದ್ರು
ಮೊದಲಿಗೆ ಇವರು ಜೇಲಿಗೆ ಹೋದವರು
ಜನರಲ್ಲಿಯ ಅಂಜಿಕಿ ತಗದವರು
* * *
ಮಿಲ್ಟ್ರಿ ತಂದ ಗೋಳಿಬಾರ ಮಾಡಿ
ಲಾಠಿ ತಿರಿವ್ಯಾಡಿ ರೈತರನ್ನ ಕಾಡಿ
ಗಾಬ ಮಾಡುತ ಪುಣ್ಯ ಪಡಕೋತಾರ ಎಂಥದ
ಸಜ್ಜಾಗಿದಾರ ಈಗ ಗಟ್ಟಿ ಎಲ್ಲಾಕು ಮಂದಿ ತಟ್ಟಿ
ನಿಂತಾರ ನಡಕಟ್ಟಿ ಹೊಟ್ಟೆಯ ದಸಿಯಿಂದ
ಹೋಗಲೆಂತಾರ ತಮ್ಮ ರುಂಡ
* * *
ಗಿರಣಿ ಸಹಾಯದಿಂದ ನಿಮಗ ವಣಿಆಸಲಿಕ್ಕೆ
ಬಾರದಂಥ ಅರಿವೆ ನೆಯ್ಯತಾರ ಇಂಗ್ಲಿಷ ಜನ
ಅಗ್ಗದಿಂದ ಅರಿವೆ ಮಾರಿ ಜಗ್ಗಿ ಹಣ ಒಯ್ಯತಾರ
ನುಗ್ಗಮಾಡಿ ಬಿಟ್ಟಾರಲ್ಲೊ ಹಿಂದುಸ್ಥಾನ | ಉಳಿಯಲಿಲ್ಲ ಏನ
ಅರಿವೆ ಮಾರಿ ನಿಮ್ಮಿಂದ ಅರವತ್ತು ಕೋಟಿ ಒಯ್ಯತಾರ
ಅರುವಗೆಟ್ಟು ಕೂತಿರೆಪ್ಪ ಎಲ್ಲ ಜನ
ಜಂತ್ರ ತಿರುವಿ ನೀವೆಲ್ಲರು ಸ್ವಂತ ನೂಲ ನೂತರ
ನಿಂತ ಹೊಯ್ಯಕೋತಾರ ಪರದೇಶಿ ಜನ | ಸಿಗಲಿಲ್ಲ ಅನ್ನ.
* * *

ಖಂಡಾ ತಿನ್ನುವ ಕುಲ ಕಡಿಮಿ ಅಂತ ನಮ್ಮವರಿಗೆ ನುಡಿಯುವದು
ಹಂದಿ ತಿನ್ನುವ ಇಂಗ್ಲಂಡದವರಿಗೆ ಒಳಗೆ ಖುರ್ಚಿ ಹಾಕಿ ಕೂಡ್ರುಸುವದು

ಹದಿನೆಂಟು ಪುರಾಣ ಬರೆದ ವ್ಯಾಸ ಹೊಲಿಯರ ಹೊಟ್ಟೆಲಿ ಹುಟ್ಟಿದ
ಮಾದಗಿತ್ತಿಯ ಮಗ ಮಾತಂಗ ಋಷಿ ಅರುಂಧತಿ ಜಾತಿ ಹೊಲಿಯರದ
ಹರಳಯ್ಯ ಸಮಗಾರ ಕಕ್ಕಯ್ಯ ಡೋಹರ ಚನ್ನಯ್ಯ ಮಾದಿಗರುವ ಇದ್ದ.
* * *
ಸೃಷ್ಟಿಯೊಳಗ ಬಹು ಶ್ರೇಷ್ಟ ಅನಿಸಿಕೊಂಡ ರಾಷ್ಟ್ರ ನಮ್ಮ ಕನ್ನಡ ನಾಡ ಕರುಣೆಯಿಲ್ಲದ ಬ್ರಿಟಿಷರ
ಕರದಿಂದ ಕಡಿಸಿಕೊಂಡ ಆಗೇತಿ ತುಂಡ.
* * *
ಒಡಕ ಕನ್ನಡಿಯೊಳಗ ಮುಖವ ನೋಡುವವರ್ಹಾಂಗ
ಆತ ನಮ್ಮ ಪ್ರಾಂತದ ಹಾಡ.
* * *
೧೬೫ ಗುಂಡಿನೇಟ ಹಾರಿಸಿದ ಮ್ಯಾಲ ಬಿಟ್ಟ ಅಲ್ಲಿ ತನಕ ಹೊಡದ
ಎಂಥಾ ಕಾಯ್ದೆ ನೋಡಾ ಅವರದ
ಹರದೀತ ರಕ್ತಕಾವಲಿ ಕೂಸುಗಳ ತೇಲಿಹೋದವು ಒಂದೊಂದ
ಮುಳಮುಳಗಿ ಸತ್ತವು ಅಳತಿಲ್ಲದ
ನಿಂತಲ್ಲೆ ಸತ್ತಾವೆ ನೂರಾರು ಓಡಿ ಹೋಗವರ ಮ್ಯಾಲ ಗುಂಡುಬಡದ
ನೆಲಕಬಿದ್ದ ಸತ್ತವ ತೆರಪಿಲ್ಲದ
* * *

**ಮಾರನ ಬಸರಿ ಮೋದಿನ ಸಾಬ**

ಆಂಗ್ಲರಾಳುಗಳು ಕಾವಲು ನಡಿಸಿರೆ ಕಣ್ಣುಕಟ್ಟೆ ಕೆಲಸ ಮಾಡಿದರ
ತಾರುಕಂವಗಳ ಕತ್ತರಿಸಿತು ಜನ ಟಪಾಲು ಹೊಡೆದರೊ ಸರಸರಾ
ಮಾರಿ ಗುರ್ತ ಸಹ ಹತ್ತಲಿಲ್ಲರಿ ಗತ್ತ ತಿಳಿಸಲಿಲ್ಲ ಬಹದ್ದೂರ
ಮಿಲ್ಟ್ರಿಜನ ತಾ ಯುದ್ಧಕ್ಕೆ ಹೋಗದೆ ಮನೆಯ ಕಳ್ಳರನು
-ಹುಡಿಕಿದರ
ಸಿಕ್ಕಲಿಲ್ಲರಿ ಸಂಶಯದಿಂದಲಿ ಬಡಿದು ದಂಡವನು ಹೇಳಿದರ.
* * *

**ಕೇಶವರಾವ್ ಕುಲಕರ್ಣಿ**

ಮುಕ್ತತೆ ಹೊಂದಿಲ್ಲ ನಮ್ಮಯ ದೇಶವು ಪರತಂತ್ರ ಪಾಪವು
-ತಪ್ಪೇಯಿಲ್ಲ
ಭಕ್ತಿಭಾವನೆ ಬೇಕು ದೇಶ ದಾಸ್ಯವು ಹೋಗಿ ಖಾದಿಯ ಧರಿಸಿರಿ
-ನೀವೆಲ್ಲ
ಹೊಲೆಯರ ದೂಡಬೇಡಿ ಹೊಲಿತನ ಕಳೆಯಿರಿ ಮುಟ್ಟೆ ಮುಟ್ಟೆ ಎನ್ನದೆ
-ಜನರೆಲ್ಲ
ಹೊಲೆಯರು ಹುಟ್ಟಿದ ತೆರ ನಾವ್ ಹುಟ್ಟೇವಿ ಮೈಲಿಗಿ ಬಂತೆಲ್ಲಿ ಜನಕೆಲ್ಲ
ಕೊಲೆ ಕಳವು ಮಾಡಬೇಡ ಹಿಂದು-ಮುಸ್ಲಿಂ ಬೇಧ ಬೇಡ
ಒಂದಾಗಿ ಬಂದು ನೀವು ಕಂದರೆಲ್ಲ
ಉಳಿದಾಚಾರ ತಿದ್ದಿ ಸ್ವಚ್ಛತೆ ಶುದ್ಧತೆ ಸೇವೆಯೆಂಬುವ ಸೂತ್ರ ಕಲಿರೆಲ್ಲ
ಪರದೇಶಿ ಮಾಲ ಬಿಟ್ಟು ನೂಲಬೇಕ್ರಿ ಮನೆಯಲ್ಲಿ ಹೊತ್ತುಳಸಿ
-ನಿಮ್ಮಯ ರಾಟಿಯ ಮೇಲ.

**ಹುಲಕುಂದ ಶಿವಲಿಂಗ ಕವಿ**

ದೇಹ ತುಂಡ ಆಗುವಂತೆ ಕಡಿಬೇಕ
ರಂಡಿ ಮುಂಡ್ಯಾರಂತೆ ಭಯಗೊಂಡು ನಿಲ್ಲುವ ಕಾರಣವೇನು?
ಪುಂಡರಾಗಿ ದಂಡಯಾತ್ರೆ ಮಾಡಬೇಕ
ರಣಮಂಡಲದಿ ಹೋರಾಡಬೇಕ
ಶ್ರೇಷ್ಠ ಭಾರತ ಸಿರಿಯನಟ್ಟಿ ಮಾಡಿದಂಥ
ಮಹಾದುಷ್ಟ ಅಂಗ್ಲೇಯರನ್ನು ಓಡಿಸಬೇಕ
ಕೈಕಟ್ಟಿಬಿಟ್ಟು ಗಂಟು ಮ್ಯಾಲ ಹೊರಸಬೇಕ
ಒಳ್ಳೇ ದಿಟ್ಟತನದಿಂದ ಯುದ್ಧ ಮಾಡುದಕ
ಲಕ್ಷಾವಧಿ ಲಷ್ಕರದ ನಡುವೆ ಸಿಂಹದಂತೆ
ಗುಡುಗ ಹೊಡಿತಾನ ಅಳತಿಲ್ಲ ಅದಕ
ಕೇಳಿ ನಡಗ ಹುಟ್ಟಿತಾಗ ಇಂಗ್ಲಂಡಕ.
* * *

ಭಾಗ ನಾಲ್ಕು

ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು
ಕಾಮತ, ಸೂರ್ಯನಾಥ (ಸಂ)
ಕರ್ನಾಟಕ ಸಾಹಿತ್ಯ ಅಕಾಡಮಿ
ಬೆಂಗಳೂರು. ೧೯೮೮ (ಪುಸ್ತಕದಿಂದ)

**ಮುಂಡೇದ, ಬಿಷ್ಟಪ್ಪ ಕಳ್ಳಿ**

ಮುಳಗಳ್ಳೋ ಈದೂ | ರಾಜ್ಯದ | ಮುಳಗಳ್ಳೋ ಈದೂ || ಪಲ್ಲವಿ ||
ಹಾಳು ಮಾಡಲು ಬಿಳಿಯ ಹುಳಗಳನು ಅಟ್ಟಿಹನು || ಅನು ಪಲ್ಲವಿ ||
ಮುನ್ನೂರು ವರ್ಷದೀ | ಚಿನ್ನಾಗಿ ಬೆಳೆದ ಕಳ್ಳೀ |
ಸನ್ನುತ ಪುರಿಗೇ | ಬನ್ನ ಬಿಡಿಸಿದ ಕಳ್ಳೀ || ೧ ||

ಊರಕೇರಿಗಳಲ್ಲೀ | ನೀರನ ನೆರೆಯಲ್ಲೀ|
ಬೇರೂರಿ ನೆಲಿಸಿತೊ | ನಮ್ಮ ಭಾರತದಲ್ಲೀ || ೨ ||

ಕೆಂಪು ಕಾಯದ ಕಳ್ಳಿ | ತಂಪು ಮಾಡಿದ ಕಳ್ಳೀ |
ಪೆಂಪಿನ ಭಾರತದ | ಸೊಂಪನ್ನಡಗಿಸಿದ ಕಳ್ಳೀ || ೩ ||

ಮುಳ್ಳು ಸುಂಕಗಳಿಂದ | ಚೇಳು ಹಾವುಗಳಿಂದ ಒಳ್ಳೊಳ್ಳೇ
ಜನರನ್ನೂ ಮಂಣಾ ಮುಕ್ಕಿಸಿದ ಕಳ್ಳೀ || ೪ ||

ದುಷ್ಟ ಪ್ರಾಣಿಗಳಿಂದ | ಆರ್ಭಟಿಸೋ ಕಳ್ಳೀ
ನಷ್ಟ ಮಾಡಿತೋ ನಂಮ | ಶ್ರೇಷ್ಠ ಭಾರತವನ್ನು || ೫ ||

ರೊಕ್ಕ ಹೀರಿದ ಕಳ್ಳೀ | ಬಿಕ್ಕೆ ಹಚ್ಚಿದ ಕಳ್ಳೀ
ಒಕ್ಕಲಿಗನಿಗೇ ಮಂಣೂ | ಮುಕ್ಕಿಸಿದ ಕಳ್ಳೀ || ೬ ||

ಕಡಿಯಲು ಪೋದರೇ | ಬಿಡದಲೇ ಬೆಳೆಯುವದು |
ಪೆಡವಿರಾಮನ | ಕಾಡಿದ ರಕ್ಕಸನಂತೇ || ೭ ||

ಕಳ್ಳೀಯ ನಾಶಕ್ಕೆ | ಒಳ್ಳೇ ಮಹಾತ್ಮಾಜೀಯು |
ಬಿಳಿಯ ವರ್ಣದ ಟೋಪಿಗೀ ಹುಳಗಳನಟ್ಟಿಹನು || ೮ ||

ಶಾಂತೀ ತತ್ವವ ತಿಳಿದೂ | ನಿಂತ ಹಾಡೋ ಬಿಷ್ಟಂಣಂದೂ
ಕ್ರಾಂತಿಯ ಮಾಡಿದ್ದು | ಸ್ವಾತಂತ್ರ್ಯದ ತಿಗಡೊಳ್ಳೀ || ೯ ||

**ನಾ ನೋಡಿದ ಮಂಗ**

ಮಂಗನ್ನ ನೋಡಿದೆನೋ ನಾನೊಂದು | ಮಂಗನ್ನ ನೋಡಿದೆನೋ
ಕೆಂಪುಮಾರೀ||

ಮಂಗನ್ನ ನೋಡಿದೇ ಹಂಗಿಲ್ಲ ಯಾರದು | ಹಿಂದೂಸ್ತಾನ

ವನ್ನಾತಿನ್ನೋ ಹಂದಿ ಕುಲವ ಮಂಗ ||೧||
ಕಾಲು ಕುಬಸದ ಮಂಗ| ಮೇಲೆ ಟೊಪಿಗುಳ್ಳ ಮಂಗ|
ಹಾಲುಂಡ ದೇಶದ
ಮಾಲ್ಯ ಹಲ್ಲಾ ಮಾಡಿತೋ ಮಂಗ ||೨||

ಮೀಸೀಯಿಲ್ಲದ ಮಂಗ| ವಿಶ್ವಾಸಗೇಡಿ ಮಂಗ|
ಲೇಸೆಂದ ಹಿಂದುಸ್ತಾನದ್ದ ಹೇಸಿಕೆ ತಿಂದ ಮಂಗ ||೩||

ಒಂದಾದಾಗ್ಗೆ (ಒಂದಾದರೆ) ನಾವಿಂದ ಬಂದ ಸಿಕ್ಕೀತ
ಮಂಗ| ಬಿಷ್ಟಂಣ ಕವ್ವಾ ಅನುವಾಗ ಹಲ್ಲಕಿಸಿತಿತ್ತು ಮಂಗಾ||೪||

**ನಲವಡಿ ಶ್ರೀಕಂಠ ಶಾಸ್ತ್ರಿಗಳು: ವಂದೇ ಮಾತರಂ**

ಪದಹಕ ಹೊಂದಿಸಿ ಹಾಡುವೆನು
'ವಂದೇ ಮಾತರಂ' ಎಂದು ನಾ ||ಪ||

ಭಾರತ ದೇಶದ ವೀರ ತರುಣರ
ಧೀರ ಮಹಾತ್ಮ ಗಾಂಧಿಯನು ಸ್ಮರಿಸುತ ||ಅ.ಪಲ್ಲವಿ||

ಯಾರ ಬಂದು ಯಾರ ಅಳಿ ಯಾರ ಹಾಳ ಮಾಡ್ಯಾರ
ಮುಸಡಿ ಕೆಂಪು ಮನಸು ಹೊಲಸು ಅವ್ರು ಬ್ರಿಟಿಷರ ||೧||

ಉಪ್ಪ ತಿಂದು ನಮಗ ತಿರುಗಿ ಬಿದ್ದಾರ
ಉಪ್ಪು ಮಾಡಿದರ ಗಪ್ಪನ ಹಿಡಿದರ||೨||

ಉಪ್ಪು ಮಾಡಿ ಸ್ವಾತಂತ್ರ್ಯ ಪಡೆಯಿರಿ
ಉಪ್ಪಿನ ಕಾಯ್ದೆ ಮುರಿದು ಹಾಕಿರಿ ||೩||

ಹಪ್ತೆ ಎಂದು ಹಣವನ್ನು ಜಗ್ಗುವರು
ಜಪ್ತ ಮಾಡುವರು ಭೂಮಿ-ಸೀಮಿಯನು ||೪||

ಬಿಳಿಯ ಕಾಗದದ ನೋಟು ಮಾಡಿದರು
ಬಳಿದರೆಲ್ಲ ನಮ್ಮ ವಸ್ತು ಒಡವೆಗಳ ||೫||

ನಮ್ಮ ದೇಶ ಸ್ವಾತಂತ್ರ್ಯ ಬೇಡಿದರ
ನಮ್ಮ ಮೇಲೆ ಗುಂಡು ಹಾರಿಸಿಬಿಡುವರು||೬||

ಸಿಂಧಿ- ಸೆರೆದಂಗಡಿಗೆ ಸುಂಕ ಹಾಕುವರು
ತಿಂದು ತಿಂದು ತಿರುಗಿ ಸುಂಕ ಬೇಡುವರು ||೭||
ಕೊಡಲಿಯಿಂದ ಈಚಲ ಗಿಡಗಳನು

ಕಡೆಯಿರೀಗ ಅದು ತಡೆಯದೊಂದಿನ ||೮||
ರಾಟೆಯಿಂದ ಕೈನೂಲ ತೆಗೆಯಿರಿ
ಪ್ರಿಟಿನಿಂದ ಬಟ್ಟೆಯನು ನೇಯಿರಿ ||೯||

ಪರರ ಆಳಿಕೆ ಅಳಿಸಿಹಾಕಿ ಬಿಡಿರಿ
ಭಾರತ ಸ್ವಾತಂತ್ರ್ಯ ಎಂದು ಸಾರಿರಿ |||೧೦||

**ಮೊಗೇರಿ ಚಂದ್ರಮ್ಮ : ದೇಶಭಕ್ತರ ಉದ್ಗಾರಗಳು**

ಸೂರೆಯಾದುದು ನಮ್ಮ ಭಾರತ ಭೂಮಿ| ಸೈರಿಸುವದೆಂತಿದನು|
ಮಾರಿ ಹೋಗಿಹೆವು ||ಪಲ್ಲವಿ||

ಹೆತ್ತ ಮಕ್ಕಳ ತೆರದಿ ಪ್ರಜೆಗಳಂ ಪಾಲಿಪುದು | ಮತ್ತೆ ತಿಳಿಯಲು
ರಾಜಧರ್ಮವೈಸೆ ||ಇತ್ತ ನೋಡಿರಿ| ಸವತಿ ಪುತ್ರರಂದದೊಳೆಮ್ಮ|
ನತ್ಯಧಿಕವಾಗಿ ಪೀಡಿಪರಾಂಗ್ಲ ಜನರು ||

ಕೋಡು ಕಲಮುಗಳೆಂದು ಮಾಡುವುದು ಕಲಹಗಳ| ದೂಡುವರು
ಸೆರೆಗೆ ಭಾರತ ಪುತ್ರರ || ಖೋಡಿಗೈವರ ನ್ಯಾಯದೇವತೆಯ ಸಂಪದವ|
ಬೇಡವವರೊಡನೆ ಸಹಕಾರ ನಮಗಿನ್ನ||

ನಮ್ಮ ನಮ್ಮೊಳಗೆ ಕಡುವೈರವಂ ಹುಟ್ಟಿಸುತ| ಹಮ್ಮಿನಿಂ ಸುಳ್ಳು
ಸಾಕ್ಷಿಯ ನುಡಿಸುತ || ದುರ್ಮಾರ್ಗದಿಂದ ಸುಜನರನ್ನು ಸೆರೆಮನೆಗಟ್ಟಿ|
ತಮ್ಮತಮ್ಮೊಳು ನಗುತಲಿರುವರವರು||

ಹಿಂದೂ ಮುಸಲ್ಮಾನರೊಳಗೆ ವೈರವ ಬೆಳಸಿ | ಹಿಂದೊಮ್ಮೆ ಸಫಲ
ರಾಗಿಯ ನಲಿದರು || ಇಂದಿಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣರೆಂಬು|
ದೊಂದು ಭೇದವ ಹೂಡಿ | ನಲಿಯುತ್ತಲಿಹರು||

ಪ್ರೋಸಿರ್ಝುರು ಪಿನಲುಗಳು| ವಾಸಿಸಿರೆ ಭಾರತದಿ| ಶಾಸನಗಳಿನ್ನಾತ
ರತ್ಯುಗ್ರದ|| ಘಾಸಿಗೈದವು ನಮ್ಮ ಜನರ ಬಹುವಿಧದಿಂದ
ಅಸುರೀತನದ ಕಾಯ್ದೆಯ ಕೋಡ್ಗಳು||

ದೂರತೀರಾಳೊಡೆಯರಿವರೆ ಕೆಟ್ಟವರೆಂದು | ದೂರುವುದು ನಮ್ಮ
ಷಂಡರ ನಡತೆಯ || ಸೇರಿಹರು ಪರಸೇವೆಯೊಳಗೆ ದುಃಸ್ವಾರ್ಥದಿಂ|
ಸಾರುವರು ಪಾಶ್ಚಿಮಾತ್ಯರು ದೇವರೆಂದು||

ಕುಲಕೆ ಕೇಡನು ಬಗೆದು ಕೊಡಲಿಯಳು ತಾ ಸೇರಿ | ನಲಿಯುತ್ತಲಾ
ಮಾನವರ ಕರದೊಳು || ಛಲದಿಂ ಸ್ವಕೀಯ ವೃಕ್ಷಗಳ ತಲೆಗಳ ಕಡಿವ|
ಬಲುಗೊಡಲಿ ಕಾವಿನಂತಿಹರು ಜನರು||

ಹುಟ್ಟಿದುದು ಭಾರತದಿ ಬೆಳೆದುದೂ ಭಾರತದಿ| ಹೊಟ್ಟೆ ತುಂಬುವುದು
ಭಾರತದಲ್ಲಿಯೇ || ದುಷ್ಟರೊಳು ಬೆರೆತು ಒಡ | ಹುಟ್ಟಾದ ಭಾರತದ

ಶ್ರೇಷ್ಠರೊಳು ಕ್ರೂರತನಮಂ ತೋರುತಿಹರು||
ದೇಶ ಘಾತಕರಾಗಿ ಮಾತೃ ಘಾತಕರಾಗಿ| ಲೇಸೇನ ಪಡೆವಿರೈ|
ಮರುಳುಗಳಿರ || ಆ ಸಕಲ ಸ್ವಾತಂತ್ರ್ಯ ಪೂರಿತರು ನಿಮ್ಮನ್ನು|
ದಾಸರೆನ್ನುತ ತಿಳಿದು ನಗದಿಹರೆ ಮನದೀ ||

ಶಾಪವೀಯಳೆ ಭಾರತಮಾತೆ ತಾಂ ಕೋಪಿಸುತ| ಲೀಪರಿಯ ವರ್ತನ
ವನ್ನು ಬಿಟ್ಟು || ರೂಪುಗೊಂಡಿರುವ ಸ್ವಾತಂತ್ರ್ಯ ಯುದ್ಧಂಗಣಕೆ|
ಕಾಪುರುಷತನಕವ ತೋರದೆ ನಡೆಯಿರಯ್ಯ |

ಭರತ ಖಂಡದ ಜನರೆ | ಪರಮ ಬಾಂಧವರೆ | ನೀ | ವರಿಯಿರೈ|
ಸ್ವಾತಂತ್ರ್ಯದ ಮಲಕಲಿಯ|| ಚಿರಕಾಲ ರೂಢವಾಗಿರುವ ದೈನ್ಯವನು
ಮುಖ| ಪುರದರಸನತಿ ಕರುಣದಿಂದ ತೊಲಗಿಸುವನು||

**ಕೃಷ್ಣದಾಸ: ಅಸಹಕಾರ ಲಾವಣಿ**

ನಿಮ್ಮ ಅನ್ನವನ್ನು ತಿಂದು ನಿಮ್ಮ ಮೇಲೆ ತಿರುಗಿಬಿದ್ದು ಗುಮ್ಮಿ
ಕೊಲ್ಲುವರು ಅಧಿಕಾರಿಗಳು || ಎಲ್ಲ ತಮ್ಮದನ್ನೆ ಮಾಡಿಕೊಳ್ಳುವರಿನ್ನು|
ಗೊಡ್ಡು ಎಮ್ಮೆಗಳ ಪರ ಬಿದ್ದಿಹಿರಿ ಇನ್ನೂ | ಸುಮ್ಮನೆ ಕೂಡದೆ
ನೀವು ಒಮ್ಮನದಿಂದಲಿ ನಡೆದು ಗುಮ್ಮನೆ ಘಳಿಸಿರಿ ಸ್ವಾರಾಜ್ಯವನ್ನು|
ಮುಂಚೆ ನಮ್ಮ ದೇಶದಿ ಹೆಚ್ಚಿಸಿರಿ ವಿದ್ಯೆಯನು |
* * *

ಸರಕಾರಿ ಕೋರ್ಟುಗಳೆಂಬೊ ಹಿರಿಯ ದೈವಗಳನು | ನೀವು
ತ್ವರಿತದಿಂದ ಓಡಿಸಿ ಬಿಡಿರಿಂದೆ | ಅಪಹರಿಸುವುದನ್ನು ನಿಮ್ಮ
ಸಂಪತ್ತನ್ನು ಬರಿದೆ| ಬಹುಪರಿಯಿಂದಲಿ ಕಷ್ಟವಾದುದರಿಂದಲೇ
-ಸಿರಿಯನ್ನೆಲ್ಲದ್ದೈದು ನಿಮ್ಮ ಕರದೊಳು|
ಮೂರು ತೂತಿನ ಪರಡಿ ಕೊಡುವರು | ನಿದ್ದೆಯ ಭರದಿಂದ
ಎಚ್ಚರಾಗಿರೋ ಇಂದೆ.
* * *

ಹಿಂದುಗಳೆಲ್ಲರು ಬಂಧುಭಾವದಿಂದ ಒಂದುಗೂಡಿ ನಡಿಯಿರಿ|
ಮತಭೇದವನ್ನು ಮರೆಯಿರಿ| ನೌಕರಿಯೆಂಬುವ ಬೆಂಕಿಯೊಳಗೆ ಬಿದ್ದು
ಯಾಕೆ ಸಾಯುತಿರುವಿರಿ? ಅದನ್ನೆಲ್ಲಾ ಬಿಟ್ಟು ಬನ್ನಿರಿ| ನಿರಭಿಮಾನಿ
ಯಾಗಿರುವುದಕ್ಕಿಂತಲು ಮರಣ ಲೇಸು ಅನ್ನಿರಿ | ಸ್ವರಾಜ್ಯ ಮಂತ್ರ
ಜಪಿಸಿರಿ| ಪರತಂತ್ರದಿಂದ ದಾಟಿರಿ | ಸ್ವಾತಂತ್ರ್ಯದಿಂದ ಬಾಳಿರಿ |
ಮನಮುಟ್ಟಿ ಯತ್ನಮಾಡಿರಿ | ಜಯ ಹಿಂದುಮಾತೆ ಎನ್ನಿರಿ.
* * *

**ಪಂಜೆ ಮಂಗೇಶರಾಯ: ಎದ್ದೇಳು! ಎದ್ದೇಳು!!**

ತೂಕಡಿಕೆಯನು ಕಳೆಯ | ದೇಕೆ ಕುಳಿತಿಹ ಗೆಳೆಯ |
ಸಾಕು ಸುತ್ತಲು ನೋಡು ಕಣ್ದೆರದು ನಿಂದೂ ||
ಲೋಕದಲಿ 'ವಂದೆಮಾತರಂ' ಎಂಬುದೊಂದೇ ಪದ|
ಈ ಕಿವಿಯನೊಡೆಯುತಿದೆ | ಉಚ್ಚಳಿಸಿ ಬಂದೂ ||೧||

ಮತಜಾಲದೊಳ್ ಸಿಲುಕಿ | ಅತಿ ಜಾತಿಯೊಳು ಕುಹುಕಿ
ಗತಿಗೆಟ್ಟು ಸರ್ವರಲಿ ನೀನಾದಿ ಹಿಂದೂ||
ಪತಿತರಿಗೆ ಕೈಗೊಟ್ಟು, ಭಾರತ ಧ್ವಜನೆಟ್ಟು|
ಪಥದೋರ್ ಗಾಂಧಿ, ನೀನಡೆ, ಧೀರ ಮುಂದೂ ||೨||

ನುಗ್ಗು ನುಗ್ಗುತ ಪರರು, ಮುಗ್ಗುತ್ತ ಬರುತಿಹರು |
ಬಗ್ಗಿರದೆ, ಬಾಗುವದೆ, ನಿನಗಾಯಿತಿಂದೂ ||
ಹಗ್ಗವಿಲ್ಲದ ಕಟ್ಟು, ಬೆತ್ತವಿಲ್ಲದ ಪೆಟ್ಟು|
ಹೊಗ್ಗಿತೇ ಈ ಗತಿಯು ಸವಿವಿಷವ ತಿಂದೂ ||೩||

ಚಿತ್ತವಸನಾಕುಲಿಯು | ಕುತ್ತಿಗೆಯ ಸಂಕೊಲೆಯ|
ಕತ್ತರಿಸುತ್ತೆನ್ನ ಸೆರೆ ಬಿಡಿಸಬೇಕೆಂದೂ ||
ನೆತ್ತಿ ಬೊಟ್ಟನು ಇಡದೆ ಬಿರುದ ಬಾವಲಿ ತೊಡದೆ|
ಅತ್ತತ್ತು ಹಲಬುತಿದೆ, ಭೂಮಾತೆಯಿಂದೂ ||೪||

ಸತ್ತಿತೇ ಸಾಹಸವು, ಬತ್ತಿತೇ ಧೃತರಸವು|
ಮತ್ತೇ ಮಡಿದಾಕರ್ಣ, ನಾ ಬೆನ್ನ ಹಿಂದೆ||
ಎತ್ತಪೋದುದೊ ಪರಶುರಾಮನಾ ತೋಳ್ಬಿರಿಸು|
ನೆತ್ತರೊಳಗಿಲ್ಲವೈ ವಿಕ್ರಮದ ಬಿಂದೂ ||೫||.

ಕಳವಾದ ಮೇಲೆ ನೀನು, ಕಳವಳಿಸಿ ಫಲವೇನು|
ಕಳದಪುದೇ ಸ್ವಾತಂತ್ರ್ಯ ಮಣಿಯು ನಿನಗಿಂದೂ||
ಕೆಳಕೋಟೆ ಕೈಸೊಂಕೆ ಕಹಳೆ ಕೂಗುವುದೇಕೆ|
ಕಳಚಿಬಿಡು ಅಧ್ಯಾತ್ಮನಿದೆ ಮಮ ಬಂಧೂ ||೬||

ಎದ್ದೇಳು ಎದ್ದೇಳು, ನಿದ್ದೆ ಕಣ್ಣಿವೆ ಕೀಳು
ಪೊದ್ದಿರ್ದ ವೇದಕಂಬಳಿ ಮೂಲಿಗೊಂಡು ||
ಎದ್ದು ಬರುತಿರೆ ಭಾನು, ಎದ್ದಿತೆತ ಜಾಪನು|
ಬಿದ್ದುಕೊಂಡಿರುವೇಕೆ? ಕತ್ತಲೆಯೊಳಿಂದೂ||೭||

ತಳರು ಭರತಕುಮಾರ ಸತ್ಯಬಲದಿಂ ಧೀರ
ಝಳಪಿಸುತಲಸಹಕಾರಾಯುಧವನಿಂದೂ ||
ಅಳುತದಲೆ ಧರ್ಮಯುದ್ಧದಿ ಕಾದು ಕಲಿತನವ|
ತಳೆದು ಭಾರತ ಮಾತೃ ಸೌಭಾಗ್ಯಕಿಂದೂ ||ಅ||

**ದೇಶಸೇವೆಗೆ ಎಚ್ಚರಾಗಿರಿ** ಲೇಖಕ : ತಿಳಿಯದು

........

ಇಂಗ್ಲಿಷು ವಿದ್ಯೆಯು ನಮಗೊಂದು ಗಿಲಿಟು|
ಇಂಗ್ಲಿಷರಿಗ್ಯಾತಲ್ಲ ಬಂಗ್ಲೆಯ ಸ್ಯಾಟು||
ಜಂಗ್ಲಿಗಳು ನಾವೀಗ ತಿಳಿದರೆ ರೈಟು|
ಇಂಗ್ಲಿಷ್ ಸಾಕಷ್ಟು ನಿನಗೆ ಗುಡನ್ಯಾಟು
* * *

ಸಾಕಪ್ಪ ಹೈಕೋರ್ಟು ಠಸೆ ಬೇಟೆ ಮಾಟ
ಸಾಕಪ್ಪ ಕೋಟಿಗೆ ಓಡ್ಡೋಡಿ ಓಟ||
ಯಾಕಪ್ಪ ವಕೀಲರ ಫೀ ಕೇಳ್ವ ಕಾಟ|
ಸಾಕಪ್ಪ ಖಟ್ಲೆಯು ಸಿಕ್ಕದೆ ಊಟ
* * *

ದೇಶಿಯ ಕೆಲಸಕ್ಕೆ ಮರ್ಯಾದೆ ಕೊಡಿಸು|
ದೇಶಿಯ ಸಂಪತ್ತು ಆದರಿಂದ ಮಿಗಿಸು||
ದೇಶಿಯ ಭಾಷೆಯ ಮಗುವಿಗೆ ಕಲಿಸು|
ವೇಷ ಹೇಟ್ ಬೂಟೆಲ್ಲ ಮೂಲೆಯಲ್ಲಿರಿಸು.
* * *

**ದೇಶಿ ದುಮದುಮ್ಮೆ**

ತಕ್ಕಡಿ ಹಿಡಿಕೊಂಡು ಬೇಸಾಯ ಮಾಡುತ ಬಿಳುಪಾದ ಪರಕೀಯ
ಜನರೆಲ್ಲರೂ| ಬಂದು| ಕಕ್ಕಸಬುಡುತಲಿ ಕೂಡಿದರು |ನಮ್ಮ |
ಉಕ್ಕುವ ನಾಡನು ಕೆಡಿಸಿದರು|| ಯುಕ್ತಿಯ ಬಲದಿಂದ ನೆಕ್ಕುತ
ರಾಜ್ಯವ ರಾಜಕಾರಣವನ್ನು ಭರದಿ ಹೂಡಿದರು

ಬಗೆಬಗೆ ಬೆಳೆಯಿಂದ ಸೊಗಸಾಗಿ ಮೆರೆಯುವ ಮಿಗಿಲಾದ ಬಂಗಾಲ
ರಾಷ್ಟ್ರವನ್ನು| ಬಲು| ಸೊಗಸಾದ ಕರ್ನಾಟಕದೇಶವನು |ವೀರ|
ಮೊಗದ ಪಂಜಾಬದ ಭೂಮಿಯನು || ಮಿಗಿಲಾದ ಮಹಾರಾಷ್ಟ್ರ
ದೇಶವ ಮೋಸದಿ ಭರದಿಂದ ಸಮನಾಗಿ ವಶಮಾಡಿಕೊಂಡರು

ವೀರರ ಕರದೊಳು ಮಿನುಗುವ ಕತ್ತಿಗಳೆಲ್ಲೆಲ್ಲಿ ನೋಡಲು ಹೋದ
ವಯ್ಯ| ಚಾಕು| ಚೂರಿ ಕತ್ತರಿ ಕತ್ತಿ ಬಂದವಯ್ಯ | ಮಾರು|
ಮಾರುದ್ದ ಚತ್ತರಗಿ ರತ್ತ್ರವಯ್ಯ || ಕಾರುತ್ತ ವಿಷವನು ಪರದಾಸ್ಯ
ರಾಹುವು ನುಂಗಿದನಯ್ಯಯ್ಯೋ ಸ್ವಾತಂತ್ರ್ಯ ಶಶಿಯಾ

ಶೂರರ ಶೌರ್ಯವ ಕಡಿದರು ನೋಡಿರಿ ವೀರರ ವೀರ್ಯನ ಕುಕ್ಕಿದರು|ಸರ
ಕಾರದ ದಾಸರು ಸೊಕ್ಕಿದರು | ದರ| ಕಾರವಿದೆ
ರಾಜ್ಯವಾಳಿದರು || ಧೀರತನವ ತುಂಡು ತುಂಡಾಗಿ ಕಡಿದರು
ಗಂಡಸುತನವನು ಮೊಂಡಮಾಡಿದರು.
ಪರದೇಶದರಸನ ದಾಸರು ಸರಸಾಗಿ ರಕ್ಷಣೆ ಮಾಡುತ್ತಲಿರುತಿಹರು|
ನಮ್ಮ | ಸುರವಂದ್ರ ದೇಶದಲಿರುತಿಹರು | ತಮ್ಮ | ವರರಾಜ್ಯ
ರಥವನು ಹೂಡಿದರು || ಕರ ರೂಪದಿಂದಮ್ಮ ರೈತರ ಹಣವನು ಹಗಲಿರುಳಿಲ್ಲದೆ
ನುಂಗುತ್ತಲಿಹರು.

* * * *

ದಾಸ್ಯ ಪಾಶವ ಬಂದು ಕೊರಳನು ಬಿಗಿದಿತು ನಾಡೆಲ್ಲ ದುಃಖದಿ ಮರುಗುವಂತೆ|
ಅಮಾ | ವಾಸ್ಯೆಯು ಜಗನು ಮುತ್ತುವಂತೆ | ಯಮನಾಸ್ಯವು ಜನರನ್ನು
ನಗುವಂತೆ || ಹಾಸ್ಯದ ಮಾತಲ್ಲ ರೈತರ ದಾಸ್ಯವು ಯಮರಾಜನಾಸ್ಯದ ತಲೆಯ
ಮೇಲಾಯ್ತು

ಕೂಳಿಲ್ಲದಂತಹ ರೈತರ ಗೋಳನ್ನು ಬಣ್ಣಿಸಬೇಕ್ಯಾರು ಜಗದೊಳಗೇ |ವಿಷ|
ಬೇಳಿನ ತಾಪವ ಮನದೊಳಗೇ | ನೀವು| ತಿಳಿದುಕೊಳ್ಳಿರಿ ಮಾತು ಒಡ
ಲೊಳಗೇ || ಜೋಳವಿಲ್ಲದ ಬಡ ರೈತರ ಧನವನು ಹೀರುವ ಸರಕಾರ ಸರಕಾರ
ವಲ್ಲಾ

ಎರಡೆರಡು ಸಾವಿರ ಕಲೆಕ್ಟರ ಜನರಿಗೆ ತಿಂಗಳದೊಳಗಿಷ್ಟು ಬರಿದಾಯಿತು|
ನಮ್ಮ | ಕರಿಗಾಲದೊಳು ಪ್ಲೇಗು ತಲೆಯೆತ್ತಿತ್ತು | ನಾಡ| ಗಾರರು ತೊಳಲುವ
ಕಾಲ ಬಂತು |. ಪರದೇಶದಿಂ ಬಂದ ಪರಕೀಯ ಜನರಿಗೆ ಸೂರಿಯಾಯಿತು ನಮ್ಮ
ದ್ರವ್ಯದ ಸುಗ್ಗಿ

* * * *

ಪರದೇಶದೊಡವೆಯ ಪಿಡುಗು ಬಂದಿತು ನಮ್ಮ ಪರಮಪಾವನವಾದ ನಾಡಿ
ನೊಳು | ತರ | ತರದ ಬಣ್ಣದ ಮಾಯಾ ಮೋಹಗಳು | ಬಲು| ಸರಸಾದ
ಸೊಗಸು ಸಾಮಾನುಗಳು || ಶಿರದಿಂದ ಹಿಡಿಕೊಂಡು ಕಾಲ್ತುದಿತನಕೆಲ್ಲ ಬಡಿದಿತು
ಪರದೇಶಿ ಮಾಲಿನ ಮೈಲಿ

ನುಣುಪಾದ ಕಾಜಿನ ಸೊಗಸಾದ ಸಾಮಾನು ಗಿರಣಿಯ ನಯವಾದ ಅರಿವೆಗಳೂ
| ಬಣ | ಬಣಗಿನ ಚೀಟಿನ ಥಾನುಗಳೂ | ಕಣ | ಕಣಿಸುವ ಕಬ್ಬಸಿ ಭಾಂಡಿಗಳೂ ||
ಪ್ರಣತೀಯ ಸ್ಥಾನಕ್ಕೆ ಬಂತಲ್ಲೊ ಬಿದ್ದರೆ ಪಳ್ಳೆಂದು ಒಡೆಯುವ ಕಾಜಿನ ದೀಪಾ

ಭತ್ತದ ಗಿರಣಿಯು ಹಳ್ಳಿಯ ಜನಗಳ ಹೆಂಡರ ಹೊಟ್ಟೆಗೆ ಬರೆಗೊಟ್ಟಿತು
| ಮತ್ತೆ| ಭತ್ತದ ವ್ಯಾಪಾರ ಕಟ್ಟಾಯಿತು | ಸುತ್ತು ಮುತ್ತಿನ ಜನರಿಗೆ
ಕುತ್ತಾಯಿತು || ತುತ್ತಿಲ್ಲದಂತಹ ರೈತನ ಮಡದಿಯ ಒಡೆದು ಹೋಯಿತು
ಚೆಲ್ವ ಮಾನದ ಮುತ್ತು

ಗಿರಣಿಯ ಅರಿವೆಯು ಬಂದಕಾಲಕ್ಕೆ ನಮ್ಮ ಜಾಡರ ಹೊಟ್ಟೆಯು ಹೋಳಾಯಿತು
ಬಲು ಸರಸಾದ ನೇಯಿಗೆ ಹಾಳಾಯಿತು | ಅತಿ | ವಿರಸವಾಗಿರುವಂಥ
ಬಾಳಾಯಿತು || ಜರದಿಂದ ಕೊರೆಯುತ್ತ ಜಾಡರ ಕರಳನ್ನು ಮೆರೆಯುತ್ತ
ಬಂದಿತು ಮ್ಯಾಂಚೆಸ್ಟರರವಿ
ಎಷ್ಟೆಂತ ಹೇಳಲಿ | ದೇವರ ಗುಡಿಯೊಳು ದೇವರು ಪರದೇಶಿಯಾದನಲ್ಲ|
ಅವನ | ಭ್ರಷ್ಟ ಪೂಜಾರಿಯ ದೇಹವೆಲ್ಲ | ಬಲು ದುಷ್ಟಾದ ಬಟ್ಟೆಯು
ಬಂದಿತಲ್ಲ || ಕಷ್ಟದಿ ಹೇಳುವೆ ಮನಸಿಟ್ಟು ಕೇಳಿರಿ ಮ್ಯಾಂಚೆಸ್ಟರರವಿಯು ನಮ್ಮ
ಹೆಣಕೆಲ್ಲ

ಇದ್ದರೆ ಪರದೇಸಿ ಸತ್ತರೆ ಪರದೇಶಿ ಸುಟ್ಟರೆ ಪರದೇಶಿಯಾಯಿತಯ್ಯ
ತನ್ನ| ಸದ್ದನು ತೋರದೆ ಬಂದಿತಯ್ಯ | ಇದು | ಮುದ್ದು ಕೆಂಡದ ಮಳೆ
ಸುರಿಯಿತಯ್ಯ || ಇದ್ದರೆ ಹುರಿದಿತು ಸತ್ತರೆ ಸುಟ್ಟೀತು ಮೆದ್ದರೆ ಒಡಲನು
ಸುಡುವದಯ್ಯಯ್ಯೋ

ಬಡಿಗನು ಹರತಾದ ಬಾಚಿಯ ಮೊನೆಯಿಂದ ಎಳೆಯನು ಸಮನಾಗಿ ತರಿಯುವಂತೆ
| ಬಡ | ಆಡನ್ನು ಕಟಕನು ಕಡಿಯುವಂತೆ | ಬೇಟೆ | ಬಡಕನು ಮೊಲವನು
ಸುಲಿಯುವಂತೆ|| ಬಡವರ ಒಡಲೀನ ಕರಳನು ಕೊರೆದೀತು ಪರದೇಶೀ ಸರಕಿನ
ಹರಿತಾದ ಚೂರಿ
* * *
ದುಡ್ಡಿದ್ದ ಮನುಜಗೆ ನ್ಯಾಯವು | ದುಡ್ಡಿಲ್ಲದವನಿಗೆ ನ್ಯಾಯವಿಲ್ಲ|
ಬಲು | ಹೆಡ್ಡ ವಕೀಲರು ಬಂದರಲ್ಲ | ನಮ್ಮ | ದುಡ್ಡನು ಹೀರುತ್ತ ಬೆಳೆವರಲ್ಲ ||
ದುಡ್ಡಿದ್ದ ದುರುಳನ ಹಾಳು ಬಾಳುವೆಗಿಂತ ದುಡ್ಡಿಲ್ಲದಂತಹ ಬೊಡ್ಡಿಯೆ
ಲೇಸು
* * *
ಪರದಾಸ್ಯ ಪಾಶವ ಕಡಿಯುತ್ತ ಕಾದಲು ಶೂರತನದ ಶೆಳಕು ಹೊಡೆ
ಯಿತಲ್ಲ | ನಮ್ಮ | ಪರವಶರಾದಂಥ ಮನುಜರೆಲ್ಲ | ನಿದ್ದೆ| ಅರಿದೆದ್ದು
ಯುದ್ಧಕ್ಕೆ ನಿಂತರಲ್ಲ || ಆರು ವರುಷ ಕೈಮ ಭೋಗಿಸಿ ಮಡಿದನು ಕಾ
ದುರೆಮ್ಮಯ್ಯ ವೀರ ದಳವಾಯಿಯಲ್ಲಾ

ಸ್ವಾತಂತ್ರ್ಯವೆಂದರೆ ರೈತರ ರಾಜ್ಯವು ರೈತರ ಹಿತವೊಂದೇ ಹಿತವು ನಮಗೆ
| ಬಡ | ರೈತರ ಸುಖವೊಂದೆ ಸುಖ ನಮಗೆ | ಬಡ| ರೈತರ ಶ್ರಮವೆಲ್ಲ
ಶ್ರಮ ನಮಗೆ || ರೈತರ ರಕ್ತದ ಬಲವೆಲ್ಲ ಕುಂದಿತು ಪರದಾಸ್ಯರೋಗದ ಕಡು
ದುಃಖದೊಳಗೆ

ಪರದೇಶಿ ಗಿರಣಿಯ ನಯವಾದ ವಸ್ತ್ರವು ರೈತರ ಕೊರಳಿಗೆ ಉರಲಾಯಿತು
| ನಮ್ಮ| ಸರಸಾದ ರಾಟಿಯು ಬಯಲಾಯಿತು | ಬಲು | ಬೆರಗು
ಮಾಡುವ ಮಗ್ಗ ಮುಗ್ಗಾಯಿತು || ಕೊರಳಿಗೆ ಕುತ್ತಾದ ಕರಳಿನ
ಗಾಯವು ಮಾಯಬೇಕೆಂದರೆ ಖಾದಿಯೆ ಹಾದಿ

ಪರದೇಶಿ ಶಾಲೆಗೆ ಶರಣು ಹೊಡೆದು ಬನ್ನಿ ಲೇಸೆಮ್ಮ ಬೆಡಗನು ಮರೆಯುವದು|| | ನಿಮ್ಮ | ಹೊರತಾಗಿ ದೇಶವು ಕರಗುವದು | ಕೆಟ್ಟ | ನರಕದ ತಳವನು ಕಾಣು ವದು|| ಶೂರತನದಿ ಬಂದು ಧೈರ್ಯದಿ ಕಾದಿರಿ ಸ್ವಾತಂತ್ರ್ಯದ ಯುದ್ಧದ ರಣರಂಗದೊಳಗೆ

ಶಾಂತಕವಿಗಳ ಮೂರು ಕೀರ್ತನೆಗಳು
ಧಾರವಾಡಕರ, ರಾ.ಯು. (ಸಂ)
ಧಾರವಾಡ, ೧೯೮೩

ಶ್ರೀ ವಿದ್ಯಾರಣ್ಯ ವಿಜಯ (ಲಾವಣಿಯಿಂದ)

ಇದು ಮಮ್ಮೈ ಕನ್ನಡ ಕೇಳ್ ಗೆಳೆಯ
ಇದು ಮದ್ರಾಸದ ಕನ್ನಡಿಯು
ಇದು ಮೈಸೂರವರಿಡಿಗನ್ನಡಿ ಮೇಣ್ |
ಇದು ಕೊಡಗದ ಕನ್ನಡಿಕಾಣ್ಮೆ
ಇದು ಭಾಗ್ಯದ ನಗರದ ಕನ್ನಡಿ ಕೊ-
ಡಿದರಿವು ನಿನ್ನಿಡಿ ಕನ್ನಡಿಯು
ಈ ನಿನ್ನ ಇಡಿ ಕನ್ನಡಿಯ ಹೆಸರೇನೆಂದರೆ-

ಕರ್ಣಾಟಕವಿದು
ವರ್ಣನೀಯಮಿದೆ
ಕರ್ನಾಟಕ ದೇವಿಗೆ ನಮಿಸು.
* * *

ಇಳಿಯುತಿದೆ ಪಾತಾಳಖಾತಕೆ ಬೆಳೆದ ಭಾರತ ದೇಶವು
ಕಳಚುತಿವೆ ಧರ್ಮಾಲಯದ ಹೊಂಗಳಸ, ಕನ್ನಡಿ, ಧ್ವಜಗಳು
ಉದ್ಧರಿಸುವ ಮಹಾತ್ಮರಿಲ್ಲವೆ ಇದ್ದರೇಕೆ ವಿಲಂಬವೈ
ಎದ್ದು ಬನ್ನಿರಿ, ಭೂತದಯೆ ಬದುಕಿದ್ದರದನೇ ತೋರಿರೈ

ಏಳು ಸಾಯಣ ಕಟ್ಟು ಗ್ರಂಥವನೇಳು ಪಂಪಾಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ ಏಳು ಈ ಕ್ಷಣ ಮಾತ್ರಕೆ
ಬರಲಿ ಹರಿಹರ ರಾಜನೂ ನಮ್ಮರಸನಾಗುವನೀತನೆ
ಹರಿವುದಿವನಿಂದೆಮ್ಮ ದೇಶದ ಪರಮ ದಾರುಣ ಯಾತನೆ

ಲಕ್ಷ ಶಾಸ್ತ್ರಗಳೇಕೆ ಸಾಯನ ಲಕ್ಷ ಸೂತ್ರಗಳೇತಕೆ
ಮೋಕ್ಷ ಸಂಪಾದನಕೆ ನಿಶ್ಚಯ ಮೋಕ್ಷಕೇಳು ಸ್ವತಂತ್ರತೆ

ಸ್ವತ್ವದರ್ಥವ ತಿಳಿಯದಲಿ ಬರಿ ತತ್ವದರ್ಥಗಳೇತಕೆ
ಸ್ವತ್ವಮಂ ತಿಳಿಸದಲಿ ಲೋಕಕೆ ತತ್ವಮಥನಗಳೇತಕೈ

ಕಾಲವೇ ಹಾಲಹಲವು ಪ್ರತಿಕೂಲವಾಗಿರುವಾಗಳೈ
ಕಾಲವೇ ಪೀಯೂಷವೆಮಗನುಕೂಲವಾಗಿರುವಾಗಳೈ
* * *

ಸ್ವಭೂಮಿಯಿರುವದು
ಸ್ವಭಾಷೆಯಿರುವದು
ಸ್ವಾಭಿಮಾನ ಚೇತನವಿಹುದು|

ಸ್ವದೇಶವಿರುವದು
ಸ್ವಧರ್ಮವಿರುವದು
ಸ್ವದೇಶ ಬಾಂಧವರೂ ಇಹರು ||

ಸ್ವಧೈರ್ಯವಿರುವದು
ಸ್ವದೇಹವಿರುವದು
ಸ್ವದೇವ ಜೀವಗಳೂ ಇಹವು|

# ಪರಾಮರ್ಶನ ಗ್ರಂಥಗಳು

# ಪರಾಮರ್ಶನ ಗ್ರಂಥಗಳು


ಅಂಬಿಕಾತನಯದತ್ತ: *ಗರಿ*, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧

ಅಂಬಿಕಾತನಯದತ್ತ: *ಗಂಗಾವತರಣ*, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧

ಅಂಬಿಕಾತನಯದತ್ತ: *ನಾದಲೀಲೆ*, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೫೫

ಅಂಬಿಕಾತನಯದತ್ತ: *ಸಖೀಗೀತ*, ಅಂಬಿಕಾತನಯದತ್ತ ವೇದಿಕೆ, ಶ್ರೀ ಮಾತಾಪ್ರಕಾಶನ, ಧಾರವಾಡ, ೧೯೮೭

ಅಂಬಿಕಾತನಯದತ್ತ: *ಮೂರ್ತಿ ಮತ್ತು ಕಾಮಕಸ್ತೂರಿ*, ಪ್ರ: ಗೋವಿಂದ ವೆಂಕಟೇಶ ಚುಳಿಕಿ, ಸಾಧನಕೇರಿ, ಧಾರವಾಡ, ೧೯೩೪

ಅಂಬಿಕಾತನಯದತ್ತ: *ಕೃಷ್ಣಕುಮಾರಿ ಮತ್ತು ಹಾಡು-ಪಾಡು*, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬

ಅಂಬಿಕಾತನಯದತ್ತ: *ನಮನ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮

ಅಂಬಿಕಾತನಯದತ್ತ: *ಮುಗಿಲ-ಮಲ್ಲಿಗೆ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೦

ಅಂಬಿಕಾತನಯದತ್ತ: *ಅರಳು-ಮರಳು*, ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ, ೧೯೬೯

ಅಂಬಿಕಾತನಯದತ್ತ: *ಯಕ್ಷ-ಯಕ್ಷಿ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨

ಅಂಬಿಕಾತನಯದತ್ತ: *ಮತ್ತೆ ಶ್ರಾವಣಾ ಬಂತು*, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೩

ಅಂಬಿಕಾತನಯದತ್ತ: *ಶ್ರೀ ಮಾತಾ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೮

ಅಂಬಿಕಾತನಯದತ್ತ: *ಮರ್ಯಾದೆ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬

ಅಂಬಿಕಾತನಯದತ್ತ: ಇದು *ನಭೋವಾಣಿ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦

ಅನಂತನಾರಾಯಣ, ಎಸ್.: *ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ*, ಗೀತಾಬುಕ್ ಹೌಸ್,ಮೈಸೂರು, ೧೯೬೨

ಅನಂತಮೂರ್ತಿ, ಯು.ಆರ್.: *ಸಂಸ್ಕೃತಿ ಮತ್ತು ಅಡಿಗ*, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೧೯೯೬

ಅನಂತರಾಮಯ್ಯ, ಆರ್.ಎಲ್.(ಅನು), ಬಿಪನ್ ಚಂದ್ರ, (ಮೂಲ): *ಸ್ವಾತಂತ್ರ್ಯದ ಹೋರಾಟ*, ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಣೆ, ದೆಹಲಿ, ೧೯೭೩

ಅಡಿಗ, ಗೋಪಾಲಕೃಷ್ಣ,ಎಂ.: *ಸಮಗ್ರ ಕಾವ್ಯ*, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೭

ಅಡಿಗ, ಗೋಪಾಲಕೃಷ್ಣ,ಎಂ.: *ಬೇಂದ್ರೆಯವರ ಕಾವ್ಯ*, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ೧೯೯೧

ಅಣ್ಣಾರಾಯ, ಮಿರ್ಜಿ: ದತ್ತ ವಾಣಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ

ಅಯ್ಯಂಗಾರ್, ಗೊರೂರು ರಾಮಸ್ವಾಮಿ(ಅನು): *ಮೋ.ಕಾ.ಗಾಂಧೀ ಆತ್ಮ ಕಥೆ ಅಥವಾ ನನ್ನ ಸತ್ಯಾನ್ವೇಷಣೆ*, ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್, ೧೯೯೫

ಅಶೋಕ, ಟಿ.ಪಿ.(ಸಂ): *ಕಂಬಾರರ ಕಾವ್ಯ ಕೆಲವು ಅಧ್ಯಯನಗಳು*, ಕರ್ನಾಟಕ ಸಂಘ, ಪುತ್ತೂರು, ೧೯೯೪

ಆಮೂರ, ಜಿ.ಎಸ್.: *ಭುವನದ ಭಾಗ್ಯ*, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೧

ಕಬೀರ, ಹುಮಾಯಾನ್ (ಅನು) ಶಾಮರಾಯ, *ತ.ಸು.: ಭಾರತದ ಇತಿಹಾಸದ ಪಾಠಗಳು*, ಭಾರತೀ ಪ್ರಕಾಶನ, ಮೈಸೂರು, ೧೯೬೧

ಕಂಬಾರ, ಚಂದ್ರಶೇಖರ: ನಮ್ಮ ಜಾನಪದ, ಅಭಿಜಾತ ಗ್ರಂಥಮಾಲೆ, ಬೆಂಗಳೂರು, ೧೯೮೦

ಕಂಬಾರ, ಚಂದ್ರಶೇಖರ(ಸಂ): *ಕನ್ನಡ ಜಾನಪದ ವಿಶ್ವಕೋಶ* (ಸಂಪುಟ ಎರಡು), ಕನ್ನಡ ಸಾಹಿತ್ಯ ಪರಿಷತ್ತು, ೧೯೮೫

ಕಂಬಾರ, ಚಂದ್ರಶೇಖರ: *ಈವರೆಗಿನ ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೯೪

ಕಂಬಾರ, ಚಂದ್ರಶೇಖರ: *ಚಕೋರಿ* (ಮಹಾಕಾವ್ಯ), ಅಕ್ಷರ ಪ್ರಕಾಶನ, ಸಾಗರ, ೧೯೯೬

ಕಾಮತ್, ಸೂರ್ಯನಾಥ್ (ಸಂ): *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು* (ಮೂರು ಸಂಪುಟ),ಗೀತಾ ಬುಕ್ ಹೌಸ್,ಮೈಸೂರು, ೧೯೭೪

ಕಾಮತ್, ಸೂರ್ಯನಾಥ್ (ಸಂ):*ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು*, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೮

ಕೀರ್ತನಾಥ, ಕುರ್ತಕೋಟಿ: *ಬಯಲು-ಆಲಯ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

ಕುಲಕರ್ಣಿ, ಸಿ.ಎಸ್.: *ಸರ್ವೋದಯ*, ಮೋ.ಕ.ಗಾಂಧಿ, ಗಾಂಧಿ ಸ್ಮಾರಕ ನಿಧಿ, ಪ್ರಕಾಶನ, ೧೯೬೦

ಕಲ್ಲುಡಿ, ಬಸವರಾಜ: *ಬೇಂದ್ರೆಯವರ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ ಸ್ವರೂಪಗಳು*, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್ , ಬೆಂಗಳೂರು, ೧೯೮೬

ಕೃಷ್ಣಶಾಸ್ತ್ರೀ ಎ.ಆರ್.: *ಬಂಕಿಮಚಂದ್ರ*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,೧೯೮೫

ಕೃಷ್ಣಮೂರ್ತಿ,ಎಂ.ಜಿ.: *ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು*, ಅಕ್ಷರ ಪ್ರಕಾಶನ, ಸಾಗರ, ಮೈಸೂರು, ೧೯೭೦

ಕುರ್ತಕೋಟಿ ಕೆ.ಡಿ.:*ಯುಗಧರ್ಮ ಹಾಗೂ ಸಾಹಿತ್ಯ ದರ್ಶನ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೮೩

ಕುರ್ತಕೋಟಿ ಕೆ.ಡಿ., ಜೋಶಿ,ಜಿ.ಬಿ.(ಸಂ):*ಶ್ರಾವಣ ಪ್ರತಿಭೆ*,ಪುಟ-ಬಂಗಾರ,ಸಂಪು:೫, ಮನೋಹರ ಗ್ರಂಥಮಾಲಾ,ಧಾರವಾಡ, ೧೯೮೭

ಕುರ್ತಕೋಟಿ, ಕೀರ್ತಿನಾಥ: *ಬಾರೋ ಸಾಧನಕೇರಿಗೆ*, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩

ಕುವೆಂಪು: *ಪಕ್ಷಿಕಾಶಿ*, ಉದಯರವಿ ಪ್ರಕಾಶನ, ಮೈಸೂರು, ೧೯೪೬

ಕುವೆಂಪು: *ಕೋಗಿಲೆ ಮತ್ತು ಸೋವಿಯಟ್ ರಷ್ಯಾ*, ಉದಯರವಿ ಪ್ರಕಾಶನ, ಮೈಸೂರು, ೧೯೫೪

ಕುವೆಂಪು: *ಪ್ರೇತ-ಕ್ಯೂ*, ಉದಯರವಿ ಪ್ರಕಾಶನ, ಮೈಸೂರು, ೧೯೬೭

ಕುವೆಂಪು: *ನೆನಪಿನ ದೋಣಿಯಲ್ಲಿ*(೧), ಸಹ್ಯಾದ್ರಿ, ಪ್ರಕಾಶನ, ಮೈಸೂರು, ೧೯೮೦

ಕುವೆಂಪು: *ಕೊಳಲು*, ಉದಯರವಿ ಪ್ರಕಾಶನ, ಮೈಸೂರು, ೧೯೮೫

ಕುವೆಂಪು: *ಪಾಂಚಜನ್ಯ*, ಉದಯರವಿ ಪ್ರಕಾಶನ, ಮೈಸೂರು, ೧೯೮೫

ಕುವೆಂಪು: *ಮಹಾದರ್ಶನ ಮತ್ತು ಪ್ರಾಯಶ್ಚಿತ್ತ*, ಸಹ್ಯಾದ್ರಿ, ಪ್ರಕಾಶನ, ಮೈಸೂರು, ೧೯೮೫

ಕುವೆಂಪು: *ಕಲಾಸುಂದರಿ*, ಉದಯರವಿ ಪ್ರಕಾಶನ, ಮೈಸೂರು, ೧೯೮೬

ಕುವೆಂಪು: *ನವಿಲು*, ಉದಯರವಿ ಪ್ರಕಾಶನ, ಮೈಸೂರು, ೧೯೮೭

ಕುವೆಂಪು: *ಅಗ್ನಿಹಂಸ* ಉದಯರವಿ ಪ್ರಕಾಶನ, ಮೈಸೂರು, ೧೯೮೭

ಕುವೆಂಪು: *ಕಾನೂರು ಹೆಗ್ಗಡತಿ*, ಉದಯರವಿ ಪ್ರಕಾಶನ, ಮೈಸೂರು, ೧೯೯೨

ಕುವೆಂಪು: *ಮಲೆಗಳಲ್ಲಿ ಮದುಮಗಳು*, ಉದಯರವಿ ಪ್ರಕಾಶನ, ಮೈಸೂರು, ೧೯೯೨

ಕುವೆಂಪು: *ಸಾಹಿತ್ಯ ಪ್ರಚಾರ*, ಉದಯರವಿ ಪ್ರಕಾಶನ, ಮೈಸೂರು, ೧೯೭೨

ಕುವೆಂಪು: *ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ*, ಉದಯರವಿ ಪ್ರಕಾಶನ, ಮೈಸೂರು, ೧೯೯೫

ಕುವೆಂಪು: *ವಿಚಾರ ಕ್ರಾಂತಿಗೆ ಆಹ್ವಾನ*, ಉದಯರವಿ ಪ್ರಕಾಶನ, ಮೈಸೂರು, ೧೯೯೮

ಕುಲಕರಣಿ, ಸ್ವಾ.ರಾ.(ಅನು), ಮೋ.ಕ.ಗಾಂಧಿ (ಮೂಲ): *ನನ್ನ ಕಲ್ಪನೆಯ ಸಮಾಜವಾದ*, ಭಾರತೀಯ ವಿದ್ಯಾಭವನ, ರೇಸ್ ಕೋಸ್ ರಸ್ತೆ, ಬೆಂಗಳೂರು ಕೇಂದ್ರ, ೧೯೮೭

ಗುಬ್ಬಣ್ಣವರ, ಶಿವಾನಂದ (ಸಂ): *ಬರಕೋ ಪದ ಬರಕೋ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

ಗುಬ್ಬಣ್ಣವರ, ಶಿವಾನಂದ:*ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ*, ಅಕ್ಷಯ ಪ್ರಕಾಶನ, ಧಾರವಾಡ, ೧೯೯೧

ಗೋಪಾಲಕೃಷ್ಣರಾವ್, ಕೆ.ಎಲ್.(ಅನು), ರೊಮಿಲಥಾಪರ್ ಹರ್ಬನ್ಸ್ ಮುಖಿಯ ಮತ್ತು ಬಿಪಿನ್ ಚಂದ್ರ (ಮೂಲ): *ಕೋಮುವಾದ ಹಾಗೂ ಭಾರತೀಯ ಇತಿಹಾಸ*, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೫

ಗೋವಿಂದರಾಜ, ಗಿರಡ್ಡಿ: *ಆಧುನಿಕ ಕನ್ನಡ ಕಾವ್ಯ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯

ಚೆನ್ನಿ, ರಾಜೇಂದ್ರ: *ದೇಶಿವಾದ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮

ಚಂದ್ರ, ಬಿಪಿನ್ ಪ್ರೊ.(ಅನು) ಅನಿಲ್,ಎಂ.ಕೆ.:*ಮಹಾಸಂಗ್ರಾಮ*, ಓರಿಯಂಟ್ ಲಾಂಗ್ ಮನ್,ಬೆಂಗಳೂರು ೧೯೯೩

ಕಂಬಾರ, ಚಂದ್ರಶೇಖರ: *ಹೇಳತೇನ ಕೇಳ*, ಅಕ್ಷರ ಪ್ರಕಾಶನ, ಸಾಗರ, ೧೯೬೮

ಕಂಬಾರ, ಚಂದ್ರಶೇಖರ: *ಆಯ್ದ ಕವನಗಳು*, ಅಕ್ಷರ ಪ್ರಕಾಶನ, ಸಾಗರ, ೧೯೮೦

ಕಂಬಾರ, ಚಂದ್ರಶೇಖರ: *ಬೆಳ್ಳಿಮೀನು*, ಅಕ್ಷರ ಪ್ರಕಾಶನ, ಸಾಗರ, ೧೯೮೯

ಚಂದ್ರಶೇಖರ್,ಎಸ್.: *ಕರ್ನಾಟಕ ಚರಿತ್ರೆ, ಸಂಪುಟ:೭*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ೧೯೯೭

ಜಯರಾಂ, ಸಿ.ಎನ್.(ಸಂ): *ಹತ್ತೊಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ*, ಕನ್ನಡ ಸಾಹಿತ್ಯ ಪರಿಷತ್ತು, ೧೯೮೩

ಜ್ಯೋತಿ, ಯ.ಶ್ರೀ. (ಅನು), ಸುಬೋಧಚಂದ್ರ ಸೇನಗುಪ್ತ(ಮೂಲ):*ಬಂಕಿಮಚಂದ್ರ ಚಟರ್ಜಿ*, ಸಾಹಿತ್ಯ ಅಕಾಡೆಮಿ, ನವದೆಹಲಿ, ಭಾರತೀಯ ಸಾಹಿತ್ಯದ ನಿರ್ಮಾಣಕಾರರು, ೧೯೮೧

ಜೋಸೆಫ್, ಸೆಬಾಸ್ಟಿಯನ್: *ಕರ್ನಾಟಕ ಚರಿತ್ರೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಸಂಪುಟ-೬, ೧೯೯೭

ಥಿಯಾಂಗೊ, ಗೂಗಿ ವಾ, ರಹಮತ್ ತರೀಕೆರೆ(ಅನು):*ವಸಾಹತು ಪ್ರಜ್ಞೆ ಮತ್ತು ವಿಮೋಚನೆ*, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ೧೯೯೬

ದಾಮೋದರರಾವ್,ಬಿ.:*ಆಯಾಮಗಳು*, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೨

ದೀಕ್ಷಿತ್, ಜಿ.ಎಸ್.(ಅನು), ತಾರಾಚಂದ್ (ಮೂಲ): *ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಸಂಪುಟ-೨*, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

ದೇಸಾಯಿ, ಗೋವಿಂದ ಮೂರ್ತಿ:*ಗಾಂಧಿ ಮತ್ತು ಠಾಕೂರ*, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ೧೯೬೦

ಧಾರವಾಡಕರ, ರಾ.ಯ.(ಸಂ):*ಶಾಂತಕವಿಗಳ ಮೂರು ಕೀರ್ತನೆಗಳು*, ರಾ.ಯ.ಧಾರವಾಡಕರ್, ಧಾರವಾಡ, ೧೯೮೩

ಧಾರವಾಡಕರ, ರಾ.ಯ.:*ಹೊಸಗನ್ನಡ ಸಾಹಿತ್ಯದ ಉದಯಕಾಲ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

ನಾಗವಾರ, ಕಾಳೇಗೌಡ, ಹುಳಿಯಾರ್ ನಟರಾಜ :*ಸ್ವಾತಂತ್ರ್ಯದ ಅಂತರ್ಜಲ*, ರಾಮಮನೋಹರ ಲೋಹಿಯ ಪ್ರಾತಿನಿಧಿಕ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೧

ಶಿವರುದ್ರಪ್ಪ ಜಿ.ಎಸ್.(ಸಂ:) : *ಕರ್ನಾಟಕ ಜಾನಪದ* ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧

ನಾಗರಾಜ್,ಡಿ.ಆರ್.:*ಅಮೃತ ಮತ್ತು ಗರುಡ*, ಪುಸ್ತಕ ಚಂದನ, ಬೆಂಗಳೂರು, ೧೯೮೩

ನಾಗರಾಜ್,ಡಿ.ಆರ್.:*ಶಕ್ತಿಶಾರದೆಯ ಮೇಳ*, ಹೆಗ್ಗೋಡು, ಸಾಗರ, ಅಕ್ಷರ ಪ್ರಕಾಶನ, ೧೯೯೩

ನಾಗರಾಜ್,ಡಿ.ಆರ್.:*ಶಕ್ತಿಶಾರದೆಯ ಮೇಳ*, ಹೆಗ್ಗೋಡು, ಸಾಗರ, ಅಕ್ಷರ ಪ್ರಕಾಶನ, ೧೯೮೭

ನಾಗರಾಜ್,ಡಿ.ಆರ್.:*ಸಾಹಿತ್ಯ ಕಥನ*, ಹೆಗ್ಗೋಡು, ಸಾಗರ, ಅಕ್ಷರ ಪ್ರಕಾಶನ, ೧೯೯೬

ನಾರಾಯಣ, ಕೆ.ವಿ.:*ಸಾಹಿತ್ಯ ತತ್ವ: ಬೇಂದ್ರೆ ದೃಷ್ಟಿ*, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೮೪

ನಾರಾಯಣ, ಕೆ.ವಿ.:*ಧ್ವನ್ಯಾಲೋಕ* (ಒಂದು ಅಧ್ಯಯನ),ಅಮೃತೋತ್ಸವ ಮಾಲೆ-೧೧,ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು, ೧೯೮೮

ನಾರಾಯಣ, ಕೆ.ವಿ.:*ಬೇರು ಕಾಂಡ ಚಿಗುರು*, ವಿವೇಕ ಪ್ರಕಾಶನ, ಬೆಂಗಳೂರು, ೧೯೯೭

ನಾರಾಯಣಸ್ವಾಮಿ, ಕೆ.ಎಸ್.:*ಗಾಂಧೀಜಿ ಮತ್ತು ಐನ್‌ಸ್ಟೀನ್*, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ೧೯೯೭

ನಂಜುಂಡಸ್ವಾಮಿ, ಎ.ಎಸ್.:*ಭಾರತೀಯ ರಾಷ್ಟ್ರೀಯತೆಯ ವಿಕಾಸ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೦

ಪಂಜೆ, ಮಂಗೇಶರಾಯ:*ಪಂಜೆಯರ ಕೃತಿಗಳು*(ಕಾವ್ಯ), ಸಂ: ಪಂಜೆ ರಾಮರಾಯ, ಓರಿಯಂಟಲ್ ಲಾಂಗ್ ಮನ್ ಲಿಮಿಟೆಡ್, ಬೆಂಗಳೂರು, ೧೯೭೪

ಪುಣೇಕರ್, ಶಂಕರಮೊಕಾಶಿ: *ಬೇಂದ್ರೆ ಕಾವ್ಯಮೀಮಾಂಸೆ*, ಸಾಹಿತ್ಯ ಭಂಡಾರ, ಜಂಗಮಮೇಸ್ತ್ರೀ ಗಲ್ಲಿ,ಬಳೇಪೇಟೆ,ಬೆಂಗಳೂರು, ೧೯೮೬

ಪುಣೇಕರ್, ಶಂಕರಮೊಕಾಶಿ: *ಅಪೂರ್ಣವರ್ತಮಾನಕಾಲ*, ಕರ್ನಾಟಕ ಸರ್ಕಾರ, ಪುಸ್ತಕ ಪ್ರಾಧಿಕಾರ, ಜನಪ್ರಿಯ ಪುಸ್ತಕ ಮಾಲೆ, ಬೆಂಗಳೂರು, ೧೯೯೫

ಬರಗೂರು ರಾಮಚಂದ್ರಪ್ಪ(ಸಂ):*ವಸಾಹತುಶಾಹಿ ಅನುಭವ ಮತ್ತು ಕಂಬಾರರ ಸಾಹಿತ್ಯ*, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು-೧೯೯೨

ಬಿಂದು ಮಾಧವ, ಬುರ್ಲಿ:*ನಾಡ ಹಾಡುಗಳು*, (ರಾಷ್ಟ್ರೀಯ ಗೀತೆಗಳು), ಮಿಂಚಿನ ಬಳ್ಳಿ, ಧಾರವಾಡ, ೧೯೪೦

ಬೇಂದ್ರೆ, ದ.ರಾ.: *ಸಾಹಿತ್ಯದ ವಿರಾಟ ಸ್ವರೂಪ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪

ಬೇಂದ್ರೆ ದತ್ತರಾಯ (ಆಯ್ದವರು):*ನನ್ನದು ಈ ಕನ್ನಡ ನಾಡು*, ಪ್ರಕಾಶಕರು, ಜೋಶಿ ಶಂಕರರಾಯ, ಸಾಧನಕೆರೆ, ಧಾರವಾಡ, ಗೆಳೆಯರ ಗುಂಪು, ೧೯೩೮

ಬೇಂದ್ರೆ, ದ.ರಾ.:*ವಿನಯ*, ಗೀತಾ ಬುಕ್ ಹೌಸ್, ಮೈಸೂರು, ೧೯೭೬

ಬೇಂದ್ರೆ, ದ.ರಾ.:*ವಿಚಾರ ಮಂಜರಿ*, ಗೀತಾ ಬುಕ್ ಹೌಸ್, ಮೈಸೂರು, ೧೯೬೯

ಬೇಂದ್ರೆ, ದ.ರಾ.:*ಮಾತೆಲ್ಲ ಜ್ಯೋತಿ*, ಅಕಾಡೆಮಿ ಆಫ್ ಜನರಲ್ ಎಡ್ಯುಕೇಶನ್, ಮಣಿಪಾಲ, ೧೯೭೨

ಬೇಂದ್ರೆ, ದ.ರಾ.:*ಮತ ಧರ್ಮ ಮತ್ತು ಆಧುನಿಕ ಮಾನವ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೯

ಭಗವಾನ್, ಕೆ.ಎಸ್.(ಅನು), ಸ್ವಾಮಿ, ಧರ್ಮತೀರ್ಥ(ಮೂಲ):*ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ*, ಮಹಿಮಾ ಪ್ರಕಾಶನ, ಕುವೆಂಪುನಗರ, ಮೈಸೂರು, ೧೯೯೪

ಭಟ್, ಸೀಯಾರ್ಕೆ,ಎಸ್.ಆರ್.(ಅನು), ಬೋರಿಸ್ ಪುತ್ರಿನ್ (ಮೂಲ):*ರಾಜಕೀಯ ಪಾರಿಭಾಷಿಕ ಪದಕೋಶ*, ನವಕರ್ನಾಟಕ ಪ್ರಕಾಶನ, ಬೆಂಗಳೂರು

ಭಟ್ಟ್, ವಿ.ಜಿ.(ಅನು):*ಖಾದಿ-ಗ್ರಾಮೋದ್ಯೋಗ*, ಗಾಂಧೀ ಸ್ಮಾರಕ ನಿಧಿ ಪ್ರಕಾಶನ, ೧೯೬೦

ಮಶ್ರೂವಾಲ, ಕಿಶೋರಿಲಾಲ:*ಗಾಂಧಿ-ಮಾರ್ಕ್ಸ್*, ಗಾಂಧೀ ಸ್ಮಾರಕ ನಿಧಿ, (ಮೈಸೂರು ಶಾಖೆ), ಬೆಂಗಳೂರು, ೧೯೫೦

ಮಾಸ್ತಿ ವೆಂಕಟೇಶ ಅಯ್ಯಂಗಾರ್:*ರವೀಂದ್ರನಾಥ ಠಾಕೂರರು*, ಕನ್ನಡ ಗ್ರಂಥಮಾಲೆ-೬, ಮೈಸೂರು ವಿಶ್ವವಿದ್ಯಾಲಯ, ಜೀವನ ಕಾರ್ಯಾಲಯ, ಬೆಂಗಳೂರು, ೧೯೫೬

ರಾಘವೇಂದ್ರರಾವ್, ಎಚ್.ಎಸ್.:*ಸಿರಿಗನ್ನಡ*(ವಸಂತ ಸಂಚಿಕೆ), ಕನ್ನಡ ವಿಶ್ವವಿದ್ಯಾಲಯ,ಹಂಪಿ, ೧೯೯೩

ರಾಮಚಂದ್ರದೇವ:*ಶೇಕಸ್ಪಿಯರ್ ಎರಡು ಸಂಸ್ಕೃತಿಗಳು*, ಗ್ರಂಥಾವಳಿ, ಬೆಂಗಳೂರು, ೧೯೯೩

ರಾಜೇಂದ್ರ ಚೆನ್ನಿ:*ಬೇಂದ್ರೆ ಕಾವ್ಯ, ಸಂಪ್ರದಾಯ ಮತ್ತು ಸ್ವಂತಿಕೆ*, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೮೯

ರಾಮರಾವ್ ಎಂ.(ಅನು), ಸೌಮ್ಯೇಂದ್ರನಾಥ ಠಾಕೂರ್ (ಮೂಲ):*ರಾಜ್ ರಾಮ್ ಮೋಹನರಾಯ್*, ಸಾಹಿತ್ಯ ಅಕಾಡೆಮಿ, ನವದೆಹಲಿ, ಭಾರತೀಯ ಸಾಹಿತ್ಯದ ನಿರ್ಮಾಣಕಾರರು, ೧೯೮೯

ಲಿಂಗಣ್ಣ ಸಿಂಪಿ:*ದತ್ತಸಾಹಿತ್ಯ ಶ್ರೀ ಬೇಂದ್ರೆ ಅವರ ಕೃತಿ ವಿಚಾರಗಳ ಪರಿಚಯ*, ಸಾಧನ, ಮುದ್ರಣಾಲಯ, ಧಾರವಾಡ

ಲಿಂಗಣ್ಣ ಸಿಂಪಿ(ಅನು):*ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ* (ಬಾಳಾಚಾರ್ಯ ಗುರುಚಾರ್ಯ ಅವಧಾನಿ, ಮಿಂಚಿನ ಬಳ್ಳಿ, ಧಾರವಾಡ, ೧೯೪೮

ಲಕ್ಷ್ಮೀನಾರಾಯಣಭಟ್, ಎನ್.ಎಸ್.(ಸಂ):*ಅನನ್ಯ*, ಕ್ಷಮಾ ಪ್ರಕಾಶನ, ಬೆಂಗಳೂರು, ೧೯೯೮

ವೆಂಕಟರಾಯ, ಆಲೂರು:*ಕರ್ನಾಟಕ ಗತವೈಭವ*, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೦

ವೆಂಕಟರಾಯ, ಆಲೂರು:*ಕರ್ನಾಟಕ[illegible]ವಿಕಾಸ*, ನವಜೀವನ ಗ್ರಂಥ ಬಂಡಾರ, ಧಾರವಾಡ, ೧೯೫೭

ಶಿವಪ್ರಕಾಶ್,ಎಚ್.ಎಸ್.(ಸಂ): *ಸಿರಿಸಂಪಿಗೆ ಕಂಬಾರ ೬೦*, ರಂಗನಿರಂತರ, ಬೆಂಗಳೂರು, ೧೯೯೭

ಶಿವರುದ್ರಪ್ಪ,ಜಿ.ಎಸ್.(ಸಂ):*ಕವಿಬೇಂದ್ರೆ*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

ಶಿವರುದ್ರಪ್ಪ,ಜಿ.ಎಸ್.(ಸಂ):*ಕರ್ನಾಟಕ ಜಾನಪದ* ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧

ಶಿವರುದ್ರಪ್ಪ,ಜಿ.ಎಸ್.(ಸಂ):*ಶ್ರೀ ಕುವೆಂಪು*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦

ಶಿವರುದ್ರಪ್ಪ, ಜಿ.ಎಸ್.(ಸಂ):*ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧

ಶಿವರುದ್ರಪ್ಪ, ಜಿ.ಎಸ್.(ಸಂ):*ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ*, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು, ೧೯೮೮

ಶಿವರುದ್ರಪ್ಪ, ಜಿ.ಎಸ್.:*ಕನ್ನಡ ಸಾಹಿತ್ಯ ಸಂದರ್ಭ*, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು, ೧೯೯೦

ಶಿವರುದ್ರಪ್ಪ, ಜಿ.ಎಸ್.(ಸಂ):*ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ*,ಕರ್ನಾಟಕ ಸಾಹಿತ್ಯ ಆಕಾಡೆಮಿ,ಬೆಂಗಳೂರು,ಮೊ.ಮು. ೧೯೯೮

ಶಿವಯೋಗಿಶ್ವರರು, ಸರ್ಪಭೂಷಣ:*ಕೈವಲ್ಯ ಕಲ್ಪವಲ್ಲರಿ*, ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠದ ಟ್ರಸ್ಟಿಗಳು, ಬೆಂಗಳೂರು

ಶಿವಾರೆಡ್ಡಿ ಕೆ.ಸಿ.(ಸಂ):*ಕಂಬಾರರ ಚಕೋರಿ:ಒಂದು ಅಧ್ಯಯನ*, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೧೯೯೮

ಶ್ರೀಧರ ಬಿ.ಎಚ್.ಗೋವಿಂದಾ ಚಾರ್ಯ ಬನ್ನಂಜೆ:*ಬೇಂದ್ರೆ*, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೧೯೯೩

ಶ್ರೀಧರ, ಬಿ.ಎಚ್.:ಜ್ಞಾನ ಪೀಠ ಪ್ರಶಸ್ತಿ ವಿಜೇತ ಕನ್ನಡಿಗರು:೨ 'ಬೇಂದ್ರೆ, ಬನ್ನಂಜೆ ಗೋವಿಂದಾಚಾರ್ಯ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ೧೯೯೩

ಶಾಮರಾಯ, ಗಜೇಂದ್ರಗಡ(ಅನು):*ನನ್ನ ಕನಸಿನ ಭಾರತ*, ಮೋ.ಕ.ಗಾಂಧಿ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ೧೯೬೦

ಸಾವಿತ್ರಮ್ಮ, ಎಚ್.ವಿ., ರವೀಂದ್ರನಾಥ ಠಾಕೂರ್ (ಮೂಲ):*ಮನೆ-ಜಗತ್ತು*, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೭೭

ಸುಜನಾ :ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು:೧ '*ಕುವೆಂಪು*', ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ,ಉಡುಪಿ, ೧೯೯೩

ಸುಬ್ಬಣ್ಣ, ಕೆ.ವಿ.:*ಕುವೆಂಪುಗೆ ಪುಟ್ಟಕನ್ನಡಿ*:, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು,೧೯೯೫

ಹಾವನೂರ, ಶ್ರೀನಿವಾಸ:*ಹೊಸಗನ್ನಡ ಅರುಣೋದಯ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು,೧೯೭೪

ಹುಲುಕುಂದ ಶಿವಲಿಂಗಸ್ವಾಮಿ:*ಕನ್ನಡ ಗೀಗೀ ಪದಗಳು*, ಸಂ:ದುಂಡಿರಾಜ ಲಿಮಯೆ, ಸೀತರಾಮ ಪ್ರಕಾಶನ,ರಾಮದುರ್ಗ,೧೯೮೫

ಹಿಂಗಮಿರೆ, ಬುದ್ದಣ್ಣ(ಸಂ):*ಇಳಿಯ ಬಾ ತಾಯಿ*, ಸಾಹಿತ್ಯ ಮಂಟಪ, ಹುಬ್ಬಳ್ಳಿ, ಹಾಗೂ ಸಮಾಜ ಪುಸ್ತಕಾಲಯ,ಧಾರವಾಡ, ೧೯೭೭

Chandra, Bipan; *India's Struggle for Independence 1857-1947*, Pengun Books, 1989

Hasan, Mushiral, Gupta, Narayana; *India's colonial Encounter*, Manohar,1993.

Haynes,Douglas E.;*Rhetoric and Ritual in colonial India*,Oxford University Press,Delhi, 1992

Heehs, Peter; *India's freedom struggle*, 1857-1947, A short History, Oxford University Press, Delhi, 1998.

Hobsbawm.E.J.; *Nations and nationalism Since 1780*, Cambridge University Press, 1992